ಆದಿಕವಿ ಶ್ರೀವಾಲ್ಮೀಕಿಮಹಾಮುನಿವಿರಚಿತ

ರಾಮಾಯಣ

ಅಯೋಧ್ಯಾಕಾಂಡ ಭಾಗ – ೧

ಕನ್ನಡ ಅನುವಾದ ಸಹಿತ

ಸೀತಾದೇವೀಯುತಂ ವೀರಂ ಸರ್ವಭೂಷಣಭೂಷಿತಮ್ । ಸೀತಾಪತಿಂ ಹರಿಂ ಧ್ಯಾಯೇದಯೋಧ್ಯಾಕಾಂಡ ಉತ್ತಮೇ ॥

ವಾಲ್ಮೀಕಿರಾಮಾಯಣ

ಅಯೋಧ್ಯಾಕಾಂಡ

ಭಾಗ-೧

ಕನ್ನಡ ಅನುವಾದಸಹಿತ

ಸಮಗ್ರ ವಾಲ್ಮೀಕಿರಾಮಾಯಣ ಕನ್ನಡ ಅನುವಾದ ಯೋಜನೆ

ಅನುಗ್ರಹ

ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರು

ಶ್ರೀಮದುತ್ತರಾದಿಮಠ

ಸಂಪಾದಕರು

ಡಾ. ವಿದ್ವಾನ್ ಸತ್ಯಧ್ಯಾನಾಚಾರ್ಯ ಕಟ್ಟಿ

ಅಧ್ಯಕ್ಷರು, ದ್ವೈತವೇದಾಂತ ಪ್ರತಿಷ್ಠಾನ

ಅನುವಾದಕರು

ಪಂ. ಹಯವದನ ಪುರಾಣಿಕರು

ರಾಷ್ಟ್ರಪತಿ ಪ್ರಶಸ್ತಿ ಪುರಸ್ಕೃತರು

This Volume is published with the grant from
Govt. of Karnataka

ಪ್ರಕಾಶಕರು

ದ್ವೈತವೇದಾಂತ ಅಧ್ಯಯನ ಮತ್ತು ಸಂಶೋಧನ ಪ್ರತಿಷ್ಠಾನ

(ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಿದೆ)

ಬೆಂಗಳೂರು-560 004.

Vālmīki Rāmāyaṇa - Ayodhyākāṇḍa-Vol.1

Published by	**Dvaita Vedanta Studies & Research Foundation** No.11, Uttaradi Matha Compound, Basavanagudi, Bengaluru-560 004. Phone : **080 - 7968 9974** email : dvfbangalore@gmail.com

Edition	Year	Copies	Total
First	2023	1,000	1,000

No. of Pages : xviii + 496

©	Publisher
Price.	**Rs. 2000/- (set of 10 books)**
Cover Design by	K M Sheshagiri

Copies can be had from

Dvaita Vedanta Studies and Research Foundation

No.11, Uttaradi Matha Compound,
Basavanagudi, Bengaluru-560 004.
Phone : 080-79689974

★ ಸಮಗ್ರ ವಾಲ್ಮೀಕಿರಾಮಾಯಣ ★

ಕನ್ನಡ ಅನುವಾದ ಯೋಜನೆಯ ಕಾರ್ಯಕಾರಿ ಸಮಿತಿ

ಅಧ್ಯಕ್ಷರು	ಡಾ. ಸತ್ಯಧ್ಯಾನಾಚಾರ್ಯ ಕಟ್ಟಿ
ಸದಸ್ಯರು	ಡಾ. ಕಾಂತೇಶಾಚಾರ್ಯ ಕದರಮಂಡಲಗಿ
	ಡಾ. ಎ.ಬಿ.ಶ್ಯಾಮಾಚಾರ್ಯ
	ಡಾ. ಎಸ್.ಆರ್.ಪಾಂಡುರಂಗಿ

Typeset and Printed at : **VAGARTHA**
Hanumantha Nagar Bangalore 19. Ph.22427677

॥ ಶ್ರೀಃ ॥

॥ ಶ್ರೀಮೂಲರಾಮದಿಗ್ವಿಜಯರಾಮವೇದವ್ಯಾಸಾಃ ವಿಜಯಂತೇ ॥



ಯದನುಗ್ರಹತಃ ಸರ್ವದಿಗ್ವಿಜಯೋ ಭವತೀಪ್ಸಿತಃ ।
ನಮಾಮ್ಯಹಂ ದಿಗ್ವಿಜಯರಾಮಂ ಪೂರ್ಣಧಿಯಾऽರ್ಚಿತಮ್ ॥

ವಂದೇ ಮಂದೇತರಾನಂದಂ ದಶಸ್ಯಂದನನಂದನಮ್ ।
ಶುಭಲೀಲಜಗನ್ಮೂಲರಾಮಂ ಪೂರ್ಣಧಿಯಾऽರ್ಚಿತಮ್ ॥

॥ ಶ್ರೀದಿಗ್ವಿಜಯರಾಮೋ ವಿಜಯತೇ ॥
॥ ಶ್ರೀಭಾರತೀರಮಣಾಯ ನಮಃ ॥
॥ ಸಮಸ್ತಗುರುಭ್ಯೋ ನಮಃ ॥

ಮುನ್ನುಡಿ

'ಶ್ರೀರಾಮ' ಎಲ್ಲರ ಬದುಕಿಗೆ 'ಅಯನ.' ಆಧಾರ, ಸರ್ವಾಧಾರ. ಅದಕ್ಕೇ ಇದು ರಾಮಾಯಣ. ತಂದೆ ದಶರಥನಿಗೆ, ತಾಯಿ ಕೌಸಲ್ಯಗೆ, ಋಷಿ ವಿಶ್ವಾಮಿತ್ರರಿಗೆ, ಜನಸ್ಥಾನದ ಮುನಿಗಳಿಗೆ, ಶಪಿತ ಅಹಿಲ್ಯೆಗೆ, ಪರಶುರಾಮನಲ್ಲಿಯ ಅತುಲನ ನಾಶಕ್ಕೆ, ಜನಕಮಹಾರಾಜನ ಮಗಳು ಸೀತೆಗೆ, ಪ್ರೀತಿಯ ಭಕ್ತ ಹನುಮಂತನಿಗೆ ರಾಮನೇ ಅಯನ.

ಕಾಡಿನಲ್ಲಿಯ ಜಯಂತ, ಶಬರಿ, ಶರಭಂಗ, ವಿರಾಧ, ಕಬಂಧ, ವಾಲಿ, ಸುಗ್ರೀವ, ವಿಭೀಷಣರ ಉದ್ಧಾರಕ್ಕೆ ರಾಮನೇ ಅಯನ. ಇದು ರಾಮಾಯಣ. ಶ್ರೀರಾಮನ ಚರಿತ್ರೆ. ರಾಮನನ್ನು ರಾಮನೇ ಬಲ್ಲ. ಅದಕ್ಕೇ ಹಯಗ್ರೀವದೇವ ನೂರು ಕೋಟಿ ಶ್ಲೋಕದ ಮೂಲರಾಮಾಯಣ ಬರೆದ. ಅದರ ಸಂಕ್ಷೇಪ ಈ ವಾಲ್ಮೀಕಿಯ ರಾಮಾಯಣ. ತ್ರೇತಾಯುಗದ ಇತಿಹಾಸ. ಮಹಾಭಾರತ ದ್ವಾಪರದ ಇತಿಹಾಸ. ಇವೆರಡು ಭಾರತದ ಕಣ್ಣುಗಳು. ವೇದಗಳ ಸಾರ. ಸಂಸ್ಕೃತಿಯ ಮೂಲಾಧಾರ. ಮನುಕುಲದ ಭಾಷ್ಯ. ತತ್ತ್ವಜ್ಞಾನದ ಆಕರ. ಹರಿಯ ಮಹಿಮೆ. ಸಂಸಾರ ದಾಟಲು ಹರಿಗೋಲು. ''**ರಾಮೋ ವಿಗ್ರಹವಾನ್ ಧರ್ಮಃ**'' 'ರಾಮ' ಧರ್ಮದ ಮೂರ್ತಿ. ಅವನ ಅರಿವು ಧರ್ಮದ ಜ್ಞಾನ. ಆದರ್ಶದ ತಿಳಿವು. ಬದುಕನ್ನು ಅಂದಗೊಳಿಸುವುದು. ಬುದ್ಧಿ ಶುದ್ಧವಾಗುವುದು. ಜೀವನ ಮಂಗಲವಾಗುವುದು.

ವಾಲ್ಮೀಕಿಯ ರಾಮಾಯಣ ಆದಿಕಾವ್ಯ. ಅಪಾರ ರಾಮಾಯಣಸಾಹಿತ್ಯಕ್ಕೆ ಆದಿಬೀಜ. ಸಂಪೂರ್ಣ ವಿಷ್ಣುಸಹಸ್ರನಾಮಕ್ಕೆ ಸಮಾನವಾದದ್ದು ಒಂದು ರಾಮಶಬ್ದ. ''ರಾಮಾಯಣ'' ಅನಂತವೇದ ಪಠಿಸಿದ ಫಲ ನೀಡುವ ಮಹಾಕೃತಿ. ರಾಮಾಯಣ ತಿಳಿಯದವ ಭಾರತೀಯನೇ ಅಲ್ಲ. ಇದು ಸರ್ವರಿಂದ ಸದಾ ಶ್ರವಣೀಯ.

ವಾಲ್ಮೀಕಿರಾಮಾಯಣ ಇದು ಭಕ್ತಿಕಾವ್ಯ. ಭಕ್ತಿಗಾಗಿ, ಭಕ್ತಿಯಿಂದ ಬರೆದದ್ದು. ರಾಮನ ಪ್ರಾಪ್ತಿ ಭಕ್ತಿಯಿಂದಲೇ ಸಾಧ್ಯ. ಭಕ್ತಿ ಇಲ್ಲದೇ ರಾಮನ ಪ್ರಾಪ್ತಿ ಇಲ್ಲ. 'ಭಕ್ತಿ' ಬದುಕಿನ ಮುಖ್ಯಸಾಧನ. ಜ್ಞಾನ ಹಾಗೂ ಪ್ರೀತಿಯ ನೆಲೆಯೇ ಭಕ್ತಿ.

''ಜ್ಞಾನಪೂರ್ವಃ ಪರಃ ಸ್ನೇಹಃ ಭಕ್ತಿಃ'' ''ಮಾಹಾತ್ಮ್ಯಜ್ಞಾನಪೂರ್ವಸ್ತು ಸುದೃಢಃ ಸರ್ವತೋऽಧಿಕಃ । ಸ್ನೇಹಃ ಭಕ್ತಿರಿತಿ ಪ್ರೋಕ್ತಃ'' ಶ್ರೀರಾಮನ ಮಹಿಮಾಜ್ಞಾನ, ಅವನಲ್ಲಿ ಅಪಾರ ಸ್ನೇಹವೇ ಭಕ್ತಿ. ಇದು ವಾಲ್ಮೀಕಿಯ ಧ್ಯೇಯ. ಅದಕ್ಕೆ ರಾಮಾಯಣ ನಿರ್ಮಾಣ. ರಾಮಕಥೆಯ ನಿರ್ಣಯ.

ಗಾಯತ್ರೀವ್ಯಾಖ್ಯಾನ ವಾಲ್ಮೀಕಿರಾಮಾಯಣ

ಓಂಕಾರದ ವ್ಯಾಖ್ಯಾನವೇ ಗಾಯತ್ರಿಯು. ಮೂರುಪಾದ, ಇಪ್ಪತ್ನಾಲ್ಕು ಅಕ್ಷರಗಳ ಗಾಯತ್ರಿ. ಇದು ವೇದಸಾರ. ಗಾಯತ್ರಿಯ ಮೂರು ಪಾದಗಳ ವ್ಯಾಖ್ಯಾನವೇ ಸಾರಭೂತ ಪುರುಷಸೂಕ್ತ. ಪುರುಷಸೂಕ್ತದ ವ್ಯಾಖ್ಯಾನವೇ ಸಂಪೂರ್ಣ ವೇದಗಳು. ಗಾಯತ್ರಿಯ ಸ್ವರೂಪವೇ ಸಮಗ್ರ ವಾಲ್ಮೀಕಿ ರಾಮಾಯಣ.

''ಗಾಯತ್ರ್ಯಾಶ್ಚ ಸ್ವರೂಪಂ ತದ್ರಾಮಾಯಣಮಿತಿ ಸ್ಮೃತಮ್''

ವಾಲ್ಮೀಕಿ ರಾಮಾಯಣದ ಪ್ರಾರಂಭ ''ತ'' ಅಕ್ಷರದಿಂದ ಆಗುವುದು. ಅದು ಗಾಯತ್ರಿಯ ಮೊದಲ ಅಕ್ಷರ. ರಾಮಾಯಣದ ಮೊದಲ ಶ್ಲೋಕ **''ತಪಃಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್ ।''** (ವಾ.ರಾ. ೧-೧-೧) 'ತ' ದಿಂದ ಆರಂಭ. ಇದು ಗಾಯತ್ರೀಮಂತ್ರದ ಮೊದಲ ವರ್ಣದ ಪ್ರತಿನಿಧಿ. ಗಾಯತ್ರಿಯಲ್ಲಿ ಇಪ್ಪತ್ನಾಲ್ಕು ವರ್ಣ. ರಾಮಾಯಣದ ಒಂದೊಂದು ಸಾವಿರ ಶ್ಲೋಕ ಒಂದೊಂದು ಗಾಯತ್ರೀ ಅಕ್ಷರದ ಪ್ರತಿನಿಧಿ. ಇಪ್ಪತ್ನಾಲ್ಕು ಸಾವಿರ ಶ್ಲೋಕ ೨೪ ಅಕ್ಷರಗಳ ಪ್ರತಿನಿಧಿ. ಗಾಯತ್ರಿಯ ಆರಂಭ 'ತ'ದಿಂದ, ಗಾಯತ್ರಿಯ ಸಮಾಪ್ತಿ 'ತ್'ದಿಂದ. ರಾಮಾಯಣದ ಕೊನೆಯ ಶ್ಲೋಕ

''ತತಃ ಸಮಾಗತಾನ್ ಸರ್ವಾನ್ ಸ್ಥಾಪ್ಯ ಲೋಕಗುರುರ್ದಿವಿ ।
ಹೃಷ್ಟೈಃ ಪ್ರಮುದಿತೈರ್ದೇವೈರ್ಜಗಾಮ ತ್ರಿದಿವಂ ಮಹತ್ ॥

-ವಾ.ರಾ.ಉತ್ತರ ೧೧೦-೨೮

ವಾಲ್ಮೀಕಿ ರಾಮಾಯಣದ ಕೊನೆಯ ಶ್ಲೋಕದ ಕೊನೆಯ ಅಕ್ಷರ ''ತ್''.

ರಾಮಾಯಣದ ಮೊದಲ ಅಕ್ಷರ, ಗಾಯತ್ರಿಯ ಮೊದಲ ಅಕ್ಷರ 'ತ'

ರಾಮಾಯಣ ಹಾಗೂ ಗಾಯತ್ರಿಯ ಕೊನೆಯ ಅಕ್ಷರ ''ತ್''. ಎರಡೂ .... (ತತ್) ೨೪ ಸಾವಿರ ಶ್ಲೋಕದ ಸಮಗ್ರಸಾರ, ಪ್ರತಿನಿಧಿಯೇ ''ತತ್''.

ಸಂಪೂರ್ಣ ರಾಮಾಯಣವೇ **'ತತ್'** ಗಾಯತ್ರಿಯ ವ್ಯಾಖ್ಯಾನರೂಪವಾಗಿದೆ. ಗಾಯತ್ರಿಯ ಇಪ್ಪತ್ನಾಲ್ಕು ಅಕ್ಷರಗಳ ವ್ಯಾಖ್ಯಾನವೇ ವಾಲ್ಮೀಕಿ ರಾಮಾಯಣದ ಇಪ್ಪತ್ನಾಲ್ಕು ಸಾವಿರ ಶ್ಲೋಕಗಳು. ಗಾಯತ್ರಿಯ ಒಂದೊಂದು ಅಕ್ಷರವನ್ನು ರಾಮಾಯಣದ ಒಂದೊಂದು ಸಾವಿರ ಶ್ಲೋಕಗಳು ವ್ಯಾಖ್ಯಾನಿಸುವವು.

''ಇತಿಹಾಸಪುರಾಣಃ ಪಂಚಮೋ ವೇದಾನಾಂ ವೇದಃ'' ಇತಿಹಾಸ-ಪುರಾಣಗಳು ಐದನೇ ವೇದ. **'ರಾಮಾಯಣ'** ಇದು ಇತಿಹಾಸ. ಇದು ಪಂಚಮವೇದ.

ಇತಿಹಾಸ, ಪುರಾಣಗಳು ವೇದದ ವಿಶಾಲ ವ್ಯಾಖ್ಯಾನ. ವೇದದ ವಿಸ್ತೃತ ರೂಪ. **''ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್''** ವೇದದ ಅರ್ಥವಿಸ್ತಾರಕ್ಕಾಗಿ, ವ್ಯಾಖ್ಯಾನರೂಪವಾಗಿ, ದೃಷ್ಟಾಂತಸಹಿತವಾದುದೇ ರಾಮಾಯಣವೆಂಬ ಇತಿಹಾಸ.

''ರಾಮಾಯಣಂ ಮಹಾಕಾವ್ಯಂ ಸರ್ವವೇದೇಷು ಸಮ್ಮತಮ್ ।
ಸರ್ವಪಾಪಪ್ರಶಮನಂ ದುಷ್ಟಗ್ರಹನಿವಾರಣಮ್ ॥''

-ವಾ.ರಾ.ಮಾಹಾತ್ಮ್ಯ ೧-೧೯

ಸಮಗ್ರವೇದಸಮ್ಮತವಾದದ್ದು ಈ ರಾಮಾಯಣ ಮಹಾಕಾವ್ಯ. ರಾಮಾಯಣದ ರೂಪದಲ್ಲಿ ವೇದಾರ್ಥಗಳ ಸಂಯೋಜನೆ. ಅಂತೆಯೇ ರಾಮಾಯಣ ಎಲ್ಲ ಪಾಪಪರಿಹಾರಕ. ದುಷ್ಟಗ್ರಹಬಾಧೆನಿವಾರಕ.

ರಾಮಾಯಣ ಸ್ವರೂಪ

ವಾಲ್ಮೀಕಿರಾಮಾಯಣದಲ್ಲಿ ಏಳು ಕಾಂಡಗಳು. ಐದು ನೂರಕ್ಕೂ ಹೆಚ್ಚು ಸರ್ಗಗಳು. ಇಪ್ಪತ್ನಾಲ್ಕು ಸಾವಿರ ಶ್ಲೋಕಗಳು. ಇಲ್ಲಿ ಯಾವ ಕಾಂಡವೂ ಪ್ರಕ್ಷಿಪ್ತವಲ್ಲ. ಆಮೇಲೆ ರಚಿಸಿದ್ದೂ ಅಲ್ಲ.

''ಚತುರ್ವಿಂಶತಿ ಸಹಸ್ರಾಣಿ ಶ್ಲೋಕಾನಾಮುಕ್ತವಾನ್ ಋಷಿಃ ।
ತಥಾ ಸರ್ಗಶತಾನ್ ಪಂಚ ಷಟ್‌ಕಾಂಡಾನಿ ತಥೋತ್ತರಮ್ ॥

-ವಾ.ರಾ.ಬಾಲ. ೪-೨

ಇಪ್ಪತ್ನಾಲ್ಕು ಸಾವಿರ ಶ್ಲೋಕಗಳು, ಏಳು ಕಾಂಡಗಳು, ಐದು ನೂರಕ್ಕೂ ಹೆಚ್ಚು ಸರ್ಗಗಳು. ಇದು ರಾಮಾಯಣದ ಸ್ವರೂಪ.

ರಾಮಾಯಣದ ಏಳು ಕಾಂಡಗಳು ಆಧ್ಯಾತ್ಮಿಕ ಸಾಧಕನು ಏರುವ ಏಳು ಮೆಟ್ಟಿಲುಗಳು. ಸಾಧನದ ಸೋಪಾನಗಳು. ಸಾಧಿಸಬೇಕಾದ ಗುಣಗಳು. ಇವು ವೇದದ ಏಳು ಸಂದೇಶಗಳು. ಕಾಂಡದ ಬೀಜವೇ ಏಳು ಸಂಖ್ಯಾಕವಾಗಿದೆ. ಕಾಂಡದ ಹೆಸರುಗಳೂ ಏಳು. ಸಂದೇಶ-ಆದೇಶಗಳನ್ನು ಸುಲಭವಾಗಿ, ಸರಳವಾಗಿ ಬಿಂಬಿಸುವವು.

ಸಮಗ್ರ ವಾಲ್ಮೀಕಿ ರಾಮಾಯಣ ಕನ್ನಡ ಅನುವಾದ ಯೋಜನೆಯ ಹಿನ್ನಲೆ

ದ್ವೈತವೇದಾಂತ ಅಧ್ಯಯನ ಸಂಶೋಧನ ಪ್ರತಿಷ್ಠಾನವು ಅನೇಕ ದಶಕಗಳಿಂದ ಪ್ರಾಚೀನ-ಅಪ್ರಕಟಿತ ಗ್ರಂಥಗಳ ಪ್ರಕಾಶನಕಾರ್ಯದಲ್ಲಿ ಪರಿಪೂರ್ಣವಾಗಿ ತೊಡಗಿದ್ದು, ಈಗಾಗಲೇ ಸಂಸ್ಕೃತ-ಕನ್ನಡ-ಇಂಗ್ಲೀಷ್ ಮೊದಲಾದ ಭಾಷೆಗಳಲ್ಲಿ ನೂರಕ್ಕೂ ಹೆಚ್ಚು ಗ್ರಂಥಗಳು ಪ್ರಕಟಿತವಾಗಿವೆ. ಪ್ರಕೃತ ಧರ್ಮಪ್ರಚಾರಕಾರ್ಯದ ಪ್ರಧಾನ ಅಂಗವಾಗಿ ಸಮಗ್ರ ವಾಲ್ಮೀಕಿ ರಾಮಾಯಣದ ಕನ್ನಡ ಅನುವಾದ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದ್ದು, ೧೦ ಸಂಪುಟಗಳಲ್ಲಿ ಪೂರ್ಣ ರಾಮಾಣಯದ ಕನ್ನಡ ಅನುವಾದಗಳು ಹೊರಬರುತ್ತಿವೆ.

ದ್ವೈತವೇದಾಂತ ಅಧ್ಯಯನ ಸಂಶೋಧನ ಪ್ರತಿಷ್ಠಾನವು ಸಮಗ್ರ ವಾಲ್ಮೀಕಿ ರಾಮಾಯಣದ ಕನ್ನಡ ಅನುವಾದ ಯೋಜನೆ ಕೈಗೆತ್ತಿಕೊಳ್ಳಲು ಇದು ಹಿನ್ನಲೆಯಾಗಿದೆ. ಪರಮಪೂಜ್ಯರಾದ, **ಶ್ರೀಮದುತ್ತರಾದಿಮಠಾಧೀಶರಾದ ಶ್ರೀ೧೦೦೮ಶ್ರೀಸತ್ಯಾತ್ಮತೀರ್ಥಶ್ರೀಪಾದಂಗಳವರ ಪೀಠಾರೋಹಣ ರಜತಮಹೋತ್ಸವ-ದಲ್ಲಿ ನಾವಿದ್ದೇವೆ.** ಬೆಂಗಳೂರಿನ ಕೋಟೆ ಹೈಸ್ಕೂಲ್ ಆವರಣದಲ್ಲಿ ಶ್ರೀರಾಮಸೇವಾ-ಮಂಡಲಿಯ ವತಿಯಿಂದ ಪ್ರತಿವರ್ಷ ನಡೆಸುವ ರಾಮಾಯಣ ವಿಶೇಷ ಪ್ರವಚನ ಕಾರ್ಯಕ್ರಮದಲ್ಲಿ ಶ್ರೀಪಾದಂಗಳವರು ೨೫ ವರ್ಷಗಳಿಂದ ಸತತವಾಗಿ ರಾಮಾಯಣಪ್ರವಚನ ನಡೆಸಿಕೊಡುತ್ತಿದ್ದಾರೆ. ಈ ಬಾರಿ ನಡೆಯುತ್ತಿರುವುದು ಶ್ರೀಪಾದಂಗಳವರ ೨೫ನೇ ವರ್ಷದ ರಾಮಾಯಣ ಪ್ರವಚನ. ಮತ್ತು ಶ್ರೀಪಾದಂಗಳವರಿಗೆ ೫೦ ವಸಂತಗಳು ತುಂಬಿದ ಹಿನ್ನಲೆಯಲ್ಲಿ ಸುವರ್ಣ-ಮಹೋತ್ಸವದ ಸಂಭ್ರಮ. ಹೀಗಾಗಿ ಶ್ರೀಪಾದಂಗಳವರ ೫೦ ವಸಂತಗಳ ಸುವರ್ಣಮಹೋತ್ಸವ, ೨೫ನೇ ವರ್ಷದ ರಾಮಾಯಣ ಪ್ರವಚನ ಮತ್ತು ಶ್ರೀಪಾದಂಗಳವರ ೨೫ನೇ ವರ್ಷದ ಪೀಠಾರೋಹಣ ಮಹೋತ್ಸವಗಳ ಸವಿನೆನಪಿಗಾಗಿ ದ್ವೈತವೇದಾಂತ ಅಧ್ಯಯನ ಸಂಶೋಧನಪ್ರತಿಷ್ಠಾನವು ಸಮಗ್ರ

ರಾಮಾಯಣದ ಕನ್ನಡ ಅನುವಾದ ಯೋಜನೆ ಕೈಗೆತ್ತಿಕೊಂಡು, ಅದರ ಸಂಪೂರ್ಣ ೧೦ ಸಂಪುಟಗಳನ್ನು ಈ ಸಂದರ್ಭದಲ್ಲಿ ಶ್ರೀಪಾದಂಗಳವರ ಮೂಲಕ ಲೋಕಾರ್ಪಣೆ ಮಾಡಿ, ಶ್ರೀರಾಮಚಂದ್ರನಲ್ಲಿ ಸಮರ್ಪಣೆ ಮಾಡುತ್ತಿದೆ.

ಈ ಅನುವಾದಕಾರ್ಯದಲ್ಲಿ ಅನೇಕ ವಿದ್ವಾಂಸರು ಸಂಪೂರ್ಣವಾಗಿ ಸಹಕರಿಸಿ, ತಮ್ಮ ಸುಂದರ ಬರವಣಿಗೆಯಲ್ಲಿ ಕನ್ನಡ ಅನುವಾದ ಮಾಡಿಕೊಟ್ಟಿದ್ದಾರೆ.

೧) ಬಾಲಕಾಂಡ - ಪಂ. ಹಯವದನ ಪುರಾಣಿಕರು

೨) ಅಯೋಧ್ಯಾಕಾಂಡ ಭಾಗ-೧ ಪಂ. ಹಯವದನ ಪುರಾಣಿಕರು

೩) ಅಯೋಧ್ಯಾಕಾಂಡ ಭಾಗ-೨ - ಪಂ. ಹಯವದನ ಪುರಾಣಿಕರು

೪) ಅರಣ್ಯಕಾಂಡ - ಪಂ. ರಾಮವಿಠ್ಠಲಾಚಾರ್ಯ

೫) ಕಿಷ್ಕಿಂಧಾಕಾಂಡ - ಪಂ. ನಾಗರಹಳ್ಳಿ ಶ್ರೀನಿವಾಸಾಚಾರ್ಯ

೬) ಸುಂದರಕಾಂಡ - ಪಂ. ಕೃಷ್ಣಾಚಾರ್ಯ ಬಿದರಹಳ್ಳಿ

೭) ಯುದ್ಧಕಾಂಡ ಭಾಗ-೧ ಪಂ. ಕಾಂತೇಶಾಚಾರ್ಯ ಕದರಮಂಡಲಗಿ

೮) ಯುದ್ಧಕಾಂಡ ಭಾಗ-೨ ಪಂ. ವೇಂಕಟಗಿರೀಶಾಚಾರ್ಯ ಎ. ಎಸ್.

೯) ಉತ್ತರಕಾಂಡ ಭಾಗ-೧ ಪಂ. ವಾದಿರಾಜಾಚಾರ್ಯ ಕರಣಮ್

೧೦) ಉತ್ತರಕಾಂಡ ಭಾಗ-೨ ಪಂ. ಕಮಲಾಪುರ ಗುರುರಾಜಾಚಾರ್ಯ

ಸದಾ ಪಾಠ-ಪ್ರವಚನ-ಸಂಶೋಧನಗಳಲ್ಲಿಯೇ ತಲ್ಲೀನರಾಗಿ, ಬಿಡುವಿಲ್ಲದ ಸಮಯದಲ್ಲಿಯೂ ತಮ್ಮ ಅಮೂಲ್ಯವಾದ ಸಮಯವನ್ನು ನಮಗಾಗಿ ಕೊಟ್ಟು, ವ್ಯಾಖ್ಯಾನಗಳ ವಿಶೇಷ ವಿಚಾರಗಳನ್ನು ಸೇರಿಸಿಕೊಂಡು ಸುಂದರವಾದ ಕನ್ನಡ ಅನಾವಾದ ಮಾಡಿಕೊಟ್ಟಿರುವ ಈ ಎಲ್ಲ ವಿದ್ವಾಂಸರಿಗೆ ಕೃತಜ್ಞತಾಪೂರ್ವಕವಾದ ನಮಸ್ಕಾರಗಳು.

ಅಯೋಧ್ಯಾಕಾಂಡ

ರಾಮಾಯಣದ ಏಳು ಕಾಂಡಗಳಲ್ಲಿ ಬಾಲಕಾಂಡ ಮೊದಲನೇ ಕಾಂಡವಾದರೆ, ಎರಡನೇ ಕಾಂಡ ಅದು ಅಯೋಧ್ಯಾಕಾಂಡ. ರಾಮನ ಪಾದುಕೆಯ ಪಟ್ಟಾಭಿಷೇಕ, ಭರತನ ತ್ಯಾಗ, ದಶರಥನ ರಾಮಪ್ರೀತಿ, ರಾಮನ ವನಗಮನ ಇದು ಜೀವಾಳ.

ಮನಸ್ಸು ಬಾಲಕನಂತಾದರೆ ಸಾಧಕ ಅಯೋಧ್ಯ. ಮನಸ್ಸು ನಿರ್ವಿಕಾರ. ಪರಿಸ್ಥಿತಿ, ಆವೇಶ, ಉದ್ವೇಗ, ಮಾನಾಪಮಾನಗಳು ಮನಸ್ಸಿನ ಮೇಲೆ ಯುದ್ಧ ಮಾಡಲಾರವು. ವಿಕೃತಗೊಳಿಸವು.

''ಯೋದ್ಧುಂ ಯೋಗ್ಯಾ ಯೋಧ್ಯಾ, ನ ಯೋಧ್ಯಾ ಅಯೋಧ್ಯಾ''

ಪರಿಸ್ಥಿತಿ–ಮನಸ್ಸುಗಳ ದ್ವಂದ್ವ. ಬಾಲಕನಂತೆ ಮನಸ್ಸು ನಿರ್ವಿಕಾರ. ಅದೇ ಅಯೋಧ್ಯೆ. ರಾಮಾಯಣದಲ್ಲಿ ಎರಡನೇ ಕಾಂಡ ಅಯೋಧ್ಯಾಕಾಂಡ. ಯುದ್ಧವಿಲ್ಲದ ಕಾಂಡವಿದು. ರಾಜನಾಗಲು ಹೊರಟ ರಾಮ, ನಾರಮಡಿ–ಯುಟ್ಟು ಕಾಡದಾರಿ ಹಿಡಿದ. ಯಾರನ್ನೂ ದೂರಲಿಲ್ಲ. ಆಸೆ ಇಲ್ಲ. ಸಹಜ ಸಹನೆ. **''ವಿಕಾರೋ ನೈವ ಲಕ್ಷಿತಃ''** ಮುಖದಲ್ಲಿಯೂ ಸರ್ವಥಾ ವಿಕಾರವಿಲ್ಲ. ರಾಮನ ಅಯೋಧ್ಯತೆ. ಇಲ್ಲಿಯೇ ಶ್ರೀರಾಮ ಉಳಿದಿದ್ದರೆ ತಮ್ಮಂದಿರಲ್ಲಿ, ತಾಯಂದಿರಲ್ಲಿ, ತಂದೆಗೂ ಪರಸ್ಪರ ಸಂಘರ್ಷ. ಮನಸ್ತಾಪ. ಅದನ್ನು ತಪ್ಪಿಸಲು ಕಾಡಿಗೆ ತೆರಳಿದ. ಅಯೋಧ್ಯನಾದ ರಾಮ ಕಾಡಿಗೆ ಮಡದಿ, ತಮ್ಮನೊಡನೆ ತೆರಳಿದ. ದ್ವೇಷ, ಅತೃಪ್ತಿ ಇಲ್ಲದೇ ಸಂತಸದಿಂದ ಅಯೋಧ್ಯನಾಗಿ ಅಯೋಧ್ಯೆಯಿಂದ ವನಕ್ಕೆ ತೆರಳಿದ.

ತಂದೆ–ತಾಯಿಗಳ, ಮಕ್ಕಳ, ಅಣ್ಣ–ತಮ್ಮಂದಿರ, ಪತಿ–ಪತ್ನಿಯರ, ರಾಜ–ಪ್ರಜೆಗಳ ಪ್ರೀತಿ ತುಂಬಿದ ಕಾಂಡ. ಅನಂತಗುಣಗಣಿ ರಾಮ. ವಿವೇಕ, ಪ್ರೀತಿಯ ಲಕ್ಷ್ಮಣ. ಭಕ್ತಿಯ ಭರತ. ಸಾತ್ತ್ವಿಕ ಶತ್ರುಘ್ನ. ಇವರಿಂದ ಅರಮನೆ ಅಯೋಧ್ಯೆ–ಯಾಯಿತು. ಸ್ವಾರ್ಥ ಸೋತಿತು. ಸಂಘರ್ಷ ಕರಗಿತು. ಇದು ತ್ಯಾಗದ ಅಯೋಧ್ಯಾಕಾಂಡ. ಬಾಲಕನಾಗಿ ಅಯೋಧ್ಯನಾಗುವ ದ್ವಿತೀಯ ಸೋಪಾನ.

ಅಯೋಧ್ಯಾಕಾಂಡದ ಕನ್ನಡ ಅನುವಾದಕರು

ದ್ವೈತವೇದಾಂತ ಅಧ್ಯಯನ ಸಂಶೋಧನ ಪ್ರತಿಷ್ಠಾನವು ಕೈಗೆತ್ತಿಕೊಂಡ ಸಮಗ್ರ ವಾಲ್ಮೀಕಿ ರಾಮಾಯಣ ಕನ್ನಡ ಅನುವಾದದ ಬೃಹತ್ಕಾರ್ಯದಲ್ಲಿ ಎರಡನೇ ಕಾಂಡವಾದ ಅಯೋಧ್ಯಾಕಾಂಡವನ್ನು ಪೂರ್ಣವಾಗಿ ಕನ್ನಡದಲ್ಲಿ ಅನುವಾದಿಸಿ–ಕೊಟ್ಟವರು **ಪಂ. ಹಯವದನ ಪುರಾಣಿಕರು.**

ಇವರು ಪೂರ್ಣಪ್ರಜ್ಞವಿದ್ಯಾಪೀಠದ ಮೊದಲತಂಡದ ವಿದ್ಯಾರ್ಥಿಗಳಾಗಿ, ಪರಮಪೂಜ್ಯ ಪೇಜಾವರಮಠಾಧೀಶರಾದ ಶ್ರೀವಿಶ್ವೇಶತೀರ್ಥರಲ್ಲಿ ಅಧ್ಯಯನ ಮಾಡಿ, ಸುಧಾಮಂಗಳ ನೆರವೇರಿಸಿ ಹೊರಬಂದವರು. ೧೯೭೫ ರಿಂದ ಪೂರ್ಣಪ್ರಜ್ಞವಿದ್ಯಾಪೀಠದ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದವರು.

ವ್ಯಾಸಸಾಹಿತ್ಯ ಹಾಗೂ ದಾಸಸಾಹಿತ್ಯ ಎರಡರಲ್ಲಿಯೂ ಅಗಾಧವಾದ ಪಾಂಡಿತ್ಯವನ್ನು ಪಡೆದಿದ್ದ ಇವರು ಅತ್ಯುತ್ತಮ ಲೇಖಕರು. ಮಾಧ್ವಮಹಾ–ಮಂಡಲದ ಸರ್ವಮೂಲಗ್ರಂಥಗಳ ಕನ್ನಡ ಅನುವಾದ ಯೋಜನೆಯಲ್ಲಿ ಸಮಗ್ರ

ಮಹಾಭಾರತತಾತ್ಪರ್ಯನಿರ್ಣಯಕ್ಕೆ, ಸಮಗ್ರ ಭಾಗವತತಾತ್ಪರ್ಯನಿರ್ಣಯಕ್ಕೆ ವಿಸ್ತೃತವಾದ ಕನ್ನಡ ಅನುವಾದ ಬರೆದ ವಿಶೇಷಕೀರ್ತಿ ಇವರದ್ದು. ಸಮಗ್ರ ಭಾಗವತಕ್ಕೆ ಕನ್ನಡ ಅನುವಾದ ಮಾಡಿ ಸುಲಲಿತಭಾಗವತ ಕೊಟ್ಟಿದ್ದಾರೆ. ಋಗ್ಭಾಷ್ಯಕ್ಕೆ ವಿಮರ್ಶಾತ್ಮಕವಾಗಿ ಪೂರ್ಣ ಅನುವಾದ ಮಾಡಿದ್ದರ ಜೊತೆಗೆ ಸಂಪೂರ್ಣ ಹರಿಕಥಾಮೃತಸಾರಕ್ಕೆ ಹಾಗೂ ಲಕ್ಷ್ಮೀಶೋಭಾನ ಕೃತಿಗಳಿಗೆ ವಿಶೇಷರೀತಿಯಲ್ಲಿ ಅನುವಾದ ಮಾಡಿದ ದೊಡ್ಡ ಸಾಧನೆ ಅವರದ್ದು.

ಪೂರ್ಣಪ್ರಜ್ಞ ವಿದ್ಯಾಪೀಠದ ವತಿಯಿಂದ ಕೈಗೊಳ್ಳಲಾದ ಸಮಗ್ರ ನ್ಯಾಯಸುಧಾ ಕನ್ನಡ ಅನುವಾದ ಯೋಜನೆಯಲ್ಲಿ ಪುರಾಣಿಕರದು ಬಹಳ ಮಹತ್ವದ ಪಾತ್ರ. ಎಲ್ಲ ವಿದ್ವಾಂಸರು ತಮಗೆ ನೀಡಿದ ಭಾಗಗಳನ್ನು ಕನ್ನಡದಲ್ಲಿ ಅನುವಾದ ಮಾಡಿ ಕೊಟ್ಟಾಗ ಅದೆಲ್ಲವನ್ನೂ ಸರಿಯಾಗಿ ಅವಲೋಕಿಸಿ, ಅವಶ್ಯಕತೆ ಇದ್ದಲ್ಲಿ ತಿದ್ದುಪಡಿ ಮಾಡಿ, ಪ್ರಧಾನ ಸಂಪಾದಕರಾಗಿ, ಸುಧಾಸೌರಭ ಪ್ರಕಾಶನಕ್ಕೆ ಮುಖ್ಯವಾಗಿ ನೆರವಾದರು.

ಅವರ ಸಾಧನೆಗೆ ರಾಷ್ಟ್ರಪತಿಪ್ರಶಸ್ತಿ ಸಹಿತ ನೂರಾರು ಪ್ರಶಸ್ತಿಗಳು ಅವರಿಗೆ ಸಂದಿವೆ. ಉತ್ತಮ ವಾಕ್ಪಟುತ್ವವನ್ನೂ ಹೊಂದಿದ್ದ ಇವರು ವಿದ್ವತ್ಸಭೆಗಳಲ್ಲಿ ಎಲ್ಲರೂ ತಲೆದೂಗುವಂತೆ ವಿಷಯ ಮಂಡಿಸುತ್ತಿದ್ದರು.

ಇವರು ವಾಲ್ಮೀಕಿ ರಾಮಾಯಣದ ಬಾಲಕಾಂಡ ಹಾಗೂ ಅಯೋಧ್ಯಾ-ಕಾಂಡದ ಸಂಪೂರ್ಣ ಕನ್ನಡ ಅನುವಾದ ಮಾಡಿಕೊಟ್ಟು, ನಮ್ಮ ಸಂಸ್ಥೆಯ ಸಮಗ್ರ ವಾಲ್ಮೀಕಿ ರಾಮಾಯಣ ಕನ್ನಡ ಅನುವಾದ ಬೃಹತ್ಕಾರ್ಯಕ್ಕೆ ವಿಶೇಷ ಸಹಕಾರ ನೀಡಿದ್ದಾರೆ.

ವಿಶೇಷವೆಂದರೆ, ವಿದ್ವಾಂಸರ ಮೂಲಕ ವಾಲ್ಮೀಕಿ ರಾಮಾಯಣಕ್ಕೆ ಕನ್ನಡ ಅನುವಾದ ಮಾಡಿಸಬೇಕು ಎಂದು ಅಂದುಕೊಂಡ ಕೂಡಲೇ ನೆನಪಾದದ್ದು ಪಂ. ಹಯವದನ ಪುರಾಣಿಕರು. ಅವರನ್ನು ಸಂಪರ್ಕಿಸಿ ಬಾಲಕಾಂಡದ ಅನುವಾದ ಮಾಡಿಕೊಡಬೇಕೆಂದು ಕೇಳಿಕೊಂಡೆವು. ಆಶ್ಚರ್ಯವೆಂದರೆ, ನಾವು ಅವರನ್ನು ಭೇಟಿಯಾಗಿ ಬಂದ ಹತ್ತುದಿನಗಳಲ್ಲಿಯೇ ಬಾಲಕಾಂಡದ ಪೂರ್ಣ ಅನುವಾದ ಮಾಡಿ ನಮಗೆ ಕಳಿಸಿಬಿಟ್ಟರು.

ನಂತರ ಅಯೋಧ್ಯಾಕಾಂಡದ ಅನುವಾದ ಆಗಬೇಕಿತ್ತು. ಇನ್ನೊಬ್ಬ ವಿದ್ವಾಂಸರಿಗೆ ಅದರ ಜವಾಬ್ದಾರಿ ನೀಡಿದ್ದೆವು. ಆದರೆ ಕಾರಣಾಂತರದಿಂದ ಅವರಿಗೆ

ಅಯೋಧ್ಯಾಕಾಂಡದ ಅನುವಾದ ಮಾಡಲು ಸಾಧ್ಯವಾಗಲಿಲ್ಲ. ನಾವು ಮತ್ತೆ ಪಂ. ಹಯವದನ ಪುರಾಣಿಕರನ್ನೇ ಸಂಪರ್ಕಿಸಿ, ಅಯೋಧ್ಯಾಕಾಂಡದ ಅನುವಾದವನ್ನೂ ಮಾಡಿಕೊಡಲು ವಿನಂತಿಸಿಕೊಂಡೆವು. ನಮ್ಮ ವಿನಂತಿಗೆ ಸ್ಪಂದಿಸಿ ಕೇವಲ ಹತ್ತು ದಿನಗಳಲ್ಲಿ ಅಯೋಧ್ಯಾಕಾಂಡದ ಅನುವಾದವನ್ನೂ ಪೂರ್ಣವಾಗಿ ಮುಗಿಸಿ ಕಳಿಸಿಕೊಟ್ಟರು. ಅವರ ಆ ವೇಗದ ಬರವಣಿಗೆ, ಅವರ ವ್ಯುತ್ಪತ್ತಿ ಇವುಗಳನ್ನು ಕಂಡು ಬಹಳ ಆಶ್ಚರ್ಯಚಕಿತರಾದೆವು. ಅಂತಹ ಅದ್ಭುತ ಬರಹಗಾರರು ಇವರು.

ಇಂತಹ ಅಪಾರ ಸದ್ಗುಣಗಳ ಗಣಿಗಳಾಗಿದ್ದ ಇವರು ಇತ್ತೀಚೆಗೆ ದೈವಾಧೀನರಾದದ್ದು ಭಗವಂತನ ಸಂಕಲ್ಪ. ಅವರಿಗೆ ಜನ್ಮಜನ್ಮಾಂತರದಲ್ಲಿಯೂ ಶ್ರೀಮದಾಚಾರ್ಯರ ಶಾಸ್ತ್ರದ ಅಧ್ಯಯನ-ಅಧ್ಯಾಪನ-ಲೇಖನಾದಿಗಳನ್ನು ಮಾಡುವ ಸೌಭಾಗ್ಯವನ್ನು ಭಗವಂತ ಕೊಡಲಿ ಎಂದು ಹಾರೈಸುತ್ತ, ಅವರಿಗೆ ಈ ಸಂದರ್ಭದಲ್ಲಿ ಸ್ಮರಣಪೂರ್ವಕವಾಗಿ ವಿಶೇಷ ನಮನಗಳನ್ನು ಸಲ್ಲಿಸುತ್ತಿದ್ದೇವೆ.

ಕೃತಜ್ಞತೆಗಳು

◆ ಯಾವುದೇ ಒಂದು ಕಾರ್ಯ ಯಶಸ್ವಿಯಾಗಿ ಪೂರ್ಣಗೊಳ್ಳಬೇಕಾದರೆ, ಗುರುಗಳ ಆಶೀರ್ವಾದ ಮುಖ್ಯ ಕಾರಣ. ಇಂದು ನಮ್ಮ ಸಮಗ್ರ ರಾಮಾಯಣ ಕನ್ನಡ ಅನುವಾದ ಯೋಜನೆ ಯಶಸ್ವಿಯಾಗಿ ಪೂರ್ಣಗೊಳ್ಳಲು ಪರಮಪೂಜ್ಯರಾದ, **ಶ್ರೀಮದುತ್ತರಾದಿಮಠಾಧೀಶರಾದ, ಶ್ರೀ ೧೦೦೮ ಶ್ರೀಸತ್ಯಾತ್ಮತೀರ್ಥ-ಶ್ರೀಪಾದಂಗಳವರು** ನಮ್ಮ ಮೇಲೆ ಮಾಡಿದ ಪರಮಾನುಗ್ರಹವೇ ಪ್ರಮುಖ ಕಾರಣ. ನಮ್ಮ ಯೋಜನೆಯ ವಿವರವನ್ನು ತಿಳಿಸಿ ಶ್ರೀಪಾದಂಗಳವರಲ್ಲಿ ಪ್ರಾರ್ಥಿಸಿಕೊಂಡಾಗ, ಶ್ರೀಗಳವರು ಶ್ರೀಮೂಲರಾಮನಲ್ಲಿ ವಿಶೇಷವಾಗಿ ಪ್ರಾರ್ಥಿಸಿ, ಅನುಗ್ರಹಪೂರ್ವಕವಾಗಿ ಮಂತ್ರಾಕ್ಷತೆ ಇತ್ತು ಹರಸಿದರು. ಜೊತೆಗೆ ತಮ್ಮ ಅಮೂಲ್ಯವಾದ ಅನುಗ್ರಹಸಂದೇಶವನ್ನೂ ಕಳಿಸಿ ಪರಮಾನುಗ್ರಹ ಮಾಡಿದ್ದಾರೆ. ಅಂತಹ ಗುರುಗಳಿಗೆ ಭಕ್ತಿಪೂರ್ವಕ ಸಾಷ್ಟಾಂಗ ಪ್ರಣಾಮಗಳು.

◆ ದ್ವೈತವೇದಾಂತ ಅಧ್ಯಯನ ಸಂಶೋಧನ ಪ್ರತಿಷ್ಠಾನವು ಅಧ್ಯಯನ-ಸಂಶೋಧನಗಳಿಗೆ ಅತ್ಯುಪಯುಕ್ತವಾದ ನೂರಾರು ಅಪೂರ್ವ ಗ್ರಂಥಗಳನ್ನು ಪ್ರಕಾಶನ ಮಾಡಿ ವಿದ್ವಾಂಸರ, ಸಂಶೋಧಕರ, ವಿದ್ಯಾರ್ಥಿಗಳ, ಜಿಜ್ಞಾಸುಗಳ ಮೆಚ್ಚುಗೆಗೆ ಪಾತ್ರವಾಗಿರುವ ಉತ್ತಮಸಂಸ್ಥೆಯಾಗಿದೆ. ಸಂಸ್ಥೆಯು ಈ ಮಟ್ಟಕ್ಕೆ ಬೆಳೆಯುವುದಕ್ಕೆ ಮುಖ್ಯಕಾರಣ **ಪ್ರೊ. ಕೆ. ಟಿ. ಪಾಂಡುರಂಗಿ** ಅವರು. ಸಂಸ್ಥೆಯನ್ನು ಕಟ್ಟಿ, ಅದರ ಸರ್ವಾಂಗೀಣ ಅಭಿವೃದ್ಧಿಗೆ ಬಹಳ ಪರಿಶ್ರಮವಹಿಸಿ,

ಬೆಳೆಸಿ, ಇಂದು ಉನ್ನತಮಟ್ಟಕ್ಕೆ ತಂದು ನಿಲ್ಲಿಸಿದ್ದಾರೆ. ಸಮಗ್ರ ವಾಲ್ಮೀಕಿ ರಾಮಾಯಣಕ್ಕೆ ಕನ್ನಡ ಅನುವಾದ ಮಾಡಿಸಿ ಪ್ರಕಾಶನ ಮಾಡಬೇಕೆಂದು ಅವರು ಇಚ್ಛೆಪಟ್ಟಿದ್ದರು. ಅವರ ಇಚ್ಛೆಗೆ ತಕ್ಕಂತೆ ಇಂದು ಸಮಗ್ರ ವಾಲ್ಮೀಕಿ ರಾಮಾಯಣಕ್ಕೆ ಅನುವಾದ ಸಿದ್ಧವಾಗಿ ಪ್ರಕಾಶನವಾಗುತ್ತಿದೆ. ಆದರೆ ದೈವಸಂಕಲ್ಪ. ಇಂದು ಆ ಕಾರ್ಯವನ್ನು ನೋಡಿ ಸಂತೋಷಪಡಲು ಅವರು ನಮ್ಮೊಂದಿಗೆ ಇಲ್ಲ. ಆದರೂ ಅವರ ಸಂಕಲ್ಪ ಇಂದು ನೆರವೇರಿದೆ ಎಂಬ ಸಂತೃಪ್ತಿ ನಮಗುಂಟಾಗಿದೆ. ಅಂತಹ ಸಂಸ್ಥೆಯ ರೂವಾರಿಗಳು, ನಮ್ಮೆಲ್ಲರಿಗೆ ಮಾರ್ಗದರ್ಶಕರೂ ಆಗಿದ್ದ **ಪ್ರೊ. ಕೆ. ಟಿ. ಪಾಂಡುರಂಗಿ** ಅವರಿಗೆ ನನ್ನ ವಿಶೇಷ ನಮಸ್ಕಾರಗಳು.

♦ ಸಮಗ್ರ ರಾಮಾಯಣ ಕನ್ನಡ ಅನುವಾದ ಪ್ರಕಾಶನಕಾರ್ಯಕ್ಕೆ **ದ್ವೈತವೇದಾಂತ ಅಧ್ಯಯನ ಸಂಶೋಧನ ಪ್ರತಿಷ್ಠಾನದ** ಎಲ್ಲ ವಿದ್ವಾಂಸರು, ಪದಾಧಿಕಾರಿಗಳು, ಸದಸ್ಯರು ವಿಶೇಷವಾಗಿ ಸಹಕರಿಸಿದ್ದಾರೆ.

♦ ಶೋಧಕೇಂದ್ರದ ಸಂಶೋಧಕರಾದ **ಡಾ. ಕಾಂತೇಶಾಚಾರ್ಯ ಕದರಮಂಡಲಗಿ** ಅವರು ಹಾಗೂ ಸಂಶೋಧನಪ್ರತಿಷ್ಠಾನದ ಕಾರ್ಯದರ್ಶಿಗಳಾದ **ಡಾ.ಎ.ಬಿ. ಶಾಮಾಚಾರ್** ಮತ್ತು ಖಜಾಂಚಿಗಳಾದ **ಡಾ. ಎಸ್. ಆರ್. ಪಾಂಡುರಂಗಿ** ಅವರು ನಮ್ಮ ಈ ಸಮಗ್ರ ರಾಮಾಯಣ ಕನ್ನಡ ಅನುವಾದ ಪ್ರಕಾಶನಕಾರ್ಯಕ್ಕೆ ವಿಶೇಷವಾಗಿ ಸಹಕಾರ ನೀಡಿ, ಯಶಸ್ವಿಗೊಳಿಸಿದ್ದಾರೆ. ಅವರೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

♦ ಗ್ರಂಥ ಅಂದವಾಗಿ ಹೊರಬರಲು ಅಂದವಾದ ಅಕ್ಷರಜೋಡಣೆ ಹಾಗೂ ಸುಂದರವಾದ ಮುದ್ರಣವೂ ಕಾರಣ. ಶ್ರೀಯುತ ಫಣಿ ಅವರು ಬಹಳ ಪರಿಶ್ರಮಪೂರ್ವಕವಾಗಿ ಅಂದವಾಗಿ ಅಕ್ಷರಜೋಡಣೆ ಮಾಡಿಕೊಟ್ಟಿದ್ದಾರೆ. ಮತ್ತು ವಾಗರ್ಥ ಮುದ್ರಣಾಲಯ ಅವರು ರಾಮಾಯಣದ ಈ ಅನುವಾದ ಕೃತಿಯನ್ನು ಸುಂದರವಾಗಿ ಮುದ್ರಿಸಿ, ಓದುಗರ ಕೈ ಸೇರಿಸಿದ್ದಾರೆ. ಅವರಿಗೆ ಹೃತ್ಪೂರ್ವಕ ಧನ್ಯವಾದಗಳು.

ಡಾ. ಸತ್ಯಧ್ಯಾನಾಚಾರ್ಯ ಕಟ್ಟಿ
ಅಧ್ಯಕ್ಷರು,
ದ್ವೈತವೇದಾಂತ ಅಧ್ಯಯನ ಸಂಶೋಧನ ಪ್ರತಿಷ್ಠಾನ

♦ ♦ ♦

ವಿಷಯಾನುಕ್ರಮಣಿಕಾ

ಸರ್ಗ ಸಂಖ್ಯೆ	ವಿಷಯ	ಪುಟ ಸಂಖ್ಯೆ
1.	ಭರತ-ಶತ್ರುಘ್ನರು ಸೋದರಮಾವನ ಮನೆಗೆ ಹೋದ ನಂತರ, ರಾಮನು ಬಹಳ ಗುಣಗಳುಳ್ಳವನಾದ್ದರಿಂದ ಅವನಿಗೆ ಯೌವರಾಜ್ಯಾಭಿಷೇಕಕ್ಕಾಗಿ ಆಲೋಚನೆ ಮಾಡಲು ದಶರಥನು ನಾನಾದೇಶದ ರಾಜರನ್ನು ಕರೆಸಿದುದು.	1
2.	ದಶರಥನು ರಾಮನಿಗೆ ಯೌವರಾಜ್ಯದಲ್ಲಿ ಅಭಿಷೇಕ ಮಾಡುವ ತನ್ನ ಇಚ್ಛೆಯನ್ನು ಎಲ್ಲ ಸದಸ್ಯರಿಗೆ ನಿವೇದಿಸಿದ್ದು. ರಾಮನು ಯೌವರಾಜ್ಯದಲ್ಲಿ ಅಭಿಷೇಕ ಮಾಡಿಸಿಕೊಳ್ಳಲು ಅವಶ್ಯ ಯೋಗ್ಯನಾಗಿದ್ದಾನೆ ಎಂಬುದಾಗಿ ಎಲ್ಲ ಸದಸ್ಯರೂ ಹೇಳಿದುದು.	15
3.	ವಸಿಷ್ಠರು ಯೌವರಾಜ್ಯಾಭಿಷೇಕ ಪದಾರ್ಥಗಳನ್ನು ಸಂಗ್ರಹಿಸಿಕೊಳ್ಳಲು ಮಂತ್ರಿಗಳಿಗೆ ಆಜ್ಞೆ ಮಾಡಿದುದು. ದಶರಥನು ರಾಮನಿಗೆ ಯೌವರಾಜ್ಯಾಭಿಷೇಕ ಸಂದರ್ಭದಲ್ಲಿ ತಿಳಿಸಬೇಕಾದ ವಿಚಾರಗಳ ಹಿತೋಪದೇಶ ಮಾಡಿದುದು. ರಾಮನ ಸ್ನೇಹಿತರು ಕೌಸಲ್ಯೆಗೆ ರಾಮಾಭಿಷೇಕವೃತ್ತಾಂತವನ್ನು ಹೇಳಿದುದು. ರಾಮನು ತನ್ನ ಅಂತಃಪುರಕ್ಕೆ ಹೋದದ್ದು.	28
4.	ರಾತ್ರಿಯಲ್ಲಿ ದುಃಸ್ವಪ್ನದರ್ಶನದಿಂದ ಭೀತನಾದ ದಶರಥನು ಮತ್ತೆ ರಾಮನನ್ನು ಕರೆಸಿಕೊಂಡು ಮಾತನಾಡಿದುದು. ರಾಮನು ಕೌಸಲ್ಯೆಯ ಅಂತಃಪುರಕ್ಕೆ ಹೋದದ್ದು. ತಾಯಿ ಕೌಸಲ್ಯೆಗೆ ಹಾಗೂ ಅಲ್ಲಿಗೆ ಬಂದಂತಹ ಸೀತೆಗೆ ತನ್ನ ಯೌವರಾಜ್ಯಾಭಿಷೇಕ ವೃತ್ತಾಂತವನ್ನು ಹೇಳಿದುದು.	38
5.	ವಸಿಷ್ಠರು ಹೆಂಡತಿಯಿಂದ ಸಹಿತನಾದ ರಾಮನಿಗೆ ವ್ರತಾಚರಣವನ್ನು ಉಪದೇಶಿಸಿದ್ದು. ಇತ್ತ ದಶರಥನು ಸಭೆಯ ಸದಸ್ಯರನ್ನೆಲ್ಲ ಕಳಿಸಿಕೊಟ್ಟು ತನ್ನ ಅಂತಃಪುರವನ್ನು ಪ್ರವೇಶಿಸಿದುದು.	50
6.	ಮರುದಿನ ಬೆಳಿಗ್ಗೆ ಬ್ರಾಹ್ಮಣರು ಪುಣ್ಯಾಹವಾಚನವನ್ನು ನಡೆಸಿದುದು. ರಾಮನ ಅಭಿಷೇಕ ವೃತ್ತಾಂತವನ್ನು ಕೇಳಿ ಸಂತುಷ್ಟರಾದ ಪೌರಜನರು ಅಯೋಧ್ಯಾಪಟ್ಟಣಕ್ಕೆ ಅಲಂಕಾರ ಮಾಡಿದ್ದು.	56
7.	ರಾಮನ ಪಟ್ಟಾಭಿಷೇಕ ವಾರ್ತೆಯನ್ನು ಕೇಳಿ ತಿಳಿದ ಮಂಥರೆಯು ಕೈಕೇಯಿಯ ಬಳಿ ತೆರಳಿ, ಪಟ್ಟಾಭಿಷೇಕವನ್ನು ತಡೆಯುವಂತೆ ಪ್ರಚೋದಿಸಿದುದು.	62

8. ರಾಮಪಟ್ಟಾಭಿಷೇಕವು ತನಗೆ ಬಹಳ ಇಷ್ಟವಾದದ್ದೆಂದು ಕೈಕೇಯಿ ಮಂಥರೆಗೆ ಹೇಳಿದ್ದು. ಮತ್ತೆ ಮಂಥರೆಯು ಕೈಕೇಯಿಗೆ ಮಿತ್ರಭೇದವಾಕ್ಯ ಹೇಳಿದುದು. 70

9. ''ಭರತನಿಗೆ ಪಟ್ಟಾಭಿಷೇಕವಾಗಬೇಕು'' 'ರಾಮನಿಗೆ ವನವಾಸವಾಗಬೇಕು' ಎಂದು ರಾಜ ದಶರಥನಿಗೆ ವರಗಳನ್ನು ಕೇಳುವಂತೆ ಕೈಕೇಯಿಯು ಮಂಥರೆಗೆ ಪ್ರಚೋದಿಸುವುದು. ಕೈಕೇಯಿಯು ಕ್ರೋಧಾಗಾರಕ್ಕೆ ಹೋದದ್ದು. 81

10. ರಾಮನ ಪಟ್ಟಾಭಿಷೇಕ ವೃತ್ತಾಂತವನ್ನು ಹೇಳುವುದಕ್ಕಾಗಿ ರಾಜ ದಶರಥನು ಕೈಕೇಯಿಯ ಅಂತಃಪುರಕ್ಕೆ ಹೋದದ್ದು. ಕೈಕೇಯಿ ಕ್ರೋಧಾಗಾರಕ್ಕೆ ಹೋದದ್ದನ್ನು ತಿಳಿದು, ಅಲ್ಲಿಗೆ ತಾನೂ ತೆರಳಿ, ಕೈಕೇಯಿಯನ್ನು ಬಹುವಾಗಿ ಸಾಂತ್ವನಗೊಳಿಸಿದುದು. 95

11. ರಾಜ ದಶರಥನು 'ಎಲ್ಲ ಅಭೀಷ್ಟವನ್ನು ಪೂರೈಸುತ್ತೇನೆ' ಎಂದು ಪ್ರತಿಜ್ಞೆ ಮಾಡಲು, ಭರತನಿಗೆ ಪಟ್ಟಾಭಿಷೇಕ ಹಾಗೂ ರಾಮನಿಗೆ ವನವಾಸ ಎಂಬ ವರಗಳನ್ನು ಕೈಕೇಯಿ ಕೇಳಿದುದು. 106

12. ರಾಮನ ಗುಣಗಳನ್ನು ಅನುವಾದ ಮಾಡುವ ಮೂಲಕ ರಾಮನಿಗೇ ಪಟ್ಟಾಭಿಷೇಕ ಮಾಡುವಂತೆ ದಶರಥನು ಕೈಕೇಯಿಗೆ ಪ್ರಾರ್ಥನೆ ಮಾಡಿಕೊಂಡದ್ದು. ಕೈಕೇಯಿಯು ಮತ್ತೆ ಕಠೋರವಾದ ಮಾತುಗಳನ್ನು ನುಡಿಯುವ ಮೂಲಕ ಹಠದಿಂದ ಆ ಎರಡು ವರಗಳನ್ನೇ ಕೊಡುವಂತೆ ನಿರ್ಬಂಧ ಮಾಡಿದುದು. 114

13. ಸೂರ್ಯಾಸ್ತವಾಗುತ್ತಿರಲು ದಶರಥನು ಕೈಕೇಯಿಯನ್ನು ಸಮಾಧಾನ ಪಡಿಸಲು ಬಹಳ ಪ್ರಯತ್ನ ಮಾಡಿದುದು. ತಾನು ಬೇಡಿದ ಆ ಎರಡು ವರಗಳನ್ನೇ ನೀಡಬೇಕೆಂದು ಕೈಕೇಯಿ ನಿರ್ಬಂಧ ಹಾಕಿದ್ದು. ದುಃಖ-ಸಂತಪ್ತನಾದ ದಶರಥನು ಮೂರ್ಛೆಗೊಂಡು ಭೂಮಿಯಲ್ಲಿ ಬಿದ್ದದ್ದು, ಬೆಳಿಗ್ಗೆ ಸೇವಕರು ಬಂದು ರಾಜನನ್ನು ಎಬ್ಬಿಸಿದುದು. 138

14. ರಾಮನನ್ನು ಕರೆತರಲು ದಶರಥನು ಮಂತ್ರಿಯಾದ ಸುಮಂತ್ರನನ್ನು ಕಳಿಸಿದುದು. 144

15. ರಾಮನನ್ನು ಕರೆಯಲು ಸುಮಂತ್ರನು ರಾಮನ ಅಂತಃಪುರ ಪ್ರವೇಶ ಮಾಡಿದುದು. 158

16. ರಾಜ ದಶರಥನು ನಿನ್ನನ್ನು ನೋಡಲು ಅಪೇಕ್ಷಪಡುತ್ತಿದ್ದಾನೆಂದು ಸುಮಂತ್ರನು ರಾಮನಿಗೆ ಹೇಳಿದುದು, ದಶರಥನನ್ನು ನೋಡುವುದಕ್ಕಾಗಿ ರಾಮನು ಹೊರಟದ್ದು. 168

17. ನಗರದ ಮನೆಗಳು, ಮಾರ್ಗಗಳು, ಅಂಗಡಿ ಮುಂಗಟ್ಟುಗಳು ಎಲ್ಲವೂ ಅಲಂಕೃತವಾದದ್ದನ್ನು ನೋಡುತ್ತ ರಾಮನು ದಶರಥನ ಸಮೀಪಕ್ಕೆ ಹೋದದ್ದು. 179

18. ದುಃಖಸಂತಪ್ತನಾದ ದಶರಥನನ್ನು ನೋಡಿ, ರಾಜನ ದುಃಖಕ್ಕೆ ಕಾರಣ ಏನೆಂದು ರಾಮ ಕೇಳುತ್ತಿರಲು, ಭರತನ ಪಟ್ಟಾಭಿಷೇಕ ಹಾಗೂ ನಿನ್ನ ವನವಾಸ ಇವೆರಡು ರಾಜನ ಅಭಿಪ್ರಾಯವಾಗಿದೆಯೆಂದು ಕೈಕೇಯಿ ರಾಮನಿಗೆ ಹೇಳಿದುದು. 184

19. ಕೈಕೇಯಿಯ ಮಾತನ್ನು ಅಂಗೀಕರಿಸಿ, ರಾಮನು ಲಕ್ಷ್ಮಣನಿಂದ ಕೂಡಿಕೊಂಡು ತನ್ನ ಮನೆಗೆ ತೆರಳಿದ್ದು. 193

20. ರಾಮನು ತನ್ನ ತಾಯಿ ಕೌಸಲ್ಯೆಯ ಅಂತಃಪುರಕ್ಕೆ ಹೋಗಿ, ಅವಳಿಗೆ ತಾನು ವನವಾಸಕ್ಕೆ ಹೋಗಬೇಕಾದ ವಿಚಾರವನ್ನು ತಿಳಿಸಿದುದು. ಕೌಸಲ್ಯೆ ಪ್ರಲಾಪಿಸಿದುದು. 201

21. ಕುದ್ಧನಾದ ಲಕ್ಷ್ಮಣನು ಕೌಸಲ್ಯೆಯನ್ನು ಕುರಿತು ವೃದ್ಧನಾದ ತಂದೆಯನ್ನು (ದಶರಥನನ್ನು) ನಿಗ್ರಹಿಸುವ ಮೂಲಕ ರಾಮನಿಗೆ ಪಟ್ಟಾಭಿಷೇಕ ಮಾಡಿಸುವ ಮಾತುಗಳನ್ನಾಡಿದುದು. ರಾಮನು ಲಕ್ಷ್ಮಣನಿಗೆ ಎಲ್ಲ ಅವಸ್ಥೆಗಳಲ್ಲಿಯೂ ಸಹ ಪಿತೃವಾಕ್ಯಪರಿಪಾಲನೆಯ ಆವಶ್ಯಕತೆಯನ್ನು ತಿಳಿಸಿಕೊಟ್ಟು, ತಾನು ವನವಾಸಕ್ಕೆ ತೆರಳಲು ಅನುಜ್ಞೆ ನೀಡಬೇಕೆಂದು ಕೌಸಲ್ಯೆಗೆ ಕೇಳಿದುದು. 213

22. ಕುದ್ಧನಾದ ಲಕ್ಷ್ಮಣನಿಗೆ ಸರಿಯಾದ ಕಾರಣಗಳನ್ನು ತಿಳಿಸಿಕೊಡುವ ಮೂಲಕ ಅವನ ಕೋಪವನ್ನು ಶಮನ ಮಾಡಿದುದು. 228

23. ಅಧರ್ಮದಲ್ಲಿ ಪ್ರವೃತ್ತನಾದ ತಂದೆಯನ್ನು ನಿಗ್ರಹಿಸಿ, ರಾಮನನ್ನು ಯೌವರಾಜ್ಯದಲ್ಲಿ ಅಭಿಷೇಕ ಮಾಡಿಸುತ್ತೇನೆ ಎಂದು ವಾದ ಮಾಡುತ್ತಿರುವ ಲಕ್ಷ್ಮಣನನ್ನು ರಾಮನು ಸಾಂತ್ವನಗೊಳಿಸುದುದು. 235

24. ವನವಾಸಕ್ಕೆ ಹೋಗಲು ನಿಶ್ಚಯ ಮಾಡಿಕೊಂಡಂತಹ ರಾಮನನ್ನು ಕುರಿತು ತನ್ನನ್ನೂ ವನಕ್ಕೆ ಕರೆದೊಯ್ಯುವಂತೆ ಕೌಸಲ್ಯೆ ನಿವೇದಿಸಿಕೊಂಡದ್ದು.

ಹೆಂಡತಿಯಾದ ನಿನಗೆ ಪತಿಸೇವೆಯೇ ಅವಶ್ಯ ಕರ್ತವ್ಯವಾಗಿದೆ ಎಂಬು-
ದಾಗಿ ರಾಮನು ತಾಯಿ ಕೌಸಲ್ಯೆಗೆ ಕಾರಣಪೂರ್ವಕವಾಗಿ ತಿಳಿಸಿಕೊಟ್ಟದ್ದು. 245

25. ಮನಸ್ಸಿಲ್ಲದಿದ್ದರೂ ಅನಿವಾರ್ಯವಾಗಿ ರಾಮನ ವನಗಮನವನ್ನು
ಅಂಗೀಕರಿಸಿದ ಕೌಸಲ್ಯೆಯ ಆಶೀರ್ವಾದ ಪಡೆದುಕೊಂಡು, ರಾಮನು
ಸೀತೆಯನ್ನು ನೋಡುವುದಕ್ಕಾಗಿ ತನ್ನ ಅಂತಃಪುರಕ್ಕೆ ಹೋದದ್ದು. 253

26. ರಾಮನು ತನ್ನ ವನವಾಸದ ವಿಚಾರವನ್ನು ಸೀತೆಗೆ ತಿಳಿಸಿ, ದಶರಥ-ಭರತ-
ಕೈಕೇಯಿ ಇವರಲ್ಲಿ ಉಚಿತವಾಗಿ ನಡೆದುಕೊಳ್ಳುವಂತೆ ಸೀತೆಗೆ ಉಪದೇಶ
ಮಾಡಿದುದು. 262

27. ಸೀತೆ ತನ್ನನ್ನೂ ಸಹ ವನವಾಸಕ್ಕೆ ಕರೆದೊಯ್ಯುವಂತೆ ಪ್ರಾರ್ಥಿಸಿಕೊಂಡದ್ದು. 270

28. ವನವಾಸದಲ್ಲಿ ಆಗುವ ಕಷ್ಟಗಳನ್ನು ವಿವರಿಸಿ, ವನವಾಸದ ಕಾಠಿಣ್ಯವನ್ನು
ತಿಳಿಸುವ ಮೂಲಕ, ವನವಾಸಕ್ಕೆ ಬರುವ ಸೀತೆಯ ವಿಚಾರವನ್ನು ರಾಮನು
ನಿರಾಕರಿಸಿದುದು. 275

29. ತನ್ನನ್ನು ವನವಾಸಕ್ಕೆ ಕರೆದೊಯ್ಯುವಂತೆ ಮತ್ತೊಮ್ಮೆ ಪ್ರಾರ್ಥನೆ
ಮಾಡುತ್ತಿರುವ ಸೀತೆಯನ್ನು ರಾಮನು ಸಾಂತ್ವನಗೊಳಿಸಿದುದು. 280

30. ಸೀತೆ ಪ್ರಣಯಕೋಪದಿಂದ ರಾಮನನ್ನು ಪ್ರಚೋದಿಸುವ ಮೂಲಕ,
ಪುನಃ ಪುನಃ ತನ್ನನ್ನೂ ವನವಾಸಕ್ಕೆ ಕರೆದೊಯ್ಯುವಂತೆ ಪ್ರಾರ್ಥನೆ ಮಾಡಿ-
ದುದು. ರಾಮನು ಸೀತೆಯ ವನಗಮನ ವಿಚಾರವನ್ನು ಅನುಮೋದಿಸಿ,
ಎಲ್ಲ ಬ್ರಾಹ್ಮಣರಿಗೆ ದ್ರವ್ಯದಾನ ಮಾಡುವಂತೆ ಸೀತೆಗೆ ತಿಳಿಸಿದ್ದು. 286

31. ತನ್ನನ್ನೂ ಸಹ ವನಕ್ಕೆ ಕರೆದೊಯ್ಯುವಂತೆ ಲಕ್ಷ್ಮಣ ರಾಮನಿಗೆ ಪ್ರಾರ್ಥನೆ
ಮಾಡಿದುದು. ಲಕ್ಷ್ಮಣನ ಪ್ರಾರ್ಥನೆಯನ್ನು ರಾಮನು ಅನುಮೋದಿಸಿದ್ದು. 296

32. ಲಕ್ಷ್ಮಣನು ಸುಯಜ್ಞನ ಮನೆಯಿಂದ ಆಯುಧಗಳನ್ನು ತಂದದ್ದು. ರಾಮನ
ಆಜ್ಞೆಯಿಂದ ಲಕ್ಷ್ಮಣನು ಬ್ರಾಹ್ಮಣರಿಗೆ ದ್ರವ್ಯದಾನ ಮಾಡಿದುದು. 304

33. ಸೀತಾ-ಲಕ್ಷ್ಮಣರಿಂದ ಸಹಿತನಾಗಿ ರಾಮನು ದಶರಥನ ಅನುಜ್ಞೆ
ಪಡೆಯಲು ಹೋದದ್ದು. 313

34. ಸೀತೆ ಹಾಗೂ ಲಕ್ಷ್ಮಣನಿಂದ ಒಡಗೂಡಿ ತಾನು ವನವಾಸಕ್ಕೆ ಹೋಗಲು
ಅನುಜ್ಞೆ ಕೊಡುವಂತೆ ರಾಮನು ದಶರಥನಿಗೆ ಕೇಳಿದುದು. ಆ ವಾರ್ತೆ-
ಯನ್ನು ಕೇಳಿ ರಾಜ ದಶರಥನು ಮೂರ್ಛೆಗೊಂಡದ್ದು. ದಶರಥನ
ಹೆಂಡತಿಯರು ವಿಲಾಪಿಸಿದ್ದು. 319

35. ಸುಮಂತ್ರನು ಕೈಕೇಯಿಯನ್ನು ಕುಗ್ಗಿಸಲು, ಅವಳ ತಾಯಿಯ ದೃರ್ವೃತ್ತವನ್ನು (ದುಷ್ಟಸ್ವಭಾವವನ್ನು) ಹೇಳಿದುದು. 332

36. ರಾಮನ ಜೊತೆ ಧನ-ಧಾನ್ಯ-ಸೇವಕಾದಿಗಳನ್ನು ಕಳಿಸಲು ದಶರಥನು ಆದೇಶಿಸಲು ಕೈಕೇಯಿ ಅದನ್ನು ನಿಷೇಧಿಸಿದುದು. ಮಂತ್ರಿ ಸಿದ್ಧಾರ್ಥನು ಕೈಕೇಯಿಯನ್ನು ಬೈದದ್ದು. ನಿನ್ನ ಜೊತೆ ನನ್ನನ್ನೂ ವನಕ್ಕೆ ಕರೆದೊಯ್ಯುವಂತೆ ದಶರಥನು ರಾಮನಿಗೆ ನಿವೇದಿಸಿಕೊಂಡದ್ದು. 339

37. ತನ್ನ ಜೊತೆ ಸೇವಕಾದಿಗಳು ಬರುವುದನ್ನು ನಿಷೇಧಿಸಿ ರಾಮನು ನಾರುವಸ್ತ್ರಗಳನ್ನು ತಂದುಕೊಡುವಂತೆ ಪ್ರಾರ್ಥಿಸಿದುದು. ಸೀತೆಯು ನಾರುವಸ್ತ್ರ ಧರಿಸುವುದನ್ನು ವಸಿಷ್ಠರು ನಿಷೇಧಿಸಿದುದು. 347

38. ರಾಜ ದಶರಥನು ಕೈಕೇಯಿಯನ್ನು ನಿಂದಿಸಿದ್ದು. ರಾಮನು ದಶರಥನಿಗೆ ತಾಯಿ ಕೌಸಲ್ಯೆಯನ್ನು ರಕ್ಷಣೆ ಮಾಡುವಂತೆ ಪ್ರಾರ್ಥನೆ ಮಾಡಿದುದು. 355

39. ದಶರಥನು ಸೀತೆಗೆ ವಸ್ತ್ರ-ಆಭರಣಾದಿಗಳನ್ನು ಕೊಟ್ಟದ್ದು. ಪತಿಯ ಶುಶ್ರೂಷಣೆ ವಿಷಯದಲ್ಲಿ ಕೌಸಲ್ಯೆ ಸೀತೆಗೆ ಹಿತೋಪದೇಶ ಮಾಡಿದುದು. ರಾಮನು ಕೌಸಲ್ಯೆಯನ್ನು ಸಮಾಧಾನಪಡಿಸಿ, ಇತರ ತಾಯಂದಿರಲ್ಲಿ ತನ್ನ ಅಪರಾಧ ಕ್ಷಮಾಪಣೆಯನ್ನು ಪ್ರಾರ್ಥಿಸಿದುದು. 359

40. ರಾಮ-ಸೀತೆ-ಲಕ್ಷ್ಮಣ ಎಲ್ಲರೂ ದಶರಥಾದಿಗಳಿಗೆ ನಮಸ್ಕರಿಸಿದುದು. ಸುಮಿತ್ರೆಯು ಲಕ್ಷ್ಮಣನಿಗೆ ಹಿತೋಪದೇಶ ಮಾಡಿದುದು. ರಾಮಾದಿಗಳು ರಥವನ್ನೇರಿ ಹೊರಟದ್ದು. ಹೆಂಡತಿಯರಿಂದ ಸಹಿತನಾಗಿ ದಶರಥನು ಹಾಗೂ ಎಲ್ಲ ಪುರಜನರೂ ರಾಮಾದಿಗಳನ್ನು ಅನುಸರಿಸಿ (ಹಿಂಬಾಲಿಸಿ) ಹೊರಟದ್ದು. 368

41. ರಾಮನ ಪ್ರವಾಸಕಾಲದಲ್ಲಿ ಜನರಿಗೆ ಉಂಟಾದ ದುರ್ದಶಾವರ್ಣನೆ. 378

42. ರಾಮನನ್ನು ಹಿಂಬಾಲಿಸಿ ಹೊರಟ ದಶರಥನು ಮಾರ್ಗದಲ್ಲಿಯೇ ಭೂಮಿಯಲ್ಲಿ ಬಿದ್ದದ್ದು, ಕೌಸಲ್ಯೆ ದಶರಥನನ್ನು ಎಬ್ಬಿಸಿ, ಹಿಡಿದುಕೊಂಡು ಅರಮನೆಗೆ ಹಿಂದಿರುಗಿದ್ದು. ದಶರಥನು ಕೌಸಲ್ಯೆಯ ಅಂತಃಪುರ ಪ್ರವೇಶಿಸಿದುದು. 383

43. ವನಕ್ಕೆ ತೆರಳಿದ ರಾಮಾದಿಗಳನ್ನು ಕುರಿತು ಕೌಸಲ್ಯೆ ಬಹುವಾಗಿ ಶೋಚಿಸಿದ್ದು. 391

44. ಸುಮಿತ್ರೆಯು ಕೌಸಲ್ಯೆಯನ್ನು ಸಮಾಧಾನಪಡಿಸುವ ಮೂಲಕ ಅವಳ ಶೋಕವನ್ನು ಕಳೆದುದು. 396

45. ತನ್ನನ್ನು ಅನುಸರಿಸಿ/ಹಿಂಬಾಲಿಸಿ ಬಂದಂತಹ ಎಲ್ಲ ಪೌರಜನರಿಗೆ ಅಯೋಧ್ಯೆಗೆ ಮರಳಿಹೋಗುವಂತೆ ರಾಮನು ಪ್ರಾರ್ಥನೆ ಮಾಡಿಕೊಂಡರೂ ಸಹ ಅವರೆಲ್ಲ ರಾಮನೊಂದಿಗೇ ತೆರಳಿದ್ದು. ಸಾಯಂಕಾಲದಲ್ಲಿ ರಾಮನು ತಮಸಾನದಿಯ ತೀರಕ್ಕೆ ಹೋದದ್ದು. 403

46. ಬಹಳ ದೂರ ಹಿಂಬಾಲಿಸಿ ನಡೆದುಬಂದು ನಿತ್ರಾಣರಾದಂತಹ ಅಂತೆಯೇ ಗಾಢನಿದ್ರೆಯಲ್ಲಿ ಇದ್ದಂತಹ ಪುರಜನರಿಗೆ ಗೊತ್ತಾಗದಂತೆ ರಾಮನು ವನವನ್ನು ಪ್ರವೇಶ ಮಾಡಿದುದು. 410

47. ಬೆಳಿಗ್ಗೆ ಎದ್ದಂತಹ ಪೌರಜನರು ರಾಮಾದಿಗಳು ಕಾಣಿಸದಿದ್ದ ಕಾರಣ ಬಹಳವಾಗಿ ದುಃಖಿತಪ್ತರಾದದ್ದು. ರಾಮನು ಅಯೋಧ್ಯೆಗೆ ಹೋಗಿದ್ದಾನೆಂದು ತಿಳಿದು, ಪೌರಜನರೆಲ್ಲರೂ ಅಯೋಧ್ಯೆಗೆ ಮರಳಿ ಹೋದದ್ದು. 417

48. ರಾಮನಿಲ್ಲದೇ ಬರಿಗೈಯಲ್ಲಿ ಬಂದಂತಹ ತಮ್ಮ ತಮ್ಮ ಪತಿಯರನ್ನು ನೋಡಿ ಅಯೋಧ್ಯೆಯ ಸ್ತ್ರೀಯರೆಲ್ಲರೂ ಸಹ ಕೈಕೇಯಿಯನ್ನು ನಿಂದಿಸುವ ಮೂಲಕ ಬಹುವಾಗಿ ಪ್ರಲಾಪಿಸಿದ್ದು. 421

49. ವನವನ್ನು ಪ್ರವೇಶಿಸಿ ಹೊರಟಂತಹ ರಾಮನು ಮಾರ್ಗದಲ್ಲಿ ಗೋಮತೀ ಮುಂತಾದ ನದಿಗಳನ್ನು ದಾಟಿ ಮುಂದೆ ನಡೆದದ್ದು. 429

50. ಮಾರ್ಗದಲ್ಲಿ ತನ್ನನ್ನು ನೋಡುವುದಕ್ಕಾಗಿ ಬಂದಂತಹ ಆ ಆ ಊರಿನ ಜನರನ್ನು ಸಮಾಧಾನಪಡಿಸುವ ಮೂಲಕ ರಾಮನು ಮುಂದೆ ಗಂಗಾನದಿಯ ತೀರಕ್ಕೆ ಹೋದದ್ದು. ಕವಿಯು (ವಾಲ್ಮೀಕಿಗಳು) ಗಂಗಾನದಿಯನ್ನು ವರ್ಣಿಸಿದುದು. ರಾಮನನ್ನು ನೋಡುವುದಕ್ಕಾಗಿ ಗುಹನು ಬಂದದ್ದು. ಕೇವಲ ಜಲವನ್ನು ಮಾತ್ರ ಸ್ವೀಕರಿಸಿ ರಾಮಾದಿಗಳು ಅಲ್ಲಿ ವಾಸ ಮಾಡಿದುದು. 433

51. ನಿದ್ರೆ ಮಾಡಲು ಲಕ್ಷ್ಮಣನಿಗೆ ಗುಹನು ಪ್ರಾರ್ಥಿಸಿದಾಗ, ಸೀತಾ-ರಾಮರ ರಕ್ಷಣೆಗಾಗಿ ತಾನು (ನಿದ್ರಿಸದೇ) ಎಚ್ಚರವಾಗಿಯೇ ಇರುವುದಾಗಿ ಲಕ್ಷ್ಮಣ ಹೇಳಿದುದು. ಗುಹ ಮತ್ತು ಲಕ್ಷ್ಮಣ ಇಬ್ಬರೂ ರಾತ್ರಿಪೂರ್ತಿ ಎಚ್ಚರವಾಗಿಯೇ ಇದ್ದದ್ದು. 445

52. ಮರುದಿನ ಬೆಳಿಗ್ಗೆ ರಾಮ-ಲಕ್ಷ್ಮಣರು ಜಟೆಯನ್ನು ನಿರ್ಮಿಸಿಕೊಂಡದ್ದು. ಗುಹನು ತಂದಂತಹ ದೋಣಿಯನ್ನು ಹತ್ತಿ ಸೀತಾ-ಲಕ್ಷ್ಮಣರಿಂದ ಸಹಿತನಾಗಿ ರಾಮನು ಗಂಗಾನದಿಯನ್ನು ದಾಟಿದುದು. 451

53. ರಾಮನು ಲಕ್ಷ್ಮಣನನ್ನು ಕುರಿತು ಕೌಸಲ್ಯೆಯ ರಕ್ಷಣೆಗಾಗಿ ಅಯೋಧ್ಯೆಗೆ ಹೋಗುವಂತೆ ಲಕ್ಷ್ಮಣನಿಗೆ ಪ್ರಚೋದಿಸಿದ್ದು, ಲಕ್ಷ್ಮಣನು ಕಾರಣ ಸಹಿತವಾಗಿ ತನ್ನ ವನವಾಸ ನಿರ್ಧಾರವನ್ನು ಹೇಳಿದ್ದು. 472

54. ಅನಂತರ ಮರುದಿನ ಬೆಳಿಗ್ಗೆ ಎದ್ದು, ಸೀತಾ-ಲಕ್ಷ್ಮಣರಿಂದ ಸಹಿತನಾದ ರಾಮನು ಅಲ್ಲಿಂದ ಹೊರಟು, ಭರದ್ವಾಜಮುನಿಗಳ ಆಶ್ರಮಕ್ಕೆ ಹೋದದ್ದು. ಭರದ್ವಾಜರು ರಾಮಾದಿಗಳಿಗೆ ಚಿತ್ರಕೂಟಪರ್ವತದಲ್ಲಿ ಸುಖವಾಗಿ ವಾಸ ಮಾಡಲು ಏನಂತಿಸಿಕೊಂಡದ್ದು. 480

55. ಭರದ್ವಾಜರು ರಾಮನಿಗೆ ಚಿತ್ರಕೂಟಕ್ಕೆ ಹೋಗುವ ಮಾರ್ಗವನ್ನು ಉಪದೇಶ ಮಾಡಿದುದು. ರಾಮಾದಿಗಳು ಯಮುನಾನದಿಯನ್ನು ದಾಟಿ ಮುಂದೆ ಹೋದದ್ದು. 489

ಂ ಂ ಂ

ಶುಭಾಶಂಸನೆ

ಶ್ರೀಯುತರಾದ ದಿ. ಗುರುರಾಜ ರಾಯರು ABB ಕಂಪನಿಯಲ್ಲಿ ಉನ್ನತ ಹುದ್ದೆಯಲ್ಲಿದ್ದವರು. ಶ್ರೀರಾಘವೇಂದ್ರಸ್ವಾಮಿಗಳವರಿಗೆ ವಿಶೇಷಸೇವೆ ಸಲ್ಲಿಸಿದವರು. ಶ್ರೀಸತ್ಯನಾಥತೀರ್ಥರ ಮೂಲವೃಂದಾವನಕ್ಕೆ ರಜತಕವಚದ ವಿಶೇಷಸೇವೆ ಸಲ್ಲಿಸಿದವರು.

ಇಂತಹ ಉದಾರದಾನಿಗಳಾದ ಶ್ರೀಯುತ ದಿ. ಗುರುರಾಜ್ ಭುಜಂಗರಾವ್ ಇವರ ಸ್ಮರಣಾರ್ಥವಾಗಿ ಅವರ ಪತ್ನಿ ಶ್ರೀಮತಿ ಜಯಶ್ರೀ ಗುರುರಾಜ್ ಇವರು ಹಾಗೂ ಅವರ ಮಗಳು ಶ್ರೀಮತಿ ಸಿಂಧೂಜಾ ಗುರುರಾಜ್ ಇವರು ರಾಮಾಯಣದ ಅಯೋಧ್ಯಾ ಕಾಂಡದ ಈ ಸಂಪುಟದ ಪ್ರಕಾಶನಕ್ಕೆ ಸಂಪೂರ್ಣ ಆರ್ಥಿಕಸೇವೆ ಸಲ್ಲಿಸಿದ್ದಾರೆ.

ಈ ಮೂಲಕ ಶ್ರೀರಾಮಚಂದ್ರನ, ಶ್ರೀವೇದವ್ಯಾಸದೇವರ, ಶ್ರೀಮದಾಚಾರ್ಯರ ವಿಶೇಷಸೇವೆ ಸಲ್ಲಿಸಿದ ಶ್ರೀಮತಿ ಜಯಶ್ರೀ ಗುರುರಾಜ್ ಹಾಗೂ ಶ್ರೀಮತಿ ಸಿಂಧೂಜಾ ಗುರುರಾಜ್ ಇವರಿಗೆ ಹಾಗೂ ಇವರ ಕುಟುಂಬಕ್ಕೆ ಭಗವಂತ ಉತ್ತಮ ಆರೋಗ್ಯ, ಆಯುಷ್ಯ ನೀಡಿ, ಜ್ಞಾನ-ಭಕ್ತಿ-ವೈರಾಗ್ಯಗಳನ್ನು ಕೊಟ್ಟು ಅವರಿಂದ ಹೆಚ್ಚೆಚ್ಚು ಸಾಧನೆ ಮಾಡಿಸಲಿ ಎಂಬುದಾಗಿ ಪ್ರಾರ್ಥಿಸುತ್ತ, ಅವರಿಗೆ ಈ ಸಂದರ್ಭದಲ್ಲಿ ವಿಶೇಷವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇವೆ.

-ಡಾ. ಸತ್ಯಧ್ಯಾನಾಚಾರ್ಯ ಕಟ್ಟಿ
ಅಧ್ಯಕ್ಷರು, ಧೃತವೇದಾಂತ ಅಧ್ಯಯನ
ಮತ್ತು ಸಂಶೋಧನ ಪ್ರತಿಷ್ಠಾನ

॥ ಶ್ರೀಮದ್ವಾಲ್ಮೀಕಿರಾಮಾಯಣಮ್ ॥

ಅಯೋಧ್ಯಾಕಾಂಡಃ

ಪ್ರಥಮಃ ಸರ್ಗಃ

ಗುಣಗಳ ವರ್ಣನೆ. ಅವನಿಗೆ ಯುವರಾಜ ಪಟ್ಟಾಭಿಷೇಕ ಮಾಡಬೇಕೆಂಬ ದಶರಥನ ಆಲೋಚನೆ.

ಓಂ ॥ ಗಚ್ಛತಾ ಮಾತುಲಕುಲಂ ಭರತೇನ ತದಾನಘಃ ।
ಶತ್ರುಘ್ನೋ ನಿತ್ಯಶತ್ರುಘ್ನೋ ನೀತಃ ಪ್ರೀತಿಪುರಸ್ಕೃತಃ ॥೧॥

ಭರತನು ಸೋದರಮಾವನಾದ ಯುಧಾಜಿದ್ರಾಜನ ಮನೆಗೆ ಹೋಗುವಾಗ ಪಾಪರಹಿತನಾದ ನಿತ್ಯ ಶತ್ರುಸಂಹಾರಕನಾದ ಶತ್ರುಘ್ನನನ್ನೂ ಪ್ರೀತಿಪುರಃಸರವಾಗಿ ಜೊತೆಗೆ ಕರೆದುಕೊಂಡು ಹೋದನು.

ಸ ತತ್ರ ನ್ಯವಸದ್ ಭ್ರಾತ್ರಾ ಸಹ ಸತ್ಕಾರಸತ್ಕೃತಃ ।
ಮಾತುಲೇನಾಶ್ವಪತಿನಾ ಪುತ್ರಸ್ನೇಹೇನ ಲಾಲಿತಃ ॥೨॥

ಅಶ್ವಗಳಿಗೆ ಒಡೆಯನಾದ ಯುಧಾಜಿದ್ರಾಜನು ಶತ್ರುಘ್ನನೊಂದಿಗೆ ಭರತನನ್ನು ತನ್ನ ಮಗನಂತೆ ಪ್ರೀತಿಯಿಂದ ಲಾಲನೆಮಾಡುತ್ತ ಸತ್ಕಾರಗಳಿಂದ ಸತ್ಕರಿಸಿದ.

ತತ್ರಾಪಿ ನಿವಸಂತೌ ತೌ ತರ್ಪ್ಯಮಾಣೌ ಚ ಕಾಮತಃ ।
ಭ್ರಾತರೌ ಸ್ಮರತಾಂ ವೀರೌ ವೃದ್ಧಂ ದಶರಥಂ ನೃಪಮ್ ॥೩॥

ಯುಧಾಜಿದ್ರಾಜನ ಅರಮನೆಯಲ್ಲಿ ಬಯಸಿದ್ದನ್ನೆಲ್ಲ ಪಡೆದು ತೃಪ್ತಿಯಿಂದ ಇರುತ್ತಿದ್ದರೂ ವೀರರಾದ ಭರತ ಶತ್ರುಘ್ನರು ಸೋದರರು ವೃದ್ಧನಾದ ರಾಜಾ ದಶರಥನನ್ನು ನೆನೆಯುತ್ತಿದ್ದರು.

ರಾಜಾಪಿ ತೌ ಮಹಾತೇಜಾಃ ಸಸ್ಮಾರ ಪ್ರೋಷಿತೌ ಸುತೌ ।
ಉಭೌ ಭರತಶತ್ರುಘ್ನೌ ಮಹೇಂದ್ರವರುಣೋಪಮೌ ॥೪॥

ಮಹಾತೇಜಸ್ವಿ ರಾಜಾ ದಶರಥನೂ ಕೂಡ ದೂರದ ಕೇಕಯ ದೇಶಕ್ಕೆ ಹೋಗಿದ್ದ ಆ ಇಬ್ಬರು ಇಂದ್ರವರುಣರಂತಹ ಮಕ್ಕಳನ್ನು ಭರತ ಶತ್ರುಘ್ನರನ್ನು ನೆನೆಯುತ್ತಿದ್ದ.

ಏಪ್ರೋಷಿತಶ್ಚ ಭರತೋ ಯಾವದೇವ ಪುರಾದಿತಃ ।
ತಾವದೇವಾಭಿಷೇಕಸ್ತೇ ಪ್ರಾಪ್ತಕಾಲೋ ಮತೋ ಮಮ ॥ (ಅಯೋ.4.25)

'ಅಯೋಧ್ಯೆಯಿಂದ ಹೊರಟ ಭರತನು ಇನ್ನೂ ದೂರದೇಶ ಪ್ರವಾಸದಲ್ಲಿ ಇರುವಾಗಲೇ, ರಾಮ, ನಿನಗೆ ರಾಜ್ಯಾಭಿಷೇಕ ಮಾಡಲು ಯೋಗ್ಯವಾದ ಕಾಲವೆಂದು ನನ್ನ ಅನಿಸಿಕೆ' ಎಂದು ದಶರಥನು ಮುಂದೆ ರಾಮನಿಗೆ ಹೇಳುವುದ-ರಿಂದ ಭರತನ ಅನುಪಸ್ಥಿತಿಯಲ್ಲಿಯೇ ರಾಮನಿಗೆ ಅಭಿಷೇಕ ಮಾಡುವ ದುರಾಲೋಚನೆ ದಶರಥನಿಗೆ ಇತ್ತು. ಅದಕ್ಕಾಗಿಯೇ ಭರತನನ್ನು ಕೇಕಯ ದೇಶಕ್ಕೆ ಕಳಿಸಿದ್ದ' ಎಂದು ನಮಗೆ ಅನುಮಾನ ಉಂಟಾಗಬಹುದು. ಆದರೆ

'ಬಾಲ ಏವ ಹಿ ಮಾತುಲ್ಯಂ ಭರತೋ ನಾಯಿತಸ್ತ್ವಯಾ' (8.28)

'ಬಾಲ್ಯದಿಂದಲೇ ಭರತನನ್ನು 'ನೀನು' ಸೋದರಮಾವನ ಮನೆಗೆ ಕಳಿಸಿದ್ದೆ' ಎಂದು ಕೈಕೇಯಿಗೆ ಮಂಥರೆ ಹೇಳುವುದರಿಂದ ಕೈಕೇಯಿಯೇ ಭರತನನ್ನು ದೂರದೇಶಕ್ಕೆ ತನ್ನ ತವರಿಗೆ ಕಳಿಸಿ ಹೆಡ್ಡುತನ ಮಾಡಿದ್ದಳು, ದಶರಥನೇನೂ ದುರಾಲೋಚನೆ ಮಾಡಿಲ್ಲ. ಮಾಡಿದ್ದನೆಂದು ತಿಳಿಯಲು ಕಾರಣವಿಲ್ಲ.

ವಸ್ತುತಃ ಭರತನು ಸೋದರಮಾವನಲ್ಲಿ ಶಸ್ತ್ರಾಸ್ತ್ರ ಅಭ್ಯಾಸ ಮಾಡಲಿ ಎನ್ನುವ ದೂರಾಲೋಚನೆಯೇ ದಶರಥನಿಗೆ ಇತ್ತು. ಸಂಗ್ರಹರಾಮಾಯಣದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ—

ಮಾತಾಮಹಸ್ಯೈಕಸಿ ಕೈಕಯಸ್ಯ
ಶತ್ರುಘ್ನಯುಕ್ತೇ ಭರತೇ ಚಿರಾಯ ।
ವಿದ್ಯಾಗಣಾಭ್ಯಾಸಿನಿ ತಸ್ಯ ವಾರ್ತಾಂ
ಶ್ರುತ್ವಾ ನರೇಂದ್ರೋಽಧಿಕ ಮಾನನಂದ ॥

'ಭರತ ಶತ್ರುಘ್ನರು ದೀರ್ಘಕಾಲ ಮಾತಾಮಹನಾದ ಕೇಕಯರಾಜನ ಅರಮನೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಅವರ ಕ್ಷೇಮ ಸಮಾಚಾರವನ್ನು ಆಗಾಗ ಕೇಳಿ ತಿಳಿಯುತ್ತ ಬಹಳ ಸಂತೋಷಪಟ್ಟ ದಶರಥ'.

ಹೀಗಾಗಿ ಭರತ–ದಶರಥರಿಬ್ಬರೂ ಪರಸ್ಪರ ಒಬ್ಬರನ್ನೊಬ್ಬರು ಪ್ರೀತಿಯಿಂದ ನೆನೆಯುತ್ತಿದ್ದರು.

ಸರ್ವ ಏವ ತು ತಸ್ಯೇಷ್ಟಾಶ್ಚತ್ವಾರಃ ಪುರುಷರ್ಷಭಾಃ ।
ಸ್ವಶರೀರಾದ್ವಿನಿರ್ವೃತ್ತಾಶ್ಚತ್ವಾರ ಇವ ಬಾಹವಃ ॥೫॥

ರಾಮಲಕ್ಷ್ಮಣರು ಮತ್ತು ಭರತಶತ್ರುಘ್ನರು— ಈ ಪುರುಷೋತ್ತಮರಾದ ನಾಲ್ವರೂ ಕೂಡ ಎಲ್ಲರೂ ದಶರಥನಿಗೆ ಬಹಳ ಪ್ರೀತಿಪಾತ್ರರು. ತನ್ನ ಮೈಯಿಂದಲೇ ಮೂಡಿಬಂದ ತನ್ನ ನಾಲ್ಕು ಬಾಹುಗಳಂತಿರುವವರು.

ತೇಷಾಮಪಿ ಮಹಾತೇಜಾ ರಾಮೋ ರತಿಕರಃ ಪಿತುಃ ।
ಸ್ವಯಂಭೂರಿವ ಭೂತಾನಾಂ ಬಭೂವ ಗುಣವತ್ತರಃ ॥೬॥

ಅವರಲ್ಲಿಯೂ ಕೂಡ ರಾಮನು ಪಿತನಿಗೆ ಆನಂದ ನೀಡುವವನು. ಸ್ವಯಂಭು-ವಾದ ಚತುರ್ಮುಖನಂತೆ ಎಲ್ಲರಿಗಿಂತ ಹೆಚ್ಚು ಗುಣಶಾಲಿಯಾಗಿದ್ದ.

ಸ ಹಿ ದೇವೈರುದೀರ್ಣಸ್ಯ ರಾವಣಸ್ಯ ವಧಾರ್ಥಿಭಿಃ ।
ಅರ್ಥಿತೋ ಮಾನುಷೇ ಲೋಕೇ ಜಜ್ಞೇ ವಿಷ್ಣುಃ ಸನಾತನಃ ॥೭॥

ಉದ್ಧತನಾದ ರಾವಣನ ವಧೆಗಾಗಿ ದೇವತೆಗಳ ಪ್ರಾರ್ಥನೆಯಂತೆ ಮನುಷ್ಯ ಲೋಕದಲ್ಲಿ ಅವತರಿಸಿದ್ದ ಸನಾತನನಾದ ವಿಷ್ಣುವೇ ಆತ ಆಗಿದ್ದ.

ಕೌಸಲ್ಯಾ ಶುಶುಭೇ ತೇನ ಪುತ್ರೇಣಾಮಿತತೇಜಸಾ ।
ಯಥಾ ವರೇಣ ದೇವಾನಾಮದಿತಿರ್ವಜ್ರಪಾಣಿನಾ ॥೮॥

ದೇವೋತ್ತಮನಾದ ಇಂದ್ರನನ್ನು ಮಗನನ್ನಾಗಿ ಪಡೆದು ಅದಿತಿದೇವಿ ಶೋಭಿಸಿ-ದಂತೆ, ಅಮಿತತೇಜನಾದ ರಾಮನನ್ನು ಮಗನನ್ನಾಗಿ ಪಡೆದು ಕೌಸಲ್ಯಾದೇವಿ ಶೋಭಿಸಿದಳು.

ಸ ಹಿ ರೂಪೋಪಪನ್ನಶ್ಚ ವೀರ್ಯವಾನನಸೂಯಕಃ ।
ಭೂಮಾವನುಪಮಃ ಸೂನುರ್ಗುಣೈರ್ದಶರಥೋಪಮಃ ॥೯॥

ರಾಮನು ಬಹಳ ಸೌಂದರ್ಯಶಾಲಿ, ಪರಾಕ್ರಮಶಾಲಿ, ಯಾರಲ್ಲಿಯೂ ಅಸೂಯೆ ಪಡುವವನಲ್ಲ. ಗುಣಗಳಲ್ಲಿ ಅವನಿಗೆಣೆಯಾದವನು ಭೂಮಿಯಲ್ಲೇ

ಇಲ್ಲ. ದಶರಥನಿಗೆ ತಕ್ಕ ಮಗ. 'ದಶ–ರಥ'ನಾದ ಪಕ್ಷಿವಾಹನನಾದ ವಿಷ್ಣುವಿಗೆ ಮಾತ್ರ ಸದೃಶ.

'ದಶಃ ಪಕ್ಷೀ ವಿಹಂಗಮಃ' ಎಂದು ಕೋಶ. ಮತ್ಸ್ಯಕೂರ್ಮಾದಿಗಳು 'ದಶರಥ'ನಿಗೆ, ಪಕ್ಷಿವಾಹನನಾದ ವಿಷ್ಣುವಿಗೆ ಸಮರು, ಬ್ರಹ್ಮಾದಿಗಳು ಅಸಮರು, ಲಕ್ಷ್ಮೀದೇವಿ ಸಮಾಸಮಳು.

ಸ ತು ನಿತ್ಯಂ ಪ್ರಶಾಂತಾತ್ಮಾ ಮೃದುಪೂರ್ವಂ ಚ ಭಾಷತೇ ।
ಉಚ್ಯಮಾನೋಽಪಿ ಪರುಷಂ ನೋತ್ತರಂ ಪ್ರತಿಪದ್ಯತೇ ॥೧೦॥

ಅವನು ಸದಾ ಪ್ರಶಾಂತ ಮನಸ್ಸುಳ್ಳವನು. ಮೃದುವಾಗಿಯೇ ಮಾತನಾಡುತ್ತಾನೆ. ನಿಷ್ಠುರವಾಗಿ ನುಡಿಯುವವರಿಗೂ ನಿಷ್ಠುರವಾಗಿ ಉತ್ತರ ಕೊಡುವುದಿಲ್ಲ.

ಕಥಂಚಿದುಪಕಾರೇಣ ಕೃತೇನೈಕೇನ ತುಷ್ಯತಿ ।
ನ ಸ್ಮರತ್ಯಪಕಾರಾಣಾಂ ಶತಮಪ್ಯಾತ್ಮವತ್ತಯಾ ॥೧೧॥

ಒಂದು ಸಣ್ಣ ಉಪಕಾರ ಮಾಡಿದರೂ ಸಂತುಷ್ಟನಾಗುತ್ತಾನೆ. ಮನೋನಿಗ್ರಹ ಉಳ್ಳವನಾದ್ದರಿಂದ ಸಜ್ಜನರು ನೂರು ಅಪರಾಧ ಮಾಡಿದರೂ ಅವುಗಳನ್ನು ಅವನು ನೆನೆಯುವುದಿಲ್ಲ.

ಶೀಲವೃದ್ಧೈರ್ಜ್ಞಾನವೃದ್ಧೈರ್ವಯೋವೃದ್ಧೈಶ್ಚ ಸಜ್ಜನೈಃ ।
ಕಥಯನ್ನಾಸ್ತ ವೈ ನಿತ್ಯಮಸ್ತ್ರಯೋಗ್ಯಾಂತರೇಷ್ವಪಿ ॥೧೨॥

ಅಸ್ತ್ರಾಭ್ಯಾಸಗಳ ನಡುವೆ ಕೂಡ ಶೀಲದಲ್ಲಿ ಜ್ಞಾನದಲ್ಲಿ ವಯಸ್ಸಿನಲ್ಲಿ ಹಿರಿಯ–ರಾದ ಸಜ್ಜನರೊಡನೆಯೆ ಸದಾ ಮಾತುಕತೆ ನಡೆಸುತ್ತಾನೆ.

ಬುದ್ಧಿಮಾನ್ ಮಧುರಾಭಾಷೀ ಪೂರ್ವಭಾಷೀ ಪ್ರಿಯಂವದಃ ।
ವೀರ್ಯವಾನ್ನ ಚ ವೀರ್ಯೇಣ ಮಹತಾ ಸ್ವೇನ ವಿಸ್ಮಿತಃ ॥೧೩॥

ಬುದ್ಧಿಶಾಲಿ, ಸವಿನುಡಿ ನುಡಿವವನು, ತಾನೇ ಮೊದಲಿಗೆ ಪ್ರೀತಿಯಿಂದ ಮಾತನಾಡಿಸುವವನು, ಪ್ರಿಯವಾಗುವಂತೆ ನುಡಿಯುವವನು, ಪರಾಕ್ರಮಶಾಲಿ. ತನ್ನಲ್ಲಿ ಮಹಾಪರಾಕ್ರಮವಿದ್ದರೂ ಅದಕ್ಕೆ ಅಹಂಕಾರಪಡುವುದಿಲ್ಲ.

ನ ಚಾನೃತಕಥೋ ವಿದ್ವಾನ್ ವೃದ್ಧಾನಾಂ ಪ್ರತಿಪೂಜಕಃ ।
ಅನುರಕ್ತಃ ಪ್ರಜಾಭಿಶ್ಚ ಪ್ರಜಾಶ್ಚಾಪ್ಯನುರಂಜತೇ ॥೧೪॥

ಸುಳ್ಳಾಡುವವನಲ್ಲ. ಒಳ್ಳೆಯ ವಿದ್ಯಾವಂತ. ಹಿರಿಯರನ್ನು ಗೌರವಿಸುವವನು. ಪ್ರಜಾನುರಾಗವನ್ನು ಸಂಪಾದಿಸಿದ್ದಾನೆ. ಪ್ರಜೆಗಳಲ್ಲಿ ಅನುರಾಗ ಮಾಡುತ್ತಾನೆ.

ಸಾನುಕ್ರೋಶೋ ಜಿತಕ್ರೋಧೋ ಬ್ರಾಹ್ಮಣಪ್ರತಿಪೂಜಕಃ ।
ದೀನಾನುಕಂಪೀ ಧರ್ಮಜ್ಞೋ ನಿತ್ಯಂ ಪ್ರಗ್ರಹವಾನ್ ಶುಚಿಃ ॥೧೫॥

ದಯಾಪರ, ಕೋಪವನ್ನು ಗೆದ್ದವನು. ಬ್ರಾಹ್ಮಣರನ್ನು ಆದರಿಸುವವನು. ದೀನರಲ್ಲಿ ಅನುಕಂಪೆ ಉಳ್ಳವನು. ಧರ್ಮವನ್ನು ಬಲ್ಲವನು. ಸದಾ ಇಂದ್ರಿಯ ನಿಗ್ರಹ ಉಳ್ಳವನು. ಶುಚಿಯಾಗಿರುವವನು.

ಕುಲೋಚಿತಮತಿಃ ಕ್ಷಾತ್ರಂ ಧರ್ಮಂ ಸ್ವಂ ಬಹು ಮನ್ಯತೇ ।
ಮನ್ಯತೇ ಪರಯಾ ಕೀರ್ತ್ಯಾ ಮಹತ್ ಸ್ವರ್ಗಫಲಂ ತತಃ ॥೧೬॥

ಕುಲೋಚಿತ ಆಚಾರಗಳಲ್ಲಿ ಆಸಕ್ತಿ ಉಳ್ಳವನು. ದುಷ್ಟಶಿಕ್ಷಣ ಶಿಷ್ಟಪರಿಪಾಲನ ರೂಪವಾದ ತನ್ನ ಕ್ಷಾತ್ರಧರ್ಮವನ್ನು ಆದರಿಸುತ್ತಾನೆ. ಅದರಿಂದ ಬರುವ ಮಹಾ–ಕೀರ್ತಿಯಿಂದ ಲೋಕಕ್ಕೆ ಮಹತ್ತಾದ ಸ್ವರ್ಗಫಲ ಉಂಟಾಗುವುದೆಂದು ತಿಳಿದಿದ್ದಾನೆ.

ನಾಶ್ರೇಯಸಿ ರತೋ ಯಶ್ಚ ನ ವಿರುದ್ಧಕಥಾರುಚಿಃ ।
ಉತ್ತರೋತ್ತರಯುಕ್ತೀನಾಂ ವಕ್ತಾ ವಾಚಸ್ಪತಿರ್ಯಥಾ ॥೧೭॥

ಅಶ್ರೇಯಸ್ಕರವಾದ ಅಮಂಗಲ ಆಚಾರದಲ್ಲಿ ಆಸಕ್ತನಲ್ಲ. ಅದನ್ನು ಹೇಯ–ವೆಂದೇ ತಿಳಿದವನು. ಅಶ್ಲೀಲ ಸಂಭಾಷಣೆಯಲ್ಲಿಯೂ ಆಸಕ್ತನಲ್ಲ. ಒಂದರ–ಮೇಲೊಂದರಂತೆ ಕೋಟಿ ಕ್ರಮದಿಂದ ಯುಕ್ತವಾದ ಒಳ್ಳೆಯ ವಾದವನ್ನು ಮಾಡುವುದರಲ್ಲಿ ಬೃಹಸ್ಪತಿಯಂಥ ವಾಗ್ಮಿಯಾಗಿದ್ದಾನೆ.

ಅರೋಗಸ್ತರುಣೋ ವಾಗ್ಮೀ ವಪುಷ್ಮಾನ್ ದೇಶಕಾಲವಿತ್ ।
ಲೋಕೇ ಪುರುಷಸಾರಜ್ಞಃ ಸಾಧುರೇಕೋ ವಿನಿರ್ಮಿತಃ ॥೧೮॥

ನೀರೋಗಿ, ತರುಣ, ವಾಗ್ಮಿ, ದೃಢಕಾಯ, ದೇಶಕಾಲಜ್ಞ, ನೋಡಿದ ಮಾತ್ರ–ದಿಂದಲೇ ಒಬ್ಬನ ವ್ಯಕ್ತಿತ್ವವನ್ನು ಅಳೆಯಬಲ್ಲವನು. ನಿರ್ದೋಷಗುಣ ಪೂರ್ಣನಾಗಿ ತನ್ನಿಂದ ತಾನೆ ನಿರ್ಮಿತನಾದವನು ಲೋಕದಲ್ಲಿ ಇವನೊಬ್ಬನೆ.

ಸ ತು ಶ್ರೇಷ್ಠಗುಣೈರ್ಯುಕ್ತಃ ಪ್ರಜಾನಾಂ ಪಾರ್ಥಿವಾತ್ಮಜಃ ।
ಬಹಿಶ್ಚರ ಇವ ಪ್ರಾಣೋ ಬಭೂವ ಗುಣತಃ ಪ್ರಿಯಃ ॥೧೯॥

ಶ್ರೇಷ್ಠಗುಣಗಳಿಂದ ಯುಕ್ತನಾದ ಆ ರಾಜಕುಮಾರ ಶ್ರೀರಾಮನು ತನ್ನ ಗುಣಗಳಿಂದ ಪ್ರಜೆಗಳಿಗೆಲ್ಲರಿಗೂ ತಮಗೆ ಹೊರಗೆ ನಡೆದಾಡುವ ಪ್ರಿಯವಾದ ಪ್ರಾಣದಂತಿದ್ದ.

ಸರ್ವವಿದ್ಯಾವ್ರತಸ್ನಾತೋ ಯಥಾವತ್ ಸಾಂಗವೇದವಿತ್ ।
ಇಷ್ವಸ್ತ್ರೇ ಚ ಪಿತುಃ ಶ್ರೇಷ್ಠೋ ಬಭೂವ ಭರತಾಗ್ರಜಃ ॥೨೦॥

ಯಥಾವತ್ತಾಗಿ ಸಾಂಗ ವೇದಗಳಲ್ಲಿ ಪಾರಂಗತನಾದವನು, ಸಕಲ ವಿದ್ಯೆಗಳಲ್ಲಿ ಬ್ರಹ್ಮಚರ್ಯವ್ರತವನ್ನು ಪೂರೈಸಿ ಸ್ನಾತಕನಾದವನು, ಶಸ್ತ್ರಾಸ್ತ್ರಗಳಲ್ಲಿ ತಂದೆಯನ್ನು ಮೀರಿಸಿದ ಭರತಾಗ್ರಜನು ಶ್ರೀರಾಮ.

ಕಲ್ಯಾಣಾಭಿಜನಃ ಸಾಧುರದೀನಃ ಸತ್ಯವಾಗೃಜುಃ ।
ವೃದ್ಧೈರಭಿವಿನೀತಶ್ಚ ದ್ವಿಜೈರ್ಧರ್ಮಾರ್ಥದರ್ಶಿಭಿಃ ॥೨೧॥

ಸತ್ಕುಲದಲ್ಲಿ ಜನಿಸಿದವನು, ಪ್ರಜೆಗಳಿಗೆ ಕಲ್ಯಾಣ ಉಂಟುಮಾಡುವವನು, ಸತ್ಪುರುಷ, ದೈನ್ಯರಹಿತ, ಸತ್ಯವಾದಿ, ಸರಳ ಸ್ವಭಾವದವನು, ಧರ್ಮ ಅರ್ಥಗಳನ್ನು ಬಲ್ಲ ಹಿರಿಯರಾದ ಬ್ರಾಹ್ಮಣರಲ್ಲಿ ಶಿಕ್ಷಣ ಪಡೆದವನು.

ಧರ್ಮಾರ್ಥಕಾಮತತ್ತ್ವಜ್ಞಃ ಸ್ಮೃತಿಮಾನ್ ಪ್ರತಿಭಾನವಾನ್ ।
ಲೌಕಿಕೇ ಸಮಯಾಚಾರೇ ಕೃತಕಲ್ಪೋ ವಿಶಾರದಃ ॥೨೨॥

ಧರ್ಮ ಅರ್ಥ ಕಾಮಗಳ ಮರ್ಮಗಳನ್ನು ಬಲ್ಲವನು. ಸ್ಮರಣಶಕ್ತಿ ಉಳ್ಳವನು. ಪ್ರತಿಭಾಶಾಲಿ. ಲೌಕಿಕಕಾರ್ಯಗಳಲ್ಲಿ ಸಾಮರ್ಥ್ಯವನ್ನು ಗಳಿಸಿಕೊಂಡವನು, ಧರ್ಮಾಚರಣದಲ್ಲಿಯೂ ನಿಪುಣ.

ನಿಭೃತಃ ಸಂವೃತಾಕಾರೋ ಗುಪ್ತಮಂತ್ರಃ ಸಹಾಯವಾನ್ ।
ಅಮೋಘಕ್ರೋಧಹರ್ಷಶ್ಚ ತ್ಯಾಗಸಂಗ್ರಹಕಾಲವಿತ್ ॥೨೩॥

ವಿನಯಶಾಲಿ, ಮನದ ಇಂಗಿತವನ್ನು ಹೊರಗೆ ತೋರದವನು, ಮಿತ್ರರನ್ನು ಕಾಪಾಡುತ್ತ ಸಹಾಯವಾಗಿರಿಸಿಕೊಳ್ಳುವವನು, ಸಂಪತ್ತಿನ ವಿನಿಯೋಗ ಸಂಗ್ರಹಗಳ

ಕಾಲವನ್ನು ಬಲ್ಲವನು. ಅವನು ಒಲಿದರೂ ಮುನಿದರೂ ಅದು ಎಂದೂ ವ್ಯರ್ಥವಾಗದು.

ದೃಢಭಕ್ತಿಃ ಸ್ಥಿರಪ್ರಜ್ಞೋ ನಾಸದ್ಗ್ರಾಹೀ ನ ದುರ್ವಚಾಃ ।
ನಿಸ್ತಂದ್ರಿರಪ್ರಮತ್ತಶ್ಚ ಸ್ವದೋಷಪರದೋಷವಿತ್ ॥೨೪॥

ಗುರುಹಿರಿಯರಲ್ಲಿ ದೃಢಭಕ್ತಿ ಸ್ಥಿರವಾದ ಧರ್ಮಪ್ರಜ್ಞೆಗಳುಳ್ಳವನು, ದುರ್ಜನರ ಸಹಾಯವನ್ನು ಒಲ್ಲದವನು, ಕೆಡೆನುಡಿಯಾಡದವನು, ಆಲಸ್ಯ ಪ್ರಮಾದ-ಗಳಿಲ್ಲದವನು, ತನ್ನವರ ಪರರ ದೋಷಗಳನ್ನು ಅರಿಯಬಲ್ಲವನು.

ಶಾಸ್ತ್ರಜ್ಞಶ್ಚ ಕೃತಜ್ಞಶ್ಚ ಪುರುಷಾಂತರಕೋವಿದಃ ।
ಯಃ ಪ್ರಗ್ರಹಾನುಗ್ರಹಯೋರ್ಯಥಾನ್ಯಾಯಂ ವಿಚಕ್ಷಣಃ ॥೨೫॥

ಶಾಸ್ತ್ರಗಳನ್ನು ಬಲ್ಲವನು, ಕೃತಜ್ಞತೆ ಉಳ್ಳವನು, ವ್ಯಕ್ತಿಗಳಲ್ಲಿರುವ ತಾರತಮ್ಯ ವಿವೇಕವನ್ನು ಚೆನ್ನಾಗಿ ಬಲ್ಲವನು, ನಿಗ್ರಹ ಅನುಗ್ರಹಗಳನ್ನು ಯಥೋಚಿತವಾಗಿ ಮಾಡುವಲ್ಲಿ ತುಂಬ ವಿಚಕ್ಷಣನಾಗಿರುವವನು.

ಸತ್ಸಂಗ್ರಹಪ್ರಗ್ರಹಣೇ ಸ್ಥಾನವಿನ್ನಿಗ್ರಹಸ್ಯ ಚ ।
ಆಯಕರ್ಮಣ್ಯುಪಾಯಜ್ಞಃ ಸಂದೃಷ್ಟವ್ಯಯಕರ್ಮವಿತ್ ॥೨೬॥

ಸಜ್ಜನರನ್ನು ತನ್ನಾಶ್ರಯದಲ್ಲಿರಿಸಿಕೊಂಡು ರಕ್ಷಿಸುವುದರಲ್ಲಿ, ದುರ್ಜನರ ನಿಗ್ರಹದಲ್ಲಿ ಯೋಗ್ಯ ಸಮಯವನ್ನು ಅರಿತುಕೊಳ್ಳುವವನು, ಪ್ರಜೆಗಳಿಂದ ಕಂದಾಯ ವಸೂಲಿ ಮಾಡುವ ಉಪಾಯವನ್ನೂ ಬಲ್ಲವನು, ಶಾಸ್ತ್ರದೃಷ್ಟ ಕ್ರಮದಿಂದಲೇ ದ್ರವ್ಯದ ವ್ಯಯಕರ್ಮ ಮಾಡಬಲ್ಲವನು.

ಶೈಷ್ಯಂ ಶಾಸ್ತ್ರಸಮೂಹೇಷು ಪ್ರಾಪ್ತೋ ವ್ಯಾಮಿಶ್ರಕೇಷು ಚ ।
ಅರ್ಥಧರ್ಮೌ ಚ ಸಂಗೃಹ್ಯ ಸುಖತಂತ್ರೋ ನ ಚಾಲಸಃ ॥೨೭॥

ಶಾಸ್ತ್ರಸಮೂಹಗಳಲ್ಲಿ ಪ್ರಾಗಲ್ಭ್ಯವನ್ನು ಹೊಂದಿ ಸಂಸ್ಕೃತ ಪ್ರಾಕೃತಮಿಶ್ರವಾದ ನಾಟಕಾದಿಗಳಲ್ಲಿಯೂ ಪ್ರಾವೀಣ್ಯವನ್ನು ಸಂಪಾದಿಸಿದವನು. ಅರ್ಥ ಧರ್ಮಗಳಲ್ಲಿ ಸಾಮರಸ್ಯ ತಂದುಕೊಂಡು ಸುಖವನ್ನು ಸಾಧಿಸಿಕೊಳ್ಳುವವನು, ಆಲಸ್ಯ ಮಾಡದವನು.

ವೈಹಾರಿಕಾಣಾಂ ಶಿಲ್ಪಾನಾಂ ವಿಜ್ಞಾತಾರ್ಥವಿಭಾಗವಿತ್ ।
ಆರೋಹೇ ವಿನಯೇ ಚೈವ ಯುಕ್ತೋ ವಾರಣವಾಜಿನಾಮ್ ॥೨೮॥

ಕ್ರೀಡೆಗಳಿಗೆ ಗೀತವಾದ್ಯಗಳಿಗೆ ಸಂಬಂಧಿಸಿದ ರಹಸ್ಯಾರ್ಥ ವಿಭಾಗಗಳನ್ನು ಬಲ್ಲವನು. ಆನೆ ಕುದುರೆ ಸವಾರಿಗಳಲ್ಲಿಯೂ ಅವುಗಳನ್ನು ಪಳಗಿಸುವುದರಲ್ಲಿಯೂ ನಿಷ್ಣಾತನು.

ಧನುರ್ವೇದವಿದಾಂ ಶ್ರೇಷ್ಠೋ ಲೋಕೇಽತಿರಥಸಂಮತಃ ।
ಅಭಿಯಾತಾ ಪ್ರಹರ್ತಾ ಚ ಸೇನಾನಯವಿಶಾರದಃ ॥೨೯॥

ಧನುರ್ವೇದ ವೇತ್ತರಲ್ಲಿ ಶ್ರೇಷ್ಠನು, ಲೋಕದಲ್ಲಿ ಅತಿರಥನೆಂದು ಸರ್ವಸಂಮತ-ನಾದವನು, ಶತ್ರುಸೈನ್ಯವನ್ನು ಇದಿರಿಸುವವನು, ಅದರ ಮೇಲೆ ಪ್ರಹಾರ ಮಾಡುವವನು, ಸೇನಾ ನಾಯಕತ್ವದಲ್ಲಿ ನಿಷ್ಣಾತನು.

ಅಪ್ರಧೃಷ್ಯಶ್ಚ ಸಂಗ್ರಾಮೇ ಕ್ರುದ್ಧೈರಪಿ ಸುರಾಸುರೈಃ ।
ಅನಸೂಯೋ ಜಿತಕ್ರೋಧೋ ನ ದೃಪ್ತೋ ನ ಚ ಮತ್ಸರೀ ॥೩೦॥

ಯುದ್ಧದಲ್ಲಿ ಶತ್ರುಗಳಿಗೆ ಮಣಿಯುವವನಲ್ಲ. ಕ್ರುದ್ಧರಾದ ದೇವತೆಗಳಿರಲಿ ಅಸುರರಿರಲಿ ಅವನನ್ನು ಯಾರೂ ಮಣಿಸಲಾರರು. ಅಸೂಯೆ ಕ್ರೋಧ ದರ್ಪ ಮತ್ಸರ ಈ ಯಾವ ದುರ್ಗುಣವೂ ಇಲ್ಲದವನು.

'ಅನ್ಯರು ತನಗೆ ವಶರಾಗಲಿಲ್ಲ' ಎನ್ನುವ ಅಸಹನೆ ಅಸೂಯೆ. 'ಅನ್ಯರಿಗೆ ಒಳ್ಳೆಯದಾಗಬಾರದೆ'ನ್ನುವ ದ್ವೇಷವು ಮತ್ಸರ.

ನ ಚಾವಮಂತಾ ಭೂತಾನಾಂ ನ ಚ ಕಾಲವಶಾನುಗಃ ।
ಏವಂ ಶ್ರೇಷ್ಠಗುಣೈರ್ಯುಕ್ತಃ ಪ್ರಜಾನಾಂ ಪಾರ್ಥಿವಾತ್ಮಜಃ ॥೩೧॥

ಪ್ರಜೆಗಳನ್ನು ಅವಮಾನಿಸುವವನಲ್ಲ. ಅವರ ರಕ್ಷಣೆಗೆ ಕಾಲ ಬರಲಿಲ್ಲವೆಂದು ಕೈಕಟ್ಟಿ ಕುಳಿತಿರುವವನಲ್ಲ. ಹೀಗೆ ಉತ್ತಮವಾದ ಸದ್ಗುಣಗಳಿಂದ ಪ್ರಜೆಗಳಿಗೆ 'ಸಂಮತಃ' ಮೆಚ್ಚಿನವನಾದ.

ಸಂಮತಸ್ತ್ರಿಷು ಲೋಕೇಷು ವಸುಧಾಯಾಃ ಕ್ಷಮಾಗುಣೈಃ ।
ಬುದ್ಧ್ಯಾ ಬೃಹಸ್ಪತೇಸ್ತುಲ್ಯೋ ವೀರ್ಯೇಣಾಪಿ ಶಚೀಪತೇಃ ॥೩೨॥

ಕ್ಷಮಾದಿಗುಣಗಳಿಂದ ಭೂದೇವಿಗೆ ಸಮಾನ, ಬುದ್ಧಿಗುಣದಿಂದ ಬೃಹಸ್ಪತಿಗೆ ಸಮಾನ, ವೀರ್ಯಗುಣದಿಂದ ದೇವೇಂದ್ರನಿಗೆ ಸಮಾನನೆಂದು ಮೂಲೋಕದಲ್ಲಿ 'ಸಂಮತಃ' ಎಲ್ಲರಿಂದಲೂ ಸನ್ಮಾನಿತನಾದ.

ತಥಾ ಸರ್ವಪ್ರಜಾಕಾಂತೈಃ ಪ್ರೀತಿಸಂಜನನೈಃ ಪಿತುಃ ।
ಗುಣೈರ್ವಿರುರುಚೇ ರಾಮೋ ದೀಪ್ತಃ ಸೂರ್ಯ ಇವಾಂಶುಭಿಃ ॥೩೩॥

ಎಲ್ಲ ಪ್ರಜೆಗಳಿಗೂ ಇಷ್ಟವಾಗುವ, ಸಂತೋಷ ಉಂಟುಮಾಡುವ, ತಂದೆಯ ಗುಣಗಳಿಂದ ಶ್ರೀರಾಮನು ಕಿರಣಗಳಿಂದ ಹೊಳೆವ ಸೂರ್ಯನಂತೆ ಬೆಳಗಿದ.

ತಮೇವಂ ವೃತ್ತಸಂಪನ್ನಮಪ್ರಧೃಷ್ಯಪರಾಕ್ರಮಮ್ ।
ಲೋಕಪಾಲೋಪಮಂ ನಾಥಮಕಾಮಯತ ಮೇದಿನೀ ॥೩೪॥

ಹೀಗೆ ಒಳ್ಳೆಯ ನಡತೆಯಿಂದ ಕೂಡಿದ್ದು ಶತ್ರುಗಳಿಗೆ ಮಣಿಸಲಾಗದಂಥ ಪರಾಕ್ರಮ ಉಳ್ಳವನಾಗಿದ್ದು ಲೋಕಪಾಲಕರಂತಿದ್ದ ಶ್ರೀರಾಮನೇ ಅಧಿಪತಿ-ಯಾಗಲೆಂದು ಭೂಮಿ ಆಶಿಸಿತು.

ಏತೈಸ್ತು ಬಹುಭಿರ್ಯುಕ್ತಂ ಗುಣೈರನುಪಮೈಃ ಸುತಮ್ ।
ದೃಷ್ಟ್ವಾ ದಶರಥೋ ರಾಜಾ ಚಕ್ರೇ ಚಿಂತಾಂ ಪರಂತಪಃ ॥೩೫॥

ಅನುಪಮವಾದ ಅಪರಿಮಿತವಾದ ಸದ್ಗುಣಗಳಿಂದ ಯುಕ್ತನಾಗಿ ಬೆಳೆದು ನಿಂತ ಮಗನನ್ನು ಕಂಡು ಶತ್ರುನಾಶಕನಾದ ರಾಜಾ ದಶರಥನು ಆಲೋಚಿಸಲು ತೊಡಗಿದ.

ಅಥ ರಾಜ್ಞೋ ಬಭೂವೈವಂ ವೃದ್ಧಸ್ಯ ಚಿರಜೀವಿನಃ ।
ಪ್ರೀತಿರೇಷಾ ಕಥಂ ರಾಮೋ ರಾಜಾ ಸ್ಯಾನ್ಮಯಿ ಜೀವತಿ ॥೩೬॥

ಬಹುಕಾಲ ಅರವತ್ತು ಸಾವಿರ ವರ್ಷಗಳ ಕಾಲ ಬದುಕಿದ ವೃದ್ಧನಾದ ರಾಜನಿಗೆ ಹೀಗೆ ಒಂದು ಅಭಿಲಾಷೆ ಉಂಟಾಯಿತು. ನಾನು ಬದುಕಿರುವಾಗಲೇ ರಾಮನು ರಾಜನಾಗುವುದನ್ನು ನೋಡಬೇಕು, ಹೇಗೆ? ಎಂದು.

ಏಷಾ ಹ್ಯಸ್ಯ ಪರಾ ಪ್ರೀತಿರ್ಹೃದಿ ಸಂಪರಿವರ್ತತೇ ।
ಕದಾ ನಾಮ ಸುತಂ ದ್ರಕ್ಷ್ಯಾಮ್ಯಭಿಷಿಕ್ತಮಹಂ ಪ್ರಿಯಮ್ ॥೩೭॥

ದಶರಥರಾಜನ ಎದೆಯಲ್ಲಿ ಮಹತ್ತಾದ ಆಸೆ ತುಡಿಯುತ್ತಿದೆ. 'ನನ್ನ ಮುದ್ದಿನ ಮಗನು ಪಟ್ಟಾಭಿಷಿಕ್ತನಾಗುವುದನ್ನು ನಾನೆಂದು ಕಣ್ತುಂಬ ಕಂಡೇನು?' ಎಂದು.

ಇದೇನೂ ತಪ್ಪಲ್ಲ. ಪ್ರಾಚೀನ ರಾಜರ್ಷಿಗಳೆಲ್ಲರೂ ಹೀಗೇ ಮಾಡುತ್ತಿದ್ದರು.

ವೃದ್ಧಿಕಾಮೋ ಹಿ ಲೋಕಸ್ಯ ಸರ್ವಭೂತಾನುಕಂಪನಃ ।
ಮತ್ತಃ ಪ್ರಿಯತರೋ ಲೋಕೇ ಪರ್ಜನ್ಯ ಇವ ವೃಷ್ಟಿಮಾನ್ ॥೩೮॥

'ಲೋಕದ ಒಳಿತನ್ನೆ ಬಯಸುವವನು, ಎಲ್ಲ ಪ್ರಜೆಗಳಲ್ಲಿ ಅನುಕಂಪೆ ಉಳ್ಳವನು, ನನಗಿಂತ ಹೆಚ್ಚಾಗಿ, ಮಳೆಗರೆವ ಮೋಡದಂತೆ, ಪ್ರಜೆಗಳಿಗೆ ಸುಖನೀಡುವವನು, ರಾಮ.'

ಯಮಶಕ್ರಸಮೋ ವೀರ್ಯೇ ಬೃಹಸ್ಪತಿಸಮೋ ಮತೌ ।
ಮಹೀಧರಸಮೋ ಧೃತ್ಯಾಂ ಮತ್ತಶ್ಚ ಗುಣವತ್ತರಃ ॥೩೯॥

'ಪರಾಕ್ರಮದಲ್ಲಿ ಯಮ–ಇಂದ್ರರಿಗೆ ಸಮಾನ, ಬುದ್ಧಿಯಲ್ಲಿ ಬೃಹಸ್ಪತಿಗೆ ಸಮ. ಧೈರ್ಯದಲ್ಲಿ ಬೆಟ್ಟಕ್ಕೆ ಸಮಾನ. ನನ್ನನ್ನು ಮೀರಿಸುವ ಸದ್ಗುಣವಂತ, ರಾಮ.'

ಮಹೀಮಹಮಿಮಾಂ ಕೃತ್ಸ್ನಾಮಧಿತಿಷ್ಠಂತಮಾತ್ಮಜಮ್ ।
ಅನೇನ ವಯಸಾ ದೃಷ್ಟ್ವಾ ಯಥಾಸ್ವರ್ಗಮವಾಪ್ನುಯಾಮ್ ॥೪೦॥

'ನನ್ನ ಮಗನು ಈ ಸಮಸ್ತ ಭೂಮಂಡಲವನ್ನಾಳುವುದನ್ನು ನಾನು ಈ ವಯಸ್ಸಿನಲ್ಲಿ ಕಂಡು ಸ್ವರ್ಗಸುಖವನ್ನು ಅನುಭವಿಸಬೇಕು, ಹೇಗೆ?' ಎಂದು ಆಲೋಚಿಸಿದ ದಶರಥ.

ಇತ್ಯೇತೈರ್ವಿವಿಧೈಸ್ತೈಸ್ತೈರನ್ಯಪಾರ್ಥಿವದುರ್ಲಭೈಃ ।
ಶಿಷ್ಟೈರಪರಿಮೇಯೈಶ್ಚ ಲೋಕೇ ಲೋಕೋತ್ತರೈರ್ಗುಣೈಃ ॥೪೧॥

ತಂ ಸಮೀಕ್ಷ್ಯ ಮಹಾರಾಜೋ ಯುಕ್ತಂ ಸಮುದಿತೈಃ ಶುಭೈಃ ।
ನಿಶ್ಚಿತ್ಯ ಸಚಿವೈಃ ಸಾರ್ಧಂ ಯುವರಾಜಮಮನ್ಯತ ॥೪೨॥

ಹೀಗೆ ಬೇರೆ ರಾಜರಲ್ಲಿ ಕಾಣಲಾಗದಂಥ ಲೋಕೋತ್ತರವಾದ ಲೋಕದಲ್ಲಿ ರಾಜನೀತಿ ತಜ್ಞರಿಂದಲೂ ಅಳೆಯಲಾಗದಂಥ, ನಾನಾವಿಧವಾದ ಆಯಾ ಶುಭಗುಣಸಮೂಹಗಳಿಂದ ರಾಮನು ಸಂಪನ್ನನಾಗಿರುವುದನ್ನು ನಿಶ್ಚಯವಾಗಿ ಕಂಡು, 'ಅವನು ಯುವರಾಜನಾಗಲೇನು?' ಎಂದು ಮಂತ್ರಿಗಳೊಂದಿಗೆ ಆಲೋಚನೆ ಮಾಡಿದ. ಏಕೆ ಅವಸರ?—

ದಿವ್ಯಂತರಿಕ್ಷೇ ಭೂಮೌ ಚ ಘೋರಮುತ್ಪಾತಜಂ ಭಯಮ್ ।
ಸಂಚಚಕ್ಷೇ ಚ ಮೇಧಾವೀ ಶರೀರೇ ಚಾತ್ಮನೋ ಜರಾಮ್ ॥೪೩॥

ಮೇಧಾವಿಯಾದ ದಶರಥನು ದ್ಯುಲೋಕ ಅಂತರಿಕ್ಷ ಭೂಮಿಗಳಲ್ಲಿ ಭಯಂಕರ ಉತ್ಪಾತಗಳಿಂದ ಉಂಟಾಗಬಹುದಾದ ವಿನಾಶವನ್ನೂ ಜೊತೆಗೆ ತನ್ನ ಶರೀರದಲ್ಲಿ ಅಡರಿದ ಮುಪ್ಪನ್ನೂ ಮಂತ್ರಿಗಳ ಮುಂದೆ ಹೇಳಿಕೊಂಡ.

ಪೂರ್ಣಚಂದ್ರಾನನಸ್ಯಾಥ ಶೋಕಾಪನುದಮಾತ್ಮನಃ ।
ಲೋಕೇ ರಾಮಸ್ಯ ಬುಬುಧೇ ಸಂಪ್ರಿಯತ್ವಂ ಮಹಾತ್ಮನಃ ॥೪೪॥

'ಪೂರ್ಣಚಂದ್ರನಂಥ ಮುಖವುಳ್ಳ ಮಹಾತ್ಮನಾದ ರಾಮನು ನನ್ನ ಶೋಕವನ್ನು ಕಳೆಯುತ್ತ ಪಟ್ಟಾಭಿಷಿಕ್ತನಾದರೆ ಲೋಕವಿನಾಶವನ್ನು ತಪ್ಪಿಸಿ ಲೋಕಕ್ಕೇ ಒಳ್ಳೆಯ ಆನಂದ ಉಂಟುಮಾಡಬಲ್ಲನೆಂ'ದು ಹೇಳಿದ.

ಆತ್ಮನಶ್ಚ ಪ್ರಜಾನಾಂ ಚ ಶ್ರೇಯಸಾ ಚ ಪ್ರಿಯೇಣ ಚ ।
ಪ್ರಾಪ್ತೇ ಕಾಲೇ ಸ ಧರ್ಮಾತ್ಮಾ ಭಕ್ತ್ಯಾ ತ್ವರಿತವಾನ್ ನೃಪಃ ॥೪೫॥

ಮುಪ್ಪಿನ ಕಾಲ ಬಂದಾಗ ಧರ್ಮಾತ್ಮನಾದ ರಾಜನು ತನ್ನ ಹಾಗೂ ಪ್ರಜೆಗಳ ಶ್ರೇಯಸ್ಸಿಗಾಗಿ ಮತ್ತು ಸಂತೋಷಕ್ಕಾಗಿ ಪ್ರಜೆಗಳಿಗೆ ತನ್ನ ಮೇಲಿದ್ದ ಭಕ್ತಿಯಿಂದ ಮಂತ್ರಿಗಳಿಗೆ ಅವಸರ ಪಡಿಸಿದ.

'ಕಾಲವಿಲಂಬ ಮಾಡಬೇಡಿರಿ, ಭರತ ಶತ್ರುಘ್ನರಿಗೂ ಜನಕ ಯುಧಾಜಿತ್ ಮುಂತಾದ ರಾಜರಿಗೂ ಆಹ್ವಾನ ನೀಡಿರಿ. ನಾನು ಅರವತ್ತು ಸಾವಿರ ವಯಸಿನ ವೃದ್ಧನಾಗಿದ್ದೇನೆ. ಇನ್ನೂ ಹೆಚ್ಚು ಬದುಕಿರಲಾರೆ. ಉತ್ಪಾತಗಳು ದೇಶದ ರಾಜನ ಮೃತ್ಯುಸೂಚಕವಾಗಿವೆ, ಅಭಿಷೇಕ ವಿಘ್ನಸೂಚನೆಯೂ ಕಾಣುತ್ತದೆ. ಅದರಿಂದ ನನ್ನ ಹಾಗೂ ನನ್ನಲ್ಲಿ ಭಕ್ತಿ ಇರಿಸಿಕೊಂಡಿರುವ ಪ್ರಜೆಗಳ ಸಂತೋಷಕ್ಕಾಗಿ ಶ್ರೇಯಸ್ಸಿಗಾಗಿ ಬೇಗನೆ ಅಭಿಷೇಕಪ್ರಯತ್ನ ಮಾಡೋಣ' ಎಂದು.

ನಾನಾನಗರವಾಸ್ತವ್ಯಾನ್ ಪೃಥಗ್ಜಾನಪದಾನಪಿ ।
ಸಮಾನಿನಾಯ ಮೇದಿನ್ಯಾಃ ಪ್ರಧಾನಾನ್ ಪೃಥಿವೀಪತೀನ್ ॥೪೬॥

ಮಂತ್ರಿಗಳನ್ನು ಅವಸರಪಡಿಸಿ, ಸಮೀಪದಲ್ಲಿರುವ ನಾನಾ ನಗರ ವಾಸಿಗಳನ್ನೂ ಬೇರೆಬೇರೆ ದೇಶವಾಸಿಗಳನ್ನೂ ಭೂಮಿಯಲ್ಲಿ ಮುಖ್ಯರಾದ ರಾಜರುಗಳನ್ನೂ ಕರೆಸಿಕೊಂಡ, ಕರೆಸಿಕೊಳ್ಳುವಲ್ಲಿ ಯಶಸ್ವಿಯಾದ.

ತಾನ್ ವೇಶ್ಮನಾನಾಭರಣೈರ್ಯಥಾರ್ಹಂ ಪ್ರತಿಪೂಜಿತಾನ್ ।
ದದರ್ಶಾಲಂಕೃತೋ ರಾಜಾ ಪ್ರಜಾಪತಿರಿವ ಪ್ರಜಾಃ ॥೪೭॥

ಬಂದ ಅತಿಥಿಗಳಿಗೆ ಯಥೋಚಿತವಾಗಿ ಬಿಡಾರಗಳ ವ್ಯವಸ್ಥೆಯನ್ನೂ ವಸ್ತ್ರಾಭರಣಗಳನ್ನೂ ಕೊಟ್ಟು ಆದರಿಸಿ ತಾನೂ ಅಲಂಕೃತನಾಗಿ ಪ್ರಜಾಪತಿಯು ಪ್ರಜೆಗಳನ್ನು ಕಾಣುವಂತೆ, ದಶರಥನು ಅತಿಥಿಗಳನ್ನು ಸಂದರ್ಶಿಸಿದ.

ನ ತು ಕೇಕಯರಾಜಾನಂ ಜನಕಂ ವಾ ನರಾಧಿಪಃ ।
ತ್ವರಯಾ ಚಾನಯಾಮಾಸ ಪಶ್ಚಾತ್ತೌ ಶ್ರೋಷ್ಯತಃ ಪ್ರಿಯಮ್ ॥೪೮॥

ರಾಜನು ದೂರದಲ್ಲಿದ್ದ ಕೇಕಯ ರಾಜನನ್ನಾಗಲಿ, ಜನಕರಾಜನನ್ನಾಗಲಿ, ಅವಸರದ ನಿಮಿತ್ತದಿಂದ ಕರೆಸಿಕೊಳ್ಳಲಾಗಲಿಲ್ಲ. ಅಭಿಷೇಕವಾಗಿ ಹೋಗಲಿ, ಬಳಿಕ ಈ ಪ್ರಿಯವಾದ ವಾರ್ತೆಯನ್ನು ಅವರು ತಿಳಿಯುತ್ತಾರೆ ಎಂದು ಸಮಾಧಾನ ಪಟ್ಟುಕೊಂಡ.

ಆಗಿನ ಕಾಲದಲ್ಲಿ ಅಯೋಧ್ಯೆಯಿಂದ ಕೇಕಯ ದೇಶಕ್ಕೆ ಏಳು ದಿನಗಳಷ್ಟು ದೀರ್ಘಕಾಲದ ಪ್ರಯಾಣ ಮಾಡಬೇಕಾಗಿತ್ತು. ಜನಕರಾಜನ ಮಿಥಿಲೆಗೂ ಮೂರುದಿನಗಳ ದಾರಿ ಇದ್ದುದರಿಂದ ಅವರಿಬ್ಬರನ್ನೂ ಕರೆಸಿಕೊಳ್ಳಲಾಗಲಿಲ್ಲ. ಎರಡು ವಾರ ಕಾಯುವುದು ಶಕ್ಯವಿರಲಿಲ್ಲ. ಮತ್ತು ರಾಮಾಭಿಷೇಕ ಅವರಿಗೆ ಪ್ರಿಯವೇ ಆಗಿತ್ತು. ಅದಕ್ಕೆ ಅವರು ಸಭೆಯಲ್ಲಿ ಮಧ್ಯಸ್ಥರಾಗಿ ನಿಷ್ಪಕ್ಷಪಾತವಾದ ಸಲಹೆಯನ್ನು ಕೊಡಲಾರರು.

ಅನ್ಯಾ ಮಧ್ಯಸ್ಥ ಚಿಂತಾ ತು ವಿಮರ್ದಾಭ್ಯಧಿಕೋದಯಾ । (ಅಯೋ.2.16)

'ಮಧ್ಯಸ್ಥರಿಂದ ಬರುವ ಸಲಹೆ ಅಭಿಪ್ರಾಯಗಳೇ ತಾಳುವಂಥವು'. ಅದಕ್ಕಾಗಿ, ಮನೆಯವರೇ ಆದ ಭರತ ಮುಂತಾದವರನ್ನು ಬಿಟ್ಟು, ಹೊರಗಿನ ರಾಜರುಗಳನ್ನೂ ಪ್ರಜೆಗಳನ್ನೂ ಸಭೆಗೆ ಕರೆಸಿದರೆ ಸಾಕೆಂದುಕೊಂಡಿದ್ದಾನೆ, ದಶರಥ. ಅವನು 'ಸಭೆ ಕರೆವ ನಾಟಕ' ಮಾಡಿ, ತನಗೆ ಬೇಕಾದವರನ್ನೇ ಕರೆದು, ಸೈ ಎನಿಸಿಕೊಂಡು ಸಮಸ್ತ ಪ್ರಜೆಗಳ ರಾಜರ ಸಮ್ಮತಿ ಪಡೆದಂತೆ ಬೂಟಾಟಿಕೆ ಮಾಡಿ ಭರತನಿಗೆ ವಂಚನೆ ಮಾಡಿದನೆಂದು ತಿಳಿಯಬಾರದು.

ಭರತನೂ ಕೇಕಯ ರಾಜನೂ ಬಂದಿದ್ದರೆ ಅಭಿಷೇಕಕ್ಕೆ ವಿಘ್ನ ಭಯವಿತ್ತೆಂದೂ ತಿಳಿಯಬಾರದು. 'ದಶರಥನು ಕೈಕೇಯಿಯನ್ನು ವಿವಾಹವಾಗುವಾಗ ಮುಂದೆ

ಅವಳಲ್ಲಿ ಹುಟ್ಟುವ ಮಗನಿಗೇ ಪಟ್ಟ ನೀಡುವೆನೆಂದು ಕೇಕಯ ರಾಜನಿಗೆ ಮಾತುಕೊಟ್ಟಿದ್ದ. ಅದರಂತೆ ಈಗ ಭರತನಿಗೇ ಪಟ್ಟ ನೀಡುವುದು ಆವಶ್ಯಕವಾಗುತ್ತದೆ' ಎಂದು ದಶರಥನಿಗೆ ಅನುಮಾನವೆಂದು ವಿಮರ್ಶಕರು ಕೆಲವರು ಹೇಳುವುದು ಸರಿಯಲ್ಲ. ವಿವಾಹ ಸಂದರ್ಭದಲ್ಲಿ ಕೊಡುವ ಮಾತನ್ನು ನಡೆಸದಿದ್ದರೂ ದೋಷವಿಲ್ಲ.

'ವಿವಾಹ ಕಾಲೇ ರತಿ ಸಂಪ್ರಯೋಗೇ
ಪ್ರಾಣಾತ್ಯಯೇ ಸರ್ವಧನಾಪಹಾರೇ ।
ವಿಪ್ರಸ್ಯ ಚಾರ್ಥೇ ಹ್ಯನೃತಂ ವದೇತ
ಪಂಚಾನೃತಾನ್ಯಾಹುರಪಾತಕಾನಿ ॥ (ಕರ್ಣಪರ್ವ 66.36)

–ಅರ್ಜುನನಿಗೆ ಕೃಷ್ಣ ಹೇಳುವ ಮಾತು.
ಧರ್ಮಶಾಸ್ತ್ರವೂ ಹಾಗೇ ಹೇಳುತ್ತದೆ. ದಶರಥನಿಗೆ ಅದು ಗೊತ್ತು.

ಪುರಾ ಭ್ರಾತಃ ಪಿತಾ ನಃ ಸ ಮಾತರಂ ತೇ ಸಮುದ್ವಹನ್ ।
ಮಾತಾಮಹೇ ಸಮಾಶ್ರೌಷೀತ್ ರಾಜ್ಯಶುಲ್ಕಮನುತ್ತಮಂ ॥

ಎಂದು ಶ್ರೀರಾಮ 'ಭರತನಿಗೇ ರಾಜ್ಯದ ಹಕ್ಕು' ಎನ್ನುತ್ತಾನೆ, ನಿಜ. ಆದರೆ ಅದು ಭರತನ ಮನ ಒಲಿಸುವುದಕ್ಕಾಗಿ ಶ್ರೀರಾಮ ಹೇಳಿದ ಮಾತು.

ಪ್ರಕೃತ 'ಪಶ್ಚಾತ್ತೌ ಶ್ರೋಷ್ಯತಃ!' ಎಂದಿಷ್ಟೇ ಇಟ್ಟುಕೊಂಡು, ಅದನ್ನು ಕಪಟದ ಮಾತೆಂದು ಹೇಳಬಾರದು. ''ಪ್ರಿಯಂ' ಎಂದೂ ಅಲ್ಲಿಯೇ ಹೇಳುತ್ತಾನೆ. 'ತ್ವರಿತವಾನ್ ನೃಪಃ' ಎಂಬಂತೆ, ಬೇಗನೆ ಕೇಕಯರಾಜನನ್ನು ಕರೆತರಿಸಲು ಮಂತ್ರಿಗಳಿಗೆ ಅವಸರಪಡಿಸಿದ್ದಾನೆ. ಆದರೆ ಹಿಂದೆ ಹೇಳಿದಂತೆ ಅವಸರ ಕಾರಣದಿಂದ ಅದು ಸಫಲವಾಗಲಿಲ್ಲವಷ್ಟೆ. ಆರ್ಷಕಾವ್ಯದಲ್ಲಿ ವಿಮರ್ಶಕರು ಸಹೃದಯತೆಯಿಂದ ಪಾತ್ರಚಿತ್ರಣ ಮಾಡಬೇಕು.

ಅಥೋಪವಿಷ್ಟೇ ನೃಪತೌ ತಸ್ಮಿನ್ ಪರಬಲಾರ್ದನೇ ।
ತತಃ ಪ್ರವಿವಿಶುಃ ಶೇಷಾ ರಾಜಾನೋ ಲೋಕಸಂಮತಾಃ ॥೪೯॥

ಶತ್ರುಸೈನ್ಯವನ್ನು ಮರ್ದನ ಮಾಡುವ ಸಾರ್ವಭೌಮ ಚಕ್ರವರ್ತಿಯಾದ ದಶರಥರಾಜ ಆಸನದಲ್ಲಿ ಮಂಡಿಸಿದಾಗ ಕೇಕಯರಾಜ ಜನಕರಾಜರು ಹೊರತು ಉಳಿದ ಲೋಕಪ್ರಸಿದ್ಧರಾದ ಸಮೀಪದ ಎಲ್ಲ ಸಾಮಂತ ರಾಜರು ಸಭಾಮಂಟಪವನ್ನು ಪ್ರವೇಶಿಸಿದರು.

ತಾನ್ ವೇಶ್ಮನಾನಾಭರಣೈರ್ಯಥಾರ್ಹಂ ಪ್ರತಿಪೂಜಿತಾನ್ ।
ದದರ್ಶಾಲಂಕೃತೋ ರಾಜಾ ಪ್ರಜಾಪತಿರಿವ ಪ್ರಜಾಃ ॥೪೭॥

ಬಂದ ಅತಿಥಿಗಳಿಗೆ ಯಥೋಚಿತವಾಗಿ ಬಿಡಾರಗಳ ವ್ಯವಸ್ಥೆಯನ್ನೂ ವಸ್ತ್ರಾಭರಣಗಳನ್ನೂ ಕೊಟ್ಟು ಆದರಿಸಿ ತಾನೂ ಅಲಂಕೃತನಾಗಿ ಪ್ರಜಾಪತಿಯು ಪ್ರಜೆಗಳನ್ನು ಕಾಣುವಂತೆ, ದಶರಥನು ಅತಿಥಿಗಳನ್ನು ಸಂದರ್ಶಿಸಿದ.

ನ ತು ಕೇಕಯರಾಜಾನಂ ಜನಕಂ ವಾ ನರಾಧಿಪಃ ।
ತ್ವರಯಾ ಚಾನಯಾಮಾಸ ಪಶ್ಚಾತ್ತೌ ಶ್ರೋಷ್ಯತಃ ಪ್ರಿಯಮ್ ॥೪೮॥

ರಾಜನು ದೂರದಲ್ಲಿದ್ದ ಕೇಕಯ ರಾಜನನ್ನಾಗಲಿ, ಜನಕರಾಜನನ್ನಾಗಲಿ, ಅವಸರದ ನಿಮಿತ್ತದಿಂದ ಕರೆಸಿಕೊಳ್ಳಲಾಗಲಿಲ್ಲ. ಅಭಿಷೇಕವಾಗಿ ಹೋಗಲಿ, ಬಳಿಕ ಈ ಪ್ರಿಯವಾದ ವಾರ್ತೆಯನ್ನು ಅವರು ತಿಳಿಯುತ್ತಾರೆ ಎಂದು ಸಮಾಧಾನ ಪಟ್ಟುಕೊಂಡ.

ಆಗಿನ ಕಾಲದಲ್ಲಿ ಅಯೋಧ್ಯೆಯಿಂದ ಕೇಕಯ ದೇಶಕ್ಕೆ ಏಳು ದಿನಗಳಷ್ಟು ದೀರ್ಘಕಾಲದ ಪ್ರಯಾಣ ಮಾಡಬೇಕಾಗಿತ್ತು. ಜನಕರಾಜನ ಮಿಥಿಲೆಗೂ ಮೂರುದಿನಗಳ ದಾರಿ ಇದ್ದುದರಿಂದ ಅವರಿಬ್ಬರನ್ನೂ ಕರೆಸಿಕೊಳ್ಳಲಾಗಲಿಲ್ಲ. ಎರಡು ವಾರ ಕಾಯುವುದು ಶಕ್ಯವಿರಲಿಲ್ಲ. ಮತ್ತು ರಾಮಾಭಿಷೇಕ ಅವರಿಗೆ ಪ್ರಿಯವೇ ಆಗಿತ್ತು. ಅದಕ್ಕೆ ಅವರು ಸಭೆಯಲ್ಲಿ ಮಧ್ಯಸ್ಥರಾಗಿ ನಿಷ್ಪಕ್ಷಪಾತವಾದ ಸಲಹೆಯನ್ನು ಕೊಡಲಾರರು.

ಅನ್ಯಾ ಮಧ್ಯಸ್ಥ ಚಿಂತಾ ತು ವಿಮರ್ದಾಭ್ಯಧಿಕೋದಯಾ । (ಅಯೋ.2.16)

'ಮಧ್ಯಸ್ಥರಿಂದ ಬರುವ ಸಲಹೆ ಅಭಿಪ್ರಾಯಗಳೇ ತಾಳುವಂಥವು'. ಅದಕ್ಕಾಗಿ, ಮನೆಯವರೇ ಆದ ಭರತ ಮುಂತಾದವರನ್ನು ಬಿಟ್ಟು, ಹೊರಗಿನ ರಾಜರುಗಳನ್ನೂ ಪ್ರಜೆಗಳನ್ನೂ ಸಭೆಗೆ ಕರೆಸಿದರೆ ಸಾಕೆಂದುಕೊಂಡಿದ್ದಾನೆ, ದಶರಥ. ಅವನು 'ಸಭೆ ಕರೆವ ನಾಟಕ' ಮಾಡಿ, ತನಗೆ ಬೇಕಾದವರನ್ನೇ ಕರೆದು, ಸೈ ಎನಿಸಿಕೊಂಡು ಸಮಸ್ತ ಪ್ರಜೆಗಳ ರಾಜರ ಸಮ್ಮತಿ ಪಡೆದಂತೆ ಬೂಟಾಟಿಕೆ ಮಾಡಿ ಭರತನಿಗೆ ವಂಚನೆ ಮಾಡಿದನೆಂದು ತಿಳಿಯಬಾರದು.

ಭರತನೂ ಕೇಕಯ ರಾಜನೂ ಬಂದಿದ್ದರೆ ಅಭಿಷೇಕಕ್ಕೆ ವಿಘ್ನ ಭಯವಿತ್ತೆಂದೂ ತಿಳಿಯಬಾರದು. 'ದಶರಥನು ಕೈಕೇಯಿಯನ್ನು ವಿವಾಹವಾಗುವಾಗ ಮುಂದೆ

ಅವಳಲ್ಲಿ ಹುಟ್ಟುವ ಮಗನಿಗೇ ಪಟ್ಟ ನೀಡುವೆನೆಂದು ಕೇಕಯ ರಾಜನಿಗೆ ಮಾತುಕೊಟ್ಟಿದ್ದ. ಆದರಂತೆ ಈಗ ಭರತನಿಗೇ ಪಟ್ಟ ನೀಡುವುದು ಆವಶ್ಯಕವಾಗುತ್ತದೆ' ಎಂದು ದಶರಥನಿಗೆ ಅನುಮಾನವೆಂದು ವಿಮರ್ಶಕರು ಕೆಲವರು ಹೇಳುವುದು ಸರಿಯಲ್ಲ. ವಿವಾಹ ಸಂದರ್ಭದಲ್ಲಿ ಕೊಡುವ ಮಾತನ್ನು ನಡೆಸದಿದ್ದರೂ ದೋಷವಿಲ್ಲ.

'ವಿವಾಹ ಕಾಲೇ ರತಿ ಸಂಪ್ರಯೋಗೇ
ಪ್ರಾಣಾತ್ಯಯೇ ಸರ್ವಧನಾಪಹಾರೇ ।
ವಿಪ್ರಸ್ಯ ಚಾರ್ಥೇ ಹ್ಯನೃತಂ ವದೇತ
ಪಂಚಾನೃತಾನ್ಯಾಹುರಪಾತಕಾನಿ ॥ (ಕರ್ಣಪರ್ವ 66.36)

–ಅರ್ಜುನನಿಗೆ ಕೃಷ್ಣ ಹೇಳುವ ಮಾತು.
ಧರ್ಮಶಾಸ್ತ್ರವೂ ಹಾಗೇ ಹೇಳುತ್ತದೆ. ದಶರಥನಿಗೆ ಅದು ಗೊತ್ತು.

ಪುರಾ ಭ್ರಾತಃ ಪಿತಾ ನಃ ಸ ಮಾತರಂ ತೇ ಸಮುದ್ವಹನ್ ।
ಮಾತಾಮಹೇ ಸಮಾಶ್ರೌಷೀತ್ ರಾಜ್ಯಶುಲ್ಕಮನುತ್ತಮಂ ॥

ಎಂದು ಶ್ರೀರಾಮ 'ಭರತನಿಗೇ ರಾಜ್ಯದ ಹಕ್ಕು' ಎನ್ನುತ್ತಾನೆ, ನಿಜ. ಆದರೆ ಅದು ಭರತನ ಮನ ಒಲಿಸುವುದಕ್ಕಾಗಿ ಶ್ರೀರಾಮ ಹೇಳಿದ ಮಾತು.

ಪ್ರಕೃತ 'ಪಶ್ಚಾತ್ತೌ ಶ್ರೋಷ್ಯತಃ!' ಎಂದಿಷ್ಟೇ ಇಟ್ಟುಕೊಂಡು, ಅದನ್ನು ಕಪಟದ ಮಾತೆಂದು ಹೇಳಬಾರದು. ''ಪ್ರಿಯಂ' ಎಂದೂ ಅಲ್ಲಿಯೇ ಹೇಳುತ್ತಾನೆ. 'ತ್ವರಿತವಾನ್ ನೃಪಃ' ಎಂಬಂತೆ, ಬೇಗನೆ ಕೇಕಯರಾಜನನ್ನು ಕರೆತರಿಸಲು ಮಂತ್ರಿಗಳಿಗೆ ಅವಸರಪಡಿಸಿದ್ದಾನೆ. ಆದರೆ ಹಿಂದೆ ಹೇಳಿದಂತೆ ಅವಸರ ಕಾರಣದಿಂದ ಅದು ಸಫಲವಾಗಲಿಲ್ಲವಷ್ಟೆ. ಆರ್ಷಕಾವ್ಯದಲ್ಲಿ ವಿಮರ್ಶಕರು ಸಹೃದಯತೆಯಿಂದ ಪಾತ್ರಚಿತ್ರಣ ಮಾಡಬೇಕು.

ಅಥೋಪವಿಷ್ಟೇ ನೃಪತೌ ತಸ್ಮಿನ್ ಪರಬಲಾರ್ದನೇ ।
ತತಃ ಪ್ರವಿವಿಶುಃ ಶೇಷಾ ರಾಜಾನೋ ಲೋಕಸಂಮತಾಃ ॥೪೯॥

ಶತ್ರುಸೈನ್ಯವನ್ನು ಮರ್ದನ ಮಾಡುವ ಸಾರ್ವಭೌಮ ಚಕ್ರವರ್ತಿಯಾದ ದಶರಥರಾಜ ಆಸನದಲ್ಲಿ ಮಂಡಿಸಿದಾಗ ಕೇಕಯರಾಜ ಜನಕರಾಜರು ಹೊರತು ಉಳಿದ ಲೋಕಪ್ರಸಿದ್ಧರಾದ ಸಮೀಪದ ಎಲ್ಲ ಸಾಮಂತ ರಾಜರು ಸಭಾಮಂಟಪವನ್ನು ಪ್ರವೇಶಿಸಿದರು.

ಅಥ ರಾಜ್ಞಾ ವಿತೀರ್ಣೇಷು ವಿವಿಧೇಷ್ವಾಸನೇಷು ಚ ।
ರಾಜಾನಮೇವಾಭಿಮುಖಾ ನಿಷೇದುರ್ನಿಯತಾ ನೃಪಾಃ ॥೫೦॥

ರಾಜನು ಕೊಟ್ಟ ನಾನಾವಿಧವಾದ ಆಯಾ ಆಸನಗಳಲ್ಲಿ ಆಯಾ ರಾಜರು ರಾಜನಿಗಿದಿರಾಗಿ ಕುಳಿತರು.

ಸ ಲಬ್ಧಮಾನೈರ್ವಿನಯಾನ್ವಿತೈರ್ನೃಪೈಃ
ಪುರಾಲಯೈರ್ಜಾನಪದೈಶ್ಚ ಮಾನವೈಃ ।
ಉಪೋಪವಿಷ್ಟೈರ್ನೃಪತಿರ್ವೃತೋ ಬಭೌ
ಸಹಸ್ರಚಕ್ಷುರ್ಭಗವಾನಿವಾಮರೈಃ ॥೫೧॥

ಸನ್ಮಾನಿತರಾದ ವಿನಯಾನ್ವಿತರಾದ ರಾಜರಿಂದಲೂ ನಗರವಾಸಿ ಹಾಗೂ ಗ್ರಾಮಾಂತರವಾಸಿ ಜನರಿಂದಲೂ ಬಳಿಯಲ್ಲಿ ಕುಳಿತು ಸುತ್ತುವರಿಯಲ್ಪಟ್ಟ ದಶರಥ ಮಹಾರಾಜನು ದೇವತೆಗಳಿಂದ ಸುತ್ತುವರಿಯಲ್ಪಟ್ಟ ಭಗವಾನ್ ದೇವೇಂದ್ರನಂತೆ ಶೋಭಿಸಿದ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಒಂದನೇ ಸರ್ಗ ಮುಗಿಯಿತು.

❖

ದ್ವಿತೀಯಃ ಸರ್ಗಃ

ಸರ್ಗ – 2

ಶ್ರೀರಾಮನಿಗೆ ಯುವರಾಜಪಟ್ಟಾಭಿಷೇಕ ಮಾಡುವ ದಶರಥನ ಪ್ರಸ್ತಾಪಕ್ಕೆ ಸಭೆಯ ಸಮ್ಮತಿ.

ತತಃ ಪರಿಷದಂ ಸರ್ವಾಮಾಮಂತ್ರ್ಯ ವಸುಧಾಧಿಪಃ ।
ಹಿತಮುದ್ದರ್ಷಣಂ ಚೈವಮುವಾಚ ಪ್ರಥಿತಂ ವಚಃ ॥೧॥

ರಾಜಾ ದಶರಥನು ಇಡೀ ಸಭೆಯನ್ನು ಉದ್ದೇಶಿಸಿ ಹಿತಕರವಾದ ಹರ್ಷದಾಯಕ-ವಾದ ಸ್ಪಷ್ಟವಾದ ಮಾತನ್ನಾಡಿದ.

ದುಂದುಭಿಸ್ವನಕಲ್ಪೇನ ಗಂಭೀರೇಣಾನುನಾದಿನಾ ।
ಸ್ವರೇಣ ಮಹತಾ ರಾಜಾ ಜೀಮೂತ ಇವ ನಾದಯನ್ ॥೨॥

ದಿಕ್ಕುಗಳಲ್ಲಿ ಪ್ರತಿಧ್ವನಿಸುವ ಗಂಭೀರವಾದ ದುಂದುಭಿ ಧ್ವನಿಯಂಥ ದೊಡ್ಡ ಧ್ವನಿಯಿಂದ ಮೋಡದಂತೆ ಗುಡುಗುತ್ತ ನುಡಿದ.

ರಾಜಲಕ್ಷಣಯುಕ್ತೇನ ಕಾಂತೇನಾನುಪಮೇನ ಚ ।
ಉವಾಚ ರಸಯುಕ್ತೇನ ಸ್ವರೇಣ ನೃಪತಿರ್ನೃಪಾನ್ ॥೩॥

ಗಾಂಭೀರ್ಯಾದಿ ರಾಜಲಕ್ಷಣಯುಕ್ತ, ಮಧುರ, ಅನುಪಮ, ಅದ್ಭುತ ರಸಯುಕ್ತವಾದ ಸ್ವರದಿಂದ ರಾಜನು ರಾಜರಿಗೆ ಹೇಳಿದ.

ವಿದಿತಂ ಭವತಾಮೇತದ್ಯಥಾ ಮೇ ರಾಜ್ಯಮುತ್ತಮಮ್ ।
ಪೂರ್ವಕೈರ್ಮಮ ರಾಜೇಂದ್ರೈಃ ಸುತವತ್ ಪರಿಪಾಲಿತಮ್ ॥೪॥

'ನನ್ನ ಉತ್ತಮವಾದ ರಾಜ್ಯವು ನನ್ನ ಪೂರ್ವಿಕರಾದ ರಾಜರಿಂದ ಮಕ್ಕಳಂತೆ ಪರಿಪಾಲಿತವಾಗಿತ್ತು ಎಂಬುದು ನಿಮಗೆ ತಿಳಿದೇ ಇದೆ.

ಸೋಽಹಮಿಕ್ಷ್ವಾಕುಭಿಃ ಸರ್ವೈರ್ನರೇಂದ್ರೈಃ ಪರಿಪಾಲಿತಮ್ ।
ಶ್ರೇಯಸಾ ಯೋಕ್ತುಕಾಮೋಽಸ್ಮಿ ಸುಖಾರ್ಹಮಖಿಲಂ ಜಗತ್ ॥೫॥

'ಇಕ್ಷ್ವಾಕು ವಂಶದ ಎಲ್ಲ ರಾಜರಿಂದ ಪರಿಪಾಲಿತವಾದ ಸುಖೋಚಿತವಾದ ಸಮಸ್ತ ಜಗತ್ತನ್ನು ಈಗ ಒಂದು ದೊಡ್ಡ ಶ್ರೇಯೋಭಾಗಿಯನ್ನಾಗಿ ಮಾಡಲು ನಾನು ಬಯಸಿದ್ದೇನೆ.

ಮಯಾಪ್ಯಾಚರಿತಂ ಪೂರ್ವೈಃ ಪಂಥಾನಮನುಗಚ್ಛತಾ ।
ಪ್ರಜಾ ನಿತ್ಯಮನಿದ್ರೇಣ ಯಥಾಶಕ್ತ್ಯಭಿರಕ್ಷಿತಾಃ ॥೬॥

'ನಾನೂ ಕೂಡ ಪೂರ್ವಿಕರು ನಡೆದು ಬಂದ ದಾರಿಯನ್ನು ಅನುಸರಿಸಿ ಸದಾ ಎಚ್ಚರದಿಂದ ಇದ್ದು ಯಥಾಶಕ್ತಿ ಪ್ರಜೆಗಳನ್ನು ರಕ್ಷಿಸಿದ್ದೇನೆ.

ಇದಂ ಶರೀರಂ ಲೋಕಸ್ಯ ಕೃತ್ಸ್ನಸ್ಯ ಚರತಾ ಹಿತಮ್ ।
ಪಾಂಡರಸ್ಯಾತಪತ್ರಸ್ಯ ಚ್ಛಾಯಾಯಾಂ ಜರಿತಂ ಮಯಾ ॥೭॥

'ಶ್ವೇತಚ್ಛತ್ರದ ನೆರಳಿನಲ್ಲಿ ಸಮಸ್ತಲೋಕಕ್ಕೆ ಹಿತವನ್ನುಂಟುಮಾಡುತ್ತಲೇ ನಾನು ನನ್ನ ಈ ಶರೀರವನ್ನು ಜರಾಜೀರ್ಣವಾಗಿಸಿದ್ದೇನೆ.

ಅರ್ಥಾತ್ ಪ್ರಜಾಪಾಲನೆಯನ್ನು ಕಡೆಗಣಿಸಿ ವಿಷಯಾಸಕ್ತಿಯಲ್ಲಿ ಮುಳುಗಲಿಲ್ಲ.

ಪ್ರಾಪ್ಯ ವರ್ಷಸಹಸ್ರಾಣಿ ಬಹೂನ್ಯಾಯೂಂಷಿ ಜೀವತಃ ।
ಜೀರ್ಣಸ್ಯಾಸ್ಯ ಶರೀರಸ್ಯ ವಿಶ್ರಾಂತಿಮಭಿರೋಚಯೇ ॥೮॥

'ಬಹು ಸಹಸ್ರವರ್ಷಗಳ ಆಯುಷ್ಯವನ್ನು ಪಡೆದು ಬದುಕಿ ಜರಾಜೀರ್ಣವಾದ ಈ ಶರೀರಕ್ಕೆ ವಿಶ್ರಾಂತಿಯನ್ನು ಬಯಸುತ್ತಿದ್ದೇನೆ.

ಯಯಾತಿ ರಾಜನಂತೆ ವಿಷಯಭೋಗಕ್ಕಾಗಿ ಪ್ರಜಾಪಾಲನೆಯಿಂದ ನಿವೃತ್ತಿ ಬಯಸುತ್ತಿಲ್ಲ.

ರಾಜಪ್ರಭಾವಜುಷ್ಟಾಂ ಹಿ ದುರ್ವಹಾಮಜಿತೇಂದ್ರಿಯೈಃ ।
ಪರಿಶ್ರಾಂತೋಽಸ್ಮಿ ಲೋಕಸ್ಯ ಗುರ್ವೀಂ ಧರ್ಮಧುರಂ ವಹನ್ ॥೯॥

'ಇಂದ್ರಿಯ ನಿಗ್ರಹವಿಲ್ಲದವರಿಗೆ ಹೊರಲಾಗದಂಥ, ಶೌರ್ಯಾದಿ ರಾಜ ಯೋಗ್ಯ ಪ್ರಭಾವಉಳ್ಳವರಿಗೆ ಮಾತ್ರ ಹೊರಲು ಸಾಧ್ಯವಾಗಿರುವ, ಲೋಕದ ಧರ್ಮರಕ್ಷಣೆಯ ದೊಡ್ಡ ಜವಾಬ್ದಾರಿಯನ್ನು ಇಂದಿನವರೆಗೆ ಸಮರ್ಥವಾಗಿ ಹೊತ್ತು ನಾನೀಗ ಆಯಾಸಗೊಂಡಿದ್ದೇನೆ.

ಸೋಹಂ ವಿಶ್ರಾಮಮಿಚ್ಛಾಮಿ ಪುತ್ರಂ ಕೃತ್ವಾ ಪ್ರಜಾಹಿತೇ ।
ಸನ್ನಿಕೃಷ್ಟಾನಿಮಾನ್ ಸರ್ವಾನನುಮಾನ್ಯ ದ್ವಿಜರ್ಷಭಾನ್ ॥೧೦॥

'ಆತ್ಮೀಯರಾದ ಈ ಎಲ್ಲ ದ್ವಿಜೋತ್ತಮರ ಅನುಮತಿ ಪಡೆದು ಈ ಪ್ರಜಾಹಿತ-ಕಾರ್ಯದಲ್ಲಿ ನನ್ನ ಮಗನನ್ನು ನೇಮಿಸಿ, ವಿಶ್ರಾಂತಿ ಹೊಂದಲು ಬಯಸುತ್ತಿದ್ದೇನೆ.

ಅನುಜಾತೋ ಹಿ ಮಾಂ ಸರ್ವೈರ್ಗುಣೈರ್ಜ್ಯೇಷ್ಠೋ ಮಮಾತ್ಮಜಃ ।
ಪುರಂದರಸಮೋ ವೀರ್ಯೇ ರಾಮಃ ಪರಪುರಂಜಯಃ ॥೧೧॥

'ಶತ್ರುನಗರ ನಾಶಕನಾದ ನನ್ನ ಜ್ಯೇಷ್ಠಪುತ್ರ ರಾಮನು ಪರಾಕ್ರಮದಲ್ಲಿ ಇಂದ್ರನ ಸಮಾನನಾಗಿದ್ದು ನನ್ನೆಲ್ಲ ಗುಣಗಳನ್ನೂ ತನ್ನಲ್ಲಿ ತುಂಬಿಕೊಂಡೇ ಜನಿಸಿದ್ದಾನೆ.

ತಂ ಚಂದ್ರಮಿವ ಪುಷ್ಯೇಣ ಯುಕ್ತಂ ಧರ್ಮಭೃತಾಂ ಪರಮ್ ।
ಯೌವರಾಜ್ಯೇನ ಯೋಕ್ತಾಸ್ಮಿ ಪ್ರೀತಃ ಪುರುಷಪುಂಗವವ್ ॥೧೨॥

'ಧರ್ಮರಕ್ಷಕರಲ್ಲಿ ಶ್ರೇಷ್ಠನಾದ, ಪುಷ್ಯಯುಕ್ತ ಚಂದ್ರನಂತೆ ಬೆಳಗುವ ಪುರುಷೋತ್ತಮನಾದ ನನ್ನ ಜ್ಯೇಷ್ಠಪುತ್ರ ರಾಮನನ್ನು ನಾನು ಯುವರಾಜ ಪದವಿಯಲ್ಲಿ ಅಭಿಷೇಕ ಮಾಡಿ ಸಂತುಷ್ಟನಾಗುವೆನು.

ಅನುರೂಪಃ ಸ ವೈ ನಾಥೋ ಲಕ್ಷ್ಮೀವಾನ್ ಲಕ್ಷ್ಮಣಾಗ್ರಜಃ ।
ತ್ರೈಲೋಕ್ಯಮಪಿ ನಾಥೇನ ಯೇನ ಸ್ಯಾನ್ನಾಥವತ್ತರಮ್ ॥೧೩॥

'ಕಾಂತಿಯುಕ್ತನಾದ ಲಕ್ಷ್ಮಣನ ಅಣ್ಣ ರಾಮನು ನಮ್ಮ ರಾಜ್ಯಕ್ಕೆ ಅನುರೂಪನಾದ ನಾಥ. ಅವನು ನಾಥನಾದರೆ ಮೂಲೋಕವೂ ಕೂಡ ಇನ್ನೂ ಹೆಚ್ಚು ಶ್ರೇಷ್ಠನಾದ ನಾಥನನ್ನು ಪಡೆದಂತಾಗುವುದು.

ಅನೇನ ಶ್ರೇಯಸಾ ಸದ್ಯಃ ಸಂಯೋಕ್ಷ್ಯೇಽಹಮಿಮಾಂ ಮಹೀಮ್ ।
ಗತಕ್ಲೇಶೋ ಭವಿಷ್ಯಾಮಿ ಸುತೇ ತಸ್ಮಿನ್ನಿವೇಶ್ಯ ವೈ ॥೧೪॥

'ಅತ್ಯಂತ ಪ್ರಶಸ್ತ ನಾಥನಾದ ರಾಮನನ್ನು ಈ ಭೂಮಿಗೆ ಯುವರಾಜನನ್ನಾಗಿ ಮಾಡುತ್ತೇನೆ. ಪುತ್ರನಾದ ಅವನ ವಶಕ್ಕೆ ಭೂಮಿಯನ್ನು ವಹಿಸಿಕೊಟ್ಟು ನಾನು ನಿಶ್ಚಿಂತನಾಗುತ್ತೇನೆ.

ಯದೀದಂ ಮೇಽನುರೂಪಾರ್ಥಂ ಮಯಾ ಸಾಧು ಸುಯಂತ್ರಿತಮ್ ।
ಭವಂತೋ ಮೇಽನುಮನ್ಯಂತಾಂ ಕಥಂ ವಾ ಕರವಾಣ್ಯಹಮ್ ॥೧೫॥

'ನನ್ನ ಈ ಪುತ್ರನ ರಾಜ್ಯಾಭಿಷೇಕ ಕಾರ್ಯ ನಾನು ಸರಿಯಾಗಿ ಆಲೋಚಿಸಿ ಕೈಗೊಂಡಿದ್ದಾದರೆ, ನಿಮಗೆ ಅದು ಸಾರ್ಥಕ ಎನಿಸಿದರೆ ನೀವು ನನಗೆ ಅನುಮತಿ ನೀಡಿರಿ. ನಾನು ಹೇಗೆ ಮುಂದುವರಿಯಬೇಕು, ಹೇಳಿ.

ಯದ್ಯಪ್ಯೇಷಾ ಮಮ ಪ್ರೀತಿರ್ಹಿತಮನ್ಯದ್ವಿಚಿಂತ್ಯತಾಮ್ ।
ಅನ್ಯಾ ಮಧ್ಯಸ್ಥಚಿಂತಾ ಹಿ ವಿಮರ್ದಾಭ್ಯಧಿಕೋದಯಾ ॥೧೬॥

'ಯದ್ಯಪಿ ಇದು ನನ್ನ ಸ್ವಂತ ಅಭಿಪ್ರಾಯ. ನನಗೆ ಇಷ್ಟ. ಆದರೂ ಪ್ರಜೆಗಳಿಗೆ ಹಿತಕರವಾದುದು ಬೇರೆಯೇ ಏನಾದರೂ ಇರುವುದಾದರೆ ಸಮಾಲೋಚನೆ ಮಾಡೋಣ. ಏಕೆಂದರೆ ಮಧ್ಯಸ್ಥರಾಗಿ ರಾಗದ್ವೇಷರಹಿತರಾಗಿ ನೀವು ಮಾಡುವ ಸಮಾಲೋಚನೆ ಅನ್ಯಾದೃಶವಿರುತ್ತದೆ. ಅಂಥ ನಿಷ್ಪಕ್ಷಪಾತವಾದ ವಿಚಾರದಿಂದ ಅಧಿಕ ಫಲ ಲಭ್ಯ.'

ಇತಿ ಬ್ರುವಂತಂ ಮುದಿತಾಃ ಪ್ರತ್ಯನಂದನ್ ನೃಪಾ ನೃಪಮ್ ।
ವೃಷ್ಟಿಮಂತಂ ಮಹಾಮೇಘಂ ನರ್ದಂತ ಇವ ಬರ್ಹಿಣಃ ॥೧೭॥

ದಶರಥ ಹೀಗೆ ನುಡಿದಾಗ ಆತ ತನ್ನ ಅಭಿಪ್ರಾಯವನ್ನು ಪ್ರಜೆಗಳ ಮೇಲೆ ಹೇರುತ್ತಿಲ್ಲವೆಂದು ಸಾಮಂತರಾಜರು ಎಲ್ಲರೂ ಸಂತುಷ್ಟರಾಗಿ, ಮಳೆ ಸುರಿಸುವ ದೊಡ್ಡ ಮೋಡವನ್ನು ನವಿಲುಗಳಂತೆ ದಶರಥನನ್ನು ಪ್ರಶಂಸೆ ಮಾಡಿದರು.

ಸ್ನಿಗ್ಧೋಽನುನಾದೀ ಸಂಜಜ್ಞೇ ತತ್ರ ಹರ್ಷಸಮೀರಿತಃ ।
ಜನೌಘೋದ್ಘುಷ್ಟಸನ್ನಾದೋ ವಿಮಾನಂ ಕಂಪಯನ್ನಿವ ॥೧೮॥

ಹರ್ಷೋದ್ಗಾರ ಸಹಿತವಾಗಿ ಜನಸಮೂಹ ಉದ್ಘೋಷಿಸಿದ ಸ್ನೇಹಪೂರ್ಣವಾದ ಆ ಮಹಾಶಬ್ದ ಸಭಾಮಂಟಪವನ್ನು ತುಂಬಿ ಪ್ರತಿಧ್ವನಿಸಿ ಕಂಪಿಸುವಂತೆ ಮಾಡಿತು.

ತಸ್ಯ ಧರ್ಮಾರ್ಥವಿದುಷೋ ಭಾವಮಾಜ್ಞಾಯ ಸರ್ವಶಃ ।
ಬ್ರಾಹ್ಮಣಾ ಜನಮುಖ್ಯಾಶ್ಚ ಪೌರಜಾನಪದೈಃ ಸಹ ॥೧೯॥

ಸಮೇತ್ಯ ಮಂತ್ರಯಿತ್ವಾ ತು ಸಮತಾಂಗತಬುದ್ಧಯಃ ।
ಊಚುಶ್ಚ ಮನಸಾ ಜ್ಞಾತ್ವಾ ವೃದ್ಧಂ ದಶರಥಂ ನೃಪಮ್ ॥೨೦॥

ರಾಮನಿಗೆ ಅಭಿಷೇಕ ಮಾಡಿದರೆ ಅದು ತನಗೆ ಧರ್ಮಸಾಧನ, ಪ್ರಜೆಗಳಿಗೆ ಅರ್ಥಸಾಧನವಾಗುವುದೆಂದು ಭಾವಿಸಿದ್ದ ದಶರಥನ ಈ ಅಭಿಪ್ರಾಯವನ್ನು ತಿಳಿದ

ಬಳಿಕ, ಎಲ್ಲ ಬ್ರಾಹ್ಮಣರೂ ಜನಪ್ರತಿನಿಧಿಗಳೂ ಪೌರ ಹಾಗೂ ಗ್ರಾಮೀಣ ಜನರೂ ಒಟ್ಟಿಗೆ ಸೇರಿ ಮಂತ್ರಾಲೋಚನೆ ಮಾಡಿ, ಒಂದು ನಿರ್ಣಯದಲ್ಲಿ ಒಮ್ಮತಕ್ಕೆ ಬಂದು, ಮತ್ತೆಮತ್ತೆ ವಿಚಾರ ಮಾಡಿ ಖಚಿತ ಪಡಿಸಿಕೊಂಡು, ವೃದ್ಧನಾದ ರಾಜಾ ದಶರಥನಿಗೆ ನುಡಿದರು.

ಕೇಕಯರಾಜನಿಗೆ ದಶರಥ ರಾಜ್ಯಶುಲ್ಕ ಕೊಟ್ಟಿದ್ದನೆಂಬುದು ಯಾರಿಗೂ ತಿಳಿದೇ ಇರಲಿಲ್ಲ ಎನ್ನುವುದು ಸಾಹಸದ ಮಾತು.

ಅನೇಕವರ್ಷಸಾಹಸ್ರೋ ವೃದ್ಧಸ್ತ್ವಮಸಿ ಪಾರ್ಥಿವ ।
ಸ ರಾಮಂ ಯುವರಾಜಾನಮಭಿಷಿಂಚಸ್ವ ಪಾರ್ಥಿವಮ್ ॥೨೧॥

'ರಾಜನೆ, ನೀನು ಅನೇಕ ಸಹಸ್ರ ವರ್ಷಗಳ ವೃದ್ಧನಾಗಿರುವಿ. ಆದರಿಂದ ರಾಜ್ಯಪಾಲನಕ್ಕೆ ಯೋಗ್ಯನಾದ ರಾಮನನ್ನು ಯುವರಾಜನಾಗುವಂತೆ ಅಭಿಷೇಕ ಮಾಡು.

ಇಚ್ಛಾಮೋ ಹಿ ಮಹಾಬಾಹುಂ ರಘುವೀರಂ ಮಹಾಬಲಮ್ ।
ಗಜೇನ ಮಹತಾ ಯಾಂತಂ ರಾಮಂ ಧರ್ತ್ರಾವೃತಾನನಮ್ ॥೨೨॥

'ರಘುವಂಶದ ವೀರ, ಮಹಾಬಾಹು, ಮಹಾಬಲಿ ರಾಮ ಶ್ವೇತಚ್ಛತ್ರದ ಅಡಿಯಲ್ಲಿ ಮಹಾಗಜವನ್ನೇರಿ ಸವಾರಿ ಮಾಡುವುದನ್ನು ನಾವು ನೋಡಬೇಕು.'

ಇತಿ ತದ್ವಚನಂ ಶ್ರುತ್ವಾ ರಾಜಾ ತೇಷಾಂ ಮನಃಪ್ರಿಯಮ್ ।
ಅಜಾನನ್ನಿವ ಜಿಜ್ಞಾಸುರಿದಂ ವಚನಮಬ್ರವೀತ್ ॥೨೩॥

ತನ್ನ ಮನಸ್ಸಿಗೆ ಮುದನೀಡುವ ಅವರ ಈ ಮಾತನ್ನು ಕೇಳಿ, ಏನೂ ತಿಳಿಯದವನಂತೆ, ಅವರ ಅಭಿಪ್ರಾಯವನ್ನು ಸ್ಪಷ್ಟ ತಿಳಿಯಬಯಸಿ ಹೀಗೆ ಹೇಳಿದ.

ಶ್ರುತ್ವೈವ ವಚನಂ ಯನ್ಮೇ ರಾಘವಂ ಪತಿಮಿಚ್ಛಥ ।
ರಾಜಾನಃ ಸಂಶಯೋಽಯಂ ಮೇ ಕಿಮಿದಂ ಬ್ರೂತ ತತ್ತ್ವತಃ ॥೨೪॥

'ರಾಜರೇ, 'ರಾಮನಿಗೆ ಅಭಿಷೇಕ ಮಾಡಲೆ?' ಎಂದು ನಾನು ಹೇಳಿದ್ದನ್ನು ಕೇಳಿದೊಡನೆ ರಾಮ ರಾಜನಾಗಲೆಂದು ಆಶಿಸುತ್ತಿರುವಿರಿ. ಇದೇನು ನಿಜವೆ? ಹೇಳಿರಿ. ನನಗೆ ಸಂಶಯ ಉಂಟಾಗಿದೆ.

ಕಥಂ ನು ಮಯಿ ಧರ್ಮೇಣ ಪೃಥಿವೀಮನುಶಾಸತಿ ।
ಭವಂತೋ ದ್ರಷ್ಟುಮಿಚ್ಛಂತಿ ಯುವರಾಜಂ ಮಮಾತ್ಮಜಮ್ ॥೨೫॥

'ನಾನು ಧರ್ಮದಿಂದ ರಾಜ್ಯಪರಿಪಾಲನ ಮಾಡುತ್ತಿರುವಾಗಲೇ ನೀವು ನನ್ನ ಮಗ ಯುವರಾಜನಾಗುವುದನ್ನು ಹೇಗೆ ನೋಡಬಯಸುತ್ತಿದ್ದೀರಿ?'

ತೇ ತಮೂಚುರ್ಮಹಾತ್ಮಾನಂ ಪೌರಜಾನಪದೈಃ ಸಹ ।
ಬಹವೋ ನೃಪ ಕಲ್ಯಾಣಗುಣಾಃ ಪುತ್ರಸ್ಯ ಸಂತಿ ತೇ ॥೨೬॥

ಮಹಾತ್ಮನಾದ ದಶರಥನಿಗೆ ಪೌರ ಹಾಗೂ ಗ್ರಾಮೀಣ ಪ್ರಜೆಗಳೊಂದಿಗೆ ಆ ಸಾಮಂತ ರಾಜರು ನುಡಿದರು— 'ರಾಜನೆ, ನಿನ್ನ ಮಗನಲ್ಲಿ ಬಹು ಕಲ್ಯಾಣ ಗುಣಗಳಿವೆ.'

ಗುಣಾನ್ ಗುಣವತೋ ದೇವ ದೇವಕಲ್ಪಸ್ಯ ಧೀಮತಃ ।
ಪ್ರಿಯಾನಾನಂದನಾನ್ ಕೃತ್ಸ್ನಾನ್ ಪ್ರವಕ್ಷ್ಯಾಮೋಽದ್ಯ ತಾನ್
ಶೃಣು ॥೨೭॥

'ರಾಜನೆ, ಗುಣಪೂರ್ಣನಾಗಿದ್ದು ದೇವಸಮನಾದ ಧೀಮಂತನಾದ ರಾಮನ ಪ್ರಿಯವಾದ ಆನಂದಕರವಾದ ಆ ಎಲ್ಲ ಗುಣಗಳನ್ನು ಈಗ ನಾವು ಹೇಳುವೆವು ಕೇಳು.

ದಿವ್ಯೈರ್ಗುಣೈಃ ಶಕ್ರಸಮೋ ರಾಮಃ ಸತ್ಯಪರಾಕ್ರಮಃ ।
ಇಕ್ಷ್ವಾಕುಭ್ಯೋಽಪಿ ಸರ್ವೇಭ್ಯೋ ಹ್ಯತಿರಿಕ್ತೋ ವಿಶಾಂಪತೇ ॥೨೮॥

'ರಾಜನೆ, ಎಂದೂ ವಿಫಲವಾಗದೆ ಸಫಲವಾಗುವ ಪರಾಕ್ರಮವುಳ್ಳ ರಾಮನು ದಿವ್ಯಗುಣಗಳಿಂದ ದೇವೇಂದ್ರನಂತಿದ್ದಾನೆ. ಇಕ್ಷ್ವಾಕುವಂಶದವರೆಲ್ಲರಿಗಿಂತ ಶ್ರೇಷ್ಠ-ನಿದ್ದಾನೆ.

ರಾಮಃ ಸತ್ಪುರುಷೋ ಲೋಕೇ ಸತ್ಯಧರ್ಮಪರಾಯಣಃ ।
ಸಾಕ್ಷಾದ್ರಾಮಾದ್ವಿನಿರ್ವೃತ್ತೋ ಧರ್ಮಶ್ಚಾಪಿ ಶ್ರಿಯಾ ಸಹ ॥೨೯॥

'ಲೋಕದಲ್ಲಿ ಸತ್ಪುರುಷನೆಂದರೆ ಸತ್ಯಧರ್ಮಪರಾಯಣನಾದ ರಾಮನೆ. ಸಾಕ್ಷಾತ್ ರಾಮನಿಂದಲೇ ಲೋಕದಲ್ಲಿ ಧರ್ಮ ಅರ್ಥಗಳು ಉಂಟಾಗುತ್ತಿವೆ.

ಪ್ರಜಾಸುಖತ್ವೇ ಚಂದ್ರಸ್ಯ ವಸುಧಾಯಾಃ ಕ್ಷಮಾಗುಣೈಃ ।
ಬುದ್ಧ್ಯಾ ಬೃಹಸ್ಪತೇಸ್ತುಲ್ಯೋ ವೀರ್ಯೇ ಸಾಕ್ಷಾಚ್ಛಚೀಪತೇಃ ॥೩೦॥

'ರಾಮನು ಪ್ರಜೆಗಳಿಗೆ ಆಹ್ಲಾದ ಉಂಟುಮಾಡುವುದರಲ್ಲಿ ಚಂದ್ರನಂತೆ, ಕ್ಷಮಾಗುಣಗಳಿಂದ ಭೂದೇವಿಯಂತೆ, ಬುದ್ಧಿಯಿಂದ ಬೃಹಸ್ಪತಿಯಂತೆ, ಪರಾಕ್ರಮ-ದಲ್ಲಿ ಸಾಕ್ಷಾತ್ ಇಂದ್ರನಂತೇ ಇದ್ದಾನೆ.

ಧರ್ಮಜ್ಞಃ ಸತ್ಯಸಂಧಶ್ಚ ಶೀಲವಾನನಸೂಯಕಃ ।
ಕ್ಷಾಂತಃ ಸಾಂತ್ವಯಿತಾ ಶ್ಲಕ್ಷ್ಣಃ ಕೃತಜ್ಞೋ ವಿಜಿತೇಂದ್ರಿಯಃ ॥೩೧॥

'ಧರ್ಮಜ್ಞ, ಸತ್ಯಸಂಧ, ಶೀಲವಂತ, ಅಸೂಯೆ ಇಲ್ಲದವ, ಕ್ಷಮಾಶೀಲ, ದುಃಖಿ-ಗಳನ್ನು ಸಂತೈಸುವ ಸ್ವಭಾವದವನು, ಪ್ರಿಯಭಾಷಿ, ಕೃತಜ್ಞ, ಜಿತೇಂದ್ರಿಯನು, ಶ್ರೀರಾಮ.

ಮೃದುಶ್ಚ ಸ್ಥಿರಚಿತ್ತಶ್ಚ ಸದಾ ಭವ್ಯೋऽನಸೂಯಕಃ ।
ಪ್ರಿಯವಾದೀ ಚ ಭೂತಾನಾಂ ಸತ್ಯವಾದೀ ಚ ರಾಘವಃ ॥೩೨॥

'ಮೃದುಸ್ವಭಾವದವನು, ಸ್ಥಿರಚಿತ್ತತೆ ಉಳ್ಳವನು, ಸದಾ ಮಂಗಲ ಸ್ವರೂಪ, ಯಾರ ಅಸೂಯೆಗೂ ಪಾತ್ರನಾಗದವನು, ಎಲ್ಲರಿಗೂ ಸತ್ಯವನ್ನೇ ಹೇಳುತ್ತಾನೆ, ಸತ್ಯವನ್ನೂ ಪ್ರಿಯವಾಗಿಯೇ ಹೇಳುತ್ತಾನೆ ಶ್ರೀರಾಮ.

ಬಹುಶ್ರುತಾನಾಂ ವೃದ್ಧಾನಾಂ ಬ್ರಾಹ್ಮಣಾನಾಮುಪಾಸಿತಾ ।
ತೇನಾಸ್ಯೇಹಾತುಲಾ ಕೀರ್ತಿರ್ಯಶಸ್ತೇಜಶ್ಚ ವರ್ಧತೇ ॥೩೩॥

'ಬಹುಶಾಸ್ತ್ರ ಶ್ರವಣ ಮಾಡಿರುವ ವೃದ್ಧರಾದ ಬ್ರಾಹ್ಮಣರನ್ನು ಸೇವಿಸುವವನು ಶ್ರೀರಾಮ. ಅದರಿಂದ ಅವನ ಅತುಲವಾದ ಕೀರ್ತಿ ಯಶಸ್ಸು ತೇಜಸ್ಸು ಈ ಲೋಕದಲ್ಲಿ ಹೆಚ್ಚುತ್ತಿದೆ.

ದೇವಾಸುರಮನುಷ್ಯಾಣಾಂ ಸರ್ವಾಸ್ತ್ರೇಷು ವಿಶಾರದಃ ।
ಸಮ್ಯಗ್ವಿದ್ಯಾವ್ರತಸ್ನಾತೋ ಯಥಾವತ್ ಸಾಂಗವೇದವಿತ್ ॥೩೪॥

'ದೇವ ಅಸುರ ಮನುಷ್ಯರ ಮಧ್ಯದಲ್ಲಿ ಸರ್ವಾಸ್ತ್ರವಿಶಾರದನು ಈತನೆ. ಚೆನ್ನಾಗಿ ವಿದ್ಯಾಭ್ಯಾಸ ಮಾಡಿ ಸ್ನಾತಕನಾಗಿದ್ದಾನೆ, ಯಥಾವತ್ತಾಗಿ ಸಾಂಗ ವೇದಾಭಿಜ್ಞ-ನೆನಿಸಿದ್ದಾನೆ, ಶ್ರೀರಾಮ.

ಗಾಂಧರ್ವೇ ಚ ಭುವಿ ಶ್ರೇಷ್ಠೋ ಬಭೂವ ಭರತಾಗ್ರಜಃ ।
ಕಲ್ಯಾಣಾಭಿಜನಃ ಸಾಧುರದೀನಾತ್ಮಾ ಮಹಾಮತಿಃ ॥೩೫॥

'ಭರತಾಗ್ರಜನಾದ ರಾಮನೆ ಲೋಕದಲ್ಲಿ ಸಂಗೀತದಲ್ಲಿ ಅದ್ವಿತೀಯನಾಗಿದ್ದಾನೆ. ಶುಭವಾದ ಉಭಯ ಕುಲದಲ್ಲಿ ಜನಿಸಿದವನು, ಸಜ್ಜನ, ದೈನ್ಯವಿಲ್ಲದವನು, ಮಹಾಬುದ್ಧಿಶಾಲಿ ಶ್ರೀರಾಮ.

ದ್ವಿಜೈರಭಿವಿನೀತಶ್ಚ ಶ್ರೇಷ್ಠೈರ್ಧರ್ಮಾರ್ಥನೈಪುಣ್ಯೈಃ ।
ಯದಾ ವ್ರಜತಿ ಸಂಗ್ರಾಮಂ ಗ್ರಾಮಾರ್ಥೇ ನಗರಸ್ಯ ವಾ ॥೩೬॥

ಗತ್ವಾ ಸೌಮಿತ್ರಿಸಹಿತೋ ನಾವಿಜಿತ್ಯ ನಿವರ್ತತೇ ।
ಸಂಗ್ರಾಮಾತ್ ಪುನರಾಗಮ್ಯ ಕುಂಜರೇಣ ರಥೇನ ವಾ ॥೩೭॥

ಪೌರಾನ್ ಸ್ವಜನವನ್ನಿತ್ಯಂ ಕುಶಲಂ ಪರಿಪೃಚ್ಛತಿ ।
ಪುತ್ರೇಷ್ವಗ್ನಿಷು ದಾರೇಷು ಪ್ರೇಷ್ಯಶಿಷ್ಯಗಣೇಷು ಚ ॥೩೮॥

ನಿಖಿಲೇನಾನುಪೂರ್ವ್ಯಾ ಚ ಪಿತಾ ಪುತ್ರಾನಿವೌರಸಾನ್ ।
ಶುಶ್ರೂಷಂತೇ ಚ ವಃ ಶಿಷ್ಯಾಃ ಕಚ್ಚಿತ್ ಕರ್ಮಸು ದಂಶಿತಾಃ ॥೩೯॥

ಧರ್ಮ ಅರ್ಥಗಳಲ್ಲಿ ನಿಪುಣರಾದ ಬ್ರಾಹ್ಮಣಶ್ರೇಷ್ಠರಿಂದ ಶಿಕ್ಷಣ ಪಡೆದವನು, ಶ್ರೀರಾಮ. ಗ್ರಾಮದ ಇಲ್ಲವೆ ನಗರದ ಸಲುವಾಗಿ ಲಕ್ಷ್ಮಣ ಸಹಿತನಾಗಿ ಯುದ್ಧಕ್ಕೆ ಹೋಗುವಾಗಲೆಲ್ಲ ಹೋಗಿ, ಜಯ ಸಂಪಾದಿಸದೆ ಹಿಂತಿರುವುಗುವುದಿಲ್ಲ. ಜಯಶಾಲಿಯಾಗಿ ಆನೆಯಿಂದ ಅಥವಾ ರಥದಿಂದ ಹಿಂತಿರುಗಿ ಬಂದು, ಪುನಃ ಪೌರರಲ್ಲಿ, ತನ್ನ ಬಂಧುಗಳಲ್ಲಿ ಹೇಗೋ ಹಾಗೆಯೇ, ಕ್ಷೇಮಸಮಾಚಾರವನ್ನು ನಿತ್ಯ ಕೇಳುತ್ತಾನೆ. ನಮ್ಮ ಮಕ್ಕಳು ಅಗ್ನಿಗಳು ಪತ್ನಿಯರು ಭೃತ್ಯರು ಶಿಷ್ಯರು ಮುಂತಾದ ಎಲ್ಲ ಸಂಬಂಧಿಕರ ಬಗ್ಗೆ ಕ್ರಮವಾಗಿ ವಿಚಾರಿಸಿ ಕ್ಷೇಮಸಮಾಚಾರವನ್ನು ಕೇಳಿ ತಿಳಿಯುತ್ತಾನೆ, ತಂದೆ ಯಾದವನು ತನ್ನ ಔರಸಪುತ್ರನಲ್ಲಿ ಕ್ಷೇಮಸಮಾಚಾರವನ್ನು ತಿಳಿಯುವಂತೆ. ಬ್ರಾಹ್ಮಣರಲ್ಲಿ 'ಶಿಷ್ಯರು ನಿಮ್ಮನ್ನು ಸೇವಿಸುತ್ತಿದ್ದಾರೆ ತಾನೆ?' ಎಂದು ಕೇಳುತ್ತಾನೆ. ಕ್ಷತ್ರಿಯರಲ್ಲಿ 'ಭೃತ್ಯರು ಕವಚ ಧರಿಸಿ ನಿಮ್ಮ ಸೇವೆ ಮಾಡುತ್ತಿದ್ದಾರೆ ತಾನೆ?' ಎಂದು ಕೇಳುತ್ತಾನೆ.

ಇತಿ ನಃ ಪುರುಷವ್ಯಾಘ್ರಃ ಸದಾ ರಾಮೋಽಭಿಭಾಷತೇ ।
ವ್ಯಸನೇಷು ಮನುಷ್ಯಾಣಾಂ ಭೃಶಂ ಭವತಿ ದುಃಖಿತಃ ॥೪೦॥

'ಹೀಗೇ ಪುರುಷೋತ್ತಮನಾದ ಶ್ರೀರಾಮ ಸದಾ ನಮ್ಮೊಡನೆ ಸಂಭಾಷಣ ಮಾಡುತ್ತಾನೆ. ಜನರ ವ್ಯಸನಗಳಲ್ಲಿ ತಾನೂ ಬಲು ದುಃಖಿತನಾಗುತ್ತಾನೆ.

ಉತ್ಸವೇಷು ಚ ಸರ್ವೇಷು ಪಿತೇವ ಪರಿತುಷ್ಯತಿ ।
ಸತ್ಯವಾದೀ ಮಹೇಷ್ವಾಸೋ ವೃದ್ಧಸೇವೀ ಜಿತೇಂದ್ರಿಯಃ ॥೪೧॥

'ಜನರ ಎಲ್ಲ ಸಂತೋಷಗಳಲ್ಲಿಯೂ ತಂದೆಯಂತೆ ಬಹಳ ಸಂತೋಷ ಪಡುತ್ತಾನೆ. ಅವನು ಸದಾ ಸತ್ಯವಾದಿ. ಮಹಾಬಿಲ್ಲಾರ. ಹಿರಿಯರನ್ನು ಸೇವಿಸು-ವವನು, ಇಂದ್ರಿಯನಿಗ್ರಹ ಉಳ್ಳವನು.

ಸ್ಮಿತಪೂರ್ವಾಭಿಭಾಷೀ ಚ ಧರ್ಮಂ ಸರ್ವಾತ್ಮನಾ ಶ್ರಿತಃ ।
ಸಮ್ಯಗ್ಯೋಕ್ತಾ ಶ್ರೇಯಸಾಂ ಚ ನ ವಿಗೃಹ್ಯಕಥಾರುಚಿಃ ॥೪೨॥

'ನಗುನಗುತ್ತ ಮಾತನಾಡುವವನು. ಸರ್ವಾತ್ಮನಾ ಧರ್ಮವನ್ನು ಆಶ್ರಯಿಸಿ ದವನು. ಪ್ರಜೆಗಳಿಗೆ ಬಲು ಒಳ್ಳೆಯದನ್ನೇ ಮಾಡುವವನು. ನಿಷ್ಠುರವಾಗಿ ವಿವಾದ ಮಾಡುವುದರಲ್ಲಿ ಆಸಕ್ತಿ ಇಲ್ಲದವನು.

ಉತ್ತರೋತ್ತರಯುಕ್ತೌ ಚ ವಕ್ತಾ ವಾಚಸ್ಪತಿರ್ಯಥಾ ।
ಸುಭ್ರೂರಾಯತತಾಮ್ರಾಕ್ಷಃ ಸಾಕ್ಷಾದ್ವಿಷ್ಣುರಿವ ಸ್ವಯಮ್ ॥೪೩॥

'ಬೃಹಸ್ಪತಿಯಂತೆ ಕೋಟಿಕ್ರಮದಿಂದ ಮುಂದೆ ಮುಂದೆ ಯುಕ್ತಿಯುಕ್ತವಾಗಿ ಮಾತನಾಡುವವನು. ಸುಂದರವಾದ ಹುಬ್ಬುಗಳುಳ್ಳವನು, ವಿಶಾಲವಾದ ಕೆಂಪಾದ ಕಣ್ಣುಗಳುಳ್ಳವನು. ಸ್ವತಃ ಸಾಕ್ಷಾತ್ ವಿಷ್ಣುವಿನಂತಿರುವವನು ಶ್ರೀರಾಮ.

ರಾಮೋ ಲೋಕಾಭಿರಾಮೋಽಯಂ ಶೌರ್ಯವೀರ್ಯಪರಾಕ್ರಮೈಃ ।
ಪ್ರಜಾಪಾಲನಸಂಯುಕ್ತೋ ನ ರಾಗೋಪಹತೇಂದ್ರಿಯಃ ॥೪೪॥

'ರಾಮನು ಈತ ಶೌರ್ಯವೀರ್ಯ ಪರಾಕ್ರಮಗಳಿಂದ ಲೋಕಕ್ಕೇ ರಮಣೀಯನು. ಪ್ರಜಾಪಾಲನೆಯಲ್ಲಿಯೇ ತನ್ನನ್ನು ತೊಡಗಿಸಿಕೊಂಡವನು. ರಾಗದ್ವೇಷಗಳಿಂದ ಇಂದ್ರಿಯಗಳನ್ನು ಕಲುಷಿತಗೊಳಿಸಿಕೊಂಡವನಲ್ಲ.

ಶಕ್ತಸ್ತ್ರೈಲೋಕ್ಯಮಪ್ಯೇಕೋ ಭೋಕ್ತುಂ ಕಿಂನು ಮಹೀಮಿಮಾಮ್ ।
ನಾಸ್ಯ ಕ್ರೋಧಃ ಪ್ರಸಾದಶ್ಚ ನಿರರ್ಥೋಽಸ್ತಿ ಕದಾಚನ ॥೪೫॥

'ಮೂರೂ ಲೋಕಗಳನ್ನು ರಕ್ಷಿಸಬಲ್ಲವನು. ಈ ಒಂದು ಭೂಲೋಕದ ರಕ್ಷಣೆಯ ಬಗ್ಗೆ ಹೇಳುವುದೇನಿದೆ? ಅವನು ಮುನಿದರೂ ಒಲಿದರೂ ಎಂದೂ ಅದು ನಿರರ್ಥಕವಾಗುವುದೆಂದಿಲ್ಲ.

ಹಂತ್ಯೇವ ನಿಯಮಾದ್ವಧ್ಯಾನವಧ್ಯೇಷು ನ ಕುಪ್ಯತಿ ।
ಯುನಕ್ತ್ಯರ್ಥೈಃ ಪ್ರಹೃಷ್ಟಶ್ಚ ತಮಸೌ ಯತ್ರ ತುಷ್ಯತಿ ॥೪೬॥

'ಯಾರನ್ನು ಕೊಲ್ಲಬೇಕೋ ಅವರನ್ನು ಕೊಂದೇ ಬಿಡುತ್ತಾನೆ. ಯಾರನ್ನು ಕೊಲ್ಲಬಾರದೋ ಅವರಲ್ಲಿ ಕೋಪ ಮಾಡುವುದಿಲ್ಲ. ಅವನು ಯಾರಲ್ಲಿ ಪ್ರಸನ್ನನಾಗುವನೋ ಅವನಿಗೆ ಬಲು ಸಂತೋಷಪಟ್ಟು ಇಷ್ಟಾರ್ಥಗಳನ್ನು ನೀಡುತ್ತಾನೆ.

ಶಾಂತೈಃ ಸರ್ವಪ್ರಜಾಕಾಂತೈಃ ಪ್ರೀತಿಸಂಜನನೈರ್ನೃಣಾಮ್ ।
ಗುಣೈರ್ವಿರೋಚತೇ ರಾಮೋ ದೀಪ್ತಃ ಸೂರ್ಯ ಇವಾಂಶುಭಿಃ ॥೪೭॥

'ಪ್ರಶಾಂತವಾದ ಎಲ್ಲ ಪ್ರಜೆಗಳಿಗೂ ಆಕರ್ಷಕವಾದ ಎಲ್ಲ ಜನರಿಗೂ ಮುದ ನೀಡಬಲ್ಲ ಗುಣಗಳಿಂದ ಬೆಳಗುವ ಶ್ರೀರಾಮನು ಕಿರಣಗಳಿಂದ ಬೆಳಗುವ ಸೂರ್ಯನಂತೆ ಹೊಳೆಯುತ್ತಾನೆ.

ತಮೇವಂ ಗುಣಸಂಪನ್ನಂ ರಾಮಂ ಸತ್ಯಪರಾಕ್ರಮಮ್ ।
ಲೋಕಪಾಲೋಪಮಂ ನಾಥಮಕಾಮಯತ ಮೇದಿನೀ ॥೪೮॥

'ಹೀಗೆ ಗುಣಸಂಪನ್ನನಾಗಿ, ಸತ್ಯಪರಾಕ್ರಮನಾಗಿ ಲೋಕಪಾಲರಿಗೆ ಸಮನಾಗಿರುವ ಶ್ರೀರಾಮ ತನ್ನನ್ನು ಕಾಪಾಡಲಿ' ಎಂದು ಭೂಮಿ ಆಶಿಸಿದೆ.

ವತ್ಸಃ ಶ್ರೇಯಸಿ ಜಾತಸ್ತೇ ದಿಷ್ಟ್ಯಾಸೌ ತವ ರಾಘವ ।
ದಿಷ್ಟ್ಯಾ ಪುತ್ರಗುಣೈರ್ಯುಕ್ತೋ ಮಾರೀಚ ಇವ ಕಶ್ಯಪಃ ॥೪೯॥

'ರಾಜನೆ, ಅದೃಷ್ಟವಶದಿಂದ ಶ್ರೀರಾಮ ಪುತ್ರಗುಣಯುಕ್ತನಾಗಿ ನಿನ್ನ ಒಳಿತಿಗಾಗಿ ನಿನಗೆ ಪುತ್ರನಾಗಿ ಜನಿಸಿದ್ದಾನೆ' ಮರೀಚಿ ಪುತ್ರನಾದ ಕಶ್ಯಪನಂತೆ ನೀನು ಅದೃಷ್ಟವಶದಿಂದ ಪುತ್ರನ ಗುಣಗಳಿಂದ ಶೋಭಿಸುತ್ತಿರುವೆ.

'ಕಶ್ಯಪನು ಇಂದ್ರಉಪೇಂದ್ರರಂಥ ಪುತ್ರರ ಗುಣಗಳಿಂದ ಮೂಲೋಕದಲ್ಲಿ ಪ್ರಸಿದ್ಧನಾಗಿ ಮೆರೆದಂತೆ, ದಶರಥನೂ ಕೂಡ ರಾಮಲಕ್ಷ್ಮಣಾದಿ ಪುತ್ರರ ಗುಣಗಳಿಂದ ಪ್ರಸಿದ್ಧನಾಗಿ ಬೆಳಗುತ್ತಿದ್ದಾನೆ' ಎಂದು ದಶರಥನನ್ನು ಪ್ರಜೆಗಳು ಪ್ರಶಂಸೆ ಮಾಡುತ್ತಿದ್ದಾರೆ. 'ಪುತ್ರನ ಗುಣಗಳಿಂದ ಯುಕ್ತನಾಗಿ ಕಶ್ಯಪನು ಮರೀಚಿ ಪ್ರಜಾಪತಿಗೆ ಪುತ್ರನಾಗಿ ಜನಿಸಿದಂತೆ, ಶ್ರೀರಾಮನೂ ದಶರಥನಿಗೆ ಪುತ್ರನಾಗಿ ಜನಿಸಿದನೆಂ'ದೂ ಈ ಶ್ಲೋಕಕ್ಕೆ ವಿವರಣೆ ಕೊಡಬಹುದು. ಹಾಗೇ ವ್ಯಾಖ್ಯಾನಕಾರರು ಹೇಳಿದ್ದಾರೆ. ಆದರೆ 'ಮಹರ್ಷಿಕಲ್ಪೋ ರಾಜರ್ಷಿಃ' (ವಾ.ರಾ.ಬಾಲ.6.2)

ಎಂಬಂತೆ ರಾಜರ್ಷಿಯಾದ ದಶರಥನಿಗೆ ಕಶ್ಯಪಋಷಿಯ ದೃಷ್ಟಾಂತ ಹೆಚ್ಚು ಸೂಕ್ತವೆನಿಸುತ್ತದೆ. ಏಕೆಂದರೆ,

ಕಾಶ್ಯಪಸ್ಯ ವರೋ ದತ್ತಸ್ತಪಸಾ ತೋಷಿತೇನ ಮೇ ।
ಯಾಚಿತಃ ಪುತ್ರಭಾವಾಯ ತಥೇತ್ಯಂಗೀಕೃತಂ ಮಯಾ ॥
ಸ ಇದಾನೀಂ ದಶರಥೋ ಭೂತ್ವಾ ತಿಷ್ಠತಿ ಭೂತಲೇ ॥

(ಅಧ್ಯಾತ್ಮರಾಮಾಯಣ ಬಾಲಕಾಂಡ 2–55,56)

ಎಂದು ಹೇಳಿದಂತೆ ದಶರಥನು ಕಶ್ಯಪ ಋಷಿಯ ಅವತಾರ ಎನ್ನುವುದರ ಸೂಚನೆ ಇಲ್ಲಿ ಕಾಣುತ್ತದೆ.

ಸ ಕಶ್ಯಪಸ್ಯಾದಿತಿಗರ್ಭಜನ್ಮನೋ
ವಿವಸ್ವತಸ್ತಂತುಭವಸ್ಯ ಭೂಭೃತಃ ।
ಗೃಹೇ ದಶಸ್ಯಂದನನಾಮಿನೋಽಭೂತ್
ಕೌಸಲ್ಯಕಾನಾಮ್ನಿ ತದರ್ಥಿತೇಷ್ಟಃ ॥

(ಮಹಾಭಾರತ ತಾತ್ಪರ್ಯನಿರ್ಣಯ 3.63)

ಎಂದು 'ನಿರ್ಣಯದಲ್ಲಿ ದಶರಥನು ಸೂರ್ಯವಂಶದಲ್ಲಿ ಹುಟ್ಟಿದವನು' ಎಂದು ಹೇಳುವಾಗ ಸೂರ್ಯನನ್ನು ಕಶ್ಯಪಪುತ್ರನೆಂದು ವಿಶೇಷಣ ಕೊಟ್ಟು ಹೇಳಿದ್ದು ದಶರಥನು ಕಶ್ಯಪಗೋತ್ರದವನೆಂ'ದೂ ಕಶ್ಯಪನ ಅವತಾರವೆಂದೂ ಸೂಚನೆಗಾಗಿ ಎಂದು ಗ್ರಹಿಸಲು ಅವಕಾಶ ಉಂಟು.

ಯಥಾ ಮನುರ್ಮಹಾತೇಜಾ ಲೋಕಸ್ಯ ಪರಿರಕ್ಷಿತಾ ।
ತಥಾ ದಶರಥೋ ರಾಜಾ ಲೋಕಸ್ಯ ಪರಿರಕ್ಷಿತಾ ॥ (ವಾ.ರಾ.ಬಾಲ.6.4)

'ಮನುಮಹಾರಾಜನಂತೆ ದಶರಥಮಹಾರಾಜ'ನೆಂದು ಮನು ದೃಷ್ಟಾಂತವೂ ಉಕ್ತವಾಗಿದೆ.

ಅಸ್ಯಾಭೂತ್ ಪ್ರಥಮಂ ಜನ್ಮ ಮನೋಃ ಸ್ವಾಯಂಭುವಸ್ಯ ಚ ।
ರಘೂಣಾಮನ್ವಯೇ ಪೂರ್ವಂ ರಾಜಾ ದಶರಥೋ ಹ್ಯಭೂತ್ ॥

(ಪಾದ್ಮ ಉತ್ತರಖಂಡ 242.8,9)

ಎಂಬಂತೆ ದಶರಥನು ಸ್ವಾಯಂಭುವ ಮನುವಿನ ಅವತಾರವೆನ್ನ ಬೇಕಾಗುತ್ತದೆ.

ರಾಜಾ ದಶರಥಃ ಪೂರ್ವಂ ಮನುಃ ಸ್ವಾಯಂಭುವಃ ಸ್ಮೃತಃ ।

ಎಂದೂ ನಾರಾಯಣ ಪಂಡಿತಾಚಾರ್ಯರ ಅಂಶಾವತಾರವಚನವು ಹಾಗೇ ಹೇಳಿದೆ.

ಭವಿಷ್ಯದಂತರೇ ಭೂತ್ವಾ ಮನುರ್ವೈವಸ್ವತೋ ಭವಾನ್ ।
ಪುನರ್ದಶರಥೋ ಭೂತ್ವಾ ತ್ವಮೇವಾಸಿ ಪಿತಾ ಮಮ ॥

ಎನ್ನುವ ವಾಮನ ಪುರಾಣವಚನ ಪ್ರಕಾರ ನೋಡಿದರೆ ದಶರಥ ವೈವಸ್ವತ ಮನುವಿನ ಅವತಾರ.

ಯಥಾಮನುರ್ಮಹಾತೇಜಾ ಲೋಕಸ್ಯ ಪರಿರಕ್ಷಿತಾ ।

ಎಂಬ ವಾಲ್ಮೀಕಿ ವಚನದಲ್ಲಿ 'ಮನುಮಹಾರಾಜ'ನೆಂದರೆ ವೈವಸ್ವತ ಮನುವೂ ಆಗಬಹುದು.

ಹೀಗಾಗಿ ದಶರಥನ ಅವತಾರ ನಿರ್ಣಯ ಕಷ್ಟವಿದೆ. ಅದಕ್ಕೆ ಶ್ರೀಸತ್ಯ ಧರ್ಮ-ತೀರ್ಥರು ಭಾಗವತ ಟೀಕೆಯಲ್ಲಿ 'ಕಶ್ಯಪಋಷಿಯೇ ದಶರಥ, ಅವನಲ್ಲಿ ಸ್ವಾಯಂಭುವಮನು ಹಾಗೂ ವೈವಸ್ವತಮನುಗಳಿಬ್ಬರ ಅಂಶಗಳಿದ್ದುವೆಂದು ತಿಳಿಯುವುದು ಸೂಕ್ತವೆಂ'ದಿದ್ದಾರೆ. ಅದರಿಂದ ಮಹಾತ್ಮ ರಾಜರ್ಷಿಯಾದ ದಶರಥನು ಸ್ತ್ರೀವ್ಯಾಮೋಹದಲ್ಲಿ ಸಿಲುಕಿದವನು, ಕೈಕೇಯಿಯ ಮಾತಿನಂತೆ ರಾಮನನ್ನು ಕಾಡಿಗೆ ಕಳಿಸಿದನೆಂದು ನಿಷ್ಕಾರಣವಾಗಿ ಭಾವಿಸುವುದು ಉಚಿತವಾಗಿ ಕಾಣುವುದಿಲ್ಲ.

ಬಲಮಾರೋಗ್ಯಮಾಯುಶ್ಚ ರಾಮಸ್ಯ ವಿದಿತಾತ್ಮನಃ ।
ದೇವಾಸುರಮನುಷ್ಯೇಷು ಗಂಧರ್ವೇಷೂರಗೇಷು ಚ ॥೫೦॥

ಆಶಂಸತೇ ಜನಃ ಸರ್ವೋ ರಾಷ್ಟ್ರೇ ಪುರವರೇ ತಥಾ ।
ಆಭ್ಯಂತರಶ್ಚ ಬಾಹ್ಯಶ್ಚ ಪೌರಜಾನಪದೋ ಜನಃ ॥೫೧॥

'ದೇವ–ಅಸುರ–ಋಷಿ–ಗಂಧರ್ವ–ನಾಗ ಲೋಕಗಳಲ್ಲಿ ರಾಷ್ಟ್ರ ಹಾಗೂ ಪಟ್ಟಣಗಳಲ್ಲಿ, ಅಂತಃಪುರದಲ್ಲಿರುವವನು ಹೊರಗಿರುವವನು ಎಂಬ ಭೇದವಿಲ್ಲದೆ ಪ್ರತಿಯೊಬ್ಬ ಪೌರ ಗ್ರಾಮೀಣ ವ್ಯಕ್ತಿಯೂ ಕೂಡ, ''ಶೀಲವಂತನೆಂದು ಪ್ರಸಿದ್ಧ-ನಾದ ರಾಮನಿಗೆ ಇನ್ನೂ ಹೆಚ್ಚಿನ ಬಲ ಆರೋಗ್ಯ ಆಯುಸ್ಸು ಉಂಟಾಗಲೆಂ''ದು ಹಾರೈಸುತ್ತಾನೆ.

ಸ್ತ್ರಿಯೋ ವೃದ್ಧಾಸ್ತರುಣ್ಯಶ್ಚ ಸಾಯಂ ಪ್ರಾತಃ ಸಮಾಹಿತಾಃ ।
ಸರ್ವಾನ್ ದೇವಾನ್ನಮಸ್ಯಂತಿ ರಾಮಸ್ಯಾರ್ಥೇ ಮನಸ್ವಿನಃ ॥೫೨॥

'ವೃದ್ಧಸ್ತ್ರೀಯರಾಗಲಿ ತರುಣಿಯರಾಗಲಿ ಎಲ್ಲರೂ ಸಂಜೆ ಮುಂಜಾನೆಗಳಲ್ಲಿ ಒಮ್ಮನದಿಂದ ಜ್ಞಾನಿಯಾದ ರಾಮನ ಒಳಿತಿಗಾಗಿ ದೇವರಿಗೆ ಕೈಮುಗಿಯುತ್ತಾರೆ.

ತೇಷಾಂ ತದ್ಯಾಚಿತಂ ದೇವ ತ್ವತ್ಪ್ರಸಾದಾತ್ ಸಮೃಧ್ಯತಾಮ್ ।
ರಾಮಮಿಂದೀವರಶ್ಯಾಮಂ ಸರ್ವಶತ್ರುನಿಬರ್ಹಣಮ್ ।
ಪಶ್ಯಾಮೋ ಯೌವರಾಜ್ಯಸ್ಥಂ ತವ ರಾಜೋತ್ತಮಾತ್ಮಜಮ್ ॥೫೩॥

'ಅವರೆಲ್ಲರ ಕೋರಿಕೆ ನಿನ್ನ ಅನುಗ್ರಹದಿಂದ ಈಡೇರಲಿ. ರಾಜಶ್ರೇಷ್ಠನೆ, ಕನ್ನೈದಿಲೆಯಂತೆ ಶ್ಯಾಮವರ್ಣನಾದ ಸರ್ವಶತ್ರು ವಿನಾಶಕನಾದ ನಿನ್ನ ಪುತ್ರ ಶ್ರೀರಾಮ ಯುವರಾಜನಾಗುವುದನ್ನು ನಾವು ಕಾಣಬೇಕು.

ತಂ ದೇವದೇವೋಪಮಮಾತ್ಮಜಂ ತೇ
ಸರ್ವಸ್ಯ ಲೋಕಸ್ಯ ಹಿತೇ ನಿವಿಷ್ಟಂ ।
ಹಿತಾಯ ನಃ ಕ್ಷಿಪ್ರಮುದಾರಜುಷ್ಟಂ
ಮುದಾಭಿಷೇಕ್ತುಂ ವರದ ತ್ವಮರ್ಹಸಿ ॥೫೪॥

'ವರದಾಯಕನೆ, ಸರ್ವಲೋಕಕ್ಕೆ ಹಿತೈಷಿಯಾದ ದೇವೋತ್ತಮರಿಂದ ಸೇವ್ಯನಾದ ದೇವದೇವ ವಿಷ್ಣುವಿನಂತಿರುವ ನಿನ್ನ ಮಗನನ್ನು ನಮ್ಮ ಹಿತಕ್ಕಾಗಿ ರಾಜಸಿಂಹಾಸನ-ದಲ್ಲಿ ಬೇಗನೆ ಅಭಿಷೇಕ ಮಾಡು.'

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಎರಡನೇ ಸರ್ಗ ಮುಗಿಯಿತು.

ತೃತೀಯಃ ಸರ್ಗಃ

ಸರ್ಗ – 3

ಪಟ್ಟಾಭಿಷೇಕಕ್ಕೆ ಸಿದ್ಧತೆ. ಶ್ರೀರಾಮನಿಗೆ ದಶರಥನ ಉಪದೇಶ.

ತೇಷಾಮಂಜಲಿಪದ್ಮಾನಿ ಪ್ರಗೃಹೀತಾನಿ ಸರ್ವಶಃ ।
ಪ್ರತಿಗೃಹ್ಯಾಬ್ರವೀದ್ರಾಜಾ ತೇಭ್ಯಃ ಪ್ರಿಯಹಿತಂ ವಚಃ ॥೧॥

ಅವರು ಎಲ್ಲರೂ ಕಮಲದ ಮೊಗ್ಗಿನಂತೆ ಕರಗಳನ್ನು ಜೋಡಿಸಿದಾಗ ರಾಜಾ ದಶರಥ ಅದನ್ನು ಸ್ವೀಕರಿಸಿ ಅವರಿಗೆ ಪ್ರಿಯವೂ ಹಿತವೂ ಆದ ಮಾತನ್ನಾಡಿದ.

ಅಹೋಽಸ್ಮಿ ಪರಮಪ್ರೀತಃ ಪ್ರಭಾವಶ್ಚಾತುಲೋ ಮಮ ।
ಯನ್ಮೇ ಜ್ಯೇಷ್ಠಂ ಪ್ರಿಯಂ ಪುತ್ರಂ ಯೌವರಾಜ್ಯಸ್ಥಮಿಚ್ಛಥ ॥೨॥

'ಆಶ್ಚರ್ಯ! ನನಗೀಗ ಪರಮಾನಂದವಾಯಿತು. ನನ್ನ ಪ್ರಭುಶಕ್ತಿ ಇನ್ನೂ ಅನುಪಮವಾಯಿತು. ಏಕೆಂದರೆ ಜ್ಯೇಷ್ಠನೂ ಪ್ರಿಯನೂ ಆಗಿರುವ ನನ್ನ ಮಗನಿಗೆ ಯುವರಾಜಪಟ್ಟ ನೀಡಲು ಬಯಸುತ್ತಿರುವಿರಿ.'

ಇತಿ ಪ್ರತ್ಯರ್ಚ್ಯ ತಾನ್ರಾಜಾ ಬ್ರಾಹ್ಮಣಾನಿದಮಬ್ರವೀತ್ ।
ವಸಿಷ್ಠಂ ವಾಮದೇವಂ ಚ ತೇಷಾಮೇವೋಪಶೃಣ್ವತಾಮ್ ॥೩॥

ಹೀಗೆ ಅವರನ್ನು ಪ್ರತಿಯಾಗಿ ಅಭಿನಂದಿಸಿ ಅವರು ಕೇಳುತ್ತಿದ್ದಂತೆಯೇ ಬ್ರಾಹ್ಮಣರಿಗೂ ವಶಿಷ್ಠ ವಾಮದೇವರಿಗೂ ನುಡಿದ, ದಶರಥರಾಜ.

ಚೈತ್ರಃ ಶ್ರೀಮಾನಯಂ ಮಾಸಃ ಪುಣ್ಯಃ ಪುಷ್ಪಿತಕಾನನಃ ।
ಯೌವರಾಜ್ಯಾಯ ರಾಮಸ್ಯ ಸರ್ವಮೇವೋಪಕಲ್ಪ್ಯತಾಮ್ ॥೪॥

'ಇದೀಗ ಪುಣ್ಯಕರವಾದ ಚೈತ್ರಮಾಸ. ಬಲು ಸುಂದರವಾಗಿದೆ. ಕಾಡಿನಲ್ಲಿ ಹೂ ಅರಳುವ ಕಾಲವಿದು. ರಾಮನ ಯುವರಾಜಾಭಿಷೇಕಕ್ಕೆ ಎಲ್ಲ ಸಿದ್ಧತೆಗಳನ್ನೂ ನಡೆಸಿರಿ' ಎಂದು.

ರಾಜ್ಞಸ್ತೂಪರತೇ ವಾಕ್ಯೇ ಜನಘೋಷೋ ಮಹಾನಭೂತ್ ।
ಶನೈಸ್ತಸ್ಮಿನ್ ಪ್ರಶಾಂತೇ ಚ ಜನಘೋಷೇ ನರಾಧಿಪಃ ॥೫॥

ವಸಿಷ್ಠಂ ಮುನಿಶಾರ್ದೂಲಂ ರಾಜಾ ವಚನಮಬ್ರವೀತ್ ।
ಅಭಿಷೇಕಾಯ ರಾಮಸ್ಯ ಯತ್ಕರ್ಮ ಸಪರಿಚ್ಛದಮ್ ॥೬॥

ತದದ್ಯ ಭಗವನ್ ಸರ್ವಮಾಜ್ಞಾಪಯಿತುಮರ್ಹತಿ ।
ತಚ್ಛ್ರುತ್ವಾ ಭೂಮಿಪಾಲಸ್ಯ ವಸಿಷ್ಠೋ ದ್ವಿಜಸತ್ತಮಃ ॥೭॥

ಆದಿದೇಶಾಗ್ರತೋ ರಾಜ್ಞಃ ಸ್ಥಿತಾನ್ ಯುಕ್ತಾನ್ ಕೃತಾಂಜಲೀನ್ ।
ಸುವರ್ಣಾದೀನಿ ರತ್ನಾನಿ ಬಲೀನ್ ಸರ್ವೌಷಧೀರಪಿ ॥೮॥

ಶುಕ್ಲಮಾಲ್ಯಾನಿ ಲಾಜಾಂಶ್ಚ ಪೃಥಕ್ಚ ಮಧುಸರ್ಪಿಷೀ ।
ಅಹತಾನಿ ಚ ವಾಸಾಂಸಿ ರಥಂ ಸರ್ವಾಯುಧಾನ್ಯಪಿ ॥೯॥

ಚತುರಂಗಬಲಂ ಚೈವ ಗಜಂ ಚ ಶುಭಲಕ್ಷಣಮ್ ।
ಚಾಮರವ್ಯಜನೇ ಶ್ವೇತೇ ಧ್ವಜಂ ಛತ್ರಂ ಚ ಪಾಂಡುರಮ್ ॥೧೦॥

ಶತಂ ಚ ಶಾತಕುಂಭಾನಾಂ ಕುಂಭಾನಾಮಗ್ನಿವರ್ಚಸಾಮ್ ।
ಹಿರಣ್ಯಶೃಂಗಮೃಷಭಂ ಸಮಗ್ರಂ ವ್ಯಾಘ್ರಚರ್ಮ ಚ ॥೧೧॥

ಉಪಸ್ಥಾಪಯತ ಪ್ರಾತರಗ್ನ್ಯಾಗಾರಂ ಮಹೀಪತೇಃ ।
ಯಚ್ಚಾನ್ಯತ್ ಕಿಂಚಿದೇಷ್ಟವ್ಯಂ ತತ್ಸರ್ವಮುಪಕಲ್ಪ್ಯತಾಮ್ ॥೧೨॥

ರಾಜನ ಮಾತು ಮುಗಿಯುತ್ತಿದ್ದಂತೆಯೇ ಅಭಿಷೇಕ ಸಿದ್ಧತೆಯ ಬಗ್ಗೆ ಕೇಳಿ ಉತ್ಸಾಹದಿಂದ ಜನರು ಭಲೇ ಭಲೇ ಎಂದು ದೊಡ್ಡ ಘೋಷ ಮಾಡಿದರು. ನಿಧಾನವಾಗಿ ಜನರ ಘೋಷ ಶಾಂತವಾದಾಗ ಮುನಿಶ್ರೇಷ್ಠರಾದ ವಸಿಷ್ಠ ವಾಮ ದೇವರಿಗೆ ಜನರಂಜಕನಾದ ರಾಜ ನುಡಿ. ''ಪೂಜ್ಯರೇ, ರಾಮನ ಅಭಿಷೇಕಕ್ಕೆ ಮೊದಲಿಗೆ ಮಾಡಬೇಕಾಗಿರುವ ಕರ್ಮವನ್ನೂ ಅದಕ್ಕೆ ಬೇಕಾಗುವ ಸಲಕರಣೆ–ಗಳನ್ನೂ ಎಲ್ಲವನ್ನೂ ತಾವು ಆಜ್ಞಾಪಿಸಿರಿ' ಎಂದು. ರಾಜನ ಮಾತನ್ನು ಕೇಳಿ ಮುನಿಶ್ರೇಷ್ಠರಾದ ವಸಿಷ್ಠರು ರಾಜನ ಸಮ್ಮುಖದಲ್ಲಿ ಸನ್ನದ್ಧರಾಗಿ ಕೈಮುಗಿದು ನಿಂತಿದ್ದ ಮಂತ್ರಿಗಳಿಗೆ ಹೇಳಿದರು. 'ಸುವರ್ಣಾದಿ ಶ್ರೇಷ್ಠಪದಾರ್ಥಗಳನ್ನೂ ಪೂಜಾದ್ರವ್ಯಗಳನ್ನು, ಅಭಿಷೇಕಕ್ಕೆ ಬೇಕಾಗುವ ಎಲ್ಲ ಓಷಧಿ ದ್ರವ್ಯಗಳನ್ನೂ ಬಿಳಿ ಹೂಮಾಲೆ, ಅರಳು, ಜೇನು, ತುಪ್ಪ, ನೂತನ ವಸ್ತ್ರಗಳು, ರಥ, ಸರ್ವಆಯುಧ–ಗಳು, ಚತುರಂಗ ಸೈನ್ಯ, ಶುಭಲಕ್ಷಣ ಉಳ್ಳ ಆನೆ, ಬಿಳಿಯಾದ ಚಾಮರ, ಬೀಸಣಿಗೆಗಳು, ಧ್ವಜ, ಶ್ವೇತಚ್ಛತ್ರ, ಬೆಂಕಿಯಂತೆ ಹೊಳೆಯುವ ನೂರಾರು ಚಿನ್ನದ

ಕೊಡಗಳು, ಚಿನ್ನದ ಆಭರಣಗಳಿಂದ ಅಲಂಕೃತವಾದ ಕೋಡುಗಳುಳ್ಳ ಎತ್ತು, ಉಗುರು ಮುಂತಾದವುಗಳಿಂದ ಕೂಡಿದ ಹುಲಿಯ ಚರ್ಮ ಇವೆಲ್ಲವನ್ನೂ ಬೇರೆ ಏನಾದರೂ ಆವಶ್ಯಕವಾಗುವ ಪದಾರ್ಥಗಳನ್ನೂ ಎಲ್ಲವನ್ನೂ ಪ್ರಾತಃಕಾಲದಲ್ಲಿ ರಾಜನ ಅಗ್ನಿಶಾಲೆಯಲ್ಲಿ ಇರಿಸಿರಿ' ಎಂದು.

ಅಂತಃಪುರಸ್ಯ ದ್ವಾರಾಣಿ ಸರ್ವಸ್ಯ ನಗರಸ್ಯ ಚ ।
ಚಂದನಸ್ರಗ್ಭಿರರ್ಚ್ಯಂತಾಂ ಧೂಪೈಶ್ಚ ಘ್ರಾಣಹಾರಿಭಿಃ ॥೧೩॥

'ಅಂತಃಪುರದ ದ್ವಾರಗಳನ್ನೂ ನಗರದ ಎಲ್ಲ ದ್ವಾರಗಳನ್ನೂ ಗಂಧಮಾಲ್ಯಗಳಿಂದ ಮತ್ತು ಮೂಗಿಗೆ ಆಹ್ಲಾದಕರವಾದ ಧೂಪಗಳಿಂದ ಸಿಂಗರಿಸಿರಿ.

ಪ್ರಶಸ್ತಮನ್ನಂ ಗುಣವದ್ದಧಿಕ್ಷೀರೋಪಸೇಚನಮ್ ।
ದ್ವಿಜಾನಾಂ ಶತಸಾಹಸ್ರಂ ಯತ್ ಪ್ರಕಾಮಮಲಂ ಭವೇತ್ ॥೧೪॥
ಸತ್ಕೃತ್ಯ ದ್ವಿಜಮುಖ್ಯಾನಾಂ ಶ್ವಃ ಪ್ರಭಾತೇ ಪ್ರದೀಯತಾಮ್ ।
ಘೃತಂ ದಧಿ ಚ ಲಾಜಾಶ್ಚ ದಕ್ಷಿಣಾಶ್ಚಾಪಿ ಪುಷ್ಕಲಾಃ ॥೧೫॥

'ಲಕ್ಷ ಮಂದಿ ಬ್ರಾಹ್ಮಣರಿಗೆ ಯಥೇಚ್ಛ ಉಣಿಸಲು ಎಷ್ಟು ಬೇಕಾಗುವುದೋ ಅಷ್ಟು ಒಳ್ಳೆಯ ಮೊಸರು ಹಾಲು ತುಪ್ಪಗಳಿಂದ ಯುಕ್ತವಾದ ಒಳ್ಳೆಯ ಅನ್ನವನ್ನು ನಾಳೆ ಬೆಳಿಗ್ಗೆ ಉತ್ತಮ ಬ್ರಾಹ್ಮಣರಿಗೆ ಸತ್ಕಾರಪೂರ್ವಕ ಉಣಬಡಿಸಿರಿ. ಜೊತೆಗೆ ಪುಷ್ಕಳವಾದ ತುಪ್ಪ ಮೊಸರು ಅರಳುಗಳನ್ನೂ ದಕ್ಷಿಣೆಗಳನ್ನೂ ದಾನ ಮಾಡಿರಿ.

ಸೂರ್ಯೇऽಭ್ಯುದಿತಮಾತ್ರೇ ಶ್ವೋ ಭವಿತಾ ಸ್ವಸ್ತಿವಾಚನಮ್ ।
ಬ್ರಾಹ್ಮಣಾಶ್ಚ ನಿಮಂತ್ರ್ಯಂತಾಂ ಕಲ್ಪ್ಯಂತಾಮಾಸನಾನಿ ಚ ॥೧೬॥

'ನಾಳೆ ಬೆಳಿಗ್ಗೆ ಸೂರ್ಯೋದಯವಾಗುತ್ತಿದ್ದಂತೆಯೇ ಸ್ವಸ್ತಿವಾಚನವಾಗಬೇಕು. ಅದಕ್ಕೆ ಬ್ರಾಹ್ಮಣರನ್ನು ಆಹ್ವಾನಿಸಿರಿ. ಅವರಿಗೆ ಆಸನಗಳನ್ನು ಸಜ್ಜು ಗೊಳಿಸಿರಿ.

ಆಬಧ್ಯಂತಾಂ ಪತಾಕಾಶ್ಚ ರಾಜಮಾರ್ಗಶ್ಚ ಸಿಚ್ಯತಾಮ್ ।
ಸರ್ವೇ ಚ ತಾಲಾವಚರಾ ಗಣಿಕಾಶ್ಚ ಸ್ವಲಂಕೃತಾಃ ॥೧೭॥

ಕಕ್ಷ್ಯಾಂ ದ್ವಿತೀಯಾಮಾಶ್ರಿತ್ಯ ತಿಷ್ಠಂತು ನೃಪವೇಶ್ಮನಃ ॥೧೮॥

'ಪತಾಕೆಗಳನ್ನು ಕಟ್ಟಿರಿ. ರಾಜಮಾರ್ಗದಲ್ಲಿ ನೀರು ಚುಮುಕಿಸಿರಿ. ಎಲ್ಲ ನರ್ತಕರೂ ವೇಶ್ಯೆಯರೂ ಅರಮನೆಯ ಹೊರ ಅಂಗಣದಲ್ಲಿ ಚೆನ್ನಾಗಿ ಅಲಂಕೃತರಾಗಿ ಉಪಸ್ಥಿತರಾಗಿರಲಿ.

ಒಳ ಅಂಗಣದಲ್ಲಿ ಅಭಿಷೇಕ ನಡೆಯುವುದರಿಂದ ಅಲ್ಲಿ ಬ್ರಾಹ್ಮಣರು ಮಾತ್ರ ಇರಬೇಕು.

ದೇವಾಯತನಚೈತ್ಯೇಷು ಸಾನ್ನಭಕ್ಷ್ಯಾಃ ಸದಕ್ಷಿಣಾಃ ।
ಉಪಸ್ಥಾಪಯಿತವ್ಯಾಃ ಸ್ಯುರ್ಮಾಲ್ಯಯೋಗ್ಯಾಃ ಪೃಥಕ್ ಪೃಥಕ್ ॥೧೯॥

'ದೇವಾಲಯ–ಯಜ್ಞಶಾಲೆಗಳಲ್ಲಿ ಬೇರೆಬೇರೆಯಾಗಿ ಅನ್ನಭಕ್ಷ್ಯಗಳನ್ನು ದಕ್ಷಿಣೆಗಳನ್ನು ಗಂಧಮಾಲ್ಯಾದಿಗಳನ್ನೂ ದಾನಯೋಗ್ಯರಾದ ಬ್ರಾಹ್ಮಣರಿಗೆ ನೀಡಿ ಸಂತರ್ಪಣೆ ನಡೆಸಬೇಕು.

ದೀರ್ಘಾಸಿಬದ್ಧಾ ಯೋಧಾಶ್ಚ ಸನ್ನದ್ಧಾ ಮೃಷ್ಟವಾಸಸಃ ।
ಮಹಾರಾಜಾಂಗಣಂ ಸರ್ವೇ ಪ್ರವಿಶಂತು ಮಹೋದಯಮ್ ॥೨೦॥

'ಶುಭ್ರವಸ್ತ್ರಾಭರಣಭೂಷಿತರಾಗಿ ನೀಳವಾದ ಕತ್ತಿ ಗುರಾಣಿಗಳನ್ನು ಧರಿಸಿ ಸನ್ನದ್ಧರಾಗಿರುವ ಎಲ್ಲ ಕ್ಷತ್ರಿಯವೀರರು ಭವ್ಯವಾದ ಮಹಾರಾಜಾಂಗಣವನ್ನು ಪ್ರವೇಶಿಸಲಿ.'

ಏವಂ ವ್ಯಾದಿಶ್ಯ ವಿಪ್ರೌ ತೌ ಕ್ರಿಯಾಸ್ತತ್ರ ಸುನಿಷ್ಠಿತೌ ।
ಚಕ್ರತುಶ್ಚೈವ ಯಚ್ಚೇಷಂ ಪಾರ್ಥಿವಾಯ ನಿವೇದ್ಯ ಚ ॥೨೧॥

ಕೃತಮಿತ್ಯೇವ ಚಾಬ್ರೂತಾಮಭಿಗಮ್ಯ ಜಗತ್ಪತಿಮ್ ।
ಯಥೋಕ್ತವಚನಂ ಪ್ರೀತೌ ಹರ್ಷಯುಕ್ತೌ ದ್ವಿಜರ್ಷಭೌ ॥೨೨॥

ಹೀಗೆ ಒಳ್ಳೆಯ ನಿಷ್ಠೆಉಳ್ಳ ವಸಿಷ್ಠ–ವಾಮದೇವರು ಪುರೋಹಿತ ವರ್ಗವರಿಗೆ ಅವರವರ ಕರ್ತವ್ಯ ಕರ್ಮಗಳನ್ನೂ ಪರಿಚಾರಕವರ್ಗದವರಿಗೆ ಅವರವರ ಕೆಲಸಗಳನ್ನೂ ವಹಿಸಿಕೊಟ್ಟು ಉಳಿದುದನ್ನು ತಾವೂ ರಾಜನಿಗೆ ನಿವೇದಿಸಿ ಮಾಡಿದರು. ನೀವು ಹೇಳಿದಂತೆ ಎಲ್ಲ ವ್ಯವಸ್ಥೆ ಏರ್ಪಾಡಾಯಿತೆಂದು ರಾಜನ ಬಳಿ ಸಾರಿ ಅವನಿಗೆ ಸಂತೋಷದಿಂದ ಅರಳಿದ ಮುಖದಿಂದ ನುಡಿದರು.

ತತಃ ಸುಮಂತ್ರಂ ದ್ಯುತಿಮಾನ್ ರಾಜಾ ವಚನಮಬ್ರವೀತ್ ।
ರಾಮಃ ಕೃತಾತ್ಮಾ ಭವತಾ ಶೀಘ್ರಮಾನೀಯತಾಮಿತಿ ॥೨೩॥

ಕಾಂತಿಯುಳ್ಳ ರಾಜನು ಸುಮಂತ್ರನಿಗೆ 'ಧರ್ಮದ್ಧಿಯವನಾದ ರಾಮನನ್ನು ಬೇಗನೆ ಕರೆತಾ' ಎಂದು ನುಡಿದ.

ಸ ತಥೇತಿ ಪ್ರತಿಜ್ಞಾಯ ಸುಮಂತ್ರೋ ರಾಜಶಾಸನಾತ್ ।
ರಾಮಂ ತತ್ರಾನಯಾಂಚಕ್ರೇ ರಥೇನ ರಥಿನಾಂ ವರಮ್ ॥೨೪॥

'ಹಾಗೇ ಮಾಡುವೆನೆಂ'ದು ಸುಮಂತ್ರನು ರಾಜನ ಆಜ್ಞೆಯಂತೆ ರಥಿಕ ಶ್ರೇಷ್ಠನಾದ ರಾಮನನ್ನು ರಥದಿಂದ ಅರಮನೆಗೆ ಕರೆತಂದ.

ಅಥ ತತ್ರ ಸಮಾಸೀನಾಸ್ತದಾ ದಶರಥಂ ನೃಪಮ್ ।
ಉಪವಿಷ್ಟಾಶ್ಚ ಸಚಿವಾ ರಾಜಾನಶ್ಚ ಸನೈಗಮಾಃ ।
ಪ್ರಾಚ್ಯೋದೀಚ್ಯಾಃ ಪ್ರತೀಚ್ಯಾಶ್ಚ ದಾಕ್ಷಿಣಾತ್ಯಾಶ್ಚ ಭೂಮಿಪಾಃ ॥೨೫॥

ಮ್ಲೇಚ್ಛಾಶ್ಚಾರ್ಯಾಶ್ಚ ಯೇ ಚಾನ್ಯೇ ವನಶೈಲಾಂತವಾಸಿನಃ ।
ಉಪಾಸಾಂಚಕ್ರಿರೇ ಸರ್ವೇ ತಂ ದೇವಾ ಇವ ವಾಸವಮ್ ॥೨೬॥

ಆಗ ಅರಮನೆಯಲ್ಲಿ ಪೂರ್ವ ಪಶ್ಚಿಮ ದಕ್ಷಿಣ ಉತ್ತರದೇಶಗಳ ಸಾಮಂತ-ರಾಜರೂ ಯವನ ಮತ್ತು ಮಧ್ಯದೇಶಗಳ ಮಾಂಡಲಿಕರೂ ಬೇರೆ ಅರಣ್ಯಪರ್ವತ-ಪ್ರದೇಶವಾಸಿಗಳಾದ ವೀರಯೋಧರೂ ಎಲ್ಲರೂ ಆಸೀನರಾಗಿ ಇಂದ್ರನನ್ನು ದೇವತೆಗಳು ಸೇವಿಸುವಂತೆ ದಶರಥನನ್ನು ಸುತ್ತುವರಿದು ಸೇವಿಸಿದರು.

ತೇಷಾಂ ಮಧ್ಯೇ ಸ ರಾಜರ್ಷಿರ್ಮರುತಾಮಿವ ವಾಸವಃ ।
ಪ್ರಾಸಾದಸ್ಥೋ ರಥಗತಂ ದದರ್ಶಾಯಾಂತಮಾತ್ಮಜಮ್ ॥೨೭॥

ದೇವತೆಗಳ ನಡುವೆ ಇಂದ್ರನಂತೆ ಸಾಮಂತರಾಜರ ವೀರಯೋಧರ ನಡುವೆ ಅರಮನೆ ಮಾಳಿಗೆಮೇಲೆ ಕುಳಿತು, ರಾಜರ್ಷಿಯು ತನ್ನ ಮಗನು ರಥದಲ್ಲಿ ಕುಳಿತು ಬರುವುದನ್ನು ಕಂಡನು.

ಗಂಧರ್ವರಾಜಪ್ರತಿಮಂ ಲೋಕೇ ವಿಖ್ಯಾತಪೌರುಷಮ್ ।
ದೀರ್ಘಬಾಹುಂ ಮಹಾಸತ್ತ್ವಂ ಮತ್ತಮಾತಂಗಗಾಮಿನಮ್ ॥೨೮॥

ಚಂದ್ರಕಾಂತಾನನಂ ರಾಮಮತೀವ ಪ್ರಿಯದರ್ಶನಮ್ ।
ರೂಪೌದಾರ್ಯಗುಣೈಃ ಪುಂಸಾಂ ದೃಷ್ಟಿಚಿತ್ತಾಪಹಾರಿಣಮ್ ॥೨೯॥

ಘರ್ಮಾಭಿತಪ್ತಾಃ ಪರ್ಜನ್ಯಂ ಹ್ಲಾದಯಂತಮಿವ ಪ್ರಜಾಃ ।
ನ ತತರ್ಪ ಸಮಾಯಾಂತಂ ಪಶ್ಯಮಾನೋ ನರಾಧಿಪಃ ॥೩೦॥

ಗಂಧರ್ವರಾಜನಂತೆ ಸ್ಫುರದ್ರೂಪಿ, ಶ್ರೀರಾಮ. ಲೋಕದಲ್ಲಿ ಪ್ರಖ್ಯಾತವಾದ ಪೌರುಷ ಉಳ್ಳವನು. ದೀರ್ಘಬಾಹು, ಮಹಾಬಲಿ. ಮದ್ದಾನೆಯಂತೆ ನಡಿಗೆ ಉಳ್ಳವನು, ಚಂದ್ರನಂತೆ ಆಹ್ಲಾದಕರವಾದ ಮುಖ ಉಳ್ಳವನು. ನೋಡುವವರಿಗೆ ಅವನ ದರ್ಶನ ಅತಿಪ್ರಿಯವಾಗಿತ್ತು. ರೂಪ–ಔದಾರ್ಯ ಗುಣಗಳಿಂದ ಪುರುಷ–ರಿಗೂ ಕೂಡ ಕಣ್ಣು–ಮನಗಳನ್ನು ಸೆಳೆಯುವವನು. ಬಿಸಿಲಿನ ಬೇಗೆಯಿಂದ ಬೇಯುವ ಪ್ರಜೆಗಳು, ಆಹ್ಲಾದಕರವಾದ ಮೋಡ ಆಗಸದಲ್ಲಿ ತೇಲಿ ಬರುವುದನ್ನು ನೋಡುವಂತೆ ತನ್ನ ಬಳಿಗೆ ಬರುತ್ತಿದ್ದ ರಾಮನನ್ನು ನೋಡಿ ಎಷ್ಟು ನೋಡಿದರೂ ತೃಪ್ತಿ ಹೊಂದಲಿಲ್ಲ, ದಶರಥ.

ಅವತಾರ್ಯ ಸುಮಂತ್ರಸ್ತಂ ರಾಘವಂ ಸ್ಯಂದನೋತ್ತಮಾತ್ ।
ಪಿತುಃ ಸಮೀಪಂ ಗಚ್ಛಂತಂ ಪ್ರಾಂಜಲಿಃ ಪೃಷ್ಠತೋಽನ್ವಗಾತ್ ॥೩೧॥

ಸುಮಂತ್ರನು ರಾಮನನ್ನು ರಥದಿಂದ ಕೆಳಗಿಳಿಸಿ, ಅವನು ತಂದೆಯ ಬಳಿಗೆ ಹೋಗುವಾಗ, ಕೈಮುಗಿದುಕೊಂಡು ಹಿಂಬಾಲಿಸಿ ನಡೆದ.

ಸ ತಂ ಕೈಲಾಸಶೃಂಗಾಭಂ ಪ್ರಾಸಾದಂ ನರಪುಂಗವಃ ।
ಆರುರೋಹ ನೃಪಂ ದ್ರಷ್ಟುಂ ಸಹ ಸೂತೇನ ರಾಘವಃ ॥೩೨॥

ಕೈಲಾಸಶಿಖರದಂತೆ ಕಾಣುವ ಆ ಅರಮನೆ ಮಾಳಿಗೆಯ ಮೇಲೆ ರಾಜನನ್ನು ಕಾಣಲು ಪುರುಷೋತ್ತಮ ಶ್ರೀರಾಮನು ಸುಮಂತ್ರನೊಂದಿಗೆ ಹತ್ತಿದನು.

ಸ ಪ್ರಾಂಜಲಿರಭಿಪ್ರೇತ್ಯ ಪ್ರಣತಃ ಪಿತುರಂತಿಕೇ ।
ನಾಮ ಸ್ವಂ ಶ್ರಾವಯನ್ ರಾಮೋ ವವಂದೇ ಚರಣೌ ಪಿತುಃ ॥೩೩॥

ಶ್ರೀರಾಮನು ತಂದೆಯ ಬಳಿಗೆ ಬಂದು ಕೈಮುಗಿದು ದಂಡಪ್ರಣಾಮಗೈದು ತನ್ನ ನಾಮವನ್ನು ಉಚ್ಚಾರಣೆಮಾಡಿ ತಂದೆಯ ಪಾದಗಳನ್ನು ವಂದಿಸಿದನು.

ಶ್ರೀರಾಮ ತಂದೆಗೆ, ಮೊದಲಿಗೆ ದಂಡಪ್ರಣಾಮ ಮಾಡಿ, ಬಳಿಕ 'ಅಭಿವಾದಯೇ', 'ರಾಮವರ್ಮನಾಮಾಹಮಸ್ಮಿಭೋಃ' ಎಂದು ಹೇಳಿ ಎರಡೂ ಕೈಮುಗಿದು ಬಲಕೈಯಿಂದ ತನ್ನ ಎಡಕಿವಿಯನ್ನೂ ಎಡಗೈಯಿಂದ ಬಲಕಿವಿಯನ್ನೂ ಸ್ಪರ್ಶಿಸಿ ಬಲಗೈಯಿಂದ ತಂದೆಯ ಬಲಗಾಲನ್ನು ಎಡಗೈಯಿಂದ ತಂದೆಯ ಎಡಗಾಲನ್ನೂ, ಮೊಣಕಾಲಿನಿಂದ ಪಾದದ ಅಂಗುಷ್ಠವರೆಗೆ ಮೆತ್ತಗೆ ಸವರುತ್ತ ಸ್ಪರ್ಶಿಸಿದ.

ಈ ಅಭಿವಾದನಪೂರ್ವಕ ಪಾದಸ್ಪರ್ಶವನ್ನು ತಂದೆ ತಾಯಿ ಮತ್ತು ಆಚಾರ್ಯರಿಗೆ ಮಾತ್ರ ಮಾಡಬೇಕು. ಬೇರೆ ವೃದ್ಧರಿಗೆ ಅಭಿವಾದನ ಮಾತ್ರ. ಉಳಿದವರಿಗೆ ದಂಡಪ್ರಣಾಮ ಮಾತ್ರ ವಿಹಿತವಾಗಿದೆ.

'ಅಭಿವಾದನ' ಎಂದರೆ ಹಿರಿಯರಿಂದ ಆಶೀರ್ವಾದವನ್ನು ಹೇಳಿಸುವುದು. 'ಅಭಿವಾದ್ಯತೇ ಆಶೀಃ ಕಾರ್ಯತೇ ಅನೇನ, ಣಿಜಂತ'ವದ'ಧಾತು ಕರಣೇ-ಲ್ಯುಟ್ । ಆಶೀರ್ವಾದವನ್ನು ಹೇಳಲು ತಿಳಿಯದವರಿಗೆ ಇಂಥ ಅಭಿವಾದನ ಮಾಡುವುದು ನಿಷಿದ್ಧ. ಅವರಿಗೆ 'ಅಹಮಸ್ಮಿ ಭೋಃ' ಎಂದಿಷ್ಟೇ ಹೇಳಬೇಕು ಎಂದು ವಿಧಿ ಇದೆ.

ಕಾಣದ ದೇವರಿಗೆ ಅಭಿವಾದನ ಮಾಡುವಾಗ ಅವರ ಪಾದಸ್ಥಾನವಾದ ಭೂಮಿಯನ್ನು ಸ್ಪರ್ಶಿಸಬೇಕು

ತಂ ದೃಷ್ಟ್ವಾ ಪ್ರಣತಂ ಪಾರ್ಶ್ವೇ ಕೃತಾಂಜಲಿಪುಟಂ ನೃಪಃ ।
ಗೃಹ್ಯಾಂಜಲೌ ಸಮಾಕೃಷ್ಯ ಸಸ್ವಜೇ ಪ್ರಿಯಮಾತ್ಮಜಮ್ ॥೩೪॥

ಪ್ರೀತಿಯ ಮಗನಾದ ರಾಮನು ದಂಡಪ್ರಣಾಮಮಾಡಿ ಪಾರ್ಶ್ವದಲ್ಲಿ ಕೈಮುಗಿದು ನಿಂತುದನ್ನು ಕಂಡು ದಶರಥ ಅವನ ಕೈಹಿಡಿದು ಬಳಿಗೆ ಸೆಳೆದುಕೊಂಡು ಬಾಚಿ ತಬ್ಬಿಕೊಂಡ.

ತಸ್ಮೈ ಚಾಭ್ಯುದಿತಂ ಸಮ್ಯಙ್ ಮಣಿಕಾಂಚನಭೂಷಿತಮ್ ।
ದಿದೇಶ ರಾಜಾ ರುಚಿರಂ ರಾಮಾಯ ವರಮಾಸನಮ್ ॥೩೫॥

ಸೇವಕರು ತಂದಿರಿಸಿದ ಒಳ್ಳೆಯ ಮಣಿಭಂಗಾರಖಚಿತವಾದ ಸುಂದರವಾದ ಉತ್ತಮ ಆಸನವನ್ನು ರಾಜನು ರಾಮನಿಗೆ ನೀಡಿದ.

ತದಾಸನವರಂ ಪ್ರಾಪ್ಯ ವ್ಯದೀಪಯತ ರಾಘವಃ ।
ಸ್ವಯೇವ ಪ್ರಭಯಾ ಮೇರುಮುದಯೇ ವಿಮಲೋ ರವಿಃ ॥೩೬॥

ಆ ಆಸನದಲ್ಲಿ ಕುಳಿತು, ಉದಯಕಾಲದಲ್ಲಿ ನಿರ್ಮಲವಾದ ಮೇಘದಾಚ್ಛಾದನೆ ಇಲ್ಲದ ಸೂರ್ಯನು ಮೇರುಪರ್ವತವನ್ನು ಸುತ್ತುತ್ತ ಅದನ್ನು ತನ್ನ ಪ್ರಭೆಯಿಂದಲೇ ಬೆಳಗಿಸುವಂತೆ, ರಾಮನೂ ತನ್ನ ಕಾಂತಿಯಿಂದ ಆಸನಕ್ಕೇ ಶೋಭೆ ತಂದುಕೊಟ್ಟ. ಹೊರತು ಆಸನದಿಂದ ರಾಮನಿಗೆ ಶೋಭೆಯಲ್ಲ.

ತೇನ ವಿಭ್ರಾಜತಾ ತತ್ರ ಸಾ ಸಭಾಭಿವ್ಯರೋಚತ ।
ವಿಮಲಗ್ರಹನಕ್ಷತ್ರಾ ಶಾರದೀ ದ್ಯೌರಿವೇಂದುನಾ ॥೩೭॥

ಶ್ರೀರಾಮನ ಕಾಂತಿಯಿಂದ, ಚಂದ್ರನಿಂದ ನಿರ್ಮಲಗ್ರಹನಕ್ಷತ್ರಯುಕ್ತವಾದ ಶರತ್ಕಾಲದ ಆಗಸದಂತೆ, ಆ ಸಭಾಮಂಟಪ ಬೆಳಗಿತು.

ತಂ ಪಶ್ಯಮಾನೋ ನೃಪತಿಸ್ತುತೋಷ ಪ್ರಿಯಮಾತ್ಮಜಮ್ ।
ಅಲಂಕೃತಮಿವಾತ್ಮಾನಮಾದರ್ಶತಲಸಂಸ್ಥಿತಮ್ ॥೩೮॥

ನಿಲುಗನ್ನಡಿಯಲ್ಲಿ ಕಾಣುವ ಅಲಂಕೃತವಾದ ತನ್ನ ಪ್ರತಿಬಿಂಬದಂತೆಯೇ ಕಾಣುತ್ತಿದ್ದ ತನ್ನ ಪ್ರಿಯಪುತ್ರ ಶ್ರೀರಾಮನನ್ನು ಕಂಡು ದಶರಥ ಸಂತೋಷ ಭರಿತನಾದ.

ಸ ತಂ ಸಸ್ಮಿತಮಾಭಾಷ್ಯ ಪುತ್ರಂ ಪುತ್ರವತಾಂ ವರಃ ।
ಉವಾಚೇದಂ ವಚೋ ರಾಜಾ ದೇವೇಂದ್ರಮಿವ ಕಶ್ಯಪಃ ॥೩೯॥

ತನ್ನ ಮಗನಾದ ದೇವೇಂದ್ರನಿಗೆ ಕಶ್ಯಪ ಪ್ರಜಾಪತಿಯಂತೆ, ನಗುಮೊಗದ ಪುತ್ರ ಶ್ರೀರಾಮನಿಗೆ ಪುತ್ರವಂತರಲ್ಲಿ ಶ್ರೇಷ್ಠನಾದ ರಾಜಾ ದಶರಥನು ನಗುಮೊಗದಿಂದ ನುಡಿದ.

ಜ್ಯೇಷ್ಠಾಯಾಮಸಿ ಮೇ ಪತ್ನ್ಯಾಂ ಸದೃಶ್ಯಾಂ ಸದೃಶಃ ಸುತಃ ।
ಉತ್ಪನ್ನಸ್ತ್ವಂ ಗುಣಶ್ರೇಷ್ಠೋ ಮಮ ರಾಮಾತ್ಮಜಃ ಪ್ರಿಯಃ ॥೪೦॥

'ರಾಮ, ನನಗೆ ಅನುರೂಪಳಾದ ಜ್ಯೇಷ್ಠ ಪತ್ನಿಯಲ್ಲಿ ಅನುರೂಪನಾದ ಸುತನಾಗಿ ಶ್ರೇಷ್ಠಗುಣಶಾಲಿಯಾದ ಪ್ರಿಯಪುತ್ರನು ನೀನು ಜನಿಸಿರುವೆ.

ಯತಸ್ತ್ವಯಾ ಪ್ರಜಾಶ್ಚೇಮಾಃ ಸ್ವಗುಣೈರನುರಂಜಿತಾಃ ।
ತಸ್ಮಾತ್ತ್ವಂ ಪುಷ್ಯಯೋಗೇನ ಯೌವರಾಜ್ಯಮವಾಪ್ನುಹಿ ॥೪೧॥

'ನೀನು ನಿನ್ನ ಗುಣಗಳಿಂದ ಈ ಪ್ರಜೆಗಳಿಗೆ ಆನಂದ ಉಂಟುಮಾಡುತ್ತಿರುವುದ–ರಿಂದ ಒಂದು ಪುಷ್ಯನಕ್ಷತ್ರದಲ್ಲಿ ಯುವರಾಜ ಪದವಿಯನ್ನು ಹೊಂದು.'

ಕಾಮತಸ್ತ್ವಂ ಪ್ರಕೃತ್ಯೈವ ವಿನೀತೋ ಗುಣವಾನಸಿ ।
ಗುಣವತ್ಯಪಿ ತು ಸ್ನೇಹಾತ್ ಪುತ್ರ ವಕ್ಷ್ಯಾಮಿ ತೇ ಹಿತಮ್ ॥೪೨॥

'ನೀನು ಸ್ವಭಾವದಿಂದಲೇ ವಿನೀತ, ಗುಣವಂತನೆ, ಆದರೂ, ಗುಣವಂತನಾದ ನಿನ್ನ ಮೇಲಿನ ಪ್ರೀತಿಯಿಂದಲೆ, ಮಗು, ನಾನು ನಿನಗೆ ಹಿತವನ್ನು ನುಡಿಯುವೆನು.

ಭೂಯೋ ವಿನಯಮಾಸ್ಥಾಯ ಭವ ನಿತ್ಯಂ ಜಿತೇಂದ್ರಿಯಃ ।
ಕಾಮಕ್ರೋಧಸಮುತ್ಥಾನಿ ತ್ಯಜೇಥಾ ವ್ಯಸನಾನಿ ಚ ॥೪೩॥

ಸದಾ ಇಂದ್ರಿಯ ನಿಗ್ರಹದಿಂದಿರು. ರಾಜ್ಯಭಾರ ನಿರ್ವಹಣೆಯಲ್ಲಿ ಇನ್ನೂ ಹೆಚ್ಚಿನ ಶಿಕ್ಷಣವನ್ನು ಪಡೆದು, ಕಾಮಕ್ರೋಧಗಳಿಂದ ಉಂಟಾಗುವ ಸ್ತ್ರೀ ದ್ಯೂತ ಮೃಗಯಾ ಮುಂತಾದ ದುರ್ವ್ಯಸನಗಳನ್ನು ದೂರವಿರಿಸು.

ಪರೋಕ್ಷಯಾ ವರ್ತಮಾನೋ ವೃತ್ತ್ಯಾ ಪ್ರತ್ಯಕ್ಷಯಾ ತಥಾ ।
ಅಮಾತ್ಯಪ್ರಭೃತೀಃ ಸರ್ವಾಃ ಪ್ರಕೃತೀಶ್ಚಾನುರಂಜಯ ॥೪೪॥

ಗುಪ್ತಚರರಿಂದ ಪರೋಕ್ಷವಾಗಿಯೂ ಆಸ್ಥಾನದಲ್ಲಿ ಕುಳಿತು ಪ್ರತ್ಯಕ್ಷ ವಾಗಿಯೂ ಪ್ರಜೆಗಳ ಕ್ಷೇಮ ಸಮಾಚಾರವನ್ನು ತಿಳಿಯುತ್ತಲೇ ಅಮಾತ್ಯ ಸೇನಾನಿ ಪೌರಜಾನಪದ ಮುಂತಾದ ಎಲ್ಲ ಪ್ರಜೆಗಳನ್ನು ಅವರಿಗೆ ಇಷ್ಟವಾಗುವಂತೆ ನಡೆಯುತ್ತ ಸಂತೋಷ-ಪಡಿಸುತ್ತಿರು.

ಕೋಷ್ಠಾಗಾರಾಯುಧಾಗಾರೈಃ ಕೃತ್ವಾ ಸನ್ನಿಚಯಾನ್ ಬಹೂನ್ ।
ತುಷ್ಟಾನುರಕ್ತಪ್ರಕೃತಿರ್ಯಃ ಪಾಲಯತಿ ಮೇದಿನೀಮ್ ॥೪೫॥
ತಸ್ಯ ನಂದಂತಿ ಮಿತ್ರಾಣಿ ಲಬ್ಧ್ವಾಮೃತಮಿವಾಮರಾಃ ।
ತಸ್ಮಾತ್ ಪುತ್ರ ತ್ವಮಾತ್ಮಾನಂ ನಿಯಮ್ಯೈವಂ ಸಮಾಚರ ॥೪೬॥

ಆಹಾರ ಧಾನ್ಯಗಳ ಉಗ್ರಾಣಗಳು ಹದಿನೆಂಟು, ಬಗೆಯ ಶಸ್ತ್ರಾಸ್ತ್ರ ತುಂಬಿದ ಆಯುಧಶಾಲೆಗಳು ಇವುಗಳಿಂದ ರಾಜ್ಯದ ಬೊಕ್ಕಸಗಳನ್ನು ಬಹುವಾಗಿ ತುಂಬಿಸಿ ಪ್ರಜೆಗಳ ತೃಪ್ತಿ ಅನುರಾಗಗಳನ್ನು ಸಂಪಾದಿಸಿ ರಾಜ್ಯವಾಳುತ್ತಿದ್ದರೆ, ದೇವತೆಗಳು ಅಮೃತವನ್ನು ಪಡೆದು ಹರ್ಷಿಸುವಂತೆ, ಸಾಮಂತರಾಜರು ಅವನ ಅಧೀನತೆಯಲ್ಲಿ ಸುಖಿಕಾಣುತ್ತಾರೆ. ಅದರಿಂದ ಮಗು, ನೀನು ನಿನ್ನ ಮನಸ್ಸನ್ನು ನಿಗ್ರಹಿಸಿಕೊಂಡು ಹೀಗೆ ರಾಜ್ಯವಾಳುತ್ತಿರು.

ತಚ್ಛ್ರುತ್ವಾ ಸುಹೃದಸ್ತಸ್ಯ ರಾಮಸ್ಯ ಪ್ರಿಯಕಾರಿಣಃ ।
ತ್ವರಿತಾಃ ಶೀಘ್ರಮಭ್ಯೇತ್ಯ ಕೌಸಲ್ಯಾಯೈ ನ್ಯವೇದಯನ್ ॥೪೭॥

ದಶರಥನು ಶ್ರೀರಾಮನಿಗೆ ಉಪದೇಶ ನೀಡಿದ್ದನ್ನು ಕೇಳಿ ಶ್ರೀರಾಮನಿಗೆ ಅಭಿಮಾನಿಗಳಾಗಿದ್ದು ಪ್ರಿಯವನ್ನುಂಟುಮಾಡುವ ಸ್ನೇಹಿತರು ಒಡನೆ ಅಲ್ಲಿಂದ ಹೊರಟು ಬೇಗನೆ ಕೌಸಲ್ಯೆಗೆ ನಿವೇದಿಸಿದರು.

ಸಾ ಹಿರಣ್ಯಂ ಚ ಗಾಶ್ಚೈವ ರತ್ನಾನಿ ವಿವಿಧಾನಿ ಚ ।
ವ್ಯಾದಿದೇಶ ಪ್ರಿಯಾಖ್ಯೇಭ್ಯಃ ಕೌಸಲ್ಯಾ ಪ್ರಮದೋತ್ತಮಾ ॥೪೮॥

ಕೌಸಲ್ಯೆ ಈ ಪ್ರಿಯವಾರ್ತೆಯನ್ನು ಹೇಳಿದ್ದಕ್ಕೆ ಬಹುಮಾನವಾಗಿ ಅವರಿಗೆ ಬಂಗಾರವನ್ನೂ ಹಸುಗಳನ್ನೂ ನಾನಾವಿಧವಾದ ರತ್ನಗಳನ್ನೂ ನೀಡಿದಳು.

ಅಥಾಭಿವಾದ್ಯ ರಾಜಾನಂ ರಥಮಾರುಹ್ಯ ರಾಘವಃ ।
ಯಯೌ ಸ್ವಂ ದ್ಯುತಿಮದ್ವೇಶ್ಮ ಜನೌಘೈಃ ಪರಿಪೂಜಿತಃ ॥೪೯॥

ಶ್ರೀರಾಮನು ತನಗೆ ರಾಜಧರ್ಮವನ್ನು ಉಪದೇಶಿಸಿದ ರಾಜಾದಶರಥನನ್ನು ಅಭಿವಾದನ ಮಾಡಿ ರಥವನ್ನೇರಿ ಜನಸಮೂಹಗಳಿಂದ ಪ್ರಶಂಸಾರೂಪವಾದ ಪೂಜೆಯನ್ನು ಕೈಗೊಳ್ಳುತ್ತ ಚೆನ್ನಾಗಿ ಬೆಳಗುವ ತನ್ನ ವಾಸಸ್ಥಾನಕ್ಕೆ ತೆರಳಿದ.

ತೇ ಚಾಪಿ ಪೌರಾ ನೃಪತೇರ್ವಚಸ್ತತ್
ಶ್ರುತ್ವಾ ತದಾ ಲಾಭಮಿವೇಷ್ಟಮಾಶು ।
ನರೇಂದ್ರಮಾಮಂತ್ರ್ಯ ಗೃಹಾಣಿ ಗತ್ವಾ
ದೇವಾನ್ ಸಮಾನರ್ಚುರತಿಪ್ರಹೃಷ್ಟಾಃ ॥೫೦॥

ದಶರಥನು ಶ್ರೀರಾಮನಿಗೆ ಉಪದೇಶ ಮಾಡಿದ್ದನ್ನು ಕೇಳಿ ಪ್ರಜೆಗಳು ತಮಗೆ ದೊಡ್ಡ ಇಷ್ಟಲಾಭವಾಯಿತೆಂಬಂತೆ ಬಹಳ ಹರ್ಷಗೊಂಡು ರಾಜನ ಅಪ್ಪಣೆ ಪಡೆದು ಮನೆಗಳಿಗೆ ತೆರಳಿ ಈ ಶುಭಕಾರ್ಯಕ್ಕೆ ವಿಘ್ನಬಾರದಿರಲೆಂದು ಇಷ್ಟದೇವತೆಗಳನ್ನು ಚೆನ್ನಾಗಿ ಆರಾಧಿಸಿದರು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಮೂರನೇ ಸರ್ಗ ಮುಗಿಯಿತು.

❖

ಚತುರ್ಥಃ ಸರ್ಗಃ

ಸರ್ಗ – 4

ಅಭಿಷೇಕವನ್ನು ಬೇಗನೆ ಮಾಡಲು ಕಾರಣ.
ಮತ್ತು ಶ್ರೀರಾಮನಿಗೆ ತಾಯಿಯ ಆಶೀರ್ವಾದ.

ಗತೇಷ್ವಥ ನೃಪೋ ಭೂಯಃ ಪೌರೇಷು ಸಹ ಮಂತ್ರಿಭಿಃ ।
ಮಂತ್ರಯಿತ್ವಾ ತತಶ್ಚಕ್ರೇ ನಿಶ್ಚಯಜ್ಞಃ ಸುನಿಶ್ಚಯಮ್ ॥೧॥

ಪೌರರು ಸಭಾಮಂಟಪದಿಂದ ಎದ್ದು ಹೊರಟು ಹೋದ ಬಳಿಕ ದಶರಥ ಪುನಃ ಮಂತ್ರಿಗಳೊಡನೆ ಸಮಾಲೋಚನೆಮಾಡಿ, ಬೇಗನೆ ರಾಮಾಭಿಷೇಕಕ್ಕೆ ಒಳ್ಳೆಯ ಮುಹೂರ್ತ ನಿಶ್ಚಯ ಮಾಡಿದ. ಆಯಾ ಕಾರ್ಯಗಳಿಗೆ ತಕ್ಕ ದೇಶಕಾಲ ಮುಹೂರ್ತಗಳನ್ನು ನಿಶ್ಚಯ ಮಾಡಬಲ್ಲವನು ದಶರಥ.

ಶ್ವ ಏವ ಪುಷ್ಯೋ ಭವಿತಾ ಶ್ವೋಽಭಿಷೇಚ್ಯಸ್ತು ಮೇ ಸುತಃ ।
ರಾಮೋ ರಾಜೀವಪತ್ರಾಕ್ಷೋ ಯೌವರಾಜ್ಯ ಇತಿ ಪ್ರಭುಃ ॥೨॥

ನಾಳೆಯೆ ಪುಷ್ಯ ನಕ್ಷತ್ರ ಬರುತ್ತಿದೆ. ನಾಳೆಯೆ ನನ್ನ ಮಗನಿಗೆ ಅಭಿಷೇಕ ಮಾಡುವುದು ಒಳ್ಳೆಯದು. ಕನ್ನೈದಿಲೆಯಂತ ಕೆಂಪಾದ ಕಣ್ಣುಗಳುಳ್ಳ ರಾಮನನ್ನು ಯುವರಾಜನನ್ನಾಗಿ ಮಾಡಬೇಕು ಎಂದು ನಿಶ್ಚಯಿಸಿದ.

ತಸ್ಮಾತ್ ತ್ವಂ ಪುಷ್ಯಯೋಗೇನ ಯೌವರಾಜ್ಯಮವಾಪ್ನುಹಿ (3.41)

ಎಂದು ಹಿಂದೆಯೆ ಎಲ್ಲ ಸಾಮಂತರಾಜರ ಪೌರರ ಮುಂದೆ, 'ಪುಷ್ಯ ನಕ್ಷತ್ರದಲ್ಲಿ ಅಭಿಷೇಕ'ವೆಂದು ಹೇಳಿಯಾಗಿದೆ, ಪುನಃ ಈಗ ಪುಷ್ಯನಕ್ಷತ್ರದಲ್ಲಿ ಅಭಿಷೇಕವನ್ನು 'ನಿಶ್ಚಯಿಸಿ'ದ್ದು ಹೇಗೆ? ಎಂಬ ಪ್ರಶ್ನೆ ಇಲ್ಲಿ ಸಹಜ. ಆದರೆ ಆಗ ದಶರಥನು ಹೇಳಿದ್ದು ಯಾವುದಾದರೊಂದು ಪುಷ್ಯನಕ್ಷತ್ರವಿರುವ ದಿನದಲ್ಲಿ ಅಭಿಷೇಕ ಮಾಡುತ್ತೇನೆ ಎಂದು. ಈಗ ಹೇಳುವುದು ನಾಳೆಯೇ ಪುಷ್ಯನಕ್ಷತ್ರ ವಿರುವ ಒಳ್ಳೆಯ ದಿನವಾದ್ದರಿಂದ ಮತ್ತು ನಾಳೆಗೇ ಎಲ್ಲ ಸಿದ್ಧತೆಗಳನ್ನು ಮಂತ್ರಿಗಳು ಏರ್ಪಾಡೂ ಮಾಡಿಯಾಗಿರುವುದರಿಂದ ನಾಳೆಯೆ ಅಭಿಷೇಕ ಎಂದು ನಿಶ್ಚಯವನ್ನು ಕೈಗೊಳ್ಳುತ್ತಾನೆ.

'ನಾಳೆಯೇ ಏಕೆ ಅಭಿಷೇಕವೆಂದರೆ ಅದಕ್ಕೆ ಕಾರಣವನ್ನು, ರಾಮನನ್ನು ತಿರುಗಿ ಕರೆಸಿಕೊಂಡು ರಹಸ್ಯವಾಗಿ ಅವನಿಗೆ ಹೇಳುತ್ತಾನೆ' ಎನ್ನುವ ಅಭಿಪ್ರಾಯ. ಒಮ್ಮೆ

ಹಿಂದೆ ಅವನನ್ನು ಕರೆಸಿಕೊಂಡಿದ್ದು, ಪ್ರಜೆಗಳ ಅಪೇಕ್ಷೆಯನ್ನು ಅವರ ಮುಂದೆಯೆ ಅವನಿಗೆ ಹೇಳುವ ಅಭಿಪ್ರಾಯದಿಂದ. ಪ್ರಜೆಗಳು ಎದ್ದು ಹೊರಟು ಹೋದಮೇಲೆ ಕೇವಲ ಆಪ್ತರಾದ ಮಂತ್ರಿಗಳ ಉಪಸ್ಥಿತಿಯಲ್ಲಿ ಮುಹೂರ್ತ ನಿಶ್ಚಯಕ್ಕೆ ಸಮಾಲೋಚನೆ ಮಾಡಿ ನಿಶ್ಚಯ ಮಾಡುತ್ತಾನೆ. ಬಳಿಕ ಮಂತ್ರಿಗಳನ್ನೂ ದೂರಕಳಿಸಿ ರಾಮನನ್ನು ಕರೆಸಿಕೊಂಡು ಅದನ್ನು ಹೇಳಿ ಮುಖ್ಯವಾಗಿ ಅಭಿಷೇಕ-ಪೂರ್ವಾಂಗವಾದ ವಿಘ್ನಶಾಂತಿ ಹೋಮಾದಿ ಕರ್ಮಕ್ಕೆ ಆದೇಶ ನೀಡುತ್ತಾನೆ ಎಂದು ಮುಂದೆ ವಾಲ್ಮೀಕಿ ಹೇಳುತ್ತಾನೆ.

ಅಥಾಂತರ್ಗೃಹಮಾವಿಶ್ಯ ರಾಜಾ ದಶರಥಸ್ತದಾ ।
ಸೂತಮಾಜ್ಞಾಪಯಾಮಾಸ ರಾಮಂ ಪುನರಿಹಾನಯ ॥೩॥

ಬಳಿಕ ಅರಮನೆಯೊಳಗೆ ಪ್ರವೇಶಿಸಿ ರಾಜಾ ದಶರಥನು ಸಾರಥಿಯಾದ ಸುಮಂತ್ರನಿಗೆ ಆಜ್ಞೆಮಾಡಿದ. ರಾಮನನ್ನು ಪುನಃ ಇಲ್ಲಿಗೆ ಕರೆತಾ ಎಂದು.

ಪ್ರತಿಗೃಹ್ಯ ಸ ತದ್ವಾಕ್ಯಂ ಸೂತಃ ಪುನರುಪಾಯಯೌ ।
ರಾಮಸ್ಯ ಭವನಂ ಶೀಘ್ರಂ ರಾಮಮಾನಯಿತುಂ ಪುನಃ ॥೪॥

ರಾಜಾಜ್ಞೆಯನ್ನು ಸ್ವೀಕರಿಸಿ ಸುಮಂತ್ರನು ಬೇಗನೆ ರಾಮನನ್ನು ಕರೆತರಲು ಪುನಃ ರಾಮಮಂದಿರಕ್ಕೆ ಬಂದನು.

ದ್ವಾಸ್ಥೈರಾವೇದಿತಂ ತಸ್ಯ ರಾಮಾಯಾಗಮನಂ ಪುನಃ ।
ಶ್ರುತ್ವೈವ ಚಾಪಿ ರಾಮಸ್ತಂ ಪ್ರಾಪ್ತಂ ಶಂಕಾನ್ವಿತೋಽಭವತ್ ॥೫॥

ಸುಮಂತ್ರನು ಪುನಃ ಬಂದುದನ್ನು ದ್ವಾರಪಾಲಕರು ರಾಮನಿಗೆ ತಿಳಿಸಿದರು. ಸುಮಂತ್ರನು ಪುನಃ ಬಂದುದನ್ನು ಕೇಳಿ ರಾಮನು ಅಂಜಿದ. ವೃದ್ಧನಾದ ದಶರಥನಿಗೆ ಏನಾದರೂ ಅಸ್ವಸ್ಥತೆ ಉಂಟಾಯಿತೆ? ಎಂದು.

ಪ್ರವೇಶ್ಯ ಚೈನಂ ತ್ವರಿತಂ ರಾಮೋ ವಚನಮಬ್ರವೀತ್ ।
ಯದಾಗಮನಕೃತ್ಯಂ ತೇ ಭೂಯಸ್ತದ್ಬ್ರೂಹ್ಯಶೇಷತಃ ॥೬॥

ಸುಮಂತ್ರನನ್ನು ಬೇಗನೆ ಒಳಗೆ ಬರಮಾಡಿಕೊಂಡು ರಾಮ ನುಡಿದ— 'ನೀನು ಪುನಃ ಬರಲು ಕಾರಣವೇನು, ಎಲ್ಲವನ್ನೂ ಹೇಳು' ಎಂದು.

ತಮುವಾಚ ತತಃ ಸೂತೋ ರಾಜಾ ತ್ವಾಂ ದ್ರಷ್ಟುಮಿಚ್ಛತಿ ।
ಶ್ರುತ್ವಾ ಪ್ರಮಾಣಮತ್ರ ತ್ವಂ ಗಮನಾಯೇತರಾಯ ವಾ ॥೭॥

ಆಗ ಸುಮಂತ್ರ ನುಡಿದ, 'ರಾಜರು ನಿನ್ನನ್ನು ನೋಡಲು ಬಯಸಿದ್ದಾರೆ. ಇದನ್ನು ಕೇಳಿದ ಬಳಿಕ ಅವರ ಬಳಿಗೆ ಹೋಗುವುದು ಬಿಡುವುದು ನಿನ್ನಿಚ್ಛೆ.'

ಇತಿ ಸೂತವಚಃ ಶ್ರುತ್ವಾ ರಾಮೋಽಥ ತ್ವರಯಾನ್ವಿತಃ ।
ಪ್ರಯಯೌ ರಾಜಭವನಂ ಪುನರ್ದ್ರಷ್ಟುಂ ನರೇಶ್ವರಮ್ ॥೮॥

ಸುಮಂತ್ರನ ಮಾತನ್ನು ಕೇಳಿ ಶ್ರೀರಾಮನು ಪುನಃ ರಾಜನನ್ನು ಕಾಣಲು ಅವಸರದಿಂದ ರಾಜಭವನಕ್ಕೆ ಹೊರಟ.

ತಂ ಶ್ರುತ್ವಾ ಸಮನುಪ್ರಾಪ್ತಂ ರಾಮಂ ದಶರಥೋ ನೃಪಃ ।
ಪ್ರವೇಶಯಾಮಾಸ ಗೃಹಂ ವಿವಕ್ಷುಃ ಪ್ರಿಯಮುತ್ತಮಮ್ ॥೯॥

ರಾಮನು ಬಂದುದನ್ನು ಕೇಳಿ ರಾಜಾ ದಶರಥನು ಪ್ರಿಯಪುತ್ರನಿಗೆ ಉತ್ತಮವಾದ ಪ್ರಿಯವಾರ್ತೆಯನ್ನು ಹೇಳಲು ಬಯಸಿ ಮನೆಯೊಳಗೆ ಕರೆಸಿಕೊಂಡ.

ಪ್ರವಿಶನ್ನೇವ ಚ ಶ್ರೀಮಾನ್ ರಾಘವೋ ಭವನಂ ಪಿತುಃ ।
ದದರ್ಶ ಪಿತರಂ ದೂರಾತ್ ಪ್ರಣಿಪತ್ಯ ಕೃತಾಂಜಲಿಃ ॥೧೦॥

ಶ್ರೀರಾಮನು ತಂದೆಯ ಮನೆಯನ್ನು ಪ್ರವೇಶಿಸುತ್ತಲೇ ದೂರದಿಂದ ತಂದೆಯನ್ನು ಕಂಡು ಕೈಮುಗಿದು ಪ್ರಣಾಮ ಮಾಡಿದ.

ಪ್ರಣಮಂತಂ ಸಮುತ್ಥಾಪ್ಯ ತಂ ಪರಿಷ್ವಜ್ಯ ಭೂಮಿಪಃ ।
ಪ್ರದಿಶ್ಯ ಚಾಸ್ಮೈ ರುಚಿರಮಾಸನಂ ಪುನರಬ್ರವೀತ್ ॥೧೧॥

ಪ್ರಣಾಮ ಮಾಡುತ್ತಿದ್ದ ರಾಮನನ್ನು ಆಲಿಂಗಿಸಿ ದಶರಥನು ಅವನಿಗೆ ಸುಂದರವಾದ ಆಸನ ನೀಡಿ ಪುನಃ ನುಡಿದ.

ರಾಮ ವೃದ್ಧೋಽಸ್ಮಿ ದೀರ್ಘಾಯುರ್ಭುಕ್ತಾ ಭೋಗಾ ಮಯೇಪ್ಸಿತಾಃ ।
ಅನ್ನವದ್ಭಿಃ ಕ್ರತುಶತೈಸ್ತಥೇಷ್ಟಂ ಭೂರಿದಕ್ಷಿಣೈಃ ॥೧೨॥

'ರಾಮ, ನಾನೀಗ ವೃದ್ಧನಾಗಿದ್ದೇನೆ. ದೀರ್ಘಾಯುವಾಗಿ ಬೇಕಾದ ಭೋಗಗಳನ್ನು ಅನುಭವಿಸಿದ್ದೇನೆ. ಅನ್ನದಾನ ಭೂರಿದಕ್ಷಿಣೆಗಳೊಂದಿಗೆ ನೂರಾರು ಯಜ್ಞಗಳನ್ನು ಮಾಡಿದ್ದೇನೆ.

ಜಾತಮಿಷ್ಟಮಪತ್ಯಂ ಮೇ ತ್ವಮದ್ಯಾನುಪಮಂ ಭುವಿ ।
ದತ್ತಮಿಷ್ಟಮಧೀತಂ ಚ ಮಯಾ ಪುರುಷಸತ್ತಮ ॥೧೩॥

'ನನಗೆ ಇಷ್ಟವಾದ ಸಂತತಿಯೂ ಈಗ ಜನಿಸಿದೆ. ಲೋಕದಲ್ಲಿಯೆ ಅನುಪಮ-ವಾದ ಸಂತತಿ ನನಗೆ ನೀನೇ ಆಗಿರುವೆ. ಪುರುಷೋತ್ತಮನೆ, ನಾನು ದಾನ ಯಾಗ ಅಧ್ಯಯನಗಳನ್ನೂ ಮಾಡಿದ್ದೇನೆ.

ಅನುಭೂತಾನಿ ಚೇಷ್ಟಾನಿ ಮಯಾ ವೀರ ಸುಖಾನ್ಯಪಿ ।
ದೇವರ್ಷಿಪಿತೃವಿಪ್ರಾಣಾಮನೃಣೋಽಸ್ಮಿ ತಥಾತ್ಮನಃ ॥೧೪॥

'ವೀರನೆ, ನಾನು ನನಗೆ ಇಷ್ಟವಾದ ಸುಖಗಳನ್ನು ಅನುಭವಿಸಿದ್ದೇನೆ. ಈ ರೀತಿಯಲ್ಲಿ ದೇವಋಣ ಋಷಿಋಣ ಪಿತೃಋಣ ವಿಪ್ರಋಣ ಮತ್ತು ಆತ್ಮಋಣ ಗಳನ್ನೂ ತೀರಿಸಿದ್ದೇನೆ.'

ಯಾಗಗಳಿಂದ ದೇವಋಣ, ಅಧ್ಯಯನದಿಂದ ಋಷಿಋಣ, ಸಂತತಿ ಪಡೆದಿದ್ದರಿಂದ ಪಿತೃಋಣ, ದಾನಗಳಿಂದ ವಿಪ್ರಋಣ, ಇಷ್ಟಭೋಗಗಳಿಂದ ಆತ್ಮಋಣಗಳು ಪರಿಹಾರವಾಗಿವೆ.

'ಆತ್ಮ'ನೆಂದರೆ ತನ್ನ ಹೃದಯದಲ್ಲಿ ನೆಲೆಸಿರುವ ಬಿಂಬರೂಪಿ ಹರಿ. ಅವನನ್ನು ತಾನು ಉಣ್ಣುವ ಇಷ್ಟ ಭೋಗಗಳಿಂದ ತೃಪ್ತಿಪಡಿಸಬೇಕು. 'ಭೋಗೈರಾತ್ಮಾನ-ಮಾತ್ಮನಿ' (ಭಾಗವತ-11.11-45)

ಸ್ವಾತ್ಮನಿಸ್ಥೋ ಹರಿಃ ಪೂಜ್ಯ ಆತ್ಮನಾಮಾऽಶನಾದಿಕೈಃ ।
ತತ್ ಸಂಬಂಧಾದಾತ್ಮಶಬ್ದೋ ಜೀವೇ ಸ್ಯಾದುಪಚಾರತಃ ॥
ಇತ್ಯಾತ್ಮಸಂಹಿತಾಯಾಂ ॥

'ತನ್ನಲ್ಲಿ, ತನ್ನ ಶರೀರದಲ್ಲಿ ಮತ್ತು ತನ್ನ ಮನಸಿನಲ್ಲಿರುವ ಆತ್ಮನಾಮಕನಾದ ಹರಿಯನ್ನು ಅನ್ನವಸ್ತ್ರಾದಿ ಭೋಗಗಳಿಂದ ಉಪಚರಿಸಬೇಕು. ಆತ್ಮನಾಮಕನು ಹರಿಯೆ. ಅವನ ಸಂಬಂಧದಿಂದ ಜೀವನಿಗೂ ಅವನ ಶರೀರ ಮನಸುಗಳಿಗೂ ಅಮುಖ್ಯವಾಗಿ 'ಆತ್ಮ' ಎಂದು ಹೆಸರು ಬಂದಿದೆ' ಎಂದು ಆತ್ಮಸಂಹಿತೆಯಲ್ಲಿ ಹೇಳಿದೆ. -ಭಾಗವತ ತಾತ್ಪರ್ಯ (11.11.45)

'ಸಕಲ ಜಗದಧೀಶಃ ಪ್ರೀಯತಾಂ ಶೌರಿರಿತ್ಥಂ' ಎಂದು ಸುಮಧ್ವವಿಜಯ (14.39) ಹೇಳುವಂತೆ ಬಿಂಬನು ಸುಪ್ರೀತನಾಗಲೆಂದು ಪ್ರತಿಬಿಂಬ ಜೀವನು ಉಣಬೇಕು. ಇದು 'ಆತ್ಮಪೂಜೆ'. ಇದರಿಂದ ಆತ್ಮಋಣ ಪರಿಹಾರ.

ನ ಕಿಂಚಿನ್ಮಮ ಕರ್ತವ್ಯಂ ತವಾನ್ಯತ್ರಾಭಿಷೇಚನಾತ್ ।
ಅತೋ ಯತ್ತಾ ತ್ವಮಹಂ ಬ್ರೂಯಾಂ ತನ್ಮೇ ತ್ವಂ ಕರ್ತುಮರ್ಹಸಿ॥೧೫॥

'ನಿನ್ನ ಅಭಿಷೇಕ ಒಂದನ್ನು ಹೊರತುಪಡಿಸಿ ನನಗೆ ಇನ್ನೇನೂ ಕರ್ತವ್ಯಕರ್ಮ ಉಳಿದಿಲ್ಲ. ಅದರಿಂದ ನಾನು ನಿನಗೆ ಏನು ಹೇಳುತ್ತಿರುವೆನೋ ಅದನ್ನು ನನಗಾಗಿ ನೀನು ಮಾಡಬೇಕು.

ಮಗನನ್ನು ಯುವರಾಜಪದವಿಯಲ್ಲಿ ಕೂಡಿಸುವುದೇ ರಾಜನ ಕರ್ತವ್ಯವಲ್ಲ. ತಾನು ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿ ಜ್ಯೇಷ್ಠ ಪುತ್ರನನ್ನು ಮಹಾರಾಜ ಪದವಿಯಲ್ಲಿಯೂ ಕೂಡಿಸಬೇಕು. ಆದರೂ ದಶರಥನೀಗ ಯುವರಾಜ ಪದವಿಯ ನೆಪದಿಂದ ಮಹಾರಾಜ ಪದವಿಯನ್ನೇ ಕೊಡುತ್ತಿದ್ದಾನೆ. 'ಸೋಽಹಂ ವಿಶ್ರಾಮ-ಮಿಚ್ಛಾಮಿ' ಎನ್ನುತ್ತ ವಾನಪ್ರಸ್ಥಾಶ್ರಮದಲ್ಲಿ ಪೂರ್ತಿ ವಿಶ್ರಾಂತಿಯನ್ನೇ ಬಯಸುತ್ತಿದ್ದಾನೆ.

ಅದ್ಯ ಪ್ರಕೃತಯಃ ಸರ್ವಾಸ್ತಾ ತ್ವಮಿಚ್ಛಂತಿ ನರಾಧಿಪಮ್ ।
ಅತಸ್ತಾ ತ್ವಂ ಯುವರಾಜಾನಮಭಿಷೇಕ್ಷ್ಯಾಮಿ ಪುತ್ರಕ ॥೧೬॥

'ಈಗ ಪ್ರಜೆಗಳೆಲ್ಲರೂ ನೀನು ರಾಜನಾಗಬೇಕೆಂದು ಬಯಸುತ್ತಿದ್ದಾರೆ. ಮಗು, ಅದರಿಂದ ನಿನ್ನನ್ನು ಯುವರಾಜನನ್ನಾಗಿ ಅಭಿಷೇಕ ಮಾಡುತ್ತೇನೆ.

ಅಪಿ ಚಾದ್ಯಾಶುಭಾನ್ ರಾಮ ಸ್ವಪ್ನಾನ್ ಪಶ್ಯಾಮಿ ದಾರುಣಾನ್ ।
ಸನಿರ್ಘಾತಾ ದಿವೋಲ್ಕಾ ಚ ಪತತೀಹ ಮಹಾಸ್ವನಾ ॥೧೭॥

'ಮತ್ತು ರಾಮ, ನಾನು ಈಗ ದಾರುಣವಾದ ದುಸ್ವಪ್ನಗಳನ್ನೇ ನಿದ್ದೆಯಲ್ಲಿ ಕಾಣುತ್ತಿದ್ದೇನೆ. ಮಹಾಶಬ್ದ ಮಾಡುತ್ತ ಸಿಡಿಲಿನೊಂದಿಗೆ ಹಗಲಿನಲ್ಲಿ ಉಲ್ಕೆಗಳೂ ಇಲ್ಲಿ ಬೀಳುತ್ತಿವೆ.

'ಸಭಾಮಂಟಪದಿಂದ ಅರಮನೆಯ ಕಡೆಗೆ ಬರುವಾಗ ದಾರಿಯಲ್ಲಿ ಅಪಶಕುನಗಳನ್ನು ಕಂಡು ರಾಜ ದಿಗಿಲುಗೊಂಡು ಕೂಡಲೆ ಮತ್ತೊಮ್ಮೆ ರಾಮನನ್ನು ಕರೆಸಿಕೊಂಡನೆಂ'ದು ತಿಳಿಯಬಾರದು. ದಾರಿಯಲ್ಲಿ ದುಃಸ್ವಪ್ನ ದರ್ಶನವಾಗದು.

ಅವಷ್ಟಬ್ಧಂ ಚ ಮೇ ರಾಮ ನಕ್ಷತ್ರಂ ದಾರುಣೈರ್ಗ್ರಹೈಃ ।
ಆವೇದಯಂತಿ ದೈವಜ್ಞಾಃ ಸೂರ್ಯಾಂಗಾರಕರಾಹುಭಿಃ ॥೧೮॥

'ನನ್ನ ಜನ್ಮನಕ್ಷತ್ರವು ಸೂರ್ಯ ಅಂಗಾರಕ ರಾಹುಗಳೆಂಬ ಅಶುಭಗ್ರಹಗಳಿಂದ ಆಕ್ರಾಂತವಾಗಿದೆ ಎಂದು ಜ್ಯೋತಿಷಿಗಳು ಹೇಳುತ್ತಿದ್ದಾರೆ.

ತನ್ನ ಜಾತಕದಲ್ಲಿ ಗ್ರಹಗತಿಗಳ ಹೊಂದಾಣಿಕೆಯಂತೆ ತಾನು ಇನ್ನು ಒಂದು-ವಾರಕಾಲ ಬದುಕಿರಬಹುದೆಂದು ಹೇಳುತ್ತಾನೆ.

ಪ್ರಾಯೇಣ ಹಿ ನಿಮಿತ್ತಾನಾಮೀದೃಶಾನಾಂ ಸಮುದ್ಭವೇ ।
ರಾಜಾ ಮೃತ್ಯುಮವಾಪ್ನೋತಿ ಘೋರಾಂ ವಾऽऽಪದಮೃಚ್ಛತಿ ॥೧೯॥

'ಇಂತಹ ದುರ್ನಿಮಿತ್ತಗಳು ಉದ್ಭವಿಸುವಾಗ ಸಾಮಾನ್ಯವಾಗಿ ರಾಜನು ಮರಣ ಹೊಂದುತ್ತಾನೆ, ಅಥವಾ ಘೋರವಾದ ಆಪತ್ತಿಗೊಳಗಾಗುತ್ತಾನೆ.

ತದ್ಯಾವದೇವ ಮೇ ಚೇತೋ ನ ವಿಮುಹ್ಯತಿ ರಾಘವ ।
ತಾವದೇವಾಭಿಷಿಂಚಸ್ವ ಚಲಾ ಹಿ ಪ್ರಾಣಿನಾಂ ಮತಿಃ ॥೨೦॥

'ಆದರಿಂದ ರಾಮ, ನನ್ನ ಬುದ್ಧಿ ಗ್ರಹಚಾರ ದುರ್ನಿಮಿತ್ತ ವಶದಿಂದ ವಿಚಲಿತ-ವಾಗದಿರುವಾಗಲೇ ನೀನು ಅಭಿಷೇಕ ಮಾಡಿಸಿಕೊಳ್ಳು. ಪ್ರಾಣಿಗಳ ಬುದ್ಧಿ ದೈವಪ್ರಭಾವ ದಿಂದ ವಿಚಲಿತವಾಗುವುದು ಸರ್ವೇಸಾಮಾನ್ಯ.

ಅದ್ಯ ಚಂದ್ರೋऽಭ್ಯುಪಗತಃ ಪುಷ್ಯಾತ್ಪೂರ್ವಂ ಪುನರ್ವಸೂ ।
ಶ್ವಃ ಪುಷ್ಯಯೋಗಂ ನಿಯತಂ ವಕ್ಷ್ಯಂತೇ ದೈವಚಿಂತಕಾಃ ॥೨೧॥

'ಇಂದು ಚಂದ್ರನು ಪುಷ್ಯದ ಹಿಂದಿನ ಪುನರ್ವಸು ನಕ್ಷತ್ರದಲ್ಲಿದ್ದಾನೆ. ನಾಳೆ ಪುಷ್ಯನಕ್ಷತ್ರದ ಯೋಗ ಚಂದ್ರನಿಗೆ ಪ್ರಶಸ್ತವೆಂದು ಜ್ಯೋತಿಷಿಗಳು ಹೇಳುತ್ತಾರೆ.

ತತ್ರ ಪುಷ್ಯೇऽಭಿಷಿಂಚಸ್ವ ಮನಸ್ತ್ವರಯತೀವ ಮಾಮ್ ।
ಶ್ವಸ್ತ್ವಾಹಮಭಿಷೇಕ್ಷ್ಯಾಮಿ ಯೌವರಾಜ್ಯೇ ಪರಂತಪ ॥೨೨॥

'ಆಗ ಪುಷ್ಯದಲ್ಲಿ ಅಭಿಷೇಕ ಮಾಡಿಸಿಕೊಳ್ಳು. ಅದಕ್ಕೆ ನನ್ನ ಮನಸ್ಸು ಹಾತೊರೆ-ಯುತ್ತಿದೆ. ಶತ್ರುನಾಶಕನೆ, ನಾಳೆ ನಿನ್ನನ್ನು ನಾನು ಯುವರಾಜ ಪದವಿಯಲ್ಲಿ ಅಭಿಷೇಕ ಮಾಡುತ್ತೇನೆ.

ತಸ್ಮಾತ್ತ್ವಯಾದ್ಯ ಪ್ರಭೃತಿ ನಿಶೇಯಂ ನಿಯತಾತ್ಮನಾ ।
ಸಹ ವಧ್ವೋपವಸ್ತವ್ಯಾ ದರ್ಭಪ್ರಸ್ತರಶಾಯಿನಾ ॥೨೩॥

'ಆದರಿಂದ ನೀನು ಇಂದಿನಿಂದ ಮನೋನಿಗ್ರಹಪೂರ್ವಕವಾಗಿ ಪತ್ನಿಯೊಂದಿಗೆ ರಾತ್ರಿ ಉಪವಾಸ ಮಾಡಬೇಕು. ದರ್ಭೆಯ ಹಾಸಿನ ಮೇಲೆ ಮಲಗಬೇಕು.

ಸುಹೃದಶ್ಚಾಪ್ರಮತ್ತಾಸ್ತಾ ತ್ವಂ ರಕ್ಷಂತ್ವದ್ಯ ಸಮಂತತಃ ।
ಭವಂತಿ ಬಹುವಿಘ್ನಾನಿ ಕಾರ್ಯಾಣ್ಯೇವಂವಿಧಾನಿ ಹಿ ॥೨೪॥

'ನಿನ್ನನ್ನು ಆಪ್ತರಕ್ಷಕರು ಬಲು ಎಚ್ಚರದಿಂದ ಎಲ್ಲ ಕಡೆಯಿಂದ ರಕ್ಷಿಸುತ್ತಿರಲಿ. ಏಕೆಂದರೆ ಇಂಥ ಶುಭಕಾರ್ಯಗಳಿಗೆ ವಿಘ್ನಗಳು ಬಹಳ ಇರುತ್ತವೆ.

ವಿಪ್ರೋಷಿತಶ್ಚ ಭರತೋ ಯಾವದೇವ ಪುರಾದಿತಃ ।
ತಾವದೇವಾಭಿಷೇಕಸ್ತೇ ಪ್ರಾಪ್ತಕಾಲೋ ಮತೋ ಮಮ ॥೨೫॥

'ಈ ನಗರದಿಂದಾಚೆ ದೂರದೇಶದಲ್ಲಿ ಭರತನಿರುವಾಗಲೇ ನಿನ್ನ ಅಭಿಷೇಕಕ್ಕೆ ಸರಿಯಾದ ಕಾಲವೆಂದು ನನಗೆ ಅನಿಸಿದೆ.

ಕಾಮಂ ಖಲು ಸತಾಂ ವೃತ್ತೇ ಭ್ರಾತಾ ತೇ ಭರತಃ ಸ್ಥಿತಃ ।
ಜ್ಯೇಷ್ಠಾನುವರ್ತೀ ಧರ್ಮಾತ್ಮಾ ಸಾನುಕ್ರೋಶೋ ಜಿತೇಂದ್ರಿಯಃ ॥೨೬॥

'ನಿನ್ನ ತಮ್ಮ ಭರತನು ಜ್ಯೇಷ್ಠನಿಗೇ ಪಟ್ಟ ಎಂಬ ಸದಾಚಾರದಲ್ಲಿ ಬಹಳ ನಿಷ್ಠೆ ಉಳ್ಳವನೇ. ಜ್ಯೇಷ್ಠನಲ್ಲಿ ಭಕ್ತಿಉಳ್ಳವನು, ಧರ್ಮಾತ್ಮ, ದಯಾಪರ, ಜಿತೇಂದ್ರಿಯನೆ.

ಕಿಂ ತು ಚಿತ್ತಂ ಮನುಷ್ಯಾಣಾಮನಿತ್ಯಮಿತಿ ಮೇ ಮತಿಃ ।
ಸತಾಂ ಚ ಧರ್ಮನಿತ್ಯಾನಾಂ ಕೃತಶೋಭಿ ಚ ರಾಘವ ॥೨೭॥

'ಆದರೆ ಮನುಷ್ಯರ ಚಿತ್ತ ಚಂಚಲವೆಂದು ನನ್ನ ಅಭಿಪ್ರಾಯ. ರಾಮ, ಧರ್ಮ-ನಿಷ್ಠರಾದ ಸಜ್ಜನರ ಮನಸ್ಸು ಕೂಡ ಕೆಲವೊಮ್ಮೆ ಆಗಿಹೋದ ಕಾರ್ಯವನ್ನು ಮಾತ್ರ ಸಮ್ಮತಿಸುತ್ತದೆ.

'ಕಾರ್ಯ ಆಗಿ ಹೋಯಿತೆಂದರೆ ಅದನ್ನು ಆಕ್ಷೇಪಿಸುವುದಿಲ್ಲ. ಆಗುತ್ತಿದ್ದರೆ ಮಾತ್ರ ಕೆಲವೊಮ್ಮೆ ದೈವಾತ್ ತಡೆಯುತ್ತಾರೆ. ಸಜ್ಜನರಾದ ಧರ್ಮನಿಷ್ಠ ರಾದವರ ಮನಸ್ಸು ಹೀಗೇ ಇರುತ್ತದೆ.' ಎನ್ನುತ್ತಾನೆ ದಶರಥ. ಇದರಿಂದ ತಾನು ಕೈಕೇಯಿ ವಿವಾಹ ಸಂದರ್ಭದಲ್ಲಿ ರಾಜ್ಯಶುಲ್ಕ ವಾಗ್ದಾನ ಮಾಡಿದ್ದನ್ನು ರಾಮನಿಗೆ ಹೇಳಿದ್ದಾನೆ ಎಂದು ಸೂಚಿತವಾಗುತ್ತದೆ.

ವಿವಾಹಕಾಲದಲ್ಲಿ ವಾಗ್ದಾನ ಮಾಡಿದ್ದನ್ನು ಮುರಿದರೆ ದೋಷವಿಲ್ಲ.

ನ ನರ್ಮಯುಕ್ತಂ ವಚನಂ ಹಿನಸ್ತಿ ನ ಸ್ತ್ರೀಷು ರಾಜನ್ ನ ವಿವಾಹಕಾಲೇ (ಆದಿ.8.2.16) ಎಂದು ಮಹಾಭಾರತದಲ್ಲಿ ಶರ್ಮಿಷ್ಠೆ ಯಯಾತಿರಾಜನಿಗೆ ಹೇಳುತ್ತಾಳೆ. ಮತ್ತು ರಾಜ್ಯಶುಲ್ಕವು ವಿವಾಹಕಾಲದಲ್ಲಿ ನೀಡಿದ ವಾಗ್ದಾನ ಮಾತ್ರ. ರಾಜ್ಯವನ್ನು ಕನ್ಯಾಶುಲ್ಕವಾಗಿ ಆಗಲೆ ಕೇಕಯರಾಜನಿಗೆ ಕೊಟ್ಟಿರಲಿಲ್ಲ.

ಪಟ್ಟಾಭಿಷೇಕಸಮಯೇ ಭವೇಯಂ ಸ್ಮಾರಿತೋ ಹ್ಯಹಂ ।

ತ್ವಯಾ ವಾನ್ಯೇನ ಭೂಪಾಲ ತಥಾ ಚೇತ್ ಕರವಾಣ್ಯಹಂ ॥

'ಅಭಿಷೇಕಕಾಲದಲ್ಲಿ ನೀನಾಗಲಿ ಇನ್ನಾರಾಗಲಿ ನೆನಪಿಸಿದರೆ ಮಾತ್ರ ನನ್ನ ಅನಂತರದ ರಾಜ್ಯಾಧಿಕಾರವನ್ನು ಕೈಕೇಯೀ ಪುತ್ರನಿಗೆ ಕೊಡುವೆನು. ಇಲ್ಲದಿದ್ದರೆ ಇಲ್ಲ' ಎಂದೇ ವಾಗ್ದಾನ' ಎನ್ನುತ್ತದೆ ಪಾದ್ಮ ಉಮಾಸಂಹಿತೆಯಲ್ಲಿ ಪಾರ್ವತಿಗೆ ಶಿವನ ವಚನ. ದಶರಥನಿಗೆ ಪೂರ್ಣವಿಶ್ವಾಸವಿದೆ, ಪ್ರಜೆಗಳಿಗೂ ವಿಶ್ವಾಸವಿದೆ. ಸರ್ವಲೋಕಪ್ರಿಯನಾದ ರಾಮನಿಂದ ರಾಜ್ಯವನ್ನು ಕಸಿದುಕೊಳ್ಳುವ ಬುದ್ಧಿ ಯಾರಿಗೂ ಬರಲಾರದು ಎಂದು. ಒಂದುವೇಳೆ ಬಂದರೂ, ಮಹಾಭಾರತದಲ್ಲಿ ಮತ್ತು ಧರ್ಮಶಾಸ್ತ್ರಗಳಲ್ಲಿ ಹೇಳಿದಂತೆ ವಿವಾಹ ಕಾಲದಲ್ಲಿ ಮಾಡಿದ ವಾಗ್ದಾನ-ವನ್ನು ಮುರಿದರೆ ದೋಷವಿಲ್ಲ. ಆದರೂ ದಶರಥ ಮುಪ್ಪಿನಲ್ಲಿ ಕ್ರೂರಗ್ರಹಗಳು ಜನ್ಮನಕ್ಷತ್ರವನ್ನು ಆಕ್ರಮಣ ಮಾಡಿರುವಾಗ ದುಸ್ವಪ್ನಗಳೂ ಉತ್ಪಾತಗಳೂ ಕಂಡುಬರುತ್ತಿರುವಾಗ ಶುಭಕಾರ್ಯವು ವಿಘ್ನದಿಂದ ನಿಂತು ಹೋಗಬಾರದು, ಮಧುರವಾದ ಸಂಗೀತದ ನಡುವೆ ಒಂದು ಹಾಳು ಅಪಸ್ವರ ಬರಬಾರದು ಎಂದು ಆತಂಕಗೊಂಡಿದ್ದಾನೆ. 'ಚಲಾ ಹಿ ಪ್ರಾಣಿನಾಂ ಮತಿಃ' ಎಂಬಂತೆ ದುರ್ನಿಮಿತ್ತ ಪ್ರಭಾವದಿಂದ ಭರತನ ಮನಸ್ಸು ವಿಚಲಿತವಾದೀತು. ರಾಜ್ಯ ಶುಲ್ಕವನ್ನು ಅವನು ನೆನಪಿಸಬಹುದು ಮಾತ್ರವಲ್ಲ, ನನ್ನ ಮನಸ್ಸೂ ವಿಚಲಿತವಾದೀತು. ಆಗ ಅಭಿಷೇಕ ಸಮಾರಂಭಕ್ಕೆ ತಡೆ ಉಂಟಾದೀತೆಂದು ಭಯ. ಆತ ಹೀಗೆ ಭರತನ ಮೇಲೆ ಈಗ ಅನುಮಾನ ಪಟ್ಟದ್ದು ಸಕಾರಣವಾಗೇ ಇದೆ.

ಕೈಕೇಯಿಗೂ ತಾನು ಹಿಂದೆ ವಾಗ್ದಾನ ಮಾಡಿದ್ದ ಎರಡು ವರಗಳ ನೆನಪು ಕಾಡಬಹುದು. ಆದರೂ ಕೈಕೇಯಿಯಲ್ಲಿ ಅನುಮಾನ ಪಡದಿದ್ದುದು ಮಾತ್ರ ತಪ್ಪಾಯಿತು. ಇದಕ್ಕೆ ಕಾರಣ ಸ್ತ್ರೀವ್ಯಾಮೋಹವಲ್ಲ. ಕೈಕೇಯಿಯ ಸ್ವಭಾವ ಕಾರಣ. ರಾಮಪಟ್ಟಾಭಿಷೇಕದ ವಾರ್ತೆಯನ್ನು ಮಂಥರೆಯ ಬಾಯಿಂದ ಕೇಳಿದಾಗ ಅವಳು ಒಡನೆ ಮೈಮೇಲಿನ ರತ್ನಾಭರಣಗಳನ್ನು ಎತ್ತಿತೆಗೆದು ಬಹುಮಾನವಾಗಿ ನೀಡುತ್ತಾಳೆ. 'ಇನ್ನೂ ಏನು ಬೇಕು ಅದನ್ನು ಕೊಡುವೆ'ನೆನ್ನುತ್ತಾಳೆ. ಇಂಥ ಸ್ವಭಾವದ ದೇವಿ ಕೈಕೇಯಿಯಲ್ಲಿ ದಶರಥ ಅನುಮಾನ ಪಡದಿದ್ದುದು ಸಹಜವೆ. ಮತ್ತು ಬೇರೆ ಎಲ್ಲ ರಾಣಿಯರಿಗಿಂತ ಹೆಚ್ಚಾಗಿ ಕೈಕೇಯಿಯನ್ನೇ ರಾಜ

ಆದರಿಸುತ್ತಿದ್ದರಿಂದ, ಅವಳೂ ತಾನೇ ರಾಜನಿಗೆ ಮೋಹದ ಮಡದಿ ಎಂದೂ ನಂಬಿದ್ದರಿಂದ ರಾಜನ ಇಷ್ಟಕ್ಕೆ ವ್ಯತಿರಿಕ್ತವಾಗಿ ಅವಳು ಅಭಿಷೇಕಕ್ಕೆ ವಿಘ್ನವನ್ನು ಸರ್ವಥಾ ಮಾಡಲಾರಳೆಂದೇ ರಾಜ ದೃಢವಾಗಿ ನಂಬಿದ್ದ. ಅದರಿಂದ ಅವಳಲ್ಲಿ ಆತ ಅನುಮಾನಪಡುವ ಪ್ರಸಂಗವೇ ಇರ ಲಿಲ್ಲ. ಆದರೂ ಇದನ್ನು 'ದೈವ'ವೇ ಅಂದರೆ ಮಂಥರೆಗೆ ಬ್ರಹ್ಮದೇವ ನೀಡಿದ ವರಬಲವೇ ಅಭಿಷೇಕ ವಿಘ್ನಕ್ಕೆ ನಿಮಿತ್ತವಾಗಿ ಬಳಸಿಕೊಂಡಿತು. ಇದನ್ನೇ ಮುಂದೆ ಶ್ರೀರಾಮ ಲಕ್ಷ್ಮಣನನ್ನು ಸಮಾಧಾನಪಡಿಸುತ್ತ 'ನಾನ್ಯದ್ ದೈವಾತ್ ಸಮರ್ಥಯೇ' (ಅಯೋ.22.18) ಎನ್ನುತ್ತಾನೆ. ಅದರಿಂದ ಮೊದಲಿಗೆ ಭರತನ ಅನುಪಸ್ಥಿತಿಯಲ್ಲಿ ಅಭಿಷೇಕ ನಡೆದು ಹೋಗಲಿ. ಆಗ ಭರತ ಅದನ್ನು ಸಂತೋಷದಿಂದ ಅನುಮತಿಸುತ್ತಾನೆ ಎಂದು ದಶರಥನಿಗೆ ದೃಢವಾದ ವಿಶ್ವಾಸವಿತ್ತು.

ಇತ್ಯುಕ್ತಃ ಸೋಽಭ್ಯನುಜ್ಞಾತಃ ಶ್ವೋಭಾವ್ಯಭಿಷೇಚನೇ ।
ವ್ರಜೇತಿ ರಾಮಃ ಪಿತರಮಭಿವಾದ್ಯಾಭ್ಯಯಾದ್ಗೃಹಮ್ ॥೨೮॥

ಮರುದಿನ ನಡೆಯಬೇಕಾಗಿದ್ದ ಅಭಿಷೇಕ ವಿಷಯದಲ್ಲಿ ದಶರಥ ಹೀಗೆ ಹೇಳಿ. 'ಈಗ ಹೋಗು' ಎಂದು ರಾಮನಿಗೆ ಅನುಮತಿ ನೀಡಿದಾಗ ರಾಮ ತಂದೆಗೆ ಅಭಿವಾದನ ಮಾಡಿ ತನ್ನ ಅರಮನೆಗೆ ಹಿಂತಿರುಗಿದ.

ರಾಜ್ಯಶುಲ್ಕ ನೀಡುವುದು ಅವಶ್ಯಕವೇ ಆಗಿದ್ದರೆ ರಾಮ ಅಭಿಷೇಕವನ್ನು ಸರ್ವಥಾ ಒಪ್ಪುತ್ತಿರಲಿಲ್ಲ.

ಪ್ರವಿಶ್ಯ ಚಾತ್ಮನೋ ವೇಶ್ಮ ರಾಜ್ಞೋದ್ದಿಷ್ಟೇಽಭಿಷೇಚನೇ ।
ತತ್‌ಕ್ಷಣೇನ ಚ ನಿಷ್ಕ್ರಮ್ಯ ಮಾತುರಂತಃಪುರಂ ಯಯೌ ॥೨೯॥

ರಾಮನು ತನ್ನ ಅರಮನೆಯನ್ನು ಪ್ರವೇಶಿಸಿ, ಅಲ್ಲಿ ಸೀತೆ ಇಲ್ಲದ್ದರಿಂದ, ತಂದೆ ಹೇಳಿದ ಅಭಿಷೇಕ ವಿಷಯದಲ್ಲಿ ತಾಯಿಗೆ ಹೇಳಲು, ಅಲ್ಲಿಂದ ತಕ್ಷಣವೆ ಹೊರಟು, ಮಾತೆಯ ಅಂತಃಪುರಕ್ಕೆ ನಡೆದ.

ತತ್ರ ತಾಂ ಪ್ರವಣಾಮೇವ ಮಾತರಂ ಕ್ಷ್ಮಾವಾಸಿನೀಮ್ ।
ವಾಗ್ಯತಾಂ ದೇವತಾಗಾರೇ ದದರ್ಶಾಯಾಚತೀಂ ಶ್ರಿಯಮ್ ॥೩೦॥

ಅಲ್ಲಿ ರೇಶಿಮೆಸೀರೆ ಉಟ್ಟು ದೇವಮಂದಿರದಲ್ಲಿ ಮೌನವಾಗಿ ವಿನಮ್ರಳಾಗಿ ದೇವನಲ್ಲಿ ರಾಮನಿಗೆ ರಾಜ್ಯಲಕ್ಷ್ಮಿಯನ್ನು ಯಾಚಿಸುತ್ತಿದ್ದ ಮಾತೆಯನ್ನು ರಾಮನು ಕಂಡ.

ಪ್ರಾಗೇವ ಚಾಗತಾ ತತ್ರ ಸುಮಿತ್ರಾ ಲಕ್ಷ್ಮಣಸ್ತಥಾ ।
ಸೀತಾ ಚಾನಾಯಿತಾ ಶ್ರುತ್ವಾ ಪ್ರಿಯಂ ರಾಮಾಭಿಷೇಚನಮ್ ॥೩೧॥

ಅಲ್ಲಿಗೆ ಮೊದಲೇ ಸುಮಿತ್ರೆಯೂ ಲಕ್ಷ್ಮಣನೂ ಬಂದಿದ್ದರು. ಪ್ರಿಯವಾದ ರಾಮಾಭಿಷೇಕವನ್ನು ಕೇಳಿ ಸೀತೆಗೆ ತಿಳಿಸಲು ಅವಳನ್ನು ಅಲ್ಲಿಗೆ ಕರೆಸಿಕೊಂಡಿದ್ದಳು, ಕೌಸಲ್ಯೆ.

ತಸ್ಮಿನ್ ಕಾಲೇ ಹಿ ಕೌಸಲ್ಯಾ ತಸ್ಥಾವಾಮೀಲಿತೇಕ್ಷಣಾ ।
ಸುಮಿತ್ರಯಾನ್ವಾಸ್ಯಮಾನಾ ಸೀತಯಾ ಲಕ್ಷ್ಮಣೇನ ಚ ॥೩೨॥

ರಾಮನು ಬರುವಾಗ ಕೌಸಲ್ಯೆಯು, ಸುಮಿತ್ರೆ, ಸೀತೆ ಮತ್ತು ಲಕ್ಷ್ಮಣ-ರಿಂದೊಡಗೂಡಿ, ಕಣ್ಣುಮುಚ್ಚಿ ಕುಳಿತಿದ್ದಳು.

ಶ್ರುತ್ವಾ ತು ಪುಷ್ಯೇ ಪುತ್ರಸ್ಯ ಯೌವರಾಜ್ಯಾಭಿಷೇಚನಮ್ ।
ಪ್ರಾಣಾಯಾಮೇನ ಪುರುಷಂ ಧ್ಯಾಯಮಾನಾ ಜನಾರ್ದನಮ್ ॥೩೩॥

ಪುಷ್ಯನಕ್ಷತ್ರದಲ್ಲಿ ಮಗನಿಗೆ ಯುವರಾಜ ಸಿಂಹಾಸನದಲ್ಲಿ ಅಭಿಷೇಕವೆಂದು ಕೇಳಿ ಪ್ರಾಣಾಯಾಮದಿಂದ ಪರಮಪುರುಷ ನಾರಾಯಣನನ್ನು ಧ್ಯಾನಿಸುತ್ತಿದ್ದಳು.

ತಥಾ ಸನಿಯಮಾಮೇವ ಸೋಽಭಿಗಮ್ಯಾಭಿವಾದ್ಯ ಚ ।
ಉವಾಚ ವಚನಂ ರಾಮೋ ಹರ್ಷಯಂಸ್ತಾಮನಿಂದಿತಾಮ್ ॥೩೪॥

ಹಾಗೆ ವ್ರತಸ್ಥಳಾಗಿದ್ದ ತಾಯಿಯ ಬಳಿಗೆ ಹೋಗಿ ಶ್ರೀರಾಮ ಅಭಿವಾದನ ಮಾಡಿ ದೋಷರಹಿತಳಾದ ಅವಳನ್ನು ಹರ್ಷಪಡಿಸುತ್ತ ನುಡಿದ.

ಅಂಬ ಪಿತ್ರಾ ನಿಯುಕ್ತೋಽಸ್ಮಿ ಪ್ರಜಾಪಾಲನಕರ್ಮಣಿ ।
ಭವಿತಾ ಶ್ವೋಽಭಿಷೇಕೋಽಯಂ ಯಥಾ ಮೇ ಶಾಸನಂ ಪಿತುಃ ॥೩೫॥

ಸೀತಯಾಪ್ಯುಪವಸ್ತವ್ಯಾ ರಜನೀಯಂ ಮಯಾ ಸಹ
ಏವಮೃತ್ವಿಗುಪಾಧ್ಯಾಯೈಃ ಸಹ ಮಾಮುಕ್ತವಾನ್ ಪಿತಾ ॥೩೬॥

'ಅಮ್ಮ! ಪ್ರಜಾಪಾಲನ ಕರ್ಮದಲ್ಲಿ ನಾನು ತಂದೆಯಿಂದ ಆಜ್ಞಪ್ತನಾಗಿದ್ದೇನೆ.

ನಾಳೆಯೇ ನನಗೆ ಅಭಿಷೇಕ ನಡೆಯಲಿದೆ. ಸೀತೆಯೊಂದಿಗೆ ನಾನು ಈ ರಾತ್ರಿ ಉಪವಾಸವಿರಬೇಕೆಂದು ಋತ್ವಿಜರ ಮತ್ತು ಉಪಾಧ್ಯಾಯರ ಜೊತೆಯಲ್ಲಿ ಕುಳಿತಿದ್ದ ತಂದೆ ನನಗೆ ಹೇಳಿದ್ದಾರೆ.

ಯಾನಿ ಯಾನ್ಯತ್ರ ಯೋಗ್ಯಾನಿ ಶ್ವೋಭಾವಿನ್ಯಭಿಷೇಚನೇ ।
ತಾನಿ ಮೇ ಮಂಗಲಾನ್ಯದ್ಯ ವೈದೇಹ್ಯಾಶ್ಚೈವ ಕಾರಯ ॥೩೭॥

'ನಾಳೆ ನಡೆಯಲಿರುವ ಅಭಿಷೇಕದಲ್ಲಿ ಪೂರ್ವಾಂಗವಾಗಿ ಏನೇನು ಮಂಗಳ ಕಾರ್ಯಗಳಾಗಬೇಕಾಗಿವೆಯೋ ಅವುಗಳನ್ನು ನೀನು ನನಗೂ ಸೀತೆಗೂ ಮಾಡಿಸು.'

ಏತಚ್ಛ್ರುತ್ವಾ ತು ಕೌಸಲ್ಯಾ ಚಿರಕಾಲಾಭಿಕಾಂಕ್ಷಿತಮ್ ।
ಹರ್ಷಬಾಷ್ಪಾಕುಲಂ ವಾಕ್ಯಮಿದಂ ರಾಮಮಭಾಷತ ॥೩೮॥

ಬಹುಕಾಲದಿಂದ ತಾನು ಬಯಸಿದ್ದ ರಾಮನ ಅಭಿಷೇಕ ನಾಳೆಯೇ ಆಗುವು-ದನ್ನು ಕೇಳಿ ಕೌಸಲ್ಯೆ ಆನಂದಬಾಷ್ಪಗಳನ್ನು ಸುರಿಸುತ್ತ ರಾಮನಿಗೆ ನುಡಿದಳು.

ವತ್ಸ ರಾಮ ಚಿರಂ ಜೀವ ಹತಾಸ್ತೇ ಪರಿಪಂಥಿನಃ ।
ಜ್ಞಾತೀನ್ ಮೇ ತ್ವಂ ಶ್ರಿಯಾ ಯುಕ್ತಃ ಸುಮಿತ್ರಾಯಾಶ್ಚ ನಂದಯ॥೩೯।

ಮಗು, ರಾಮ! ಚಿರಕಾಲ ಬಾಳು. ನಿನ್ನ ಶತ್ರುಗಳು ನಾಶ ಹೊಂದಲಿ. ರಾಜ್ಯಲಕ್ಷ್ಮಿಯಿಂದೊಡಗೂಡಿ ನನ್ನ ಹಾಗೂ ಸುಮಿತ್ರೆಯ ಬಂಧುಗಳನ್ನು ಸಂತೋಷಪಡಿಸು.

ರಾಮನಿಗೆ ರಾಜ್ಯ ದೊರೆತರೆ ಅದು ಲಕ್ಷ್ಮಣನಿಗೂ ದೊರೆತಂತೆಯೆ. ಹೀಗಾಗಿ ಕೌಸಲ್ಯೆ ಸುಮಿತ್ರೆಯರಿಬ್ಬರ ಬಂಧುಗಳೂ ಸಂತೋಷಪಡುತ್ತಾರೆ.

ಕಲ್ಯಾಣೇ ಬತ ನಕ್ಷತ್ರೇ ಮಯಿ ಜಾತೋऽಸಿ ಪುತ್ರಕ ।
ಯೇನ ತ್ವಯಾ ದಶರಥೋ ಗುಣೈರಾರಾಧಿತಃ ಪಿತಾ ॥೪೦॥

'ಮಗು, ಒಳ್ಳೆಯ ನಕ್ಷತ್ರದಲ್ಲಿ ನೀನು ನನ್ನ ಉದರದಲ್ಲಿ ಜನಿಸಿರುವೆ. ಅದರಿಂದ ನೀನು ನಿನ್ನ ಸದ್ಗುಣಗಳಿಂದ ತಂದೆಯಾದ ದಶರಥನನ್ನು ಸಂತೋಷ ಗೊಳಿಸಿರುವೆ.

ಅಮೋಘಂ ಬತ ಮೇ ಕ್ಷಾಂತಂ ಪುರುಷೇ ಪುಷ್ಕರೇಕ್ಷಣೇ ।
ಯೇಯಮಿಕ್ಷ್ವಾಕುರಾಜ್ಯಶ್ರೀಃ ಪುತ್ರ ತ್ವಾಂ ಸಂಶ್ರಯಿಷ್ಯತಿ ॥೪೧॥

'ಮಗು ನಾನು ಕಮಲಾಕ್ಷನಾದ ಪರಮಪುರುಷನ ಕುರಿತು ತಪಗೈದುದು ಇಂದು ಸಾರ್ಥಕವಾಯಿತು. ಏಕೆಂದರೆ ಇಕ್ಷ್ವಾಕುವಂಶದವರ ರಾಜ್ಯಲಕ್ಷ್ಮಿ ನಿನ್ನನ್ನು ಆಶ್ರಯಿಸಲಿರುವಳು.'

ಇತ್ಯೇವಮುಕ್ತೋ ಮಾತ್ರೇದಂ ರಾಮೋ ಭ್ರಾತರಮಬ್ರವೀತ್ ।
ಪ್ರಾಂಜಲಿಂ ಪ್ರಹ್ವಮಾಸೀನಮಭಿವೀಕ್ಷ್ಯ ಸ್ಮಯನ್ನಿವ ॥೪೨॥

ತಾಯಿ ಹೀಗೆ ಹೇಳಿದಾಗ ರಾಮನು ಕೈಮುಗಿದು ನಮ್ರತೆಯಿಂದ ಕುಳಿತಿದ್ದ ಲಕ್ಷ್ಮಣನನ್ನು ನೋಡಿ ನಸುನಗುತ್ತ ಹೇಳಿದ.

ಲಕ್ಷ್ಮಣೇಮಾಂ ಮಯಾ ಸಾರ್ಧಂ ಪ್ರಶಾಧಿ ತ್ವಂ ವಸುಂಧರಾಮ್ ।
ದ್ವಿತೀಯಂ ಮೇಽಂತರಾತ್ಮಾನಂ ತ್ವಾಮಿಯಂ ಶ್ರೀರುಪಸ್ಥಿತಾ ॥೪೩॥

'ಲಕ್ಷ್ಮಣ, ನನ್ನೊಂದಿಗೆ ನೀನೂ ಈ ರಾಜ್ಯವನ್ನು ಆಳು. ನನ್ನ ಎರಡನೇ ಅಂತರಾತ್ಮನಾಗಿರುವ ನಿನ್ನನ್ನು ಈ ರಾಜ್ಯಲಕ್ಷ್ಮಿ ಸೇರುತ್ತಿದ್ದಾಳೆ.

ಸೌಮಿತ್ರೇ ಭುಂಕ್ಷ್ವ ಭೋಗಾಂಸ್ತ್ವಮಿಷ್ಟಾನ್ ರಾಜ್ಯಫಲಾನಿ ಚ ॥೪೪॥

'ಲಕ್ಷ್ಮಣ, ಇಷ್ಟವಾದ ಭೋಗಗಳನ್ನು ರಾಜ್ಯಫಲಗಳನ್ನು ಅನುಭವಿಸು. ನಾನು ನನ್ನ ಬದುಕನ್ನೂ ರಾಜ್ಯವನ್ನೂ ನಿನಗಾಗಿಯೇ ಇಷ್ಟಪಡುತ್ತೇನೆ.'

ಇತ್ಯುಕ್ತ್ವಾ ಲಕ್ಷ್ಮಣಂ ರಾಮೋ ಮಾತರಾವಭಿವಾದ್ಯ ಚ ।
ಅಭ್ಯನುಜ್ಞಾಪ್ಯ ಸೀತಾಂ ಚ ಜಗಾಮ ಸ್ವಂ ನಿವೇಶನಮ್ ॥೪೫॥

ಶ್ರೀರಾಮನು ಲಕ್ಷ್ಮಣನಿಗೆ ಹೀಗೆ ಹೇಳಿ, ಮಾತೆಯರಿಬ್ಬರಿಗೂ ಅಭಿವಾದನ ಮಾಡಿ, ಅವರಿಂದ ತನಗೂ ಸೀತೆಗೂ ಅನುಜ್ಞೆ ಪಡೆದು ತನ್ನ ನಿವಾಸಕ್ಕೆ ತೆರಳಿದನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ನಾಲ್ಕನೇ ಸರ್ಗ ಮುಗಿಯಿತು.

❖

ಪಂಚಮ ಸರ್ಗಃ

ಸರ್ಗ – 5

ಶ್ರೀರಾಮ ವ್ರತಸ್ಥನಾಗುವಂತೆ ವಸಿಷ್ಠರ ಉಪದೇಶ.

ಸಂದಿಶ್ಯ ರಾಮಂ ನೃಪತಿಃ ಶ್ವೋಭಾವಿನ್ಯಭಿಷೇಚನೇ ।
ಪುರೋಹಿತಂ ಸಮಾಹೂಯ ವಸಿಷ್ಠಮಿದಮಬ್ರವೀತ್ ॥೧॥

ರಾಜಾ ದಶರಥನು ರಾಮನನ್ನು ಕಳಿಸಿಕೊಟ್ಟ ಬಳಿಕ ನಾಳೆ ನಡೆಯಲಿರುವ ಅಭಿಷೇಕದ ವಿಷಯದಲ್ಲಿ ಪುರೋಹಿತನಾದ ವಸಿಷ್ಠನನ್ನು ಕರೆದು ಹೇಳಿದ.

ಗಚ್ಛೋಪವಾಸಂ ಕಾಕುತ್ಸ್ಥಂ ಕಾರಯಾದ್ಯ ತಪೋಧನ ।
ಶ್ರೇಯಸೇ ರಾಜ್ಯಲಾಭಾಯ ವಧ್ವಾ ಸಹ ಯತವ್ರತಮ್ ॥೨॥

'ತಪೋಧನನೆ, ಹೋಗು, ವ್ರತನಿಷ್ಠನಾದ ಸೀತಾಸಮೇತನಾದ ರಾಮನಿಂದ ಶ್ರೇಯಸ್ಸಿಗೂ ರಾಜ್ಯ ಲಾಭಕ್ಕೂ ಕಾರಣವಾಗುವ ಉಪವಾಸವ್ರತವನ್ನು ಮಾಡಿಸು.'

ತಥೇತಿ ಚ ಸ ರಾಜಾನಮುಕ್ತ್ವಾ ವೇದವಿದಾಂ ವರಃ ।
ಸ್ವಯಂ ವಸಿಷ್ಠೋ ಭಗವಾನ್ ಯಯೌ ರಾಮನಿವೇಶನಮ್ ॥೩॥

'ಹಾಗೇ ಆಗಲಿ' ಎಂದು ರಾಜನಿಗೆ ಹೇಳಿ, ವೇದವೇತ್ತರಲ್ಲಿ ಶ್ರೇಷ್ಠರಾದ ಭಗವಾನ್ ವಸಿಷ್ಠರು ಸ್ವತಃ ರಾಮಮಂದಿರಕ್ಕೆ ತೆರಳಿದರು.

ಉಪವಾಸಯಿತುಂ ರಾಮಂ ಮಂತ್ರವನ್ಮಂತ್ರಕೋವಿದಃ ।
ಬ್ರಾಹ್ಮಂ ರಥವರಂ ಯುಕ್ತಮಾಸ್ಥಾಯ ಸುಧೃತವ್ರತಃ ॥೪॥

ಮಂತ್ರ ನಿಷ್ಣಾತನಾದ ವ್ರತನಿಷ್ಠನೂ ಆದ ವಸಿಷ್ಠಮುನಿ ಮಂತ್ರಪೂರ್ವಕ ವಾಗಿ ರಾಮನಿಂದ ಉಪವಾಸ ವ್ರತ ಮಾಡಿಸುವುದಕ್ಕಾಗಿ ಬ್ರಾಹ್ಮಣರಿಗೆ ಯೋಗ್ಯವಾದ ಸಜ್ಜಾಗಿರುವ ಶ್ರೇಷ್ಠವಾದ ರಥವನ್ನು ಏರಿ ರಾಮಮಂದಿರಕ್ಕೆ ತೆರಳಿದ.

ಸ ರಾಮಭವನಂ ಪ್ರಾಪ್ಯ ಪಾಂಡರಾಭ್ರಘನಪ್ರಭಮ್ ।
ತಿಸ್ರಃ ಕಕ್ಷ್ಯಾ ರಥೇನೈವ ವಿವೇಶ ಮುನಿಸತ್ತಮಃ ॥೫॥

ರಾಮಮಂದಿರದ ಮೂರೂ ದ್ವಾರಗಳನ್ನು ತ್ವರೆಯಿಂದ ರಥದಿಂದಲೇ ದಾಟಿ ಮುನಿಶ್ರೇಷ್ಠನಾದ ವಸಿಷ್ಠನು ಆಕಾಶದಲ್ಲಿ ತೇಲುವ ಬಿಳಿಮೋಡದಂತಿದ್ದ ಮಂದಿರ-ವನ್ನು ಪ್ರವೇಶಿಸಿದ.

ತಮಾಗತಮೃಷಿಂ ರಾಮಸ್ತ್ವರನ್ನಿವ ಸಸಂಭ್ರಮಮ್ ।
ಮಾನಯಿಷ್ಯನ್ ಸ ಮಾನಾರ್ಹಂ ನಿಶ್ಚಕ್ರಾಮ ನಿವೇಶನಾತ್ ॥೬॥

ಬಂದ ಸಂಮಾನಾರ್ಹನಾದ ಆ ಋಷಿಯನ್ನು ತ್ವರೆಯಿಂದ ಸಂಭ್ರಮದಿಂದ ಸಮ್ಮಾನಿಸಲು ಶ್ರೀರಾಮನು ಮಂದಿರದಿಂದ ಹೊರಗೆ ಹೊರಟ.

ಅಭ್ಯೇತ್ಯ ತ್ವರಮಾಣಶ್ಚ ರಥಾಭ್ಯಾಶಂ ಮನೀಷಿಣಃ ।
ತತೋಽವತಾರಯಾಮಾಸ ಪರಿಗೃಹ್ಯ ರಥಾತ್ ಸ್ವಯಮ್ ॥೭॥

ಜ್ಞಾನಿಯಾದ ಋಷಿಯ ರಥದ ಬಳಿಗೆ ಬೇಗನೆ ಹೋಗಿ ರಾಮನು ತಾನೇ ಅವನ ಕೈಹಿಡಿದು ರಥದಿಂದ ಕೆಳಗೆ ಇಳಿಸಿದ.

ಸ ಚೈನಂ ಪ್ರಶ್ರಿತಂ ದೃಷ್ಟ್ವಾ ಸಂಭಾಷ್ಯಾಭಿಪ್ರಸಾದ್ಯ ಚ ।
ಪ್ರಿಯಾರ್ಹಂ ಹರ್ಷಯನ್ ರಾಮಮಿತ್ಯುವಾಚ ಪುರೋಹಿತಃ ॥೮॥

ಪ್ರಿಯವಚನಯೋಗ್ಯನಾದ ನಮ್ರನಾದ ರಾಮನನ್ನು ನೋಡಿ ವಸಿಷ್ಠಮುನಿ 'ಮಗು!' ಎಂದು ಪ್ರೀತಿಯಿಂದ ಕರೆದು ಪ್ರಶಂಸೆಮಾಡಿ ಹೀಗೆ ನುಡಿದ.

ಪ್ರಸನ್ನಸ್ತೇ ಪಿತಾ ರಾಮ ಯೌವರಾಜ್ಯಮವಾಪ್ಸ್ಯಸಿ ।
ಉಪವಾಸಂ ಭವಾನದ್ಯ ಕರೋತು ಸಹ ಸೀತಯಾ ॥೯॥

'ರಾಮ, ನಿನ್ನ ತಂದೆ ಪ್ರಸನ್ನನಾಗಿದ್ದಾನೆ. ನೀನು ಯುವರಾಜಪದವಿಯನ್ನು ಹೊಂದುವಿ. ಅದಕ್ಕೆ ನೀನು ಸೀತೆಯೊಂದಿಗೆ ಇಂದು ಉಪವಾಸ ಮಾಡು.'

ಪ್ರಾತಸ್ತ್ವಾಮಭಿಷೇಕ್ತಾ ಹಿ ಯೌವರಾಜ್ಯೇ ನರಾಧಿಪಃ ।
ಪಿತಾ ದಶರಥಃ ಪ್ರೀತ್ಯಾ ಯಯಾತಿಂ ನಹುಷೋ ಯಥಾ ॥೧೦॥

ನಹುಷನು ಯಯಾತಿಗೆ ಅಭಿಷೇಕ ಮಾಡಿದಂತೆ ನಾಳೆ ಬೆಳಿಗ್ಗೆ ತಂದೆಯಾದ ರಾಜಾ ದಶರಥನು ಪ್ರೀತಿಯಿಂದ ನಿನಗೆ ಯುವರಾಜಪದವಿಯಲ್ಲಿ ಅಭಿಷೇಕ ಮಾಡಲಿರುವನು.

ಇತ್ಯುಕ್ತ್ವಾ ಸ ತದಾ ರಾಮಮುಪವಾಸಂ ಯತವ್ರತಮ್ ।
ಮಂತ್ರವತ್ಕಾರಯಾಮಾಸ ವೈದೇಹ್ಯಾ ಸಹಿತಂ ಮುನಿಃ ॥೧೧॥

ಹೀಗೆ ಹೇಳಿ ಆ ಮುನಿಯು ಆಗ ವ್ರತನಿಷ್ಠನಾದ ರಾಮನಿಂದ ಸೀತೆಯೊಂದಿಗೆ ಉಪವಾಸವ್ರತ ಸಂಕಲ್ಪವನ್ನು ಮಂತ್ರಪೂರ್ವಕವಾಗಿ ಮಾಡಿಸಿದ.

ತತೋ ಯಥಾವದ್ರಾಮೇಣ ಸ ರಾಜ್ಞೋ ಗುರುರರ್ಚಿತಃ ।
ಅಭ್ಯನುಜ್ಞಾಪ್ಯ ಕಾಕುತ್ಸ್ಥಂ ಯಯೌ ರಾಮನಿವೇಶನಾತ್ ॥೧೨॥

ಬಳಿಕ ರಾಜಗುರು ವಸಿಷ್ಠನು ಶ್ರೀರಾಮನಿಂದ ಯಥಾಯೋಗ್ಯವಾಗಿ ಸತ್ಕೃತನಾದ. ರಾಮನಿಂದ ಅನುಮತಿಪಡೆದು ರಾಮಮಂದಿರದಿಂದ ಹೊರಟ.

ಸುಹೃದ್ಭಿಸ್ತತ್ರ ರಾಮೋಽಪಿ ಸಹಾಸೀನಃ ಪ್ರಿಯಂವದೈಃ ।
ಸಭಾಜಿತೋ ವಿವೇಶಾಥ ತಾನನುಜ್ಞಾಪ್ಯ ಸರ್ವಶಃ ॥೧೩॥

ರಾಮನು ಪ್ರಿಯವನ್ನು ಆಡುವ ಅಭಿಮಾನಿಗಳಾದ ಪ್ರಜೆಗಳೊಂದಿಗೆ ಸ್ವಲ್ಪಕಾಲ ಮಂದಿರದ ಹೊರಾಂಗಣದಲ್ಲಿ ಕುಳಿತಿದ್ದು ಅವರೆಲ್ಲರಿಂದ ಪ್ರಶಂಸೆ ಪಡೆದು ಎಲ್ಲರನ್ನೂ ಅವರ ಮನೆಗಳಿಗೆ ಕಳಿಸಿಕೊಟ್ಟು ಮನೆಯೊಳಗೆ ಪ್ರವೇಶಿಸಿದ.

ಪ್ರಹೃಷ್ಟನರನಾರೀಕಂ ರಾಮವೇಶ್ಮ ತದಾ ಬಭೌ ।
ಯಥಾ ಮತ್ತದ್ವಿಜಗಣಂ ಪ್ರಫುಲ್ಲನಲಿನಂ ಸರಃ ॥೧೪॥

ರಾಮಮಂದಿರ ಆಗ ಬಹಳ ಹರ್ಷಗೊಂಡ ನರನಾರಿಯರಿಂದ ಕೂಡಿದ್ದು, ಮದಿಸಿದ ಹಕ್ಕಿಗಳಿಂದ ಯುಕ್ತವಾದ ಅರಳಿದ ತಾವರೆಯುಳ್ಳ ಸರೋವರದಂತೆ ಶೋಭಿಸುತ್ತಿತ್ತು.

ಸ ರಾಜಭವನಪ್ರಖ್ಯಾತ್ತಸ್ಮಾದ್ರಾಮನಿವೇಶನಾತ್ ।
ನಿಃಸೃತ್ಯ ದದೃಶೇ ಮಾರ್ಗಂ ವಸಿಷ್ಠೋ ಜನಸಂವೃತಮ್ ॥೧೫॥

ವಸಿಷ್ಠಮುನಿ ರಾಜನ ಅರಮನೆಯಂತಿದ್ದ ಆ ರಾಮಮಂದಿರದಿಂದ ಹೊರಟು ಜನಸಂದಣಿಯಿಂದ ತುಂಬಿದ್ದ ಮಾರ್ಗವನ್ನು ಕಂಡ.

ವೃಂದವೃಂದೈರಯೋಧ್ಯಾಯಾಂ ರಾಜಮಾರ್ಗಾಃ ಸಮಂತತಃ ।
ಬಭೂವುರಭಿಸಂಬಾಧಾಃ ಕುತೂಹಲಜನೈರ್ವೃತಾಃ ॥೧೬॥

ಅಯೋಧ್ಯೆಯಲ್ಲಿ ರಾಜಮಾರ್ಗಗಳು ಎಲ್ಲೆಡೆ ಪಟ್ಟಾಭಿಷೇಕದ ಬಗ್ಗೆ ಕುತೂಹಲದಿಂದ ಪರಸ್ಪರ ಮಾತನಾಡುವ ಜನಗಳಿಂದ ತುಂಬಿಹೋಗಿದ್ದವು. ಗುಂಪುಗುಂಪುಗಳಿಂದ ಮಾರ್ಗಗಳು ದಟ್ಟವಾಗಿ ತುಂಬಿದ್ದುವು.

ಜನವೃಂದೋರ್ಮಿ ಸಂಘರ್ಷ ಹರ್ಷಸ್ವನವೃತಸ್ತದಾ ।
ಬಭೂವ ರಾಜಮಾರ್ಗಸ್ಯ ಸಾಗರಸ್ಯೇವ ನಿಸ್ವನಃ ॥೧೭॥

ಜನಸಮೂಹಗಳೆಂಬ ಅಲೆಗಳ ನೂಕುನುಗ್ಗಲಿನೊಂದಿಗೆ ಹರ್ಷೋದ್ಗಾರ ಧ್ವನಿಯೂ ಸೇರಿ ರಾಜಮಾರ್ಗವು ಸಾಗರದಂತೆ ಭೋರ್ಗರೆಯುತ್ತಿತ್ತು.

ಸಿಕ್ತಸಂಮೃಷ್ಟರಥ್ಯಾ ಚ ತದಹರ್ವನಮಾಲಿನೀ ।
ಆಸೀದಯೋಧ್ಯಾ ನಗರೀ ಸಮುಚ್ಛ್ರಿತಗೃಹಧ್ವಜಾ ॥೧೮॥

ಆ ದಿನದಲ್ಲಿ ಅಯೋಧ್ಯಾನಗರಿಯಲ್ಲಿ ಎಲ್ಲಿ ನೋಡಿದರೂ ನೀರು ಚಿಮುಕಿಸಿ ಶುದ್ಧಗೊಳಿಸಿದ ಬೀದಿಗಳು, ತಳಿರು ತೋರಣಗಳು, ಎತ್ತರದ ಮನೆಗಳ ಮೇಲೆ ಧ್ವಜಗಳು ಕಾಣಿಸುತ್ತಿದ್ದವು.

ತದಾ ಹ್ಯಯೋಧ್ಯಾನಿಲಯಃ ಸಸ್ತ್ರೀಬಾಲಾಕುಲೋ ಜನಃ ।
ರಾಮಾಭಿಷೇಕಮಾಕಾಂಕ್ಷನ್ನಾಕಾಂಕ್ಷನ್ನುದಯಂ ರವೇಃ ॥೧೯॥

ಸ್ತ್ರೀಯರು ಬಾಲಕರೆನ್ನದೆ ಅಯೋಧ್ಯಾವಾಸಿಗಳಾದ ಎಲ್ಲ ಜನರೂ ಆ ದಿನ ನಿದ್ದೆಗೆಟ್ಟು ರಾಮಾಭಿಷೇಕವನ್ನು ಇದಿರು ನೋಡುತ್ತ ಬೇಗನೆ ಸೂರ್ಯೋದಯ-ವಾಗಲೆಂದು ತವಕಿಸಿದರು.

ಪ್ರಜಾಲಂಕಾರಭೂತಂ ಚ ಜನಸ್ಯಾನಂದವರ್ಧನಮ್ ।
ಉತ್ಸುಕೋऽಭೂಜ್ಜನೋ ದ್ರಷ್ಟುಂ ತಮಯೋಧ್ಯಾ-
ಮಹೋತ್ಸವಮ್ ॥೨೦॥

ಪ್ರಜೆಗಳೆಲ್ಲರೂ ರಾಮಪಟ್ಟಾಭಿಷೇಕ ಮಹೋತ್ಸವಕ್ಕಾಗಿ ತಮ್ಮನ್ನು ಬಹಳ ಸಿಂಗರಿಸಿಕೊಂಡರು. ಆನಂದದಿಂದ ಉಬ್ಬಿದರು. ಆ ಅಯೋಧ್ಯಾಮಹೋತ್ಸವ-ವನ್ನು ಕಾಣಲು ಜನರು ಉತ್ಸುಕರಾದರು.

ಏವಂ ತಂ ಜನಸಂಬಾಧಂ ರಾಜಮಾರ್ಗಂ ಪುರೋಹಿತಃ ।
ವ್ಯೂಹನ್ನಿವ ಜನೌಘಂ ತಂ ಶನೈ ರಾಜಕುಲಂ ಯಯೌ ॥೨೧॥

ಹೀಗೆ ಪುರೋಹಿತರಾದ ವಸಿಷ್ಠಮುನಿ ಜನದಟ್ಟಣೆಯಿಂದ ಕೂಡಿದ್ದ ರಾಜ-ಮಾರ್ಗದಲ್ಲಿ ಜನಸಮೂಹವನ್ನು ವಿಭಾಗಮಾಡಿ, ವ್ಯವಸ್ಥಿತವಾಗಿ ಎರಡು ಪಕ್ಷಗಳಲ್ಲಿ ನಿಲ್ಲಿಸುತ್ತಿರುವಂತೆ ಕಂಡುಬಂದರು. ಅರಮನೆ ಕಡೆಗೆ ನಿಧಾನವಾಗಿ ಮುಂದೆ ಮುಂದೆ ಸರಿದರು.

ಸಿತಾಭ್ರಶಿಖರಪ್ರಖ್ಯಂ ಪ್ರಾಸಾದಮಧಿರುಹ್ಯ ಸಃ ।
ಸಮೀಯಾಯ ನರೇಂದ್ರೇಣ ಶಕ್ರೇಣೇವ ಬೃಹಸ್ಪತಿಃ ॥೨೨॥

ಬಿಳಿಮೋಡದಿಂದ ಆಚ್ಛಾದಿತವಾದ ಪರ್ವತ ಶಿಖರದಂತೆ ಕಾಣುತ್ತಿದ್ದ. ಅರಮನೆಯ ಮಾಳಿಗೆಯನ್ನೇರಿ, ಬೃಹಸ್ಪತಿ ಇಂದ್ರನನ್ನು ಸೇರುವಂತೆ, ವಸಿಷ್ಠರು ವಂದಿಸಿ ದಶರಥನನ್ನು ಸೇರಿದರು.

ತಮಾಗತಮಭಿಪ್ರೇಕ್ಷ್ಯ ಹಿತ್ವಾ ರಾಜಾಸನಂ ನೃಪಃ ।
ಪಪ್ರಚ್ಛ ಸ ಚ ತಸ್ಮೈ ತತ್ ಕೃತಮಿತ್ಯಭ್ಯವೇದಯತ್ ॥೨೩॥

ವಸಿಷ್ಠಮುನಿ ಬಂದುದನ್ನು ಕಂಡು ರಾಜನು ರಾಜಾಸನ ಬಿಟ್ಟು ಎದ್ದು 'ಹೋದ ಕಾರ್ಯವಾಯಿತೆ?' ಎಂದು ಕೇಳಿದ. 'ಅದು ಪೂರ್ಣವಾಯಿತೆಂ'ದು ಮುನಿ ನುಡಿದರು.

ತೇನ ಚೈವ ತದಾ ತುಲ್ಯಂ ಸಹಾಸೀನಾಃ ಸಭಾಸದಃ ।
ಆಸನೇಭ್ಯಃ ಸಮುತ್ತಸ್ಥುಃ ಪೂಜಯಂತಃ ಪುರೋಹಿತಮ್ ॥೨೪॥

ದಶರಥನಂತೆಯೇ ಅವನೊಂದಿಗೆ ಆಸೀನರಾಗಿದ್ದ ಸಭಾಸದರೂ ಕೂಡ ಆಗ ಆಸನ ಬಿಟ್ಟೆದ್ದು ಪುರೋಹಿತನನ್ನು ಗೌರವಿಸಿದರು.

ಗುರುಣಾ ತ್ವಭ್ಯನುಜ್ಞಾತೋ ಮನುಜೌಘಂ ವಿಸೃಜ್ಯ ತಮ್ ।
ವಿವೇಶಾಂತಃಪುರಂ ರಾಜಾ ಸಿಂಹೋ ಗಿರಿಗುಹಾಮಿವ ॥೨೫॥

ಗುರುವಸಿಷ್ಠರ ಅನುಮತಿ ಪಡೆದು ರಾಜನು ಜನಸಮೂಹದ ಸಭೆಯನ್ನು ವಿಸರ್ಜಿಸಿ, ಸಿಂಹವು ಗಿರಿಗುಹೆಯನ್ನು ಪ್ರವೇಶಿಸುವಂತೆ, ಅಂತಃಪುರವನ್ನು ಪ್ರವೇಶಿಸಿದ.

ತದಗ್ರ್ಯವೇಷಪ್ರಮದಾಜನಾಕುಲಂ
ಮಹೇಂದ್ರವೇಶ್ಮಪ್ರತಿಮಂ ನಿವೇಶನಮ್ ।
ವಿದೀಪಯಂಶ್ಚಾರು ವಿವೇಶ ಪಾರ್ಥಿವಃ
ಶಶೀವ ತಾರಾಗಣಸಂಕುಲಂ ನಭಃ ॥೨೬॥

ಉತ್ತಮ ರೂಪಲಾವಣ್ಯ ಯುಕ್ತರಾದ ಸ್ತ್ರೀಜನರಿಂದ ತುಂಬಿದ್ದು ಇಂದ್ರನ ಅರಮನೆಯಂತೆ ಶೋಭಿಸುತ್ತಿದ್ದ ಅಂತಃಪುರವನ್ನು ತನ್ನ ಕಾಂತಿಯಿಂದ ಬೆಳಗಿಸುತ್ತ

ನಕ್ಷತ್ರಸಮೂಹದಿಂದ ತುಂಬಿದ ಆಗಸವನ್ನು ಚಂದಿರನಂತೆ ರಾಜಾ ದಶರಥ ಪ್ರವೇಶಿಸಿದ.

ಚಂದ್ರನಿಗೆ ನಕ್ಷತ್ರರಾಣಿಯರು ಅನೇಕ ಇದ್ದರೂ ಅವರಲ್ಲಿ ರೋಹಿಣಿಯಲ್ಲಿ ಅವನಿಗೆ ವಿಶೇಷ ಆಸಕ್ತಿ. ಹಾಗೇ ದಶರಥನಿಗೆ ಕೈಕೇಯಿಯಲ್ಲಿ ವಿಶೇಷ ಆಸಕ್ತಿ 'ಆತ್ಮಕಾಮಾ ಸದಾ ಚಂಡೀ ಕ್ರೋಧನಾ ಪ್ರಾಜ್ಞಮಾನಿನೀ' (ಅಯೋ.70.10) ಎಂದು ಭರತ ಹೇಳುವಂತೆ ಅವಳು ಸ್ವಾರ್ಥಪರಳು, ಕೋಪಿಷ್ಠೆ. ಅದರಿಂದ ದಶರಥ ಅವಳ ಸಮಾಧಾನಕ್ಕಾಗಿ ಅವಳನ್ನೇ ಸದಾ ಆದರಿಸುತ್ತಿದ್ದ. ಮುಂದೆ (9.25) ಇದು ಸ್ಪಷ್ಟವಿದೆ ಹೊರತು ಇದು ಸ್ತ್ರೀವ್ಯಾಮೋಹವಲ್ಲ ಎಂದು ಚಂದ್ರತಾರೆಯರ ಉಪಮೆಯಿಂದ ಧ್ವನಿತವಾಗುತ್ತದೆ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಐದನೇ ಸರ್ಗ ಮುಗಿಯಿತು.

ಷಷ್ಠ ಸರ್ಗಃ

ಸರ್ಗ – 6

ಪಟ್ಟಾಭಿಷೇಕ ನಡೆಯುವುದೆಂದು ಪೌರರ ಉತ್ಸಾಹ

ಗತೇ ಪುರೋಹಿತೇ ರಾಮಃ ಸ್ನಾತೋ ನಿಯತಮಾನಸಃ ।
ಸಹ ಪತ್ನ್ಯಾ ವಿಶಾಲಾಕ್ಷ್ಯಾ ನಾರಾಯಣಮುಪಾಗಮತ್ ॥೧॥

ಕುಲಪುರೋಹಿತರಾದ ವಸಿಷ್ಠಮುನಿ ಹೊರಟು ಹೋದಾಗ ಶ್ರೀರಾಮ ಸ್ನಾನ ಮಾಡಿ ಮನಃಶುದ್ಧಿಯನ್ನೂ ಮಾಡಿಕೊಂಡು ವಿಶಾಲಾಕ್ಷಿಯಾದ ಪತ್ನಿ ಸೀತೆಯೊಂದಿಗೆ ನಾರಾಯಣನನ್ನು ಉಪಾಸನೆ ಮಾಡಿದ.

ಪ್ರಗೃಹ್ಯ ಶಿರಸಾ ಪಾತ್ರೀಂ ಹವಿಷೋ ವಿಧಿವತ್ತತಃ ।
ಮಹತೇ ದೈವತಾಯಾಜ್ಯಂ ಜುಹಾವ ಜ್ವಲಿತೇऽನಲೇ ॥೨॥

ಹವಿಸ್ಸಿನ ಪಾತ್ರೆಯನ್ನು ಶಿರಸಾ ನಮಿಸಿ ಜ್ವಲಿತವಾದ ಅಗ್ನಿಯಲ್ಲಿ ವಿಧ್ಯುಕ್ತವಾಗಿ ದೇವೋತ್ತಮನಿಗೆ ಆಹುತಿ ನೀಡಿದ.

ಇಲ್ಲಿ 'ಮಹತೇ ದೈವತಾಯ' ಎಂದರೆ 'ಮಹಾದೇವ'ನಾದ ರುದ್ರನಿಗೆ ಆಹುತಿ ನೀಡಿದನೆಂದು ಗ್ರಹಿಸುವುದು ಸರಿಯಲ್ಲ. ಉಪಕ್ರಮದಲ್ಲಿ 'ನಾರಾಯಣ-ಮುಪಾಗಮತ್' ಎಂದಿದೆ. ಉಪಸಂಹಾರದಲ್ಲಿಯೂ ಮುಂದೆ 'ಧ್ಯಾಯನ್ನಾರಾ-ಯಣಂ ದೇವಂ'ಎಂದಿದೆ. ವಿಷ್ಣು ಅನ್ಯನನ್ನು ನಮಿಸುವುದಿಲ್ಲ.

'ನ ಹಿ ವಿಷ್ಣುಃ ಪ್ರಣಮತಿ ಕಸ್ಮೈಚಿದ್ ವಿಬುಧಾಯ ತು' ಅದರಿಂದ ಶ್ರೀರಾಮ ಅಗ್ನಿಹೋತ್ರದಲ್ಲಿ ಅಗ್ನಿ ಸೂರ್ಯ ಪ್ರಜಾಪತಿನಾಮಗಳಿಂದ ತನ್ನನ್ನೇ ತಾನು ಉಪಾಸನ ಮಾಡುತ್ತಾನೆ. ಅಗ್ನ್ಯಾದಿ ಅಂತರ್ಗತನಾಗಿ ಆಹುತಿ ಸ್ವೀಕರಿಸುವವನು, 'ಮಹದ್ದೈವತ'ವು, ಶ್ರೀರಾಮನು ತಾನೇ. 'ನಾರಾಯಣಮುಪಾಗಮತ್' 'ನಾರಾಯಣನನ್ನು ಉಪಾಸನೆ ಮಾಡಿದನೆಂ'ದರೆ ಅದು ಇಲ್ಲಿ ಸಾಯಂ ಅಗ್ನಿಹೋತ್ರ ಹೋಮವೆ ಎಂದಿಟ್ಟುಕೊಳ್ಳಬೇಕು.

ಶೇಷಂ ಚ ಹವಿಷಸ್ತಸ್ಯ ಪ್ರಾಶ್ಯಾಶಾಸ್ಯಾತ್ಮನಃ ಪ್ರಿಯಮ್ ।
ಧ್ಯಾಯನ್ನಾರಾಯಣಂ ದೇವಂ ಸ್ವಾಸ್ತೀರ್ಣೇ ಕುಶಸಂಸ್ತರೇ ॥೩॥

ವಾಗ್ಯತಃ ಸಹ ವೈದೇಹ್ಯಾ ಭೂತ್ವಾ ನಿಯತಮಾನಸಃ ।
ಶ್ರೀಮತ್ಯಾಯತನೇ ವಿಷ್ಣೋಃ ಶಿಶ್ಯೇ ನರವರಾತ್ಮಜಃ ॥೪॥

ರಾಜಕುಮಾರ ಶ್ರೀರಾಮ ಅಗ್ನಿಹೋತ್ರ ಹೋಮದ ಹವಿಃಶೇಷವನ್ನು ಪ್ರಾಶನಮಾಡಿ, ತನಗೆ ಪ್ರಿಯವಾದುದನ್ನೇ ಆಶಿಸಿ, ದೇವನಾದ ನಾರಾಯಣನನ್ನು ಧ್ಯಾನಿಸುತ್ತ, ತನ್ನ ಅರಮನೆಯೊಳಗಿನ ಸುಂದರವಾದ ವಿಷ್ಣ್ವಾಲಯದಲ್ಲಿ ಹಾಸಿದ್ದ ಕುಶ ಶಯ್ಯೆಯಲ್ಲಿ ಸೀತೆಯೊಂದಿಗೆ ವಾಗ್‌ಮನೋನಿಗ್ರಹಿಯಾಗಿ ಪವಡಿಸಿದ.

ಏಕಯಾಮಾವಶಿಷ್ಟಾಯಾಂ ರಾತ್ರ್ಯಾಂ ಪ್ರತಿವಿಬುಧ್ಯ ಸಃ ।
ಅಲಂಕಾರವಿಧಿಂ ಕೃತ್ಸ್ನಂ ಕಾರಯಾಮಾಸ ವೇಶ್ಮನಃ ॥೫॥

ರಾತ್ರಿಯ ಕೊನೆಯಾಮ ಒಂದು ಉಳಿದಿರುವಾಗಲೇ ಶ್ರೀರಾಮನು ಎದ್ದು ತನ್ನ ಅರಮನೆಗೆ ಅಲಂಕಾರ ವಿಧಿಯೆಲ್ಲವನ್ನೂ ಮಾಡಿಸಿದ.

ತತ್ರ ಶೃಣ್ವನ್ ಸುಖಾ ವಾಚಃ ಸೂತಮಾಗಧವಂದಿನಾಮ್ ।
ಪೂರ್ವಾಂ ಸಂಧ್ಯಾಮುಪಾಸೀನೋ ಜಜಾಪ ಯತಮಾನಸಃ ॥೬॥

ಸೂತರು ಮಾಗಧರು ವಂದಿಗಳು ಎಂಬ ಸ್ತುತಿಪಾಠಕರ ಸುಖಕರವಾದ ಸ್ತುತಿಗಳನ್ನು ಕೇಳಿ ಶ್ರೀರಾಮನು ಪ್ರಾತಃಸಂಧ್ಯೋಪಾಸನೆಯನ್ನು ಮುಗಿಸಿ ಮನೋನಿಗ್ರಹಪೂರ್ವಕವಾಗಿ ಗಾಯತ್ರೀಜಪ ಮಾಡಿದ.

ತುಷ್ಟಾವ ಪ್ರಣತಶ್ಚೈವ ಶಿರಸಾ ಮಧುಸೂದನಮ್ ।
ವಿಮಲಕ್ಷೌಮಸಂವೀತೋ ವಾಚಯಾಮಾಸ ಚ ದ್ವಿಜಾನ್ ॥೭॥

ಶ್ರೀರಾಮ ಸೂರ್ಯನನ್ನೂ ದಿಗ್‌ದೇವತೆಗಳನ್ನೂ ಸ್ತುತಿಸಿದ. ಕೊನೆಯಲ್ಲಿ

'ಆಕಾಶಾತ್ ಪತಿತಂ ತೋಯಂ ಯಥಾ ಗಚ್ಛತಿ ಸಾಗರಂ ।
ಸರ್ವದೇವನಮಸ್ಕಾರಃ ಕೇಶವಂ ಪ್ರತಿಗಚ್ಛತಿ'

ಎಂಬಂತೆ, ಸರ್ವ ದೇವಾಂತರ್ಗತನಾದ ಮಧುಸೂದನನ್ನೇ ತನ್ನನ್ನೇ ಶಿರಸಾ ಪ್ರಣಾಮಮಾಡಿದ. ನಿರ್ಮಲವಾದ ರೇಶಿಮೆ ಉಟ್ಟುಕೊಂಡು ದ್ವಿಜರಿಂದ ಸ್ವಸ್ತಿ ಪುಣ್ಯಾಹವಾಚನ ಮಾಡಿಸಿದ.

ತೇಷಾಂ ಪುಣ್ಯಾಹಘೋಷೋऽಥ ಗಂಭೀರಮಧುರಸ್ತದಾ ।
ಅಯೋಧ್ಯಾಂ ಪೂರಯಾಮಾಸ ತೂರ್ಯಘೋಷಾನುನಾದಿತಃ ॥೮॥

ಗಂಭೀರವೂ ಮಧುರವೂ ಆದ ಆ ದ್ವಿಜರ ಪುಣ್ಯಾಹಘೋಷವು ವಾದ್ಯ ಘೋಷದಿಂದ ಅನುರಣಿತವಾಗಿ ಅಯೋಧ್ಯೆಯನ್ನು ತುಂಬಿತು.

ಕೃತೋಪವಾಸಂ ತು ತದಾ ವೈದೇಹ್ಯಾ ಸಹ ರಾಘವಮ್ ।
ಅಯೋಧ್ಯಾನಿಲಯಃ ಶ್ರುತ್ವಾ ಸರ್ವಃ ಪ್ರಮುದಿತೋ ಜನಃ ॥೯॥

ಆಗ ಶ್ರೀರಾಮನು ಸೀತೆಯೊಂದಿಗೆ ಉಪವಾಸವ್ರತವನ್ನು ಮಾಡಿ ಮುಗಿಸಿದ್ದನ್ನು ಕೇಳಿ ಅಯೋಧ್ಯಾವಾಸಿಗಳಾದ ಎಲ್ಲ ಜನರು ಬಹಳ ಸಂತೋಷಪಟ್ಟರು.

ತತಃ ಪೌರಜನಃ ಸರ್ವಃ ಶ್ರುತ್ವಾ ರಾಮಾಭಿಷೇಚನಮ್ ।
ಪ್ರಭಾತಾಂ ರಜನೀಂ ದೃಷ್ಟ್ವಾ ಚಕ್ರೇ ಶೋಭಯಿತುಂ ಪುರೀಮ್॥೧೦॥

ಪೌರಜನರೆಲ್ಲರೂ 'ರಾಮಾಭಿಷೇಕವಾಗಲಿದೆ' ಎಂದು ಕೇಳಿ, ರಾತ್ರಿ ಬೆಳಗಾದುದನ್ನು ಕಂಡೊಡನೆ, ನಗರವನ್ನು ಸಿಂಗರಿಸಲು ತೊಡಗಿದರು.

ಶುಭ್ರಾಭ್ರಶಿಖರಾಭೇಷು ದೇವತಾಯತನೇಷು ಚ ।
ಚತುಷ್ಪಥೇಷು ರಥ್ಯಾಸು ಚೈತ್ಯೇಷ್ವಟ್ಟಾಲಕೇಷು ಚ ॥೧೧॥

ನಾನಾಪಣ್ಯಸಮೃದ್ಧೇಷು ವಣಿಜಾಮಾಪಣೇಷು ಚ ।
ಕುಟುಂಬಿನಾಂ ಸಮೃದ್ಧೇಷು ಶ್ರೀಮತ್ಸು ಭವನೇಷು ಚ ॥೧೨॥

ಸಭಾಸು ಚೈವ ಸರ್ವಾಸು ವೃಕ್ಷೇಷ್ವಾವಲಕ್ಷಿತೇಷು ಚ ।
ಧ್ವಜಾಃ ಸಮುಚ್ಛ್ರಿತಾಶ್ಚಿತ್ರಾ ಪತಾಕಾಶ್ಚಾವಂಸ್ತದಾ ॥೧೩॥

ಆಗ ಬಿಳಿಮೋಡಗಳಿಂದ ಯುಕ್ತವಾದ ಪರ್ವತಶಿಖರಗಳಂಥ ದೇವಾಲಯಗಳಲ್ಲಿ, ನಾಲ್ಕು ಮಾರ್ಗಗಳು ಸೇರುವಲ್ಲಿ, ಬೀದಿಗಳಲ್ಲಿ, ಯಜ್ಞಶಾಲೆಗಳಲ್ಲಿ, ಕೋಟೆ ಕೊತ್ತಲಗಳಲ್ಲಿ, ನಾನಾ ಸರಕುಗಳಿಂದ ತುಂಬಿದ ವರ್ತಕರ ಅಂಗಡಿಗಳಲ್ಲಿ, ಸಂಸಾರಿಗಳ ಸಂಪತ್ ಸಮೃದ್ಧವಾದ ಮನೆಗಳಲ್ಲಿಯೂ, ಎಲ್ಲ ಸಭಾಗೃಹಗಳಲ್ಲಿಯೂ, ಉನ್ನತವಾದ ಸುಂದರ ವೃಕ್ಷಗಳಲ್ಲಿಯೂ, ಸುಂದರ ಧ್ವಜಪತಾಕೆಗಳು ಎತ್ತರದಲ್ಲಿದ್ದು ಶೋಭಿಸಿದುವು.

ನಟನರ್ತಕಸಂಘಾನಾಂ ಗಾಯಕಾನಾಂ ಚ ಗಾಯತಾಮ್ ।
ಮನಃಕರ್ಣಸುಖಾ ವಾಚಃ ಶುಶ್ರಾವ ಜನತಾ ತತಃ ॥೧೪॥

ನಟ ನರ್ತಕ ಸಮೂಹಗಳ, ಹಾಡುವ ಗಾಯಕರ, ಮನಸಿಗೆ ತಂಪಾದ ಕಿವಿಗಿಂಪಾದ ಮಾತುಗಳನ್ನು ಜನತೆ ಆಗ ಕೇಳಿಸಿಕೊಂಡಿತು.

ರಾಮಾಭಿಷ್ಟವಯುಕ್ತಾಶ್ಚ ಕಥಾಶ್ಚಕ್ರುರ್ಮಿಥೋ ಜನಾಃ
ರಾಮಾಭಿಷೇಕೇ ಸಂಪ್ರಾಪ್ತೇ ಚತ್ವರೇಷು ಗೃಹೇಷು ಚ ॥೧೫॥

ರಾಮಾಭಿಷೇಕ ಸಮಯ ಹತ್ತಿರ ಬರುತ್ತಿದ್ದಂತೆ ನಾಲ್ಕು ಮಾರ್ಗಗಳು ಸೇರುವಲ್ಲಿಯೂ ಮನೆಗಳಲ್ಲಿಯೂ ಜನರು ಪರಸ್ಪರವಾಗಿ ರಾಮನ ಹೊಗಳಿಕೆ ಗಳಿಂದ ಕೂಡಿದ ಮಾತುಕಥೆಗಳಾಡಿದರು.

ಬಾಲಾ ಅಪಿ ಕ್ರೀಡಮಾನಾ ಗೃಹದ್ವಾರೇಷು ಸಂಘಶಃ ।
ರಾಮಾಭಿಷೇಕಸಂಯುಕ್ತಾಶ್ಚಕ್ರುರೇವ ಮಿಥಃ ಕಥಾಃ ॥೧೬॥

ಮಕ್ಕಳು ಕೂಡ ಮನೆಬಾಗಿಲುಗಳಲ್ಲಿ ಆಟವಾಡುತ್ತ ಗುಂಪಾಗಿ ಸೇರಿ ರಾಮಾಭಿಷೇಕಕ್ಕೇ ಸಂಬಂಧಿಸಿದಂತೆ ಪರಸ್ಪರ ಮಾತನಾಡುತ್ತಿದ್ದರು.

ಕೃತಪುಷ್ಪೋಪಹಾರಶ್ಚ ಧೂಪಗಂಧಾಭಿವಾಸಿತಃ ।
ರಾಜಮಾರ್ಗಃ ಕೃತಃ ಶ್ರೀಮಾನ್ ಪೌರೈ ರಾಮಾಭಿಷೇಚನೇ ॥೧೭॥

ರಾಜಮಾರ್ಗವನ್ನು ಪೌರರು ಹೂಗಳಿಂದ ಅಲಂಕರಿಸಿ ಧೂಪದ ಸುಗಂಧವನ್ನು ಹರಡಿ ರಾಮಾಭಿಷೇಕಕಾಲದಲ್ಲಿ ಅದು ಬಹಳ ಚೆನ್ನಾಗಿ ಶೋಭಿಸುವಂತೆ ಮಾಡಿದರು.

ಪ್ರಕಾಶೀಕರಣಾರ್ಥಂ ಚ ನಿಶಾಗಮನಶಂಕಯಾ ।
ದೀಪವೃಕ್ಷಾಂಸ್ತಥಾ ಚಕ್ರುರನುರಥ್ಯಾಸು ಸರ್ವಶಃ ॥೧೮॥

ಅಭಿಷೇಕ ಕಾರ್ಯ ಸುದೀರ್ಘವಾಗಿ ಜರುಗುತ್ತಿದ್ದಂತೆ ಕತ್ತಲಾಗಬಹುದೆಂದು ಭೀತಿಯಿಂದ ಮಾರ್ಗದ ಇಕ್ಕೆಲಗಳಲ್ಲಿ ಎಲ್ಲೆಡೆ ಬೆಳಕುಂಟುಮಾಡಲು ವೃಕ್ಷಗಳಲ್ಲಿ ದೀಪಾಲಂಕಾರ ಮಾಡಿದರು.

ಅಲಂಕಾರಂ ಪುರಸ್ಯೈವಂ ಕೃತ್ವಾ ತತ್ಪುರವಾಸಿನಃ ।
ಆಕಾಂಕ್ಷಮಾಣಾ ರಾಮಸ್ಯ ಯೌವರಾಜ್ಯಾಭಿಷೇಚನಮ್ ॥೧೯॥

ಸಮೇತ್ಯ ಸಂಘಶಃ ಸರ್ವೇ ಚತ್ವರೇಷು ಸಭಾಸು ಚ ।
ಕಥಯಂತೋ ಮಿಥಸ್ತತ್ರ ಪ್ರಶಶಂಸುರ್ಜನಾಧಿಪಮ್ ॥೨೦॥

ನಗರವಾಸಿಗಳು ನಗರಕ್ಕೆ ಹೀಗೆ ಅಲಂಕಾರ ಮಾಡಿ ರಾಮನ ಯುವರಾಜ-ಪಟ್ಟಾಭಿಷೇಕವನ್ನು ಬಯಸಿ ನಾಲ್ಕು ಮಾರ್ಗಗಳು ಕೂಡುವಲ್ಲಿಯೂ ಸಭೆ-ಗಳಲ್ಲಿಯೂ ಎಲ್ಲರೂ ಗುಂಪುಗುಂಪಾಗಿ ಸೇರಿ ಪರಸ್ಪರ ಮಾತನಾಡಿಕೊಳ್ಳುತ್ತ ರಾಜನನ್ನು ಪ್ರಶಂಸಿಸಿದರು.

ಅಹೋ ಮಹಾತ್ಮಾ ರಾಜಾಯಮಿಕ್ಷ್ವಾಕುಕುಲನಂದನಃ ।
ಜ್ಞಾತ್ವಾ ಯೋ ವೃದ್ಧಮಾತ್ಮಾನಂ ರಾಮಂ ರಾಜ್ಯೇಽಭಿಷೇಕ್ಷ್ಯತಿ ॥೨೧॥

'ಇಕ್ಷ್ವಾಕು ಕುಲ ನಂದನನಾದ ಈ ದಶರಥ ರಾಜನು, ಆಹಾ! ಎಂಥ ಮಹಾತ್ಮ! ತಾನು ವೃದ್ಧನಾದೆನೆಂದು ತಿಳಿದು ರಾಮನನ್ನು ರಾಜ್ಯದಲ್ಲಿ ಅಭಿಷೇಕ ಮಾಡುತ್ತಿದ್ದಾನೆ!

ಸರ್ವೇ ಹ್ಯನುಗೃಹೀತಾಃ ಸ್ಮೋ ಯನ್ನೋ ರಾಮೋ ಮಹೀಪತಿಃ ।
ಚಿರಾಯ ಭವಿತಾ ಗೋಪ್ತಾ ದೃಷ್ಟಲೋಕಪರಾವರಃ ॥೨೨॥

'ನಾವಿಂದು ಅನುಗೃಹೀತರಾದೆವು. ಲೋಕದ ಎಲ್ಲ ಉಚ್ಚನೀಚ ಜನ ಸ್ವಭಾವ ಗಳನ್ನು ಕಂಡಿರುವ ರಾಮ ನಮಗೆ ರಾಜನಾಗಿ ಚಿರಕಾಲ ರಕ್ಷಕನಾಗುತ್ತಿದ್ದಾನೆ.

ಅನುದ್ಧತಮನಾ ವಿದ್ವಾನ್ ಧರ್ಮಾತ್ಮಾ ಭ್ರಾತೃವತ್ಸಲಃ ।
ಯಥಾ ಚ ಭ್ರಾತೃಷು ಸ್ನಿಗ್ಧಸ್ತಥಾಸ್ಮಾಸ್ವಪಿ ರಾಘವಃ ॥೨೩॥

'ರಾಮನು ಮನದಲ್ಲಿ ಉದ್ಧತನಾಗುವವಲ್ಲ, ಎಲ್ಲವನ್ನೂ ಸರಿಯಾಗಿ ತಿಳಿದು ಕೊಳ್ಳುವವನು, ಧರ್ಮಾತ್ಮ, ಸೋದರರಲ್ಲಿ ವಾತ್ಸಲ್ಯ ಉಳ್ಳವನು, ಸೋದರರಲ್ಲಿ ಹೇಗೋ ಹಾಗೆ ನಮ್ಮಲ್ಲಿಯೂ ಸ್ನೇಹದಿಂದಿರುತ್ತಾನೆ.

ಚಿರಂ ಜೀವತು ಧರ್ಮಾತ್ಮಾ ರಾಜಾ ದಶರಥೋಽನಘಃ ।
ಯತ್ಪ್ರಸಾದೇನಾಭಿಷಿಕ್ತಂ ರಾಮಂ ದ್ರಕ್ಷ್ಯಾಮಹೇ ವಯಮ್ ॥೨೪॥

'ಧರ್ಮಾತ್ಮ ನಿಷ್ಪಾಪನಾದ ರಾಜಾ ದಶರಥ ಚಿರಕಾಲ ಜೀವಿಸಲಿ. ಅವನ ಅನುಗ್ರಹದಿಂದ ರಾಮನು ಅಭಿಷಿಕ್ತನಾಗುವುದನ್ನು ನಾವು ಕಾಣಲಿದ್ದೇವೆ.'

ಏವಂವಿಧಂ ಕಥಯತಾಂ ಪೌರಾಣಾಂ ಶುಶ್ರುವುಃ ಪರೇ ।
ದಿಗ್ಭ್ಯೋ ವಿಶ್ರುತವೃತ್ತಾಂತಾಃ ಪ್ರಾಪ್ತಾ ಜಾನಪದಾ ಜನಾಃ ॥೨೫॥

ಅಭಿಷೇಕ ವೃತ್ತಾಂತವನ್ನು ಕೇಳಿ ದಿಕ್ಕುಗಳಿಂದ ಬಂದ ಗ್ರಾಮಾಂತರದ ಬೇರೆ ಜನರು ಅಯೋಧ್ಯೆಯಲ್ಲಿ ಪೌರರು ಹೀಗೆ ಮಾತನಾಡಿಕೊಳ್ಳುವುದನ್ನು ಕೇಳಿದರು.

ತೇ ತು ದಿಗ್ಭ್ಯಃ ಪುರೀಂ ಪ್ರಾಪ್ತಾ ದ್ರಷ್ಟುಂ ರಾಮಾಭಿಷೇಚನಮ್ ।
ರಾಮಸ್ಯ ಪೂರಯಾಮಾಸುಃ ಪುರೀಂ ಜಾನಪದಾ ಜನಾಃ ॥೨೬॥

ಅವರು ರಾಮಾಭಿಷೇಕವನ್ನು ನೋಡಲು ದಿಕ್ಕುಗಳಿಂದ ಅಯೋಧ್ಯೆಗೆ

ಬಂದವರು. ಗ್ರಾಮಾಂತರಗಳ ಆ ಜನರು ರಾಮನ ಅಯೋಧ್ಯೆಯನ್ನು ತುಂಬಿದರು.

ಜನೌಘೈಸ್ತೈರ್ವಿಸರ್ಪದ್ಭಿಃ ಶುಶ್ರುವೇ ತತ್ರ ನಿಸ್ವನಃ ।
ಪರ್ವಸೂದೀರ್ಣವೇಗಸ್ಯ ಸಾಗರಸ್ಯೇವ ನಿಸ್ವನಃ ॥೨೭॥

ಪರ್ವಕಾಲಗಳಲ್ಲಿ ವೇಗದಿಂದ ಉಕ್ಕುವ ಸಾಗರದ ಧ್ವನಿಯಂತೇ ನಗರದಲ್ಲಿ ಎಲ್ಲೆಡೆ ವ್ಯಾಪಿಸಿದ ಜನರ ಸಮೂಹಗಳ ಧ್ವನಿಯು ಕೇಳಿಬಂದಿತು.

ತತಸ್ತದಿಂದ್ರಕ್ಷಯಸಂನಿಭಂ ಪುರಂ
ದಿದೃಕ್ಷುಭಿರ್ಜಾನಪದೈರುಪಾಗತೈಃ ।
ಸಮಂತತಃ ಸಸ್ವನಮಾಕುಲಂ ಬಭೌ
ಸಮುದ್ರಯಾದೋಭಿರಿವಾರ್ಣವೋದಕಮ್ ॥೨೮॥

ಸಮುದ್ರದ ಜಲಚರಗಳಿಂದ ಸಮುದ್ರಜಲದಂತೆ ಪ್ರೇಕ್ಷಕರಾಗಿ ಬಂದ ಗ್ರಾಮಾಂತರ ಜನರ ಆಗಮನದಿಂದ ಇಂದ್ರನ ಅಮರಾವತಿ ನಗರದಂಥ ಅಯೋಧ್ಯಾನಗರ ಎಲ್ಲೆಡೆ ಸದ್ದುಗದ್ದಲಗಳಿಂದ ತುಂಬಿಕೊಂಡು ಶೋಭಿಸಿತು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಆರನೇ ಸರ್ಗ ಮುಗಿಯಿತು.

❖

ಸಪ್ತಮ ಸರ್ಗಃ

ಸರ್ಗ – 7

ಕೈಕೇಯಿಗೆ ಮಂಥರೆಯ ಚಾಡಿಮಾತು.

ಜ್ಞಾತಿದಾಸೀ ಯತೋಜಾತಾ ಕೈಕೇಯ್ಯಾಸ್ತು ಸಹೋಷಿತಾ ।
ಪ್ರಾಸಾದಂ ಚಂದ್ರಸಂಕಾಶಮಾರುರೋಹ ಯದೃಚ್ಛಯಾ ॥೧॥

ಎಲ್ಲಿಯೋ ಹುಟ್ಟಿದವಳು ಮಂಥರೆ— 'ಯತೋ ಜಾತಾ' ಕೈಕೇಯಿಯ ಬಂಧುಗಳಿಗೆ ದಾಸಿಯಾಗಿದ್ದಳು—'ಜ್ಞಾತಿದಾಸೀ ಜಾತಾ' ಚಿಕ್ಕಂದಿನಿಂದಲೂ ಕೈಕೇಯಿಯ ಜೊತೆಗೇ ವಾಸಮಾಡುತ್ತಿದ್ದಳು. ಅದರಿಂದ ರಾಮಾಭಿಷೇಕಕ್ಕೆ ನೆರೆದ ಜನರ ಗದ್ದಲವನ್ನು ಕೇಳಿ 'ಯದೃಚ್ಛಯಾ' ಯಾರ ಪ್ರೇರಣೆಯೂ ಇಲ್ಲದೆ ತಾನೇ, ಚಂದ್ರನಂತೆ ಬೆಳ್ಳಗೆ ಇದ್ದ ಮಾಳಿಗೆಯನ್ನು ಏರಿದಳು, ಏನು ಗದ್ದಲವೆಂದು ತಿಳಿದು ಕೈಕೇಯಿಗೆ ತಿಳಿಸಬೇಕೆಂದು.

ಸಿಕ್ತರಾಜಪಥಾಂ ಕೃತ್ಸ್ನಾಂ ಪ್ರಕೀರ್ಣಕಮಲೋತ್ಪಲಾಮ್।
ಅಯೋಧ್ಯಾಂ ಮಂಥರಾ ತಸ್ಮಾತ್‌ಪ್ರಾಸಾದಾದನ್ವವೈಕ್ಷತ ॥೨॥

ಅವಳು ಆ ಮಾಳಿಗೆ ಮೇಲಿಂದ ಕೆಳಗೆ ಅಯೋಧ್ಯೆಯನ್ನು ನೋಡಿದಳು. ಇಡೀ ಅಯೋಧ್ಯೆಯಲ್ಲಿ ರಾಜಮಾರ್ಗಗಳನ್ನು ನೀರು ಚಿಮುಕಿಸಿ ಕಮಲ ಉತ್ಪಲ ಹೂಗಳನ್ನು ಚೆಲ್ಲಿದ್ದಾರೆ.

ಪತಾಕಾಭಿರ್ವರಾರ್ಹಾಭಿರ್ಧ್ವಜೈಶ್ಚ ಸಮಲಂಕೃತಾಮ್ ।
ಸಿಕ್ತಾಂ ಚಂದನತೋಯೈಶ್ಚ ಶಿರಃಸ್ನಾತಜನೈರ್ಯುತಾಮ್ ॥೩॥

ಶ್ರೇಷ್ಠವಾದ, ಶ್ರೀಮಂತರಿಗೇ ಯೋಗ್ಯವಾದ ಪತಾಕೆಗಳಿಂದಲೂ ಧ್ವಜ ಗಳಿಂದಲೂ ಅಲಂಕೃತವಾಗಿದೆ, ಅಯೋಧ್ಯೆ. ಮತ್ತು ಸುಗಂಧಪೂರಿತ ಜಲದಿಂದ ಸಿಕ್ತವಾಗಿದೆ. ಶಿರಃಸ್ನಾನ ಮಾಡಿ ಶುಚಿಯಾದ ಜನರಿಂದ ತುಂಬಿದೆ.

ಮಾಲ್ಯಮೋದಕಹಸ್ತೈಶ್ಚ ದ್ವಿಜೇಂದ್ರೈರಭಿನಾದಿತಾಮ್ ।
ಶುಕ್ಲದೇವಗೃಹದ್ವಾರಾಂ ಸರ್ವವಾದಿತ್ರನಿಸ್ವನಾಮ್ ॥೪॥

ಮಾಲೆ ಮೋದಕಗಳನ್ನು ಕೈಗಳಲ್ಲಿ ಹಿಡಿದು ಬ್ರಾಹ್ಮಣೋತ್ತಮರು ವೇದ ಘೋಷ ಮಾಡುತ್ತಿದ್ದಾರೆ. ಚಂದನೋದಕಲೇಪದಿಂದ ದೇವಾಲಯ ದ್ವಾರಗಳು ಶುದ್ಧವಾಗಿವೆ. ಎಲ್ಲ ಮಂಗಳವಾದ್ಯಘೋಷಗಳು ಕೇಳಿಬರುತ್ತಿವೆ.

ಸಂಪ್ರಹೃಷ್ಟಜನಾಕೀರ್ಣಾಂ ಬ್ರಹ್ಮಘೋಷಾಭಿನಾದಿತಾಮ್ ।
ಪ್ರಹೃಷ್ಟವರಹಸ್ತ್ಯಶ್ವಾಂ ಸಂಪ್ರಣರ್ದಿತಗೋವೃಷಾಮ್ ॥೫॥

ಹರ್ಷೋತ್ಸಾಹ ಭರಿತರಾದ ಜನರೆ ಎಲ್ಲೆಡೆ ಕಂಡುಬರುತ್ತಿದ್ದಾರೆ. ವೇದ ಘೋಷವೂ ಎಲ್ಲೆಡೆ ಕೇಳಿಬರುತ್ತಿದೆ. ಶ್ರೇಷ್ಠವಾದ ಆನೆ ಕುದುರೆಗಳೂ ಬಲು ಹರ್ಷಪಡುತ್ತಿವೆ. ಎತ್ತುಗಳು ಕೂಡ ಜೋರಾಗಿ ಗುಟುರುತ್ತಿವೆ.

ಪ್ರಹೃಷ್ಟಮುದಿತೈಃ ಪೌರೈರುಚ್ಛ್ರಿತಧ್ವಜಮಾಲಿನೀಮ್ ।
ಅಯೋಧ್ಯಾಂ ಮಂಥರಾ ದೃಷ್ಟ್ವಾ ಪರಂ ವಿಸ್ಮಯಮಾಗತಾ ॥೬॥

ಬಲು ಉತ್ಸಾಹದಿಂದ ಆನಂದದಿಂದ ಪೌರರು ಉನ್ನತ ಧ್ವಜಗಳನ್ನು ಸಾಲು-ಸಾಲಾಗಿ ನಿಲ್ಲಿಸಿದ್ದರು. ಇಂಥ ಅಯೋಧ್ಯೆಯನ್ನು ಕಂಡು ಮಂಥರೆ ಬಹಳ ಆಶ್ಚರ್ಯಗೊಂಡಳು.

ಸಾ ಹರ್ಷೋತ್ಫುಲ್ಲನಯನಾಂ ಪಾಂಡರಕ್ಷೌಮವಾಸಿನೀಮ್ ।
ಅವಿದೂರೇ ಸ್ಥಿತಾಂ ದೃಷ್ಟ್ವಾ ಧಾತ್ರೀಂ ಪಪ್ರಚ್ಛ ಮಂಥರಾ ॥೭॥

ಹತ್ತಿರದಲ್ಲಿ ರಾಮನ ಒಬ್ಬಳು ದಾದಿಯೂ ನಿಂತಿದ್ದಳು. ಹರ್ಷದಿಂದ ಅವಳ ಕಣ್ಣುಗಳು ಅರಳಿದ್ದುವು. ತುಸು ಹಳದಿಯಾದ ರೇಶಿಮೆ ಸೀರೆ ಉಟ್ಟಿದ್ದಳು. ಅವಳನ್ನು ನೋಡಿ ಮಂಥರೆ ಕೇಳಿದಳು.

ಉತ್ತಮೇನಾಭಿಸಂಯುಕ್ತಾ ಹರ್ಷೇಣಾರ್ಥಪರಾ ಸತೀ ।
ರಾಮಮಾತಾ ಧನಂ ಕಿಂ ನು ಜನೇಭ್ಯಃ ಸಂಪ್ರಯಚ್ಛತಿ ॥೮॥

'ರಾಮಮಾತೆ ಕೌಸಲ್ಯೆ ಬಹಳ ಹರ್ಷಯುಕ್ತಳಾಗಿ, ತಾನು ಧನ ಸಂಗ್ರಹಾಸಕ್ತಿ ಹೊಂದಿದ್ದರೂ, ಜನರಿಗೆ ಧಾರಾಳ ಧನವನ್ನು ನೀಡುತ್ತಿದ್ದಾಳೆ, ಏಕೆ?

ಅತಿಮಾತ್ರಪ್ರಹರ್ಷೋಽಯಂ ಕಿಂ ಜನಸ್ಯ ಚ ಶಂಸ ಮೇ ।
ಕಾರಯಿಷ್ಯತಿ ಕಿಂ ವಾಪಿ ಸಂಪ್ರಹೃಷ್ಟೋ ಮಹೀಪತಿಃ ॥೯॥

'ಜನಗಳಿಗೆ ಅತಿಯಾದ ಹರ್ಷೋತ್ಸಾಹವಾಗಲು ಕಾರಣವೇನು, ಹೇಳು, ರಾಜನು ಹರ್ಷಗೊಂಡು ಏನು ಉತ್ಸವಕಾರ್ಯವನ್ನು ಮಾಡಿಸಲು ಹೊರಟಿದ್ದಾನೆ?'

ವಿದೀರ್ಯಮಾಣಾ ಹರ್ಷೇಣ ಧಾತ್ರೀ ಪರಮಯಾ ಮುದಾ ।
ಆಚಚಕ್ಷೇಽಥ ಕುಬ್ಜಾಯೈ ಭೂಯಸೀಂ ರಾಘವೇ ಶ್ರಿಯಮ್ ॥೧೦॥

'ದಾದಿ ತನಗಾದ ಹರ್ಷವನ್ನು ತಡೆಯಲಾರದೆ ಪರಮಾನಂದದಿಂದ ಕುಬ್ಜೆಯಾದ ಮಂಥರೆಗೆ ಮಹತ್ತಾದ ರಾಜ್ಯಲಕ್ಷ್ಮಿ ರಾಮನಲ್ಲಿ ಬಂದು ಸೇರಲಿರುವ ವಾರ್ತೆಯನ್ನು ಹೇಳಿದಳು.

ಶ್ವಃ ಪುಷ್ಯೇಣ ಜಿತಕ್ರೋಧಂ ಯೌವರಾಜ್ಯೇನ ರಾಘವಮ್ ।
ರಾಜಾ ದಶರಥೋ ರಾಮಮಭಿಷೇಚಯಿತಾನಘಮ್ ॥೧೧॥

'ನಾಳೆ ಪುಷ್ಯನಕ್ಷತ್ರದಲ್ಲಿ ರಾಜಾ ದಶರಥನು ಕೋಪವನ್ನು ಗೆದ್ದಿರುವ ನಿಷ್ಪಾಪ-ನಾದ ರಾಮನನ್ನು ಯುವರಾಜಸಿಂಹಾಸನದಲ್ಲಿ ಅಭಿಷೇಕ ಮಾಡಲಿರುವನು' ಎಂದು.

ಧಾತ್ರ್ಯಾಸ್ತು ವಚನಂ ಶ್ರುತ್ವಾ ಕುಬ್ಜಾ ಕ್ಷಿಪ್ರಮಮರ್ಷಿತಾ ।
ಕೈಲಾಸಶಿಖಿರಾಕಾರಾತ್ ಪ್ರಾಸಾದಾದವರೋಹತ ॥೧೨॥

ದಾದಿಯ ಮಾತನ್ನು ಕೇಳಿ ಒಡನೆಯೆ ಮಂಥರೆ ಕುಪಿತಳಾದಳು. ಕೈಲಾಸ ಬೆಟ್ಟದ ಶಿಖರದಂಥ ಮಾಳಿಗೆಯಿಂದ ಬೇಗನೆ ಕೆಳಗೆ ಇಳಿದಳು.

ಸಾ ದಹ್ಯಮಾನಾ ಕೋಪೇನ ಮಂಥರಾ ಪಾಪದರ್ಶಿನೀ ।
ಶಯಾನಾಮೇತ್ಯ ಕೈಕೇಯೀಮಿದಂ ವಚನಮಬ್ರವೀತ್ ॥೧೩॥

ನಿಷ್ಪಾಪರಲ್ಲಿ ಪಾಪವನ್ನೇ ಕಾಣುತ್ತಿದ್ದ ಮಂಥರೆ ಕೋಪದಿಂದ ಉರಿಯುತ್ತ ಬಂದಳು. ಹಾಸಿಗೆ ಮೇಲೆ ಮಲಗಿದ್ದ ಕೈಕೇಯಿಗೆ ನುಡಿದಳು.

ಮಂಥರೆಯ ಕೋಪಕ್ಕೆ ಕಾರಣ, ಆಕೆಯನ್ನು ಚಿಕ್ಕಂದಿನಲ್ಲಿ ಒಮ್ಮೆ ಮಗು ರಾಮ ಒದ್ದಿದ್ದನಂತೆ! ಮುಕ್ತಿಯೋಗ್ಯರಿಗೆ ತನ್ನಲ್ಲಿ ಭಕ್ತಿಯನ್ನು ಹೇಗೋ ಹಾಗೇ ತಮೋ-ಯೋಗ್ಯರಿಗೆ ದ್ವೇಷವನ್ನೂ ಅವನೇ ನೀಡುತ್ತಾನೆ!

ಉತ್ತಿಷ್ಠ ಮೂಢೇ ಕಿಂ ಶೇಷೇ ಭಯಂ ತ್ವಾಮಭಿವರ್ತತೇ ।
ಉಪಪ್ಲುತಮಘೌಘೇನ ಕಿಮಾತ್ಮಾನಂ ನ ಬುಧ್ಯಸೇ ॥೧೪॥

'ಎದ್ದೇಳು ಮೂಢಳೆ, ಏಕೆ ಮಲಗಿರುವೆ? ಆಪತ್ತು ನಿನ್ನ ಮೇಲೆ ಎರಗುತ್ತಿದೆ! ಅನಿಷ್ಟಗಳ ರಾಶಿಯೇ ನಿನ್ನನ್ನು ಆಕ್ರಮಿಸುತ್ತಿದೆ. ನಿನ್ನನ್ನೇ ನೀನು ಏಕೆ ತಿಳಿಯಲೊಲ್ಲೆ?

ಅನಿಷ್ಟೇ ಸುಭಗಾಕಾರೇ ಸೌಭಾಗ್ಯೇನ ವಿಕತ್ಥಸೇ ।
ಚಲಂ ಹಿ ತವ ಸೌಭಾಗ್ಯಂ ನದ್ಯಾಃ ಸ್ರೋತ ಇವೋಷ್ಣಗೇ ॥೧೫॥

'ಅದೃಷ್ಟವಂತಳಂತೆ ಕಾಣುತ್ತಿರುವ ಅದೃಷ್ಟಹೀನಳೆ, ಅದೃಷ್ಟವಂತಳೆಂದು ಜಂಬಕೊಚ್ಚಿಕೊಳ್ಳುವೆ! ಬೇಸಗೆಯಲ್ಲಿ ನದಿಯ ಪ್ರವಾಹದಂತೆ ಈಗ ನಿನ್ನ ಸೌಭಾಗ್ಯ ಹಿಂಗುತ್ತಿದೆ.'

ಏವಮುಕ್ತಾ ತು ಕೈಕೇಯೀ ರುಷ್ಟಯಾ ಪರುಷಂ ವಚಃ ।
ಕುಬ್ಜಯಾ ಪಾಪದರ್ಶಿನ್ಯಾ ವಿಷಾದಮಗಮತ್ ಪರಮ್ ॥೧೬॥

ಪಾಪವನ್ನೇ ಕಾಣುವ ಮಂಥರೆ ಕೋಪಗೊಂಡು ಕರ್ಕಶವಾಗಿ ಮಾತನಾಡಿದಾಗ ಕೈಕೇಯಿ ಬಹಳ ವಿಷಾದಕ್ಕೊಳಗಾದಳು.

ಕೈಕೇಯೀ ತ್ವಬ್ರವೀತ್ ಕುಬ್ಜಾಂ ಕಚ್ಚಿತ್ ಕ್ಷೇಮಂ ನ ಮಂಥರೇ ।
ವಿಷಣ್ಣವದನಾಂ ಹಿ ತ್ವಾಂ ಲಕ್ಷಯೇ ಭೃಶದುಃಖಿತಾಮ್ ॥೧೭॥

ಕೈಕೇಯಿ ಮಂಥರೆಯನ್ನು ಕೇಳಿದಳು. 'ಮಂಥರೆ, ನಿನಗೆ ಕ್ಷೇಮವಿಲ್ಲವಾಯಿತೆ? ಏಕೆ, ವಿಷಣ್ಣವದನೆಯಾದ ನೀನು ಬಲುದುಃಖಿತೆಯಂತೆ ಕಾಣುತ್ತಿರುವೆ!

ಮಂಥರಾ ತು ವಚಃ ಶ್ರುತ್ವಾ ಕೈಕೇಯ್ಯಾ ಮಧುರಾಕ್ಷರಮ್।
ಉವಾಚ ಕ್ರೋಧಸಂಯುಕ್ತಾ ವಾಕ್ಯಂ ವಾಕ್ಯವಿಶಾರದಾ ॥೧೮॥

ಕೈಕೇಯಿ ಸವಿಯಾಗಿ ನುಡಿದರೂ ಮಂಥರೆ ಕೇಳಿ ಕ್ರೋಧಯುಕ್ತಳಾದಳು. ಮಾತಿನಲ್ಲಿ ಜಾಣೆಯಾದ ಆಕೆ ನುಡಿದಳು.

ಸಾ ವಿಷಣ್ಣತರಾ ಭೂತ್ವಾ ಕುಬ್ಜಾ ತಸ್ಯಾ ಹಿತೈಷಿಣೀ ।
ವಿಷಾದಯಂತೀ ಪ್ರೋವಾಚ ಭೇದಯಂತೀ ಚ ರಾಘವಮ್ ॥೧೯॥

ಜಾಣೆಯಾದ ಆಕೆ ಕೈಕೇಯಿಗೆ ಹಿತೈಷಿಣಿಯಂತೆ ಇನ್ನಷ್ಟು ವಿಷಣ್ಣಳಾಗಿ, ರಾಮನ ವಿಷಯದಲ್ಲಿ ಕೈಕೇಯಿಗೆ ಭೇದಭಾವನೆ ಬರುವಂತೆ, ಅಭಿಷೇಕ ವಾರ್ತೆಯಿಂದ ಅವಳಿಗೆ ವಿಷಾದವೆ ಉಂಟಾಗುವಂತೆ ಮಾತನಾಡಿದಳು.

ಅಕ್ಷಯ್ಯಂ ಸುಮಹದ್ದೇವಿ ಪ್ರವೃತ್ತಂ ತ್ವದ್ವಿನಾಶನಮ್ ।
ರಾಮಂ ದಶರಥೋ ರಾಜಾ ಯೌವರಾಜ್ಯೇऽಭಿಷೇಕ್ಷ್ಯತಿ ॥೨೦॥

'ದೇವಿ, ನಿನಗೆ ಈಗ ಪರಿಹಾರವೆ ಇಲ್ಲದಂತಹ ದೊಡ್ಡ ಅನಿಷ್ಟ ಬರುತ್ತಿದೆ. ರಾಮನಿಗೆ ರಾಜಾ ದಶರಥನು ಯುವರಾಜನಾಸನದಲ್ಲಿ ಅಭಿಷೇಕ ಮಾಡುತ್ತಿದ್ದಾನೆ!

ಸಾಸ್ಮ್ಯಗಾಧೇ ಭಯೇ ಮಗ್ನಾ ದುಃಖಶೋಕಸಮನ್ವಿತಾ ।
ದಹ್ಯಮಾನಾನಲೇನೇವ ತ್ವದ್ಧಿತಾರ್ಥಮಿಹಾಗತಾ ॥೨೧॥

'ನಾನೀಗ ಅಗಾಧವಾದ ಭಯದಲ್ಲಿ ಮಗ್ನಳಾಗಿ ದುಃಖ ಶೋಕ ಸಮನ್ವಿತಳಾಗಿ ಬೆಂಕಿಯಿಂದ ಹೇಗೋ ಹಾಗೆ ಸುಟ್ಟು ಹೋಗುತ್ತಿದ್ದೇನೆ. ಅದರಿಂದ ನಿನ್ನ ಹಿತಕ್ಕಾಗಿ ನಾನು ನಿನ್ನ ಬಳಿಗೆ ಬಂದಿದ್ದೇನೆ.

ತವ ದುಃಖೇನ ಕೈಕೇಯಿ ಮಮ ದುಃಖಂ ಮಹದ್ಭವೇತ್ ।
ತ್ವದ್ವೃದ್ಧೌ ಮಮ ವೃದ್ಧಿಶ್ಚ ಭವೇದತ್ರ ನ ಸಂಶಯಃ ॥೨೨॥

'ಕೈಕೇಯಿ, ನಿನಗೆ ಸ್ವಲ್ಪ ದುಃಖ ಬಂದರೂ ಅದರಿಂದ ನನಗೆ ಮಹಾದುಃಖ ಉಂಟಾಗುವುದು. ನಿನಗೆ ಸುಖವಾದರೆ ನನಗೂ ಸುಖವಾಗುವುದು. ಇದರಲ್ಲಿ ಸಂಶಯವಿಲ್ಲ.

ನರಾಧಿಪಕುಲೇ ಜಾತಾ ಮಹಿಷೀ ತ್ವಂ ಮಹೀಪತೇಃ ।
ಉಗ್ರತ್ವಂ ರಾಜಧರ್ಮಾಣಾಂ ಕಥಂ ದೇವಿ ನ ಬುಧ್ಯಸೇ ॥೨೩॥

'ರಾಜರ ಕುಲದಲ್ಲಿ ಜನಿಸಿದವಳು ನೀನು. ರಾಜನ ಮಹಿಷಿಯಾಗಿರುವಿ. ಆದರೂ, ದೇವಿ, ನೀನು ರಾಜನೀತಿಯಲ್ಲಿರುವ ಕ್ರೌರ್ಯವನ್ನು ತಿಳಿಯದಿರುವೆ! ಹೇಗೆ?

ಧರ್ಮವಾದೀ ಶಠೋ ಭರ್ತಾ ಶ್ಲಕ್ಷ್ಣವಾದೀ ಚ ದಾರುಣಃ ।
ಶುದ್ಧಭಾವೇ ನ ಜಾನೀಷೇ ತೇನೈವಮತಿಸಂಧಿತಾ ॥೨೪॥

'ನಿನ್ನ ಪತಿ ಧರ್ಮವನ್ನು ಹೇಳುತ್ತಾನೆ. ಒಳಗೊಳಗೇ ವಂಚನೆ ಮಾಡುತ್ತಾನೆ. ಹೊರಗೆ ಸವಿಯಾಗಿ ನುಡಿಯುತ್ತಾನೆ, ಒಳಗೆ ಕ್ರೂರನಾಗಿರುತ್ತಾನೆ. ಅವನು ನಿನ್ನನ್ನು ಹೀಗೆ ವಂಚಿಸುತ್ತಿರುವುದನ್ನು ಮುಗ್ಧನಿರ್ಮಲ ಮನಸ್ಸಿನವಳು ನೀನು ಅರಿತು-ಕೊಳ್ಳುತ್ತಿಲ್ಲ.

ಉಪಸ್ಥಿತಂ ಪ್ರಯುಂಜಾನಸ್ತ್ವಯಿ ಸಾಂತ್ವಮನರ್ಥಕಮ್ ।
ಅರ್ಥೇನೈವಾದ್ಯ ತೇ ಭರ್ತಾ ಕೌಸಲ್ಯಾಂ ಯೋಜಯಿಷ್ಯತಿ ॥೨೫॥

'ಕೌಸಲ್ಯೆಯನ್ನು ಮೆಚ್ಚಿಸುವ ಉದ್ದೇಶದಿಂದ ನಿನ್ನನ್ನು ರಾಜ ಸಂತೈಸಬೇಕಾಗಿದೆ. ಸಂತೈಸುತ್ತಾನೆ, ಅದರಿಂದ ನಿನಗೇನೂ ಪ್ರಯೋಜನವಿಲ್ಲ. ನಿನ್ನ ಪತಿ ಸವತಿಯಾದ ಕೌಸಲ್ಯೆಗೇ ಅಭೀಷ್ಟವನ್ನು ಸಲ್ಲಿಸುತ್ತಾನೆ.

ಅಪವಾಹ್ಯ ಸ ದುಷ್ಟಾತ್ಮಾ ಭರತಂ ತವ ಬಂಧುಷು ।
ಕಾಲ್ಯೇ ಸ್ಥಾಪಯಿತಾ ರಾಮಂ ರಾಜ್ಯೇ ನಿಹತಕಂಟಕೇ ॥೨೬॥

'ದುರ್ಬುದ್ಧಿಯವನಾದ ರಾಜ ನಿನ್ನ ಬಂಧುಗಳ ಮಧ್ಯದಲ್ಲಿ ದೂರದಲ್ಲಿರುವ ಭರತನನ್ನು ಹಾಗೇ ದೂರವಿಟ್ಟು ನಿಷ್ಕಂಟಕವಾದ ರಾಜ್ಯದಲ್ಲಿ ರಾಮನನ್ನು ನಾಳೆಯೆ ಕೂಡಿಸಲಿದ್ದಾನೆ.

ಶತ್ರುಃ ಪತಿಪ್ರವಾದೇನ ಮಾತ್ರೇವ ಹಿತಕಾಮ್ಯಯಾ ।
ಆಶೀವಿಷ ಇವಾಂಕೇ ನ ಬಾಲೇ ಪರಿಹೃತಸ್ತ್ವಯಾ ॥೨೭॥

'ಮುಗ್ಧ ಬಾಲಕಿಯೆ, ಹೆಸರಿಗೆ ಪತಿಯಾದರೂ ಶತ್ರುವೇ ಆಗಿರುವ ರಾಜನನ್ನು ಮಾತೆಯಂತೆ ಹಿತಕಾಮನೆಯಿಂದ ಲಾಲಿಸುತ್ತಿರುವೆ. ಹಾವನ್ನು ದೂರಮಾಡುವು-ದನ್ನು ಬಿಟ್ಟೆ. ಮಡಿಲಲ್ಲಿರಿಸಿಕೊಂಡು ಪೋಷಿಸಿದೆ.

ಯಥಾ ಹಿ ಕುರ್ಯಾತ್ ಸರ್ಪೋ ವಾ ಶತ್ರುರ್ವಾ ಪ್ರತ್ಯುಪೇಕ್ಷಿತಃ ।
ರಾಜ್ಞಾ ದಶರಥೇನಾದ್ಯ ಸಪುತ್ರಾ ತ್ವಂ ತಥಾ ಕೃತಾ ॥೨೮॥

'ಹಾವಾಗಲಿ ಶತ್ರುವಾಗಲಿ ಉಪೇಕ್ಷಿಸಿದರೆ ಏನು ಮಾಡಬಹುದೋ ಅದನ್ನೇ ರಾಜಾ ದಶರಥನು ಇಂದು ನಿನಗೂ ನಿನ್ನ ಮಗನಿಗೂ ಮಾಡಿದ್ದಾನೆ.

ಪಾಪೇನಾನೃತಸಾಂತ್ವೇನ ಬಾಲೇ ನಿತ್ಯಸುಖೋಚಿತೇ ।
ರಾಮಂ ಸ್ಥಾಪಯತಾ ರಾಜ್ಯೇ ಸಾನುಬಂಧಾ ಹತಾ ಹ್ಯಸಿ ॥೨೯॥

'ನಿತ್ಯ ಸುಖಕ್ಕೆ ಯೋಗ್ಯಳಾದ ಬಾಲೆಯೆ, ನಿನಗೆ ಸುಳ್ಳು ಸಾಂತ್ವನ ನೀಡಿ, ಪಾಪಿ-ಯಾದ ನಿನ್ನ ಪತಿ, ರಾಮನನ್ನು ರಾಜ್ಯದಲ್ಲಿ ಕೂಡಿಸುತ್ತಾನೆ. ನೀನಿನ್ನು ಮಗನೊಂದಿಗೆ ಸತ್ತಂತೆಯೇ ಸರಿ.

ಸಾ ಪ್ರಾಪ್ತಕಾಲಂ ಕೈಕೇಯಿ ಕ್ಷಿಪ್ರಂ ಕುರು ಹಿತಂ ತವ ।
ತ್ರಾಯಸ್ವ ಪುತ್ರಮಾತ್ಮಾನಂ ಮಾಂ ಚ ವಿಸ್ಮಯದರ್ಶನೇ ॥೩೦॥

'ನೋಡಿದರೆ ವಿಸ್ಮಯ ಉಂಟುಮಾಡುವ ಸುಂದರಿಯಾದ ಕೈಕೇಯಿ! ನಿನಗಿದು ಸಕಾಲ. ನಿನ್ನ ಹಿತವನ್ನು ನೀನು ಕೂಡಲೆ ಸಾಧಿಸಿಕೊಳ್ಳು. ಮಗನನ್ನು ಕಾಪಾಡಿಕೊಳ್ಳು. ನಿನ್ನನ್ನೂ ನನ್ನನ್ನೂ ಕಾಪಾಡಿಕೊಳ್ಳು.'

ಮಂಥರಾಯಾ ವಚಃ ಶ್ರುತ್ವಾ ಶಯನಾತ್ ಸಾ ಶುಭಾನನಾ ।
ಉತ್ತಸ್ಥೌ ಹರ್ಷಸಂಪೂರ್ಣಾ ಚಂದ್ರಲೇಖೇವ ಶಾರದೀ ॥೩೧॥

ಮಂಥರೆಯ ಮಾತುಕೇಳಿ ಅಂದದ ಮೊಗದವಳು ಕೈಕೇಯಿ ಶರದೃತುವಿನ ಚಂದ್ರಲೇಖೆಯಂತೆ ಹರ್ಷಪೂರ್ಣಳಾಗಿ ಹಾಸಿಗೆಯಂದ ಮೇಲೆದ್ದಳು.

ಅತೀವ ಸಾ ತು ಸಂಹೃಷ್ಟಾ ಕೈಕೇಯೀ ವಿಸ್ಮಯಾನ್ವಿತಾ ।
ಏಕಮಾಭರಣಂ ತಸ್ಯೈ ಕುಬ್ಜಾಯೈ ಪ್ರದದೌ ಶುಭಮ್ ॥೩೨॥

ಕೈಕೇಯಿ ಪರಮಸಂತುಷ್ಟಳಾಗಿ ಆಶ್ಚರ್ಯಚಕಿತಳಾಗಿ ಒಂದು ಒಳ್ಳೆಯ ಆಭರಣವನ್ನು ಮಂಥರೆಗೆ ಬಹುಮಾನವಾಗಿ ನೀಡಿದಳು.

ರಾಮಾಭಿಷೇಕವೆಂಬುದು ಕೈಕೇಯಿಗೆ ಅತ್ಯದ್ಭುತವಾದ ಶುಭವಾರ್ತೆಯಾಗಿತ್ತು. ಅದನ್ನು ಕೇಳಿ ಮೈಮರೆತಿದ್ದರಿಂದ ಮಂಥರೆಯ ಚಾಡಿಮಾತುಗಳು ಅವಳ ಗಮನಕ್ಕೇ ಬರಲಿಲ್ಲ. ಅದರಿಂದ ಮೈಮೇಲಿನ ಆಭರಣಗಳನ್ನೇ ತೆಗೆದು ಬಹುಮಾನವಾಗಿತ್ತಳು.

ದತ್ತ್ವಾ ತ್ವಾಭರಣಂ ತಸ್ಯೈ ಕುಬ್ಜಾಯೈ ಪ್ರಮದೋತ್ತಮಾ ।
ಕೈಕೇಯೀ ಮಂಥರಾಂ ದೃಷ್ಟ್ವಾ ಪುನರೇವಾಬ್ರವೀದಿದಮ್ ॥೩೩॥

ಉತ್ತಮ ಸ್ತ್ರೀಯಾದ ಕೈಕೇಯಿ ಮಂಥರೆಗೆ ಆಭರಣವನ್ನಿತ್ತು ಅವಳನ್ನು ನೋಡುತ್ತ ಪುನಃ ಹೇಳಿದಳು.

ಇದಂ ತು ಮಂಥರೇ ಮಹ್ಯಮಾಖ್ಯಾಸಿ ಪರಮಂ ಪ್ರಿಯಮ್ ।
ಏತನ್ಮೇ ಪ್ರಿಯಮಾಖ್ಯಾತಂ ಭೂಯಃ ಕಿಂ ವಾ ಕರೋಮಿ ತೇ ॥೩೪॥

ಮಂಥರೆ, ನನಗೆ ನೀನು ಏನು ಹೇಳುತ್ತಿರುವೆಯೋ, 'ರಾಮಾಭಿಷೇಕವಾಗುತ್ತಿದೆ' ಎಂದು, ಅದು ನನಗೆ ಪರಮ ಸಂತೋಷದಾಯಕವಾಗಿದೆ. ಸಂತೋಷ-ದಾಯಕವಾದ ವಾರ್ತೆಯನ್ನು ನೀನೇನು ಹೇಳಿದೆಯೋ ಅದಕ್ಕೆ ನಿನಗೆ ಇನ್ನೂ ಹೆಚ್ಚಿನದೇನನ್ನು ಪ್ರೀತಿಯ ಬಹುಮಾನವಾಗಿ ಕೊಡಲಿ?

ರಾಮೇ ವಾ ಭರತೇ ವಾಹಂ ವಿಶೇಷಂ ನೋಪಲಕ್ಷಯೇ ।
ತಸ್ಮಾತ್ತುಷ್ಟಾಸ್ಮಿ ಯದ್ರಾಜಾ ರಾಮಂ ರಾಜ್ಯೇऽಭಿಷೇಕ್ಷ್ಯತಿ ॥೩೫॥

ನನಗೆ ರಾಮಲ್ಲಾಗಲಿ ಭರತನಲ್ಲಾಗಲಿ ಪುತ್ರವಾತ್ಸಲ್ಯ ಸಮಾನವಾಗಿದೆ. ಅವರಲ್ಲಿ ಏನೂ ವಿಶೇಷ ನನಗೆ ಕಾಣುವುದಿಲ್ಲ. ಅದರಿಂದ ರಾಜನು ರಾಮನನ್ನು ರಾಜ್ಯದಲ್ಲಿ ಅಭಿಷೇಕ ಮಾಡುವನೆಂಬ ವಾರ್ತೆಯಿಂದ ನಾನು ಸಂತುಷ್ಟಳೇ ಆಗಿದ್ದೇನೆ.

ಕೌಸಲ್ಯೆಯೂ ಹೀಗೇ ರಾಮಭರತನಲ್ಲಿ ಭೇದವೆಣಿಸಿದವಳಲ್ಲ. ಮೂವರೂ ರಾಣಿಯರು ಪರಸ್ಪರ ಪ್ರೀತಿಯಿಂದಿದ್ದರು. ಸವತಿ ಮಾತ್ಸರ್ಯ ಏರಲಿಲ್ಲ. ಕೈಕೇಯಿ ದರ್ಪ ತೋರುತ್ತಿದ್ದಳಷ್ಟೆ. ಏಕೆಂದರೆ ದಶರಥ ಅವಳನ್ನೇ ಹೆಚ್ಚಾಗಿ ಪ್ರೀತಿಸಿದ್ದ.

ನ ಮೇ ಪರಂ ಕಿಂಚಿದಿತಸ್ತ್ವಯಾ ಪುನಃ
ಪ್ರಿಯಂ ಪ್ರಿಯಾರ್ಹೇ ಸುವಚಂ ವಚಃ ಪರಮ್ ।
ತಥಾ ಹ್ಯವೋಚಸ್ತ್ವಮತಃ ಪ್ರಿಯೋತ್ತರಂ
ಪರಂ ವರಂ ತೇ ಪ್ರದದಾಮಿ ತಂ ವೃಣು ॥೩೬॥

ಪ್ರಿಯವಾದ ಬಹುಮಾನಕ್ಕೆ ಯೋಗ್ಯಪಾತ್ರಳಾಗಿರುವ ಮಂಥರೆಯೆ! ನೀನು ನನಗೆ ಈಗ ಪ್ರಿಯವಾದ ಉತ್ತಮವಾದ ಅಮೃತದಂತಹ ಯಾವ ಮಾತನ್ನಾಡಿದೆಯೋ ಅದಕ್ಕಿಂತ ಹೆಚ್ಚು ಪ್ರಿಯವಾದ ಇನ್ನೊಂದು ಮಾತನ್ನು ಹೇಳುವುದು ನಿನ್ನಿಂದ ಎಂದೂ ಶಕ್ಯವಾಗಲಾರದು. ಪ್ರಿಯಗಳಲ್ಲಿ ಹೆಚ್ಚು ಪ್ರಿಯವಾದ ಅಂಥ ಮಾತನ್ನು ನೀನು ಆಡಿರುವಿ. ಅದರಿಂದ ಇನ್ನೂ ಒಂದು ಬೇರೆ ಶ್ರೇಷ್ಠವಾದ ಬಹುಮಾನವನ್ನು ನಿನಗೆ ಕೊಡುವೆನು. ಅದೇನು ಬೇಕು, ಕೇಳು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಏಳನೇ ಸರ್ಗ ಮುಗಿಯಿತು.

❖

ಅಷ್ಟಮ ಸರ್ಗಃ

ಸರ್ಗ – 8

ಮಂಥರೆಯ ದುರ್ಬೋಧನೆ

ಮಂಥರಾ ತ್ವಭ್ಯಸೂಯೈ್ಯನಾಮುತ್ಸೃಜ್ಯಾಭರಣಂ ಚ ತತ್ ।
ಉವಾಚೇದಂ ತತೋ ವಾಕ್ಯಂ ಕೋಪದುಃಖಸಮನ್ವಿತಾ ॥೧॥

ಮಂಥರೆ ಕೈಕೇಯಿಯ ಮೇಲೆ ಕೋಪಗೊಂಡು ಅವಳು ನೀಡಿದ ಆಭರಣವನ್ನು ದೂರ ಎಸೆದು ಕೋಪ ಮತ್ತು ದುಃಖ ಸಮನ್ವಿತಳಾಗಿ ನುಡಿದಳು.

ಮಂಥರೆಗೆ, ತಾನು ದಶರಥನ ಬಗ್ಗೆ ಎಷ್ಟು ಚಾಡಿ ಹೇಳಿದರೂ ಕೈಕೇಯಿ ಕೇಳುತ್ತಿಲ್ಲವೆಂದು ಕೋಪ. ಅಭಿಷೇಕವನ್ನು ತನಗೆ ನಿಲ್ಲಿಸಲು ಶಕ್ಯವಾಗುತ್ತಿಲ್ಲವೆಂದು ದುಃಖ.

ಮಂಥರೆ ಕ್ಷೀರಸಮುದ್ರಮಥನದಲ್ಲಿ ಕ್ಷೀರಸಮುದ್ರದಿಂದ ಲಕ್ಷ್ಮಿಗಿಂತ ಮೊದಲು ಎದ್ದು ಬಂದವಳು, ಜ್ಯೇಷ್ಠೆ ಎಂದು ಹೆಸರಿನವಳು. ಅಲಕ್ಷ್ಮಿ, ಕಲಿಯ ಹೆಂಡತಿ. ಲೋಕದ ಪುರುಷರಲ್ಲೆಲ್ಲ ಅಧಮಾಧಮನು ಕಲಿ. ಸ್ತ್ರೀಯರಲ್ಲೆಲ್ಲ ಅಧಮಾಧಮಳು ಅಲಕ್ಷ್ಮಿ. ಹೇಗೋ ತಪಸ್ಸಿನಿಂದ ಅವಳು ಅಪ್ಸರೆಯಾಗಿ ಜನಿಸಿದಳು. ಆಗ ಅವಳ ಹೆಸರು ದುಂದುಭಿ. ಮಹಾಭಾರತ (ವನ.277.13) ಮತ್ತು ಪದ್ಮಪುರಾಣಗಳಲ್ಲಿ ಹೇಳಿದಂತೆ ಅವಳನ್ನು ತಮಸ್ಸಿಗೆ ಕಳಿಸುವ ಉದ್ದೇಶದಿಂದ ಬ್ರಹ್ಮದೇವರು ಹೇಳಿದರು. 'ನೀನು ದಾಸಿಯಾಗಿ ಹುಟ್ಟಿ ರಾಮಾಭಿಷೇಕವನ್ನು ನಿಲ್ಲಿಸು. ನಿನಗೆ ಯೋಗ್ಯಗತಿ ದೊರಕುವುದು' ಎಂದು. ತನಗೆ ಯೋಗ್ಯವಾದ ಗತಿ ಎಂದರೆ ಮೋಕ್ಷವೆ ಎಂದು ಅನ್ಯಥಾ ತಿಳಿದುಕೊಂಡು ಅವಳು ಕೈಕೇಯಿಯ ದಾಸಿಯಾಗಿ ಜನಿಸಿದಳು. 'ಕೈಕೇಯಿ, ನಿನ್ನನ್ನು ರಾಜ ತನ್ನ ಮುದ್ದಿನ ಅರಗಿಣಿ ಎನ್ನುವುದೆಲ್ಲ ಸುಳ್ಳು. ತೋರಿಕೆಯದು. ಅವನು ಇಂಥ ಮಾತುಗಳಿಂದ ನಿನ್ನನ್ನು ವಂಚಿಸಿ ಕೌಸಲ್ಯೆಯ ಮಗನಿಗೆ ರಾಜ್ಯವನ್ನು ಕೊಡುತ್ತಿದ್ದಾನೆ. ನೋಡು, ನೀನಿನ್ನು ಕೌಸಲ್ಯೆಗೆ ದಾಸಿಯಾಗುವೆ' ಎನ್ನುತ್ತ ಸವತಿಮಾತ್ಸರ್ಯವನ್ನು ಭುಗಿಲೆಬ್ಬಿಸಿದಳು.

ಹರ್ಷಂ ಕಿಮಿದಮಸ್ಥಾನೇ ಕೃತವತ್ಯಸಿ ಬಾಲಿಶೇ ।
ಶೋಕಸಾಗರಮಧ್ಯಸ್ಥಮಾತ್ಮಾನಂ ನಾವಬುಧ್ಯಸೇ ॥೨॥

'ಅಜ್ಜಳೆ, ಹರ್ಷಪಡಬಾರದ ವಿಷಯದಲ್ಲಿ ಏಕೆ ಹರ್ಷಪಡುತ್ತಿರುವೆ? ನೀನೀಗ ಶೋಕಸಾಗರ ಮಧ್ಯದಲ್ಲಿರುವುದನ್ನು ನೀನು ತಿಳಿಯುತ್ತಿಲ್ಲ!

ಮನಸಾ ಪ್ರಹಸಾಮಿ ತ್ವಾಂ ದೇವಿ ದುಃಖಾರ್ದಿತಾ ಸತೀ ।
ಯಚ್ಛೋಚಿತವ್ಯೇ ಹೃಷ್ಟಾಸಿ ಪ್ರಾಪ್ಯೇದಂ ವ್ಯಸನಂ ಮಹತ್ ॥೩॥

'ಮಹತ್ತಾದ ಈ ದುಃಖವನ್ನು ಹೊಂದಿಯೂ ನೀನು ಯಾವುದಕ್ಕೆ ಅಳಬೇಕೋ ಅದಕ್ಕೆ ನಗುತ್ತಿರುವೆ. ದೇವಿ, ಇದನ್ನು ಕಂಡು ನಾನು ಮನಸ್ಸಿನಲ್ಲಿ ದುಃಖ-ಪೀಡಿತಳಾಗಿದ್ದೇನೆ. ಜೊತೆಗೆ ನಿನ್ನ ಬಗ್ಗೆ ನಗುವೂ ಬರುತ್ತಿದೆ.

ಶೋಚಾಮಿ ದುರ್ಮತಿತ್ವಂ ತೇ ಕಾ ಹಿ ಪ್ರಾಜ್ಞಾ ಪ್ರಹರ್ಷಯೇತ್ ।
ಅರೇಃ ಸಪತ್ನೀಪುತ್ರಸ್ಯ ವೃದ್ಧಿಂ ಮೃತ್ಯೋರಿವಾಗತಾಮ್ ॥೪॥

'ನಿನ್ನ ಬುದ್ಧಿಹೀನತೆಗೆ ನಾನು ಮರುಕ ಪಡುತ್ತೇನೆ. ಬುದ್ಧಿ ಉಳ್ಳವಳು ಯಾವಳು ತಾನೆ ಮೃತ್ಯುವಿನಂತಿರುವ ಶತ್ರುವಾದ ಸವತಿಯ ಮಗನಿಗೆ ಏಳಿಗೆ ಉಂಟಾಗುವುದನ್ನು ಮೆಚ್ಚುವಳು?

ಭರತಾದೇವ ರಾಮಸ್ಯ ರಾಜ್ಯಸಾಧಾರಣಾದ್ಭಯಮ್ ।
ತದ್ವಿಚಿಂತ್ಯ ವಿಷಣ್ಣಾಸ್ಮಿ ಭಯಂ ಭೀತಾದ್ಧಿ ಜಾಯತೇ ॥೫॥

'ರಾಜ್ಯದ ಮೇಲಿನ ಸಮಾನ ಸ್ವಾಮ್ಯದ ದೃಷ್ಟಿಯಿಂದ ಅದಕ್ಕಾಗಿ ಸ್ಪರ್ಧಿಸುವ ರಾಮನಿಗೆ ಭಯವು, ಉತ್ತರಾಧಿಕಾರಿಯಾದ್ದರಿಂದ ರಾಜ್ಯಕ್ರಾಂತಿಯ ಮೂಲಕ ಸ್ಪರ್ಧಿಸುವ ಭರತನಿಂದಲೇ ಹೊರತು ಹಾಗೆ ಸ್ಪರ್ಧಿಸದ ಲಕ್ಷ್ಮಣ ಶತ್ರುಘ್ನರಿಂದಲ್ಲ. ಹೀಗಾಗಿ ಭೀತನಾದ ರಾಮನಿಂದ ಭರತನಿಗೇ ಅಪಾಯ. ಇದನ್ನು ಆಲೋಚಿಸಿ ಪರಿಹಾರ ಕಾಣದೆ ನಾನು ವಿಷಾದ ಪಡುತ್ತಿದ್ದೇನೆ.

ಲಕ್ಷ್ಮಣೋ ಹಿ ಮಹೇಷ್ವಾಸೋ ರಾಮಂ ಸರ್ವಾತ್ಮನಾ ಗತಃ ।
ಶತ್ರುಘ್ನಶ್ಚಾಪಿ ಭರತಂ ಕಾಕುತ್ಸ್ಥಂ ಲಕ್ಷ್ಮಣೋ ಯಥಾ ॥೬॥

'ಲಕ್ಷ್ಮಣನು ಮಹಾ ಬಿಲ್ಲಾಳುವೆ. ಆದರೂ ಅವನು ರಾಮನನ್ನೇ ತನ್ನ ಸರ್ವಸ್ವವೆಂದು ತಿಳಿದವನು. ರಾಜ್ಯಕ್ಕಾಗಿ ಸ್ಪರ್ಧಿಸುವವನಲ್ಲ. ಲಕ್ಷ್ಮಣನು ರಾಮನನ್ನು ಸೇರುವಂತೆ ಶತ್ರುಘ್ನನೂ ಭರತನನ್ನೇ ಸೇರುವನು. ಅವನೂ ರಾಜ್ಯಕ್ಕೆ ಸ್ಪರ್ಧಿಸುವುದಿಲ್ಲ. ಆದರಿಂದ, ಸ್ಪರ್ಧಿಸುವ ಭರತನಿಂದಲೇ ಭೀತನಾದ ರಾಮನಿಗೆ ಭಯ ಮತ್ತು ರಾಮನಿಂದ ಭರತನಿಗೇ ಭಯ, ಅಪಾಯ.

ರಾಮ–ಲಕ್ಷ್ಮಣರಾಗಲಿ ಭರತ–ಶತ್ರುಘ್ನರಾಗಲಿ ರಾಜ್ಯಕ್ಕಾಗಿ ಒಬ್ಬರನ್ನೊಬ್ಬರು ಸ್ಪರ್ಧೆಯಿಂದ ನಾಶಮಾಡಲು ಬಯಸುವುದಿಲ್ಲ.

ಪ್ರತ್ಯಾಸನ್ನಕ್ರಮೇಣಾಪಿ ಭರತಸ್ಯೈವ ಭಾಮಿನಿ ।
ರಾಜ್ಯಕ್ರಮೋ ವಿಪ್ರಕೃಷ್ಟಸ್ತಯೋಸ್ತಾವದ್ಯವೀಯಸೋಃ ॥೭॥

'ವಯಸ್ಸಿನ ಹಿರಿತನದ ಕ್ರಮದಿಂದಲೂ ಕೂಡ ರಾಮನ ಅನಂತರ ಕ್ರಮವಾಗಿ ರಾಜ್ಯದ ಹಕ್ಕು ಬರುವುದು ಭರತನಿಗೇ. ಲಕ್ಷ್ಮಣ ಶತ್ರುಘ್ನರು ಸಣ್ಣವರು. ಅವರಿಗೆ ರಾಜ್ಯದ ಮೇಲಿನ ಸ್ವಾಮ್ಯ ಬಲು ದೂರವಿದೆ.

ರಾಮನ ಅನಂತರ ಭರತ, ಭರತನ ಅನಂತರ ಲಕ್ಷ್ಮಣ ಶತ್ರುಘ್ನರು ಹುಟ್ಟಿದ್ದಾರೆ. ವಯಸ್ಸಿನ ಹಿರಿತನದಲ್ಲಿ ಈ ಕ್ರಮವಿರುವುದರಿಂದ ಲಕ್ಷ್ಮಣ ಶತ್ರುಘ್ನರು ಎಂದೂ ರಾಜ್ಯದ ಮೇಲಿನ ಹಕ್ಕಿಗಾಗಿ ಸ್ಪರ್ಧಿಸುವುದಿಲ್ಲ.

❖❖❖

ವಯಸ್ಸಿನಿಂದ ರಾಮನ ಅನಂತರ ಹಿರಿಯನು ಭರತನೆ ಎಂಬುದು ವಾಲ್ಮೀಕಿ-ರಾಮಾಯಣದಲ್ಲಿ ಹೇಳಿದ ಉತ್ಪತ್ತಿಕ್ರಮದಿಂದ ಸ್ಪಷ್ಟವಿದೆ—

ತತಶ್ಚ ದ್ವಾದಶೇ ಮಾಸೇ ಚೈತ್ರೇ ನಾವಮಿಕೇ ತಿಥೌ ।
ಕೌಸಲ್ಯಾಜನಯದ್ ರಾಮಂ ಸರ್ವಲಕ್ಷಣ ಸಂಯುತಂ ।
ಭರತೋ ನಾಮ ಕೈಕೇಯ್ಯಾಂ ಜಜ್ಞೇ ಸತ್ಯಪರಾಕ್ರಮಃ ।
ಅಥ ಲಕ್ಷ್ಮಣ ಶತ್ರುಘ್ನೌ ಸುಮಿತ್ರಾऽಜನಯತ್ ಸುತೌ ।...
ಪುಷ್ಯೇ ಜಾತಸ್ತು ಭರತೋ ಮೀನಲಗ್ನೇ ಪ್ರಸನ್ನಧೀಃ ।
ಸಾರ್ಪೇ ಜಾತೌ ಚ ಸೌಮಿತ್ರೀ ಕುಲೀರೇऽಭ್ಯುದಿತೇ ರವೌ ॥ (ಬಾಲ.18.8-14)

ಪುತ್ರಕಾಮೇಷ್ಟಿಯಿಂದ ದೊರೆತ ಪಾಯಸವನ್ನು ಮೂವರು ರಾಣಿಯರು ಉಂಡ ಬಳಿಕ ಹನ್ನೆರಡನೇ ತಿಂಗಳಲ್ಲಿ ಚೈತ್ರಮಾಸದ ನವಮಿ ಪುನರ್ವಸು ನಕ್ಷತ್ರದಲ್ಲಿ ರಾಮನೂ, ದಶಮಿಯಲ್ಲಿ ಉದಯಾತ್ ಪೂರ್ವ ಮೀನಲಗ್ನದಲ್ಲಿ ಪುಷ್ಯ ನಕ್ಷತ್ರದಲ್ಲಿ ಭರತನೂ, ಬಳಿಕ ಉದಯಾನಂತರ ಮಧ್ಯಾಹ್ನಕಾಲ ಕರ್ಕಟಕ ಲಗ್ನದಲ್ಲಿ ಆಶ್ಲೇಷಾ ನಕ್ಷತ್ರದಲ್ಲಿ ಲಕ್ಷ್ಮಣ ಶತ್ರುಘ್ನರೆಂಬ ಅವಳಿ ಮಕ್ಕಳೂ ಜನಿಸಿದರೆಂದು ವಾಲ್ಮೀಕಿ ಹೇಳುತ್ತಾನೆ.

ಇಲ್ಲಿ 'ನಾವಮಿಕೇ ತಿಥೌ' ಎಂದು ರಾಮನ ಜನ್ಮತಿಥಿಯನ್ನು ಹೇಳಿ, ಭರತನ ಮತ್ತು ಲಕ್ಷ್ಮಣ ಶತ್ರುಘ್ನರ ಜನ್ಮತಿಥಿಯನ್ನು ಹೆಸರಿಸಿಲ್ಲ. ಏಕೆಂದರೆ ಎಲ್ಲರೂ

ಒಂದೇ ತಿಥಿಯಲ್ಲಿ ಜನ್ಮತಾಳಿದ್ದರು! ನವಮಿಯ ಆದಿಯಲ್ಲಿ, ಪುನರ್ವಸುವಿನ ಅಂತ್ಯದಲ್ಲಿ ಮಧ್ಯಾಹ್ನ ರಾಮಾವತಾರ. ಬಳಿಕ ಅದೇ ರಾತ್ರಿ ಪುಷ್ಯದಲ್ಲಿ ಭರತ. ಮೂರನೆದಿನ ಮಧ್ಯಾಹ್ನದ ವೇಳೆ ಆಶ್ಲೇಷ ಬಂದಿತ್ತು, ದೀರ್ಘವಾದ ನವಮಿ ತಿಥಿಯೂ ಇತ್ತು. ಆಗ ಲಕ್ಷ್ಮಣ ಶತ್ರುಘ್ನರು ಅವಳಿಗಳಾಗಿ ಜನಿಸಿದರು.

❖❖❖

ವಿದುಷಃ ಕ್ಷತ್ರಚಾರಿತ್ರೇ ಪ್ರಾಜ್ಞಸ್ಯ ಪ್ರಾಪ್ತಕಾರಿಣಃ ।
ಭಯಾತ್ ಪ್ರವೇಪೇ ರಾಮಸ್ಯ ಚಿಂತಯಂತೀ ತವಾತ್ಮಜಮ್ ॥೮॥

'ಕ್ಷತ್ರಿಯರ ರಾಜನೀತಿಪ್ರಯೋಗದಲ್ಲಿ ನಿಪುಣನೂ ಸಮರ್ಥನೂ ಸಕಾಲದಲ್ಲಿ ಕಾರ್ಯ ಸಾಧನೆ ಮಾಡುವ ಸ್ವಭಾವದವನೂ ರಾಮ. ಅವನಿಂದ ನಿನ್ನ ಮಗನಿಗೆ ಮುಂದೆ ಉಂಟಾಗಬಹುದಾದ ಅನರ್ಥವನ್ನು ಆಲೋಚನೆ ಮಾಡಿದರೆ ನನಗೆ ಭಯದಿಂದ ಮೈನಡುಗುವುದು' ಎನ್ನುತ್ತಾಳೆ ಮಂಥರೆ.

ಸುಭಗಾ ಖಲು ಕೌಸಲ್ಯಾ ಯಸ್ಯಾಃ ಪುತ್ರೋಽಭಿಷೇಕ್ಷ್ಯತೇ ।
ಯೌವರಾಜ್ಯೇನ ಮಹತಾ ಶ್ವಃ ಪುಷ್ಯೇಣ ದ್ವಿಜೋತ್ತಮೈಃ ॥೯॥

'ನಿನ್ನ ಮಗನಿಗೆ ಮಾತ್ರವಲ್ಲ, ನಿನಗೂ ಅನರ್ಥವಿದೆ. ಕೌಸಲ್ಯೆ ಅದೃಷ್ಟವಂತೆ, ಏಕೆಂದರೆ ಅವಳ ಮಗನಿಗೆ ಅಭಿಷೇಕವಾಗಲಿದೆ. ನಾಳೆ ಪುಷ್ಯನಕ್ಷತ್ರದಲ್ಲಿ ದ್ವಿಜೋತ್ತಮರಿಂದ ಮಹತ್ತಾದ ಯುವರಾಜಪಟ್ಟದಲ್ಲಿ ಅಭಿಷೇಕ.

ಪ್ರಾಪ್ತಾಂ ವಸುಮತೀಂ ಪ್ರೀತಿಂ ಪ್ರತೀತಾಂ ತಾಂ ಹತದ್ವಿಷಮ್ ।
ಉಪಸ್ಥಾಸ್ಯಸಿ ಕೌಸಲ್ಯಾಂ ದಾಸೀವ ತ್ವಂ ಕೃತಾಂಜಲಿಃ ॥೧೦॥

'ರಾಜ್ಯ ಅವಳಿಗೆ ಸಿಕ್ಕಿತೆಂದರೆ ಅವಳು ದಶರಥನ ಪ್ರೀತಿ ವಿಶ್ವಾಸಗಳಿಗೆ ಪಾತ್ರಳಾಗುತ್ತಾಳೆ. ಸವತಿಯನ್ನು ದರ್ಪದಿಂದ ತುಳಿಯುತ್ತಾಳೆ. ಅವಳ ಮುಂದೆ ನೀನು ದಾಸಿಯಂತೆ ಕೈಮುಗಿದು ನಿಲ್ಲುವೆ.

ಏವಂ ಚ ತ್ವಂ ಸಹಾಸ್ಮಾಭಿಸ್ತಸ್ಯಾಃ ಪ್ರೇಷ್ಯಾ ಭವಿಷ್ಯಸಿ ।
ಪುತ್ರಶ್ಚ ತವ ರಾಮಸ್ಯ ಪ್ರೇಷ್ಯಭಾವಂ ಗಮಿಷ್ಯತಿ ॥೧೧॥

'ಹೀಗಾಗಿ ನಮ್ಮೊಂದಿಗೆ ನೀನೂ ಅವಳಿಗೆ ದಾಸಿಯಾಗುವೆ. ನಿನ್ನ ಮಗನು ರಾಮನಿಗೆ ದಾಸನಾಗುತ್ತಾನೆ.

ಹೃಷ್ಟಾಃ ಖಲು ಭವಿಷ್ಯಂತಿ ರಾಮಸ್ಯ ಪರಮಾಃ ಸ್ತ್ರಿಯಃ ।
ಅಪ್ರಹೃಷ್ಟಾ ಭವಿಷ್ಯಂತಿ ಸ್ನುಷಾಸ್ತೇ ಭರತಕ್ಷಯೇ ॥೧೨॥

'ರಾಮನ ಸ್ತ್ರೀಯರು, ಸೀತೆ ಮತ್ತು ಅವಳ ಸಖಿಯರು ಶ್ರೇಷ್ಠರಾಗಿ ಹೃಷ್ಟರಾಗಿ ಮೆರೆಯುತ್ತಾರೆ. ಭರತನ ಪ್ರಭಾವ ಕ್ಷೀಣಿಸುವುದರಿಂದ ನಿನ್ನ ಸೊಸೆಯರು ಉತ್ಸಾಹಗುಂದುತ್ತಾರೆ.

ನ ಸೀತಾಯಾಃ ಪರಾಂ ಭಾರ್ಯಾಂ ವವ್ರೇ ಸ ರಘುನಂದನಃ । (ಉತ್ತ.99.8)

ಎಂದು ಮುಂದೆ ಹೇಳುವಂತೆ ರಾಮ ಏಕಪತ್ನೀವ್ರತಸ್ಥನಾಗಿರುವುದರಿಂದ 'ರಾಮಸ್ಯ ಸ್ತ್ರಿಯಃ' ಎಂದರೆ 'ರಾಮನ ಪತ್ನಿಯರು' ಎಂದರ್ಥವಲ್ಲ, ಯದ್ಯಪಿ,

ಸ್ತ್ರೀಭಿಶ್ಚ ಮನ್ಯೇ ವಿಪುಲೇಕ್ಷಣಾಭಿಃ
ತ್ವಂ ರಂಸ್ಯಸೇ ವೀತಭಯಃ ಕೃತಾರ್ಥಃ । (ಸುಂದರ.28.14)

'ರಾಮ ನೀನು ಪತ್ನಿಯರೊಂದಿಗೆ ರಮಿಸುವೆ' ಎಂದು ಸೀತೆ ಅಶೋಕವನದಲ್ಲಿ ಪರಿತಪಿಸುವಂತೆ ಕಾಣುತ್ತದೆ. ಆದರೆ ರಾಕ್ಷಸರು ನನ್ನನ್ನು ವಧಿಸಿದರೆ ನೀನು ಅನ್ಯಸ್ತ್ರೀಯರನ್ನು ವಿವಾಹವಾಗುವ ಸಂಭವವಿದೆ ಎಂದುಕೊಳ್ಳುತ್ತಿದ್ದಾಳೆ, ಸೀತೆ.

ಭುಜೈಃ ಪರಮನಾರೀಣಾಂ ಅಭಿಮೃಷ್ಟಮನೇಕಧಾ । (ಯುದ್ಧ.21.3)

ಎಂಬಲ್ಲಿಯೂ ರಾಮನ ತೋಳನ್ನು 'ಪರಮ ನಾರಿಯರು' ಅಂದರೆ, ಪತ್ನಿಯರಲ್ಲ, ಕೌಸಲ್ಯೆ ಮುಂತಾದ ತಾಯಂದಿರು ನೇವರಿಸುತ್ತಿದ್ದರು ಎಂದು ವಿವಕ್ಷಿತವಾಗಿದೆ. ಅಥವಾ ರಾಮನ ಅನಂತಾವತಾರಗಳಲ್ಲಿ 'ಪರಮ ನಾರಿಯರು' ಸೀತೆಯ ಅನಂತ ಅವತಾರಗಳು ಅವನ ಬಾಹುವನ್ನು ನೇವರಿಸುತ್ತಿದ್ದರು ಎಂದು ಅಭಿಪ್ರಾಯ.

ತಾಂ ದೃಷ್ಟ್ವಾ ಪರಮಪ್ರೀತಾ ಬ್ರುವಂತೀಂ ಮಂಥರಾಂ ತತಃ ।
ರಾಮಸ್ಯೈವ ಗುಣಾನ್ ದೇವೀ ಕೈಕೇಯೀ ಪ್ರಶಶಂಸ ಹ ॥೧೩॥

'ದೇವೀ ಕೈಕೇಯೀ' ದೇವಸ್ವಭಾವದ ಕೈಕೇಯಿ, ಇನ್ನೂ ನಿಕೃತಿ ಎಂಬ ರಾಕ್ಷಸಿಯ ಆವೇಶವಾಗಿಲ್ಲದಿದ್ದರಿಂದ 'ಪರಮಪ್ರೀತ'ಳಾದಳು. ಮಂಥರೆ ಚಾಡಿಮಾತನ್ನು ಹೇಳುತ್ತಿದ್ದರೂ ಅವಳನ್ನು ನೋಡಿಯೂ ದೇವೀ ಕೈಕೇಯಿ ಪರಮಾನಂದದಿಂದ ರಾಮನ ಗುಣಗಳನ್ನೇ ಹೊಗಳಿದಳು. ಚಾಡಿಮಾತಿಗೆ ಕಿವಿಗೊಡಲಿಲ್ಲ. ಅದರಿಂದ ಹೇಳಿದಳು—

ಧರ್ಮಜ್ಞೋ ಗುರುಭಿರ್ದಾಂತಃ ಕೃತಜ್ಞಃ ಸತ್ಯವಾಕ್ ಶುಚಿಃ ।
ರಾಮೋ ರಾಜ್ಞಃ ಸುತೋ ಜ್ಯೇಷ್ಠೋ ಯೌವರಾಜ್ಯಮತೋಽರ್ಹತಿ ।।೧೪।।

'ರಾಮನು ಧರ್ಮಜ್ಞ. ಗುರುಗಳಿಂದ ಒಳ್ಳೆಯ ಶಿಕ್ಷಣ ಪಡೆದವ. ಕೃತಜ್ಞ, ಸತ್ಯವಾದಿ, ಶುಚಿ, ರಾಜನ ಜ್ಯೇಷ್ಠಪುತ್ರನೆಂದಮೇಲೆ ಅವನು ನ್ಯಾಯವಾಗಿ ಯುವರಾಜಪಟ್ಟಕ್ಕೆ ಅರ್ಹನೆ.

ಭ್ರಾತೄನ್ ಭೃತ್ಯಾಂಶ್ಚ ದೀರ್ಘಾಯುಃ ಪಿತೃವತ್ಪಾಲಯಿಷ್ಯತಿ ।
ಸಂತಪ್ಯಸೇ ಕಥಂ ಕುಬ್ಜೇ ಶ್ರುತ್ವಾ ರಾಮಾಭಿಷೇಚನಮ್ ।।೧೫।।

'ತಂದೆಯಂತೆ ದೀರ್ಘಾಯುವಾಗಿ ರಾಮನು ಸೋದರರನ್ನು ಭೃತ್ಯರನ್ನು ಪಾಲಿಸುತ್ತಾನೆ. ಕುಬ್ಜೆಯೇ, ನೀನು ರಾಮಾಭಿಷೇಕವನ್ನು ಕೇಳಿ ಏಕೆ ಪರಿತಪಿಸುವೆ?

ಭರತಶ್ಚಾಪಿ ರಾಮಸ್ಯ ಧ್ರುವಂ ವರ್ಷಶತಾತ್ ಪರಮ್ ।
ಪಿತೃಪೈತಾಮಹಂ ರಾಜ್ಯಂ ಪ್ರಾಪ್ನುಯಾತ್ ಪುರುಷರ್ಷಭಃ ।।೧೬।।

'ನೂರುವರ್ಷಗಳ ಮೇಲಾದರೂ ಪಿತೃಪಿತಾಮಹರು ಆಳಿದ ರಾಮನ ರಾಜ್ಯವನ್ನು ಪುರುಷೋತ್ತಮನಾದ ಭರತನೂ ಕೂಡ ನಿಶ್ಚಯವಾಗಿ ಪಡೆಯುವನು.

'ನೂರು ವರ್ಷ' ಎಂದರೆ ನೂರಾರು, ಸಾವಿರಾರು ವರ್ಷಕಾಲ, 'ತಂದೆಯಂತೆ ದೀರ್ಘಾಯು'ವಾದ ರಾಮನು ರಾಜ್ಯಭಾರ ಮಾಡಿಯೇ ಮಾಡುತ್ತಾನೆ. ಆದರೆ, ಕೊನೆಯಲ್ಲಾದರೂ, ದಶರಥನು ರಾಜ್ಯವನ್ನು ರಾಮನಿಗೆ ಕೊಡಲು ಬಯಸಿದಂತೆ, ರಾಮನೂ ಭರತನಿಗೆ ಕೊಡಲು ಬಯಸುತ್ತಾನೆ. ಅಷ್ಟರವರೆಗೆ ಯುವರಾಜನಾಗಿ ಭರತನೇ ಇರುತ್ತಾನೆ. ಮಂಥರೆ ಹೇಳುವಂತೆ ಭರತನಿಗೆ ರಾಮನಿಂದ ಅಪಾಯವಂತೂ ಸರ್ವಥಾ ಇಲ್ಲ ಎಂಬುದು ಕೈಕೇಯಿಯ ಅಭಿಪ್ರಾಯ. ಅದರಂತೇ ರಾಮನು ಪರಂಧಾಮಕ್ಕೆ ಹೊರಟಾಗ ಮೊದಲಿಗೆ ಭರತನಿಗೆ ಪಟ್ಟಾಭಿಷೇಕ ಮಾಡಲು ಬಯಸುತ್ತಾನೆ. ಆದರೆ ಭರತ ಒಪ್ಪಲಿಲ್ಲ. ಅವನು ರಾಮನ ಮಕ್ಕಳಾದ ಕುಶಲವರನ್ನೇ ಪಟ್ಟದಲ್ಲಿ ಕೂಡಿಸಿ ಅಭಿಷೇಕಮಾಡು ಎನ್ನುತ್ತಾನೆ.

ಸಾ ತ್ವಮಭ್ಯುದಯೇ ಪ್ರಾಪ್ತೇ ದಹ್ಯಮಾನೇವ ಮಂಥರೇ ।
ಭವಿಷ್ಯತಿ ಚ ಕಲ್ಯಾಣೇ ಕಿಮರ್ಥಂ ಪರಿತಪ್ಯಸೇ ।।೧೭।।

'ರಾಮಾಭಿಷೇಕವೆಂಬ ಒಳ್ಳೆಯ ಭಾಗ್ಯವಿಶೇಷ ನಾಳೆಯೆ ನಮಗೆ ಬರುತ್ತಿರುವಾಗ, ಮುಂದೆಯೂ ಭರತನಿಗೆ ರಾಜ್ಯಲಾಭವೆಂಬ ಶುಭಯೋಗವೂ

ನಿಶ್ಚಿತವಿರುವಾಗ, ಓ ಮಂಥರೆ, ನೀನೇಕೆ ತೀವ್ರದುಃಖದಿಂದ ಬೇಯುತ್ತಿರುವಂತೆ ಪರಿತಪಿಸುತ್ತಿರುವೆ?

ಯಥಾ ಮೇ ಭರತೋ ಮಾನ್ಯಸ್ತಥಾ ಭೂಯೋऽಪಿ ರಾಘವಃ ।
ಕೌಸಲ್ಯಾತೋऽತಿರಿಕ್ತಂ ಚ ಸ ತು ಶುಶ್ರೂಷತೇ ಹಿ ಮಾಮ್ ॥೧೮॥

'ಭರತನು ನನಗೆ ಹೇಗೆ ಅಭಿಮಾನಕ್ಕೆ ಯೋಗ್ಯನೋ, ಅದಕ್ಕಿಂತ ಹೆಚ್ಚೇ ರಾಮನೂ ಅಭಿಮಾನಪಾತ್ರನೇ ಆಗಿದ್ದಾನೆ. ಕೌಸಲ್ಯೆಗಿಂತಲೂ ಹೆಚ್ಚಾಗಿ ಅವನು ನನ್ನನ್ನು ಸೇವಿಸುತ್ತಾನೆ.

ರಾಜ್ಯಂ ಚ ಯದಿ ರಾಮಸ್ಯ ಭರತಸ್ಯಾಪಿ ತತ್ತದಾ ।
ಮನ್ಯತೇ ಹಿ ಯಥಾತ್ಮಾನಂ ತಥಾ ಭ್ರಾತೄಂಶ್ಚ ರಾಘವಃ ॥೧೯॥

'ರಾಮನಿಗೆ ರಾಜ್ಯ ದೊರೆತರೆ ಅದು ಭರತನಿಗೂ ದೊರೆತಂತೆಯೆ. ರಾಮ ತನ್ನಂತೇ ತನ್ನ ತಮ್ಮಂದಿರನ್ನು ನೋಡಿಕೊಳ್ಳುವನು.'

ಕೈಕೇಯ್ಯಾ ವಚನಂ ಶ್ರುತ್ವಾ ಮಂಥರಾ ಭೃಶದುಃಖಿತಾ ।
ದೀರ್ಘಮುಷ್ಣಂ ವಿನಿಶ್ವಸ್ಯ ಕೈಕೇಯೀಮಿದಮಬ್ರವೀತ್ ॥೨೦॥

ಕೈಕೇಯಿಯ ಈ ಮಾತನ್ನು ಕೇಳಿ ಮಂಥರೆ ಬಹಳ ದುಃಖಿತಳಾದಳು. ಬಿಸಿಯಾದ ನಿಟ್ಟುಸಿರು ಬಿಡುತ್ತ ಕೈಕೇಯಿಗೆ ನುಡಿದಳು.

ಅನರ್ಥದರ್ಶಿನೀ ಮೌಖ್ಯಾನ್ನಾತ್ಮಾನಮವಬುಧ್ಯಸೇ ।
ಶೋಕವ್ಯಸನವಿಸ್ತೀರ್ಣೇ ಮಜ್ಜಂತೀ ದುಃಖಸಾಗರೇ ॥೨೧॥

'ನಾನು ನಿನಗೆ ಹಿತವನ್ನು ಹೇಳುತ್ತಿದ್ದರೆ ಅದನ್ನು ಅಹಿತವೆಂದು ತಿಳಿಯುವೆ. ಇದು ಮೂರ್ಖತನ. ನಿನ್ನ ಹಿತ ನಿನಗೇ ತಿಳಿದಿಲ್ಲ. ಇದರ ಫಲವಾಗಿ ನೀನು ದುಃಖಸಾಗರದಲ್ಲಿ ಮುಳುಗುತ್ತಿ. ಇಷ್ಟವಿಯೋಗ ಅನಿಷ್ಟಪ್ರಾಪ್ತಿರೂಪವಾದ ಶೋಕವ್ಯಸನಗಳೇ ಈ ದುಃಖಸಾಗರದಲ್ಲಿ ತುಂಬಿರುತ್ತವೆ.

ಭವಿತಾ ರಾಘವೋ ರಾಜಾ ರಾಘವಸ್ಯ ಚ ಯಃ ಸುತಃ ।
ರಾಜವಂಶಾತ್ತು ಭರತಃ ಕೈಕೇಯಿ ಪರಿಹಾಸ್ಯತೇ ॥೨೨॥

'ನಾಳೆ ರಾಮನು ರಾಜನಾಗುತ್ತಾನೆ. ಮುಂದೆ ರಾಮನ ಮಗನು ರಾಜನಾಗುತ್ತಾನೆ. ಕೈಕೇಯಿ, ನಿನ್ನ ಭರತನು ಮಾತ್ರ ರಾಜವಂಶದಿಂದಲೆ ಬಹಿಷ್ಕೃತನಾಗುತ್ತಾನೆ.

ನ ಹಿ ರಾಜ್ಞಃ ಸುತಾಃ ಸರ್ವೇ ರಾಜ್ಯೇ ತಿಷ್ಠಂತಿ ಭಾಮಿನಿ ।
ಸ್ಥಾಪ್ಯಮಾನೇಷು ಸರ್ವೇಷು ಸುಮಹಾನನಯೋ ಭವೇತ್ ॥೨೩॥

'ರಾಜನ ಮಕ್ಕಳೆಲ್ಲರೂ ರಾಜರಾಗುವುದಿಲ್ಲ. ಎಲ್ಲರಿಗೂ ರಾಜ್ಯಾಧಿಕಾರ ಕೊಟ್ಟರೆ ಬಲು ದೊಡ್ಡ ಒಳಜಗಳಕ್ಕೆ ಕಾರಣವಾಗುತ್ತದೆ.

ತಸ್ಮಾಜ್ಜ್ಯೇಷ್ಠೇ ಹಿ ಕೈಕೇಯಿ ರಾಜ್ಯತಂತ್ರಾಣಿ ಪಾರ್ಥಿವಾಃ ।
ಸ್ಥಾಪಯಂತ್ಯನವದ್ಯಾಂಗಿ ಗುಣವತ್ಸ್ವಿತರೇಷು ಚ ॥೨೪॥

'ಅದರಿಂದ, ಕೈಕೇಯಿ, ರಾಜರು ತಮ್ಮ ಜ್ಯೇಷ್ಠಪುತ್ರನಿಗೇ ರಾಜ್ಯಭಾರವನ್ನು ವಹಿಸಿಕೊಡುತ್ತಾರೆ. ಜ್ಯೇಷ್ಠಪುತ್ರನಲ್ಲಿ ತಕ್ಕ ಗುಣವಿಲ್ಲದಿದ್ದ ಪಕ್ಷದಲ್ಲಿ ಮಾತ್ರ ಗುಣವುಳ್ಳ ಬೇರೆ ಮಕ್ಕಳಿಗೂ ರಾಜ್ಯಭಾರವನ್ನು ವಹಿಸಿಕೊಡುತ್ತಾರೆ.

ಅಸಾವತ್ಯಂತನಿರ್ಭಗ್ನಸ್ತವ ಪುತ್ರೋ ಭವಿಷ್ಯತಿ ।
ಅನಾಥವತ್ ಸುಖೇಭ್ಯಶ್ಚ ರಾಜವಂಶಾಚ್ಚ ಹಾಸ್ಯತೇ ॥೨೫॥

'ಅದರಿಂದ ನಿನ್ನ ಮಗನು ಅನಾಥನಂತೆ ಸುಖಭೋಗಗಳಿಂದ ಸರ್ವಥಾ ವಂಚಿತನಾಗುತ್ತಾನೆ. ರಾಜವಂಶದಿಂದಲೂ ಬಹಿಷ್ಕೃತನಾಗುತ್ತಾನೆ.

ಸಾಹಂ ತ್ವದರ್ಥೇ ಸಂಪ್ರಾಪ್ತಾ ತ್ವಂ ತು ಮಾಂ ನಾವಬುಧ್ಯಸೇ ।
ಸಪತ್ನಿವೃದ್ಧಿ ಯಾ ಮೇ ತ್ವಂ ಪ್ರದೇಯಂ ದಾತುಮಿಚ್ಛಸಿ ॥೨೬॥

'ನಾನು ನಿನ್ನ ಹಿತಸಾಧನೆಗಾಗಿ ನಿನ್ನ ಬಳಿ ಬಂದರೆ ನೀನು ಮಾತ್ರ ನನ್ನನ್ನು ಸರಿಯಾಗಿ ಅರಿತುಕೊಳ್ಳುತ್ತಿಲ್ಲ. ಸವತಿಗೆ ಸಂಪತ್ತು ಬರುತ್ತದೆ ಎಂದು ನಾನು ಹೇಳಿದರೆ ನನಗೆ ಬಹುಮಾನ ಕೊಡಲು ಬಯಸುವೆ.

ಧ್ರುವಂ ತು ಭರತಂ ರಾಮಃ ಪ್ರಾಪ್ಯ ರಾಜ್ಯಮಕಂಟಕಮ್ ।
ದೇಶಾಂತರಂ ನಾಯಯಿತಾ ಲೋಕಾಂತರಮಥಾಪಿ ವಾ ॥೨೭॥

'ಇದಂತು ನಿಶ್ಚಯ. ರಾಮನು ನಿಷ್ಕಂಟಕವಾದ ರಾಜ್ಯವನ್ನು ಪಡೆದು ಭರತನನ್ನು ಬೇರೆ ದೇಶಕ್ಕೆ ಅಟ್ಟುವನು ಅಥವಾ ಪರಲೋಕಕ್ಕೇ ಕಳಿಸಲಿರುವನು.

ಬಾಲ ಏವ ಹಿ ಮಾತುಲ್ಯಂ ಭರತೋ ನಾಯಿತಸ್ತ್ವಯಾ
ಸಂನಿಕರ್ಷಾಚ್ಚ ಸೌಹಾರ್ದಂ ಜಾಯತೇ ಸ್ಥಾವರೇಷ್ವಪಿ ॥೨೮॥

'ಭರತ ಚಿಕ್ಕವನಿರುವಾಗಲೇ ಅವನನ್ನು ನೀನು ಸೋದರಮಾವನ ಮನೆಗೆ ಕಳಿಸಿಬಿಟ್ಟೆ. ಅದರಿಂದ ರಾಜನಿಗೆ ರಾಮನಲ್ಲಿರುವಷ್ಟು ಪ್ರೀತಿ ಭರತನಲ್ಲಿಲ್ಲವಾಗಿದೆ. ಹತ್ತಿರದಲ್ಲಿದ್ದರೇ ಪ್ರೀತಿ ಉಂಟಾಗುತ್ತದೆ. ಮರಗಿಡಗಳಲ್ಲಿಯೂ ಇದು ಕಂಡಿದೆ.

ಹತ್ತಿರದಲ್ಲಿರುವ ಬಳ್ಳಿಗೇ ಮರ ಆಶ್ರಯ ನೀಡುತ್ತದೆ. ಹಾಗೇ ಭರತ ಹತ್ತಿರದಲ್ಲಿರುತ್ತಿದ್ದರೆ ರಾಜ ಭರತನಿಗೇ ರಾಜ್ಯವನ್ನು ಕೊಡುತ್ತಿದ್ದ.

ಭರತಸ್ಯಾಪ್ಯನುವಶಃ ಶತ್ರುಘ್ನೋಽಪಿ ಸಮಂ ಗತಃ ।
ಲಕ್ಷ್ಮಣೋ ಹಿ ಯಥಾ ರಾಮಂ ತಥಾಸೌ ಭರತಂ ಗತಃ ॥೨೯॥

'ಭರತನಿಗೆ ಅತ್ಯಂತ ಪ್ರಿಯನಾದ ಶತ್ರುಘ್ನನಾದರೂ ಒಂದುವೇಳೆ ಇಲ್ಲಿಯೇ ಇರುತ್ತಿದ್ದರೆ ಭರತನಿಗೆ ಅನ್ಯಾಯವಾಗುತ್ತಿದ್ದಿಲ್ಲ. ಆದರೆ, ಅವನೂ ಭರತನೊಂದಿಗೇ ದೂರದಲ್ಲಿದ್ದಾನೆ. ಲಕ್ಷ್ಮಣನು ರಾಮನನ್ನು ಹೇಗೋ ಹಾಗೆ ಶತ್ರುಘ್ನನು ಭರತನನ್ನು ಬಿಟ್ಟಿರಲಾರದವನಾಗಿದ್ದಾನೆ.

ಶ್ರೂಯತೇ ಚ ದ್ರುಮಃ ಕಶ್ಚಿಚ್ಛೈತ್ತವ್ಯೋ ವನಜೀವಿಭಿಃ ।
ಸಂನಿಕರ್ಷಾದಿಷೀಕಾಭಿರ್ಮೋಚಿತಃ ಪರಮಾದ್ಭಯಾತ್ ॥೩೦॥

'ಲಕ್ಷ್ಮಣ ಬಳಿಯಲ್ಲಿರುವುದರಿಂದ ರಾಮನಿಗೆ ಭರತನಿಂದ ಅಪಾಯವಿಲ್ಲ. ಅರಣ್ಯವಾಸಿಗಳು ಒಂದು ಮರವನ್ನು ಕಡಿಯಬೇಕೆಂದುಕೊಂಡಿದ್ದರು. ಆದರೆ ಸುತ್ತಲೂ ಮುಳ್ಳುಗಿಡಗಳಿದ್ದುದರಿಂದ ಅದನ್ನು ಬಿಟ್ಟರು. ಹೀಗಾಗಿ ಆ ಮರವು ಮುಳ್ಳುಗಿಡಗಳ ಸಾಮಿಪ್ಯವಶಾತ್ ಮಹತ್ತಾದ ನಾಶಭಯದಿಂದ ಮುಕ್ತವಾಯಿತೆಂದು ಹೇಳುವುದನ್ನು ನಾನು ಕೇಳಿದ್ದೇನೆ.

ಗೋಪ್ತಾ ಹಿ ರಾಮಂ ಸೌಮಿತ್ರಿರ್ಲಕ್ಷ್ಮಣಂ ಚಾಪಿ ರಾಘವಃ ।
ಅಶ್ವಿನೋರಿವ ಸೌಭ್ರಾತ್ರಂ ತಯೋರ್ಲೋಕೇಷು ವಿಶ್ರುತಮ್ ॥೩೧॥

'ರಾಮನನ್ನು ಲಕ್ಷ್ಮಣ ರಕ್ಷಿಸಿಕೊಳ್ಳುತ್ತಾನೆ. ಲಕ್ಷ್ಮಣನನ್ನು ರಾಮ ರಕ್ಷಿಸಿಕೊಳ್ಳುತ್ತಾನೆ. ಅಶ್ವಿನಿದೇವತೆಗಳಂಥ ಸೋದರಪ್ರೇಮ ಅವರಲ್ಲಿರುವುದು ಲೋಕಗಳಲ್ಲಿ ಪ್ರಸಿದ್ಧವಾಗಿದೆ.

ತಸ್ಮಾನ್ನ ಲಕ್ಷ್ಮಣೇ ರಾಮಃ ಪಾಪಂ ಕಿಂಚಿತ್ಕರಿಷ್ಯತಿ ।
ರಾಮಸ್ತು ಭರತೇ ಪಾಪಂ ಕುರ್ಯಾದಿತಿ ನ ಸಂಶಯಃ ॥೩೨॥

'ಅದರಿಂದ ಲಕ್ಷ್ಮಣನಲ್ಲಿ ರಾಮನು ಏನೂ ಪಾಪಕಾರ್ಯ ಮಾಡಲಾರ. ಆದರೆ ಭರತನಲ್ಲಿ ರಾಮನು ಪಾಪಕಾರ್ಯ ಮಾಡುತ್ತಾನೆ, ಇದರಲ್ಲಿ ಸಂಶಯವಿಲ್ಲ.

ತಸ್ಮಾದ್ರಾಜಗೃಹಾದ್ದೇವಿ ವನಂ ಗಚ್ಛತು ತೇ ಸುತಃ ।
ಏತದ್ಧಿ ರೋಚತೇ ಮಹ್ಯಂ ಭೃಶಂ ಚಾಪಿ ಹಿತಂ ತವ ॥೩೩॥

'ಅದರಿಂದ ದೇವಿ, ನಿನ್ನ ಮಗನು ಕೇಕಯ ರಾಜಧಾನಿಯಾದ ರಾಜಗೃಹ-ನಗರದಿಂದ ನೇರವಾಗಿ ಅರಣ್ಯಕ್ಕೇ ಹೋಗಲಿ. ಇಲ್ಲಿಗೆ ಬಂದು ಮರಣ-ಹೊಂದುವುದು ಬೇಡ. ಇದು ನನಗೆ ಸರಿ ಕಾಣುತ್ತಿದೆ. ನಿನಗಿದು ಬಹಳ ಹಿತಕರವೂ ಆಗಿದೆ. ಏಕೆಂದರೆ ನಿನ್ನ ಮಗನಿಗೆ ಅಪಾಯವಿರುವುದಿಲ್ಲ.

ಏವಂ ತೇ ಜ್ಞಾತಿಪಕ್ಷಸ್ಯ ಶ್ರೇಯಶ್ಚೈವ ಭವಿಷ್ಯತಿ ।
ಯದಿ ಚೇದ್ಭರತೋ ಧರ್ಮಾತ್ ಪಿತ್ರ್ಯಂ ರಾಜ್ಯಮವಾಪ್ಸ್ಯತಿ ॥೩೪॥

ಸ ತೇ ಸುಖೋಚಿತೋ ಬಾಲೋ ರಾಮಸ್ಯ ಸಹಜೋ ರಿಪುಃ ।
ಸಮೃದ್ಧಾರ್ಥಸ್ಯ ನಷ್ಟಾರ್ಥೋ ಜೀವಿಷ್ಯತಿ ಕಥಂ ವಶೇ ॥೩೫॥

ಆದರೆ, ಹೀಗೆ ಮಾಡಿದರೆ ನೀನು ಬಯಸಿದಂತೆ ನಿನ್ನ ಸವತಿಯ ಪಕ್ಷಕ್ಕೆ ಶ್ರೇಯಸ್ಸೇ ಉಂಟಾಗುತ್ತದೆ. ಒಂದುವೇಳೆ ಭರತನು ನ್ಯಾಯವಾಗಿ ತಂದೆ ನೀಡುವ ರಾಜ್ಯವನ್ನು ಪಡೆದುಕೊಂಡರೆ ಸುಖಾರ್ಹನಾದ ಆ ನಿನ್ನ ಮಗನೇ ರಾಮನಿಗೆ ಸಹಜ ಶತ್ರುವಾಗುತ್ತಾನೆ. ಸಂಪತ್ತನ್ನು ಕಳೆದುಕೊಂಡವನು ಪಡೆದವನ ವಶದಲ್ಲಿ ಹೇಗೆ ಬದುಕಿರುತ್ತಾನೆ

ಅಭಿದ್ರುತಮಿವಾರಣ್ಯೇ ಸಿಂಹೇನ ಗಜಯೂಥಪಮ್ ।
ಪ್ರಚ್ಛಾದ್ಯಮಾನಂ ರಾಮೇಣ ಭರತಂ ತ್ರಾತುಮರ್ಹಸಿ ॥೩೬॥

'ಅದರಿಂದ ರಾಮಾಭಿಷೇಕವಾಯಿತೆಂದರೆ ಸಿಂಹವು ಆನೆಯನ್ನು ಬೆನ್ನಟ್ಟುವಂತೆ ರಾಮ ಭರತನನ್ನು ಬೇಟೆಯಾಡುತ್ತಾನೆ. ಅದಕ್ಕೇ ನೀನು ರಾಮಾಭಿಷೇಕವನ್ನು ನಿಲ್ಲಿಸುವ ಮೂಲಕ ಭರತನನ್ನು ಕಾಪಾಡಿಕೊಳ್ಳಬೇಕು.

ದರ್ಪಾನ್ನಿರಾಕೃತಾ ಪೂರ್ವಂ ತ್ವಯಾ ಸೌಭಾಗ್ಯವತ್ತಯಾ ।
ರಾಮಮಾತಾ ಸಪತ್ನೀ ತೇ ಕಥಂ ವೈರಂ ನ ಯಾತಯೇತ್ ॥೩೭॥

'ಈ ಹಿಂದೆ ಪತಿಪ್ರೀತಿಯ ಬಲದಿಂದ ದರ್ಪದಿಂದ ನಿನ್ನ ಸವತಿಯಾದ

ರಾಮಮಾತೆ ಕೌಸಲ್ಯೆಯನ್ನು ತಿರಸ್ಕರಿಸಿರುವೆ. ರಾಮಾಭಿಷೇಕವಾದರೆ ಅವಳು ಹಗೆತನವನ್ನು ತೀರಿಸದೆ ಹೇಗೆ ಸುಮ್ಮನಿರಬಲ್ಲಳು?

'ಆತ್ಮಕಾಮಾ ಸದಾಚಂಡೀ ಕ್ರೋಧನಾ ಪ್ರಾಜ್ಞಮಾನಿನೀ ।
ಅರೋಗಾ ಚಾಪಿ ಮೇ ಮಾತಾ ಕೈಕೇಯೀ ಕಿಮುವಾಚ ಹ ॥''

(ಅಯೋ.70.10)

ಎಂದು ಭರತ ಹೇಳುವಂತೆ ಕೈಕೇಯಿ ಸ್ವಭಾವತಃ ಸ್ವಾರ್ಥಿ, ಕೋಪ ಕ್ರೋಧ ದರ್ಪಗಳಿಂದ ಕೂಡಿದವಳು. ಬೇರೆ ಉಪಾಯವಿಲ್ಲದೆ ದಶರಥ ಅವಳಿಗೆ ಹೆಚ್ಚು 'ಆದರ' ಮಾಡುತ್ತಿದ್ದ. ಇದು ಸ್ತ್ರೀವ್ಯಾಮೋಹವಲ್ಲ. ಇದನ್ನು ದುರುಪಯೋಗ ಪಡಿಸಿಕೊಂಡು ಕೌಸಲ್ಯೆಯನ್ನು ತಿರಸ್ಕರಿಸುತ್ತಿದ್ದವಳು ಕೈಕೇಯಿ. ಪ್ರಾಯಃ ಈ ಪಾಪದಿಂದಲೇ ಅಸುರಾವೇಶದಿಂದ ಅಭಿಷೇಕವನ್ನು ತಡೆದಳು.

ಯದಾ ಹಿ ರಾಮಃ ಪೃಥಿವೀಮವಾಪ್ಸ್ಯತಿ
ಪ್ರಭೂತರತ್ನಾಕರಶೈಲಪತ್ತನಾಮ್ ।
ತದಾ ಗಮಿಷ್ಯಸ್ಯಶುಭಂ ಪರಾಭವಂ
ಸಹೈವ ದೀನಾ ಭರತೇನ ಭಾಮಿನಿ ॥೩೮॥

'ಬಹುರತ್ನಗಳಿಗೆ ಆಕರವಾಗಿರುವ ಬೆಟ್ಟನಗರಗಳಿಂದ ಯುಕ್ತವಾದ ಭೂಮಿಯ ಒಡೆತನವನ್ನು ರಾಮ ಪಡೆದುಕೊಂಡಾಗ, ಕೈಕೇಯಿ, ದೀನಳಾದ ನೀನು ಭರತನೊಂದಿಗೇ ಅಶುಭಕರವಾದ ಪರಾಭವವನ್ನು ಹೊಂದುವಿ.

ಯದಾ ಹಿ ರಾಮಃ ಪೃಥಿವೀಮಾವಾಪ್ಸ್ಯತಿ
ಧ್ರುವಂ ಪ್ರನಷ್ಟೋ ಭರತೋ ಭವಿಷ್ಯತಿ ।
ಅತೋ ಹಿ ಸಂಚಿಂತಯ ರಾಜ್ಯಮಾತ್ಮಜೇ
ಪರಸ್ಯ ಚೈವಾದ್ಯ ವಿವಾಸಕಾರಣಮ್ ॥೩೯॥

ಭೂಮಿಯ ಒಡೆತನವನ್ನು ರಾಮ ಪಡೆದುಕೊಂಡೊಡನೆ ಭರತ ನಿಶ್ಚಿತವಾಗಿ ಸರ್ವನಾಶ ಹೊಂದುತ್ತಾನೆ. ಅದರಿಂದ ಮಗನಿಗೇ ರಾಜ್ಯ ಸಿಗುವಂತೆ, ಶತ್ರುವಿಗೆ ವನವಾಸ ಉಂಟಾಗುವಂತೆ ತಕ್ಕ ಏರ್ಪಾಡು ಹೇಗೆ ಮಾಡಬೇಕೆಂಬುದನ್ನು ಈಗಲೇ, ವಿಲಂಬ ಮಾಡದೇ ಆಲೋಚಿಸು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಎಂಟನೇ ಸರ್ಗ ಮುಗಿಯಿತು.

ನವಮಃ ಸರ್ಗಃ

ಸರ್ಗ – 9

ರಾಮನನ್ನು ವನಕ್ಕೆ ಕಳಿಸಲು ಉಪಾಯ.

ಏವಮುಕ್ತಾ ತು ಕೈಕೇಯೀ ಕ್ರೋಧೇನ ಜ್ವಲಿತಾನನಾ ।
ದೀರ್ಘಮುಷ್ಣಂ ವಿನಿಶ್ವಸ್ಯ ಮಂಥರಾಮಿದಮಬ್ರವೀತ್ ॥೧॥

ಹೀಗೆ ಮಂಥರೆ ಉಪದೇಶ ಮಾಡಿದಾಗ ಕೈಕೇಯಿ ರಾಮನ ಮೇಲಿನ ಕೋಪದಿಂದ ಮುಖವನ್ನು ಉರಿವ ಬೆಂಕಿಯಂತೆ ಕೆಂಪಗೆ ಮಾಡಿಕೊಂಡು ದೀರ್ಘವಾದ ಬಿಸಿ ಉಸಿರು ಬಿಡುತ್ತ ಮಂಥರೆಗೆ ಹೇಳಿದಳು.

ಏಳನೆ ಎಂಟನೆ ಸರ್ಗಗಳು ಪೂರ್ತಿ ಮಂಥರೆ ಎಡೆಬಿಡದೆ ಮತ್ತೆ ಮತ್ತೆ ವಿಷ್ಣು ವೈಷ್ಣವನಿಂದೆ ಮಾಡಿದ್ದನ್ನು ಕೇಳಿಸಿಕೊಂಡಿದ್ದರಿಂದ ಕೈಕೇಯಿಯಲ್ಲಿ ಸಹಜವಾಗಿ ಅಸುರಾವೇಶ ಉಂಟಾಯಿತು. ಹೊರಗೆ ದುರ್ಬೋಧನೆ ಮಾಡಲು ಅಸುರಸ್ತ್ರೀ ಮಂಥರೆಯೆ ಇದ್ದರೂ ಒಳಗಿನ ಮನಸ್ಸನ್ನು ಮಲಿನಗೊಳಿಸಲು ಇನ್ನೊಬ್ಬಳು ಅಸುರ-ಸ್ತ್ರೀ ಪ್ರವೇಶಿಸಿದಳು. ಮುಂದೆ ಇದನ್ನು ಬ್ರಹ್ಮದೇವ ಶ್ರೀರಾಮನಲ್ಲಿ ಹೇಳುತ್ತಾನೆ—

ತಥಾಪಿ ಸಾ ಯದಾವೇಶಾಚ್ಚಕಾರ ತ್ವಯ್ಯಶೋಭನಂ ।
ನಿಕೃತಿರ್ನಾಮ ಸಾ ಕ್ಷಿಪ್ತಾ ಮಯಾ ತಮಸಿ ಶಾಶ್ವತೇ ॥ (ನಿರ್ಣಯ 9.96)

'ಕೈಕೇಯಿ ಭರತನಂಥ ಸತ್ಪುತ್ರನಿಗೆ ಜನ್ಮಕೊಟ್ಟವಳು, ನರಕಯೋಗ್ಯಳಲ್ಲ. ಆದರೂ ನಿಕೃತಿಯ ಆವೇಶದಿಂದ ರಾಮಾಭಿಷೇಕವನ್ನು ನಿಲ್ಲಿಸಿದಳು. ಅದರಿಂದ ಆ ನಿಕೃತಿಯನ್ನು ತಮಸಿಗೆ ತಳ್ಳಿದ್ದೇನೆ'.

ಅಸುರಾವೇಶದಿಂದ ಕೈಕೇಯಿ ಮಲಿನಚಿತ್ತಳಾದರೂ ಅವಳಿಗೆ ರಾಮಾಭಿಷೇಕ-ವನ್ನು ನಿಲ್ಲಿಸುವುದು ಹೇಗೆ ಎಂದು ಉಪದೇಶ ಮಾಡಲು ಹೊರಗೆ ಮಂಥರೆ ಬೇಕಾಯಿತು. 'ದಾಸೀ ಭೂತ್ವಾ ವಿಲುಂಪ' ದಾಸಿಯಾಗಿ ರಾಮಾಭಿಷೇಕಕ್ಕೆ ವಿಘ್ನ ಮಾಡೆಂದು ಬ್ರಹ್ಮನ ವರದಿಂದ ಮಂಥರೆಗೆ ಈ ಅಧರ್ಮಮಾರ್ಗ ಗೊತ್ತು. ಅವಳು ಉಪದೇಶಿಸಿದಳು.

ನಿಕೃತಿಯ ಆವೇಶ ಮುಂದೆ—

ಏಕಸ್ಯಾಃ ಖಲು ಕೈಕೇಯ್ಯಾಃ ಕೃತೇಽಯಂ ವಿದ್ಯತೇ ಜನಃ ।
ಸ್ವಾರ್ಥೇ ಪ್ರಯತಮಾನಾಯಾಃ ಸಂಶ್ರಿತ್ಯ ನಿಕೃತಿಂ ತ್ವಿಮಾಂ ॥ (ಅಯೋ.39.7)

ಎನ್ನುವ ದಶರಥನ ಮಾತಿನಿಂದ ಸೂಚಿತವಾಗಿದೆ.

ಅದ್ಯ ರಾಮಮಿತಃ ಕ್ಷಿಪ್ರಂ ವನಂ ಪ್ರಸ್ಥಾಪಯಾಮ್ಯಹಮ್ ।
ಯೌವರಾಜ್ಯೇನ ಭರತಂ ಕ್ಷಿಪ್ರಮೇವಾಭಿಷೇಚಯೇ ॥೨॥

'ನಾನು ಇಂದೇ ರಾಮನನ್ನು ಇಲ್ಲಿಂದ ಬೇಗನೆ ಕಾಡಿಗೆ ಕಳಿಸುತ್ತೇನೆ. ಭರತನಿಗೇ ಯುವರಾಜಾಭಿಷೇಕವಾಗುವಂತೆ ಮಾಡುತ್ತೇನೆ.

ಇದಂ ತ್ವಿದಾನೀಂ ಸಂಪಶ್ಯ ಕೇನೋಪಾಯೇನ ಮಂಥರೇ ।
ಭರತಃ ಪ್ರಾಪ್ನುಯಾದ್ರಾಜ್ಯಂ ನ ತು ರಾಮಃ ಕಥಂಚನ ॥೩॥

'ಇದಕ್ಕೆ ಉಪಾಯವೇನು ಎಂದು, ಮಂಥರೆ! ಈಗ ನೀನು ಆಲೋಚಿಸು. ಭರತನು ರಾಜ್ಯವನ್ನು ಪಡೆಯಬೇಕು. ರಾಮನು ಸರ್ವಥಾ ಪಡೆಯಬಾರದು.'

ಏವಮುಕ್ತಾ ತದಾ ದೇವ್ಯಾ ಮಂಥರಾ ಪಾಪದರ್ಶಿನೀ ।
ರಾಮಾರ್ಥಮುಪಹಿಂಸಂತೀ ಕೈಕೇಯೀಮಿದಮಬ್ರವೀತ್ ॥೪॥

ದೇವಿ ಕೈಕೇಯಿ ಹೀಗೆ ಹೇಳಿದಾಗ ಪಾಪಕಾರ್ಯವನ್ನೇ ಆಲೋಚಿಸುವ ಮಂಥರೆ ರಾಮಾಭಿಷೇಕವನ್ನು ಕೆಡಿಸುವುದಕ್ಕೆ ಉಪಾಯವನ್ನು ಕೈಕೇಯಿಗೆ ಹೇಳಿಕೊಟ್ಟಳು.

ಹಂತೇದಾನೀಂ ಪ್ರವಕ್ಷ್ಯಾಮಿ ಕೈಕೇಯಿ ಶ್ರೂಯತಾಂ ಚ ಮೇ ।
ಯಥಾ ತೇ ಭರತೋ ರಾಜ್ಯಂ ಪುತ್ರಃ ಪ್ರಾಪ್ಸ್ಯತಿ ಕೇವಲಮ್ ॥೫॥

'ಅಬ್ಬಾ! ನಿನಗೀಗ ಒಳ್ಳೆಯ ಬುದ್ಧಿ ಬಂದಿತು! ಈಗ, ಕೈಕೇಯಿ! ಕೇವಲ ನಿನ್ನ ಮಗ ಭರತನೇ ರಾಜ್ಯವನ್ನು ಪಡೆಯುವಂತೆ ಒಳ್ಳೆಯ ಉಪಾಯವನ್ನು ನಿನಗೆ ನಾನು ಹೇಳುತ್ತೇನೆ ಕೇಳು.

ಕಿಂ ನ ಸ್ಮರಸಿ ಕೈಕೇಯಿ ಸ್ಮರಂತೀ ವಾ ನಿಗೂಹಸೇ ।
ಯದುಚ್ಯಮಾನಮಾತ್ಮಾರ್ಥಂ ಮತ್ತಸ್ತ್ವಂ ಶ್ರೋತುಮಿಚ್ಛಸಿ ॥೬॥

'ಕೈಕೇಯಿ, ನಿನಗೆ ನೆನಪಿಲ್ಲವೆ? ಅಥವಾ ನೆನಪಿದ್ದರೂ ಮರೆಮಾಚುತ್ತಿರುವೆಯ? ಪ್ರಾಯಃ ನಿನ್ನ ಹಿತವನ್ನು ನಿನಗೆ ನಾನು ಹೇಳಬೇಕು. ಅದನ್ನು ನನ್ನಿಂದ ನೀನು ಕೇಳಬೇಕೆಂದು ಬಯಸುತ್ತಿರುವೆ ತಾನೆ?

ಮಯೋಚ್ಯಮಾನಂ ಯದಿ ತೇ ಶ್ರೋತುಂ ಛಂದೋ ವಿಲಾಸಿನಿ ।
ಶ್ರೂಯತಾಮಭಿಧಾಸ್ಯಾಮಿ ಶ್ರುತ್ವಾ ಚಾಪಿ ವಿಮೃಶ್ಯತಾಮ್ ॥೭॥

'ಕೈಕೇಯಿ, ನಾನು ಹೇಳುವುದನ್ನು ಕೇಳುವುದೇ ನಿನಗೆ ಇಷ್ಟವಾಗಿರುವುದಾದರೆ, ಕೇಳು, ನಾನು ಹೇಳುತ್ತೇನೆ, ಕೇಳಿ ಅದನ್ನು ವಿಮರ್ಶಿಸು.'

ಶ್ರುತ್ವೈವಂ ವಚನಂ ತಸ್ಯಾ ಮಂಥರಾಯಾಸ್ತು ಕೈಕಯೀ ।
ಕಿಂಚಿದುತ್ಥಾಯ ಶಯನಾತ್ ಸಾಸ್ತೀರ್ಣಾದಿದಮಬ್ರವೀತ್ ॥೮॥

ಮಂಥರೆಯ ಈ ಮಾತನ್ನು ಕೇಳಿ ಕೈಕೇಯಿ ಚೆನ್ನಾಗಿ ಹಾಸಿದ್ದ ಹಾಸಿಗೆಯಿಂದ ಸ್ವಲ್ಪ ಎದ್ದು ಹೇಳಿದಳು.

ಕಥಯ ತ್ವಂ ಮಮೋಪಾಯಂ ಕೇನೋಪಾಯೇನ ಮಂಥರೇ ।
ಭರತಃ ಪ್ರಾಪ್ನುಯಾದ್ರಾಜ್ಯಂ ನ ತು ರಾಮಃ ಕಥಂಚನ ॥೯॥

'ಉಪಾಯವನ್ನು ನನಗೆ ಹೇಳು ಮಂಥರೆ, ಯಾವ ಉಪಾಯದಿಂದ ಭರತನೇ ರಾಜ್ಯವನ್ನು ಪಡೆದುಕೊಳ್ಳುತ್ತಾನೆ, ರಾಮ ಸರ್ವಥಾ ಪಡೆಯಲಾರ?'

ಏವಮುಕ್ತಾ ತು ಕೈಕೇಯ್ಯಾ ಮಂಥರಾ ಪಾಪದರ್ಶಿನೀ ।
ರಾಮಾರ್ಥಮುಪಹಿಂಸಂತೀ ಕುಬ್ಜಾ ವಚನಮಬ್ರವೀತ್ ॥೧೦॥

ಕೈಕೇಯಿ ಹೀಗೆ ಹೇಳಿದಾಗ ಪಾಪಮಾರ್ಗವನ್ನೇ ತೋರುವ ಮಂಥರೆ ರಾಮನ ಒಳಿತನ್ನು ಕೆಡಿಸುವುದಕ್ಕಾಗಿ ಹೇಳಿದಳು.

ಪುರಾ ದೈವಾಸುರೇ ಯುದ್ಧೇ ಸಹ ರಾಜರ್ಷಿಭಿಃ ಪತಿಃ ।
ಅಗಚ್ಛತ್ತ್ವಾ ಮುಪಾದಾಯ ದೇವರಾಜಸ್ಯ ಸಾಹ್ಯಕೃತ್ ॥೧೧॥

'ಹಿಂದೆ ದೇವಾಸುರ ಯುದ್ಧದಲ್ಲಿ ದೇವರಾಜನಿಗೆ ಸಹಾಯ ಮಾಡುವುದಕ್ಕಾಗಿ ಬೇರೆ ರಾಜರ್ಷಿಗಳೊಂದಿಗೆ ನಿನ್ನ ಪತಿ ನಿನ್ನನ್ನು ಜೊತೆಗೆ ಕರೆದುಕೊಂಡು ಹೋಗಿದ್ದ.

ದಿಶಮಾಸ್ಥಾಯ ವೈ ದೇವಿ ದಕ್ಷಿಣಾಂ ದಂಡಕಾನ್ ಪ್ರತಿ ।
ವೈಜಯಂತಮಿತಿ ಖ್ಯಾತಂ ಪುರಂ ತತ್ರ ತಿಮಿಧ್ವಜಃ ॥೧೨॥

'ದೇವಿ, ನಿನ್ನ ಪತಿ ದಕ್ಷಿಣ ದಿಕ್ಕಿಗೆ ಹೊರಟು ದಂಡಕಾರಣ್ಯಕ್ಕೆ ತೆರಳಿದ. ಅಲ್ಲಿ 'ವೈಜಯಂತ' ಎಂಬ ಪ್ರಸಿದ್ಧ ನಗರವಿತ್ತು. ಅಲ್ಲಿ 'ತಿಮಿಧ್ವಜ'ನೆಂಬ ರಾಕ್ಷಸನಿದ್ದ.

ಸ ಶಂಬರ ಇತಿ ಖ್ಯಾತಃ ಶತಮಾಯೋ ಮಹಾಸುರಃ ।
ದದೌ ಶಕ್ರಸ್ಯ ಸಂಗ್ರಾಮಂ ದೇವಸಂಘೈರನಿರ್ಜಿತಃ ॥೧೩॥

'ತಿಮಿಧ್ವಜನು ಶಂಬರನೆಂದು ಪ್ರಸಿದ್ಧನಾಗಿದ್ದ. ನೂರಾರು ಮಾಯೆಗಳನ್ನು ಅರಿತಿದ್ದ ಆ ಮಹಾ ಅಸುರನು ದೇವಸಮೂಹಗಳಿಂದ ಪರಾಜಿತನಾಗದೆ ದೇವೇಂದ್ರನ ಮೇಲೆಯೆ ಆಕ್ರಮಣ ಮಾಡಿದ.

ತಸ್ಮಿನ್ ಮಹತಿ ಸಂಗ್ರಾಮೇ ಪುರುಷಾನ್ ಕ್ಷತವಿಕ್ಷತಾನ್ ।
ರಾತ್ರೌ ಪ್ರಸುಪ್ತಾನ್ ಘ್ನಂತಿ ಸ್ಮ ತರಸಾಸಾದ್ಯ ರಾಕ್ಷಸಾಃ ॥೧೪॥

'ಆ ಮಹಾಯುದ್ಧದಲ್ಲಿ ಬಲುಗಾಯಗೊಂಡು ಬಳಲಿ ರಾತ್ರಿ ನಿದ್ರಿಸುತ್ತಿದ್ದ ಯೋಧರನ್ನು ರಾಕ್ಷಸರು ಬಲವಾಗಿ ಆಕ್ರಮಿಸಿ ಸಂಹರಿಸುತ್ತಿದ್ದರು.

ತತ್ರಾಕರೋನ್ಮಹಾಯುದ್ಧಂ ರಾಜಾ ದಶರಥಸ್ತದಾ ।
ಅಸುರೈಶ್ಚ ಮಹಾಬಾಹುಃ ಶಸ್ತ್ರೈಶ್ಚ ಶಕಲೀಕೃತಃ ॥೧೫॥

'ಆಗ ಮಹಾ ಬಾಹುಬಲಉಳ್ಳ ದಶರಥನು ಅಸುರರೊಂದಿಗೆ ಮಹಾಯುದ್ಧ-ವನ್ನೂ ಮಾಡಿ ಶಸ್ತ್ರಗಳಿಂದ ಗಾಯಗೊಂಡ.

ಅಪವಾಹ್ಯ ತ್ವಯಾ ದೇವಿ ಸಂಗ್ರಾಮಾನ್ನಷ್ಟಚೇತನಃ ।
ತತ್ರಾಪಿ ವಿಕ್ಷತಃ ಶಸ್ತ್ರೈಃ ಪತಿಸ್ತೇ ರಕ್ಷಿತಸ್ತ್ವಯಾ ॥೧೬॥

'ದೇವಿ, ನೀನು ಪ್ರಜ್ಞಾಹೀನನಾದ ರಾಜನನ್ನು ರಣರಂಗದಿಂದ ದೂರಕ್ಕೆ ಒಯ್ದು ರಕ್ಷಿಸಿದೆ. ಮಾತ್ರವಲ್ಲದೆ, ಆಯುಧಗಳಿಂದ ಗಾಯಗೊಂಡು ರಾತ್ರಿಯಲ್ಲಿ ನಿದ್ದೆ ಮಾಡುವಾಗಲೂ ರಾಕ್ಷಸರಿಂದ ಅವನನ್ನು ರಕ್ಷಿಸಿಕೊಂಡೆ.

ಓರ್ವ ಮುನಿ ಉಪದೇಶಿಸಿದ್ದ ಮಂತ್ರದ ಬಲದಿಂದ ಕೈಕೇಯಿ ರಾಜನನ್ನು ಕಾಪಾಡಿಕೊಂಡಿದ್ದಳು.

ತುಷ್ಟೇನ ತೇನ ದತ್ತೌ ತೇ ದ್ವೌ ವರೌ ಶುಭದರ್ಶನೇ ।
ಸ ತ್ವಯೋಕ್ತಃ ಪತಿರ್ದೇವಿ ಯದೇಚ್ಛೇಯಂ ತದಾ ವರೌ ॥೧೭॥

ಗೃಹ್ಣೀಯಾಮಿತಿ ತತ್ತೇನ ತಥೇತ್ಯುಕ್ತಂ ಮಹಾತ್ಮನಾ ।
ಅನಭಿಜ್ಞಾ ಹ್ಯಹಂ ದೇವಿ ತ್ವಯೈವ ಕಥಿತಾ ಪುರಾ ॥೧೮॥

ದೇವಿ, ರಾಜನು ಸಂತುಷ್ಟನಾಗಿ ಎರಡು ವರಗಳನ್ನು ಕೊಡುವೆನೆಂದು ನಿನಗೆ ವಾಗ್ದಾನ ಮಾಡಿದ. ಆಗ ನೀನೆಂದೆ, ನನಗೆ ಬೇಕೆನಿಸಿದಾಗ ಆ ವರಗಳನ್ನು ಕೇಳುತ್ತೇನೆ' ಎಂದು. ಮಹಾತ್ಮನಾದ ಪತಿ 'ಹಾಗೇ ಆಗಲಿ' ಎಂದಿದ್ದ. ನನಗೆ ಇದು ತಿಳಿದಿರಲಿಲ್ಲ. ನೀನೇ ಹಿಂದೆ ನನಗೆ ಹೇಳಿದ್ದೆ.

ಕಥೈಷಾ ತವ ತು ಸ್ನೇಹಾನ್ಮನಸಾ ಧಾರ್ಯತೇ ಮಯಾ ।
ರಾಮಾಭಿಷೇಕಸಂಭಾರಾನ್ನಿಗೃಹ್ಯ ವಿನಿವರ್ತಯ ॥೧೯॥

'ಈ ಕಥೆಯನ್ನು ನಾನು ನಿನ್ನ ಮೇಲಿನ ಪ್ರೀತಿಯಿಂದ ಮರೆಯದೆ ಮನಸಿ-ನಲ್ಲಿರಿಸಿಕೊಂಡಿದ್ದೇನೆ. ಅದರಿಂದ ರಾಮಾಭಿಷೇಕದ ಏರ್ಪಾಡುಗಳನ್ನು ತಡೆದು-ನಿಲ್ಲಿಸು.

ತೌ ಚ ಯಾಚಸ್ವ ಭರ್ತಾರಂ ಭರತಸ್ಯಾಭಿಷೇಚನಮ್ ।
ಪ್ರವ್ರಾಜನಂ ಚ ರಾಮಸ್ಯ ತ್ವಂ ವರ್ಷಾಣಿ ಚತುರ್ದಶ ॥೨೦॥

'ಭರತನಿಗೆ ಅಭಿಷೇಕವಾಗಲಿ, ರಾಮನು ಹದಿನಾಲ್ಕು ವರ್ಷಕಾಲ ವನವಾಸ ಮಾಡಲಿ' ಎಂದು ಎರಡು ವರಗಳನ್ನು ಪತಿಯಲ್ಲಿ ಕೇಳು.

ಚತುರ್ದಶ ಹಿ ವರ್ಷಾಣಿ ರಾಮೇ ಪ್ರವ್ರಾಜಿತೇ ವನಮ್ ।
ಪ್ರಜಾಭಾವಗತಸ್ನೇಹಃ ಸ್ಥಿರಃ ಪುತ್ರೋ ಭವಿಷ್ಯತಿ ॥೨೧॥

'ಹದಿನಾಲ್ಕು ವರ್ಷಕಾಲ ರಾಮನು ವನದಲ್ಲಿ ವಾಸ ಮಾಡುತ್ತಿದ್ದರೆ ಇತ್ತ ಪ್ರಜೆಗಳ ಅಂತಃಕರಣದಲ್ಲಿ ಭರತನ ಮೇಲಿನ ಅನುರಾಗ ತುಂಬಿಕೊಳ್ಳುವುದರಿಂದ ಭರತ ರಾಜ್ಯದಲ್ಲಿ ಸ್ಥಿರನಾಗುತ್ತಾನೆ.

ಕ್ರೋಧಾಗಾರಂ ಪ್ರವಿಶ್ಯಾದ್ಯ ಕ್ರುದ್ಧೇವಾಶ್ವಪತೇಃ ಸುತೇ ।
ಶೇಷ್ವಾನಂತರ್ಹಿತಾಯಾಂ ತ್ವಂ ಭೂಮೌ ಮಲಿನವಾಸಿನೀ ॥೨೨॥

'ಕೈಕೇಯಿ, ನೀನು ಈಗಲೇ ಕೊಳೆಯಾದ ಸೀರೆ ಉಟ್ಟು ಕೋಪದ ಮನೆಯನ್ನು ಪ್ರವೇಶಿಸಿ ಕುಪಿತಳಾದಂತೆ ಹಾಸುಗೆ ಇಲ್ಲದ ಬರಿ ನೆಲದಮೇಲೆ ಮಲಗು.

ಮಾ ಸ್ಮೈನಂ ಪ್ರತ್ಯುದೀಕ್ಷೇಥಾ ಮಾ ಚೈನಮಭಿಭಾಷಥಾಃ ।
ರುದಂತೀ ಪಾರ್ಥಿವಂ ದೃಷ್ಟ್ವಾ ಜಗತ್ಯಾಂ ಶೋಕಲಾಲಸಾ ॥೨೩॥

'ರಾಜನು ಬಂದಾಗ ಅವನ ಕಡೆಗೆ ತಿರುಗಿಯೂ ನೋಡಬೇಡ. ಅವನೊಡನೆ ಮಾತನಾಡಬೇಡ. ಅವನನ್ನು ಕಂಡೊಡನೆ ಶೋಕ ಉಕ್ಕಿಬಂದಂತೆ ನೆಲದ ಮೇಲೊರಗಿ ಅಳುತ್ತಿರು.

ದಯಿತಾ ತ್ವಂ ಸದಾ ಭರ್ತುರತ್ರ ಮೇ ನಾಸ್ತಿ ಸಂಶಯಃ ।
ತ್ವತ್ಕೃತೇ ಸ ಮಹಾರಾಜೋ ವಿಶೇದಪಿ ಹುತಾಶನಮ್ ॥೨೪॥

'ನೀನು ಪತಿಗೆ ಸದಾ ಪ್ರೀತಿಪಾತ್ರಳು. ನನಗೆ ಇದರಲ್ಲಿ ಸಂಶಯವಿಲ್ಲ. ನಿನಗಾಗಿ ಮಹಾರಾಜನು ಬೆಂಕಿಗೂ ಹಾರಬಲ್ಲ.

ನ ತ್ವಾಂ ಕ್ರೋಧಯಿತುಂ ಶಕ್ತೋ ನ ಕ್ರುದ್ಧಾಂ ಪ್ರತ್ಯುದೀಕ್ಷಿತುಮ್ ।
ತವ ಪ್ರಿಯಾರ್ಥಂ ರಾಜಾ ಹಿ ಪ್ರಾಣಾನಪಿ ಪರಿತ್ಯಜೇತ್ ॥೨೫॥

'ನಿನಗೆ ಕೋಪ ಬರುವಂತೆ ಮಾಡುವುದಕ್ಕೂ ಕುಪಿತಳಾದ ನಿನ್ನನ್ನು ನೋಡುವುದಕ್ಕೂ ಅವನಿಂದ ಸಾಧ್ಯವಿಲ್ಲ. ನಿನ್ನ ಸಂತೋಷಕ್ಕಾಗಿ ರಾಜನು ಪ್ರಾಣವನ್ನು ಬಿಟ್ಟಾನು.

ನ ಹ್ಯತಿಕ್ರಮಿತುಂ ಶಕ್ತಸ್ತವ ವಾಕ್ಯಂ ಮಹೀಪತಿಃ ।
ಮಂದಸ್ವಭಾವೇ ಬುಧ್ಯಸ್ವ ಸೌಭಾಗ್ಯಬಲಮಾತ್ಮನಃ ॥೨೬॥

'ರಾಜನು ನಿನ್ನ ಮಾತನ್ನು ಮೀರಿ ನಡೆಯಲು ಶಕ್ತನಲ್ಲ. ದಡ್ಡಿ ಸ್ವಭಾವದವಳೆ, ಪತಿಗೆ ಎಷ್ಟು ಪ್ರೀತಿಪಾತ್ರಳು ನೀನು, ಅದರ ಬಲವೆಷ್ಟೆಂದು ತಿಳಿದುಕೊ.

ಮಣಿಮುಕ್ತಾಸುವರ್ಣಾನಿ ರತ್ನಾನಿ ವಿವಿಧಾನಿ ಚ ।
ದದ್ಯಾದ್ದಶರಥೋ ರಾಜಾ ಮಾ ಸ್ಮ ತೇಷು ಮನಃ ಕೃಥಾಃ ॥೨೭॥

'ಮಣಿ ಮುತ್ತು ಬಂಗಾರ ನಾನಾ ಬಗೆಯ ರತ್ನಗಳನ್ನು ಆಮಿಷವಾಗಿ ದಶರಥ ನಿನಗೆ ಕೊಡಬಹುದು. ಅವುಗಳನ್ನು ಬಯಸಬೇಡ.

ಯೌ ತೌ ದೈವಾಸುರೇ ಯುದ್ಧೇ ವರೌ ದಶರಥೋ ದದೌ ।
ತೌ ಸ್ಮಾರಯ ಮಹಾಭಾಗೇ ಸೋರ್ಥೋ ಮಾ ತ್ವಾಮತಿಕ್ರಮೇತ್॥೨೮॥

'ದೇವಾಸುರ ಯುದ್ಧದಲ್ಲಿ ದಶರಥನು ನಿನಗೆ ಏನು ಎರಡು ವರಗಳನ್ನು ವಾಗ್ದಾನ ಮಾಡಿರುವನೋ ಅವನ್ನು ಅವನಿಗೆ ನೆನಪಿಸು. ಕೈಕೇಯಿ, ಅವುಗಳಿಂದ ಬರುವ ಲಾಭ ನಿನ್ನ ಕೈತಪ್ಪಿ ಹೋಗದಿರಲಿ.

ಯದಾ ತು ತೇ ವರಂ ದದ್ಯಾತ್ ಸ್ವಯಮುತ್ಥಾಪ್ಯ ರಾಘವಃ ।
ವ್ಯವಸ್ಥಾಪ್ಯ ಮಹಾರಾಜಂ ತ್ವಮಿಮಂ ವೃಣುಯಾ ವರಮ್ ॥೨೯॥

'ದಶರಥನು ಸ್ವತಃ ನಿನ್ನನ್ನು ಎಬ್ಬಿಸಿ ವರ ಕೊಡುವೆನೆಂದಾಗ, ಮಾತು ತೆಗೆದುಕೊಂಡು ಅದರಲ್ಲಿ ಅವನನ್ನು ಕಟ್ಟಿಹಾಕಿ ಬಳಿಕ ವರವನ್ನು ಕೇಳಬೇಕು.

ರಾಮಂ ಪ್ರವ್ರಾಜಯಾರಣ್ಯೇ ನವ ವರ್ಷಾಣಿ ಪಂಚ ಚ ।
ಭರತಃ ಕ್ರಿಯತಾಂ ರಾಜಾ ಪೃಥಿವ್ಯಾಃ ಪಾರ್ಥಿವರ್ಷಭ ॥೩೦॥

'ರಾಮನನ್ನು ಹದಿನಾಲ್ಕು ವರ್ಷ ವನವಾಸಕ್ಕೆ ಕಳಿಸು. ರಾಜಶ್ರೇಷ್ಠನೆ, ಭರತನನ್ನು ಭೂಮಿಗೆ ರಾಜನನ್ನಾಗಿ ಮಾಡು' ಎಂದು ವರವನ್ನು ಕೇಳು.

ಚತುರ್ದಶ ಹಿ ವರ್ಷಾಣಿ ರಾಮೇ ಪ್ರವ್ರಾಜಿತೇ ವನಮ್ ।
ರೂಢಶ್ಚ ಕೃತಮೂಲಶ್ಚ ಶೇಷಂ ಸ್ಥಾಸ್ಯತಿ ತೇ ಸುತಃ ॥೩೧॥

'ಹದಿನಾಲ್ಕು ವರ್ಷಕಾಲ ರಾಮ ವನವಾಸ ಮಾಡಿದರೆ ಅಷ್ಟರಲ್ಲಿ ನಿನ್ನ ಮಗ ರೂಢಮೂಲನಾಗಿ ಮೂಲಬಲವನ್ನು ತನ್ನದಾಗಿಸಿಕೊಂಡು ಮುಂದೆ ಹಾಯಾಗಿ ರಾಜ್ಯಭಾರ ಮಾಡುತ್ತಾನೆ.

ರಾಮಪ್ರವ್ರಾಜನಂ ಚೈವ ದೇವಿ ಯಾಚಸ್ವ ತಂ ವರಮ್ ।
ಏವಂ ಸಿಧ್ಯಂತಿ ಪುತ್ರಸ್ಯ ಸರ್ವಾರ್ಥಾಸ್ತವ ಭಾಮಿನಿ ॥೩೨॥

'ದೇವಿ, ಭರತನ ಪಟ್ಟಾಭಿಷೇಕವನ್ನು ಮಾತ್ರವಲ್ಲದೆ ರಾಮನ ವನವಾಸವನ್ನೂ ವರವಾಗಿ ರಾಜನಲ್ಲಿ ಕೇಳಿಕೊಳ್ಳು. ಹೀಗೆ ಮಾಡಿದಾಗ ನಿನ್ನ ಮಗನಿಗೆ ಸರ್ವಾ-ಭೀಷ್ಟಗಳೂ ಸಿದ್ಧಿಸುವುವು.

ಏವಂ ಪ್ರವ್ರಾಜಿತಶ್ಚೈವ ರಾಮೋऽರಾಮೋ ಭವಿಷ್ಯತಿ ।
ಭರತಶ್ಚ ಹತಾಮಿತ್ರಸ್ತವ ರಾಜಾ ಭವಿಷ್ಯತಿ ॥೩೩॥

'ಹೀಗೆ ಮಾಡಿದಾಗ ವನವಾಸ ಮಾಡಿ ಬರುವ ರಾಮ 'ಅರಾಮ' ಪ್ರಜೆಗಳಿಗೆ ಅಪ್ರಿಯನಾಗುತ್ತಾನೆ. ಭರತನು ಶತ್ರುನಾಶ ಮಾಡಿಕೊಂಡು ಪ್ರಜೆಗಳಿಗೆ 'ರಾಜ' ರಂಜಕ, ಪ್ರಿಯನಾಗುತ್ತಾನೆ.

ಯೇನ ಕಾಲೇನ ರಾಮಶ್ಚ ವನಾತ್ ಪ್ರತ್ಯಾಗಮಿಷ್ಯತಿ ।
ತೇನ ಕಾಲೇನ ಪುತ್ರಸ್ತೇ ಕೃತಮೂಲೋ ಭವಿಷ್ಯತಿ ॥೩೪॥

'ಹದಿನಾಲ್ಕು ವರ್ಷಕಾಲ ವನವಾಸ ಮಾಡಿ ರಾಮನು ಕಾಡಿನಿಂದ ಹಿಂತಿರುಗಿ ಬರುವಾಗ ಭರತನು ಮಂತ್ರಿ ಸೇನಾಧಿಪತಿ ಮುಂತಾದ ಮೂಲ ಬಲವನ್ನು ತನ್ನದಾಗಿಸಿ ಕೊಂಡಿರುತ್ತಾನೆ.

ಸಂಗೃಹೀತಮನುಷ್ಯಶ್ಚ ಸುಹೃದ್ಭಿಃ ಸಾರ್ಧಮಾತ್ಮವಾನ್ ।
ಪ್ರಾಪ್ತಕಾಲಂ ತು ತೇ ಮನ್ಯೇ ರಾಜಾನಂ ವೀತಸಾಧ್ವಸಾ ॥೩೫॥

ರಾಮಾಭಿಷೇಕಸಂಭಾರಾನ್ನಿಗೃಹ್ಯ ವಿನಿವರ್ತಯ ।
ಅನರ್ಥಮರ್ಥರೂಪೇಣ ಗ್ರಾಹಿತಾ ಸಾ ತತಸ್ತಯಾ ॥೩೬॥

'ಭರತನು ಅಧಿಕಾರಿವರ್ಗದ ಮನುಷ್ಯರನ್ನೂ ಪ್ರಜೆಗಳನ್ನೂ ತನ್ನವರನ್ನಾಗಿ ಮಾಡಿಕೊಂಡು ಮಿತ್ರರಾಜರೊಡನೆ 'ಆತ್ಮವಾನ್' ವಿವೇಕಪೂರ್ಣವಾದ ವರ್ತನೆ ಉಳ್ಳವನಾಗಿರುತ್ತಾನೆ. ಅವನು ಹೀಗಾಗಬೇಕಾದರೆ ನೀನು ಈಗ ಭಯರಹಿತಳಾಗಿ ರಾಜನನ್ನು ನಿನ್ನ ಅಂಕೆಯಲ್ಲಿಟ್ಟುಕೊಂಡು ರಾಮಾಭಿಷೇಕದ ಏರ್ಪಾಡನ್ನು ಅವನು ಕೈಬಿಡುವಂತೆ ಮಾಡು. ಇದಕ್ಕೆ ನಿನಗಿದು ಯೋಗ್ಯಕಾಲವೆಂದು ನನ್ನ ಅನಿಸಿಕೆ' —ಹೀಗೆ ಮಂಥರೆ ಕೈಕೇಯಿಗೆ ಮನೆಹಾಳು ಸಲಹೆಯನ್ನು ಕೊಟ್ಟು ಅದನ್ನು ಮನೋಜ್ಞವೆಂಬಂತೆ ಬಿಂಬಿಸುವಲ್ಲಿ ಯಶಸ್ವಿಯಾದಳು.

ಹೃಷ್ಟಾ ಪ್ರತೀತಾ ಕೈಕೇಯೀ ಮಂಥರಾಮಿದಮಬ್ರವೀತ್ ।
ಸಾ ಹಿ ವಾಕ್ಯೇನ ಕುಬ್ಜಾಯಾಃ ಕಿಶೋರೀವೋತ್ಪಥಂ ಗತಾ ॥೩೭॥

ಕೈಕೇಯಿ ಆಗ ಸಂತುಷ್ಟಳಾದರು. ಮಂಥರೆಯ ಮಾತನ್ನು ಪೂರ್ತಿ ನಂಬಿ ಅವಳನ್ನು ಪ್ರಶಂಸೆ ಮಾಡಲು ತೊಡಗಿದಳು. ಮಂಥರೆಯ ಮಾತಿನಿಂದ ಹೆಣ್ಣು ಕುದುರೆಮರಿಯಂತೆ ತಪ್ಪುದಾರಿ ಹಿಡಿದಳು.

ಕೈಕೇಯೀ ವಿಸ್ಮಯಂ ಪ್ರಾಪ್ತಾ ಪರಂ ಪರಮದರ್ಶನಾ ।
ಕುಬ್ಜೇ ತ್ವಂ ನಾವಜಾನಾಮಿ ಶ್ರೇಷ್ಠಾಂ ಶ್ರೇಷ್ಠಾಭಿಧಾಯಿನೀಮ್ ॥೩೮॥

ಅದರಿಂದ ಹಿಂದೆ ಕೈಕೇಯಿ ಒಳ್ಳೆಯ ತಿಳುವಳಿಕೆ ಉಳ್ಳವಳೇ ಆಗಿದ್ದರೂ ಕೂಡ ಈಗ 'ಮಂಥರೆಯದು ಎಂಥ ಅದ್ಭುತವಾದ ಸಲಹೆ' ಎಂದು ಅಚ್ಚರಿಗೊಂಡಳು. 'ಮಂಥರೆ, ನೀನು ಒಳ್ಳೆಯವಳು. ಒಳ್ಳೆಯ ಸಲಹೆ ಕೊಡುವವಳು. ನಿನ್ನ ಮಾತನ್ನು ಕಡೆಗಣಿಸಿ ನಿನ್ನನ್ನು ನಾನು ಅವಮಾನಿಸಲಾರೆ.'

ಪೃಥಿವ್ಯಾಮಸಿಃ ಕುಬ್ಜಾನಾಮುತ್ತಮಾ ಬುದ್ಧಿನಿಶ್ಚಯೇ ।
ತ್ವಮೇವ ತು ಮಮಾರ್ಥೇಷು ನಿತ್ಯಯುಕ್ತಾ ಹಿತೈಷಿಣೀ ॥೩೯॥

'ಇದು ಸರಿಯಾದ ಬುದ್ಧಿ' ಎಂದು ಬುದ್ಧಿಯನ್ನು ಸರಿಯಾಗಿ ನಿಶ್ಚಯಿಸುವಲ್ಲಿ ಭೂಮಿಯಲ್ಲಿರುವ ಕುಳ್ಳಿಯರಲ್ಲಿ ನೀನೆ ಉತ್ತಮಳು. ನನ್ನ ಹಿತಸಾಧನೆಗಳಲ್ಲಿ ಸದಾ ನಿರತಳಾಗಿರುವ ಹಿತೈಷಿಣಿ ನೀನೆ.

ನಾಹಂ ಸಮವಬುಧ್ಯೇಯಂ ಕುಬ್ಜೇ ರಾಜ್ಞಶ್ಚಿಕೀರ್ಷಿತಮ್ ।
ಸಂತಿ ದುಃಸಂಸ್ಥಿತಾಃ ಕುಬ್ಜಾ ವಕ್ರಾಃ ಪರಮದಾರುಣಾಃ ॥೪೦॥

'ನೀ ಹೇಳದಿರುತ್ತಿದ್ದರೆ, ರಾಜನು ಈಗ ಏನು ಮಾಡಲು ಹೊರಟಿದ್ದಾನೆ ಎಂಬುದನ್ನು ನಾನು ಅರಿತುಕೊಳ್ಳುತ್ತಿರಲಿಲ್ಲ. ನಿನ್ನೊಬ್ಬಳನ್ನು ಬಿಟ್ಟರೆ ಲೋಕದಲ್ಲಿ ಕುಳ್ಳಿಯರೆಂದರೆ ಕುರೂಪಿಗಳೂ, ವಕ್ರಬುದ್ಧಿಯವರೂ ಬಲು ಕ್ರೂರಿಗಳೂ ಆಗಿರುತ್ತಾರೆ.

ತ್ವಂ ಪದ್ಮಮಿವ ವಾತೇನ ಸಂನತಾ ಪ್ರಿಯದರ್ಶನಾ ।
ಉರಸ್ತೇಽಭಿನಿವಿಷ್ಟಂ ವೈ ಯಾವತ್‌ಸ್ಕಂಧಂ ಸಮುನ್ನತಮ್ ॥೪೧॥

'ಆದರೆ ನೀನು ಕುರೂಪಿಯಲ್ಲ. ಗಾಳಿಯ ಹೊಡೆತಕ್ಕೆ ಬಗ್ಗಿದ ಕಮಲದ ಹೂವಿನಂತೆ ಕಾಣುವ ಗೂನು ಬೆನ್ನಿನವಳು, ನೋಡಲು ಸುಂದರಿಯೆ ಆಗಿರುವೆ. ನಿನ್ನ ಎದೆ ಭುಜಗಳವರೆಗೆ ಉನ್ನತವಾಗಿದ್ದು ಗೂನಿನಿಂದ ವ್ಯಾಪ್ತವಾಗಿದೆ.

ಅಧಸ್ತಾಚ್ಚೋದರಂ ಶಾತಂ ಸುನಾಭಮಿವ ಲಜ್ಜಿತಮ್ ।
ಪರಿಪೂರ್ಣಂ ತು ಜಘನಂ ಸುಪೀನೌ ಚ ಪಯೋಧರೌ ॥೪೨॥

'ಕೆಳಗೆ ಸುಂದರ ನಾಭಿಯುಕ್ತವಾದ ಹೊಟ್ಟೆ ಎದೆಯ ಔನ್ನತ್ಯಕ್ಕೆ ನಾಚಿ ಕೃಶವಾದಂತಿದೆ. ನಿತಂಬವು ವಿಶಾಲವಾಗಿದೆ. ಸ್ತನಗಳು ಸ್ಥೂಲವಾಗಿವೆ.

ವಿಮಲೇಂದುಸಮಂ ವಕ್ತ್ರಮಹೋ ರಾಜಸಿ ಮಂಥರೇ ।
ಜಘನಂ ತವ ನಿರ್ಮೃಷ್ಟಂ ರಶನಾದಾಮಶೋಭಿತಮ್ ॥೪೩॥

'ನಿರ್ಮಲ ಚಂದ್ರಬಿಂಬದಂತಿದೆ ನಿನ್ನ ಮುಖ. ಆಹಾ! ಮಂಥರೆ, ನೀನು ಚೆನ್ನಾಗಿ ರಾಜಿಸುವೆ! ನಿರ್ಮಲವಾದ ನಿನ್ನ ನಿತಂಬ ಒಡ್ಯಾಣದಿಂದ ಶೋಭಿಸುತ್ತಿದೆ.

ಜಂಘೇ ಭೃಶಮುಪನ್ಯಸ್ತೇ ಪಾದೌ ಚಾಪ್ಯಾಯತಾವುಭೌ ।
ತ್ವಮಾಯತಾಭ್ಯಾಂ ಸಕ್ಥಿಭ್ಯಾಂ ಮಂಥರೇ ಕ್ಷೌಮವಾಸಿನೀ ॥೪೪॥

'ಮಂಥರೆ, ನಿನ್ನ ಮೊಳಕಾಲುಗಳು ಮಂಡಿಯವರೆಗೆ ಚೆನ್ನಾಗಿ ಹರಡಿವೆ. ಎರಡು ಕಾಲುಗಳು ದೀರ್ಘವಾಗಿವೆ. ದೀರ್ಘವಾದ ತೊಡೆಗಳಿಂದ ಕೂಡಿದ್ದು ರೇಶಿಮೆ ಸೀರೆ ಉಟ್ಟಿರುವೆ.

ಅಗ್ರತೋ ಮಮ ಗಚ್ಛಂತೀ ರಾಜಹಂಸೀವ ರಾಜಸೇ ।
ಆಸನ್ ಯಾಃ ಶಂಬರೇ ಮಾಯಾಃ ಸಹಸ್ರಮಸುರಾಧಿಪೇ ॥೪೫॥

ಸರ್ವಾಸ್ತ್ವಯಿ ನಿವಿಷ್ಟಾಸ್ತಾ ಭೂಯಶ್ಚಾನ್ಯಾಃ ಸಹಸ್ರಶಃ ।
ತವೇದಂ ಸ್ಥಗು ಯದ್ವೀರ್ಯಂ ರಥಫೋಣಮಿವಾಯತಮ್ ॥೪೬॥

ನನ್ನ ಮುಂದೆ ಸುಳಿದಾಡುತ್ತಿದ್ದರೆ ನೀನು ರಾಜಹಂಸಿಯಂತೆ ವಿರಾಜಿಸುವೆ. ಅಸುರರಾಜನಾದ ಶಂಬರನಲ್ಲಿ ಯಾವ ಸಾವಿರ ಅಸುರ ಮಾಯೆಗಳಿದ್ದುವೋ ಅವೆಲ್ಲವೂ ಮಾತ್ರವಲ್ಲದೆ ಇನ್ನೂ ಬೇರೆ ಸಾವಿರ ಲೌಕಿಕ ಮಾಯೆಗಳು, ರಥಚಕ್ರದ ನಡುವಿನ ಗುಂಭದಂಥ ಉದ್ದವೂ ವಿಸ್ತಾರವೂ ಆಗಿರುವ ನಿನ್ನೆದೆಯ ಗೂನಿನಾಕಾರ ತಳೆದು ನಿನ್ನಲ್ಲಿ ನೆಲೆಸಿವೆ.

ಮತಯಃ ಕ್ಷತ್ತ್ರವಿದ್ಯಾಶ್ಚ ಮಾಯಾಶ್ಚಾತ್ರ ವಸಂತಿ ತೇ ।
ಅತ್ರ ತೇ ಪ್ರತಿಮೋಕ್ಷ್ಯಾಮಿ ಮಾಲಾಂ ಕುಬ್ಜೇ ಹಿರಣ್ಮಯೀಮ್ ॥೪೭॥

'ಮತಿ ಬುದ್ಧಿ ಸ್ಮೃತಿ ಮುಂತಾದುವೂ ರಾಜನೀತಿಗಳೂ ಮಾಯೆಗಳೂ ನಿನ್ನೆದೆಯ ಗೂನಿನಲ್ಲಿ ವಾಸಮಾಡುತ್ತಿರುವುದರಿಂದ ಅದಕ್ಕೆ ಬಂಗಾರದ ಮಾಲೆ-ಯನ್ನು ಹಾಕುವೆನು.

ಅಭಿಷಿಕ್ತೇ ಚ ಭರತೇ ರಾಘವೇ ಚ ವನಂ ಗತೇ ।
ಜಾತ್ಯೇನ ಚ ಸುವರ್ಣೇನ ಸುನಿಷ್ಟಪ್ತೇನ ಮಂಥರೇ ॥೪೮॥

ಲಬ್ಧಾರ್ಥಾ ಚ ಪ್ರತೀತಾ ಚ ಲೇಪಯಿಷ್ಯಾಮಿ ತೇ ಸ್ಥಗು ।
ಮುಖೇ ಚ ತಿಲಕಂ ಚಿತ್ರಂ ಜಾತರೂಪಮಯಂ ಶುಭಮ್ ॥೪೯॥

ಕಾರಯಿಷ್ಯಾಮಿ ತೇ ಕುಬ್ಜೇ ಶುಭಾನ್ಯಾಭರಣಾನಿ ಚ ।
ಪರಿಧಾಯ ಶುಭೇ ವಸ್ತ್ರೇ ದೇವತೇವ ಚರಿಷ್ಯಸಿ ॥೫೦॥

ಭರತನಿಗೆ ಅಭೀಷೇಕವಾದಾಗ, ರಾಮನು ಕಾಡಿಗೆ ಹೋದಾಗ, ನಾನು ನನ್ನಿಷ್ಟವನ್ನು ಪಡೆದು ಸಂತುಷ್ಟಳಾಗಿ, ಪುಟಕ್ಕೆ ಹಾಕಿದ ಅಪ್ಪಟ ಚಿನ್ನದ ರೇಕುಗಳಿಂದ ನಿನ್ನೆದೆಯ ಗೂನನ್ನು ಅಲಂಕರಿಸುತ್ತೇನೆ. ಆಶ್ಚರ್ಯಕರವಾದ ಶುಭಕರವಾದ ಸುವರ್ಣಮಯ ತಿಲಕವನ್ನು ನಿನ್ನ ಮುಖಕ್ಕೆ ಮಾಡಿಸಿಕೊಡುತ್ತೇನೆ. ನೀನು ಶುಭಕರವಾದ ಎರಡು ವಸ್ತ್ರಗಳನ್ನೂ ಶುಭಕರವಾದ ಆಭರಣಗಳನ್ನೂ ಧರಿಸಿ ದೇವತೆಯಂತೆ ಸಂಚರಿಸುವಿ.

ಚಂದ್ರಮಾಹ್ವಯಮಾನೇನ ಮುಖೇನಾಪ್ರತಿಮಾನನಾ ।
ಗಮಿಷ್ಯಸಿ ಗತಿಂ ಮುಖ್ಯಾಂ ಗರ್ಹಯಂತೀ ದ್ವಿಷಜ್ಜನಮ್ ॥೫೧॥

'ಚಂದ್ರನೊಡನೆ ಸ್ಪರ್ಧಿಸುವ ಮುಖದಿಂದ ಅಪ್ರತಿಮಮುಖಿ ಎನಿಸಿದ ನೀನು ನನ್ನ ಸವತಿಯರಾದ ಶತ್ರುಜನರನ್ನು ತೃಣೀಕರಿಸುತ್ತ ರಾಜಮಾರ್ಗದಲ್ಲಿ ಸಂಚರಿಸುವೆ.

ತವಾಪಿ ಕುಬ್ಜಾಃ ಕುಬ್ಜಾಯಾಃ ಸರ್ವಾಭರಣಭೂಷಿತಾಃ ।
ಪಾದೌ ಪರಿಚರಿಷ್ಯಂತಿ ಯಥೈವ ತ್ವಂ ಸದಾ ಮಮ ॥೫೨॥

'ನೀನು ನನ್ನ ಪಾದಗಳನ್ನು ಹೇಗೆ ಸದಾ ಸೇವಿಸುವಿಯೋ ಹಾಗೆ ಕುಬ್ಜೆಯಾದ ನಿನ್ನ ಪಾದಗಳನ್ನೂ ಕೂಡ ಸರ್ವಾಭರಣ ಭೂಷಿತರಾದ ಕುಬ್ಜೆಯರು ಸದಾ ಸೇವಿಸುತ್ತಾರೆ.'

ಇತಿ ಪ್ರಶಸ್ಯಮಾನಾ ಸಾ ಕೈಕೇಯೀಮಿದಮಬ್ರವೀತ್ ।
ಶಯಾನಾಂ ಶಯನೇ ಶುಭ್ರೇ ವೇದ್ಯಾಮಗ್ನಿಶಿಖಾಮಿವ ॥೫೩॥

ಹೀಗೆ ತನ್ನನ್ನು ಹೊಗಳುತ್ತ, ಯಜ್ಞವೇದಿಯಲ್ಲಿ ಅಗ್ನಿಜ್ವಾಲೆಯಂತೆ, ಶುಭ್ರವಾದ ಹಾಸಿಗೆ ಮೇಲೆ ಒರಗಿದ್ದ ಕೈಕೇಯಿಗೆ ಮಂಥರೆ ನುಡಿದಳು.

ಗತೋದಕೇ ಸೇತುಬಂಧೋ ನ ಕಲ್ಯಾಣಿ ವಿಧೀಯತೇ ।
ಉತ್ತಿಷ್ಠ ಕುರು ಕಲ್ಯಾಣಿ ರಾಜಾನಮನುದರ್ಶಯ ॥೫೪॥

'ಕೈಕೇಯಿ, ಎದ್ದೇಳು, ನಾನು ಹೇಳಿದಂತೆ ಮಾಡು. ರಾಜನಿಗೆ ಕೋಪದ ಮನೆ-ಯನ್ನು ತೋರು. ಕಾಲವಿಲಂಬ ಮಾಡಬೇಡ. ನೀರು ಹರಿದು ಹೋದಮೇಲೆ ಅಡ್ಡಗಟ್ಟೆ ಕಟ್ಟುವುದು ಯುಕ್ತವಾಗುವುದಿಲ್ಲ.'

ತಥಾ ಪ್ರೋತ್ಸಾಹಿತಾ ದೇವೀ ಗತ್ವಾ ಮಂಥರಯಾ ಸಹ ।
ಕ್ರೋಧಾಗಾರಂ ವಿಶಾಲಾಕ್ಷೀ ಸೌಭಾಗ್ಯಮದಗರ್ವಿತಾ ॥೫೫॥

ಹೀಗೆ ಮಂಥರೆ ಪ್ರೋತ್ಸಾಹಿಸಿದಾಗ, ಪತಿಪ್ರೇಮದಿಂದ ಮದಗರ್ವಿತಳಾಗಿದ್ದ ವಿಶಾಲಾಕ್ಷಿಯಾದ ಕೈಕೇಯಿ ಮಂಥರೆಯೊಂದಿಗೆ ಕೋಪದ ಮನೆಯನ್ನು ಪ್ರವೇಶಿಸಿ...

ಅನೇಕ ಶತಸಾಹಸ್ರಂ ಮುಕ್ತಾಹಾರಂ ವರಾಂಗನಾ ।
ಅವಮುಚ್ಯ ವರಾರ್ಹಾಣಿ ಶುಭಾನ್ಯಾಭರಣಾನಿ ಚ ॥೫೬॥

ಅನೇಕ ಲಕ್ಷ ಸುವರ್ಣಗಳಷ್ಟು ಬೆಲೆಬಾಳುವ ಮುತ್ತಿನಹಾರವನ್ನು ಅಮೂಲ್ಯವಾದ ಶುಭಕರವಾದ ಬೇರೆ ಆಭರಣಗಳನ್ನು ಬಿಚ್ಚಿ...

ತತೋ ಹೇಮೋಪಮಾ ತತ್ರ ಕುಬ್ಜಾವಾಕ್ಯವಶಂ ಗತಾ ।
ಸಂವಿಶ್ಯ ಭೂಮೌ ಕೈಕೇಯೀ ಮಂಥರಾಮಿದಮಬ್ರವೀತ್ ॥೫೭॥

ಮಂಥರೆಯ ಮಾತಿಗೆ ಸೋತು ವಶಳಾದ ಚಿನ್ನದಂಥ ಕೈಕೇಯಿ ನೆಲದ ಮೇಲೊರಗಿ ಮಂಥರೆಗೆ ಹೇಳಿದಳು.

ಇಹ ವಾ ಮಾಂ ಮೃತಾಂ ಕುಬ್ಜೇ ನೃಪಾಯಾವೇದಯಿಷ್ಯಸಿ ।
ವನಂ ತು ರಾಘವೇ ಪ್ರಾಪ್ತೇ ಭರತಃ ಪ್ರಾಪ್ಸ್ಯತಿ ಕ್ಷಿತಿಮ್ ॥೫೮॥

'ಮಂಥರೆ, ಇನ್ನು ನಾನಿಲ್ಲೇ ಸತ್ತೆನೆಂದು ರಾಜನಿಗೆ ನೀನು ತಿಳಿಸುವಿ, ಅಥವಾ, ರಾಮನು ವನವಾಸಕ್ಕೆ ಹೋದಾಗ ಭರತ ರಾಜ್ಯವನ್ನು ಪಡೆಯುತ್ತಾನೆ.

ನ ಸುವರ್ಣೇ ನ ಮೇ ಹ್ಯರ್ಥೇ ನ ರತ್ನೈರ್ನ ಚ ಭೋಜನೈಃ ।
ಏಷ ಮೇ ಜೀವಿತಸ್ಯಾಂತೋ ರಾಮೋ ಯದ್ಯಭಿಷಿಚ್ಯತೇ ॥೫೯॥

'ಏಕೆಂದರೆ ಬಂಗಾರದಿಂದ ರತ್ನಗಳಿಂದ ಭೋಜನಗಳಿಂದ ನನಗೇನು ಆಗಬೇಕಿಲ್ಲ. ರಾಮ ಅಭಿಷಿಕ್ತನಾದನೆಂದರೆ ಅದೇ ನನ್ನ ಬದುಕಿನ ಅಂತ್ಯ, ಸಾವು.'

ಅಥೋ ಪುನಸ್ತಾಂ ಮಹಿಷೀಂ ಮಹೀಕ್ಷಿತೋ
ವಚೋಭಿರತ್ಯರ್ಥಮಹಾಪರಾಕ್ರಮೈಃ ।
ಉವಾಚ ಕುಬ್ಜಾ ಭರತಸ್ಯ ಮಾತರಂ
ಹಿತಂ ವಚೋ ರಾಮಮುಪೇತ್ಯ ಚಾಹಿತಮ್ ॥೬೦॥

ಕೈಕೇಯಿಯ ಈ ನಿರ್ಧಾರಕ್ಕೆ ಇನ್ನೂ ದೃಢತೆ ಬರಲಿ ಎಂದು ಮಂಥರೆ, ಅವಳ ಸಾತ್ವಿಕ ಅಂತಃಕರಣವನ್ನು ಇರಿಯುವಲ್ಲಿ ಮಹಾಪರಾಕ್ರಮ ತೋರುವಂಥ ಮಾತುಗಳಿಂದ, ರಾಮನ ವಿಷಯದಲ್ಲಿ ಅಹಿತವಾಗುವಂತೆ ಕೈಕೇಯಿಯ ವಿಷಯದಲ್ಲಿ ಹಿತವಾಗಿರುವಂತೆ ಪುನಃ ನುಡಿದಳು.

ಪ್ರಪತ್ಸ್ಯತೇ ರಾಜ್ಯಮಿದಂ ಹಿ ರಾಘವೋ
ಯದಿ ಧ್ರುವಂ ತ್ವಂ ಸಸುತಾ ಚ ತಪ್ಸ್ಯಸೇ ।
ಅತೋ ಹಿ ಕಲ್ಯಾಣಿ ಯತಸ್ವ ತತ್ತಥಾ
ಯಥಾ ಸುತಸ್ತೇ ಭರತೋಽಭಿಷೇಕ್ಷ್ಯತೇ ॥೬೧॥

'ರಾಮನು ರಾಜ್ಯವನ್ನು ಪಡೆದುಕೊಂಡರೆ ನಿಶ್ಚಯವಾಗಿಯೂ ನೀನು ನಿನ್ನ ಮಗನೊಂದಿಗೆ ಸಂತಾಪಕ್ಕೇ ಈಡಾಗುವಿ. ಅದರಿಂದ ನಿನ್ನ ಮಗನೇ ಅಭಿಷಿಕ್ತ-ನಾಗುವಂತೆ ಮಾಡಲು ಯತ್ನಿಸು.'

ತಥಾತಿವಿದ್ಧಾ ಮಹಿಷೀ ತು ಕುಬ್ಜಯಾ
ಸಮಾಹತಾ ವಾಗಿಷುಭಿರ್ಮಹಾರ್ಮಹಃ ।
ನಿಧಾಯ ಹಸ್ತೌ ಹೃದಯೇಽತಿವಿಸ್ಮಿತಾ
ಶಶಂಸ ಕುಬ್ಜಾಂ ಕುಪಿತಾ ಪುನಃ ಪುನಃ ॥೬೨॥

ಹೀಗೆ ಮಾತಿನ ಬಾಣಗಳಿಂದ ಮತ್ತೆ ಮತ್ತೆ ಹೊಡೆಸಿಕೊಂಡು ಅತಿಯಾಗಿ ಗಾಯಗೊಂಡು ಎರಡೂ ಕೈಗಳನ್ನು ಎದೆಯ ಮೇಲಿರಿಸಿಕೊಂಡು 'ದಶರಥ ನನಗಿಷ್ಟು ವಂಚನೆ ಮಾಡುತ್ತಿರುವನೆ!' ಎಂದು ಆಶ್ಚರ್ಯಗೊಂಡಳು, ಕುಪಿತ-ಳಾದಳು ಕೈಕೇಯಿ, ಪುನಃ ಪುನಃ ಮಂಥರೆಗೆ ಹೇಳಿದಳು.

ಯಮಸ್ಯ ವಾ ಮಾಂ ವಿಷಯಂ ಗತಾಮಿತೋ
ನಿಶಾಮ್ಯ ಕುಬ್ಜೇ ಪ್ರತಿವೇದಯಿಷ್ಯಸಿ ।
ವನಂ ಗತೇ ವಾ ಸುಚಿರಾಯ ರಾಘವೇ
ಸಮೃದ್ಧಕಾಮೋ ಭರತೋ ಭವಿಷ್ಯತಿ ॥೬೩॥

'ಮಂಥರೆ, ಇನ್ನು, ನಾನು ಈ ಲೋಕವನ್ನು ಬಿಟ್ಟು ಯಮಲೋಕಕ್ಕೆ ಹೊರಟು ಹೋದುದನ್ನು ನೋಡಿ ನೀನು ರಾಜನಿಗೆ ತಿಳಿಸುವೆ. ಅಥವಾ, ರಾಮನು ಬಹುಕಾಲ ವನವಾಸಕ್ಕೆಂದು ಹೊರಟುಹೋದಾಗ ಶಾಶ್ವತವಾಗಿ ಭರತನು ಸರ್ವಾಭೀಷ್ಟಸಿದ್ಧಿಗೆ ಭಾಜನನಾಗುತ್ತಾನೆ.'

ಅಹಂ ಹಿ ನೈವಾಸ್ತರಣಾನಿ ನ ಸ್ರಜೋ
ನ ಚಂದನಂ ನಾಂಜನಪಾನಭೋಜನಮ್ ।
ನ ಕಿಂಚಿದಿಚ್ಛಾಮಿ ನ ಚೇಹ ಜೀವಿತಂ
ನ ಚೇದಿತೋ ಗಚ್ಛತಿ ರಾಘವೋ ವನಮ್ ॥೬೪॥

'ಅಂದಿನವರೆಗೆ ನಾನು ಹಾಸುಗೆಗಳನ್ನು ಒಲ್ಲೆ. ಮಾಲೆಗಳನ್ನೊಲ್ಲೆ. ಶ್ರೀಗಂಧ-ವನ್ನೊಲ್ಲೆ, ಅಂಗರಾಗ ಪಾನ ಭೋಜನಗಳನ್ನು ಒಲ್ಲೆ. ನನಗೇನೂ ಬೇಡ. ಈ ಭೂಮಿಯ ಮೇಲಿನ ಬದುಕೂ ಬೇಡ— ರಾಮನು ಇಲ್ಲಿಂದ ಕಾಡಿಗೆ ಹೊರಟು ಹೋಗದೇ ಇದ್ದರೆ.'

ಅಥೈತದುಕ್ತ್ವಾ ವಚನಂ ಸುದಾರುಣಂ
ನಿಧಾಯ ಸರ್ವಾಭರಣಾನಿ ಭಾಮಿನೀ ।
ಅಸಂವೃತಾಮಾಸ್ತರಣೇನ ಮೇದಿನೀಂ
ತಥಾಧಿಶಿಶ್ಯೇ ಪತಿತೇವ ಕಿಂನರೀ ॥೬೫॥

ಅತಿಕ್ರೂರವಾದ ಈ ಮಾತನ್ನು ಹೇಳಿ ಮೈಯಿಂದ ಎಲ್ಲ ಆಭರಣಗಳನ್ನು ಕಳಚಿ, ಸ್ವರ್ಗದಿಂದ ಪತಿತಳಾದ ಕಿಂನರಿಯಂತೆ, ಹಾಸುಗೆಗಳಿಲ್ಲದ ಬರಿ ನೆಲದ ಮೇಲೆ ಕೈಕೇಯಿ ಒರಗಿದಳು.

ಉದೀರ್ಣಸಂರಂಭತಮೋವೃತಾನನಾ
ತಥಾವಮುಕ್ತೋತ್ತಮಮಾಲ್ಯಭೂಷಣಾ ।
ನರೇಂದ್ರಪತ್ನೀ ವಿಮನಾ ಬಭೂವ ಸಾ
ತಮೋವೃತಾ ದ್ಯೌರಿವ ಮಗ್ನತಾರಕಾ ॥೬೬॥

ಅತಿಯಾದ ಕೋಪದ ಕತ್ತಲಿಂದ ಆವೃತವಾಗಿ ಕೈಕೇಯಿಯ ಮುಖಚಂದ್ರ ಕಳೆಗುಂದಿದೆ. ನಕ್ಷತ್ರಗಳಂತೆ ಬೆಳಗುತ್ತಿದ್ದ ಮಾಲೆ ಆಭರಣಗಳನ್ನು ಕೂಡ ಕಳಚಿದ್ದಳು. ಹೀಗೆ ಕುಪಿತಳಾದ ಕೈಕೇಯಿ ನಕ್ಷತ್ರಗಳನ್ನು ಮರೆಮಾಡಿಕೊಂಡ ಮೋಡಕವಿದ ರಾತ್ರಿಯ ಆಗಸದಂತೆ ಕಂಡುಬಂದಳು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಒಂಭತ್ತನೇ ಸರ್ಗ ಮುಗಿಯಿತು.

❖

ದಶಮ ಸರ್ಗಃ

ಸರ್ಗ – 10

ದಶರಥನು ಕೈಕೇಯಿಯನ್ನು ಸಮಾಧಾನಗೊಳಿಸಲು ಯತ್ನಿಸುವುದು.

ವಿದರ್ಶಿತಾ ಯದಾ ದೇವೀ ಕುಬ್ಜಯಾ ಪಾಪಯಾ ಭೃಶಮ್ ।
ತದಾ ಶೇತೇ ಸ್ಮ ಸಾ ಭೂಮೌ ದಿಗ್ಧವಿದ್ಧೇವ ಕಿಂನರೀ ॥೧॥

ಪಾಪಚೇತನಳಾದ ಮಂಥರೆಯಿಂದ ಬಹಳ ವಿಪರೀತ ಬೋಧನೆಗೊಳಗಾದ ದೇವಿ ಕೈಕೇಯಿ ವಿಷಲಿಪ್ತವಾದ ಬಾಣದಿಂದ ಹೊಡೆಸಿಕೊಂಡ ಕಿನ್ನರಿಯಂತೆ ನೆಲದ ಮೇಲೆ ಒರಗಿದಳು.

ನಿಶ್ಚಿತ್ಯ ಮನಸಾ ಕೃತ್ಯಂ ಸಾ ಸಮ್ಯಗಿತಿ ಭಾಮಿನೀ ।
ಮಂಥರಾಯೈ ಶನೈಃ ಸರ್ವಮಾಚಚಕ್ಷೇ ವಿಚಕ್ಷಣಾ ॥೨॥

ತಾನೀಗ ಏನು ಮಾಡಬೇಕಾಗಿದೆ ಎಂಬುದನ್ನು ಮನಸಿನಲ್ಲಿ ಚೆನ್ನಾಗಿ ನಿಶ್ಚಯಿಸಿ ಕೊಂಡು ಜಾಣೆಯಾದ ಕೈಕೇಯಿ ಅದೆಲ್ಲವನ್ನೂ ನಿಧಾನವಾಗಿ ಮಂಥರೆಗೆ ಹೇಳಿದಳು.

ಸಾ ದೀನಾ ನಿಶ್ಚಯಂ ಕೃತ್ವಾ ಮಂಥರಾವಾಕ್ಯಮೋಹಿತಾ ।
ನಾಗಕನ್ಯೇವ ನಿಶ್ವಸ್ಯ ದೀರ್ಘಮುಷ್ಣಂ ಚ ಭಾಮಿನೀ ।
ಮುಹೂರ್ತಂ ಚಿಂತಯಾಮಾಸ ಮಾರ್ಗಮಾತ್ಮಸುಖಾವಹಮ್ ॥೩॥

ಮಂಥರೆಯ ದುರ್ಬೋಧನೆಯನ್ನು ಕೇಳಿ ಪರವಶಳಾದ ದೀನಳಾದ ಕೈಕೇಯಿ ಒಂದು ನಿರ್ಧಾರಕ್ಕೆ ಬಂದು ನಾಗಕನ್ಯೆಯಂತೆ ದೀರ್ಘವಾಗಿ ಬಿಸಿಯುಸಿರು ಬಿಡುತ್ತ ಮುಹೂರ್ತಕಾಲ ತನಗೆ ಸುಖಕರವಾದ ಮಾರ್ಗವನ್ನು ಆಲೋಚಿಸಿದಳು.

ಸಾ ಸುಹೃಚ್ಚಾರ್ಥಕಾಮಾ ಚ ತನ್ನಿಶಮ್ಯ ಸುನಿಶ್ಚಯಮ್ ।
ಬಭೂವ ಪರಮಪ್ರೀತಾ ಸಿದ್ಧಿಂ ಪ್ರಾಪ್ಯೇವ ಮಂಥರಾ ॥೪॥

ಗೆಳತಿಯಾಗಿ ಬಹುಮಾನ ಪಡೆವಾಸೆಯಿಂದ ಬಂದಿದ್ದ ಮಂಥರೆ ಕೈಕೇಯಿ ಮಾಡಿದ ನಿರ್ಧಾರವನ್ನು ಕೇಳಿ ತಿಳಿದು ತನ್ನ ಕಾರ್ಯ ಸಿದ್ಧಿಯಾಗಿ ಹೋಯಿತೆಂಬಂತೆ ಪರಮಾನಂದಭರಿತಳಾದಳು.

ಅಥ ಸಾಮರ್ಷಿತಾ ದೇವೀ ಸಮ್ಯಕ್ಕೃತ್ವಾ ವಿನಿಶ್ಚಯಮ್ ।
ಸಂವಿವೇಶಾಬಲಾ ಭೂಮೌ ನಿವೇಶ್ಯ ಭ್ರುಕುಟೀಂ ಮುಖೇ ॥೫॥

ಬಳಿಕ ಕೈಕೇಯಿ ಕೋಪಗೊಂಡು ರಾಜನಿಗೆ ತನ್ನ ಕೋಪವನ್ನು ಸರಿಯಾಗಿ ಪ್ರದರ್ಶಿಸುವ ನಿಶ್ಚಯವನ್ನು ಮಾಡಿಕೊಂಡು ಹುಬ್ಬುಗಂಟಿಕ್ಕಿ ನೆಲದ ಮೇಲೆ ಒರಗಿದಳು.

ತತಶ್ಚಿತ್ರಾಣಿ ಮಾಲ್ಯಾನಿ ದಿವ್ಯಾನ್ಯಾಭರಣಾನಿ ಚ ।
ಅಪವಿದ್ಧಾನಿ ಕೇಕೇಯ್ಯಾ ತಾನಿ ಭೂಮಿಂ ಪ್ರಪೇದಿರೇ ॥೬॥

ಸುಂದರಮಾಲೆಗಳನ್ನೂ ದಿವ್ಯ ಆಭರಣಗಳನ್ನೂ ಮೈಯಿಂದ ಕಿತ್ತೆಸೆದಳು ಕೈಕೇಯಿ. ಅವು ನೆಲದಲ್ಲಿ ಚೆಲ್ಲಿದುವು.

ತಯಾ ತಾನ್ಯಪವಿದ್ಧಾನಿ ಮಾಲ್ಯಾನ್ಯಾಭರಣಾನಿ ಚ ।
ಅಶೋಭಯಂತ ವಸುಧಾಂ ನಕ್ಷತ್ರಾಣಿ ಯಥಾ ನಭಃ ॥೭॥

ಅವಳು ಎಸೆದ ಮಾಲೆ ಆಭರಣಗಳು ನೆಲದಲ್ಲಿ ಚೆಲ್ಲಿ, ಆಕಾಶವನ್ನು ನಕ್ಷತ್ರ-ಗಳಂತೆ, ನೆಲವನ್ನು ಅವು ಅಲಂಕರಿಸಿದುವು.

ಕ್ರೋಧಾಗಾರೇ ನಿಪತಿತಾ ಸಾ ಬಭೌ ಮಲಿನಾಂಬರಾ ।
ಏಕವೇಣೀಂ ದೃಢಂ ಬದ್ಧ್ವಾ ಗತಸತ್ತ್ವೇವ ಕಿಂನರೀ ॥೮॥

ಕೊಳೆಯಾದ ಬಟ್ಟೆಯನ್ನು ಉಟ್ಟು ಒಂದು ಜಡೆಯನ್ನು ದೃಢವಾಗಿ ಕಟ್ಟಿಕೊಂಡು, ಬಲಗುಂದಿ ಬಿದ್ದ ಕಿನ್ನರಿಯಂತೆ, ಕೋಪದ ಮನೆಯಲ್ಲಿ ಒರಗಿದಳು.

ಆಜ್ಞಾಪ್ಯ ತು ಮಹಾರಾಜೋ ರಾಘವಸ್ಯಾಭಿಷೇಚನಮ್ ।
ಉಪಸ್ಥಾನಮನುಜ್ಞಾಪ್ಯ ಪ್ರವಿವೇಶ ನಿವೇಶನಮ್ ॥೯॥

ಮಹಾರಾಜ ದಶರಥನು ಆಸ್ಥಾನದಲ್ಲಿ ನಾಳೆಯ ಅಭಿಷೇಕ ಕಾರ್ಯಕ್ಕೆ ಎಲ್ಲರಿಗೆ ಆಜ್ಞೆ ಮಾಡಿ, ಮಂತ್ರಿಪುರೋಹಿತ ಮುಂತಾದವರಿಗೆ ಮನೆಗೆ ಹೋಗಲು ಅನುಮತಿಯನ್ನು ನೀಡಿ, ತಾನೂ ತನ್ನ ಅಂತಃಪುರಕ್ಕೆ ನಡೆದ.

ಅದ್ಯ ರಾಮಾಭಿಷೇಕೋ ವೈ ಪ್ರಸಿದ್ಧ ಇತಿ ಜಜ್ಞಿವಾನ್ ।
ಪ್ರಿಯಾರ್ಹಾಂ ಪ್ರಿಯಮಾಖ್ಯಾತುಂ ವಿವೇಶಾಂತಃಪುರಂ ವಶೀ ॥೧೦॥

ಈಗಾಗಲೇ ನಾಳೆಯ ಅಭಿಷೇಕಕಾರ್ಯ ಎಲ್ಲರಿಗೂ ಕೈಕೇಯಿಗೂ ಕೂಡ ತಿಳಿದಿದೆ ಎಂದು ಭಾವಿಸಿ, 'ಪ್ರಿಯವಾರ್ತೆಯನ್ನು ತನ್ನಿಂದ ಕೇಳಲು ಅರ್ಹ-ಳಾದವಳು, ಪ್ರಿಯೆ ಕೈಕೇಯಿ' ಎಂದುಕೊಂಡು, ತತ್ಕಾಲದಲ್ಲಿ ದೈವಾತ್ ರತೀಚ್ಛೆ ಬಂದಿದ್ದರಿಂದ ಕೌಸಲ್ಯೆಗಿಂತಲೂ ಮೊದಲಿಗೆ ಆ ಪ್ರಿಯವಾರ್ತೆಯನ್ನು ಅವಳಿಗೇ ತಾನೇ ಹೇಳುವುದಕ್ಕಾಗಿ 'ವಶೀ' ಜಿತೇಂದ್ರಿಯನಾದ ರಾಜ ಅವಳ ಅಂತಃಪುರವನ್ನು ಪ್ರವೇಶಿಸಿದ.

ಸ ಕೈಕೇಯ್ಯಾ ಗೃಹಂ ಶ್ರೇಷ್ಠಂ ಪ್ರವಿವೇಶ ಮಹಾಯಶಾಃ ।
ಪಾಂಡರಾಭ್ರಮಿವಾಕಾಶಂ ರಾಹುಯುಕ್ತಂ ನಿಶಾಕರಃ ॥೧೧॥

ಬಿಳಿಮೋಡಗಳಿಂದ ತುಂಬಿ ರಾಹುಯುಕ್ತವಾಗಿರುವ ಆಕಾಶವನ್ನು ಚಂದ್ರನು ಪ್ರವೇಶಿಸುವಂತೆ ಮಹಾಕೀರ್ತಿಶಾಲಿಯಾದ ದಶರಥನು ಕೈಕೇಯಿಯ ಶ್ರೇಷ್ಠವಾದ ಅಂತಃಪುರವನ್ನು ಪ್ರವೇಶಿಸಿದ.

ಚಂದ್ರನಿಗೆ ರಾಹುಗ್ರಹಣದಂತೆ ರಾಜನಿಗೆ ತತ್ಕಾಲದಲ್ಲಿ ಅಸ್ವಾಭಾವಿಕವಾಗಿ ಕಾಮಾವೇಶ ಬಂದಿತ್ತೆನ್ನುವ ಸೂಚನೆ ಇಲ್ಲಿದೆ.

ಶುಕಬರ್ಹಿಣಸಂಘುಷ್ಟಂ ಕ್ರೌಂಚಹಂಸರುತಾಯುತಮ್ ।
ವಾದಿತ್ರರವಸಂಘುಷ್ಟಂ ಕುಬ್ಜಾವಾಮನಿಕಾಯುತಮ್ ॥೧೨॥

ಗಿಳಿ ನವಿಲುಗಳ ಧ್ವನಿ, ಕ್ರೌಂಚ ಹಂಸಗಳ ಧ್ವನಿ, ವಾದ್ಯ ಸಂಗೀತ ಧ್ವನಿಗಳಿಂದ ತುಂಬಿದ್ದ, ಗೂನಿಯರಿಂದಲೂ ಕುಳ್ಳಿಯರಿಂದಲೂ ಯುಕ್ತವಾಗಿದ್ದ ಅಂತಃಪುರವನ್ನು ರಾಜ ಪ್ರವೇಶಿಸಿದ.

ಲತಾಗೃಹೈಶ್ಚಿತ್ರಗೃಹೈಶ್ಚಂಪಕಾಶೋಕಶೋಭಿತೈಃ ।
ದಾಂತರಾಜತಸೌವರ್ಣವೇದಿಕಾಭಿಃ ಸಮಾಯುತಮ್ ॥೧೩॥

ಅಂತಃಪುರವು ಬಳ್ಳಿಮನೆ, ಸುಂದರ ಮಂಟಪ, ಸಂಪಿಗೆ ಅಶೋಕ ಮುಂತಾದ ಹೂವಿನ ಗಿಡಗಳು, ದಂತ ಬೆಳ್ಳಿ ಬಂಗಾರಗಳಿಂದ ಖಚಿತವಾದ ವೇದಿಕೆಗಳು ಇವುಗಳಿಂದ ಶೋಭಿಸುತ್ತಿತ್ತು.

ನಿತ್ಯಪುಷ್ಪಫಲೈರ್ವೃಕ್ಷೈರ್ವಾಪೀಭಿಶ್ಚೋಪಶೋಭಿತಮ್ ।
ದಾಂತರಾಜತಸೌವರ್ಣೈಃ ಸಂವೃತಂ ಪರಮಾಸನೈಃ ॥೧೪॥

ನಿತ್ಯ ಹೂಹಣ್ಣುಗಳನ್ನು ಬಿಡುವ ವೃಕ್ಷಗಳು, ಸರೋವರಗಳು, ದಂತ ಬೆಳ್ಳಿ ಬಂಗಾರಗಳಿಂದ ಪರಿಷ್ಕೃತವಾದ ಉತ್ತಮ ಆಸನಗಳು ಇವುಗಳಿಂದಲೂ ಅಂತಃಪುರ ಶೋಭಿಸುತ್ತಿತ್ತು.

ವಿವಿಧೈರನ್ನಪಾನೈಶ್ಚ ಭಕ್ಷೈಶ್ಚ ವಿವಿಧೈರಪಿ ।
ಉಪಪನ್ನಂ ಮಹಾರ್ಹೈಶ್ಚ ಭೂಷಣೈಸ್ತ್ರಿದಿವೋಪಮಮ್ ॥೧೫॥

ನಾನಾಬಗೆಯ ಅನ್ನಪಾನಗಳಿಂದಲೂ ನಾನಾಬಗೆಯ ಭಕ್ಷ್ಯಗಳಿಂದಲೂ ಬಹು ಅಮೂಲ್ಯವಾದ ಆಭರಣಗಳಿಂದಲೂ ಕೂಡಿದ್ದು ಸ್ವರ್ಗದಂತೆ ತೋರುತ್ತಿತ್ತು ಅಂತಃಪುರ.

ತತ್ಪ್ರವಿಶ್ಯ ಮಹಾರಾಜಃ ಸ್ವಮಂತಃಪುರಮೃದ್ಧಿಮತ್ ।
ನ ದದರ್ಶ ಪ್ರಿಯಾಂ ಭಾರ್ಯಾಂ ಕೈಕೇಯೀಂ ಶಯನೋತ್ತಮೇ॥೧೬॥

ವೈಭವೋಪೇತವಾದ ತನ್ನ ಆ ಅಂತಃಪುರವನ್ನು ಮಹಾರಾಜನು ಪ್ರವೇಶಿಸಿ-ದ್ದಾನೆ. ಆದರೆ ಅಲ್ಲಿ ಉತ್ತಮವಾದ ಹಾಸಿಗೆಯಲ್ಲಿ ಪ್ರಿಯ ಭಾರ್ಯೆ ಕೈಕೇಯಿ ಯನ್ನು ಕಾಣಲಿಲ್ಲ.

ಸ ಕಾಮಬಲಸಂಯುಕ್ತೋ ರತ್ಯರ್ಥಂ ಮನುಜಾಧಿಪಃ ।
ಅಪಶ್ಯನ್ ದಯಿತಾಂ ಭಾರ್ಯಾಂ ಪಪ್ರಚ್ಛ ವಿಷಸಾದ ಚ ॥೧೭॥

ರಾಜನಿಗೆ ಗಿಳಿ ನವಿಲು ಮುಂತಾದ ಈ ಉದ್ದೀಪನಗಳ ದರ್ಶನದಿಂದ ಕೈಕೇಯಿಯಲ್ಲಿ ರತಿಸುಖ ಪಡೆಯಲು ಪ್ರಬಲವಾದ ಇಚ್ಛೆ ಉಂಟಾಗಿತ್ತು. ಆದರೂ ಪ್ರೇಯಸಿ ಪತ್ನಿಯಾದ ಕೈಕೇಯಿಯನ್ನು ಕಾಣದೆ ನಿರಾಶನಾದ. 'ಎಲ್ಲಿರುವಳು ರಾಣಿ' ಎಂದು ಕೇಳಿದ.

ಶಾಪಪ್ರಯುಕ್ತವಾಗಿ ಪಾಂಡುರಾಜನಿಗೆ ಅಕಸ್ಮಾತ್ ಪ್ರಬಲ ರತೀಚ್ಛೆ ಬಂದಂತೆ, ದಶರಥನಿಗೂ 'ಪುತ್ರವಿಯೋಗದಿಂದ ಮರಣ'ವೆಂಬ ಶಾಪ ಪ್ರಯುಕ್ತವಾಗಿಯೇ ಪುತ್ರವಿಯೋಗಕ್ಕಾಗಿ ತತ್ಕಾಲದಲ್ಲಿ ಅಕಸ್ಮಾತ್ ಪ್ರಬಲ ರತೀಚ್ಛೆ ಬಂದಿದೆ. ಸ್ತ್ರೀವ್ಯಾಮೋಹದಿಂದಲ್ಲ. ಈ ರತೀಚ್ಛೆ ಪ್ರಬಲವಾದ್ದರಿಂದ ಕೈಕೇಯಿಗೆ ಆತ ವಶನಾದ, ಬೇಡನ ಗಾನಕ್ಕೆ ಜಿಂಕೆ ವಶವಾಗುವಂತೆ ಅವಳಲ್ಲಿ ಅನುಮಾನ ಪಡದೆ ಅವಳಿಂದ ತಾನು ತನಗೆ ಅರಿವಿಲ್ಲದಂತೆ ವಂಚಿತನಾಗಿ ಧರ್ಮಪಾಶದಲ್ಲಿ ಸಿಲುಕಿದ.

ನ ಹಿ ತಸ್ಯ ಪುರಾ ದೇವೀ ತಾಂ ವೇಲಾಮತ್ಯವರ್ತತ ।
ನ ಚ ರಾಜಾ ಗೃಹಂ ಶೂನ್ಯಂ ಪ್ರವಿವೇಶ ಕದಾಚನ ॥೧೮॥

ದೇವಿ ಹಿಂದೆ ಎಂದೂ ಹೀಗೆ ರತಿಕಾಲವನ್ನು ಅತಿಕ್ರಮಿಸಿರಲಿಲ್ಲ. ರಾಜನೂ ಕೂಡ ಪ್ರೇಯಸಿ ಇಲ್ಲದ ಅಂತಃಪುರವನ್ನು ಎಂದೂ ಪ್ರವೇಶಿಸಿದ್ದೇ ಇಲ್ಲ.

ತತೋ ಗೃಹಗತೋ ರಾಜಾ ಕೈಕೇಯೀಂ ಪರ್ಯಪೃಚ್ಛತ ।
ಯಥಾಪುರಮವಿಜ್ಞಾಯ ಸ್ವಾರ್ಥಲಿಪ್ಸುಮಪಂಡಿತಾಮ್ ॥೧೯॥

ಕೈಕೇಯಿ ಮೂರ್ಖತನದಿಂದ ಸ್ವಾರ್ಥಸಿದ್ಧಿಯನ್ನು ಬಯಸುತ್ತಿದ್ದುದನ್ನು ತಿಳಿಯದೆ ರಾಜ ಎಂದಿನಂತೆ ಅಂತಃಪುರದಲ್ಲಿ ನಿಂತು 'ಕೈಕೇಯಿ ಎಲ್ಲಿ' ಎಂದು ಕೇಳಿದ.

ಪ್ರತಿಹಾರೀ ತಥೋವಾಚ ಸಂತ್ರಸ್ತಾ ಸುಕೃತಾಂಜಲಿಃ ।
ದೇವ ದೇವೀ ಭೃಶಂ ಕ್ರುದ್ಧಾ ಕ್ರೋಧಾಗಾರಮಭಿದ್ರುತಾ ॥೨೦॥

ಬಾಗಿಲು ಕಾಯುವವಳು ಭಯಗೊಂಡು ಕೈಮುಗಿದು 'ದೇವ! ದೇವಿ ಕೋಪ-ಗೊಂಡು ಕೋಪದ ಮನೆಗೆ ಹೋಗಿದ್ದಾಳೆ' ಎಂದಳು.

ಪ್ರತಿಹಾರ್ಯಾ ವಚಃ ಶ್ರುತ್ವಾ ರಾಜಾ ಪರಮದುರ್ಮನಾಃ
ವಿಷಸಾದ ಪುನರ್ಭೂಯೋ ಲುಲಿತವ್ಯಾಕುಲೇಂದ್ರಿಯಃ ॥೨೧॥

ಬಾಗಿಲು ಕಾಯುವವಳ ಮಾತನ್ನು ಕೇಳಿ ರಾಜ ಬಲು ದುಗುಡಗೊಂಡು ಇನ್ನೂ ಹೆಚ್ಚಿನ ವಿಷಾದವನ್ನು ಹೊಂದಿದ. ಅವನ ಇಂದ್ರಿಯಗಳು ಚಂಚಲ ವಾದುವು, ಕಳವಳಗೊಂಡವು.

ವೃದ್ಧನೂ ಜಿತೇಂದ್ರಿಯನೂ ಆದ ರಾಜನ ಇಂದ್ರಿಯಗಳು ಅಕಸ್ಮಾತ್ ವಿಕಾರಗೊಂಡಿವೆ.

ತತ್ರ ತಾಂ ಪತಿತಾಂ ಭೂಮೌ ಶಯಾನಾಮತಥೋಚಿತಾಮ್ ।
ಪ್ರತಪ್ತ ಇವ ದುಃಖೇನ ಸೋಽಪಶ್ಯಜ್ಜಗತೀಪತಿಃ ॥೨೨॥

ಕೋಪದ ಮನೆಯಲ್ಲಿ ನೆಲದಲ್ಲಿ ಕೈಕೇಯಿ ಮಲಗುವುದು ಸರ್ವಥಾ ಅನುಚಿತ-ವಾಗಿತ್ತು. ಅದರಿಂದ ಅವಳನ್ನು ಅಲ್ಲಿ ಕಂಡು ರಾಜ ದುಃಖದಿಂದ ಬೆಂದುಹೋದ.

ಸ ವೃದ್ಧಸ್ತರುಣೀಂ ಭಾರ್ಯಾಂ ಪ್ರಾಣೇಭ್ಯೋಽಪಿ ಗರೀಯಸೀಮ್ ।
ಅಪಾಪಃ ಪಾಪಸಂಕಲ್ಪಾಂ ದದರ್ಶ ಧರಣೀತಲೇ ॥೨೩॥

ಪಾಪಬುದ್ಧಿರಹಿತನಾದ ವೃದ್ಧನಾದ ರಾಜ ತರುಣಿಯಾದ ಮತ್ತು ತನಗೆ ಪ್ರಾಣ-ಕ್ಕಿಂತ ಮಿಗಿಲಾಗಿ ಪ್ರಿಯಳಾಗಿದ್ದು ನೆಲದಲ್ಲಿ ಮಲಗಿದ್ದ ಕೈಕೇಯಿಯನ್ನು, ಅವಳು ಎಂಥ ಪಾಪಕೃತ್ಯಕ್ಕೆ ಸಂಕಲ್ಪ ಮಾಡಿದ್ದಳೆಂದು ತಿಳಿಯದೆ, ಕನಿಕರದಿಂದ ಕಂಡ.

ಲತಾಮಿವ ವಿನಿಕೃತ್ತಾಂ ಪತಿತಾಂ ದೇವತಾಮಿವ ॥೨೪॥

ಎಳೆಬಳ್ಳಿ ಕತ್ತರಿಸಿ ನೆಲದಲ್ಲಿ ಬಿದ್ದಂತೆ, ದೇವತೆಯೋರ್ವಳು ಸ್ವರ್ಗದಿಂದ ಚ್ಯುತಳಾಗಿ ಬಿದ್ದಂತೆ ಕೈಕೇಯಿಯೂ ನೆಲದಲ್ಲಿ ಒರಗಿದ್ದನ್ನು ರಾಜ ಕಂಡ.

ಕಿಂನರೀಮಿವ ನಿರ್ಧೂತಾಂ ಚ್ಯುತಾಮಪ್ಸರಸಂ ಯಥಾ ।
ಮಾಲಾಮಿವ ಪರಿಭ್ರಷ್ಟಾಂ ಹರಿಣೀಮಿವ ಸಂಯತಾಮ್ ॥೨೫॥

ತನ್ನವರಿಂದ ಪರಿತ್ಯಕ್ತೆಯಾದ ಕಿನ್ನರಿಯಂತೆ, ಸ್ವರ್ಗದಿಂದ ಕೆಳಗೆ ಬಿದ್ದ ದೇವತೆ-ಯಂತೆ, ಮುಡಿಯಿಂದ ಉದುರಿಬಿದ್ದ ಹೂಮಾಲೆಯಂತೆ, ಬಲೆಯಲ್ಲಿ ಸಿಕ್ಕಿಬಿದ್ದ ಹೆಣ್ಣುಚಿಗರಿಯಂತೆ ಕೈಕೇಯಿ ನೆಲದಲ್ಲಿ ಒರಗಿದ್ದನ್ನು ರಾಜನು ಕಂಡ.

ಕರೇಣುಮಿವ ದಿಗ್ಧೇನ ವಿದ್ಧಾಂ ಮೃಗಯುನಾ ವನೇ ।
ಮಹಾಗಜ ಇವಾರಣ್ಯೇ ಸ್ನೇಹಾತ್ ಪರಿಮಮರ್ಶ ತಾಮ್ ॥೨೬॥

ಕಾಡಿನಲ್ಲಿ ಬೇಡನ ವಿಷಲೇಪಿತ ಬಾಣಕ್ಕೆ ತುತ್ತಾಗಿ ಬಿದ್ದ ಹೆಣ್ಣಾನೆಯನ್ನು ಮದ್ದಾನೆ ಸೊಂಡಿಲಿನಿಂದ ಮುಟ್ಟಿ ಸಂತೈಸುವಂತೆ ರಾಜನು ಕೈಕೇಯಿಯ ಮೈ ಮುಟ್ಟಿಮುಟ್ಟಿ ಪ್ರೀತಿಯಿಂದ ಸಂತೈಸತೊಡಗಿದ.

ಪರಿಮೃಶ್ಯ ಚ ಪಾಣಿಭ್ಯಾಮಭಿಸಂತ್ರಸ್ತಚೇತನಃ ।
ಕಾಮೀ ಕಮಲಪತ್ರಾಕ್ಷೀಮುವಾಚ ವನಿತಾಮಿದಮ್ ॥೨೭॥

ಕಮಲದಳದಂಥ ಕಣ್ಣಿನ ಕೈಕೇಯಿಯನ್ನು ಅನುರಕ್ತನಾದ ರಾಜ ಎರಡು ಕೈಗಳಿಂದ ಮೈ ದಡವಿ, ಮನದಲ್ಲಿ ಬಲು ಆತಂಕಗೊಂಡು ನುಡಿದ.

ನ ತೇಽಹಮಭಿಜಾನಾಮಿ ಕ್ರೋಧಮಾತ್ಮನಿ ಸಂಶ್ರಿತಮ್ ।
ದೇವಿ ಕೇನಾಭಿಯುಕ್ತಾಸಿ ಕೇನ ವಾಸಿ ವಿಮಾನಿತಾ ॥೨೮॥

'ದೇವಿ, ನಿನಗೆ ಹೀಗೆ ಕೋಪ ಬಂದಿದ್ದನ್ನು ನಾನೆಂದೂ ನೋಡಿಲ್ಲ. ಯಾರು ನಿನ್ನನ್ನು ವಿರೋಧಿಸಿದರು, ಯಾರು ಅವಮಾನಿಸಿದರು?

ಯದಿದಂ ಮಮ ದುಃಖಾಯ ಶೇಷೇ ಕಲ್ಯಾಣಿ ಪಾಂಸುಷು ।
ಭೂಮೌ ಶೇಷೇ ಕಿಮರ್ಥಂ ತ್ವಂ ಮಯಿ ಕಲ್ಯಾಣಿ ಜೀವತಿ ।
ಭೂತೋಪಹತಚಿತ್ತೇವ ಮಮ ಚಿತ್ತಪ್ರಮಾಥಿನೀ ॥೨೯॥

ಪ್ರಿಯೆ, ನೀನು ಹೀಗೆ ಧೂಳಿನಲ್ಲಿ ಮಲಗಿರುವುದು ನನಗೆ ದುಃಖವುಂಟು ಮಾಡುತ್ತಿದೆ. ನಾನು ಇನ್ನೂ ಬದುಕಿರುವಾಗ ನೀನೇಕೆ ನೆಲದಲ್ಲಿ ಮಲಗುವೆ? ಭೂತಾವೇಶಗೊಂಡ ಮನಸ್ಸಿನವಳಂತೆ ನನ್ನ ಮನವನ್ನು ಹಿಂಸಿಸುತ್ತಿರುವೆ!

ಸಂತಿ ಮೇ ಕುಶಲಾ ವೈದ್ಯಾಸ್ತ್ವಭಿತುಷ್ಟಾಶ್ಚ ಸರ್ವಶಃ ॥೩೦॥

'ನನ್ನ ಬಳಿ ಕುಶಲರಾದ ವೈದ್ಯರಿದ್ದಾರೆ. ಅವರೆಲ್ಲರೂ ನನ್ನಲ್ಲಿ ಸಂತುಷ್ಟರಿದ್ದಾರೆ. ದೇವಿ, ನೀನ್ನ ಮನೋವ್ಯಾಧಿ ಏನೆಂದು ಹೇಳು. ಅವರು ಚಿಕಿತ್ಸೆಯಿಂದ ನಿನ್ನನ್ನು ಸುಖಪಡುವಂತೆ ಮಾಡಬಲ್ಲರು.

ಚರಕಸಂಹಿತೆಯಲ್ಲಿ ಭೂತಾವೇಶವ್ಯಾಧಿಗೆ ಚಿಕಿತ್ಸೆ ಉಕ್ತವಾಗಿದೆ.

'ಭೂತಾನುಬಂಧೇ ದೋಷೇ ಚ ಸಾಧಾರಣೇ ಚಿಕಿತ್ಸಾ ದೈವವ್ಯಪಾಶ್ರಯಾ ಬಲ್ಯಾದಿರೂಪಾ, ಯುಕ್ತಿವ್ಯಪಾಶ್ರಯಾ ದೋಷಾನುರೂಪ ಕಷಾಯಪಾನಾದಿ ರೂಪಾ ಚ।' –ಚರಕ ಚಕ್ರಪಾಣಿ (ಚಿಕಿತ್ಸಾ 3.292) ನಿಕೃತಿಯಂಥ ರಾಕ್ಷಸಿಯ ಆವೇಶವನ್ನೂ ವೈದ್ಯರು ಕಳೆಯಬಲ್ಲರು ಎನ್ನುತ್ತಾರೆ.

ಕಸ್ಯ ವಾ ತೇ ಪ್ರಿಯಂ ಕಾರ್ಯಂ ಕೇನ ವಾ ವಿಪ್ರಿಯಂ ಕೃತಮ್ ॥೩೧॥

'ಯಾರಿಂದ ನಿನಗೆ ಪ್ರಿಯವಾದ ಕಾರ್ಯವಾಗಬೇಕಾಗಿದೆ? ಯಾರು ನಿನಗೆ ಅಪ್ರಿಯವನ್ನುಂಟು ಮಾಡಿದ್ದಾರೆ?

ಕಃ ಪ್ರಿಯಂ ಲಭತಾಮದ್ಯ ಕೋ ವಾ ಸುಮಹದಪ್ರಿಯಮ್ ।
ಮಾ ರೋದೀರ್ಮಾ ಚ ಕಾರ್ಷೀಸ್ತ್ವಂ ದೇವಿ ಸಂಪರಿಶೋಷಣಮ್ ॥

'ಯಾರಿಗೆ ನೀನು ಪ್ರಿಯವನ್ನು ಮಾಡಬೇಕಾಗಿದೆ? ಯಾರಿಗೆ ನೀನು ಬಹಳ ಅಪ್ರಿಯವನ್ನು ಮಾಡಬೇಕಿದೆ? ದೇವಿ, ಅಳಬೇಡ ಅತ್ತುಅತ್ತು ನಿನ್ನ ಶರೀರವನ್ನು ಶೋಷಿಸಿಕೊಳ್ಳಬೇಡ.

ಅವಧ್ಯೋ ವಧ್ಯತಾಂ ಕೋ ವಾ ವಧ್ಯಃ ಕೋ ವಾ ವಿಮುಚ್ಯತಾಮ್ ।
ದರಿದ್ರಃ ಕೋ ಭವತ್ವಾಢ್ಯೋ ದ್ರವ್ಯವಾನ್ವಾಪ್ಯಕಿಂಚನಃ ॥೩೫॥

ನಿನ್ನಿಂದ ಸಾಧ್ಯವಾಗದಿದ್ದ ಯಾವುದೇ ಕಾರ್ಯವನ್ನು ನಾನೇ ನಿನಗಾಗಿ ಮಾಡಿಕೊಡುತ್ತೇನೆ. ನಿನ್ನಿಂದ ವಧಿಸಲಾಗದಿದ್ದ ಯಾವ ಪಾಪಿಯನ್ನು ನಾನು ವಧಿಸಬೇಕು? ಅವಧ್ಯನೇ ಆದ ಯಾವ ಸಜ್ಜನನನ್ನು ನಾನು ಬಿಡುಗಡೆ ಮಾಡ-ಬೇಕು? ಯಾವ ದರಿದ್ರ ಸಜ್ಜನನು ಶ್ರೀಮಂತನಾಗಬೇಕು? ಯಾವ ಶ್ರೀಮಂತ ದುರ್ಜನನು ದರಿದ್ರನಾಗಬೇಕು? ಹೇಳು.

ಇಲ್ಲಿ ಮೇಲುನೋಟಕ್ಕೆ 'ದೇವಿ, ನಿನ್ನ ಪ್ರೀತಿಗಾಗಿ ಮಾಡಬಾರದುದನ್ನು ಮಾಡಲೂ ನಾನು ಸಿದ್ಧನಾಗಿರುವೆನು. ವಧಾರ್ಹನಲ್ಲದವನನ್ನು ವಧಿಸಲೆ? ಮರಣದಂಡನೆಗೆ ಗುರಿಯಾಗಿರುವವನನ್ನು ಬಿಡಿಸಲೆ? ದರಿದ್ರನನ್ನು ಐಶ್ವರ್ಯ ವಂತನನ್ನಾಗಿ ಮಾಡಲೆ? ಐಶ್ವರ್ಯವಂತನನ್ನು ದರಿದ್ರನನ್ನಾಗಿ ಮಾಡಲೆ?' ಎಂದು ದಶರಥ ಹೇಳುತ್ತಿದ್ದಾನೆ. ನ್ಯಾಯಪರನಾದ ಒಬ್ಬ ರಾಜ ರಾಣಿಗೆ ಹೀಗೆ ಆಶ್ವಾಸನೆ ನೀಡುವುದು ಸ್ತ್ರೀವ್ಯಾಮೋಹದ ಅತಿರೇಕವೆಂದು ನಮಗೆ ಅನಿಸಬಹುದು.

ಆದರೆ ವಾಲ್ಮೀಕಿ ತಾನು ಋಷಿ. ದಶರಥನಂಥ ರಾಜರ್ಷಿಯನ್ನು ಈ ರೀತಿ ತನ್ನ ಕಾವ್ಯದಲ್ಲಿ ಚಿತ್ರಿಸುವುದು ಉಚಿತವಾಗುವುದಿಲ್ಲ. 'ಪ್ರಿಯಾರ್ಹಾಂ ಪ್ರಿಯ-ಮಾಖ್ಯಾತುಂ ಏವೇಶಾಂತಃಪುರಂ ವಶೀ' ಎಂದು ಇಲ್ಲಿಯೇ ಹನ್ನೊಂದನೆ ಶ್ಲೋಕದಲ್ಲಿ 'ವಶೀ' ಎಂಬ ಶಬ್ದದಿಂದ ದಶರಥನು ಜಿತೇಂದ್ರಿಯನಾಗಿದ್ದ, ಸ್ತ್ರೀವ್ಯಾಮೋಹರಹಿತನಾಗಿದ್ದನೆಂದು ವಾಲ್ಮೀಕಿ ಮೊದಲೇ ಹೇಳಿದ್ದಾನೆ. ಅದರಿಂದ ಇಲ್ಲಿ ಕೇವಲ ಅನುನಯಕ್ಕಾಗಿ ಹೇಳಿದ್ದು ಹೊರತು ಸುಳ್ಳು ಆಶ್ವಾಸನೆ ಕೊಟ್ಟಿದ್ದಲ್ಲ. ಜಾಬಾಲಿಮುನಿ ಚಾರ್ವಾಕೋಪದೇಶವನ್ನು ರಾಮನ ಮುಂದೆ ಹೇಳುತ್ತಾನೆ. ಅದು ಮುನಿಯ ವಾಸ್ತವ ಅಭಿಪ್ರಾಯವಲ್ಲ. ಕಾಳಿದಾಸನ ರಘುವಂಶಕಾವ್ಯದಲ್ಲಿಯೂ ಸೀತಾಪರಿತ್ಯಾಗ ಮಾಡಿದ ರಾಮನನ್ನು ವಾಲ್ಮೀಕಿ ಸೀತೆಯ ಮುಂದೆ ದೂಷಿಸುತ್ತ ಹೇಳುತ್ತಾನೆ. 'ಅಸ್ಯೈವ ಮನ್ಯುರ್ಭರತಾಗ್ರಜೇ ಮೇ' 'ಭರತನ ಅಣ್ಣನಾದ ರಾಮ ಮಾಡಿದ್ದು ತಪ್ಪು. ನನಗೆ ಅವನಲ್ಲಿ ಕೋಪ ಬರುತ್ತಿದೆ' ಎಂದು. ಇಲ್ಲಿ ಮಲ್ಲಿನಾಥನು ವ್ಯಾಖ್ಯಾನಿಸುತ್ತಾ 'ಇದು ಅನುನಯಕ್ಕಾಗಿ ಹೇಳಿದ್ದು. ವಾಸ್ತವ ಅಭಿಪ್ರಾಯವಲ್ಲ' ಎನ್ನುತ್ತಾನೆ. ಅದರಿಂದ ಸಂಗ್ರಹರಾಮಾಯಣದಲ್ಲಿ ಇಲ್ಲಿ ದಶರಥನು ಆಡಿದ ಮಾತಿನ ವಾಸ್ತವ ಅಭಿಪ್ರಾಯವನ್ನು ಹೀಗೆ ಹೇಳಿದ್ದಾರೆ—

ಅವನ್ಯಾಂ ಚತುರಂತಾಯಾಂ ಕಸ್ಮಿನ್ ದಂಡೋ ನಿಪಾತ್ಯತಾಂ ?
ಅಬ್ರಾಹ್ಮಣಕುಲಂ ಬ್ರೂಹಿ ದೇವಿ ತೇ ವಿಹಿತಾಗಸಂ ॥ (ಅಯೋ.3.31)

'ನಿನ್ನಲ್ಲಿ ಅಪರಾಧಗೈದವನು ಅಬ್ರಾಹ್ಮಣಕುಲದವನು ಯಾರು ಹೇಳು ಅವನನ್ನು ಎಲ್ಲಿದ್ದರೂ ನಾನು ದಂಡಿಸುತ್ತೇನೆ' ಎಂದು. ವಾಲ್ಮೀಕಿಯೂ ಇಲ್ಲಿ ಮುಂದೆ ಹೇಳುತ್ತಾನೆ—

ತತ್ತ್ವಂ ಮೇ ಬ್ರೂಹಿ ಕೈಕೇಯಿ ಯತಸ್ತೇ ಭಯಮಾಗತಂ ॥(ಶ್ಲೋ.39)

ದಶರಥನು ರಾಣಿಯರಿಗೆ, ಎಲ್ಲರಿಗೂ ದುಷ್ಟಶಿಕ್ಷಣ ಶಿಷ್ಟರಕ್ಷಣ ಕಾರ್ಯದಲ್ಲಿ ಸ್ವಾತಂತ್ರ್ಯ ಕೊಟ್ಟದ್ದು ವಾಲ್ಮೀಕಿರಾಮಾಯಣದಲ್ಲಿ ಸ್ಪಷ್ಟವಿದೆ— ಶ್ರೀರಾಮ ಲಕ್ಷ್ಮಣನಿಗೆ ಅಯೋಧ್ಯೆಗೆ ಹಿಂತಿರುಗಿಸಲು ಅನುನಯಕ್ಕಾಗಿ ಹೇಳುತ್ತಾನೆ— 'ನಾವು ಇಲ್ಲಿ ವನವಾಸ ಮಾಡುತ್ತಿದ್ದರೆ ಅತ್ತ ಕೌಸಲ್ಯೆಯನ್ನೂ ಸುಮಿತ್ರೆಯನ್ನೂ ಯಾರು ನೋಡಿಕೊಳ್ಳುವವರು? ಭರತನು ಕೈಕೇಯಿಗೆ ವಶನಾಗಿ ಅವರ ಪೋಷಣೆಯತ್ತ ಗಮನ ಹರಿಸಲಾರ, ನೀನೇ ಹೋಗು. ಅವರನ್ನು ಪೋಷಿಸು' ಎನ್ನುತ್ತಾನೆ. ಲಕ್ಷ್ಮಣನು ಹೇಳುತ್ತಾನೆ—

ಕೌಸಲ್ಯಾ ಬಿಭೃಯಾದಾರ್ಯಾ ಸಹಸ್ರಂ ಮದ್ವಿಧಾನಪಿ ।
ಯಸ್ಯಾಃ ಸಹಸ್ರಂ ಗ್ರಾಮಾಣಾಂ ಸಂಪ್ರಾಪ್ತಮುಪಜೀವಿನಾಂ ॥
(ಅಯೋ.31.22)

'ಕೌಸಲ್ಯೆ ನನ್ನಂಥ ಸಾವಿರಮಂದಿ ಆಶ್ರಿತರಿಗೆ ಎಲ್ಲರಿಗೂ ಸಾವಿರ ಸಾವಿರ ಗ್ರಾಮಗಳನ್ನಿತ್ತು ಪೋಷಿಸಿದ್ದಾಳೆ ಮತ್ತು ಹಾಗೇ ಮುಂದೆಯೂ ಪೋಷಿಸಬಲ್ಲಳು' ಎಂದು. ಇದರಿಂದಲೆ ಮೋಹದ ರಾಣಿ ಕೈಕೇಯಿಗೆ ದಶರಥ ಎಷ್ಟು ಸ್ವಾತಂತ್ರ್ಯ ಕೊಟ್ಟಿರಬಹುದೆಂದು ಊಹಿಸಬಹುದು.

ಅದರಿಂದ ದಶರಥನಲ್ಲಿ ಸ್ತ್ರೀವ್ಯಾಮೋಹ ದೋಷವನ್ನು ಆರೋಪಿಸಲಾಗದು. ರಾಣಿಯರು ತಮ್ಮ ಆಪ್ತ ಬಂಧುಮಿತ್ರರನ್ನು ನೋಡಿಕೊಳ್ಳುವಾಗ ಅವರಿಂದ ಸ್ವತಃ ಸಾಧ್ಯವಾಗದಿದ್ದ ಕಾರ್ಯಗಳನ್ನು ರಾಜನೆ ಮಾಡಿಕೊಡುತ್ತಿದ್ದುದರಿಂದ ಆತ ಕೈಕೇಯಿಯ ಮುಂದೆ, ಸಂಗ್ರಹ ರಾಮಾಯಣದಲ್ಲಿ ಹೇಳಿದಂತೆ, ಒಳ್ಳೆಯ ಆಶ್ವಾಸನೆ ಕೊಡುತ್ತಿದ್ದನೆಂದೇ ತಿಳಿಯಬೇಕು.

ಅವನು ಪಾಯಸ ದಾನ ಪ್ರಸಂಗದಲ್ಲಿ ಮೊದಲಿಗೇ ಅರ್ಧಾಂಶ ಪೂರ್ತಿ ಪಾಯಸವನ್ನು ಕೌಸಲ್ಯೆಗೇ ನೀಡುತ್ತಾನೆ. ಅದರಿಂದ ಆತ ಕೈಕೇಯಿಯ ಮೇಲಿನ ವ್ಯಾಮೋಹದಿಂದ ಕೌಸಲ್ಯೆಯನ್ನು ಕಡೆಗಣಿಸುತ್ತಿರಲಿಲ್ಲವೆಂದೂ ತಿಳಿಯಬೇಕು.

ಮಂಥರೆ ಕೇವಲ ಸವತಿಮಾತ್ಸರ್ಯವನ್ನು ಉರಿಸಲೆಂದು ಕೈಕೇಯಿಯ ಮುಂದೆ ಆಡುವ ಮಾತುಗಳನ್ನು ನಂಬಬಾರದು.

ಅಹಂ ಚೈವ ಮದೀಯಾಶ್ಚ ಸರ್ವೇ ತವ ವಶಾನುಗಾಃ ।
ನ ತೇ ಕಂಚಿದಭಿಪ್ರಾಯಂ ವ್ಯಾಹಂತುಮಹಮುತ್ಸಹೇ ॥೩೪॥

'ನಾನಾಗಲಿ ನನ್ನ ಕಡೆಯವರಾಗಲಿ ಎಲ್ಲರೂ ನಿನ್ನ ವಶರಾಗಿಯೇ ವರ್ತಿಸುವವರು. ನಿನ್ನ ಯಾವುದೇ ಅಭಿಪ್ರಾಯವನ್ನು ನಾನು ವಿರೋಧಿಸಲಾರೆ.

ಆತ್ಮನೋ ಜೀವಿತೇನಾಪಿ ಬ್ರೂಹಿ ಯನ್ಮನಸೇಚ್ಛಸಿ ।
ಬಲಮಾತ್ಮನಿ ಜಾನಂತೀ ನ ಮಾಂ ಶಂಕಿತುಮರ್ಹಸಿ ॥೩೫॥

'ನಿನ್ನ ಸಂತೋಷಕ್ಕಾಗಿ ನಾನು, ನನ್ನ ಬದುಕನ್ನೆ ಸಮರ್ಪಿಸಬಲ್ಲೆ. ಹೇಳು, ನಿನ್ನ ಮನಸಿನಲ್ಲಿ ಏನಿದೆ? ನನ್ನ ಸಾಮರ್ಥ್ಯ ಏನೆಂಬುದನ್ನು ತಿಳಿದವಳು ನೀನು ನನ್ನ ಬಗ್ಗೆ ಸಂದೇಹ ಪಡಬೇಡ.

ಕರಿಷ್ಯಾಮಿ ತವ ಪ್ರೀತಿಂ ಸುಕೃತೇನಾಪಿ ತೇ ಶಪೇ ।
ಯಾವದಾವರ್ತತೇ ಚಕ್ರಂ ತಾವತೀ ಮೇ ವಸುಂಧರಾ ॥೩೬॥

ಪ್ರಾಚೀನಾಃ ಸಿಂಧುಸೌವೀರಾಃ ಸೌರಾಷ್ಟ್ರಾ ದಕ್ಷಿಣಾಪಥಾಃ ।
ವಂಗಾಂಗಮಗಧಾ ವತ್ಸಾಃ ಸಮೃದ್ಧಾಃ ಕಾಶಿಕೋಸಲಾಃ ॥೩೭॥

ತತ್ರ ಜಾತಂ ಬಹು ದ್ರವ್ಯಂ ಧನಧಾನ್ಯಮಜಾವಿಕಮ್ ।
ತತೋ ವೃಣೀಷ್ವ ಕೈಕೇಯಿ ಯದ್ಯತ್ ತ್ವಂ ಮನಸೇಚ್ಛಸಿ ॥೩೮॥

'ದಶದಿಕ್ಕುಗಳಲ್ಲಿ ಸಂಚರಿಸುವ ರಥದವನು, 'ದಶರಥ' ನಾನು. ನನ್ನ ರಥ ಚಕ್ರವು ಎಲ್ಲೆಲ್ಲಿ ಸಂಚರಿಸುವುದೋ ಅಷ್ಟೂ ಭೂಮಿ ನನ್ನ ವಶದಲ್ಲಿದೆ. ಪೂರ್ವದೇಶಗಳು ಸಿಂಧು ಸೌವೀರ ಸೌರಾಷ್ಟ್ರ ದಕ್ಷಿಣಾಪಥದೇಶಗಳು ವಂಗ ಅಂಗ ಮಗಧ ವತ್ಸದೇಶಗಳು, ಸಮೃದ್ಧವಾದ ಕಾಶಿ ಕೋಸಲ ದೇಶಗಳು, ಎಲ್ಲವೂ ನನ್ನವು. ಅಲ್ಲಿ ಉದ್ಭವಿಸುವ ದ್ರವ್ಯ ಧನ ಧಾನ್ಯ ಆಡು ಕುರಿಗಳು ನನ್ನವು. ಅವುಗಳಲ್ಲಿ ನೀನು ಏನೇ ಬಯಸಿದರೂ ಅದನ್ನು ನನ್ನಲ್ಲಿ ಕೇಳು.

ಕಿಮಾಯಾಸೇನ ತೇ ಭೀರು ಉತ್ತಿಷ್ಠೋತ್ತಿಷ್ಠ ಶೋಭನೇ ।
ತತ್ ತ್ವಂ ಮೇ ಬ್ರೂಹಿ ಕೈಕೇಯಿ ಯತಸ್ತೇ ಭಯಮಾಗತಮ್ ॥೩೯॥

'ಏಕೆ ಆಯಾಸ ಪಟ್ಟುಕೊಳ್ಳುವಿ? ಏಕೆ ಭಯಪಡುವಿ? ಮಂಗಳೆ, ಏಳು ಎದ್ದೇಳು. ಯಾರಿಂದ ನಿನಗೆ ಭಯ ಉಂಟಾಗಿದೆ, ನನಗೆ ಹೇಳು.

ತತ್ತೇ ವ್ಯಪನಯಿಷ್ಯಾಮಿ ನೀಹಾರಮಿವ ರಶ್ಮಿವಾನ್ ।
ತಥೋಕ್ತಾ ಸಾ ಸಮಾಶ್ವಸ್ತಾ ವಕ್ತುಕಾಮಾ ತದಪ್ರಿಯಮ್ ।
ಪರಿಪೀಡಯಿತುಂ ಭೂಯೋ ಭರ್ತಾರಮುಪಚಕ್ರಮೇ ॥೪೦॥

'ಆ ನಿನ್ನ ಭಯವನ್ನು ನಾನು, ಮಂಜನ್ನು ಸೂರ್ಯನು ಕಳೆವಂತೆ, ಕಳೆವೆನು' ರಾಜ ಹೀಗೆ ಹೇಳಿದಾಗ ಕೈಕೇಯಿ ಸಮಾಧಾನ ಹೊಂದಿ ಅವನಿಗೆ ಅಪ್ರಿಯ-ವಾದುದನ್ನು ಹೇಳಲು ಬಯಸಿರುವುದರಿಂದ ಅವನನ್ನು ಇನ್ನೂ ಪೀಡಿಸಲು ತೊಡಗಿದಳು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಹತ್ತನೇ ಸರ್ಗ ಮುಗಿಯಿತು.

❖

ಏಕಾದಶಃ ಸರ್ಗಃ

ಸರ್ಗ – 11

ಹಿಂದೆ ದಶರಥ ವಾಗ್ದಾನ ಮಾಡಿದ್ದ ಎರಡು ವರಗಳನ್ನು ನೀಡಲು ನಿರ್ಬಂಧ.

ತಂ ಮನ್ಮಥಶರೈರ್ವಿದ್ಧಂ ಕಾಮವೇಗವಶಾನುಗಮ್ ।
ಉವಾಚ ಪೃಥಿವೀಪಾಲಂ ಕೈಕೇಯೀ ದಾರುಣಂ ವಚಃ ॥೧॥

ದಶರಥ ಮನ್ಮಥನ ಬಾಣಗಳಿಂದ ಹೊಡೆಸಿಕೊಂಡು ಕಾಮಾವೇಗಕ್ಕೆ ಬಲಿಯಾಗಿದ್ದಾನೆ. ಕೈಕೇಯಿ ಅವನಿಗೆ ಇನ್ನೂ ಕ್ರೂರವಾದ ಮಾತನ್ನಾಡಿದಳು.

'ದಶರಥನು 'ವಶೀ' 'ಇಂದ್ರಿಯನಿಗ್ರಹ ಉಳ್ಳವನೆಂ'ದು ಹಿಂದೆ ಹೇಳಿದ್ದರೂ ಇದೀಗ ಮನ್ಮಥನ ಬಾಣಗಳಿಗೆ ತುತ್ತಾಗಿ ಕಾಮಭಾವನೆಯಿಂದ ಪೀಡಿತನಾಗಿದ್ದಾನೆ ಎಂದು ವಾಲ್ಮೀಕಿ ಹೇಳುತ್ತಿದ್ದಾನೆ. ಆದರೂ ವಿರೋಧವಿಲ್ಲ. ಇಲ್ಲಿ ಹೇಳಿದ 'ಮನ್ಮಥ' 'ಕಾಮ' ಎಲ್ಲವೂ 'ಧರ್ಮಾವಿರುದ್ಧೋ ಭೂತೇಷು ಕಾಮೋಽಸ್ಮಿ' ಎಂದು ಹೇಳಿದ ಪವಿತ್ರಪ್ರೇಮ ಅದು, ಹಿಂದೆ ಹೇಳಿದಂತೆ, ಅದು ಈಗ ಅಕಸ್ಮಾತ್ ಕೆರಳಿದೆ. ಶ್ರೀರಾಮನೂ ಸೀತಾವಿಯೋಗವಾದಾಗ 'ಮನ್ಮಥಾರ್ದಿತ'ನಾಗಿ ಕಾಡಿನ ಮರಗಿಡಗಳಲ್ಲೆಲ್ಲ ಸೀತೆಯನ್ನು ಕಾಣುತ್ತಿದ್ದನೆಂದು ಮುಂದೆ ವಾಲ್ಮೀಕಿ ಹೇಳುತ್ತಾನೆ. (ಅರಣ್ಯ.62.2)

ನಾಸ್ಮಿ ವಿಪ್ರಕೃತಾ ದೇವ ಕೇನಚಿನ್ನಾವಮಾನಿತಾ ।
ಅಭಿಪ್ರಾಯಸ್ತು ಮೇ ಕಶ್ಚಿತ್ತಮಿಚ್ಛಾಮಿ ತ್ವಯಾ ಕೃತಮ್ ॥೨॥

'ದೇವ, ಯಾರೂ ನನ್ನಲ್ಲಿ ಅಪರಾಧ ಮಾಡಿಲ್ಲ, ಯಾರೂ ನನ್ನನ್ನು ಅವಮಾನಿಸಿಲ್ಲ. ನನ್ನದೊಂದು ಕೋರಿಕೆ ಇದೆ. ಅದನ್ನು ನೀನು ನಡೆಸಿಕೊಡಬೇಕೆಂದು ಬಯಸುತ್ತೇನೆ.

ಪ್ರತಿಜ್ಞಾಂ ಪ್ರತಿಜಾನೀಷ್ವ ಯದಿ ತ್ವಂ ಕರ್ತುಮಿಚ್ಛಸಿ ।
ಅಥ ತದ್ಧ್ಯಹರಿಷ್ಯಾಮಿ ಯದಭಿಪ್ರಾರ್ಥಿತಂ ಮಯಾ ॥೩॥

'ನಡೆಸಿಕೊಡಲು ಒಪ್ಪಿದೆಯಾದರೆ ಹಾಗೆ ಪ್ರತಿಜ್ಞೆ ಮಾಡು. ಅನಂತರವೇ ನನ್ನ ಕೋರಿಕೆ ಏನೆಂಬುದನ್ನು ಹೇಳುತ್ತೇನೆ.

ತಾಮುವಾಚ ಮಹಾರಾಜಃ ಕೈಕೇಯೀಮೀಷದುತ್ಸ್ಮಿತಃ ।
ಕಾಮೀ ಹಸ್ತೇನ ಸಂಗೃಹ್ಯ ಮೂರ್ಧಜೇಷು ಶುಚಿಸ್ಮಿತಾಮ್ ॥೪॥

ಅನುರಕ್ತನಾದ ಮಹಾರಾಜ 'ಸಣ್ಣದೊಂದು ಕಾರ್ಯಕ್ಕೆ ಶಪಥ ಏಕೆಂ'ದು ನಸುನಗುತ್ತ ನಗುಮೊಗದ ಕೈಕೇಯಿಯ ತಲೆಯನ್ನು ಕೈಯಿಂದೆತ್ತಿ ಸವರುತ್ತ ನುಡಿದ.

ಅವಲಿಪ್ತೇ ನ ಜಾನಾಸಿ ತ್ವತ್ತಃ ಪ್ರಿಯತರೋ ಮಮ ।
ಮನುಜೋ ಮನುಜವ್ಯಾಘ್ರಾದ್ರಾಮಾದನ್ಯೋ ನ ವಿದ್ಯತೇ ॥೫॥

'ಪತಿ ಸೌಭಾಗ್ಯವತಿ ಎಂದು ಹೆಮ್ಮೆಪಡುವ ಕೈಕೇಯಿಯೇ, ರಾಮನೊಬ್ಬನ ಹೊರತು ಇನ್ನೊಬ್ಬ ವ್ಯಕ್ತಿ ನಿನಗಿಂತ ಪ್ರಿಯನಾದವನು ನನಗೆ ಇಲ್ಲವೆಂದು ನೀನು ತಿಳಿಯೆಯ?'

ತೇನಾಜಯ್ಯೇನ ಮುಖ್ಯೇನ ರಾಘವೇಣ ಮಹಾತ್ಮನಾ ।
ಶಪೇ ತೇ ಜೀವನಾರ್ಹೇಣ ಬ್ರೂಹಿ ಯನ್ಮನಸೇಚ್ಛಸಿ ॥೬॥

'ಅಜೇಯನೂ ನಮ್ಮ ವಂಶದಲ್ಲಿಯೇ ಉತ್ತಮನೂ ಮಹಾತ್ಮನೂ ಪ್ರಾಣಕ್ಕಿಂತ ಪ್ರಿಯನೂ ಆಗಿರುವ ಆ ರಾಮನ ಮೇಲೆ ಆಣೆ ಇಟ್ಟು ಹೇಳುತ್ತೇನೆ, ಹೇಳು, ನಿನ್ನ ಮನಸಿನ ಬಯಕೆ ಏನು?

ಸಂ.ರಾಮಾಣ(ಅಯೋ.3.39) ಹೇಳುವಂತೆ, ಧರ್ಮಸಾಕ್ಷಿಗಳು ಸಾಕ್ಷಿಗಳಾಗಿದ್ದರೆ, ರಾಮನು ನಿನಗೆ ಪ್ರಿಯನಾಗಿದ್ದರೆ ಎರಡು ನೀಡೆಂದು ಕೈಕೇಯಿ ಹೇಳುತ್ತಾಳೆ! ರಾಮನ ವನವಾಸವನ್ನು ಅವಳು ಕೇಳಿಯಾಳೆಂಬ ಕಲ್ಪನೆಯೂ ಇಲ್ಲದಿದ್ದ ದಶರಥ ರಾಮನ ಮೇಲೆ ಆಣೆಯಿಟ್ಟು ಪ್ರತಿಜ್ಞೆ ಮಾಡುತ್ತಾನೆ.

ಯಂ ಮುಹೂರ್ತಮಪಶ್ಯಂಸ್ತು ನ ಜೀವೇಯಮಹಂ ಧ್ರುವಮ್ ।
ತೇನ ರಾಮೇಣ ಕೈಕೇಯಿ ಶಪೇ ತೇ ವಚನಕ್ರಿಯಾಮ್ ॥೭॥

'ಯಾರನ್ನು ನೋಡದೆ ಹೋದರೆ ನಿಶ್ಚಿತವಾಗಿ ಒಂದು ಮುಹೂರ್ತ ಕಾಲವೂ ನಾನು ಬದುಕಿರಲಾರೆನೊ ಆ ರಾಮನ ಮೇಲೆ ಆಣೆಇಟ್ಟು ನೀನು ಹೇಳಿದಂತೇ ಮಾಡುತ್ತೇನೆ.'

ಆತ್ಮನಾ ಚಾತ್ಮಜೈಶ್ಚಾನ್ಯೈರ್ವೃಣೇ ಯಂ ಮನುಜರ್ಷಭಮ್ ।
ತೇನ ರಾಮೇಣ ಕೈಕೇಯಿ ಶಪೇ ತೇ ವಚನಕ್ರಿಯಾಮ್ ॥೮॥

'ನಾನು ನನ್ನನ್ನೂ ನನ್ನ ಬೇರೆ ಮಕ್ಕಳನ್ನೂ ಬಿಟ್ಟುಕೊಟ್ಟಾದರೂ ರಾಮನನ್ನು ಉಳಿಸಿಕೊಳ್ಳಲು ಬಯಸುತ್ತೇನೆ. ಆ ರಾಮನ ಮೇಲೆ ಆಣೆಯಿಟ್ಟು ನೀನು ಹೇಳಿದಂತೇ ಮಾಡುತ್ತೇನೆ.'

ಭದ್ರೇ ಹೃದಯಮಪ್ಯೇತದನುಮೃಶ್ಯೋದ್ಧರಸ್ವ ಮೇ ।
ಏತತ್ಸಮೀಕ್ಷ್ಯ ಕೈಕೇಯಿ ಬ್ರೂಹಿ ಯತ್ ಸಾಧು ಮನ್ಯಸೇ ॥೯॥

'ನನಗೆ ನಿನ್ನ ಮೇಲಿರುವ ಪ್ರೀತಿಯನ್ನು ಆಲೋಚಿಸಿ ನನ್ನನ್ನು ತವಕದಿಂದ ಪಾರುಮಾಡು, ಏನು ಕೇಳಬೇಕೆಂಬುದನ್ನು ಸರಿಯಾಗಿ ಆಲೋಚಿಸಿ ಸರಿಕಂಡಿದ್ದನ್ನು ನನಗೆ ಹೇಳು.'

ಬಲಮಾತ್ಮನಿ ಪಶ್ಯಂತೀ ನ ಮಾಂ ಶಂಕಿತುಮರ್ಹಸಿ ।
ಕರಿಷ್ಯಾಮಿ ತವ ಪ್ರೀತಿಂ ಸುಕೃತೇನಾಪಿ ತೇ ಶಪೇ ॥೧೦॥

'ನನ್ನ ಸಾಮರ್ಥ್ಯವನ್ನು ತಿಳಿದಿರುವವಳು ನೀನು. ನನ್ನ ಬಗ್ಗೆ ಸಂದೇಹ ಪಡಬಾರದು. ನಿನಗೆ ಇಷ್ಟವಾದುದನ್ನು ಮಾಡುತ್ತೇನೆ, ನನ್ನ ಪುಣ್ಯದ ಮೇಲೆ ಆಣೆಇಟ್ಟು ಹೀಗೆ ಹೇಳುತ್ತಿದ್ದೇನೆ.'

ದೇವಾಸುರ ಯುದ್ಧದಲ್ಲಿ ತಾನು ರಾತ್ರಿ ಹೊತ್ತು ನಿದ್ದೆ ಮಾಡುತ್ತಿದ್ದಾಗ ಕೈಕೇಯಿ ತನ್ನನ್ನು ಮಂತ್ರಬಲದಿಂದ ರಾಕ್ಷಸರಿಗೆ ಸಿಗದಂತೆ ಮಾಡಿ ಕಾಪಾಡಿದ್ದಕ್ಕೆ ಅವಳಿಗೆ ವರ ಕೊಡುವೆನೆಂದು ವಾಗ್ದಾನ ಮಾಡಿದ್ದೂ ಅದನ್ನು ಅವಳು ಸಮಯಬಂದಾಗ ಕೇಳುವೆನೆಂದು ಹೇಳಿದ್ದೂ ದಶರಥನಿಗೆ ನೆನಪಿನಲ್ಲಿತ್ತು. ಅವಳು ಈಗ ಆ ವರವನ್ನು ಕೇಳಿದರೆ ಕೊಟ್ಟೇ ಕೊಡುವೆನೆಂದು ರಾಮನಮೇಲೆ, ತನ್ನ ಪುಣ್ಯದ ಮೇಲೆ ಆಣೆಯಿಟ್ಟು ಹೇಳುತ್ತಿದ್ದಾನೆ ದಶರಥ. ಅದರಿಂದ ಇದು ಹೊಸ ವರವಲ್ಲ. ಮತ್ತು ಅದು ಮುಂದೆ(12.41) ಹೇಳುವಂತೆ ಕೃತಜ್ಞತಾಭಾವದಿಂದಲೇ ಹೊರತು ಸ್ತ್ರೀವ್ಯಾಮೋಹದಿಂದಲ್ಲ. ಅದರಿಂದ 'ನೀನೇನು ಬಯಸುವೆಯೋ ಅದೇನು, ಮೊದಲಿಗೆ ಹೇಳು, ಬಳಿಕ ಅದು ಯುಕ್ತವಾಗಿದ್ದರೆ ಕೊಡುವೆನೆಂ'ದು ಹೇಳಲು ಈಗ ಅವಕಾಶ ಅವನಿಗೆ ಇಲ್ಲ. ಅಕಸ್ಮಾತ್ತಾಗಿ ರತೀಚ್ಛೆ ಕೆರಳಿದ್ದರಿಂದಲೂ ಕೈಕೇಯಿಗೆ ರಾಮನ ಮೇಲೆ ಭರತನಿಗಿಂತಲೂ ಹೆಚ್ಚಿನ ಪ್ರೀತಿ ಇದ್ದಿದ್ದರಿಂದಲೂ ರಾಜ ಅನುಮಾನ ಪಡಲಿಲ್ಲ. 'ಮೊದಲಿಗೆ ನೀನು ವರವನ್ನು ಕೊಡುವುದಾಗಿ ಪ್ರತಿಜ್ಞೆ ಮಾಡು, ಅನಂತರವೇ ಅದೇನೆಂದು ಹೇಳುವೆನೆನ್ನುತ್ತಾಳೆ ಕೈಕೇಯಿ. ಇದನ್ನು ಅವಳೇ ಮುಂದೆ 'ದತ್ತಮೇವ ವರಂ ವೃಣೇ' ನೀನು ಕೊಟ್ಟಿದ್ದ ವರವನ್ನೇ ನಿನ್ನಲ್ಲಿ ಕೇಳುತ್ತೇನೆ.(ಶ್ಲೋ.28) ಎನ್ನುತ್ತಾಳೆ.

ರಾಮ ವನವಾಸ ವರವನ್ನು ಕೈಕೇಯಿ ಕೇಳುತ್ತಾಳೆ ಎಂದು ತಿಳಿದೂ ಕೂಡ ದಶರಥ ಆ ವರವನ್ನು ಕೊಡುತ್ತಿದ್ದರೆ, ಅದನ್ನು ಕೇವಲ ಸ್ತ್ರೀವ್ಯಾಮೋಹವೆಂದು ತಿಳಿಯಲು ಅವಕಾಶವಿತ್ತು. ಆದರೆ ವರವನ್ನು ಕೊಟ್ಟ ಬಳಿಕವೇ ಆ ವರ ಏನೆಂಬುದನ್ನು ಆತ ತಿಳಿದ. ಇದೇ ದೊಡ್ಡ ವಿಪರ್ಯಾಸ.

ಸಾ ತದರ್ಥಮನಾ ದೇವೀ ತಮಭಿಪ್ರಾಯಮಾಗತಮ್ ।
ನಿರ್ಮಾಧ್ಯಸ್ಥ್ಯಾತ್ ಪ್ರಹರ್ಷಾಚ್ಚ ಬಭಾಷೇ ದುರ್ವಚಂ ವಚಃ ॥೧೧॥

ಕೈಕೇಯಿ ದಶರಥನಿಂದ ಶಪಥ ಮಾಡಿಸಬೇಕೆಂದೇ ತವಕಿಸಿದ್ದಳು. ದಶರಥ ಅವಳ ಆ ಬಯಕೆಯನ್ನು ಈಡೇರಿಸಲು ರಾಮನ ಮೇಲೆ ಆಣೆ ಇಟ್ಟು ಪ್ರತಿಜ್ಞೆ ಮಾಡಿದ್ದಾನೆ. ಕೈಕೇಯಿ ಬಹಳ ಸಂತೋಷದಿಂದ, ರಾಮಭರತರೊಳಗೆ ನಿಷ್ಪಕ್ಷಪಾತ-ವನ್ನು ಬದಿಗಿಟ್ಟು, ಆಡಬಾರದ ಮಾತನ್ನು ಆಡಿದಳು.

ತೇನ ವಾಕ್ಯೇನ ಸಂಹೃಷ್ಟಾ ತಮಭಿಪ್ರಾಯಮಾತ್ಮನಃ ।
ವ್ಯಾಜಹಾರ ಮಹಾಘೋರಮಭ್ಯಾಗತಮಿವಾಂತಕಮ್ ॥೧೨॥

ದಶರಥನ ಪ್ರತಿಜ್ಞಾವಾಕ್ಯದಿಂದ ಬಹಳ ಸಂತುಷ್ಟಳಾದ ಕೈಕೇಯಿ ಸಾಕ್ಷಾದ್ ಯಮನೇ ಇನ್ನೊಂದು ರೂಪದಿಂದ ಬಂದಂತಿದ್ದ ಬಲು ಘೋರವಾದ ತನ್ನ ಆ ಬಯಕೆಯನ್ನು ಮುಂದಿಟ್ಟಳು.

ಯಥಾ ಕ್ರಮೇಣ ಶಪಸಿ ವರಂ ಮಮ ದದಾಸಿ ಚ ।
ತಚ್ಚೃಣ್ವಂತು ತ್ರಯಸ್ತ್ರಿಂಶದ್ದೇವಾಃ ಸಾಗ್ನಿಪುರೋಗಮಾಃ ॥೧೩॥

ತನ್ನ ಬಯಕೆ ಏನೆಂಬುದನ್ನು ಹೇಳುವುದಕ್ಕೆ ಮುನ್ನ ಕೈಕೇಯಿ ದಶರಥನ ಪ್ರತಿಜ್ಞೆಗೆ ಸಾಕ್ಷಿಗಳಾಗಲು ದೇವತೆಗಳನ್ನು ಆಹ್ವಾನಿಸುತ್ತಾಳೆ. ಕ್ರಮವಾಗಿ ರಾಮನ ಮೇಲೆ ಮತ್ತು ತನ್ನ ಸುಕೃತದ ಮೇಲೆ ಆಣೆಯಿಟ್ಟು ನೀನು ಏನು ಪ್ರತಿಜ್ಞೆ ಮಾಡುತ್ತಿರುವೆ, ಮತ್ತು ನನಗೆ ಏನು ವರವನ್ನು ನೀಡುತ್ತಿರುವೆ, ಅದನ್ನು ಅಗ್ನಿ ಮುಂತಾದ ಮೂವತ್ತಮೂರು ದೇವತೆಗಳು ಕೇಳಲಿ' ಎನ್ನುತ್ತಾಳೆ.

ಮುಂದೆ ಭರತ ಹೇಳುತ್ತಾನೆ—

ಸ್ತ್ರೀಷು ನರ್ಮವಿವಾಹೇಷು ವೃತ್ಯರ್ಥೇ ಪ್ರಾಣಸಂಕಟೇ ।
ಗೋಬ್ರಾಹ್ಮಣಾನಾಂ ಹಿಂಸಾಯಾಂ ನಾನೃತಂ ಸ್ಯಾಜ್ಜುಗುಪ್ಸಿತಂ ॥ (ಮನು)

ನ ನರ್ಮಯುಕ್ತಂ ವಚನಂ ಹಿನಸ್ತಿ ನ ಸ್ತ್ರೀಷು ರಾಜನ್ ನ ವಿವಾಹಕಾಲೇ ।
ಪ್ರಾಣಾತ್ಯಯೇ ಸರ್ವಧನಾಪಹಾರೇ ಪಂಚಾನೃತಾನ್ಯಾಹುರಪಾತಕಾನಿ ॥
(ಭಾರ. ಆದಿ. 82.16)

ಎಂದು ಭಾರತ ಧರ್ಮಶಾಸ್ತ್ರಗಳು ಹೇಳುತ್ತಿರುವುದರಿಂದ ಸ್ತ್ರೀಯಾದ

ಕೈಕೇಯಿಗೆ ವಿವಾಹಕಾಲದಲ್ಲಿ ಕೊಟ್ಟ ಮಾತನ್ನು ದಶರಥ ನಡೆಸಿಕೊಡಬೇಕಾಗಿರ-ಲಿಲ್ಲ. ಆದರೆ ಈ ಶಾಸ್ತ್ರವಚನವನ್ನು ನಮ್ಮ ತಂದೆ ಮಾನಿಸಲಿಲ್ಲ. ಅದರಿಂದ, ರಾಮ, ಅವನು ನಿನ್ನನ್ನು ಕಾಡಿಗೆ ಕಳಿಸಿದ್ದಕ್ಕೆ ನಾನು ಅವನನ್ನು ದೂಷಿಸುವುದಿಲ್ಲ. ಆದರೆ ಕೈಕೇಯಿ ಅವನಿಂದ ವರ ಪಡೆದು ನಿನ್ನನ್ನು ಕಾಡಿಗೆ ಕಳಿಸಿದ್ದು ತಪ್ಪು. ಅದು ನನ್ನ ಸಲುವಾಗಿ. ಅದರಿಂದ 'ನಾನು ತಪ್ಪಿತಸ್ಥ' ಎಂದು ಭರತನು ರಾಮನಲ್ಲಿ ಹೇಳುತ್ತಾನೆ. (ಸಂ.ರಾಮಾ. ಅಯೋ.12.86) ಅದರಿಂದ ಭಾರತ ಮತ್ತು ಧರ್ಮಶಾಸ್ತ್ರ ವಚನಗಳಿಗೆ ಮಾನ್ಯತೆ ನೀಡಿ ದಶರಥ ಕೈಕೇಯಿಗೆ ಕೊಟ್ಟ ಮಾತನ್ನು ಕಡೆಗಣಿಸುವ ಸಾಧ್ಯತೆ ಇತ್ತು.

ಮತ್ತು ದಶರಥನು ಕೈಕೇಯಿಗೆ ಕೊಟ್ಟ ವಚನಕ್ಕಿಂತಲೂ ಪ್ರಜೆಗಳ ಅಭಿಪ್ರಾಯ ಮತ್ತು ನ್ಯಾಯಸಂಪ್ರದಾಯಗಳಿಗೆ ಅನುಗುಣವಾಗಿ ರಾಮನಿಗೆ ಪಟ್ಟಾಭಿಷೇಕವೇ ಸರಿ ಎಂದು ದಿಟ್ಟ ನಿರ್ಧಾರ ಮಾಡಿ ಮುಂದುವರಿದಿದ್ದರೆ ಅದನ್ನು ಎಲ್ಲರೂ ಸ್ವಾಗತಿಸುತ್ತಿದ್ದರು. ದಶರಥ ಮುಂದೆ (12.110) 'ನ ತೇ ಕರಿಷ್ಯಾಮಿ ವಚಃ ಸುದಾರುಣಂ' ಎಂದು ಸ್ಪಷ್ಟವಾಗಿ ಹೇಳುತ್ತಾನೆ ಕೂಡ.

ನಿಜ.ಇದನ್ನು ಊಹಿಸಿ ಕೈಕೇಯಿ ಮೊದಲೇ ಮಂಥರೆಯ ಉಪದೇಶದಂತೆ ರಾಮನ ಮೇಲೆ ಆಣೆ ಇಡಿಸಿ ಮೂವತ್ತಮೂರು ದೇವತೆಗಳನ್ನು ಸಾಕ್ಷಿಗಳಾಗಿ ಕರೆಸಿ, 'ಎಲ್ಲರೂ ನೋಡಿ, ಸತ್ಯಸಂಧನಾದ ಧರ್ಮಜ್ಞನಾದ ದಶರಥ ನನಗೆ ವರ ಕೊಡುತ್ತಿದ್ದಾನೆ, ಎಲ್ಲರೂ ಕೇಳಿ' ಎನ್ನುತ್ತ ದಶರಥನ ಪ್ರತಿಜ್ಞೆಯನ್ನು ರಾಮನಾಣೆ-ಯಾಗಿ ಸರ್ವದೇವಸಾಕ್ಷಿಕವಾಗಿ ಸ್ಥಿರಗೊಳಿಸಿದ್ದಾಳೆ, ಧರ್ಮಪಾಶದಲ್ಲಿ ಅವನನ್ನು ಬಲವಾಗಿ ಕಟ್ಟಿಹಾಕಿದ್ದಾಳೆ. ಅದರಿಂದ ಶ್ರೀರಾಮನೂ ಪ್ರತಿಜ್ಞಾಪಾಲನೆಗೇ ಆಗ್ರಹಿಸುತ್ತಾನೆ. ದಶರಥ ಅಸಹಾಯಕನಾಗಿದ್ದಾನೆ. ಜೂಜಿನಲ್ಲಿ ಸೋತರೆ ವನವಾಸ ಮಾಡುವೆನೆಂದು ಪ್ರತಿಜ್ಞೆ ಮಾಡಿದ ಯುಧಿಷ್ಠಿರನಂತೆ.

ಚಂದ್ರಾದಿತ್ಯೌ ನಭಶ್ಚೈವ ಗ್ರಹಾ ರಾತ್ರ್ಯಹನೀ ದಿಶಃ ।
ಜಗಚ್ಚ ಪೃಥಿವೀ ಚೇಯಂ ಸಗಂಧರ್ವಾ ಸರಾಕ್ಷಸಾ ॥೧೪॥

ನಿಶಾಚರಾಣಿ ಭೂತಾನಿ ಗೃಹೇಷು ಗೃಹದೇವತಾಃ ।
ಯಾನಿ ಚಾನ್ಯಾನಿ ಭೂತಾನಿ ಜಾನೀಯುರ್ಭಾಷಿತಂ ತವ ॥೧೫॥

ಚಂದ್ರಸೂರ್ಯರು ಆಕಾಶ ಗ್ರಹಗಳು ರಾತ್ರಿಹಗಲು ದಿಕ್ಕುಗಳು ಸ್ವರ್ಗಲೋಕ ಪೃಥಿವೀಲೋಕ ಗಂಧರ್ವರು ರಾಕ್ಷಸರು ನಿಶಾಚರಾದ ಭೂತಾದಿಗಳು ಮನೆ-ಗಳಲ್ಲಿರುವ ಗೃಹದೇವತೆಗಳು, ಇನ್ನಿತರ ಪಿಶಾಚಾದಿ ದೇವಯೋನಿಗಳು ಎಲ್ಲರೂ ನೀನು ಮಾತು ಕೊಡುವುದನ್ನು ತಿಳಿದು ಅದಕ್ಕೆ ಸಾಕ್ಷಿಗಳಾಗಲಿ.

ಸತ್ಯಸಂಧೋ ಮಹಾತೇಜಾ ಧರ್ಮಜ್ಞಃ ಸುಸಮಾಹಿತಃ ।
ವರಂ ಮಮ ದದಾತ್ಯೇಷ ತನ್ಮೇ ಶೃಣ್ವಂತು ದೇವತಾಃ ॥೧೬॥

'ಸತ್ಯಸಂಧ ಮಹಾತೇಜಸ್ವಿ ಧರ್ಮಜ್ಞನಾದ ಈ ದಶರಥನು ಸ್ವಸ್ಥಮನಸಿನವನಾಗಿ ತನ್ನ ಪ್ರತಿಜ್ಞಾನುಸಾರ ನನಗೆ ವರ ನೀಡುತ್ತಿದ್ದಾನೆ. ಎಲ್ಲ ದೇವತೆಗಳೂ ಕೇಳಿರಿ, ಇದಕ್ಕೆ ಸಾಕ್ಷಿಗಳಾಗಿರಿ.'

ಇತಿ ದೇವೀ ಮಹೇಷ್ವಾಸಂ ಪರಿಗೃಹ್ಯಾಭಿಶಸ್ಯ ಚ ।
ತತಃ ಪರಮುವಾಚೇದಂ ವರದಂ ಕಾಮಮೋಹಿತಮ್ ॥೧೭॥

ಹೀಗೆ ದೇವಿ ಕೈಕೇಯಿ ಮಹಾಬಿಲ್ಲಾರ, ವರದ, ಕಾಮಮೋಹಿತನಾದ ದಶರಥ–ನನ್ನು ಧರ್ಮಪಾಶದಲ್ಲಿ ಬಂಧಿಸಿ, ಎಲ್ಲ ದೇವತೆಗಳ ಮುಂದೆ ಸತ್ಯಸಂಧನೆಂದು ಮುಂತಾಗಿ ಪ್ರಶಂಸೆ ಮಾಡಿ, ಬಳಿಕ ತನಗೆ ಬೇಕಾಗಿದ್ದ ವರಗಳೇನೆಂಬುದನ್ನು ಹೇಳಲು ತೊಡಗಿದಳು.

ಸ್ಮರ ರಾಜನ್ ಪುರಾವೃತ್ತಂ ತಸ್ಮಿನ್ ದೈವಾಸುರೇ ರಣೇ ।
ತತ್ರ ತ್ವಚ್ಛ್ಯಾವಯಚ್ಛತ್ರುಸ್ತವ ಜೀವಿತಮಂತರಾ ॥೧೮॥

'ರಾಜನೆ, ಹಿಂದೆ ನಡೆದುದನ್ನು ನೆನಪಿಸಿಕೊಳ್ಳು. ದೇವಾಸುರ ಯುದ್ಧದಲ್ಲಿ ಶತ್ರುವಾದ ಶಂಬರಾಸುರನು ನಿನ್ನನ್ನು ನಿನ್ನ ಪ್ರಾಣವನ್ನು ಮಾತ್ರ ಉಳಿಸಿ, ಮೂರ್ಛೆಗೊಳಿಸಿಬಿಟ್ಟ.

ತತ್ರ ಚಾಪಿ ಮಯಾ ದೇವ ಯತ್ತ್ವಂ ಸಮಭಿರಕ್ಷಿತಃ ।
ಜಾಗ್ರತ್ಯಾ ಯತಮಾನಾಯಾಸ್ತತೋ ಮೇ ಪ್ರಾದದಾ ವರೌ ॥೧೯॥

'ಆಗ, ದೇವ, ನಾನು ಎಚ್ಚೆತ್ತಿದ್ದು ಪ್ರಯತ್ನ ಮಾಡಿ ನಿನ್ನನ್ನು ರಕ್ಷಿಸಿದೆ. ಆಗ ನೀನು ನನಗೆ ಎರಡು ವರಗಳನ್ನು ಕೊಡುವೆನೆಂದು ಮಾತುಕೊಟ್ಟೆ.'

ತೌ ತು ದತ್ತೌ ವರೌ ದೇವ ನಿಕ್ಷೇಪೌ ಮೃಗಯಾಮ್ಯಹಮ್ ।
ತವೈವ ಪೃಥಿವೀಪಾಲ ಸಕಾಶೇ ಸತ್ಯಸಂಗರ ॥೨೦॥

'ದೇವ ಆ ಎರಡು ವರಗಳನ್ನು ನಾನು ಆಗ ನಿನ್ನಲ್ಲಿಯೇ ನಿಕ್ಷೇಪವಾಗಿರಿಸಿದ್ದೆ. ರಾಜನೆ, ಸತ್ಯಪ್ರತಿಜ್ಞನೆ, ಈಗ ನಾನು ಅವುಗಳನ್ನೇ ಪಡೆಯಲು ಬಯಸುತ್ತೇನೆ.

ತತ್ ಪ್ರತಿಶ್ರುತ್ಯ ಧರ್ಮೇಣ ನ ಚೇದ್ ದಾಸ್ಯಸಿ ಮೇ ವರಮ್ ।
ಅದ್ಯೈವ ಹಿ ಪ್ರಹಾಸ್ಯಾಮಿ ಜೀವಿತಂ ತ್ವದ್ವಿಮಾನಿತಾ ॥೨೧॥

'ಧರ್ಮದಿಂದ ಪ್ರತಿಜ್ಞೆ ಮಾಡಿ, ನೀನು ಈಗ ನನಗೆ ವರ ನೀಡದಿದ್ದರೆ, ನಿನ್ನಿಂದ ಅವಮಾನಿತಳಾದ ನಾನು ಈಗಲೇ ಪ್ರಾಣವನ್ನು ತ್ಯಜಿಸುವೆನು.'

ವಾಙ್ಮಾತ್ರೇಣ ತದಾ ರಾಜಾ ಕೈಕೇಯ್ಯಾ ಸ್ವವಶೇ ಕೃತಃ ।
ಪ್ರಚಸ್ಕಂದ ವಿನಾಶಾಯ ಪಾಶಂ ಮೃಗ ಇವಾತ್ಮನಃ ॥೨೨॥

ಹೀಗೆ ಮಾತಿನಿಂದಲೇ ರಾಜನನ್ನು ಕೈಕೇಯಿ ತನ್ನ ವಶಕ್ಕೆ ತಂದುಕೊಂಡಳು. ಜಿಂಕೆ ಬೇಡನ ಗಾನಕ್ಕೆ ವಶವಾಗಿ ಬಲೆಯಲ್ಲಿ ಬೀಳುವಂತೆ, ರಾಜ ವಂಚನೆಗೊಳಗಾಗಿ ಧರ್ಮಪಾಶದಲ್ಲಿ ಬಿದ್ದು ಆತ್ಮವಿನಾಶವನ್ನು ತಂದುಕೊಂಡ.

ತತಃ ಪರಮುವಾಚೇದಂ ವರದಂ ಕಾಮಮೋಹಿತಮ್ ।
ವರೌ ಯೌ ಮೇ ತ್ವಯಾ ದೇವ ತದಾ ದತ್ತೌ ಮಹೀಪತೇ ॥೨೩॥

ತೌ ತಾವದಹಮದ್ಯೈವ ವಕ್ಷ್ಯಾಮಿ ಶೃಣು ಮೇ ವಚಃ ।
ಯೋಽಭಿಷೇಕಸಮಾರಂಭೋ ರಾಘವಸ್ಯೋಪಕಲ್ಪಿತಃ ॥೨೪॥

ಅನೇನೈವಾಭಿಷೇಕೇಣ ಭರತೋ ಮೇಽಭಿಷಿಚ್ಯತಾಮ್ ।
ಯೋ ದ್ವಿತೀಯೋ ವರೋ ದೇವ ದತ್ತಃ ಪ್ರೀತೇನ ಮೇ ತ್ವಯಾ ॥೨೫॥

ತದಾ ದೈವಾಸುರೇ ಯುದ್ಧೇ ತಸ್ಯ ಕಾಲೋಽಯಮಾಗತಃ ।
ನವ ಪಂಚ ಚ ವರ್ಷಾಣಿ ದಂಡಕಾರಣ್ಯಮಾಶ್ರಿತಃ ॥೨೬॥

ಚೀರಾಜಿನಜಟಾಧಾರೀ ರಾಮೋ ಭವತು ತಾಪಸಃ ।
ಭರತೋ ಭಜತಾಮದ್ಯ ಯೌವರಾಜ್ಯಮಕಂಟಕಮ್ ॥೨೭॥

ಬಳಿಕ ಕೈಕೇಯಿ ಕಾಮಮೋಹಿತನಾದ ವರದನಾದ ರಾಜನಿಗೆ ಹೇಳಿದಳು— 'ದೇವ, ರಾಜನೆ, ನೀನು ಆ ಕಾಲದಲ್ಲಿ ಏನು ಎರಡು ವರಗಳನ್ನು ನನಗೆ ವಾಗ್ದಾನ ಮಾಡಿರುವೆಯೋ ಅವುಗಳನ್ನು ನಾನು ಈಗ ಹೇಳುತ್ತೇನೆ. ನನ್ನ ಮಾತನ್ನು ಕೇಳು, ರಾಮಾಭಿಷೇಕಕ್ಕೆ ಏನು ಸಾಮಗ್ರಿ ಏರ್ಪಾಡಾಗಿದೆಯೇ ಅದೇ ಸಾಮಗ್ರಿಯಿಂದ ನನ್ನ ಭರತನಿಗೆ ಅಭಿಷೇಕವಾಗಬೇಕು. ದೇವ, ಅಂದು ದೇವಾಸುರ ಯುದ್ಧದಲ್ಲಿ ನೀನು ನನ್ನಲ್ಲಿ ಪ್ರೀತನಾಗಿ ಏನು ಎರಡನೇ ವರವನ್ನು ವಾಗ್ದಾನ ಮಾಡಿರುವೆಯೋ ಅದನ್ನೂ ನಾನು ಪಡೆಯಲು ಇದೀಗ ಉಚಿತವಾದ ಕಾಲ ಬಂದಿದೆ. ರಾಮನು ನಾರುಡೆ ಉಟ್ಟು ಅಜಿನ ಜಟಾಧಾರಿಯಾಗಿ ದಂಡಕಾರಣ್ಯವನ್ನು ಸೇರಿ ಹದಿನಾಲ್ಕು

ವರ್ಷಕಾಲ ತಾಪಸನಾಗಿರಲಿ. ಭರತನು ಈಗ ನಿಷ್ಕಂಟಕವಾದ ಯುವರಾಜ ಪಟ್ಟವನ್ನು ಪಡೆಯಲಿ' ಎಂದು.

ಏಷ ಮೇ ಪರಮಃ ಕಾಮೋ ದತ್ತಮೇವ ವರಂ ವೃಣೇ ।
ಅದ್ಯ ಚೈವ ಹಿ ಪಶ್ಯೇಯಂ ಪ್ರಯಾಂತಂ ರಾಘವಂ ವನಮ್ ॥೨೮॥

'ಇದೇ ನನ್ನ ಹೆಬ್ಬಯಕೆ. ನಾನು ಹೊಸ ವರವನ್ನೇನೂ ಕೇಳುವುದಿಲ್ಲ. ನೀನು ಹಿಂದೆ ವಾಗ್ದಾನ ಮಾಡಿದ ವರವನ್ನೇ ಈಗ ಕೇಳುತ್ತಿದ್ದೇನೆ. ಈಗಲೇ ರಾಮ ಕಾಡಿಗೆ ಹೋಗುವುದನ್ನು ನಾನು ಕಾಣಬೇಕು.

ಸ ರಾಜರಾಜೋ ಭವ ಸತ್ಯಸಂಗರಃ
ಕುಲಂ ಚ ಶೀಲಂ ಚ ಹಿ ರಕ್ಷ ಜನ್ಮ ಚ ।
ಪರತ್ರ ವಾಸೇ ಹಿ ವದಂತ್ಯನುತ್ತಮಂ
ತಪೋಧನಾಃ ಸತ್ಯವಚೋ ಹಿತಂ ನೃಣಾಮ್ ॥೨೯॥

'ರಾಜನಾದ ನೀನು ಸತ್ಯಪ್ರತಿಜ್ಞನಾಗು. ನಿನ್ನ ಕುಲಶೀಲಗಳನ್ನು ರಕ್ಷಿಸಿಕೊಳ್ಳು, ಜನ್ಮ ಸಾರ್ಥಕಮಾಡಿಕೊಳ್ಳು. ಸತ್ಯವಾಕ್ಯ ಪಾಲನೆಯೇ ಮಾನವರಿಗೆ ಪರಲೋಕ ವಾಸದಲ್ಲಿ ಹಿತಕರವಾಗುವುದೆಂದು ತಪೋಧನರು ಹೇಳುತ್ತಾರೆ.

ರಾಜ್ಯಶುಲ್ಕ ವಾಗ್ದಾನ ವಿವಾಹಕಾಲದ್ದಾದ್ದರಿಂದ ಬಂಧಕವಲ್ಲದಿದ್ದರೂ ಈಗಿನ ವಾಗ್ದಾನ, ಮುಂದೆ (12.41) ಹೇಳುವಂತೆ, ಉಪಕಾರಕ್ಕೆ ಪ್ರತ್ಯುಪಕಾರ ರೂಪವಾದ್ದರಿಂದ ಬಂಧಕವೆ ಎನ್ನುವುದು ಕೈಕೇಯಿಯ ಅಭಿಪ್ರಾಯ. ರಾಮನ ಮೇಲಿನಾಣೆಯಿಂದ ಮತ್ತು ಅಗ್ನಿಯೇ ಮುಂತಾದ ಸರ್ವದೇವತಾ ಸಾಕ್ಷಿಕವಾದ್ದರಿಂದ ಈ ಬಂಧ ಅಪರಿಹಾರ್ಯ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಹನ್ನೊಂದನೇ ಸರ್ಗ ಮುಗಿಯಿತು.

ದ್ವಾದಶ ಸರ್ಗಃ

ಸರ್ಗ – 12

ಕೈಕೇಯಿಯ ಹಠ, ದಶರಥನ ಶೋಕ

ತತಃ ಶ್ರುತ್ವಾ ಮಹಾರಾಜಃ ಕೈಕೇಯ್ಯಾ ದಾರುಣಂ ವಚಃ ।
ಚಿಂತಾಮಭಿಸಮಾಪೇದೇ ಮುಹೂರ್ತಂ ಪ್ರತತಾಪ ಚ ॥೧॥

ಕೈಕೇಯಿಯ ಕ್ರೂರವಾದ ಮಾತನ್ನು ಕೇಳಿದಾಗ ದಶರಥ ಅದನ್ನು ನಂಬಲಿಲ್ಲ. ಇದು ಕೇವಲ ಭ್ರಮೆ ಎಂದುಕೊಂಡು ಈ ಭ್ರಮಕ್ಕೆ ಏನು ಕಾರಣವಿರಬಹುದು ಎಂದು ಚಿಂತೆಗೊಳಗಾದ. ಭ್ರಮೆ ಎಂದು ಅವನಿಗೆ ನಿಶ್ಚಯವಿದ್ದರೂ ಅದರಿಂದ ಪರಿತಾಪವೇ ಒಂದು ಮುಹೂರ್ತಕಾಲವಿದ್ದಿತು.

ಕಿಂ ನು ಮೇ ಯದಿ ವಾ ಸ್ವಪ್ನಶ್ಚಿತ್ತಮೋಹೋऽಪಿ ವಾ ಮಮ ।
ಅನುಭೂತೋಪಸರ್ಗೋ ವಾ ಮನಸೋ ವಾಪ್ಯುಪದ್ರವಃ ॥೨॥

'ನಾನು ಸ್ವಪ್ನಕಾಣುತ್ತಿರುವೆನೆ? ಅಥವಾ ಎಚ್ಚರವಿದ್ದರೂ ನನ್ನ ಬುದ್ಧಿಯೇ ಕುರುಡಾಯಿತೆ? ಅಥವಾ ಇದೊಂದು ಭೂತಬಾಧೆಯೆ? ಅಥವಾ, ಮನೋ-ರೋಗವೇ?'

ಇತಿ ಸಂಚಿಂತ್ಯ ತದ್ರಾಜಾ ನಾಧ್ಯಗಚ್ಛತ್ತದಾ ಸುಖಮ್ ।
ಪ್ರತಿಲಭ್ಯ ತತಃ ಸಂಜ್ಞಾಂ ಕೈಕೇಯೀವಾಕ್ಯತಾಡಿತಃ ॥೩॥

ರಾಜಾ ದಶರಥನು ಎಲ್ಲವನ್ನೂ ಚೆನ್ನಾಗಿ ಆಲೋಚಿಸಿಯೂ ಕೂಡ ಮನಸ್ಸಿಗೆ ಸಮಾಧಾನ ಹೊಂದಲಿಲ್ಲ. ಕೈಕೇಯಿಯ ಮಾತಿನ ಚಾಟಿಏಟಿನಿಂದ ಎಚ್ಚೆತ್ತುಕೊಂಡ.

ವ್ಯಥಿತೋ ವಿಕ್ಲವಶ್ಚೈವ ವ್ಯಾಘ್ರೀಂ ದೃಷ್ಟ್ವಾ ಯಥಾ ಮೃಗಃ ।
ಅಸಂವೃತಾಯಾಮಾಸೀನೋ ಜಗತ್ಯಾಂ ದೀರ್ಘಮುಚ್ಛ್ವಸನ್ ॥೪॥

ಎಚ್ಚೆತ್ತುಕೊಂಡು ಹೆಣ್ಣುಹುಲಿಯನ್ನು ಕಂಡ ಜಿಂಕೆಯಂತೆ ಕಳವಳಗೊಂಡ, ದುಃಖಿತನಾಗಿ ಬರಿ ನೆಲದ ಮೇಲೇ ಕುಳಿತ, ದೀರ್ಘವಾಗಿ ನಿಟ್ಟುಸಿರುಬಿಟ್ಟ.

ಮಂಡಲೇ ಪನ್ನಗೋ ರುದ್ಧೋ ಮಂತ್ರೈರಿವ ಮಹಾವಿಷಃ ।
ಅಹೋ ಧಿಗಿತಿ ಸಾಮರ್ಷೋ ವಾಚಮುಕ್ತ್ವಾ ನರಾಧಿಪಃ ॥೫॥

ವಿಷಸ್ತಂಭನ ಮಾಡಲು ಮಂಡಲದಲ್ಲಿ ಮಂತ್ರದಿಂದ ಬಂಧಿತವಾದ ಮಹಾವಿಷದ ಸರ್ಪದಂತೆ ಕುಳಿತ ರಾಜನು ಕೋಪದಿಂದ 'ಅಯ್ಯೋ, ನಿನಗೆ ಧಿಕ್ಕಾರ!' ಎಂದ.

ಮೋಹಮಾಪೇದಿವಾನ್ ಭೂಯಃ ಶೋಕೋಪಹತಚೇತನಃ ।
ಚಿರೇಣ ತು ನೃಪಃ ಸಂಜ್ಞಾಂ ಪ್ರತಿಲಭ್ಯ ಸುದುಃಖಿತಃ ॥೬॥

ಹೀಗೆ ಹೇಳಿ ರಾಜನು ಶೋಕದಿಂದ ಬುದ್ಧಿಗೆ ಆಘಾತ ಉಂಟಾದ್ದರಿಂದ, ಪುನಃ ಎಚ್ಚರತಪ್ಪಿದ. ನಿಧಾನವಾಗಿ ಎಚ್ಚರಗೊಂಡು ಶೋಕಿಸಿದ.

ಕೈಕೇಯೀಮಬ್ರವೀತ್ ಕ್ರುದ್ಧಃ ಪ್ರದಹನ್ನಿವ ಚಕ್ಷುಷಾ ।
ನೃಶಂಸೇ ದುಷ್ಟಚಾರಿತ್ರೇ ಕುಲಸ್ಯಾಸ್ಯ ವಿನಾಶಿನಿ ॥೭॥

ಕ್ರುದ್ಧನಾಗಿ ಕಣ್ಣಿಂದ ಸುಡುವಂತೆ ಕೈಕೇಯಿಯನ್ನು ನೋಡುತ್ತ 'ಕ್ರೂರ ಸ್ವಭಾವದವಳೆ! ದುಷ್ಟ ಚಾರಿತ್ರ್ಯದವಳೆ! ನಮ್ಮ ಈ ಕುಲವನ್ನೆ ನಾಶಮಾಡುತ್ತಿರುವವಳೆ!' ಎಂದು ಕೈಕೇಯಿಯನ್ನು ಸಂಬೋಧಿಸಿದ.

ಕಿಂ ಕೃತಂ ತವ ರಾಮೇಣ ಪಾಪೇ ಪಾಪಂ ಮಯಾಪಿ ವಾ ।
ಸದಾ ತೇ ಜನನೀತುಲ್ಯಾಂ ವೃತ್ತಿಂ ವಹತಿ ರಾಘವಃ ॥೮॥

'ಪಾಪಿಷ್ಠಳೇ, ರಾಮನು ನಿನಗೆ ಏನು ಅಪರಾಧ ಮಾಡಿದ್ದಾನೆ, ನಾನಾದರೂ ಏನು ತಪ್ಪು ಮಾಡಿದ್ದೇನೆ? ರಾಮನು ಸದಾ ನಿನ್ನಲ್ಲಿ ತಾಯಿಯಂತೆಯೇ ನಡೆದುಕೊಳ್ಳುತ್ತಿದ್ದಾನೆ ತಾನೆ?'

ತಸ್ಯೈವ ತ್ವಮನರ್ಥಾಯ ಕಿಂನಿಮಿತ್ತಮಿಹೋದ್ಯತಾ ॥೯॥

ಅಂಥಾ ರಾಮನಿಗೇ ಅನರ್ಥ ಉಂಟುಮಾಡಲು ನೀನೇಕೆ ಹೊರಟಿರುವೆ?'

ತ್ವಂ ಮಯಾತ್ಮವಿನಾಶಾಯ ಭವನಂ ಸ್ವಂ ನಿವೇಶಿತಾ ।
ಅವಿಜ್ಞಾನಾನ್ನೃಪಸುತಾ ವ್ಯಾಲೀ ತೀಕ್ಷ್ಣವಿಷಾ ಯಥಾ ॥೧೦॥

'ರಾಜಕುಮಾರಿಯಾದ ನಿನ್ನನ್ನು ತೀಕ್ಷ್ಣವಿಷವುಳ್ಳ ಹೆಣ್ಣು ಹಾವಿನಂಥವಳೆಂದು ತಿಳಿಯದೆ ನಾನು ನನ್ನ ವಿನಾಶಕ್ಕಾಗಿಯೆ ನಿನ್ನನ್ನು ಮನೆಯೊಳಗೆ ಇರಿಸಿಕೊಂಡೆ.'

ಜೀವಲೋಕೋ ಯದಾ ಸರ್ವೋ ರಾಮಸ್ಯಾಹ ಗುಣಸ್ತವಮ್ ।
ಅಪರಾಧಂ ಕಮುದ್ದಿಶ್ಯ ತ್ಯಕ್ಷ್ಯಾಮೀಷ್ಟಮಹಂ ಸುತಂ ॥೧೧॥

'ಸಮಸ್ತ ಜೀವಲೋಕವೆ ರಾಮನ ಗುಣಗಾನ ಮಾಡುತ್ತಿರುವಾಗ, ಅವನಿಂದಾದ ಯಾವ ತಪ್ಪನ್ನು ನೆಪಮಾಡಿ ನನ್ನ ಮುದ್ದಿನ ಮಗನನ್ನು ನಾನು ಪರಿತ್ಯಾಗ ಮಾಡಬಲ್ಲೆ?

ಕೌಸಲ್ಯಾಂ ವಾ ಸುಮಿತ್ರಾಂ ವಾ ತ್ಯಜೇಯಮಪಿ ವಾ ಶ್ರಿಯಮ್ ।
ಜೀವಿತಂ ವಾತ್ಮನೋ ರಾಮಂ ನ ತ್ವೇವ ಪಿತೃವತ್ಸಲಮ್ ॥೧೨॥

'ಕೌಸಲ್ಯೆಯನ್ನಾಗಲಿ ಸುಮಿತ್ರೆಯನ್ನಾಗಲಿ ರಾಜ್ಯಸಂಪತ್ತನ್ನೇ ಆಗಲಿ ಪರಿತ್ಯಜಿಸಬಲ್ಲೆ. ನನ್ನ ಪ್ರಾಣವನ್ನೇ ಬಿಡಬಲ್ಲೆ. ತಂದೆಯನ್ನು ಪ್ರೀತಿಸುವ ರಾಮನನ್ನು ಬಿಡಲಾರೆ.'

ಪರಾ ಭವತಿ ಮೇ ಪ್ರೀತಿರ್ದೃಷ್ಟ್ವಾ ತನಯಮಗ್ರಜಮ್ ।
ಅಪಶ್ಯತಸ್ತು ಮೇ ರಾಮಂ ನಷ್ಟಾ ಭವತಿ ಚೇತನಾ ॥೧೩॥

'ಚೊಚ್ಚಲ ಮಗನಾದ ರಾಮನನ್ನು ಕಂಡರೆ ನನಗೆ ಎಲ್ಲಿಲ್ಲದ ಪ್ರೀತಿ. ನೋಡದೆ ಹೋದರೆ ನನ್ನ ಚೈತನ್ಯವೇ ಉಡುಗಿ ಹೋಗುವುದು.'

ತಿಷ್ಠೇಲ್ಲೋಕೋ ವಿನಾ ಸೂರ್ಯಂ ಸಸ್ಯಂ ವಾ ಸಲಿಲಂ ವಿನಾ ।
ನ ತು ರಾಮಂ ವಿನಾ ದೇಹೇ ತಿಷ್ಠೇತ್ತು ಮಮ ಜೀವಿತಮ್ ॥೧೪॥

'ಸೂರ್ಯನಿಲ್ಲದೆ ಲೋಕ ಉಳಿದೀತು. ನೀರಿಲ್ಲದೆ ಸಸ್ಯವೂ ಉಳಿದೀತು. ರಾಮನಿಲ್ಲದೆ ನನ್ನ ಶರೀರದಲ್ಲಿ ಪ್ರಾಣ ಉಳಿಯಲಾರದು.'

ತದಲಂ ತ್ಯಜ್ಯತಾಮೇಷ ನಿಶ್ಚಯಃ ಪಾಪನಿಶ್ಚಯೇ ।
ಅಪಿ ತೇ ಚರಣೌ ಮೂರ್ಧ್ನಾ ಸ್ಪೃಶಾಮ್ಯೇಷ ಪ್ರಸೀದ ಮೇ ।
ಕಿಮಿದಂ ಚಿಂತಿತಂ ಪಾಪೇ ತ್ವಯಾ ಪರಮದಾರುಣಮ್ ॥೧೫॥

'ಪಾಪಕರ್ಮ ಮಾಡಲು ನಿಶ್ಚಯ ಮಾಡಿರುವವಳೆ, ಸಾಕು, ನಿಲ್ಲಿಸು ಈ ಪಾಪಕರ್ಮ ನಿಶ್ಚಯವನ್ನು, ನಿನ್ನ ಕಾಲುಗಳಿಗಾದರೂ ಎರಗುವೆನು, ಪ್ರಸನ್ನಳಾಗು. ಪಾಪಿಷ್ಠೆ, ಅತಿಕ್ರೂರವಾದ ಈ ಕರ್ಮ ಮಾಡಲು ನಿನಗೆ ಹೇಗೆ ಆಲೋಚನೆ ಹೊಳೆಯಿತು?'

ಅಥ ಜಿಜ್ಞಾಸಸೇ ಮಾಂ ತ್ವಂ ಭರತಸ್ಯ ಪ್ರಿಯಾಪ್ರಿಯೇ ।
ಅಸ್ತು ಯತ್ತತ್ತ್ವಯಾ ಪೂರ್ವಂ ವ್ಯಾಹೃತಂ ರಾಘವಂ ಪ್ರತಿ ॥೧೬॥

ಸ ಮೇ ಜ್ಯೇಷ್ಠಃ ಸುತಃ ಶ್ರೀಮಾನ್ ಧರ್ಮಜ್ಯೇಷ್ಠ ಇತೀವ ಮೇ ।
ತತ್ತ್ವಯಾ ಪ್ರಿಯವಾದಿನ್ಯಾ ಸೇವಾರ್ಥಂ ಕಥಿತಂ ಭವೇತ್ ॥೧೭॥

'ಭರತನು ನನಗೆ ಪ್ರಿಯನೆ ಅಲ್ಲವೆ' ಎಂದು ತಿಳಿಯುವುದಕ್ಕಾಗಿ ನೀನು ಹೀಗೆ ಭರತನಿಗೆ ಅಭಿಷೇಕವಾಗಲೆಂದು ಹೇಳುವುದಾದರೆ ಅದಿರಲಿ. ಭರತನಿಗೇ ಅಭಿಷೇಕ ಮಾಡಬೇಕೆಂದರೆ ಅದೂ ನನಗೆ ಒಪ್ಪಿಗೆಯೆ. ಅದನ್ನು ನಾನು ಆಕ್ಷೇಪಿಸುವುದಿಲ್ಲ. ಆದರೆ ನೀನು ಹಿಂದೆ ರಾಮನ ವಿಷಯದಲ್ಲಿ ನನ್ನ ಮುಂದೆ ಹೇಳಿದೆ 'ರಾಮನು ನನಗೆ ಜ್ಯೇಷ್ಠಪುತ್ರ, ಸುಂದರ, ಮಹಾಧಾರ್ಮಿಕ' ಎಂದು ಮುಂತಾಗಿ. ಈಗ 'ರಾಮ ಕಾಡಿಗೆ ಹೋಗಲಿ' ಎನ್ನುತ್ತಿರುವೆ. ಅದರಿಂದ ನೀನು ರಾಮನನ್ನು ಹೊಗಳು-ತ್ತಿದ್ದುದು, ಪ್ರಿಯವಾಗುವಂತೆ ಮಾತನಾಡಬಲ್ಲವಳು ನೀನು ನನ್ನ ಮನೋ-ರಂಜನೆಗಾಗಿ ಆಡಿದ್ದೇ ಇರಬೇಕು. ಹೊರತು ನಿನ್ನ ಅಂತರಂಗದ ಮಾತಲ್ಲ-ವೆಂದಾಗುವುದು.

ತಚ್ಛ್ರುತ್ವಾ ಶೋಕಸಂತಪ್ತಾ ಸಂತಾಪಯಸಿ ಮಾಂ ಭೃಶಮ್ ।
ಆವಿಷ್ಟಾಸಿ ಗೃಹೇ ಶೂನ್ಯೇ ಸಾ ತ್ವಂ ಪರವಶಂ ಗತಾ ॥೧೮॥

'ಅದರಿಂದಲೇ ನೀನು ರಾಮಾಭಿಷೇಕ ವಾರ್ತೆಯನ್ನು ಕೇಳಿ, ಶೋಕದಿಂದ ಸಂತಾಪಗೊಂಡು, ಪರವಶಳಾಗಿ ನನ್ನನ್ನು ಬಹಳ ಸಂತಾಪಗೊಳಿಸುತ್ತಿರುವೆ. ಭೂತಾವಿಷ್ಟಳಾಗಿ ಶೂನ್ಯವಾದ ಈ ಶೋಕಗೃಹದಲ್ಲಿ ಒರಗಿರುವೆ.

ಇಕ್ಷ್ವಾಕೂಣಾಂ ಕುಲೇ ದೇವಿ ಸಂಪ್ರಾಪ್ತಃ ಸುಮಾನಯಮ್ ।
ಅನಯೋ ನಯಸಂಪನ್ನೇ ಯತ್ರ ತೇ ವಿಕೃತಾ ಮತಿಃ ॥೧೯॥

'ನೀತಿಸಂಪನ್ನೆಯಾದ ದೇವಿಯೆ, ನಿನ್ನಿಂದ ಈಗ ಇಕ್ಷ್ವಾಕು ಕುಲದಲ್ಲಿ ದೊಡ್ಡ-ದಾದ ಅನೀತಿ ಅನ್ಯಾಯ ಉಂಟಾಗುತ್ತಿದೆ. ಅದಕ್ಕೆ ಕಾರಣ ನಿನ್ನ ವಿಕೃತವಾದ ಬುದ್ಧಿಯೆ.'

ನ ಹಿ ಕಿಂಚಿದಯುಕ್ತಂ ವಾ ವಿಪ್ರಿಯಂ ವಾ ಪುರಾ ಮಮ ।
ಅಕರೋಸ್ತ್ವಂ ವಿಶಾಲಾಕ್ಷಿ ತೇನ ನ ಶ್ರದ್ದಧಾಮ್ಯಹಮ್ ॥೨೦॥

'ಉದ್ದಗಣ್ಣಿನವಳೆ, ಹಿಂದೆ ನೀನು ಎಂದೂ ಇಂಥ ಯಾವುದೇ ಅಯುಕ್ತವಾದ ಅಥವಾ ಅಪ್ರಿಯವಾದ ಕರ್ಮವನ್ನು ನನಗೆ ಮಾಡಿದ್ದಿಲ್ಲ. ಅದರಿಂದ ಇದನ್ನು ನಿನ್ನ ಸ್ವಾಭಾವಿಕ ಮಾತೆಂದು ನಾನು ನಂಬುವುದಿಲ್ಲ.

ನನು ತೇ ರಾಘವಸ್ತುಲ್ಯೋ ಭರತೇನ ಮಹಾತ್ಮನಾ ।
ಬಹುಶೋ ಹಿ ಸುಬಾಲೇ ತ್ವಂ ಕಥಾಃ ಕಥಯಸೇ ಮಮ ॥೨೧॥

'ನಿನಗೆ ರಾಮನು ಮಹಾತ್ಮ ಭರತನಿಗೆ ಸಮಾನನೆ ತಾನೆ? ದೇವಿ, ಇಂಥ ಮಾತುಗಳನ್ನೇ ನೀನು ನನ್ನ ಮುಂದೆ ಮತ್ತೆಮತ್ತೆ ಹೇಳುತ್ತಿದ್ದೆ!'

ತಸ್ಯ ಧರ್ಮಾತ್ಮನೋ ದೇವಿ ವನೇ ವಾಸಂ ಯಶಸ್ವಿನಃ ।
ಕಥಂ ರೋಚಯಸೇ ಭೀರು ನವ ವರ್ಷಾಣಿ ಪಂಚ ಚ ॥೨೨॥

'ಭಯಗೊಳ್ಳುವವಳೆ, ದೇವಿ, ಅಂಥ ಧರ್ಮಾತ್ಮನಾದ ಕೀರ್ತಿಶಾಲಿಯಾದ ರಾಮನಿಗೆ ಹದಿನಾಲ್ಕು ವರ್ಷ ವನವಾಸವನ್ನು ನೀನು ಹೇಗೆ ಬಯಸುವೆ?'

ಅತ್ಯಂತಸುಕುಮಾರಸ್ಯ ತಸ್ಯ ಧರ್ಮೇ ಧೃತಾತ್ಮನಃ ।
ಕಥಂ ರೋಚಯಸೇ ವಾಸಮರಣ್ಯೇ ಭೃಶದಾರುಣೇ ॥೨೩॥

'ಅತ್ಯಂತ ಕೋಮಲನಾದ ಧರ್ಮದಲ್ಲಿ ಸ್ಥಿರಬುದ್ಧಿಯುಳ್ಳ ರಾಮನಿಗೆ ಅತಿ ಘೋರವಾದ ವನವಾಸವನ್ನು ನೀನು ಹೇಗೆ ಬಯಸುವೆ?'

ರೋಚಯಸ್ಯಭಿರಾಮಸ್ಯ ರಾಮಸ್ಯ ಶುಭಲೋಚನೇ ।
ತವ ಶುಶ್ರೂಷಮಾಣಸ್ಯ ಕಿಮರ್ಥಂ ವಿಪ್ರವಾಸನಮ್ ॥೨೪॥

'ಚಂದದ ಕಣ್ಣಿನವಳೆ, ನಿನ್ನ ಸೇವೆ ಮಾಡುತ್ತಿರುವ, ಲೋಕಕ್ಕೆ ಆನಂದಕರನಾದ ರಾಮನಿಗೆ ಏಕೆ ಈ ವನವಾಸದ ಶಿಕ್ಷೆ?'

ರಾಮೋಽಪಿ ಭರತಾದ್ಭೂಯಸ್ತವ ಶುಶ್ರೂಷತೇ ಸದಾ ।
ವಿಶೇಷಂ ತ್ವಯಿ ತಸ್ಮಾತ್ತು ಭರತಸ್ಯ ನ ಲಕ್ಷಯೇ ॥೨೫॥

'ರಾಮನೂ ಕೂಡ ಭರತನಿಗಿಂತಲೂ ಹೆಚ್ಚಾಗಿ ಸದಾ ನಿನ್ನ ಸೇವೆ ಮಾಡುತ್ತಾನೆ. ರಾಮನಿಗಿಂತ ಭರತನಲ್ಲಿ ಹೆಚ್ಚಿನ ಪ್ರೀತಿಯನ್ನು ನಿನ್ನಲ್ಲಿ ನಾನು ಕಾಣುತ್ತಿಲ್ಲ.'

ಶುಶ್ರೂಷಾಂ ಗೌರವಂ ಚೈವ ಪ್ರಮಾಣಂ ವಚನಕ್ರಿಯಾಮ್ ।
ಕಸ್ತೇ ಭೂಯಸ್ತರಾಂ ಕುರ್ಯಾದನ್ಯತ್ರ ಮನುಜರ್ಷಭಾತ್ ॥೨೬॥

'ಸೇವೆ, ಗೌರವಭಾವನೆ, ಹಿರಿಯರ ಮಾತಿನಲ್ಲಿ ವಿಶ್ವಾಸ, ಅವರು ಹೇಳಿದಂತೆ ಮಾಡುವುದು— ಇವುಗಳನ್ನು ಪುರುಷೋತ್ತಮನಾದ ರಾಮನಿಗಿಂತ ಹೆಚ್ಚಾಗಿ ಯಾರು ನಿನಗೆ ಮಾಡಬಲ್ಲ ?

ಬಹೂನಾಂ ಸ್ತ್ರೀಸಹಸ್ರಾಣಾಂ ಬಹೂನಾಂ ಚೋಪಜೀವಿನಾಮ್ ।
ಪರಿವಾದೋಽಪವಾದೋ ವಾ ರಾಘವೇ ನೋಪಪದ್ಯತೇ ॥೨೭॥

'ಅಂತಃಪುರದಲ್ಲಿರುವ ಅನೇಕ ಸಾವಿರ ಸ್ತ್ರೀಯರ ಮತ್ತು ನಮ್ಮನ್ನು ಆಶ್ರಯಿಸಿರುವ ಅಸಂಖ್ಯ ಸೇವಕವರ್ಗದವರ ನಿಂದೆಗಾಗಲಿ ದೋಷಾರೋಪಣೆಗಾಗಲಿ ರಾಮನು ಎಂದೂ ಗೋಚರನಾಗುವುದಿಲ್ಲ.'

ಸಾಂತ್ವಯನ್ ಸರ್ವಭೂತಾನಿ ರಾಮಃ ಶುದ್ಧೇನ ಚೇತಸಾ ।
ಗೃಹ್ಣಾತಿ ಮನುಜವ್ಯಾಘ್ರಃ ಪ್ರಿಯೈರ್ವಿಷಯವಾಸಿನಃ ॥೨೮॥

'ಎಲ್ಲ ಜೀವಿಗಳನ್ನೂ ರಾಮನು ಶುದ್ಧ ಮನಸ್ಸಿನಿಂದ ಇಷ್ಟಾರ್ಥಗಳನ್ನು ನೀಡಿ ಸಂತೈಸುತ್ತಾನೆ. ದೇಶವಾಸಿಗಳನ್ನು ಪುರುಷೋತ್ತಮನಾದ ರಾಮ ತನ್ನ ಕಡೆಗೆ ಆಕರ್ಷಿಸುತ್ತಾನೆ.'

ಸತ್ಯೇನ ಲೋಕಾನ್ ಜಯತಿ ದೀನಾನ್ ದಾನೇನ ರಾಘವಃ ।
ಗುರೂನ್ ಶುಶ್ರೂಷಯಾ ವೀರೋ ಧನುಷಾ ಯುಧಿ ಶಾತ್ರವಾನ್ ॥೨೯॥

'ವೀರ ರಾಮನು ಸತ್ಯದಿಂದ ಲೋಕಗಳನ್ನು, ದಾನದಿಂದ ದೀನರನ್ನು, ಸೇವೆಯಿಂದ ಗುರುಹಿರಿಯರನ್ನು, ಧನುಸ್ಸಿನಿಂದ ರಣದಲ್ಲಿ ಶತ್ರುಗಳನ್ನು ವಶೀಕರಿಸಿಕೊಳ್ಳುತ್ತಾನೆ.'

ಸತ್ಯಂ ದಾನಂ ತಪಸ್ತ್ಯಾಗೋ ಮಿತ್ರತಾ ಶೌಚಮಾರ್ಜವಮ್ ।
ವಿದ್ಯಾ ಚ ಗುರುಶುಶ್ರೂಷಾ ಧ್ರುವಾಣ್ಯೇತಾನಿ ರಾಘವೇ ॥೩೦॥

'ಸತ್ಯ ದಾನ ತಪಸ್ಸು ತ್ಯಾಗ ಮೈತ್ರಿ ಶೌಚ ಋಜುಸ್ವಭಾವ ವಿದ್ಯೆ ಗುರುಸೇವೆ ಇವೆಲ್ಲವೂ ರಾಮನಲ್ಲಿ ಸ್ಥಿರವಾಗಿರುತ್ತವೆ.'

ತಸ್ಮಿನ್ನಾರ್ಜವಸಂಪನ್ನೇ ದೇವಿ ದೇವೋಪಮೇ ಕಥಮ್ ।
ಪಾಪಮಾಶಂಸಸೇ ರಾಮೇ ಮಹರ್ಷಿಸಮತೇಜಸಿ ॥೩೧॥

'ಋಜುಸ್ವಭಾವಉಳ್ಳ, ಮಹರ್ಷಿಸಮವಾದ ತೇಜಸ್ಸುಳ್ಳ, ದೇವೋಪಮನಾದ ರಾಮನಲ್ಲಿ, ದೇವಿ, ನೀನು ಏನು ಅಪರಾಧವನ್ನು ಹೇಳಬಲ್ಲೆ?'

ನ ಸ್ಮರಾಮ್ಯಪ್ರಿಯಂ ವಾಕ್ಯಂ ಲೋಕಸ್ಯ ಪ್ರಿಯವಾದಿನಃ ।
ಸ ಕಥಂ ತ್ವತ್ಕೃತೇ ರಾಮಂ ವಕ್ಷ್ಯಾಮಿ ಪ್ರಿಯಮಪ್ರಿಯಮ್ ॥೩೨॥

'ಲೋಕಕ್ಕೇ ಪ್ರಿಯವಾದಿಯಾಗಿರುವ ರಾಮನ ಬಗ್ಗೆ ಲೋಕವು ಅಪ್ರಿಯವಾಗಿ ಆಡಿದ್ದು ನನ್ನ ಸ್ಮರಣೆಯಲ್ಲಿಲ್ಲ. ಅಂಥ ನಾನು ಪ್ರಿಯನಾದ ರಾಮನ ಬಗ್ಗೆ ನಿನಗಾಗಿ ಈಗ ಹೇಗೆ ಅಪ್ರಿಯವನ್ನು ಆಡಬಲ್ಲೆ?'

ಕ್ಷಮಾ ಯಸ್ಮಿಂಸ್ತಪಸ್ತ್ಯಾಗಃ ಸತ್ಯಂ ಧರ್ಮಃ ಕೃತಜ್ಞತಾ ।
ಅವಿಹಿಂಸಾ ಚ ಭೂತಾನಾಂ ತಮೃತೇ ಕಾ ಗತಿರ್ಮಮ ॥೩೩॥

'ಕ್ಷಮೆ, ತಪಸ್ಸು, ತ್ಯಾಗ, ಸತ್ಯ, ಧರ್ಮ, ಕೃತಜ್ಞತೆ, ಪ್ರಾಣಿಹಿಂಸೆ ಮಾಡದಿರುವುದು ಈ ಎಲ್ಲ ಗುಣಗಳಿಗೂ ಆಶ್ರಯನಾದ ರಾಮನ ಹೊರತು ಇನ್ನು ಯಾರು ನನಗೆ ಗತಿ?'

ಮಮ ವೃದ್ಧಸ್ಯ ಕೈಕೇಯಿ ಗತಾಂತಸ್ಯ ತಪಸ್ವಿನಃ ।
ದೀನಂ ಲಾಲಪ್ಯಮಾನಸ್ಯ ಕಾರುಣ್ಯಂ ಕರ್ತುಮರ್ಹಸಿ ॥೩೪॥

'ಕೈಕೇಯಿ, ನಾನು ವೃದ್ಧ. ಮರಣವನ್ನು ಸಮೀಪಿಸಿರುವವನು. ದುಃಖಿಯಾಗಿದ್ದೇನೆ. ದೀನನಾಗಿ ವಿಲಾಪಗೈಯುತ್ತಿದ್ದೇನೆ. ನನ್ನಲ್ಲಿ ದಯೆದೋರು.'

ಪೃಥಿವ್ಯಾಂ ಸಾಗರಾಂತಾಯಾಂ ಯತ್ಕಿಂಚಿದಧಿಗಮ್ಯತೇ ।
ತತ್ಸರ್ವಂ ತವ ದಾಸ್ಯಾಮಿ ಮಾ ಚ ತ್ವಾಂ ಮನ್ಯುರಾವಿಶೇತ್ ॥೩೫॥

'ಸಾಗರಪರ್ಯಂತ ಹರಡಿರುವ ಸಮಸ್ತ ಪೃಥಿವಿಯಲ್ಲಿ ಏನೇ ಇದ್ದರೂ ಅದೆಲ್ಲವನ್ನೂ ನಿನಗೆ ಕೊಡಬಲ್ಲೆ. ನನ್ನಲ್ಲಿ ನೀನು ಕೋಪ ಮಾಡಬೇಡ.'

ಅಂಜಲಿಂ ಕುರ್ಮಿ ಕೈಕೇಯಿ ಪಾದೌ ಚಾಪಿ ಸ್ಪೃಶಾಮಿ ತೇ ।
ಶರಣಂ ಭವ ರಾಮಸ್ಯ ಮಾಽಧರ್ಮೋ ಮಾಮಿಹ ಸ್ಪೃಶೇತ್ ॥೩೬॥

'ಕೈಕೇಯಿ, ನಾನು ನಿನಗೆ ಕೈಮುಗಿಯುವೆ, ನಿನ್ನ ಕಾಲುಗಳಿಗೆ ಎರಗುವೆ. ರಾಮನಿಗೆ ಆಶ್ರಯ ನೀಡು. ಅವನನ್ನು ಕಾಡಿಗೆ ಅಟ್ಟಿದ ಪಾಪಕ್ಕೆ ನಾನು ಭಾಗಿಯಾಗಬಾರದು.'

ಇತಿ ದುಃಖಾಭಿಸಂತಪ್ತಂ ವಿಲಪಂತಮಚೇತನಮ್ ।
ಘೂರ್ಣಮಾನಂ ಮಹಾರಾಜಂ ಶೋಕೇನ ಸಮಭಿಪ್ಲುತಮ್ ॥೩೭॥

ಪಾರಂ ಶೋಕಾರ್ಣವಸ್ಯಾಶು ಪ್ರಾರ್ಥಯಂತಂ ಪುನಃಪುನಃ ।
ಪ್ರತ್ಯುವಾಚಾಥ ಕೈಕೇಯೀ ರೌದ್ರಾ ರೌದ್ರತರಂ ವಚಃ ॥೩೮॥

ಮಹಾರಾಜ ದುಃಖದಿಂದ ಬೇಯುತ್ತಿದ್ದಾನೆ. ವಿಲಾಪ ಮಾಡುತ್ತಿದ್ದಾನೆ. ಚೈತನ್ಯ ಉಡುಗಿದೆ. ಮೈ ನಡುಕ ಉಂಟಾಗಿದೆ. ಶೋಕಾಕ್ರಾಂತನಾಗಿದ್ದಾನೆ. ಶೋಕಸಾಗರ-ದಿಂದ ತನ್ನನ್ನು ಬೇಗನೆ ಪಾರು ಮಾಡಲು ಪುನಃಪುನಃ ಬೇಡಿಕೊಳ್ಳುತ್ತಿದ್ದಾನೆ. ಆದರೆ ಕೈಕೇಯಿ ಭಯಂಕರಿಯಾಗಿದ್ದಾಳೆ. ಅತಿಭಯಂಕರವಾದ ಮಾತನ್ನೆ ಪ್ರತಿಯಾಗಿ ಹೇಳುತ್ತಾಳೆ.

ಯದಿ ದತ್ತಾ ತ್ವಯಾ ರಾಜನ್ ಪುನಃ ಪ್ರತ್ಯನುತಪ್ಯಸೇ ।
ಧಾರ್ಮಿಕತ್ವಂ ಕಥಂ ವೀರ ಪೃಥಿವ್ಯಾಂ ಕಥಯಿಷ್ಯಸಿ ॥೫೯॥

ರಾಜನೆ, ನೀನು ಎರಡು ವರಗಳನ್ನು ಕೊಟ್ಟ ಬಳಿಕ ಪುನಃ ನೀನೆ ಅನುತಾಪ ಪಡುವಿಯಾದರೆ, ವೀರನೆ, ನಿನ್ನನ್ನು ನೀನು ಧಾರ್ಮಿಕನೆಂದು ಲೋಕದಲ್ಲಿ ಹೇಗೆ ಹೇಳಿಕೊಳ್ಳುವಿ?'

ಯದಾ ಸಮೇತಾ ಬಹವಸ್ತ್ವಯಾ ರಾಜರ್ಷಯಃ ಸಹ ।
ಕಥಯಿಷ್ಯಂತಿ ಧರ್ಮಜ್ಞ ತತ್ರ ಕಿಂ ಪ್ರತಿವಕ್ಷ್ಯಸಿ ॥೬೦॥

'ಬಹು ರಾಜರ್ಷಿಗಳು ನಿನ್ನ ಬಳಿ ಬಂದು ಸೇರಿ ನಿನ್ನ ಈ ಅಧರ್ಮವನ್ನು ಎತ್ತಿ ಹೇಳಿದರೆ ಆಗ, ಧರ್ಮಜ್ಞನೆ, ನೀನೇನು ಅದಕ್ಕೆ ಸಮಾಧಾನ ಹೇಳುವಿ?'

ಯಸ್ಯಾಃ ಪ್ರಸಾದೇ ಜೀವಾಮಿ ಯಾ ಚ ಮಾಮಭ್ಯಪಾಲಯತ್ ।
ತಸ್ಯಾಃ ಕೃತಂ ಮಯಾ ಮಿಥ್ಯಾ ಕೈಕೇಯ್ಯಾ ಇತಿ ವಕ್ಷ್ಯಸಿ ॥೬೧॥

'ಯಾರ ಉಪಕಾರದಿಂದ ನಾನು ಬದುಕಿದ್ದೇನೆ, ಯಾರು ನನ್ನನ್ನು ಆಪತ್ತಿನಿಂದ ಕಾಪಾಡಿದಳು, ಆ ಕೈಕೇಯಿಗೆ ಕೊಟ್ಟ ವರವನ್ನು ನಾನು ವಿಫಲವಾಗಿಸಿದೆನೆಂ'ದು ಅವರಿಗೆ ಹೇಳುವೆಯ?'

ಕಿಲ್ಬಿಷಂ ತ್ವಂ ನರೇಂದ್ರಾಣಾಂ ಕರಿಷ್ಯಸಿ ನರಾಧಿಪ ।
ಯೋ ದತ್ತಾ ತ್ವ ವರಮದ್ಯೈವ ಪುನರನ್ಯಾನಿ ಭಾಷಸೇ ॥೬೨॥

'ರಾಜನೆ, ನೀನು ನಿನ್ನ ಪೂರ್ವಜರಾದ ರಾಜರುಗಳಿಗೆ ಅಪಕೀರ್ತಿಯನ್ನು ತಂದುಕೊಡುವೆ. ಏಕೆಂದರೆ ಈಗತಾನೆ ವರ ನೀಡಿ ಪುನಃ ಬೇರೇ ಮಾತುಗಳ-ನ್ನಾಡುವೆ.'

ಶೈಬ್ಯಃ ಶ್ಯೇನಕಪೋತೀಯೇ ಸ್ವಮಾಂಸಂ ಪಕ್ಷಿಣೇ ದದೌ ।
ಅಲರ್ಕಶ್ಚಕ್ಷುಷೀ ದತ್ತ್ವಾ ಜಗಾಮ ಗತಿಮುತ್ತಮಾಮ್ ॥೬೩॥

'ಗಿಡುಗ–ಪಾರಿವಾಳಗಳ ಕಥೆಯಲ್ಲಿ 'ಶೈಬ್ಯ' ಶಿಬಿ ಚಕ್ರವರ್ತಿ ಪಾರಿವಾಳಕ್ಕೆ ತಾನು ಕೊಟ್ಟ ಅಭಯ ವಚನದ ರಕ್ಷಣೆಗಾಗಿ ತನ್ನ ಮೈಯ ಮಾಂಸವನ್ನೆ ಗಿಡುಗಕ್ಕೆ ಕೊಟ್ಟಿದ್ದಾನೆ. ಅಲರ್ಕನೆಂಬ ರಾಜರ್ಷಿ ಅಂಧನಾದ ಬ್ರಾಹ್ಮಣನಿಗೆ ಬೇಕಾದ ವರ ನೀಡುವ ಪ್ರತಿಜ್ಞೆ ಮಾಡಿ, ಅದರ ಪಾಲನೆಗಾಗಿ, ಎರಡು ಕಣ್ಣುಗಳನ್ನಿತ್ತು ಉತ್ತಮ-ಗತಿಯನ್ನು ಪಡೆದಿದ್ದಾನೆ.'

ಇಂದ್ರ ಅಗ್ನಿಗಳು ಶಿಬಿ ಚಕ್ರವರ್ತಿಯ ಔದಾರ್ಯ ಪರೀಕ್ಷೆಗಾಗಿ (ವನಪರ್ವ. ಅ.197ರಲ್ಲಿ) ಗಿಡುಗ ಪಾರಿವಾಳಗಳಾಗಿ ಬಂದರು. ಗಿಡುಗದಿಂದ ತನಗೆ ರಕ್ಷಣೆ ನೀಡೆಂದು ಪಾರಿವಾಳ ಕೇಳಿಕೊಂಡಾಗ ಶಿಬಿ ಅಭಯ ನೀಡಿದ. 'ಪಾರಿವಾಳ ನನ್ನ ಆಹಾರ!' ಎಂದಿತು ಗಿಡುಗ. 'ಅದರ ಬದಲಿಗೆ ಬೇರೆ ಮಾಂಸ ಕೊಡುವೆನು' ಎಂದ ರಾಜ. 'ಬೇರೆ ಮಾಂಸ ನನಗೆ ಬೇಡ, ನಿನ್ನ ಮೈಮಾಂಸ ವನ್ನೆ ಕೊಡೆಂ'ದಾಗ ತನ್ನ ಮೈಮಾಂಸವೆಲ್ಲವನ್ನೂ ಕೊಟ್ಟ. ಈ ಶಿಬಿ ಅಲರ್ಕರಾಜರ ಉಲ್ಲೇಖ ಇಲ್ಲಿ ಮುಂದೆ (14.4,5)ಯೂ ಬರುತ್ತದೆ. ಇವರಿಬ್ಬರೂ ದಶರಥರಾಜನ ವಂಶದಲ್ಲಿಯೇ ಬಂದ ಪೂರ್ವಜರು. ಅವರಂತೇ ನೀನು ಸತ್ಯಪ್ರತಿಜ್ಞನೆನಿಸು ಎನ್ನುತ್ತಾಳೆ ಕೈಕೇಯಿ.

ಸಾಗರಃ ಸಮಯಂ ಕೃತ್ವಾ ನ ವೇಲಾಮತಿವರ್ತತೇ ।
ಸಮಯಂ ಮಾನೃತಂ ಕಾರ್ಷೀಃ ಪೂರ್ವವೃತ್ತಮನುಸ್ಮರನ್ ॥೪೪॥

'ಸಮುದ್ರರಾಜನು ದೇವತೆಗಳ ಅಪೇಕ್ಷೆಯಂತೆ 'ಸಮುದ್ರತೀರವನ್ನು ಉಲ್ಲಂಘಿಸಲಾರೆ' ಎಂದು ಪ್ರತಿಜ್ಞೆಮಾಡಿ, ಇಂದಿಗೂ ತೀರವನ್ನು ಮೀರುವುದಿಲ್ಲ. ಇಂಥ ಪೂರ್ವಜರ ಚರಿತ್ರೆಯನ್ನು ನೆನಪಿಗೆ ತಂದುಕೊಳ್ಳು. ಕೊಟ್ಟಮಾತನ್ನು ಸುಳ್ಳಾಗಿಸಬೇಡ.'

ಸ ತ್ವಂ ಧರ್ಮಂ ಪರಿತ್ಯಜ್ಯ ರಾಮಂ ರಾಜ್ಯೇಽಭಿಷಿಚ್ಯ ಚ ।
ಸಹ ಕೌಸಲ್ಯಯಾ ನಿತ್ಯಂ ರಂತುಮಿಚ್ಛಸಿ ದುರ್ಮತೇ ॥೪೫॥

'ದುರ್ಬುದ್ಧಿಯವನೆ, ನೀನು ಈಗ ಪ್ರತಿಜ್ಞಾಪಾಲನ ಧರ್ಮವನ್ನು ತ್ಯಜಿಸಿ, ರಾಮನನ್ನು ರಾಜ್ಯದಲ್ಲಿ ಅಭಿಷೇಕಮಾಡಿ, ಕೌಸಲ್ಯೆಯೊಂದಿಗೆ ಸದಾ ರಮಿಸಲು ಬಯಸುವಿ.'

ಭವತ್ವಧರ್ಮೋ ಧರ್ಮೋ ವಾ ಸತ್ಯಂ ವಾ ಯದಿ ವಾನೃತಮ್ ।
ಯತ್ತ್ವಯಾ ಸಂಶ್ರುತಂ ಮಹ್ಯಂ ತಸ್ಯ ನಾಸ್ತಿ ವ್ಯತಿಕ್ರಮಃ ॥೪೬॥

'ಸ್ತ್ರೀಗೆ ಕೊಟ್ಟ ಮಾತನ್ನು ನಡೆಸದಿದ್ದರೆ ಅಧರ್ಮವಾಗುವುದಿಲ್ಲ. ರಾಮಾಭಿಷೇಕ ಮಾಡದಿದ್ದರೆ ಅಧರ್ಮವಾಗುವುದು' ಎಂದು ನನಗೆ ಸಮಾಧಾನ ಹೇಳಬೇಡ. ಧರ್ಮವಾಗಲಿ ಅಧರ್ಮವಾಗಲಿ, ಸತ್ಯವಾಗಲಿ ಅಸತ್ಯವಾಗಲಿ, ನೀನು ನನಗೆ ಈಗ ಮಾಡಿದ ಪ್ರತಿಜ್ಞೆಯನ್ನು ನೀನು ಮುರಿಯುವಂತಿಲ್ಲ.

ಅಹಂ ಹಿ ವಿಷಮದ್ಯೈವ ಪೀತ್ವಾ ಬಹು ತವಾಗ್ರತಃ ।
ಪಶ್ಯತಸ್ತೇ ಮರಿಷ್ಯಾಮಿ ರಾಮೋ ಯದ್ಯಭಿಷಿಚ್ಯತೇ ॥೪೭॥

'ನಾನು ಈಗಲೆ ನಿನ್ನ ಮುಂದೆಯೇ ಬಹಳ ವಿಷಪಾನ ಮಾಡಿ ನೀನು ನೋಡುತ್ತಿರುವಂತೆಯೇ ಸಾಯುವೆ, ರಾಮನಿಗೆ ಅಭಿಷೇಕವಾದರೆ.'

ಏಕಾಹಮಪಿ ಪಶ್ಯೇಯಂ ಯದ್ಯಹಂ ರಾಮಮಾತರಮ್ ।
ಅಂಜಲಿಂ ಪ್ರತಿಗೃಹ್ಣಂತೀಂ ಶ್ರೇಯೋ ನನು ಮೃತಿರ್ಮಮ ॥೪೮॥

'ಒಂದು ದಿನವಾದರೂ ಪ್ರಜೆಗಳು ರಾಮಮಾತೆಗೆ ಕೈಮುಗಿಯುವುದನ್ನು ಅವಳು ಅದನ್ನು ಸ್ವೀಕರಿಸುವುದನ್ನು ನಾನು ಕಂಡೆನೆಂದರೆ ಆಗ ನನಗೆ ಮರಣವೆ ಲೇಸು.'

ಭರತೇನಾತ್ಮನಾ ಚಾಹಂ ಶಪೇ ತೇ ಮನುಜಾಧಿಪ ।
ಯಥಾ ನಾನ್ಯೇನ ತುಷ್ಯೇಯಮೃತೇ ರಾಮವಿವಾಸನಾತ್ ॥೪೯॥

'ರಾಜನೆ, ಭರತನ ಮೇಲೂ ನನ್ನ ಮೇಲೂ ಆಣೆ ಇಟ್ಟು ಹೇಳುತ್ತೇನೆ. ರಾಮ–ನನ್ನು ಕಾಡಿಗೆ ಕಳಿಸುವುದಕ್ಕಿಂತ ಬೇರೆ ಯಾವುದರಿಂದಲೂ ನಾನು ತೃಪ್ತಿಪಡಲಾರೆ.'

ಏತಾವದುಕ್ತ್ವಾ ವಚನಂ ಕೈಕೇಯೀ ವಿರರಾಮ ಹ ।
ವಿಲಪಂತಂ ಚ ರಾಜಾನಂ ನ ಪ್ರತಿವ್ಯಾಜಹಾರ ಸಾ ॥೫೦॥

ಇಷ್ಟು ಹೇಳಿ ಕೈಕೇಯಿ ಸುಮ್ಮನಾದಳು. ರಾಜ ಎಷ್ಟು ವಿಲಾಪ ಮಾಡಿದರೂ ಅವಳು ಪ್ರತಿಯಾಗಿ ಮಾತನಾಡಲಿಲ್ಲ.

ಶ್ರುತ್ವಾ ಚ ರಾಜಾ ಕೈಕೇಯ್ಯಾ ವಾಕ್ಯಂ ಪರಮದಾರುಣಮ್ ।
ರಾಮಸ್ಯ ಚ ವನೇ ವಾಸಮೈಶ್ವರ್ಯಂ ಭರತಸ್ಯ ಚ ॥೫೧॥

ನಾಭ್ಯಭಾಷತ ಕೈಕೇಯೀಂ ಮುಹೂರ್ತಂ ವ್ಯಾಕುಲೇಂದ್ರಿಯಃ ।
ಪ್ರೈಕ್ಷತಾನಿಮಿಷೋ ದೇವೀಂ ಪ್ರಿಯಾಮಪ್ರಿಯವಾದಿನೀಮ್ ॥೫೨॥

'ರಾಮನಿಗೆ ವನವಾಸವಾಗಬೇಕು. ಭರತನಿಗೆ ರಾಜ್ಯೈಶ್ವರ್ಯ ಸಿಗಬೇಕು' ಎನ್ನುವ ಕೈಕೇಯಿಯ ಅತ್ಯಂತ ಕ್ರೂರವಾದ ಮಾತನ್ನು ಕೇಳಿ ರಾಜನು ತನ್ನ ಎಲ್ಲ ಇಂದ್ರಿಯಗಳು ವ್ಯಾಕುಲಗೊಂಡಿದ್ದರಿಂದ, ಒಂದು ಮುಹೂರ್ತಕಾಲ, ಪ್ರಿಯೆ-ಯಾದ ರಾಣಿ ಅಪ್ರಿಯವಾಗಿ ನುಡಿಯುತ್ತಿರುವನ್ನು ಕಣ್ಣು ಮಿಟುಕಿಸದೆ ನೋಡಿದ. ಏನೂ ಮಾತನಾಡಲಿಲ್ಲ.

ತಾಂ ಹಿ ವಜ್ರಸಮಾಂ ವಾಚಮಾಕರ್ಣ್ಯ ಹೃದಯಚ್ಛಿದಮ್ ।
ದುಃಖಶೋಕಮಯೀಂ ಘೋರಾಂ ರಾಜಾ ನ ಸುಖಿತೋಽಭವತ್ ॥೫೩॥

ಹೃದಯವಿದಾರಕವಾದ ಸಿಡಿಲಿನಂತಿದ್ದ, ದುಃಖ ಶೋಕಮಯವಾದ, ಘೋರ-ವಾದ ಆ ಮಾತನ್ನು ಕೇಳಿದ ಮೇಲೆ ರಾಜನಿಗೆ ಯಾವುದರಲ್ಲಿಯು ಸುಖವಿಲ್ಲ-ವಾಯಿತು.

ಸ ದೇವ್ಯಾ ವ್ಯವಸಾಯಂ ಚ ಘೋರಂ ಚ ಶಪಥಂ ಕೃತಮ್ ।
ಧ್ಯಾತ್ವಾ ರಾಮೇತಿ ನಿಶ್ವಸ್ಯ ಛಿನ್ನಸ್ತರುರಿವಾಪತತ್ ॥೫೪॥

ದೇವಿಯು ಗೈದ ಘೋರವಾದ ನಿಶ್ಚಯವನ್ನೂ ಶಪಥವನ್ನೂ ಆಲೋಚಿಸಿ 'ರಾಮ!' ಎಂದು ನಿಟ್ಟುಸಿರಿಟ್ಟು 'ಕಡಿದುಬಿದ್ದ ಮರದಂತೆ' ರಾಜ ನೆಲದ ಮೇಲೆ ಬಿದ್ದ.

ನಷ್ಟಚೇತ್ತೋ ಯಥೋನ್ಮತ್ತೋ ವಿಪರೀತೋ ಯಥಾತುರಃ ।
ಹೃತತೇಜಾ ಯಥಾ ಸರ್ಪೋ ಬಭೂವ ಜಗತೀಪತಿಃ ॥೫೫॥

ಮನೋವ್ಯಾಧಿಯಿಂದ ಬಳಲುವನಂತೇ, ಹುಚ್ಚನಂತೇ, ಸನ್ನಿಪಾತ ಪೀಡಿತ ನಂತೇ, ಮಂತ್ರದಿಂದ ಶಕ್ತಿಗುಂದಿದ ಹಾವಿನಂತೆಯೇ, ಆದನು ರಾಜ.

ದೀನಯಾ ತು ಗಿರಾ ರಾಜಾ ಇತಿ ಹೋವಾಚ ಕೈಕಯೀಮ್ ।
ಅನರ್ಥಮಿಮಮರ್ಥಾಭಂ ಕೇನ ತ್ವಮುಪದರ್ಶಿತಾ ॥೫೬॥

ವಿನಮ್ರವಾದ ಮಾತಿನಿಂದ ರಾಜ ಕೈಕೇಯಿಗೆ ನುಡಿದ— 'ಅರ್ಥ ಲಾಭ-ದಾಯಕವಾಗಿ ಕಾಣುವ ಅನರ್ಥಕರವಾದ ಈ ವರವನ್ನು ಕೇಳಲು ನಿನಗೆ ಯಾರು ಉಪದೇಶಿಸಿದರು?'

ಭೂತೋಪಹತಚಿತ್ತೇವ ಬ್ರುವಂತೀ ಮಾಂ ನ ಲಜ್ಜಸೇ ।
ಶೀಲವ್ಯಸನಮೇತತ್ತೇ ನಾಭಿಜಾನಾಮ್ಯಹಂ ಪುರಾ ॥೫೭॥

'ಭೂತಾವೇಶದಿಂದ ಬುದ್ಧಿಕೆಟ್ಟವರಂತೆ ನನ್ನ ಮುಂದೆ ಮಾತನಾಡಲು ನಿನಗೆ ಲಜ್ಜೆಯಾಗುವುದಿಲ್ಲವೆ? ಹಿಂದೆ ಎಂದೂ ನೀನು ಹೀಗೆ ಶೀಲಗೆಟ್ಟು ವರ್ತಿಸಿದ್ದು ನನಗೆ ನೆನಪಿಲ್ಲ. ನಿನ್ನಲ್ಲಿ ಒಳ್ಳೆಯ ಶೀಲವಿತ್ತು.

ಬಾಲಾಯಾಸ್ತತ್ತಿ ತ್ವದಾನೀಂ ತೇ ಲಕ್ಷಯೇ ವಿಪರೀತವತ್ ।
ಕುತೋ ವಾ ತೇ ಭಯಂ ಜಾತಂ ಯಾ ತ್ವಮೇವಂವಿಧಂ ವರಮ್ ॥೫೮॥

ರಾಷ್ಟ್ರೇ ಭರತಮಾಸೀನಂ ವೃಣೀಷೇ ರಾಘವಂ ವನೇ ।
ವಿರಮೈತೇನ ಭಾವೇನ ತ್ವಮೇತೇನಾನೃತೇನ ವಾ ॥೫೯॥

'ಬಾಲೆಯಾದ ನಿನ್ನಲ್ಲಿ ಆಗ ಇದ್ದ ಒಳ್ಳೆಯ ಶೀಲ ಈಗ ಕೆಟ್ಟು ವಿಪರೀತ-ವಾಗಿರುವುದನ್ನು ಕಾಣುತ್ತಿದ್ದೇನೆ. ಯಾರಿಂದ ನಿನಗೆ ಭಯ ಉಂಟಾಗಿದೆ? 'ರಾಜ್ಯದಲ್ಲಿ ಭರತ ಕುಳ್ಳಿರಬೇಕು, ರಾಮ ವನವಾಸದಲ್ಲಿರಬೇಕು,' ಎಂದು ಇಂಥ ವರನ್ನು ಕೇಳುತ್ತಿರುವೆ! ಈ ಭಾವನೆಯನ್ನು ಬಿಡು. ಸುಳ್ಳು, ರಾಮ ಭಯವನ್ನು ಬಿಟ್ಟು ಬಿಡು.'

ಯದಿ ಭರ್ತುಃ ಪ್ರಿಯಂ ಕಾರ್ಯಂ ಲೋಕಸ್ಯ ಭರತಸ್ಯ ಚ ।
ನೃಶಂಸೇ ಪಾಪಸಂಕಲ್ಪೇ ಕ್ಷುದ್ರೇ ದುಷ್ಕೃತಕಾರಿಣಿ ॥೬೦॥

ಕ್ರೂರಿ, ದುಷ್ಟ ಸಂಕಲ್ಪದವಳು, ಕ್ಷುದ್ರಳು, ದುಷ್ಕರ್ಮ ಮಾಡಲು ಹೊರಟವಳು ಇಂಥ ಕೈಕೇಯಿಯೇ! ಪತಿಗೆ, ಲೋಕಕ್ಕೆ ಮತ್ತು ಭರತನಿಗೂ ಕೂಡ ಪ್ರಿಯ-ವನ್ನುಂಟು ಮಾಡಬೇಕೆಂದರೆ ನೀನು ನಿನ್ನ ಈ ದುಷ್ಟಭಾವನೆಯನ್ನು ಬಿಟ್ಟುಬಿಡು.'

ಕಿಂ ನು ದುಃಖಮಲೀಕಂ ವಾ ಮಯಿ ರಾಮೇ ಚ ಪಶ್ಯಸಿ ।
ನ ಕಥಂಚಿದೃತೇ ರಾಮಾತ್ ಭರತೋ ರಾಜ್ಯಮಾವಸೇತ್ ।
ರಾಮಾದಪಿ ಹಿ ತಂ ಮನ್ಯೇ ಧರ್ಮತೋ ಬಲವತ್ತರಮ್ ॥೬೧॥

ದುಃಖಕರವಾದ ಅಪರಾಧವನ್ನು ನನ್ನಲ್ಲಿ ಅಥವಾ ರಾಮನಲ್ಲಿ ನೀನೇನು ಕಂಡಿರುವೆ? ಭರತನೂ ಕೂಡ, ರಾಮನಿಲ್ಲದಿದ್ದರೆ, ರಾಜ್ಯದಲ್ಲಿ ತಾನು ಇರಲಾರ. ಏಕೆಂದರೆ— ಧರ್ಮವಿಷಯದಲ್ಲಿ ರಾಮನಿಗಿಂತಲೂ ಭರತ ಮೇಲೆಂದು ನಾನು ಭಾವಿಸುತ್ತೇನೆ.'

ಕಥಂ ದ್ರಕ್ಷ್ಯಾಮಿ ರಾಮಸ್ಯ ವನಂ ಗಚ್ಛೇತಿ ಭಾಷಿತೇ ।
ಮುಖವರ್ಣಂ ವಿವರ್ಣಂ ತಂ ಯಥೈವೇಂದುಮುಪಪ್ಲುತಮ್ ॥೬೨॥

'ಮಗು, ನೀನು ಕಾಡಿಗೆ ಹೋಗು' ಎಂದು 'ರಾಮಸ್ಯ' ರಾಮನಿಗೆ ನಾನು ಹೇಳುವಾಗ ನನ್ನ ಮುಖವರ್ಣವೇ ರಾಹುಗ್ರಸ್ತವಾದ ಚಂದ್ರನಂತೆ, ವಿಪರೀತ ವರ್ಣವಾಗುವು ದನ್ನು ಕನ್ನಡಿಯಲ್ಲಿ ನಾನು ಹೇಗೆ ಕಾಣಲಿ?'

ತಾಂ ಹಿ ಮೇ ಸುಕೃತಾಂ ಬುದ್ಧಿಂ ಸುಹೃದ್ಭಿಃ ಸಹ ನಿಶ್ಚಿತಾಮ್ ।
ಕಥಂ ದ್ರಕ್ಷ್ಯಾಮ್ಯಪಾವೃತ್ತಾಂ ಪರೈರಿವ ಹತಾಂ ಚಮೂಮ್ ॥೬೩॥

'ರಾಮಾಭಿಷೇಕ ಮಾಡಬೇಕೆಂದು ಬಂಧುಮಿತ್ರರಿಂದ ಕೂಡಿ ನಾನು ಚೆನ್ನಾಗಿ ಆಲೋಚಿಸಿ ಕೈಗೊಂಡ ಒಂದು ನಿಶ್ಚಿತವಾದ ಸಂಕಲ್ಪವೇ ಈಗ ಕಾರ್ಯರೂಪಕ್ಕೆ ಬಾರದೆ, ಶತ್ರುಗಳಿಂದ ಹಿಮ್ಮೆಟ್ಟಿಸಲ್ಪಟ್ಟ ನನ್ನ ಸೇನೆಯಂತೆ ಹಿಮ್ಮೆಟ್ಟುವುದನ್ನು ನಾನು ಹೇಗೆ ನೋಡಲಿ?'

ಕಿಂ ಮಾಂ ವಕ್ಷ್ಯಂತಿ ರಾಜಾನೋ ನಾನಾದಿಗ್ಭ್ಯಃ ಸಮಾಗತಾಃ ।
ಬಾಲೋ ಬತಾಯಮೈಕ್ಷ್ವಾಕಶ್ಚಿರಂ ರಾಜ್ಯಮಕಾರಯತ್ ॥೬೪॥

'ನಾನಾ ದಿಕ್ಕುಗಳಿಂದ ಬಂದ ರಾಜರು ಏನು ಹೇಳುವರು? 'ಅಯ್ಯೋ! ಮುಗ್ಧ ಬಾಲಕನು ಈತ, ಇಕ್ಷ್ವಾಕು ಕುಲದಲ್ಲಿ ಬಂದವನು, ಬಹುಕಾಲ ರಾಜ್ಯವಾಳಿದ!' ಎಂದು ತಾನೆ?'

ಯದಾ ತು ಬಹವೋ ವೃದ್ಧಾ ಗುಣವಂತೋ ಬಹುಶ್ರುತಾಃ ।
ಪರಿಪ್ರಕ್ಷ್ಯಂತಿ ಕಾಕುತ್ಸ್ಥಂ ವಕ್ಷ್ಯಾಮಿ ಕಿಮಹಂ ತದಾ ॥೬೫॥

'ಬಹುಸಂಖ್ಯೆಯಲ್ಲಿ ಬಂದ ವೃದ್ಧರು ಗುಣವಂತರು ಬಹುವಿದ್ಯಾವಂತರು ರಾಜರು ಈ ಕಾಕುತ್ಸ್ಥ ದಶರಥನನ್ನು ನಾನಾರೀತಿ ಪ್ರಶ್ನೆ ಮಾಡುವರು, 'ರಾಮನೆಲ್ಲಿ, ಅವನಿಗೆ ಅಭಿಷೇಕ ಏಕಿಲ್ಲ?' ಎಂದು ಮುಂತಾಗಿ. ಆಗ ಅವರಿಗೆ ನಾನೇನು ಉತ್ತರಿಸುವೆ?'

ಕೈಕೇಯ್ಯಾ ಕ್ಲಿಶ್ಯಮಾನೇನ ಪುತ್ರಃ ಪ್ರವ್ರಾಜಿತೋ ಮಯಾ ।
ಯದಿ ಸತ್ಯಂ ಬ್ರವೀಮ್ಯೇತತ್ತದಸತ್ಯಂ ಭವಿಷ್ಯತಿ ॥೬೬॥

'ಕೈಕೇಯಿಯ ಹಿಂಸೆಯನ್ನು ತಾಳಲಾರದೆ ನಾನು ಮಗನನ್ನು ಕಾಡಿಗೆ ಕಳಿಸಿದೆ

ಇದು ಸತ್ಯ' ಎಂದು ನಾನೆಷ್ಟು ಹೇಳಿದರೂ ಅದು ಅಸತ್ಯವೇ ಆಗುವುದು. ಸ್ತ್ರೀವ್ಯಾಮೋಹದಿಂದ ನಾನು ಕೈಕೇಯಿ ಹೇಳಿದಂತೆ ರಾಮನನ್ನು ಕಾಡಿಗೆ ಕಳಿಸಿದೆ–ನೆಂದೇ ಜನರು ತಿಳಿಯುತ್ತಾರೆ.'

ಕಿಂ ಮಾಂ ವಕ್ಷ್ಯತಿ ಕೌಸಲ್ಯಾ ರಾಘವೇ ವನಮಾಸ್ಥಿತೇ ॥೬೭॥

'ರಾಮ ವನವಾಸಕ್ಕೆ ಹೋದರೆ ಕೌಸಲ್ಯೆ ನನ್ನನ್ನು ಏನೆಂದು ಆಕ್ಷೇಪಿಸಿ ಯಾಳು?' ನಾನೇನು ತಪ್ಪು ಮಾಡಿದೆ? ನನ್ನ ಮಗನೇನು ತಪ್ಪು ಮಾಡಿದ್ದಾನೆ? ಎಂದು ಕೇಳುತ್ತಾಳೆ ತಾನೆ?

ಕಿಂ ಚೈನಾಂ ಪ್ರತಿವಕ್ಷ್ಯಾಮಿ ಕೃತ್ವಾ ವಿಪ್ರಿಯಮೀದೃಶಮ್ ॥೬೮॥

'ಆಗ ಇಂಥ ಅಪ್ರಿಯವಾದ ಕೃತ್ಯವೆಸಗಿ ನಾನೇನು ಅವಳಿಗೆ ಉತ್ತರ ಕೊಡಲಿ?'

ಯದಾ ಯದಾ ಚ ಕೌಸಲ್ಯಾ ದಾಸೀವಚ್ಚ ಸಖೀವ ಚ ।
ಭಾರ್ಯಾವದ್ಭಗಿನೀವಚ್ಚ ಮಾತೃವಚ್ಚೋಪತಿಷ್ಠತಿ ।
ಸತತಂ ಪ್ರಿಯಕಾಮಾ ಮೇ ಪ್ರಿಯಪುತ್ರಾ ಪ್ರಿಯಂವದಾ ॥೬೯॥

'ಕೌಸಲ್ಯೆ ನನಗೆ ಪ್ರಣಯ ವ್ಯವಹಾರಗಳಲ್ಲಿ ದಾಸಿಯಂತೆ, ಪಗಡೆಯಾಡು–ವುದರಲ್ಲಿ ಗೆಳತಿಯಂತೆ, ಧರ್ಮಾನುಷ್ಠಾನದಲ್ಲಿ ಭಾರ್ಯೆಯಂತೆ, ಬೇರೊಬ್ಬಳನ್ನು ವಿವಾಹವಾಗುವಾಗ ಸೋದರಿಯಂತೆ, ಶರೀರಪೋಷಣಾದಿ ವಿಷಯದಲ್ಲಿ ಮಾತೆ–ಯಂತೆ ಯಾವಾಗ ಯಾವಾಗ ನನ್ನ ಜೊತೆ ಇರುವಳೋ ಆವಾಗಲೆಲ್ಲ ಅವಳು ಸದಾ ನನಗೆ ಪ್ರಿಯವನ್ನೇ ಬಯಸುತ್ತಾಳೆ. ಪ್ರಿಯವನ್ನೇ ನುಡಿಯುತ್ತಾಳೆ, ಮಕ್ಕಳನ್ನು ಪ್ರೀತಿಯಿಂದಲೆ ಕಾಣುತ್ತಾಳೆ.'

ನ ಮಯಾ ಸತ್ಕೃತಾ ದೇವೀ ಸತ್ಕಾರಾರ್ಹಾ ಕೃತೇ ತವ ।
ಇದಾನೀಂ ತತ್ತಪತಿ ಮಾಂ ಯನ್ಮಯಾ ಸುಕೃತಂ ತ್ವಯಿ ।
ಅಪಥ್ಯವ್ಯಂಜನೋಪೇತಂ ಭುಕ್ತಮನ್ನಮಿವಾತುರಮ್ ॥೭೦॥

'ದೇವಿ ಕೌಸಲ್ಯೆ ನನ್ನಿಂದ ಹೆಚ್ಚು ಆದರ ಹೊಂದಲು ಯೋಗ್ಯಳು. ಆದರೆ ನಿನ್ನ ಮನಃಸಮಾಧಾನಕ್ಕಾಗಿ ಅವಳನ್ನು ಬಿಟ್ಟು ನಿನ್ನಲ್ಲಿಯೇ ಹೆಚ್ಚು ಆದರ ತೋರಿದೆ. ಅದು ಈಗ ನನ್ನಲ್ಲಿ ಪರಿತಾಪ ಉಂಟುಮಾಡುತ್ತಿದೆ. ಅಪಥ್ಯಪದಾರ್ಥದೊಂದಿಗೆ ಉಂಡ ಅನ್ನ ರೋಗಿಗೆ ಹೇಗೆ ಪರಿತಾಪ ಉಂಟುಮಾಡುವುದೊ ಹಾಗೆ.'

ಏಪ್ರಕಾರಂ ಚ ರಾಮಸ್ಯ ಸಂಪ್ರಯಾಣಂ ವನಸ್ಯ ಚ ।
ಸುಮಿತ್ರಾ ಪ್ರೇಕ್ಷ್ಯ ವೈ ಭೀತಾ ಕಥಂ ಮೇ ವಿಶ್ವಸಿಷ್ಯತಿ ॥೭೧॥

'ನಿನ್ನನ್ನು ಮೆಚ್ಚಿಸುವುದಕ್ಕಾಗಿ ನಾನು ರಾಮನ ಇಷ್ಟವನ್ನು ವಿರೋಧಿಸಿ ಕಾಡಿಗೆ ಕಳಿಸಿದ್ದನ್ನು ಸುಮಿತ್ರೆ ನೋಡಿದರೆ ಅವಳು ಭಯಪಟ್ಟು ನನ್ನಲ್ಲಿ ಹೇಗೆ ವಿಶ್ವಾಸ ಇರಿಸಿಕೊಂಡಾಳು?'

ಕೃಪಣಂ ಬತ ವೈದೇಹೀ ಶ್ರೋಷ್ಯತಿ ದ್ವಯಮಪ್ರಿಯಮ್।
ಮಾಂ ಚ ಪಂಚತ್ವಮಾಪನ್ನಂ ರಾಮಂ ಚ ವನಮಾಶ್ರಿತಮ್ ॥೭೨॥

'ಅಯ್ಯೋ ಕಷ್ಟವೆ! ಸೀತೆ ಇನ್ನು ಎರಡು ಅಪ್ರಿಯವಾರ್ತೆಗಳನ್ನು ಕೇಳ-ಬೇಕಾಗುತ್ತದೆ. ಒಂದು, ನಾನು ಮರಣ ಹೊಂದುವುದು, ಇನ್ನೊಂದು, ರಾಮ ವನವಾಸ ಮಾಡುವುದು.'

ವೈದೇಹೀ ಬತ ಮೇ ಪ್ರಾಣಾನ್ ಶೋಚಂತೀ ಕ್ಷಪಯಿಷ್ಯತಿ ।
ಹೀನಾ ಹಿಮವತಃ ಪಾರ್ಶ್ವೇ ಕಿಂನರೇಣೇವ ಕಿಂನರೀ ॥೭೩॥

'ಹಿಮಾಲಯದ ತಪ್ಪಲಲ್ಲಿ ಕಿನ್ನರನಿಂದ ವಿಯೋಗ ಹೊಂದಿದ ಕಿನ್ನರಿಯಂತೆ, ನನಗಾಗಿಯೂ ರಾಮನಿಗಾಗಿಯೂ ಶೋಕಿಸುತ್ತ ಸೀತೆ ತನ್ನ ಪ್ರಾಣಗಳನ್ನು ನಾಶ ಮಾಡಿಕೊಳ್ಳುತ್ತಾಳೆ.'

ನ ಹಿ ರಾಮಮಹಂ ದೃಷ್ಟ್ವಾ ಪ್ರವಸಂತಂ ಮಹಾವನೇ ।
ಚಿರಂ ಜೀವಿತುಮಾಶಂಸೇ ರುದಂತೀಂ ಚಾಪಿ ಮೈಥಿಲೀಮ್ ॥೭೪॥

'ಅತ್ತ ರಾಮನು ಮಹಾರಣ್ಯದಲ್ಲಿ ವಾಸ ಮಾಡುವುದನ್ನೂ ಇತ್ತ ಸೀತೆ ಕಣ್ಣೀರಿಡುವುದನ್ನೂ ನೋಡುತ್ತ ನಾನು ಹೆಚ್ಚುಕಾಲ ಬದುಕಲು ಆಶಿಸಲಾರೆ.

ಸಾ ನೂನಂ ವಿಧವಾ ರಾಜ್ಯಂ ಸಪುತ್ರಾ ಕಾರಯಿಷ್ಯಸಿ ॥೭೫॥

'ನೀನು ನಿಶ್ಚಯವಾಗಿ ವಿಧವೆಯಾಗಿ, ಮಗನೊಂದಿಗೆ ರಾಜ್ಯವಾಳುವಿ.'

ಸತೀಂ ತ್ವಾಮಹಮತ್ಯಂತಂ ವ್ಯವಸ್ಯಾಮ್ಯಸತೀಂ ಸತೀಮ್ ।
ರೂಪಿಣೀಂ ವಿಷಸಂಯುಕ್ತಾಂ ಪೀತ್ವೇವ ಮದಿರಾಂ ನರಃ ॥೭೬॥

'ನೋಡಲು ಇಷ್ಟವಾಗುವ ವಿಷಮಿಶ್ರಿತವಾದ ಮದ್ಯವನ್ನು ಮನುಷ್ಯನು ಕುಡಿದ ಬಳಿಕವೇ ಅದನ್ನು ವಿಷಮಿಶ್ರಿತವೆಂದು ತಿಳಿಯುತ್ತಾನೆ. ಹಾಗೇ ನೋಡಲು ಒಳ್ಳೆಯ-ವಳಾದ ನಿನ್ನನ್ನು ನಾನು ಈಗಲೆ ಅತ್ಯಂತ ದುಷ್ಟೆ ಎಂದು ತಿಳಿಯುತ್ತಿದ್ದೇನೆ.'

ಅನೃತೈರ್ಬತ ಮಾಂ ಸಾಂತ್ವೈಃ ಸಾಂತ್ವಯಂತೀ ಸ್ಮ ಭಾಷಸೇ ।
ಗೀತಶಬ್ದೇನ ಸಂರುಧ್ಯ ಲುಬ್ಧೋ ಮೃಗಮಿವಾವಧೀಃ ॥೭೭॥

'ಯಾರೂ ನನ್ನಲ್ಲಿ ಅಪರಾಧ ಮಾಡಿಲ್ಲ, ಯಾರೂ ನನ್ನನ್ನು ಅವಮಾನಿಸಲಿಲ್ಲ. ನನ್ನದೊಂದು ಕೋರಿಕೆ ಇದೆ' ಎಂದು ೧೧ನೇ ಸರ್ಗ ಪ್ರಾರಂಭದಲ್ಲಿ ಕೈಕೇಯಿ ಹೇಳಿದಂತೆ, ಅವಳು ಮಿದುನುಡಿಗಳಿಂದ ಸಂತೈಸುತ್ತ ದೊಡ್ಡ ವಂಚನೆ ಮಾಡಿದ್ದಳು. ಅದನ್ನು ದಶರಥ ಹೇಳುತ್ತಿದ್ದಾನೆ—

'ಅಯ್ಯೋ, ಬೇಡನು ಗೀತಧ್ವನಿಯಿಂದ ಜಿಂಕೆಯನ್ನು ಆಕರ್ಷಿಸಿ ಕೊಲ್ಲುವಂತೆ, ನೀನು ನನ್ನನ್ನು ಮಿದುವಾದ ಸುಳ್ಳು ಮಾತಿನಿಂದ ಸಂತೈಸುತ್ತಲೇ ನುಡಿದೆ, ಧರ್ಮಪಾಶದಲ್ಲಿ ಸಿಲುಕಿಸಿ ನನ್ನನ್ನು ಕೊಂದುಬಿಟ್ಟೆ.'

ಅನಾರ್ಯ ಇತಿ ಮಾಮಾರ್ಯಾಃ ಪುತ್ರವಿಕ್ರಯಿಣಂ ಧ್ರುವಮ್ ।
ಧಿಕ್ಕರಿಷ್ಯಂತಿ ರಥ್ಯಾಸು ಸುರಾಪಂ ಬ್ರಾಹ್ಮಣಂ ಯಥಾ ॥೭೮॥

'ಸುರಾಪಾನ ಮಾಡುವ ಬ್ರಾಹ್ಮಣನನ್ನು ಬೀದಿಗಳಲ್ಲಿ ಸಜ್ಜನರು ಧಿಕ್ಕರಿಸುವಂತೆ, ಮಗನನ್ನು ಬೆಲೆಯಾಗಿ ತೆತ್ತು ಸ್ತ್ರೀಸುಖವನ್ನು ಕೊಂಡುಕೊಳ್ಳುವ ದುಷ್ಟನು ನಾನೆಂದು ಸಜ್ಜನರು ನನ್ನನ್ನು ಧಿಕ್ಕರಿಸುವರು, ಸಂಶಯವಿಲ್ಲ.'

ಅಹೋ ದುಃಖಮಹೋ ಕೃಚ್ಛ್ರಂ ಯತ್ರ ವಾಚಃ ಕ್ಷಮೇ ತವ ।
ದುಃಖಮೇವಂವಿಧಂ ಪ್ರಾಪ್ತಂ ಪುರಾಕೃತಮಿವಾಶುಭಮ್ ॥೭೯॥

'ಅಯ್ಯೋ ಕಷ್ಟವೆ! ಅಯ್ಯೋ ಕಷ್ಟವೇ! ನಿನ್ನ ಈ ಮಾತುಗಳನ್ನು ನಾನು ಸಹಿಸಿ-ಕೊಳ್ಳಬೇಕಾಯಿತೆ? ನನ್ನ ಪೂರ್ವಾಜಿತ ದುಷ್ಕರ್ಮವೇ ಅವಶ್ಯ ಅನುಭವಿಸಲೇ-ಬೇಕಾದ ಈ ರೀತಿಯ ದುಃಖದರೂಪದಿಂದ ನನ್ನನ್ನು ಬೆನ್ನಟ್ಟಿ ಬಂದಿದೆ.'

ಚಿರಂ ಖಲು ಮಯಾ ಪಾಪೇ ತ್ವಂ ಪಾಪೇನಾಭಿರಕ್ಷಿತಾ ।
ಅಜ್ಞಾನಾದುಪಸಂಪನ್ನಾ ರಜ್ಜುರುದ್ಬಂಧಿನೀ ಯಥಾ ॥೮೦॥

'ಪಾಪಿಷ್ಠಳೆ, ಪಾಪಿ ನಾನು, ಬಹುಕಾಲದಿಂದ ನಿನ್ನನ್ನು ನನ್ನ ಬಳಿ ಜೋಪಾನ ವಾಗಿರಿಸಿಕೊಂಡೆ. ಅಜ್ಞಾನದಿಂದ ಸ್ವತಃ ನಾನೇ ಕುತ್ತಿಗೆಗೆ ಹಾಕಿಕೊಂಡ ನೇಣುಹಗ್ಗ-ದಂತೆ ನನಗೆ ಈಗ ನೀನು ಮೃತ್ಯು ಸ್ವರೂಪಳಾದೆ.'

ರಮಮಾಣಸ್ತ್ವಯಾ ಸಾರ್ಧಂ ಮೃತ್ಯುಂ ತ್ವಾಂ ನಾಭಿಲಕ್ಷಯೇ ।
ಬಾಲೋ ರಹಸಿ ಹಸ್ತೇನ ಕೃಷ್ಣಸರ್ಪಮಿವಾಸ್ಪೃಶಮ್ ॥೮೧॥

'ನಿನ್ನೊಡನೆ ರಮಿಸುವಾಗ ನೀನು ಮೃತ್ಯು ಎನ್ನುವುದನ್ನು ನಾನು ಗಮನಿಸಲೇ ಇಲ್ಲ. ಮುಗ್ಧಬಾಲಕನು ಕೈಯಿಂದ ಕೃಷ್ಣಸರ್ಪವನ್ನು ಹಿಡಿಯುವಂತೆ ಏಕಾಂತದಲ್ಲಿ ನಾನು ನಿನ್ನನ್ನು ಸ್ಪರ್ಶಿಸಿದೆ.

ಮಯಾ ಹ್ಯಪಿತೃಕಃ ಪುತ್ರಃ ಸ ಮಹಾತ್ಮಾ ದುರಾತ್ಮನಾ ।
ತಂ ತು ಮಾಂ ಜೀವಲೋಕೋಽಯಂ ನೂನಮಾಕ್ರೋಷ್ಟುಮರ್ಹತಿ ॥

'ಮಹಾತ್ಮನಾದ ಆ ಪುತ್ರ ರಾಮನನ್ನು ದುರಾತ್ಮನಾದ ನಾನು ಬದುಕಿದ್ದೂ ತಂದೆ ಇಲ್ಲದವನನ್ನಾಗಿ ಮಾಡಿದೆ. ಅಂಥ ನನ್ನನ್ನು ಈ ಜೀವಲೋಕ ನಿಶ್ಚಯವಾಗಿ ನಿಂದಿಸಲೇಬೇಕು.'

ಬಾಲಿಶೋ ಬತ ಕಾಮಾತ್ಮಾ ರಾಜಾ ದಶರಥೋ ಭೃಶಮ್ ।
ಸ್ತ್ರೀಕೃತೇ ಯಃ ಪ್ರಿಯಂ ಪುತ್ರಂ ವನಂ ಪ್ರಸ್ಥಾಪಯಿಷ್ಯತಿ ॥೮೩॥

'ಸ್ತ್ರೀಸುಖದ ಸಲುವಾಗಿ ಪುತ್ರನನ್ನು ಕಾಡಿಗೆ ಕಳಿಸುತ್ತಾನೆ ರಾಜಾ ದಶರಥ. ಬಹಳ ಕಾಮಿ, ಮೂರ್ಖ ಎಂದು.'

ಪುತ್ರವಿಯೋಗ ದುಃಖವನ್ನು ತಡೆದುಕೊಳ್ಳಲಾಗದೆ ರಾಜನಾಡುವ ಮಾತು ಇದು.

ವ್ರತೈಶ್ಚ ಬ್ರಹ್ಮಚರ್ಯೈಶ್ಚ ಗುರುಭಿಶ್ಚೋಪದರ್ಶಿತಃ ।
ಭೋಗಕಾಲೇ ಮಹತ್ಕಷ್ಟಂ ಪುನರೇವ ಪ್ರಪತ್ಸ್ಯತೇ ॥೮೪॥

'ಕಾಂಡವ್ರತ ಬ್ರಹ್ಮಚರ್ಯವ್ರತ ಗುರುಶುಷ್ರೂಷೆಗಳಿಂದ ಬಾಲ್ಯದಲ್ಲಿ ಪೂರ್ತಿ ಶರೀರದಂಡನೆ ಹೊಂದಿ ಈ ಯೌವನದ ಭೋಗಕಾಲದಲ್ಲಿಯೂ ಪುನಃ ವನವಾಸಾದಿ ಮಹಾಕ್ಲೇಶಗಳನ್ನು ರಾಮ ಹೊಂದುತ್ತಿದ್ದಾನೆ.'

ನಾಲಂ ದ್ವಿತೀಯಂ ವಚನಂ ಪುತ್ರೋ ಮಾಂ ಪ್ರತಿಭಾಷಿತುಮ್ ।
ಸ ವನಂ ಪ್ರವ್ರಜೇತ್ಯುಕ್ತೋ ಬಾಢಮಿತ್ಯೇವ ವಕ್ಷ್ಯತಿ ॥೮೫॥

'ಪುತ್ರರಾಮನು ನನಗೆ ಎರಡನೆ ಮಾತನ್ನೇ ಆಡುವವನಲ್ಲ. ಕಾಡಿಗೆ ಹೋಗೆಂದರೆ ಆಗಲಿ ಎಂದೇ ಹೇಳುತ್ತಾನೆ.'

ಯದಿ ಮೇ ರಾಘವಃ ಕುರ್ಯಾದ್ವನಂ ಗಚ್ಛೇತಿ ಭಾಷಿತಃ ।
ಪ್ರತಿಕೂಲಂ ಪ್ರಿಯಂ ಮೇ ಸ್ಯಾನ್ನ ತು ವತ್ಸಃ ಕರಿಷ್ಯತಿ ॥೮೬॥

'ಕಾಡಿಗೆ ಹೋಗೆಂದು ನಾನು ಆಜ್ಞೆಮಾಡಿದಾಗ ಪುತ್ರರಾಮನು ವಿರೋಧ ಮಾಡಿದರೇ ನನಗೆ ಅದು ಪ್ರಿಯವಾದೀತು. ಆದರೆ ಪುತ್ರನು ವಿರೋಧ ಮಾಡುವುದಿಲ್ಲ.'

'ಮಗನು ತನ್ನ ಮಾತನ್ನು ಕೇಳುವುದಿಲ್ಲ' ಎಂದು ತಂದೆ ಪರಿತಪಿಸುವುದು ಸಾಮಾನ್ಯ. ಆದರೆ ಇಲ್ಲಿ, 'ರಾಮ ತನ್ನ ಮಾತನ್ನು ಮೀರುವುದಿಲ್ಲ' ಎಂದು ಪರಿತಪಿಸುತ್ತಾನೆ, ದಶರಥ. 'ಮೀರಬೇಕೆಂ'ದು ಆಜ್ಞೆ ಮಾಡಿದರೂ ರಾಮ ಆ ಆಜ್ಞೆಯನ್ನು ಪಾಲಿಸುವುದಿಲ್ಲ. ಏಕೆ? ಏಕೆ ವನವಾಸಾಜ್ಞೆಯನ್ನೇ ಪಾಲಿಸುತ್ತಾನೆ? ಎಂದರೆ, ವನವಾಸಾಜ್ಞೆಯ ಪಾಲನೆಯಿಂದ ಶಾಶ್ವತ ಧರ್ಮಸಾಧನೆ ದಶರಥನಿಗೆ ಆಗುವುದು. ಅದು ರಾಮನಿಗೆ ಹೆಚ್ಚಿನ ಪಿತೃಸೇವೆ. ಆ ಆಜ್ಞೆಯನ್ನು ಮೀರಿದರೆ ದಶರಥನಿಗೆ ತಾತ್ಕಾಲಿಕವಾದ ಲೌಕಿಕ ಅರ್ಥಕಾಮ ಸಾಧನೆ. ರಾಮನ ಪಾಲಿಗೆ ಇದು ಅತ್ಯಲ್ಪವಾದ ಪಿತೃಸೇವೆಯಾದೀತು.

ಶುದ್ಧಭಾವೋ ಹಿ ಭಾವಂ ಮೇ ನ ತು ಜ್ಞಾಸ್ಯತಿ ರಾಘವಃ ।
ರಾಘವೇ ಹಿ ವನಂ ಪ್ರಾಪ್ತೇ ಸರ್ವಲೋಕಸ್ಯ ಧಿಕ್ಕೃತಮ್ ।
ಮೃತ್ಯುರಕ್ಷಮಣೀಯಂ ಮಾಂ ನಯಿಷ್ಯತಿ ಯಮಕ್ಷಯಮ್ ॥೮೭॥

'ಶುದ್ಧಹೃದಯನಾದ ರಾಮ ನನ್ನ ಮಾತಿನ ಆಂತರ್ಯವನ್ನು ಗ್ರಹಿಸಲು ಯತ್ನವನ್ನೇ ಮಾಡುವುದಿಲ್ಲ. ಕಾಡಿಗೆ ಹೋಗೆಂದರೆ ಹೋಗಿಯೇ ಹೋಗುತ್ತಾನೆ. ಅವನು ಹೋದರೆ ಸರ್ವಲೋಕದ ನಿಂದೆಗೆ ಗುರಿಯಾಗುವ ನನ್ನನ್ನು ಕ್ಷಮೆಗೆ ಯೋಗ್ಯನಲ್ಲದವನೆಂದು ಮೃತ್ಯುದೇವನು ಯಮಲೋಕಕ್ಕೇ ಒಯ್ಯುತ್ತಾನೆ.'

ಮೃತೇ ಮಯಿ ಗತೇ ರಾಮೇ ವನಂ ಮನುಜಪುಂಗವೇ ।
ಇಷ್ಟೇ ಮಮ ಜನೇ ಶೇಷೇ ಕಿಂ ಪಾಪಂ ಪ್ರತಿಪತ್ಸ್ಯಸೇ ॥೮೮॥

'ನಾನು ಸತ್ತಾಗ, ಪುರುಷೋತ್ತಮ ರಾಮನೂ ಕಾಡಿಗೆ ಹೋದಾಗ, ಇಲ್ಲಿ ಬದುಕಿ ಉಳಿಯುವ ನನ್ನ ಇಷ್ಟಜನರ ಮೇಲೆ ನೀನು ಇನ್ನೇನು ದೌರ್ಜನ್ಯ ವೆಸಗುವೆಯೋ!'

ಕೌಸಲ್ಯಾ ಮಾಂ ಚ ರಾಮಂ ಚ ಪುತ್ರೌ ಚ ಯದಿ ಹಾಸ್ಯತಿ ।
ದುಃಖಾನ್ಯಸಹತೀ ದೇವೀ ಮಾಮೇವಾನುಮರಿಷ್ಯತಿ ॥೮೯॥

'ಕೌಸಲ್ಯೆ ನಿನ್ನ ದೌರ್ಜನ್ಯದಿಂದ ನನ್ನನ್ನೂ, ರಾಮನನ್ನೂ, ಲಕ್ಷ್ಮಣ ಶತ್ರುಘ್ನರೆಂಬ ಇಬ್ಬರು ಮಕ್ಕಳನ್ನೂ ಕಳೆದುಕೊಂಡರೆ ಆ ದುಃಖವನ್ನು ತಡೆಯಲಾರದೆ ನನ್ನನ್ನೆ ಹಿಂಬಾಲಿಸಿ ಪರಲೋಕಕ್ಕೆ ಬರುವಳು.'

ಕೌಸಲ್ಯಾಂ ಚ ಸುಮಿತ್ರಾಂ ಚ ಮಾಂ ಚ ಪುತ್ರೈಸ್ತ್ರಿಭಿಃ ಸಹ ।
ಪ್ರಕ್ಷಿಪ್ಯ ನರಕೇ ಸಾ ತ್ವಂ ಕೈಕೇಯಿ ಸುಖಿತಾ ಭವ ॥೯೦॥

'ಕೌಸಲ್ಯೆಯನ್ನೂ ಸುಮಿತ್ರೆಯನ್ನೂ ನನ್ನನ್ನೂ ಮೂವರು ಮಕ್ಕಳೊಂದಿಗೆ ನರಕದುಃಖದಲ್ಲಿ ತಳ್ಳಿ ನೀನೊಬ್ಬಳೇ ಸುಖವಾಗಿರು.'

ಮಯಾ ರಾಮೇಣ ಚ ತ್ಯಕ್ತಂ ಶಾಶ್ವತಂ ಸತ್ಕೃತಂ ಗುಣೈಃ ।
ಇಕ್ಷ್ವಾಕುಕುಲಮಕ್ಷೋಭ್ಯಮಾಕುಲಂ ಪಾಲಯಿಷ್ಯಸಿ ॥೯೧॥

'ನಮ್ಮ ಇಕ್ಷ್ವಾಕುಕುಲವು ಶಾಶ್ವತ. ಸದ್ಗುಣಶಾಲಿ ರಾಜರು ಬೆಳೆಸಿದ್ದು. ಶತ್ರುಗಳಿಗೆ ಅಭೇದ್ಯ. ಇಂಥ ಕುಲವನ್ನು ನಾನೂ ರಾಮನೂ ತ್ಯಜಿಸಿ ಹೋದಾಗ ಅದನ್ನು ನೀನೇ ಚೆನ್ನಾಗಿ ಕಾಪಾಡುವೆಯಲ್ಲವೆ?'

ಪ್ರಿಯಂ ಚೇದ್ಭರತಸ್ಯೈತದ್ರಾಮಪ್ರವ್ರಾಜನಂ ಭವೇತ್ ।
ಮಾ ಸ್ಮ ಮೇ ಭರತಃ ಕಾರ್ಷೀತ್ ಪ್ರೇತಕೃತ್ಯಂ ಗತಾಯುಷಃ ॥೯೨॥

'ರಾಮನ ವನವಾಸ ಭರತನಿಗೆ ಇಷ್ಟವಾಗುವುದಾದರೆ ನಾನು ಸತ್ತಬಳಿಕ ಅವನು ನನ್ನ ಪ್ರೇತಕಾರ್ಯವನ್ನು ಮಾಡಬಾರದು.'

ಹಂತಾನಾರ್ಯೇ ಮಮಾಮಿತ್ರೇ ಸಕಾಮಾ ಭವ ಕೈಕಯಿ ।
ಮೃತೇ ಮಯಿ ಗತೇ ರಾಮೇ ವನಂ ಪುರುಷಪುಂಗವೇ ।
ಸೇದಾನೀಂ ವಿಧವಾ ರಾಜ್ಯಂ ಸಪುತ್ರಾ ಕಾರಯಿಷ್ಯಸಿ ॥೯೩॥

'ಕೆಟ್ಟವಳೆ, ನನ್ನ ವೈರಿಯೆ. ಕೈಕೇಯಿ! ನಿನ್ನಿಷ್ಟ ನೆರವೇರಲಿ! ನಾನು ಸತ್ತಾಗ,

ಪುರುಷೋತ್ತಮ ರಾಮನು ಕಾಡಿಗೆ ಹೋದಾಗ ನೀನು ವಿಧವೆಯಾಗಿ ಮಗನೊಂದಿಗೆ ರಾಜ್ಯವಾಳುವಿ.'

ತ್ವಂ ರಾಜಪುತ್ರೀವಾದೇನ ನ್ಯವಸೋ ಮಮ ವೇಶ್ಮನಿ ॥೯೪॥

'ನೀನು ರಾಜಕುಮಾರಿ ಎಂಬ ಹೆಸರಿನಿಂದ ನನ್ನ ಮನೆಯಲ್ಲಿ ವಾಸ ಮಾಡಿರುವೆ.'

ಅಕೀರ್ತಿಶ್ಚಾತುಲಾ ಲೋಕೇ ಧ್ರುವಃ ಪರಿಭವಶ್ಚ ಮೇ ।
ಸರ್ವಭೂತೇಷು ಚಾವಜ್ಞಾ ಯಥಾ ಪಾಪಕೃತಸ್ತಥಾ ॥೯೫॥

'ನಿನ್ನಿಂದಲೇ ನನಗೆ ಇನ್ನು ಲೋಕದಲ್ಲಿ ಎಣೆಯಿಲ್ಲದ ಅಪಕೀರ್ತಿ, ಶಾಶ್ವತವಾದ ತಿರಸ್ಕಾರ. ಎಲ್ಲ ಜನರ ನಡುವೆ ಅನಾದರ. ಪಾಪಿಗೆ ಬರುವಂಥ ಈ ಅನಿಷ್ಟಗಳು ಅಶುಭಳಾದ ನೀನು ನನ್ನ ಮನೆಯಲ್ಲಿ ವಾಸಮಾಡಿದ್ದರ ಫಲ.'

ಕಥಂ ರಥೈರ್ವಿಭುರ್ಯಾತ್ವಾ ಗಜಾಶ್ವೈಶ್ಚ ಮುಹುರ್ಮುಹುಃ ।
ಪದ್ಭ್ಯಾಂ ರಾಮೋ ಮಹಾರಣ್ಯೇ ವತ್ಸೋ ಮೇ ವಿಚರಿಷ್ಯತಿ ॥೯೬॥

'ನೀನು ಅಶುಭಳಲ್ಲದಿದ್ದರೆ, ರಥ ಆನೆ ಕುದುರೆ ವಾಹನಗಳಲ್ಲಿ ಪುನಃ ಪುನಃ ಮೆರವಣಿಗೆ ಮಾಡಿಸಿಕೊಳ್ಳುವ ರಾಮ ಈಗ ಹೇಗೆ ಗೊಂಡಾರಣ್ಯದಲ್ಲಿ ಕಾಲ್ನಡೆ–ಯಿಂದ ನಡೆಯುವಂತಾಯಿತು?'

ಯಸ್ಯ ತ್ವಾಹಾರಸಮಯೇ ಸೂದಾಃ ಕುಂಡಲಧಾರಿಣಃ ।
ಅಹಂಪೂರ್ವಾಃ ಪಚಂತಿ ಸ್ಮ ಪ್ರಶಸ್ತಂ ಪಾನಭೋಜನಮ್ ॥೯೭॥

ಸ ಕಥಂ ನು ಕಷಾಯಾಣಿ ತಿಕ್ತಾನಿ ಕಟುಕಾನಿ ಚ ।
ಭಕ್ಷಯನ್ ವನ್ಯಮಾಹಾರಂ ಸುತೋ ಮೇ ವರ್ತಯಿಷ್ಯತಿ ॥೯೮॥

'ಕುಂಡಲಧಾರಿಗಳಾದ ಪಾಚಕರು ರಾಮನ ಭೋಜನಕಾಲದಲ್ಲಿ ನಾ ಮುಂದು ತಾ ಮುಂದೆಂದು ಬಂದು ಪ್ರಶಸ್ತವಾದ ಪಾನಭೋಜನಗಳನ್ನು ಸಿದ್ಧಪಡಿಸುತ್ತಿದ್ದರು. ಅವನು ಈಗ ಕಾಡಿನಲ್ಲಿ ಸಿಗುವ ಒಗರು ಕಹಿ ತೀಕ್ಷ್ಣ ಪದಾರ್ಥಗಳನ್ನು ಉಂಡು ಬದುಕಿರಬೇಕಾಗಿದೆ. ಇದು ಹೇಗಾಯಿತು?'

ಮಹಾರ್ಹವಸ್ತ್ರಸಂವೀತೋ ಭೂತ್ವಾ ಚಿರಸುಖೋಷಿತಃ ।
ಕಾಷಾಯಪರಿಧಾನಸ್ತು ಕಥಂ ಭೂಮೌ ನಿವತ್ಸ್ಯತಿ ॥೯೯॥

'ಬಹು ಬೆಲೆಬಾಳುವ ಉಡುಗೆ ಧರಿಸಿ ಸದಾ ಸುಖಶಯ್ಯೆಯಲ್ಲಿ ಪವಡಿಸುವವನಾಗಿದ್ದ ರಾಮ ಇದೀಗ ಕಾವಿಬಟ್ಟೆಉಟ್ಟು ನೆಲದ ಮೇಲೆ ಹೇಗೆ ಮಲಗುವಂತಾಯಿತು?'

ಕಸ್ಯೈತದ್ದಾರುಣಂ ವಾಕ್ಯಮೇವಂವಿಧಮಚಿಂತಿತಮ್ ।
ರಾಮಸ್ಯಾರಣ್ಯಗಮನಂ ಭರತಸ್ಯಾಭಿಷೇಚನಮ್ ॥೧೦೦॥

'ರಾಮನಿಗೆ ವನವಾಸ, ಭರತನಿಗೆ ಅಭಿಷೇಕ' ಎಂಬ ಈ ರೀತಿಯ ಮಾತು ಬಲು ಕ್ರೂರ, ಯಾರಿಗೂ ಮನಸ್ಸಿನಲ್ಲೂ ಆಲೋಚಿಸಲಾಗದುದು, ಯಾರ ಬಾಯಲ್ಲಿ ಬಂದೀತು?'

ಧಿಗಸ್ತು ಯೋಷಿತೋ ನಾಮ ಶಠಾಃ ಸ್ವಾರ್ಥಪರಾಃ ಸದಾ ।
ನ ಬ್ರವೀಮಿ ಸ್ತ್ರಿಯಃ ಸರ್ವಾ ಭರತಸ್ಯೈವ ಮಾತರಮ್ ॥೧೦೧॥

'ಸ್ತ್ರೀಯರೆಂದರೇ ವಂಚಕರು ಸ್ವಾರ್ಥ ಪರಾಯಣರು, ಅವರಿಗೆ ಧಿಕ್ಕಾರವಿರಲಿ. ಇಲ್ಲ, ಇಲ್ಲ, ಎಲ್ಲ ಸ್ತ್ರೀಯರ ವಿಷಯದಲ್ಲಿ ನಾನು ಹೀಗೆ ಹೇಳುವುದಿಲ್ಲ. ಭರತನ ತಾಯಿ ಮಾತ್ರ ಹೀಗೆ ಎನ್ನುತ್ತೇನೆ.'

ಅನರ್ಥಭಾವೇಽರ್ಥಪರೇ ನೃಶಂಸೇ
ಮಮಾನುತಾಪಾಯ ನಿವೇಶಿತಾಸಿ ।
ಕಿಮಪ್ರಿಯಂ ಪಶ್ಯಸಿ ಮನ್ನಿಮಿತ್ತಂ
ಹಿತಾನುಕಾರಿಣ್ಯಥವಾಪಿ ರಾಮೇ ॥೧೦೨॥

'ಲೋಕಕ್ಕೆ ಅನರ್ಥವಾದರೆ ಆಗಲಿ, ತನಗೆ ತನ್ನ ಸ್ವಾರ್ಥ ಸಿದ್ಧಿಸಲೆಂಬ ಭಾವನೆ ಉಳ್ಳವಳೆ, ಕ್ರೂರ ಸ್ವಭಾವದವಳೆ, ನಿನ್ನನ್ನು ನಾನು ಮನೆಯಲ್ಲಿ ನನ್ನ ಅನುತಾಪಕ್ಕಾಗಿಯೇ ಇರಿಸಿಕೊಂಡಂತಾಯಿತು. ನನ್ನಿಂದ ನಿನಗೇನು ಕೆಡುಕಾದುದನ್ನು ನೀನು ಕಂಡೆ? ಲೋಕಕ್ಕೇ ಹಿತಕಾರಿಯಾದ ರಾಮನಲ್ಲಾದರೂ ಏನು ಕೆಡುಕನ್ನು ಕಂಡೆ?

ಪರಿತ್ಯಜೇಯುಃ ಪಿತರೋ ಹಿ ಪುತ್ರಾನ್
ಭಾರ್ಯಾಃ ಪತೀಂಶ್ಚಾಪಿ ಕೃತಾನುರಾಗಾಃ ।
ಕೃತ್ಸ್ನಂ ಹಿ ಸರ್ವಂ ಕುಪಿತಂ ಜಗತ್ ಸ್ಯಾತ್
ದೃಷ್ಟ್ವೈವ ರಾಮಂ ವ್ಯಸನೇ ನಿಮಗ್ನಮ್ ॥೧೦೩॥

'ರಾಮನು ವ್ಯಸನದಲ್ಲಿ ಮಗ್ನನಾದುದನ್ನು ಕಂಡೊಡನೆ ಜಗತ್ತಿನಲ್ಲಿ ಎಲ್ಲರೂ ಎಲ್ಲರಲ್ಲಿ ಪ್ರೀತಿಯನ್ನು ಮರೆತು ಕೋಪಿಸಿಕೊಳ್ಳಬಹುದು. ಪ್ರೀತಿಯ ತಂದೆತಾಯಿ-ಗಳು ಕುಪಿತರಾಗಿ ಮಕ್ಕಳನ್ನು, ಪ್ರೀತಿಯ ಮಕ್ಕಳು ಕುಪಿತರಾಗಿ ತಂದೆ ತಾಯಿಗಳನ್ನು ಪರಿತ್ಯಜಿಸಬಹುದು. ಪ್ರೀತಿಯ ಪತಿಗಳು ಭಾರ್ಯೆಯರನ್ನು, ಪ್ರೀತಿಯ ಭಾರ್ಯೆಯರು ಪತಿಗಳನ್ನು ತ್ಯಜಿಸಬಹುದು.'

ಅಹಂ ಪುನರ್ದೇವಕುಮಾರರೂಪ-
ಮಲಂಕೃತಂ ತಂ ಸುತಮಾವ್ರಜಂತಮ್ ।
ನಂದಾಮಿ ಪಶ್ಯನ್ನಪಿ ದರ್ಶನೇನ
ಭವಾಮಿ ದೃಷ್ಟ್ವೈವ ಪುನರ್ಯುವೇವ ॥೧೦೪॥

'ದೇವದೇವನ ಕುಮಾರನಾದ ಮನ್ಮಥನಂತೆ ಸುಂದರನಾದ ಪುತ್ರ ರಾಮನು ಅಲಂಕೃತನಾಗಿ ಬರುವುದನ್ನು ನೋಡಿದರೇ ಸಾಕು, ನಾನು ದರ್ಶನದಿಂದಲೇ ಆನಂದಿತನಾಗುತ್ತೇನೆ. ದರ್ಶನದಿಂದಲೇ ಪುನಃ ಯುವಕನಂತಾಗುತ್ತೇನೆ.'

ವಿನಾಪಿ ಸೂರ್ಯೇಣ ಭವೇತ್ ಪ್ರವೃತ್ತಿ-
ರವರ್ಷತಾ ವಜ್ರಧರೇಣ ವಾಪಿ ।
ರಾಮಂ ತು ಗಚ್ಛಂತಮಿತಃ ಸಮೀಕ್ಷ್ಯ
ಜೀವೇನ್ನ ಕಶ್ಚಿತ್ತ್ವಿತಿ ಚೇತನಾ ಮೇ ॥೧೦೫॥

'ಸೂರ್ಯನಿಲ್ಲದಿದ್ದರೂ ಇಂದ್ರನು ಮಳೆಗರೆಯದಿದ್ದರೂ ಜಗತ್ತು ಚೈತನ್ಯ-ಪೂರ್ಣವಾಗಿ ಇದ್ದೀತು. ರಾಮನು ಇಲ್ಲಿಂದ ಹೊರಟುಹೋಗುವುದನ್ನು ಕಂಡು ಯಾರೂ ಬದುಕಿರಲಾರರು ಎಂದು ನನಗೆ ಅನಿಸುತ್ತದೆ.'

ವಿನಾಶಕಾಮಾಮಹಿತಾಮಮಿತ್ರಾ-
ಮಾವಾಸಯಂ ಮೃತ್ಯುಮಿವಾತ್ಮನಸ್ತ್ವಮ್ ।
ಚಿರಂ ಬತಾಂಕೇನ ಧೃತಾಸಿ ಸರ್ಪೀ
ಮಹಾವಿಷಾ ತೇನ ಹತೋಽಸ್ಮಿ ಮೋಹಾತ್ ॥೧೦೬॥

'ನೀನು ನನಗೆ ಸರ್ವನಾಶಮಾಡಲು ಬಯಸುವವಳು ಅಹಿತಕರಳು, ಶತ್ರುರೂಪಳು. ನನಗೆ ಮೃತ್ಯುಸ್ವರೂಪಳಾಗಿರುವ ನಿನ್ನನ್ನು ನಾನು ಮನೆಯಲ್ಲಿ ಇರಿಸಿಕೊಂಡೆ. ಮಹಾವಿಷಉಳ್ಳ ಸರ್ಪದಂಥ ನಿನ್ನನ್ನು ಮೋಹದಿಂದ ಬಹುಕಾಲ ತೊಡೆಯಮೇಲಿರಿಸಿಕೊಂಡೆ, ಹತನಾದೆ.'

'ಬಹು ಬೆಲೆಬಾಳುವ ಉಡುಗೆ ಧರಿಸಿ ಸದಾ ಸುಖಶಯ್ಯೆಯಲ್ಲಿ ಪವಡಿಸುವವನಾಗಿದ್ದ ರಾಮ ಇದೀಗ ಕಾವಿಬಟ್ಟೆಯುಟ್ಟು ನೆಲದ ಮೇಲೆ ಹೇಗೆ ಮಲಗುವಂತಾಯಿತು?'

ಕಸ್ಯೈತದ್ದಾರುಣಂ ವಾಕ್ಯಮೇವಂವಿಧಮಚಿಂತಿತಮ್ ।
ರಾಮಸ್ಯಾರಣ್ಯಗಮನಂ ಭರತಸ್ಯಾಭಿಷೇಚನಮ್ ॥೧೦೦॥

'ರಾಮನಿಗೆ ವನವಾಸ, ಭರತನಿಗೆ ಅಭಿಷೇಕ' ಎಂಬ ಈ ರೀತಿಯ ಮಾತು ಬಲು ಕ್ರೂರ, ಯಾರಿಗೂ ಮನಸ್ಸಿನಲ್ಲೂ ಆಲೋಚಿಸಲಾಗದುದು, ಯಾರ ಬಾಯಲ್ಲಿ ಬಂದೀತು?'

ಧಿಗಸ್ತು ಯೋಷಿತೋ ನಾಮ ಶಠಾಃ ಸ್ವಾರ್ಥಪರಾಃ ಸದಾ ।
ನ ಬ್ರವೀಮಿ ಸ್ತ್ರಿಯಃ ಸರ್ವಾ ಭರತಸ್ಯೈವ ಮಾತರಮ್ ॥೧೦೧॥

'ಸ್ತ್ರೀಯರೆಂದರೇ ವಂಚಕರು ಸ್ವಾರ್ಥ ಪರಾಯಣರು, ಅವರಿಗೆ ಧಿಕ್ಕಾರವಿರಲಿ. ಇಲ್ಲ, ಇಲ್ಲ, ಎಲ್ಲ ಸ್ತ್ರೀಯರ ವಿಷಯದಲ್ಲಿ ನಾನು ಹೀಗೆ ಹೇಳುವುದಿಲ್ಲ. ಭರತನ ತಾಯಿ ಮಾತ್ರ ಹೀಗೆ ಎನ್ನುತ್ತೇನೆ.'

ಅನರ್ಥಭಾವೇಽರ್ಥಪರೇ ನೃಶಂಸೇ
ಮಮಾನುತಾಪಾಯ ನಿವೇಶಿತಾಸಿ ।
ಕಿಮಪ್ರಿಯಂ ಪಶ್ಯಸಿ ಮನ್ನಿಮಿತ್ತಂ
ಹಿತಾನುಕಾರಿಣ್ಯಥವಾಪಿ ರಾಮೇ ॥೧೦೨॥

'ಲೋಕಕ್ಕೆ ಅನರ್ಥವಾದರೆ ಆಗಲಿ, ತನಗೆ ತನ್ನ ಸ್ವಾರ್ಥ ಸಿದ್ಧಿಸಲೆಂಬ ಭಾವನೆ ಉಳ್ಳವಳೆ, ಕ್ರೂರ ಸ್ವಭಾವದವಳೆ, ನಿನ್ನನ್ನು ನಾನು ಮನೆಯಲ್ಲಿ ನನ್ನ ಅನುತಾಪಕ್ಕಾಗಿಯೇ ಇರಿಸಿಕೊಂಡಂತಾಯಿತು. ನನ್ನಿಂದ ನಿನಗೇನು ಕೆಡುಕಾದುದನ್ನು ನೀನು ಕಂಡೆ? ಲೋಕಕ್ಕೇ ಹಿತಕಾರಿಯಾದ ರಾಮನಲ್ಲಾದರೂ ಏನು ಕೆಡುಕನ್ನು ಕಂಡೆ?

ಪರಿತ್ಯಜೇಯುಃ ಪಿತರೋ ಹಿ ಪುತ್ರಾನ್
ಭಾರ್ಯಾಃ ಪತೀಂಶ್ಚಾಪಿ ಕೃತಾನುರಾಗಾಃ ।
ಕೃತ್ಸ್ನಂ ಹಿ ಸರ್ವಂ ಕುಪಿತಂ ಜಗತ್ ಸ್ಯಾತ್
ದೃಷ್ಟ್ವೈವ ರಾಮಂ ವ್ಯಸನೇ ನಿಮಗ್ನಮ್ ॥೧೦೩॥

'ರಾಮನು ವ್ಯಸನದಲ್ಲಿ ಮಗ್ನನಾದುದನ್ನು ಕಂಡೊಡನೆ ಜಗತ್ತಿನಲ್ಲಿ ಎಲ್ಲರೂ ಎಲ್ಲರಲ್ಲಿ ಪ್ರೀತಿಯನ್ನು ಮರೆತು ಕೋಪಿಸಿಕೊಳ್ಳಬಹುದು. ಪ್ರೀತಿಯ ತಂದೆತಾಯಿ-ಗಳು ಕುಪಿತರಾಗಿ ಮಕ್ಕಳನ್ನು, ಪ್ರೀತಿಯ ಮಕ್ಕಳು ಕುಪಿತರಾಗಿ ತಂದೆ ತಾಯಿಗಳನ್ನು ಪರಿತ್ಯಜಿಸಬಹುದು. ಪ್ರೀತಿಯ ಪತಿಗಳು ಭಾರ್ಯೆಯರನ್ನು, ಪ್ರೀತಿಯ ಭಾರ್ಯೆಯರು ಪತಿಗಳನ್ನು ತ್ಯಜಿಸಬಹುದು.'

ಅಹಂ ಪುನರ್ದೇವಕುಮಾರರೂಪ-
ಮಲಂಕೃತಂ ತಂ ಸುತಮಾವ್ರಜಂತಮ್ ।
ನಂದಾಮಿ ಪಶ್ಯನ್ನಪಿ ದರ್ಶನೇನ
ಭವಾಮಿ ದೃಷ್ಟ್ವೈವ ಪುನರ್ಯುವೇವ ॥೧೦೪॥

'ದೇವದೇವನ ಕುಮಾರನಾದ ಮನ್ಮಥನಂತೆ ಸುಂದರನಾದ ಪುತ್ರ ರಾಮನು ಅಲಂಕೃತನಾಗಿ ಬರುವುದನ್ನು ನೋಡಿದರೇ ಸಾಕು, ನಾನು ದರ್ಶನದಿಂದಲೇ ಆನಂದಿತನಾಗುತ್ತೇನೆ. ದರ್ಶನದಿಂದಲೇ ಪುನಃ ಯುವಕನಂತಾಗುತ್ತೇನೆ.'

ವಿನಾಪಿ ಸೂರ್ಯೇಣ ಭವೇತ್ ಪ್ರವೃತ್ತಿ-
ರವರ್ಷತಾ ವಜ್ರಧರೇಣ ವಾಪಿ ।
ರಾಮಂ ತು ಗಚ್ಛಂತಮಿತಃ ಸಮೀಕ್ಷ್ಯ
ಜೀವೇನ್ನ ಕಶ್ಚಿತ್ತ್ವಿತಿ ಚೇತನಾ ಮೇ ॥೧೦೫॥

'ಸೂರ್ಯನಿಲ್ಲದಿದ್ದರೂ ಇಂದ್ರನು ಮಳೆಗರೆಯದಿದ್ದರೂ ಜಗತ್ತು ಚೈತನ್ಯ-ಪೂರ್ಣವಾಗಿ ಇದ್ದೀತು. ರಾಮನು ಇಲ್ಲಿಂದ ಹೊರಟುಹೋಗುವುದನ್ನು ಕಂಡು ಯಾರೂ ಬದುಕಿರಲಾರರು ಎಂದು ನನಗೆ ಅನಿಸುತ್ತದೆ.'

ವಿನಾಶಕಾಮಾಮಹಿತಾಮಮಿತ್ರಾ-
ಮಾವಾಸಯಂ ಮೃತ್ಯುಮಿವಾತ್ಮನಸ್ತ್ವಮ್ ।
ಚಿರಂ ಬತಾಂಕೇನ ಧೃತಾಸಿ ಸರ್ಪೀ
ಮಹಾವಿಷಾ ತೇನ ಹತೋಽಸ್ಮಿ ಮೋಹಾತ್ ॥೧೦೬॥

'ನೀನು ನನಗೆ ಸರ್ವನಾಶಮಾಡಲು ಬಯಸುವವಳು ಅಹಿತಕರಳು, ಶತ್ರುರೂಪಳು. ನನಗೆ ಮೃತ್ಯುಸ್ವರೂಪಳಾಗಿರುವ ನಿನ್ನನ್ನು ನಾನು ಮನೆಯಲ್ಲಿ ಇರಿಸಿಕೊಂಡೆ. ಮಹಾವಿಷಉಳ್ಳ ಸರ್ಪದಂಥ ನಿನ್ನನ್ನು ಮೋಹದಿಂದ ಬಹುಕಾಲ ತೊಡೆಯಮೇಲಿರಿಸಿಕೊಂಡೆ, ಹತನಾದೆ.'

ಮಯಾ ಚ ರಾಮೇಣ ಚ ಲಕ್ಷ್ಮಣೇನ
ಪ್ರಶಾಸ್ತು ಹೀನೋ ಭರತಸ್ತ್ವಯಾ ಸಹ ।
ಪುರಂ ಚ ರಾಷ್ಟ್ರಂ ಚ ನಿಹತ್ಯ ಬಾಂಧವಾನ್
ಮಮಾಹಿತಾನಾಂ ಚ ಭವಾಭಿಹರ್ಷಿಣೀ ॥೧೦೭॥

'ನಾನಿಲ್ಲದೆ, ರಾಮನಿಲ್ಲದೆ ಲಕ್ಷ್ಮಣನಿಲ್ಲದೆ, ಕೇವಲ ಭರತನೆ ನಿನ್ನೊಂದಿಗೆ ರಾಜ್ಯವಾಳಲಿ, ಪುರವನ್ನೂ ರಾಷ್ಟ್ರವನ್ನೂ ಬಾಂಧವರನ್ನೂ ನಾಶಮಾಡಿ ನೀನು ನನ್ನ ಶತ್ರುಗಳಿಗೆ ಆನಂದದಾಯಕಳಾಗು.'

ನೃಶಂಸವೃತ್ತೇ ವ್ಯಸನಪ್ರಹಾರಿಣೆ
ಪ್ರಸಹ್ಯ ವಾಕ್ಯಂ ಯದಿಹಾದ್ಯ ಭಾಷಸೇ ।
ನ ನಾಮ ತೇ ಕೇನ ಮುಖಾತ್ ಪತಂತ್ಯಧೋ
ವಿಶೀರ್ಯಮಾಣಾ ದಶನಾಃ ಸಹಸ್ರಧಾ ॥೧೦೮॥

'ಕ್ರೂರ ನಡತೆಯವಳೆ. ವ್ಯಸನದಲ್ಲಿರುವವರಿಗೆ ಹೊಡೆಯುವ ಸ್ವಭಾವದವಳೆ, ಹಠದಿಂದ ಕ್ರೂರವಾಗಿ ಮಾತನಾಡುತ್ತಿರುವ ನಿನ್ನ ಮುಖದಿಂದ ಹಲ್ಲುಗಳು ಸಾವಿರ ಚೂರಾಗಿ ಏಕೆ ಕೆಳಗೆ ಉದುರುತ್ತಿಲ್ಲ?'

ನ ಕಿಂಚಿದಾಹಾಹಿತಮಪ್ರಿಯಂ ವಚೋ
ನ ವೇತ್ತಿ ರಾಮಃ ಪರುಷಾಣಿ ಭಾಷಿತುಮ್ ।
ಕಥಂ ನು ರಾಮೇ ಹ್ಯಭಿರಾಮವಾದಿನಿ
ಬ್ರವೀಷಿ ದೋಷಾನ್ ಗುಣನಿತ್ಯಸಂಮತೇ ॥೧೦೯॥

'ರಾಮನು ಅಹಿತವಾದ ಅಪ್ರಿಯವಾದ ಒಂದು ಮಾತನ್ನು ಆಡುವುದಿಲ್ಲ. ಕ್ರೂರವಾಗಿ ಮಾತನಾಡಲು ಅವನಿಗೆ ಗೊತ್ತೇ ಇಲ್ಲ. ಗುಣಗಳಿಂದ ಸದಾ ಸರ್ವಮಾನ್ಯನಾದ, ಪ್ರಿಯವಾಗಿಯೇ ಮಾತನಾಡುವ ರಾಮನಲ್ಲಿ ಹೇಗೆ ದೋಷಾರೋಪಣೆ ಮಾಡುವಿ?'

ಪ್ರತಾಮ್ಯ ವಾ ಪ್ರಜ್ವಲ ವಾ ಪ್ರಣಶ್ಯ ವಾ
ಸಹಸ್ರಶೋ ವಾ ಸ್ಫುಟಿತಾ ಮಹೀಂ ವ್ರಜ ।
ನ ತೇ ಕರಿಷ್ಯಾಮಿ ವಚಃ ಸುದಾರುಣಂ
ಮಮಾಹಿತಂ ಕೇಕಯರಾಜಪಾಂಸನಿ ॥೧೧೦॥

'ಕೈಕೇಯಿ, ನೀನೀಗ ಬೇಕಾದರೆ ಪ್ರಜ್ಞೆತಪ್ಪಿ ಬೀಳು, ಬೆಂಕಿಯಲ್ಲಿ ಸುಟ್ಟು

ಬೂದಿಯಾಗು, ನೇಣು ಹಾಕಿಕೊಂಡು ಸತ್ತೇಹೋಗು. ತಲೆ ಒಡೆದು ಸಾವಿರ ಹೋಳಾಗಿ ಮಾಡಿಕೊ. ಬೆಟ್ಟದ ಮೇಲಿಂದ ಜಿಗಿದಾದರೂ ಸತ್ತುಹೋಗು, ನಾನು ನನಗೆ ಅಹಿತಕರವಾದ ಅತಿಕ್ರೂರವಾದ ನಿನ್ನ ಮಾತನ್ನು ಮಾತ್ರ ನಡೆಸಿಕೊಡಲಾರೆ.'

ಕ್ಷುರೋಪಮಾಂ ನಿತ್ಯಮಸತ್ಪ್ರಿಯಂವದಾಂ
ಪ್ರದುಷ್ಟಭಾವಾಂ ಸ್ವಕುಲೋಪಘಾತಿನೀಮ್ ।
ನ ಜೀವಿತುಂ ತ್ವಾಂ ವಿಷಹೇಽಮನೋರಮಾಂ
ದಿಧಕ್ಷಮಾಣಾಂ ಹೃದಯಂ ಸಬಂಧನಮ್ ॥೧೧೧॥

'ಕ್ಷೌರದ ಕತ್ತಿಯಂತೆ ತೀಕ್ಷ್ಣಳಾದ, ಸದಾ ಪ್ರಿಯವಾಗಿ ಸುಳ್ಳಾಡುವ, ಬಲು ದುಷ್ಟ ಭಾವನೆ ಉಳ್ಳ, ತನ್ನ ಕುಲವನ್ನೆ ನಾಶಮಾಡುವ, ಮನಸಿಗೆ ನೋವು ಉಂಟು-ಮಾಡುವ, ಪ್ರಾಣದೊಂದಿಗೇ ಹೃದಯವನ್ನು ಸುಡಲು ಬಯಸುವ ನಿನ್ನನ್ನು ಜೀವಿಸಲು ನಾ ಬಿಡಲಾರೆ.'

ನ ಜೀವಿತಂ ಮೇಽಸ್ತಿ ಕುತಃ ಪುನಃ ಸುಖಂ
ವಿನಾತ್ಮಜೇನಾತ್ಮವತಃ ಕುತೋ ರತಿಃ
ಮಮಾಹಿತಂ ದೇವಿ ನ ಕರ್ತುಮರ್ಹಸಿ
ಸ್ಪೃಶಾಮಿ ಪಾದಾವಪಿ ತೇ ಪ್ರಸೀದ ಮೇ ॥೧೧೨॥

'ಮಗನಿಲ್ಲದೆ ನನಗೆ ಬದುಕೇ ಇಲ್ಲ, ಇನ್ನು ಬದುಕಿನಲ್ಲಿ ಸುಖವೆಲ್ಲಿ? ಬದುಕಿ-ದರೂ ರತಿಸುಖವಿಲ್ಲ. ದೇವಿ, ನನಗೆ ಅಹಿತವನ್ನು ಮಾಡಬೇಡ. ನಿನ್ನ ಕಾಲುಗಳ-ನ್ನಾದರೂ ಹಿಡಿಯುತ್ತೇನೆ, ಪ್ರಸನ್ನಳಾಗು.'

ಸ ಭೂಮಿಪಾಲೋ ವಿಲಪನ್ನನಾಥವತ್
ಸ್ತ್ರಿಯಾ ಗೃಹೀತೋ ಹೃದಯೇಽತಿಮಾತ್ರಯಾ ।
ಪಪಾತ ದೇವ್ಯಾಶ್ಚರಣೌ ಪ್ರಸಾರಿತಾ-
ವುಭಾವಸಂಸ್ಪೃಶ್ಯ ಯಥಾತುರಸ್ತಥಾ ॥೧೧೩॥

ರಾಜಾ ದಶರಥ ಅನಾಥನಂತೆ ಹೀಗೆ ಗೋಳಿಟ್ಟರೂ ಕೈಕೇಯಿ ಎಲ್ಲ ಎಲ್ಲೆ ಮೀರಿ ರಾಜನ ಹೃದಯವನ್ನೂ ಪ್ರಾಣವನ್ನೂ ಹಿಂಡಿದಳು. ಆತ ವ್ಯಾಧಿಯಿಂದ ಬಳಲು-ವವನಂತೆ, ಮುಂದೆ ಚಾಚಿದ ದೇವಿಯ ಎರಡು ಕಾಲುಗಳನ್ನು ಮುಟ್ಟುವುದರೊಳಗೆ ಮೂರ್ಛಿತನಾಗಿ ಬಿದ್ದ.

ಇಲ್ಲಿಗೆ ಶ್ರೀವಾಲ್ಮೀಕಿರಾಮಾಯಣ ಅಯೋಧ್ಯಾಕಾಂಡದಲ್ಲಿ ಹನ್ನೆರಡನೇ ಸರ್ಗ ಮುಗಿಯಿತು.

ತ್ರಯೋದಶಃ ಸರ್ಗಃ

ಸರ್ಗ – 13

ದಶರಥನ ವಿಲಾಪ

ಅತದರ್ಹಂ ಮಹಾರಾಜಂ ಶಯಾನಮತಥೋಚಿತಮ್
ಯಯಾತಿಮಿವ ಪುಣ್ಯಾಂತೇ ದೇವಲೋಕಾತ್ಪರಿಚ್ಯುತಮ್ ॥೧॥

ಹೆಂಡತಿಯ ಕಾಲಿಗೆ ಬೀಳುವಂಥ, ನೆಲದ ಮೇಲೆ ಒರಗುವಂಥ ಸ್ಥಿತಿ ದಶರಥನಿಗೆ ಬರಬಾರದಾಗಿತ್ತು. ಅದಕ್ಕೆ ಅವನು ಅರ್ಹನಲ್ಲ. ಪುಣ್ಯಹ್ರಾಸ ವಾದಾಗ ದೇವ-ಲೋಕದಿಂದ ಚ್ಯುತನಾಗಿ ಯಯಾತಿ ಮಹಾರಾಜ ನೆಲದಲ್ಲಿ ಬಿದ್ದಂತೆ ದಶರಥನೂ ಬಿದ್ದಿದ್ದಾನೆ.

ಆದಿಪರ್ವ 88ನೇ ಅಧ್ಯಾಯದಲ್ಲಿ ಯಯಾತಿ ಸ್ವರ್ಗದಿಂದ ಕೆಳಗೆ ಬಿದ್ದು ತನ್ನ ಮೊಮ್ಮಕ್ಕಳ ಪುಣ್ಯದಿಂದ ಅವರೊಂದಿಗೇ ತಿರುಗಿ ಸ್ವರ್ಗಕ್ಕೆ ಹೋದ ಕಥೆ ಇದೆ.

ಅನರ್ಥರೂಪಾऽಸಿದ್ಧಾರ್ಥಾ ಹ್ಯಭೀತಾ ಭಯದರ್ಶಿನೀ ।
ಪುನರಾಕಾರಯಾಮಾಸ ತಮೇವ ವರಮಂಗನಾ ॥೨॥

ಕೈಕೇಯಿ ಅನರ್ಥ ಉಂಟುಮಾಡಲು ಹೊರಟಿದ್ದಾಳೆ. ಇನ್ನೂ ಅವಳ ಉದ್ದೇಶ ಸಿದ್ಧಿಯಾಗಿಲ್ಲ. ಲೋಕಾಪವಾದದ ಭೀತಿ ಅವಳಿಗಿಲ್ಲ. ರಾಜನಿಗೆ ಆ ಭೀತಿಯನ್ನು ತೋರುತ್ತಾಳೆ. ಆದೇ ವರವನ್ನು ಪುನಃ ಕೊಡೆಂದು ಅವನನ್ನು ಕರೆದು ಹೇಳುತ್ತಾಳೆ.

ತ್ವಂ ಕತ್ಥಸೇ ಮಹಾರಾಜ ಸತ್ಯವಾದೀ ದೃಢವ್ರತಃ ।
ಮಮ ಚೇಮಂ ವರಂ ಕಸ್ಮಾದ್ವಿಧಾರಯಿತುಮಿಚ್ಛಸಿ ॥೩॥

'ಮಹಾರಾಜ, ಸತ್ಯವಾದಿ ದೃಢವ್ರತವೆಂದು ಆತ್ಮಶ್ಲಾಘನೆ ಮಾಡಿಕೊಳ್ಳುವೆ. ನ್ಯಾಸರೂಪವಾಗಿ ನಿನ್ನಲ್ಲಿ ಇರಿಸಿದ್ದ ನನ್ನ ವರವನ್ನು ಬಿಟ್ಟು ಕೊಡದೆ ಹಾಗೇ ಇಟ್ಟುಕೊಳ್ಳಲು ಏಕೆ ಇಚ್ಛಿಸುವೆ?'

ಏವಮುಕ್ತಸ್ತು ಕೈಕೇಯ್ಯಾ ರಾಜಾ ದಶರಥಸ್ತದಾ ।
ಪ್ರತ್ಯುವಾಚ ತತಃ ಕ್ರುದ್ಧೋ ಮುಹೂರ್ತಂ ವಿಹ್ವಲನ್ನಿವ ॥೪॥

ಕೈಕೇಯಿ ಹೀಗೆ ಹೇಳಿದಾಗ ರಾಜಾ ದಶರಥನು ಮುಹೂರ್ತಕಾಲ ದುಃಖಿತ-ನಾಗಿದ್ದು ಕ್ರುದ್ಧನಂತೆ ವ್ಯಾಕುಲನಾಗಿ ನುಡಿದ—

ಮೃತೇ ಮಯಿ ಗತೇ ರಾಮೇ ವನಂ ಮನುಜಪುಂಗವೇ ।
ಹಂತಾನಾರ್ಯೇ ಮಮಾಮಿತ್ರೇ ಸಕಾಮಾ ಭವ ಕೈಕಯಿ ॥೫॥

'ನಾನು ಸತ್ತಾಗ, ಪುರುಷೋತ್ತಮನಾದ ರಾಮನೂ ಕಾಡಿಗೆ ಹೋಗಿರುವಾಗ, ಪಾಪಿಷ್ಠೆ, ನನ್ನ ಶತ್ರುವೆ! ನಿನ್ನ ಇಷ್ಟಸಿದ್ಧಿಯಾಗಿರುವುದರಿಂದ ಸುಖವಾಗಿರು.'

ಸ್ವರ್ಗೇಽಪಿ ಖಲು ರಾಮಸ್ಯ ಕುಶಲಂ ದೈವತೈರಹಮ್ ।
ಪ್ರತ್ಯಾದೇಶಾದಭಿಹಿತಂ ಧಾರಯಿಷ್ಯೇ ಕಥಂ ಬತ ॥೬॥

'ಸ್ವರ್ಗದಲ್ಲಿಯೂ ಕೂಡ ದೇವತೆಗಳು ರಾಮನ ಕುಶಲದ ಬಗ್ಗೆ ಕೇಳಿದಾಗ ನಾನು 'ರಾಮನಿಗೆ ರಾಜ್ಯವನ್ನು ಕೊಡೆನೆಂದು 'ಪ್ರತ್ಯಾದೇಶ'ವನ್ನು ನಿರಾಕರಣೆಯನ್ನು ಮಾಡಿಬಿಟ್ಟೆನೆ'ಂದರೆ, ಅವರು ಹೇಳುತ್ತಾರೆ, 'ಜ್ಯೇಷ್ಠನಾಗಿದ್ದಾನೆ. ಶ್ರೇಷ್ಠಗುಣಶಾಲಿ-ಯಾಗಿದ್ದಾನೆ ರಾಮ. ಹೆಂಡತಿ ಮಾತು ಕೇಳಿ ಅವನಿಗೆ ರಾಜ್ಯವನ್ನು ಹೇಗೆ ನಿರಾಕರಿಸಿದೆ?' ಎಂದು. 'ಪ್ರತ್ಯಾದೇಶ'ದಿಂದ ಮುನಿದು ಅವರು ಹೀಗೆ ಹೇಳುವು-ದನ್ನು 'ಅಭಿಹಿತ'ವನ್ನು ಅಯ್ಯೋ! ನಾನು ಹೇಗೆ 'ಧಾರಯಿಷ್ಯೇ' ಸಹಿಸಿಕೊಳ್ಳಬಲ್ಲೆ?

ಕೈಕೇಯ್ಯಾಃ ಪ್ರಿಯಕಾಮೇನ ರಾಮಃ ಪ್ರವ್ರಾಜಿತೋ ವನಮ್ ।
ಯದಿ ಸತ್ಯಂ ಬ್ರವೀಮ್ಯೇತತ್ತದಸತ್ಯಂ ಭವಿಷ್ಯತಿ ॥೭॥

'ಕೈಕೇಯಿಗೆ ಪ್ರಿಯವಾಗಿದ್ದ 'ಕಾಮ'ದಿಂದ, ವರದಿಂದ, ಸತ್ಯಪಾಶಬದ್ಧನಾಗಿ ನಾನು ರಾಮನಿಗೆ ರಾಜ್ಯ ಪ್ರತ್ಯಾದೇಶಮಾಡಿ ಕಾಡಿಗೆ ಕಳಿಸಬೇಕಾಯಿತು. ಇದು ಸತ್ಯ' ಎಂದು ನಾನು ಅವರಿಗೆ ಹೇಳಿದರೂ ಅದು ಅಸತ್ಯವೇ ಆಗುವುದು. ಸತ್ಯವೆಂದು ಅವರು ನಂಬುವುದಿಲ್ಲ.'

ಅಪುತ್ರೇಣ ಮಯಾ ಪುತ್ರಃ ಶ್ರಮೇಣ ಮಹತಾ ಮಹಾನ್ ।
ರಾಮೋ ಲಬ್ಧೋ ಮಹಾಬಾಹುಃ ಸ ಕಥಂ ತ್ಯಜ್ಯತೇ ಮಯಾ ॥೮॥

'ಪುತ್ರನಿಲ್ಲದವನಾಗಿದ್ದ ನಾನು ಬಹುಶ್ರಮದಿಂದ ಮಹಾಬಾಹು ಮಹಾನ್‌ಪುತ್ರ ರಾಮನನ್ನು ಪಡೆದೆ. ಅವನನ್ನು ನಾನು ಹೇಗೆ ತ್ಯಜಿಸಲಿ?

ಶೂರಶ್ಚ ಕೃತವಿದ್ಯಶ್ಚ ಜಿತಕ್ರೋಧಃ ಕ್ಷಮಾಪರಃ ।
ಕಥಂ ಕಮಲಪತ್ರಾಕ್ಷೋ ಮಯಾ ರಾಮೋ ವಿವಾಸ್ಯತೇ ॥೯॥

ಶೂರನಾಗಿದ್ದಾನೆ, ವಿದ್ಯೆಗಳನ್ನು ಕಲಿತಿದ್ದಾನೆ, ಕೋಪವನ್ನು ಗೆದ್ದಿದ್ದಾನೆ, ಕ್ಷಮಾಶೀಲನಾಗಿದ್ದಾನೆ, ಕಮಲದಳನಯನನಾದ ರಾಮ. ಅವನನ್ನು ನಾನು ಕಾಡಿಗೆ ಹೇಗೆ ಕಳಿಸಲಿ?

ಕಥಮಿಂದೀವರಶ್ಯಾಮಂ ದೀರ್ಘಬಾಹುಂ ಮಹಾಬಲಮ್ ।
ಅಭಿರಾಮಮಹಂ ಕಾಮಂ ಪ್ರೇಷಯಿಷ್ಯಾಮಿ ದಂಡಕಾನ್ ॥೧೦॥

ನೀಲಕಮಲದಂಥ ಶ್ಯಾಮಲವರ್ಣದವನು ದೀರ್ಘಬಾಹು ಮಹಾಬಲ ಅತಿಸುಂದರ ರಾಮ. ಅವನನ್ನು ದಂಡಕಾರಣ್ಯಕ್ಕೆ ನಾನು ಹೇಗೆ ಕಳಿಸಲಿ?

ಸುಖಾನಾಮುಚಿತಸ್ಯೈವ ದುಃಖೈರನುಚಿತಸ್ಯ ಚ ।
ದುಃಖಂ ನಾಮಾನುಪಶ್ಯೇಯಂ ಕಥಂ ರಾಮಸ್ಯ ಧೀಮತಃ ॥೧೧॥

ಸುಖಾನುಭವ ಹೊಂದಲು ಅರ್ಹ, ದುಃಖಾನುಭವಕ್ಕೆ ಅನರ್ಹ ರಾಮ. ಧೀಮಂತನಾದ ಆತನಿಗೆ ದುಃಖ ಉಂಟಾಗುವುದನ್ನು ನಾನು ಹೇಗೆ ನೋಡಲಿ?

ಯದಿ ದುಃಖಮನುತ್ಪಾದ್ಯ ಮಮ ಸಂಕ್ರಮಣಂ ಭವೇತ್ ।
ಅದುಃಖಾರ್ತಸ್ಯ ರಾಮಸ್ಯ ತತಃ ಸುಖಮವಾಪ್ನುಯಾಮ್ ॥೧೨॥

ದುಃಖಕ್ಕೆ ಅರ್ಹನಲ್ಲದ ರಾಮನಿಗೆ ದುಃಖ ಉಂಟುಮಾಡದೆ ಇರುವಾಗ, ನನಗೆ ಮರಣ ಉಂಟಾದರೂ ಸ್ವರ್ಗದಲ್ಲಿ ನಾನು ಸುಖಹೊಂದುವೆನು.

ನೃಶಂಸೇ ಪಾಪಸಂಕಲ್ಪೇ ರಾಮಂ ಸತ್ಯಪರಾಕ್ರಮಮ್ ।
ಕಿಂ ವಿಪ್ರಿಯೇಣ ಕೈಕೇಯಿ ಪ್ರಿಯಂ ಯೋಜಯಸೇ ಮಮ ॥೧೩॥

ಕ್ರೂರಳೆ, ಪಾಪಸಂಕಲ್ಪಳೆ, ಸತ್ಯಪರಾಕ್ರಮನಾದ ಪ್ರಿಯನಾದ ನನ್ನ ರಾಮನಿಗೆ ಏಕೆ ಅಪ್ರಿಯವನ್ನು ಉಂಟುಮಾಡುವೆ?

ಅಕೀರ್ತಿರತುಲಾ ಲೋಕೇ ಧ್ರುವಃ ಪರಿಭವಶ್ಚ ಮೇ ।
ತಥಾ ವಿಲಪತಸ್ತಸ್ಯ ಪರಿಭ್ರಮಿತಚೇತಸಃ ।
ಅಸ್ತಮಭ್ಯಾಗಮತ್ ಸೂರ್ಯೋ ರಜನೀ ಚಾಭ್ಯವರ್ತತ ॥೧೪॥

'ರಾಮನಿಗೆ ಅಪ್ರಿಯ ಉಂಟು ಮಾಡಿದರೆ ನನಗೆ ಲೋಕದಲ್ಲಿ ಅನುಪಮವಾದ ಅಪಕೀರ್ತಿ ಮತ್ತು ತಿರಸ್ಕಾರ ನಿಶ್ಚಿತ' – ಹೀಗೆ ವಿಲಾಪ ಮಾಡುತ್ತ ದಶರಥನು ಬುದ್ಧಿಭ್ರಮಣೆ ಹೊಂದುತ್ತಿದ್ದಂತೇ ಸೂರ್ಯ ಅಸ್ತಂಗತನಾದ. ರಾತ್ರಿ ಬಂದಿತು.

ಸಾ ತ್ರಿಯಾಮಾ ತಥಾರ್ತಸ್ಯ ಚಂದ್ರಮಂಡಲಮಂಡಿತಾ ।
ರಾಜ್ಞೋ ವಿಲಪತಸ್ತಸ್ಯ ನ ವ್ಯಭಾಸತ ಶರ್ವರೀ ॥೧೫॥

ಚಂದ್ರಮಂಡಲದಿಂದ ಅಲಂಕೃತವಾದ ಆ ರಾತ್ರಿ ಆರ್ತನಾಗಿ ವಿಲಾಪ ಗೈಯುತ್ತಿದ್ದ ರಾಜನಿಗೆ ಬೆಳಗಲಿಲ್ಲ.

ತಥೈವೋಷ್ಣಂ ವಿನಿಶ್ವಸ್ಯ ವೃದ್ಧೋ ದಶರಥೋ ನೃಪಃ ।
ವಿಲಲಾಪಾರ್ತವದ್ದುಃಖಂ ಗಗನಾಸಕ್ತಲೋಚನಃ ॥೧೬॥

ಬಿಸಿಯಾದ ನಿಟ್ಟುಸಿರುಬಿಡುತ್ತ ವೃದ್ಧನಾದ ರಾಜಾ ದಶರಥನು ಆಕಾಶದ ಕಡೆಗೆ ದಿಟ್ಟಿಸಿ ನೋಡುತ್ತ ಆರ್ತನಾಗಿ ದುಃಖದಿಂದ ವಿಲಾಪಮಾಡಿದ.

ನ ಪ್ರಭಾತಂ ತ್ವಯೇಚ್ಛಾಮಿ ನಿಶೇ ನಕ್ಷತ್ರಭೂಷಣೇ ।
ಕ್ರಿಯತಾಂ ಮೇ ದಯಾ ಭದ್ರೇ ರಚಿತೋಽಯಂ ಮಯಾಂಜಲಿಃ॥೧೭॥

'ನಕ್ಷತ್ರ ಭೂಷಿತಳಾದ ನಿಶಾದೇವಿಯೆ, ನೀನು ಬೆಳಗಾಗುವುದನ್ನು ನಾನು ಇಚ್ಛಿಸುವುದಿಲ್ಲ. ಮಂಗಳೆ, ನನ್ನಲ್ಲಿ ದಯೆದೋರು, ನಾನು ನಿನಗೆ ಕೈಮುಗಿವೆನು!'

ಅಥವಾ ಗಮ್ಯತಾಂ ಶೀಘ್ರಂ ನಾಹಮಿಚ್ಛಾಮಿ ನಿರ್ಘೃಣಾಮ್ ।
ನೃಶಂಸಾಂ ಕೈಕಯೀಂ ದ್ರಷ್ಟುಂ ಯತ್ಕೃತೇ ವ್ಯಸನಂ ಮಹತ್ ॥೧೮॥

'ಅಥವಾ ನೀನು ಬೇಗನೆ ಹೊರಟುಹೋಗು. ನಿರ್ದಯಿಯಾದ ಕ್ರೂರಳಾದ ಕೈಕೇಯಿಯನ್ನು ರಾತ್ರಿ ಇಡೀ ನೋಡಲು ನಾನು ಇಚ್ಛಿಸುವುದಿಲ್ಲ. ಅವಳಿಂದಲೇ ನನಗೆ ಈ ಮಹಾದುಃಖ ಬಂದಿದೆ.'

ಏವಮುಕ್ತ್ವಾ ತತೋ ರಾಜಾ ಕೈಕೇಯೀಂ ಸಂಯತಾಂಜಲಿಃ ।
ಪ್ರಸಾದಯಾಮಾಸ ಪುನಃ ಕೈಕೇಯೀಮಿದಮಬ್ರವೀತ್ ॥೧೯॥

ಹೀಗೆ ರಾತ್ರಿದೇವಿಗೆ ಹೇಳಿ, ಕೈಕೇಯಿಗೆ ಕೈಮುಗಿದು ಪ್ರಸನ್ನಗೊಳಿಸಲು ಯತ್ನಿಸಿದ. ಕೈಕೇಯಿಗೆ ಪುನಃ ಹೀಗೆ ಹೇಳಿದ—

ಸಾಧುವೃತ್ತಸ್ಯ ದೀನಸ್ಯ ತ್ವದ್ಗತಸ್ಯ ಗತಾಯುಷಃ ।
ಪ್ರಸಾದಃ ಕ್ರಿಯತಾಂ ದೇವಿ ಮಮ ರಾಜ್ಞೋ ವಿಶೇಷತಃ ॥೨೦॥

'ಮಂಗಳೇ ದೇವಿ, ಒಳ್ಳೆಯ ನಡತೆ ಉಳ್ಳವನು, ದೀನನು, ಧರ್ಮಪಾಶ

ಬದ್ಧನಾಗಿ ನಿನ್ನ ಅಧೀನನು. ಆಯುಷ್ಯ ತೀರಿದವನು, ವಿಶೇಷವಾಗಿ ರಾಜ ನಾನು. ನನ್ನಲ್ಲಿ ಪ್ರಸನ್ನಳಾಗು.'

ಶೂನ್ಯೇನ ಖಲು ಸುಶ್ರೋಣಿ ಮಯೇದಂ ಸಮುದಾಹೃತಮ್ ।
ಕುರು ಸಾಧು ಪ್ರಸಾದಂ ಮೇ ಬಾಲೇ ಸಹೃದಯಾ ಹ್ಯಸಿ ॥೨೧॥

'ದುಃಖದಿಂದ ವಿವೇಕ ಶೂನ್ಯನಾಗಿ ನಾನು ಕಟು ಮಾತನ್ನಾಡಿದೆ. ಬಾಲೆ, ಕೈಕೇಯಿ, ನೀನು ಸಹೃದಯಳು. ನನ್ನ ಮೇಲೆ ಪ್ರಸನ್ನಳಾಗು.'

ಪ್ರಸೀದ ದೇವಿ ರಾಮೋ ಮೇ ತ್ವದ್ದತ್ತಂ ರಾಜ್ಯಮವ್ಯಯಮ್ ।
ಲಭತಾಮಸಿತಾಪಾಂಗೇ ಯಶಃ ಪರಮವಾಪ್ಸ್ಯಸಿ ॥೨೨॥

'ದೇವಿ, ಪ್ರಸನ್ನಳಾಗು. ನೀನಿತ್ತ ಅವ್ಯಯವಾದ ರಾಜ್ಯವನ್ನು ರಾಮನು ಪಡೆಯಲಿ. ಕಪ್ಪಾದ ಕಡೆಗಣ್ಣವಳೆ, ನೀನು ಉತ್ತಮವಾದ ಯಶಸ್ಸನ್ನು ಪಡೆಯುವೆ.'

ಮಮ ರಾಮಸ್ಯ ಲೋಕಸ್ಯ ಗುರೂಣಾಂ ಭರತಸ್ಯ ಚ ।
ಪ್ರಿಯಮೇತದ್ಗುರುಶ್ರೋಣಿ ಕುರು ಚಾರುಮುಖೇಕ್ಷಣೇ ॥೨೩॥

'ಪುಷ್ಟವಾದ ನಿತಂಬಗಳು ಸುಂದರ ಮುಖ ನೇತ್ರಗಳುಳ್ಳವಳೇ, ನನಗೆ, ರಾಮನಿಗೆ, ಲೋಕಕ್ಕೆ, ಗುರುಗಳಿಗೆ ಮತ್ತು ಭರತನಿಗೂ ಕೂಡ ಪ್ರಿಯವಾಗುವ ಈ ಕಾರ್ಯವನ್ನು ಮಾಡು.'

ವಿಶುದ್ಧಭಾವಸ್ಯ ಹಿ ದುಷ್ಟಭಾವಾ
ತಾಮ್ರೇಕ್ಷಣಸ್ಯಾಶ್ರುಕಲಸ್ಯ ರಾಜ್ಞಃ ।
ಶ್ರುತ್ವಾ ವಿಚಿತ್ರಂ ಕರುಣಂ ವಿಲಾಪಂ
ಭರ್ತುರ್ನೃಶಂಸಾ ನ ಚಕಾರ ವಾಕ್ಯಮ್ ॥೨೪॥

ದುಷ್ಟಭಾವವುಳ್ಳ ಕ್ರೂರಳಾದ ಕೈಕೇಯಿ, ಶುದ್ಧಭಾವವುಳ್ಳ, ಕೆಂಪುಕಣ್ಣುಳ್ಳ ಕಣ್ಣೀರು ಸುರಿಸುವ ಪತಿಯಾದ ರಾಜನ ಕರುಣಾಜನಕವಾದ ವಿಚಿತ್ರವಿಲಾಪದ ಮಾತನ್ನು ಕೇಳಿಯೂ ಅಂಗೀಕರಿಸಲಿಲ್ಲ.

ತತಃ ಸ ರಾಜಾ ಪುನರೇವ ಮೂರ್ಛಿತಃ
ಪ್ರಿಯಾಮತುಷ್ಟಾಂ ಪ್ರತಿಕೂಲಭಾಷಿಣೀಮ್ ।

ಸಮೀಕ್ಷ್ಯ ಪುತ್ರಸ್ಯ ವಿವಾಸನಂ ಪ್ರತಿ
ಕ್ಷಿತೌ ವಿಸಂಜ್ಞೋ ನಿಪಪಾತ ದುಃಖಿತಃ ॥೨೫॥

ಆಗ ರಾಜ ಪುನಃ ಮೂರ್ಛಿತನಾದ. ಪ್ರಿಯೆ ಎಷ್ಟು ಬೇಡಿದರೂ ತುಷ್ಟಳಾಗದೆ ವಿರೋಧವಾಗಿಯೇ ಮಾತನಾಡುವುದನ್ನು ಕಂಡು, ಮಗನಿಗೆ ವನವಾಸ ವಾಗುವುದನ್ನೇ ಚಿಂತಿಸುತ್ತ ದುಃಖಿತನಾಗಿ ಪ್ರಜ್ಞಾಶೂನ್ಯನಾಗಿ ನೆಲದ ಮೇಲೆ ಒರಗಿದ.

ಇತೀವ ರಾಜ್ಞೋ ವ್ಯಥಿತಸ್ಯ ಸಾ ನಿಶಾ
ಜಗಾಮ ಘೋರಂ ಶ್ವಸತೋ ಮನಸ್ವಿನಃ ।
ವಿಬೋಧ್ಯಮಾನಃ ಪ್ರತಿಬೋಧನಂ ತದಾ
ನಿವಾರಯಮಾಸ ಸ ರಾಜಸತ್ತಮಃ ॥೨೬॥

ಹೀಗೆ ಮನಸ್ವಿಯಾದ ರಾಜಾ ದಶರಥ ವ್ಯಥೆಗೊಂಡು ಘೋರವಾಗಿ ನಿಟ್ಟುಸಿ-ರಿಡುತ್ತಿದ್ದಂತೆಯೇ ಆ ರಾತ್ರಿ ಕಳೆದುಹೋಯಿತು. ಆಗ ರಾಜನನ್ನು ಎಬ್ಬಿಸಲು ವಂದಿಮಾಗಧರು ತೊಡಗಿದರು. ರಾಜ ಅದನ್ನು ತಡೆದ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಹದಿಮೂರನೇ ಸರ್ಗ ಮುಗಿಯಿತು.

❖

ಚತುರ್ದಶಃ ಸರ್ಗಃ

ಸರ್ಗ – 14

ತನ್ನ ಕೋರಿಕೆಯನ್ನು ಸಲ್ಲಿಸಲು ಕೈಕೇಯಿಯ ಒತ್ತಾಯ

ಪುತ್ರಶೋಕಾರ್ದಿತಂ ಪಾಪಾ ವಿಸಂಜ್ಞಂ ಪತಿತಂ ಭುವಿ ।
ವಿಚೇಷ್ಟಮಾನಮುದ್ವೀಕ್ಷ್ಯ ಸೈಕಾ ಪ್ಯೇವಮಿದಮಬ್ರವೀತ್ ॥೧॥

ಪುತ್ರಶೋಕಪೀಡಿತನಾಗಿ ಪ್ರಜ್ಞೆ ತಪ್ಪಿ ನೆಲದಲ್ಲಿ ಬಿದ್ದು ಹೊರಳಾಡುತ್ತಿದ್ದ ದಶರಥನನ್ನು ನೋಡುತ್ತ ಪಾಪಿಷ್ಠೆ ಕೈಕೇಯಿ ನುಡಿದಳು.

ಪಾಪಂ ಕೃತ್ವೇವ ಕಿಮಿದಂ ಮಮ ಸಂಶ್ರುತ್ಯ ಸಂಶ್ರವಮ್ ।
ಶೇಷೇ ಕ್ಷಿತಿತಲೇ ಸನ್ನಃ ಸ್ಥಿತ್ಯಾಂ ಸ್ಥಾತುಂ ತ್ವಮರ್ಹಸಿ ॥೨॥

'ನನಗೆ ಪ್ರತಿಜ್ಞೆ ಮಾಡಿ ದೊಡ್ಡ ಪಾಪ ಮಾಡಿದವನಂತೆ, ಏನಿದು, ನೆಲದಲ್ಲಿ ಬಿದ್ದಿರುವೆ? ನೀನು ಶಿಷ್ಟಾಚಾರವನ್ನು ಕಾಪಾಡಬೇಕು.'

ಆಹುಃ ಸತ್ಯಂ ಹಿ ಪರಮಂ ಧರ್ಮಂ ಧರ್ಮವಿದೋ ಜನಾಃ ।
ಸತ್ಯಮಾಶ್ರಿತ್ಯ ಚ ಮಯಾ ತ್ವಂ ಧರ್ಮಂ ಪ್ರತಿ ಚೋದಿತಃ ॥೩॥

'ಸತ್ಯವೇ ದೊಡ್ಡ ಧರ್ಮವೆಂದು ಧರ್ಮಜ್ಞರು ಹೇಳುತ್ತಾರೆ. ಸತ್ಯವನ್ನು ಆಶ್ರಯಿಸಿಯೇ ನಾನು ನಿನ್ನನ್ನು ಧರ್ಮಪಾಲನೆಗೆ ಆಗ್ರಹಿಸುತ್ತಿದ್ದೇನೆ.'

ಸಂಶ್ರುತ್ಯ ಶೈಬ್ಯಃ ಶ್ಯೇನಾಯ ಸ್ವಾಂ ತನುಂ ಜಗತೀಪತಿಃ ।
ಪ್ರದಾಯ ಪಕ್ಷಿಣೇ ರಾಜಾ ಜಗಾಮ ಗತಿಮುತ್ತಮಾಮ್ ॥೪॥

'ಗಿಡಗಕ್ಕೆ ಆಹಾರ ಕೊಡುವ ಪ್ರತಿಜ್ಞೆಮಾಡಿ ರಾಜಾ ಶೈಬ್ಯನು ಆ ಪಕ್ಷಿಗೆ ತನ್ನ ಶರೀರವನ್ನೇ ನೀಡಿ ಉತ್ತಮ ಗತಿಯನ್ನು ಹೊಂದಿದನು.'

ತಥಾ ಹ್ಯಲರ್ಕಸ್ತೇಜಸ್ವೀ ಬ್ರಾಹ್ಮಣೇ ವೇದಪಾರಗೇ ।
ಯಾಚಮಾನೇ ಸ್ವಕೇ ನೇತ್ರೇ ಉದ್ಧೃತ್ಯೈವಮನಾ ದದೌ ॥೫॥

'ತೇಜಸ್ವಿಯಾದ ಅಲರ್ಕ ರಾಜನು ವೇದಪಾರಂಗತನಾದ ಒಬ್ಬ ಬ್ರಾಹ್ಮಣ ತನ್ನ ಕಣ್ಣುಗಳನ್ನು ಬೇಡಿದಾಗ ಖಿನ್ನನಾಗದೆ ಅವುಗಳನ್ನು ತೆಗೆದು ದಾನ ಮಾಡಿದ.'

ಸರಿತಾಂ ತು ಪತಿಃ ಸ್ವಲ್ಪಾಂ ಮರ್ಯಾದಾಂ ಸತ್ಯಮನ್ವಿತಃ ।
ಸತ್ಯಾನುರೋಧಾತ್ಸಮಯೇ ವೇಲಾಂ ಸ್ವಾಂ ನಾತಿವರ್ತತೇ ॥೬॥

'ಸಮುದ್ರರಾಜನು ಸತ್ಯವನ್ನಾಶ್ರಯಿಸಿ ಸೂಕ್ಷ್ಮವಾದ ಸತ್ಯಪ್ರತಿಜ್ಞೆಯನ್ನು ಮಾಡಿ, ಅದಕ್ಕೆ ಅನುಸಾರವಾಗಿದ್ದು, ಇಂದಿಗೂ ತನ್ನ ಪ್ರತಿಜ್ಞೆಯನ್ನು ಉಲ್ಲಂಘಿಸುವುದಿಲ್ಲ. ತೀರವನ್ನು ಅತಿಕ್ರಮಿಸುವುದಿಲ್ಲ.'

ಸತ್ಯಮೇಕಪದಂ ಬ್ರಹ್ಮ ಸತ್ಯೇ ಧರ್ಮಃ ಪ್ರತಿಷ್ಠಿತಃ ।
ಸತ್ಯಮೇವಾಕ್ಷಯಾ ವೇದಾಃ ಸತ್ಯೇನೈವಾಪ್ಯತೇ ಪರಮ್ ॥೭॥

'ಸತ್ಯವೇ ತತ್‌ಕ್ಷಣ ಬ್ರಹ್ಮಜ್ಞಾನಸಾಧನವಾಗುತ್ತದೆ. ಸತ್ಯದಲ್ಲಿಯೇ ಎಲ್ಲ ಧರ್ಮ ಅಡಗಿದೆ. ಸತ್ಯವೇ ಶಾಶ್ವತವಾದ ವೇದಗಳ ಸಾರ. ಸತ್ಯದಿಂದಲೇ ಪರಬ್ರಹ್ಮಪ್ರಾಪ್ತಿ.'

ಸತ್ಯಂ ಸಮನುವರ್ತಸ್ವ ಯದಿ ಧರ್ಮೇ ಧೃತಾ ಮತಿಃ ।
ಸ ವರಃ ಸಫಲೋ ಮೇಽಸ್ತು ವರದೋ ಹ್ಯಸಿ ಸತ್ತಮ ॥೮॥

'ಧರ್ಮದಲ್ಲಿ ಆದರಬುದ್ಧಿ ಇರುವುದಾದರೆ ಸತ್ಯವಚನವನ್ನು ಕಾಪಾಡು. ರಾಜನೆ, ನೀನು ನನಗೆ ವರವನ್ನು ಕೊಟ್ಟಿರುವೆ. ಆ ವರ ಸಫಲವಾಗಲಿ.'

ಧರ್ಮಸ್ಯೈವಾಭಿಕಾಮಾರ್ಥಂ ಮಮ ಚೈವಾಭಿಚೋದನಾತ್ ।
ಪ್ರವ್ರಾಜಯ ಸುತಂ ರಾಮಂ ತ್ರಿಃ ಖಲು ತ್ವಾಂ ಬ್ರವೀಮ್ಯಹಮ್ ॥೯॥

'ಧರ್ಮಫಲ ಸಿದ್ಧಿಗಾಗಿಯೇ ನಾನು ನಿನ್ನನ್ನು ಆಗ್ರಹಪೂರ್ವಕ ಕೇಳಿ ಕೊಳ್ಳುವುದರಿಂದ ರಾಮನನ್ನು ಕಾಡಿಗೆ ಕಳಿಸು. ಮೂರು ಬಾರಿ ಇದನ್ನು ನಿನಗೆ ನಾನು ಹೇಳುತ್ತೇನೆ.'

ಸಮಯಂ ಚ ಮಮಾದ್ಯೇಮಂ ಯದಿ ತ್ವಂ ನ ಕರಿಷ್ಯಸಿ ।
ಅಗ್ರತಸ್ತೇ ಪರಿತ್ಯಕ್ತಾ ಪರಿತ್ಯಕ್ಷ್ಯಾಮಿ ಜೀವಿತಮ್ ॥೧೦॥

'ನನ್ನ ಈ ಶಪಥವನ್ನು ನೀನು ನಡೆಸಿಕೊಡದಿದ್ದರೆ, ನನ್ನನ್ನು ಉಪೇಕ್ಷಿಸಿದರೆ, ನಿನ್ನ ಇದಿರೇ ಪ್ರಾಣವನ್ನು ತ್ಯಜಿಸುತ್ತೇನೆ.'

ಏವಂ ಪ್ರಚೋದಿತೋ ರಾಜಾ ಕೈಕೇಯ್ಯಾ ನಿರ್ವಿಶಂಕಯಾ ।
ನಾಶಕತ್ ಪಾಶಮುನ್ಮೋಕ್ತುಂ ಬಲಿರಿಂದ್ರಕೃತಂ ಯಥಾ ॥೧೧॥

ಕೈಕೇಯಿ ಯಾವ ಶಂಕೆಯೂ ಇಲ್ಲದೆ ಹೀಗೆ ಪ್ರಚೋದನೆ ಮಾಡಿದಾಗ, ಇಂದ್ರನು, ಅಂದರೆ ವಾಮನರೂಪಿ ಉಪೇಂದ್ರನು, ಮೂರುಹೆಜ್ಜೆ ಭೂದಾನದ ಪ್ರತಿಜ್ಞೆಯ ಬಂಧನದಲ್ಲಿ ಬಲಿಯನ್ನು ಬಂಧಿಸಿದಾಗ ಅದರಿಂದ ಬಿಡಿಸಿಕೊಳ್ಳಲು ಬಲಿ ಶಕ್ತನಾಗಲಿಲ್ಲ ಹೇಗೋ ಹಾಗೇ ಕೈಕೇಯಿಯ ವರದಾನದ ಪ್ರತಿಜ್ಞಾ ಬಂಧನದಿಂದ ತನ್ನನ್ನು ದಶರಥ ಬಿಡಿಸಿಕೊಳ್ಳಲು ಶಕ್ತನಾಗಲಿಲ್ಲ.

ಉದ್‌ಭ್ರಾಂತಹೃದಯಶ್ಚಾಪಿ ವಿವರ್ಣವದನೋಽಭವತ್ ।
ಸ ಧುರ್ಯೋ ವೈ ಪರಿಸ್ಪಂದನ್ ಯುಗಚಕ್ರಾಂತರಂ ಯಥಾ ॥೧೨॥

ಗಾಡಿಯ ಎರಡು ಚಕ್ರಗಳ ನಡುವೆ ನೊಗವನ್ನು ಹೊತ್ತು ನಡೆವ ಎತ್ತಿನಂತೆ, ದಶರಥನು ಪ್ರತಿಜ್ಞಾಪಾಲನ ಕರ್ಮದ ಹೊಣೆ ಹೊತ್ತು ಉದ್ವಿಗ್ನಹೃದಯನಾದ, ವಿವರ್ಣ ವದನನಾದ.

ವಿಹ್ವಲಾಭ್ಯಾ ಚ ನೇತ್ರಾಭ್ಯಾಮಪಶ್ಯನ್ನಿವ ಭೂಮಿಪಃ ।
ಕೃಚ್ಛ್ರಾದ್ಧೈರ್ಯೇಣ ಸಂಸ್ತಭ್ಯ ಕೈಕೇಯೀಮಿದಮಬ್ರವೀತ್ ॥೧೩॥

ಕಣ್ಣುಗಳೆರಡೂ ಗಾಬರಿಗೊಂಡಿದ್ದರಿಂದ ರಾಜ ಅಂಧನಂತಾದ. ಕಷ್ಟದಿಂದ ಧೈರ್ಯದಿಂದ ಎದೆ ಗಟ್ಟಿ ಮಾಡಿಕೊಂಡು ಕೈಕೇಯಿಗೆ ನುಡಿದ.

ಯಸ್ತೇ ಮಂತ್ರಕೃತಃ ಪಾಣಿರಗ್ನೌ ಪಾಪೇ ಮಯಾ ಧೃತಃ ।
ತಂ ತ್ಯಜಾಮಿ ಸ್ವಜಂ ಚೈವ ತವ ಪುತ್ರಂ ಸಹ ತ್ವಯಾ ॥೧೪॥

'ಅಗ್ನಿಯ ಮುಂದೆ ಮಂತ್ರಪೂರ್ವಕವಾಗಿ ನಾನು ಹಿಡಿದ ನಿನ್ನ ಕೈಯನ್ನು ಪಾಪಿಷ್ಠೆ! ನಾನು ತ್ಯಜಿಸುತ್ತೇನೆ. ನಿನ್ನೊಂದಿಗೇ, ನನ್ನಿಂದ ಜನಿಸಿದ ನಿನ್ನ ಪುತ್ರನನ್ನೂ ತ್ಯಜಿಸುತ್ತೇನೆ.'

ಪ್ರಯಾತಾ ರಜನೀ ದೇವಿ ಸೂರ್ಯಸ್ಯೋದಯನಂ ಪ್ರತಿ ।
ಅಭಿಷೇಕಾಯ ಹಿ ಜನಸ್ತ್ವರಯಿಷ್ಯತಿ ಮಾಂ ಧ್ರುವಮ್ ॥೧೫॥

'ಸೂರ್ಯೋದಯವಾಗುತ್ತಿದೆ ಎಂದು ತಿಳಿದು ರಾತ್ರಿ ತಾನೇ ಬೆಳಗಾಗಿದೆ. ರಾಮನ ಅಭಿಷೇಕಕ್ಕೆ ಗುರುಜನರು ನನ್ನನ್ನು ನಿಶ್ಚಿತವಾಗಿ ಆತುರಪಡಿಸುವರು.'

ರಾಮಾಭಿಷೇಕಸಂಭಾರೈಸ್ತದರ್ಥಮುಪಕಲ್ಪಿತೈಃ ।
ರಾಮಃ ಕಾರಯಿತವ್ಯೋ ಮೇ ಮೃತಸ್ಯ ಸಲಿಲಕ್ರಿಯಾಮ್ ॥೧೬॥

'ರಾಮಾಭಿಷೇಕ ಸಾಮಗ್ರಿ ರಾಮಾಭಿಷೇಕಕ್ಕಾಗಿ ಸಜ್ಜಾಗಿದ್ದರೂ ಆ ಸಾಮಗ್ರಿ-ಯಿಂದಲೇ ಈಗ ಮೃತನಾಗುವ ನನಗೆ ರಾಮನ ಕೈಯಿಂದ ಉತ್ತರಕ್ರಿಯೆಯನ್ನು ಗುರುಜನರು ಮಾಡಿಸಬೇಕು.'

ತ್ವಯಾ ಸಪುತ್ರಯಾ ನೈವ ಕರ್ತವ್ಯಾ ಸಲಿಲಕ್ರಿಯಾ ।
ವ್ಯಾಹಂತಾಸ್ಯಶುಭಚಾರೇ ಯದಿ ರಾಮಾಭಿಷೇಚನಮ್ ॥೧೭॥

'ಅಶುಭಚಾರಿ ಕೈಕೇಯಿ! ನೀನು ರಾಮಾಭಿಷೇಕವನ್ನು ತಡೆದರೆ ನೀನೂ ನಿನ್ನ ಮಗನೂ ನನಗೆ ಉತ್ತರಕ್ರಿಯೆಯನ್ನು ಸರ್ವಥಾ ಮಾಡಲಾಗದು.'

ನ ಶಕ್ತೋಽದ್ಯಾಸ್ಮ್ಯಹಂ ದ್ರಷ್ಟುಂ ದೃಷ್ಟ್ವಾಪೂರ್ವಂ ತಥಾಮುಖಮ್ ।
ಹತಹರ್ಷಂ ನಿರಾನಂದಂ ಪುನರ್ಜನಮವಾಙ್ಮುಖಮ್ ॥೧೮॥

'ರಾಮಾಭಿಷೇಕವಾಗುವುದೆಂದು ಹರ್ಷದಿಂದ ಅರಳಿದೆ, ಜನರ ಮುಖ. ಈಗ ಹರ್ಷವಿಲ್ಲದೆ ಆನಂದವಿಲ್ಲದೆ ಮುಖ ತಗ್ಗಿಸುವ ಆ ಜನರನ್ನು ನೋಡಲು ನಾನು ಶಕ್ತನಾಗಲಾರೆ.'

ತಾಂ ತಥಾ ಬ್ರುವತಸ್ತಸ್ಯ ಭೂಮಿಪಸ್ಯ ಮಹಾತ್ಮನಃ ।
ಪ್ರಭಾತಾ ಶರ್ವರೀ ಪುಣ್ಯಾ ಚಂದ್ರನಕ್ಷತ್ರಶಾಲಿನೀ ॥೧೯॥

ಹೀಗೆ ಮಹಾತ್ಮ ದಶರಥನು ಕೈಕೇಯಿಗೆ ಹೇಳುತ್ತಿದ್ದಂತೇ ಚಂದ್ರ ನಕ್ಷತ್ರಗಳಿಂದ ಶೋಭಿಸುತ್ತಿದ್ದ ಆ ಪುಣ್ಯರಾತ್ರಿ ಬೆಳಗಾಯಿತು.

ತತಃ ಪಾಪಸಮಾಚಾರಾ ಕೈಕೇಯೀ ಪಾರ್ಥಿವಂ ಪುನಃ ।
ಉವಾಚ ಪರುಷಂ ವಾಕ್ಯಂ ವಾಕ್ಯಜ್ಞಾ ರೋಷಮೂರ್ಛಿತಾ ॥೨೦॥

ಆಗ ಪಾಪಾಚರಣ ಮಾಡುವ ಮಾತುಗಾರಳಾದ ಕೈಕೇಯಿ ಕೋಪದಿಂದ ಮೈಮರೆತು ರಾಜನಿಗೆ ಪುನಃ ನುಡಿದಳು.

ಕಿಮಿದಂ ಭಾಷಸೇ ರಾಜನ್ ವಾಕ್ಯಂ ಗರರುಜೋಪಮಮ್ ।
ಆನಾಯಯಿತುಮಕ್ಲಿಷ್ಟಂ ಪುತ್ರಂ ರಾಮಮಿಹಾರ್ಹಸಿ ॥೨೧॥

'ಇದೇನು ಮಾತನಾಡುತ್ತಿರುವೆ, ರಾಜನೆ! ವಿಷಬಾಧೆಯಂತಿದೆ ಮಾತು. ಕ್ಲೇಶವನ್ನರಿಯದ ಪುತ್ರ ರಾಮನನ್ನು ಇಲ್ಲಿಗೆ ಕರೆಸು.'

ಸ್ಥಾಪ್ಯ ರಾಜ್ಯೇ ಮಮ ಸುತಂ ಕೃತ್ವಾ ರಾಮಂ ವನೇಚರಮ್ ।
ನಿಃಸಪತ್ನಾಂ ಚ ಮಾಂ ಕೃತ್ವಾ ಕೃತಕೃತ್ಯೋ ಭವಿಷ್ಯಸಿ ॥೨೨॥

'ರಾಜ್ಯದಲ್ಲಿ ನನ್ನ ಮಗನನ್ನಿರಿಸಿ, ರಾಮನನ್ನು ವನವಾಸಿಯಾಗಿ ಮಾಡಿ, ನನಗೂ ಸವತಿಯರಿಲ್ಲದಂತೆ ಮಾಡಿದರೇ ನೀನು ಕೃತಕೃತ್ಯನಾಗುವಿ.'

ಸ ತುನ್ನ ಇವ ತೀಕ್ಷ್ಣೇನ ಪ್ರತೋದೇನ ಹಯೋತ್ತಮಃ ।
ರಾಜಾ ಪ್ರಚೋದಿತೋಽಭೀಕ್ಷ್ಣಂ ಕೈಕೇಯ್ಯಾ ವಾಕ್ಯಮಬ್ರವೀತ್॥೨೩॥

ಕೈಕೇಯಿಯಿಂದ ಮತ್ತೆಮತ್ತೆ ಮಾತಿನಿಂದ ಹಿಂಸೆಗೊಳಗಾದ ದಶರಥ, ತೀಕ್ಷ್ಣ-ವಾದ ಚಾಟಿ ಏಟಿನಿಂದ ನೊಂದ ಕುದುರೆಯಂತಾದ.

ಧರ್ಮಬಂಧೇನ ಬದ್ಧೋಽಸ್ಮಿ ನಷ್ಟಾ ಚ ಮಮ ಚೇತನಾ ।
ಜ್ಯೇಷ್ಠಂ ಪುತ್ರಂ ಪ್ರಿಯಂ ರಾಮಂ ದ್ರಷ್ಟುಮಿಚ್ಛಾಮಿ
ಧಾರ್ಮಿಕಮ್॥೨೪

'ಪ್ರತಿಜ್ಞಾಪಾಲನ ಧರ್ಮಪಾಶದಿಂದ ಬದ್ಧನಾಗಿದ್ದೇನೆ. ನನ್ನ ಬುದ್ಧಿ ಮಂಕಾಗಿದೆ. ಸಾಯುವ ಮೊದಲು ಧಾರ್ಮಿಕನಾದ ಜ್ಯೇಷ್ಠ ಪ್ರಿಯ ಪುತ್ರನನ್ನು ನೋಡಲು ಆಸೆ ಪಡುತ್ತೇನೆ. ಅಷ್ಟಾದರೂ ಉಪಕಾರ ಮಾಡು.'

ತತಃ ಪ್ರಭಾತಾಂ ರಜನೀಮುದಿತೇ ಚ ದಿವಾಕರೇ ।
ಪುಣ್ಯೇ ನಕ್ಷತ್ರಯೋಗೇ ಚ ಮುಹೂರ್ತೇ ಚ ಸಮಾಗತೇ ॥೨೫॥

ವಸಿಷ್ಠೋ ಗುಣಸಂಪನ್ನಃ ಶಿಷ್ಯೈಃ ಪರಿವೃತಸ್ತದಾ ।
ಉಪಗೃಹ್ಯಾಶು ಸಂಭಾರಾನ್ ಪ್ರವಿವೇಶ ಪುರೋತ್ತಮಮ್ ॥೨೬॥

ಗುಣಸಂಪನ್ನನಾದ, ಶಿಷ್ಯರಿಂದ ಪರಿವೃತನಾದ ವಸಿಷ್ಠಮುನಿ, ರಾತ್ರಿ ಬೆಳಗಾದುದನ್ನು ಕಂಡು, ಸರಯೂ ನದಿಯಲ್ಲಿ ಸ್ನಾನಾಹ್ನಿಕಗಳನ್ನು ಪೂರೈಸಿ, ಸೂರ್ಯನು ಉದಿಸಿದಾಗ ಪುಣ್ಯಕರವಾದ ನಕ್ಷತ್ರಯೋಗ ಮುಹೂರ್ತಗಳೂ ಬಂದಾಗ, ಅಭಿಷೇಕ ಸಾಮಗ್ರಿಗಳನ್ನು ಹಿಡಿದುಕೊಂಡು ಉತ್ತಮವಾದ ಪಟ್ಟಣವನ್ನು ಪ್ರವೇಶಿಸಿದನು.

ಸಿಕ್ತಸಂಮಾರ್ಜಿತಪಥಾಂ ಪತಾಕೋತ್ತಮಭೂಷಿತಾಮ್ ।
ವಿಚಿತ್ರಕುಸುಮಾಕೀರ್ಣಾಂ ನಾನಾ ಸ್ರಗ್ಭಿರ್ವಿರಾಜಿತಾಮ್ ॥೨೭॥

ಆ ಅಯೋಧ್ಯಾನಗರಿಯಲ್ಲಿ ಎಲ್ಲೆಡೆ ಬೀದಿಗಳನ್ನು ಗುಡಿಸಿ ಸಾರಿಸಿದ್ದರು.

ಉತ್ತಮ ಪತಾಕೆಗಳನ್ನೇರಿಸಿದ್ದರು. ಸುಂದರ ಹೂಗಳನ್ನು ಚೆಲ್ಲಿದ್ದರು. ನಾನಾ ಹೂಮಾಲೆಗಳಿಂದ ನಗರಿ ವಿರಾಜಿಸಿತ್ತು.

ಸಂಹೃಷ್ಟಮನುಜೋಪೇತಾಂ ಸಮೃದ್ಧವಿಪಣಾಪಣಾಮ್ ।
ಮಹೋತ್ಸವಸಮಾಕೀರ್ಣಾಂ ರಾಘವಾರ್ಥೇ ಸಮುತ್ಸುಕಾಮ್ ॥೨೮॥

ಬಲು ಹರ್ಷಗೊಂಡ ಪೌರರಿಂದ ತುಂಬಿತ್ತು. ಸರಕುಗಳಿಂದ ತುಂಬಿದ್ದ ಅಂಗಡಿ ಮುಂಗಟ್ಟುಗಳಿಂದ ಕೂಡಿತ್ತು. ದೊಡ್ಡ ಹಬ್ಬಗಳಿಂದ ತುಂಬಿದ್ದು ರಾಮೋತ್ಸವಕ್ಕೆ ತವಕಗೊಂಡಿತ್ತು.

ಚಂದನಾಗರುಧೂಪೈಶ್ಚ ಸರ್ವತಃ ಪರಿಧೂಪಿತಾಮ್ ।
ತಾಂ ಪುರೀಂ ಸಮತಿಕ್ರಮ್ಯ ಪುರಂದರಪುರೋಪಮಾಮ್ ॥೨೯॥

ದದರ್ಶಾಂತಃಪುರಂ ಶ್ರೀಮಾನ್ ನಾನಾದ್ವಿಜಗಣಾಯುತಮ್ ।
ಪೌರಜನಪದಾಕೀರ್ಣಂ ಬ್ರಾಹ್ಮಣೈರುಪಶೋಭಿತಮ್ ॥೩೦॥

ಚಂದನ ಅಗುರು ಧೂಪಗಳಿಂದ ಎಲ್ಲೆಡೆ ಘಮಘಮಿಸುತ್ತಿದ್ದ ಆ ನಗರಿ ದೇವೇಂದ್ರನ ಅಮರಾವತಿ ನಗರಿಯನ್ನು ಹೋಲುತ್ತಿತ್ತು. ಅದನ್ನು ದಾಟಿ ಶ್ರೀಮಾನ್ ವಸಿಷ್ಠಮುನಿ ನಾನಾ ದ್ವಿಜ ಸಮೂಹಗಳಿಂದಲೂ ನಗರವಾಸಿ ಗ್ರಾಮಾಂತರವಾಸಿ ಜನರಿಂದಲೂ ಬ್ರಾಹ್ಮಣರಿಂದಲೂ ಶೋಭಿಸುತ್ತಿದ್ದ ಅಂತಃಪುರವನ್ನು ನೋಡಿದನು.

ಯಜ್ಞವಿದ್ಭಿಃ ಸುಸಂಪೂರ್ಣಂ ಸದಸ್ಯೈಃ ಪರಮಾರ್ಚಿತೈಃ ।
ತದಂತಃಪುರಮಾಸಾದ್ಯ ವ್ಯತಿಚಕ್ರಾಮ ತಂ ಜನಮ್ ॥೩೧॥

ಯಜ್ಞ ಜ್ಞಾನಿಗಳಾಗಿ ಬಹಳ ಸಮ್ಮಾನಿತರಾದ ಬ್ರಾಹ್ಮಣರಿಂದ ಅಂತಃಪುರ ತುಂಬಿಹೋಗಿತ್ತು. ಅದನ್ನು ಸಮೀಪಿಸಿ ವಸಿಷ್ಠಮುನಿ ಆ ಜನರನ್ನು ದಾಟಿ ಮುಂದೆ ನಡೆದನು.

ವಸಿಷ್ಠಃ ಪರಮಪ್ರೀತಃ ಪರಮರ್ಷಿಭಿರಾವೃತಃ ।
ಸ ತ್ವಪಶ್ಯದ್ವಿನಿಷ್ಕ್ರಾಂತಂ ಸುಮಂತ್ರಂ ನಾಮ ಸಾರಥಿಮ್ ।
ದ್ವಾರೇ ಮನುಜಸಿಂಹಸ್ಯ ಸಚಿವಂ ಪ್ರಿಯದರ್ಶನಮ್ ॥೩೨॥

ವಸಿಷ್ಠಮುನಿ ಬಹಳ ಸಂತುಷ್ಟನಾಗಿ ಮಹರ್ಷಿಗಳಿಂದ ಪರಿವೃತನಾಗಿ ಬರುತ್ತಿದ್ದಂತೆ ಅಂತಃಪುರ ದ್ವಾರದಲ್ಲಿ ಹೊರಗೆ ಬರುತ್ತಿದ್ದ ಸುಮಂತ್ರನೆಂಬ ಸಾರಥಿಯನ್ನು ಕಂಡನು.

ಸುಮಂತ್ರನು ರಾಜಾ ದಶರಥನಿಗೆ ಸಚಿವನೂ ಆಗಿದ್ದ. ಚೆನ್ನಾಗಿ ಅಲಂಕೃತನಾಗಿದ್ದು ಸುಂದರನಾಗಿ ಕಾಣುತ್ತಿದ್ದ.

ತಮುವಾಚ ಮಹಾತೇಜಾಃ ಸೂತಪುತ್ರಂ ವಿಶಾರದಮ್ ।
ವಸಿಷ್ಠಃ ಕ್ಷಿಪ್ರಮಾಚಕ್ಷ್ವ ನೃಪತೇರ್ಮಾಮಿಹಾಗತಮ್ ॥೩೩॥

ಮಹಾತೇಜಸ್ವಿಯಾದ ವಸಿಷ್ಠಮುನಿ ನೀತಿವಿಶಾರದನಾದ ಸುಮಂತ್ರನಿಗೆ ನುಡಿದರು, ''ನಾನು ಇಲ್ಲಿಗೆ ಬಂದಿರುವುದಾಗಿ ಬೇಗನೆ ರಾಜನಿಗೆ ಹೇಳು' ಎಂದು.

ಇಮೇ ಗಂಗೋದಕಘಟಾಃ ಸಾಗರೇಭ್ಯಶ್ಚ ಕಾಂಚನಾಃ ।
ಔದುಂಬರಂ ಭದ್ರಪೀಠಮಭಿಷೇಕಾರ್ಥಮಾಹೃತಮ್ ॥೩೪॥

ಇದೋ ನೋಡಿ, ಇವು ಗಂಗಾಜಪೂರ್ಣವಾದ ಬಂಗಾರದ ಕಲಶಗಳು. ಸಾಗರ ಜಲದಿಂದ ತುಂಬಿದ ಕಲಶಗಳು ಇವು. ಇದು ಅತ್ತಿಮರದ ಮಂಗಳ ಆಸನ, ಅಭಿಷೇಕಕ್ಕಾಗಿ ತರಿಸಿದ್ದೇನೆ.

ಸರ್ವಬೀಜಾನಿ ಗಂಧಾಶ್ಚ ರತ್ನಾನಿ ವಿವಿಧಾನಿ ಚ ॥೩೫॥

ಎಲ್ಲ ಧಾನ್ಯಕಾಳುಗಳು, ಸುಗಂಧ ದ್ರವ್ಯಗಳು ನಾನಾ ಬಗೆಯ ರತ್ನಗಳು ಇವು.

ಕ್ಷೌದ್ರಂ ದಧಿ ಘೃತಂ ಲಾಜಾ ದರ್ಭಾಃ ಸುಮನಸಃ ಪಯಃ ।
ಅಷ್ಟೌ ಚ ಕನ್ಯಾ ರುಚಿರಾ ಮತ್ತಶ್ಚ ವರವಾರಣಃ ॥೩೬॥

ಜೇನು, ಮೊಸರು, ತುಪ್ಪ, ಬತ್ತದ ಅರಳು, ದರ್ಭೆಗಳು, ಹೂಗಳು, ಹಾಲು, ಎಂಟು ಸುಂದರ ಕನ್ನಿಕೆಯರು. ಮದಿಸಿದ ಉತ್ತಮವಾದ ಆನೆ.

ಚತುರಶ್ವೋ ರಥಃ ಶ್ರೀಮಾನ್ನಿಸ್ತ್ರಿಂಶೋ ಧನುರುತ್ತಮಮ್ ।
ವಾಹನಂ ನರಸಂಯುಕ್ತಂ ಛತ್ರಂ ಚ ಶಶಿಸಂನಿಭಮ್ ॥೩೭॥

ನಾಲ್ಕು ಕುದುರೆಗಳನ್ನು ಕಟ್ಟಿರುವ ಸುಂದರವಾದ ರಥ, ಖಡ್ಗ, ಉತ್ತಮವಾದ ಧನುಸ್ಸು ಮನುಷ್ಯರು ಹೊರುವ ವಾಹನ ಪಲ್ಲಕ್ಕಿ, ಚಂದ್ರನಂತೆ ಬಿಳಿಯಾದ ಛತ್ರ.

ಶ್ವೇತೇ ಚ ವಾಲವ್ಯಜನೇ ಭೃಂಗಾರಶ್ಚ ಹಿರಣ್ಮಯಃ ।
ಹೇಮದಾಮಪಿನದ್ಧಶ್ಚ ಕಕುದ್ಮಾನ್ ಪಾಂಡರೋ ವೃಷಃ ॥೩೮॥

ಬಿಳಿ ಚಾಮರ ಬೀಸಣಿಗೆಗಳು ಬಂಗಾರದ ಗಿಂಡಿ, ಬಂಗಾರದ ಮಾಲೆ ತೊಡಿಸಿದ ಒಳ್ಳೆಯ ಹಿಳಿಲುಳ್ಳ ಬಿಳಿ ಎತ್ತು.

ಕೇಸರೀ ಚ ಚತುರ್ದಂಷ್ಟ್ರೋ ಹರಿಶ್ರೇಷ್ಠೋ ಮಹಾಬಲಃ ।
ಸಿಂಹಾಸನಂ ವ್ಯಾಘ್ರತನುಃ ಸಮಿದ್ಧಶ್ಚ ಹುತಾಶನಃ ॥೬೯॥

ಒಳ್ಳೆಯ ಕೇಸರ ಉಳ್ಳ ನಾಲ್ಕು ಹಲ್ಲುಗಳುಳ್ಳ ಮಹಾಬಲಶಾಲಿಯಾದ ಶ್ರೇಷ್ಠವಾದ ಅಶ್ವ, ಸಿಂಹಾಸನ, ಹುಲಿಚರ್ಮ, ಸಮಿತ್ತುಗಳು, ಅಗ್ನಿ.

ಸರ್ವವಾದಿತ್ರಸಂಘಾಶ್ಚ ವೇಶ್ಯಾಶ್ಚಾಲಂಕೃತಾಃ ಸ್ತ್ರಿಯಃ ।
ಆಚಾರ್ಯಾ ಬ್ರಾಹ್ಮಣಾ ಗಾವಃ ಪುಣ್ಯಾಶ್ಚ ಮೃಗಪಕ್ಷಿಣಃ ॥೭೦॥

ಎಲ್ಲ ವಾದ್ಯ ಸಮೂಹಗಳು, ಅಲಂಕೃತರಾದ ವೇಶ್ಯೆಯರು ಮತ್ತು ಸುಮಂಗಲಿ-ಯರು, ಆಚಾರ್ಯರು ಬ್ರಾಹ್ಮಣರು ಗೋವುಗಳು ಪುಣ್ಯಕರವಾದ ಮೃಗ ಪಕ್ಷಿಗಳು.

ಪೌರಜಾನಪದಶ್ರೇಷ್ಠಾ ನೈಗಮಾಶ್ಚ ಗಣೈಃ ಸಹ ।
ಏತೇ ಚಾನ್ಯೇ ಚ ಬಹವಃ ಪ್ರೀಯಮಾಣಾಃ ಪ್ರಿಯಂವದಾಃ ॥೭೧॥

ಮುಖ್ಯರಾದ ಪೌರರು ಗ್ರಾಮೀಣರು, ವರ್ತಕರು, ತಮ್ಮ ತಮ್ಮ ಕಡೆಯ ಗುಂಪುಗಳೊಂದಿಗೆ ಬಂದಿದ್ದಾರೆ. ಇವರು ಮಾತ್ರವಲ್ಲದೆ, ಬೇರೆ ರಾಮನ ಅಭಿಮಾನಿಗಳು ಪ್ರಿಯವನ್ನು ನುಡಿಯುವವರು ಬಹು ಜನರು ಬಂದಿದ್ದಾರೆ.

ಅಭಿಷೇಕಾಯ ರಾಮಸ್ಯ ಸಹ ತಿಷ್ಠಂತಿ ಪಾರ್ಥಿವೈಃ ।
ತ್ವರಯಸ್ವ ಮಹಾರಾಜಂ ಯಥಾ ಸಮುದಿತೇಽಹನಿ ॥೭೨॥

ಎಲ್ಲರೂ ರಾಮನ ಅಭಿಷೇಕಕ್ಕಾಗಿ ರಾಜರೊಂದಿಗೆ ಕಾದು ನಿಂತಿದ್ದಾರೆ. ಮುಹೂರ್ತ ಗುಣಗಳಿಂದ ಯುಕ್ತವಾದ ಈ ಹಗಲಿನಲ್ಲಿ ಅಭಿಷೇಕಕ್ಕಾಗಿ ಮಹಾರಾಜನನ್ನು ಬೇಗನೆ ಬರಲು ಹೇಳು.

ಪುಣ್ಯೇ ನಕ್ಷತ್ರಯೋಗೇ ಚ ರಾಮೋ ರಾಜ್ಯಮವಾಪ್ನುಯಾತ್ ।
ಇತಿ ತಸ್ಯ ವಚಃ ಶ್ರುತ್ವಾ ಸೂತಪುತ್ರೋ ಮಹಾತ್ಮನಃ ।
ಸ್ತುವನ್ನೃಪತಿಶಾರ್ದೂಲಂ ಪ್ರವಿವೇಶ ನಿವೇಶನಮ್ ॥೭೩॥

'ಪುಣ್ಯಕರವಾದ ನಕ್ಷತ್ರಯೋಗದಲ್ಲಿ ರಾಮನು ರಾಜ್ಯವನ್ನು ಪಡೆಯಬೇಕು' ಎಂದು ಹೇಳು, ಹೀಗೆ ಮಹಾತ್ಮನಾದ ವಸಿಷ್ಠಮುನಿ ಹೇಳಿದ ಮಾತನ್ನು ಕೇಳಿ ಸುಮಂತ್ರನು ಮಹಾರಾಜನನ್ನು ಸ್ತುತಿಸಲು ಅಂತಃಪುರವನ್ನು ಪ್ರವೇಶಿಸಿದ.

ತಂ ತು ಪೂರ್ವೋದಿತಂ ವೃದ್ಧಂ ದ್ವಾರಸ್ಥಾ ರಾಜಸಂಮತಾಃ ।
ನ ಶೇಕುರಭಿಸಂರೋದ್ಧುಂ ರಾಜ್ಞಃ ಪ್ರಿಯಚಿಕೀರ್ಷವಃ ॥೪೪॥

'ಸುಮಂತ್ರ ವೃದ್ಧ, ಅವನನ್ನು ದ್ವಾರಪಾಲಕರು ಯಾರೂ ತಡೆಯಬೇಡಿರಿ' ಎಂದು ಮೊದಲೇ ರಾಜ ಹೇಳಿದ್ದರಿಂದ ರಾಜನಿಗೆ ಆಪ್ತರಾದ ರಾಜನಿಗೆ ಪ್ರಿಯ ಉಂಟುಮಾಡಲು ಬಯಸಿರುವ ದ್ವಾರಪಾಲಕರು ವೃದ್ಧನಾದ ಸುಮಂತ್ರನನ್ನು ತಡೆಯದೆ ಬಿಟ್ಟರು.

ಸ ಸಮೀಪಸ್ಥಿತೋ ರಾಜ್ಞಸ್ತಾಮವಸ್ಥಾಮಜಜ್ಞಿವಾನ್ ।
ವಾಗ್ಭಿಃ ಪರಮತುಷ್ಟಾಭಿರಭಿಷ್ಟೋತುಂ ಪ್ರಚಕ್ರಮೇ ॥೪೫॥

ರಾಜನಿಗೆ ಸಮೀಪವಿರುವವನಾದರೂ ಸುಮಂತ್ರನು ರಾಜನ ಈ ಅಪೂರ್ವ-ವಾದ ಅವಸ್ಥೆಯನ್ನು ತಿಳಿಯದೆ ಪರಮಸಂತೋಷಕರವಾದ ಶಬ್ದಗಳಿಂದ ಅವನನ್ನು ಸ್ತುತಿಸಲು ಪ್ರವೃತ್ತನಾದ.

ತತಃ ಸೂತೋ ಯಥಾಕಾಲಂ ಪಾರ್ಥಿವಸ್ಯ ನಿವೇಶನೇ ।
ಸುಮಂತ್ರಃ ಪ್ರಾಂಜಲಿರ್ಭೂತ್ವಾ ತುಷ್ಟಾವ ಜಗತೀಪತಿಮ್ ॥೪೬॥

ಅದು ಸೂತರು ಸುಪ್ರಭಾತ ಹೇಳುವ ಕಾಲವಾದ್ದರಿಂದ ಆ ಕಾಲಕ್ಕೆ ಅನುಸಾರ-ವಾಗಿ ರಾಜನ ಅಂತಃಪುರದಲ್ಲಿ ನಿಂತು ಕೈಮುಗಿದು ಸುಮಂತ್ರನು ರಾಜನನ್ನು ಸ್ತುತಿಸಿದ.

ಯಥಾ ನಂದತಿ ತೇಜಸ್ವೀ ಸಾಗರೋ ಭಾಸ್ಕರೋದಯೇ ।
ಪ್ರೀತಃ ಪ್ರೀತೇನ ಮನಸಾ ತಥಾ ನಂದಯ ನಃ ಸ್ವತಃ ॥೪೭॥

ಸೂರ್ಯೋದಯದಲ್ಲಿ ಸಾಗರದ ಅಲೆಗಳಮೇಲೆ ಸೂರ್ಯಕಿರಣಗಳು ಬೀಳುವುದರಿಂದ ಸ್ನಾನಮಾಡುವ ಜನರಿಗೆ ಕಣ್ಣಿಗೆ ಹಬ್ಬ ಉಂಟುಮಾಡುತ್ತಾನೆ ಸಮುದ್ರರಾಜ. ಹಾಗೇ ನನ್ನ ಸ್ತೋತ್ರವನ್ನು ಕೇಳಿ ಸುಪ್ರೀತನಾಗಿ ನೀನು ಸುಪ್ರೀತ-ವಾದ ಮನಸ್ಸಿನಿಂದ ನಮ್ಮನ್ನು ಸ್ವತಃ ಸಂತೋಷಗೊಳಿಸು.

ಇಂದ್ರಮಸ್ಯಾಂ ತು ವೇಲಾಯಾಮಭಿತುಷ್ಟಾವ ಮಾತಲಿಃ ।
ಸೋಽಜಯದ್ದಾನವಾನ್ ಸರ್ವಾಂಸ್ತಥಾ ತ್ವಾಂ ಬೋಧಯಾಮ್ಯಹಮ್ ॥

ಈ ಸೂರ್ಯೋದಯದ ವೇಳೆಯಲ್ಲಿ ಮಾತಲಿ ಇಂದ್ರನನ್ನು ಸ್ತುತಿಸುತ್ತಾನೆ. ಅದರಿಂದ ಉತ್ಸಾಹಿತನಾಗಿ ಇಂದ್ರನು ದಾನವರನ್ನು ಎಲ್ಲರನ್ನೂ ಮಣಿಸುತ್ತಾನೆ. ಹಾಗೇ ನಾನೂ ನಿನ್ನನ್ನು ನಿದ್ರೆಯಿಂದ ಎಚ್ಚರಿಸುತ್ತೇನೆ.

ವೇದಾಃ ಸಹಾಂಗವಿದ್ಯಾಶ್ಚ ಯಥಾ ಹ್ಯಾತ್ಮಭುವಂ ವಿಭುಮ್ ।
ಬ್ರಹ್ಮಾಣಂ ಬೋಧಯಂತ್ಯದ್ಯ ತಥಾ ತ್ವಾಂ ಬೋಧಯಾಮ್ಯಹಮ್ ॥

ವೇದವೇದಾಂಗವಿದ್ಯಾಭಿಮಾನಿನಿ ದುರ್ಗೆ ಲಯದ ಅಷ್ಟಮ ಭಾಗದಲ್ಲಿ ಸ್ವಯಂಭೂವಾದ ಪ್ರಭುವಾದ ಪರಬ್ರಹ್ಮ ನಾರಾಯಣನನ್ನು ಶ್ರುತಿಗೀತೆಯಿಂದ ಎಬ್ಬಿಸುವಂತೆ ನಾನು ಸುಪ್ರಭಾತ ಗೀತೆಯಿಂದ ನಿನ್ನನ್ನು ಎಬ್ಬಿಸುತ್ತೇನೆ.

ಆದಿತ್ಯಃ ಸಹ ಚಂದ್ರೇಣ ಯಥಾ ಭೂತಧರಾಂ ಶುಭಾಮ್ ।
ಬೋಧಯತ್ಯದ್ಯ ಪೃಥಿವೀಂ ತಥಾ ತ್ವಾಂ ಬೋಧಯಾಮ್ಯಹಮ್ ॥೫೦॥

ಸೂರ್ಯಚಂದ್ರಾದಿ ದೇವತೆಗಳು ಮಂಗಳಕರಳಾದ ಭೂತಧಾತ್ರಿಯಾದ ಭೂದೇವಿಯನ್ನು ಸ್ತುತಿಸುವಂತೆ ನಾನು ನಿನ್ನನ್ನು ಸ್ತುತಿಸುತ್ತೇನೆ.

ಉತ್ತಿಷ್ಠಾಶು ಮಹಾರಾಜ ಕೃತಕೌತುಕಮಂಗಲಃ ।
ವಿರಾಜಮಾನೋ ವಪುಷಾ ಮೇರೋರಿವ ದಿವಾಕರಃ ॥೫೧॥

ಮಹಾರಾಜ, ಅಭಿಷೇಕೋತ್ಸವ ಯೋಗ್ಯವಾದ ಮಂಗಲಕರ ವಸ್ತ್ರಾಲಂಕಾರ ಗಳಿಂದ ಭೂಷಿತನಾಗಿ ಶರೀರದಿಂದ ವಿರಾಜಮಾನನಾಗಿ ನೀನು, ಮೇರುವಿಗೆ ಆ ಪಾರ್ಶ್ವದಿಂದ ಈ ಪಾರ್ಶ್ವಕ್ಕೆ ಸೂರ್ಯನು ಎದ್ದು ಬರುವಂತೆ, ಬೇಗನೆ ಎದ್ದು ಬಾ.

ಸೋಮಸೂರ್ಯೌ ಚ ಕಾಕುತ್ಸ್ಥ ಶಿವವೈಶ್ರವಣಾವಪಿ ।
ವರುಣಶ್ಚಾಗ್ನಿರಿಂದ್ರಶ್ಚ ವಿಜಯಂ ಪ್ರದಿಶಂತು ತೇ ॥೫೨॥

ಚಂದ್ರ ಸೂರ್ಯ ಶಿವ ಕುಬೇರ ವರುಣ ಅಗ್ನಿ ಮತ್ತು ಇಂದ್ರರು ನಿನಗೆ ಜಯವನ್ನು ನೀಡಲಿ.

ಸ್ತುತಿಪಾತಕರ ಈ 'ಸ್ತುತಿ' ಕೇವಲ ರಾಜವೈಭವ ಪ್ರದರ್ಶನದಲ್ಲ. ಇದು ಶುಭಾಶಂಸನ, ಶುಭ ಹಾರೈಕೆ, ಇದು ಸತ್ಯವಾಗುವುದು ಸತ್ಯವಾಗಬೇಕು.

ಗತಾ ಭಗವತೀ ರಾತ್ರಿರಹಃ ಶಿವಮುಪಸ್ಥಿತಮ್ ।
ಬುಧ್ಯಸ್ವ ರಾಜಶಾರ್ದೂಲ ಕುರು ಕಾರ್ಯಮನಂತರಮ್ ॥೫೩॥

ಭಗವತಿ ರಾತ್ರಿದೇವಿ ದುರ್ಗೆ ಮರೆಯಾಗಿದ್ದಾಳೆ. ಮಂಗಳಕರವಾದ ಹಗಲು ಬಂದಿದೆ. ಮಹಾರಾಜ, ಎದ್ದೇಳು, ಈಗ ಮಾಡಬೇಕಾಗಿರುವ ಮಂಗಳಕಾರ್ಯ-ದಲ್ಲಿ ತೊಡಗು.

ಉದತಿಷ್ಠತ ರಾಮಸ್ಯ ಸಮಗ್ರಮಭಿಷೇಚನಮ್ ।
ಪೌರಜಾನಪದೈಶ್ಚಾಪಿ ನೈಗಮೈಶ್ಚ ಕೃತಾತ್ಮಭಿಃ ।
ಸ್ವಯಂ ವಸಿಷ್ಠೋ ಭಗವಾನ್ ಬ್ರಾಹ್ಮಣೈಃ ಸಹ ತಿಷ್ಠತಿ ॥೫೪॥

ರಾಮನ ಅಭಿಷೇಕ ಸಾಮಗ್ರಿ ಎಲ್ಲವೂ ಸಿದ್ಧವಾಗಿದೆ. ಸ್ವಯಂ ಭಗವಾನ್ ವಸಿಷ್ಠರು, ಪ್ರಯತ್ನಶೀಲರಾದ ಪೌರರು ಗ್ರಾಮೀಣರು ವರ್ತಕರು ಬ್ರಾಹ್ಮಣರು ಇವರೆಲ್ಲರೊಂದಿಗೆ ಸಿದ್ಧರಾಗಿ ನಿಂತಿದ್ದಾರೆ.

ಕ್ಷಿಪ್ರಮಾಜ್ಞಾಪ್ಯತಾಂ ರಾಜನ್ ರಾಘವಸ್ಯಾಭಿಷೇಚನಮ್ ॥೫೫॥

ರಾಮನಿಗೆ ಅಭಿಷೇಕ ಮಾಡಲು, ರಾಜನೆ, ಬೇಗನೆ ಆಜ್ಞೆಮಾಡು.

ಯಥಾ ಹ್ಯಪಾಲಾಃ ಪಶವೋ ಯಥಾ ಸೇನಾ ಹ್ಯನಾಯಕಾ ।
ಯಥಾ ಚಂದ್ರಂ ವಿನಾ ರಾತ್ರಿರ್ಯಥಾ ಗಾವೋ ವಿನಾ ವೃಷಮ್ ।
ಏವಂ ಹಿ ಭವಿತಾ ರಾಷ್ಟ್ರಂ ಯತ್ರ ರಾಜಾ ನ ದೃಶ್ಯತೇ ॥೫೬॥

ಪಾಲಕನಿಲ್ಲದೆ ಪಶುಗಳು, ನಾಯಕನಿಲ್ಲದೆ ಸೇನೆ, ಚಂದ್ರನಿಲ್ಲದೆ ರಾತ್ರಿ, ಹೋರಿ ಇಲ್ಲದೆ ಹಸುಗಳು ಹೇಗೋ ಹಾಗೇ ರಾಜನು ಕಾಣದಿರುವಲ್ಲಿ ರಾಷ್ಟ್ರದ ಪ್ರಜೆಗಳು ಕಾರ್ಯಸಾಧನೆಯಲ್ಲಿ ಸಮರ್ಥರಾಗಲಾರರು.

ಇತಿ ತಸ್ಯ ವಚಃ ಶ್ರುತ್ವಾ ಸಾಂತ್ವಪೂರ್ವಮಿವಾರ್ಥವತ್ ।
ಅಭ್ಯಕೀರ್ಯತ ಶೋಕೇನ ಭೂಯ ಏವ ಮಹೀಪತಿಃ ॥೫೭॥

ಸುಮಂತ್ರನು ನುಡಿದ ಮಾತು ಮನಒಲಿಸುವಂಥ ಅರ್ಥವತ್ತಾದ ಮಾತು. ಅದನ್ನು ಕೇಳಿ ದಶರಥನು ಇನ್ನೂ ಹೆಚ್ಚು ಶೋಕಾವಿಷ್ಟನಾದ.

ತತಃ ಸ ರಾಜಾ ತಂ ಸೂತಂ ಸನ್ನಹರ್ಷಃ ಸುತಂ ಪ್ರತಿ ।
ಶೋಕರಕ್ತೇಕ್ಷಣಃ ಶ್ರೀಮಾನುದ್ವೀಕ್ಷ್ಯೋವಾಚ ಧಾರ್ಮಿಕಃ ॥೫೮॥

ಧಾರ್ಮಿಕನಾದ ಶ್ರೀಮಂತನಾದ ರಾಜ ಪುತ್ರರಾಮನ ವಿಷಯದಲ್ಲಿ ಉತ್ಸಾಹ

ಕಳೆದುಕೊಂಡು ಶೋಕದಿಂದ ಅತ್ತು ಕಣ್ಣು ಕೆಂಪಾಗಿಸಿಕೊಂಡು ಸಮಂತ್ರನನ್ನು ನೋಡಿ ನುಡಿದ.

ವಾಕ್ಯೈಸ್ತು ಖಲು ಮರ್ಮಾಣಿ ಮಮ ಭೂಯೋ ನಿಕೃಂತಸಿ ॥೫೯॥

ಮಾತುಗಳಿಂದ ನನ್ನ ಮರ್ಮಸ್ಥಳಕ್ಕೆ ಮತ್ತೆಮತ್ತೆ ಚುಚ್ಚುತ್ತಿರುವೆ, ಸುಮಂತ್ರ!

ಸುಮಂತ್ರಃ ಕರುಣಂ ಶ್ರುತ್ವಾ ದೃಷ್ಟ್ವಾ ದೀನಂ ಚ ಪಾರ್ಥಿವಮ್ ।
ಪ್ರಗೃಹೀತಾಂಜಲಿಃ ಪ್ರಹ್ವಸ್ತಸ್ಮಾದ್ದೇಶಾದಪಾಕ್ರಮತ್ ॥೬೦॥

ರಾಜನು ಕರುಣಾಜನಕವಾಗಿ ನುಡಿದುದನ್ನು ಕೇಳಿ, ಅವನು ದೀನನಾಗಿರುವು ದನ್ನು ನೋಡಿ ಸುಮಂತ್ರನು ವಿನಯದಿಂದ ಕೈಮುಗಿದು ಅಲ್ಲಿಂದ ಹಿಂದಕ್ಕೆ ಸರಿದ.

ಯದಾ ವಕ್ತುಂ ಸ್ವಯಂ ದೈವಾನ್ನ ಶಶಾಕ ಮಹೀಪತಿಃ ।
ತದಾ ಸುಮಂತ್ರಂ ಮಂತ್ರಜ್ಞಾ ಕೈಕೇಯೀ ಪ್ರತ್ಯುವಾಚ ಹ ॥೬೧॥

ದೈವಾತ್ ದಶರಥ ಸ್ವಯಂ ಮಾತನಾಡುವ ಸ್ಥಿತಿಯಲ್ಲಿಲ್ಲದಾಗ ರಾಜನೀತಿ ಬಲ್ಲವಳಾದ ಕೈಕೇಯಿಯೇ ಸುಮಂತ್ರನಿಗೆ ಉತ್ತರ ನೀಡಿದಳು.

ಸುಮಂತ್ರ ರಾಜಾ ರಜನೀಂ ರಾಮಹರ್ಷಸಮುತ್ಸುಕಃ ।
ಪ್ರಜಾಗರಪರಿಶ್ರಾಂತೋ ನಿದ್ರಾಯಾ ವಶಮೇಯಿವಾನ್ ॥೬೨॥

ಸುಮಂತ್ರ, ರಾಜನು ರಾಮಪಟ್ಟಾಭಿಷೇಕದ ಉತ್ಸಾಹದಲ್ಲಿ ರಾತ್ರಿ ಇಡೀ ಎಚ್ಚರವಿದ್ದಿದ್ದರಿಂದ ಆಯಾಸಗೊಂಡು ಈಗತಾನೆ ನಿದ್ರಾಪರವಶನಾಗಿದ್ದಾನೆ.

ತದ್‌ಗಚ್ಛ ತ್ವರಿತಂ ಸೂತ ರಾಜಪುತ್ರಂ ಯಶಸ್ವಿನಮ್ ।
ರಾಮಮಾನಯ ಭದ್ರಂ ತೇ ನಾತ್ರ ಕಾರ್ಯಾ ವಿಚಾರಣಾ ॥೬೩॥

ಅದರಿಂದ, ಸುಮಂತ್ರ, ಬೇಗನೆ ಹೋಗು, ಕೀರ್ತಿಶಾಲಿಯಾದ ರಾಜಕುಮಾರ ರಾಮನನ್ನು ಕರೆದು ತಾ. ನಿನಗೆ ಒಳ್ಳೆಯದಾಗಲಿ. ಇದರಲ್ಲಿ ವಿಚಾರಮಾಡಬೇಕಾದ ಅಂಶವಿಲ್ಲ.

ಅಶ್ರುತ್ವಾ ರಾಜವಚನಂ ಕಥಂ ಗಚ್ಛಾಮಿ ಭಾಮಿನಿ ।
ತಚ್ಛ್ರುತ್ವಾ ಮಂತ್ರಿಣೋ ವಾಕ್ಯಂ ರಾಜಾ ಮಂತ್ರಿಣಮಬ್ರವೀತ್ ।

ಸುಮಂತ್ರ ರಾಮಂ ದ್ರಕ್ಷ್ಯಾಮಿ ಶೀಘ್ರಮಾನಯ ಸುಂದರಂ ॥೬೪॥

ಸುಮಂತ್ರನು ನುಡಿದ. 'ರಾಜನು ಸ್ವತಃ ಹೇಳುವ ಮಾತನ್ನು ಕೇಳದೆ ನಾನು ಹೇಗೆ ಹೋಗಲಿ?' ಮಂತ್ರಿಯ ಈ ಮಾತನ್ನು ಕೇಳಿ ರಾಜನು ಮಂತ್ರಿಗೆ ಹೇಳಿದ, 'ಸುಮಂತ್ರ! ಸುಂದರನಾದ ರಾಮನನ್ನು ನಾನು ನೋಡುವೆ. ಬೇಗನೆ ಅವನನ್ನು ಕರೆತಾ'

ಸ ಮನ್ಯಮಾನಃ ಕಲ್ಯಾಣಂ ಹೃದಯೇನ ನನಂದ ಚ ।
ನಿರ್ಜಗಾಮ ಚ ಸಂಪ್ರೀತ್ಯಾ ತ್ವರಿತೋ ರಾಜಶಾಸನಾತ್ ॥೬೫॥

'ಶುಭವಾಗುತ್ತಿದೆ' ಎಂದುಕೊಂಡು ಸುಮಂತ್ರ ಅಂತರಂಗದಲ್ಲಿ ಆನಂದಿಸಿದ. ರಾಜಾಜ್ಞೆ ಎಂದು ತಿಳಿದು ಬೇಗನೆ ಆನಂದದಿಂದ ಹೊರಟ.

ಸುಮಂತ್ರಶ್ಚಿಂತಯಾಮಾಸ ತ್ವರಿತಂ ಚೋದಿತಸ್ತಯಾ ।
ವ್ಯಕ್ತಂ ರಾಮೋಽಭಿಷೇಕಾರ್ಥಮಿಹಾಯಾಸ್ಯತಿ ಧರ್ಮವಿತ್ ॥೬೬॥

ಸುಮಂತ್ರ ಆಲೋಚಿಸಿದ, 'ರಾಣಿ ತ್ವರೆಯಿಂದ ಆಜ್ಞೆಮಾಡಿದ್ದರಿಂದ ಧರ್ಮಜ್ಞ-ನಾದ ರಾಮನು ಅಭೀಷೇಕಕ್ಕಾಗಿ ಇಲ್ಲಿಗೆ ಬಂದೇ ಬರುತ್ತಾನೆ.'

ಇತಿ ಸೂತೋ ಮತಿಂ ಕೃತ್ವಾ ಹರ್ಷೇಣ ಮಹತಾ ವೃತಃ ।
ನಿರ್ಜಗಾಮ ಮಹಾಬಾಹೋ ರಾಘವಸ್ಯ ದಿದೃಕ್ಷಯಾ ॥೬೭॥

ಹೀಗೆ ಸುಮಂತ್ರ ನಿಶ್ಚಯಮಾಡಿಕೊಂಡು ಬಹಳ ಉತ್ಸಾಹದಿಂದ ತುಂಬಿ ಮಹಾಬಾಹುವಾದ ರಾಮನ ದರ್ಶನೇಚ್ಛೆಯಿಂದ ಹೊರಟ.

ಸಾಗರಹ್ರದಸಂಕಾಶಾತ್ ಸುಮಂತ್ರೋಽಂತಃಪುರಾಚ್ಛುಭಾತ್ ।
ನಿಷ್ಪಮ್ಯ ಜನಸಂಬಾಧಂ ದದರ್ಶ ದ್ವಾರಮಗ್ರತಃ ॥೬೮॥

ನಗರದ ಮಧ್ಯಭಾಗದಲ್ಲಿದ್ದ ಅಂತಃಪುರವು ಸಾಗರದ ಮಧ್ಯದಲ್ಲಿರುವ ಮಡುವಿನಂತೆ ಇತ್ತು. ಸುಮಂತ್ರ ಮಂಗಳಕರವಾದ ಅಂತಃಪುರದಿಂದ ಹೊರಗೆ ಬಂದು ಮುಂದೆ ಜನರ ಗುಂಪಿನಿಂದ ತುಂಬಿದ ದ್ವಾರವನ್ನು ಕಂಡ.

ತತಃ ಪುರಸ್ತಾತ್ ಸಹಸಾ ವಿನಿರ್ಗತೋ
ಮಹೀಪತೀನ್ ದ್ವಾರಗತಾನ್ ವಿಲೋಕಯನ್ ।

ದದರ್ಶ ಪೌರಾನ್ ವಿವಿಧಾನ್ ಮಹಾಧನಾ-
ನುಪಸ್ಥಿತಾನ್ ದ್ವಾರಮುಪೇತ್ಯ ವಿಷ್ಠಿತಾನ್ ॥೬೯॥

ವೇಗದಿಂದ ಹೊರಟ ಸುಮಂತ್ರ ಎದುರಿಗೆ ದ್ವಾರಪ್ರದೇಶದಲ್ಲಿದ್ದ ರಾಜರನ್ನು ಕಂಡ. ದ್ವಾರಪ್ರದೇಶಕ್ಕೆ ಬಂದು ಸೇರಿ ಕುಳಿತು ಉಪಸ್ಥಿತರಾಗಿದ್ದ ನಾನಾವಿಧರಾದ ಶ್ರೀಮಂತ ಪೌರಪ್ರಮುಖರನ್ನೂ ಕಂಡ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಹದಿನಾಲ್ಕನೇ ಸರ್ಗ ಮುಗಿಯಿತು.

❖

ಪಂಚದಶಃ ಸರ್ಗಃ

ಸರ್ಗ – 15

ಸುಮಂತ್ರ ಶ್ರೀರಾಮನನ್ನು ಕರೆತರಲು ಹೋಗುವುದು.

ತೇ ತು ತಾಂ ರಜನೀಮುಷ್ಯ ಬ್ರಾಹ್ಮಣಾ ವೇದಪಾರಗಾಃ ।
ಉಪತಸ್ಥುರುಪಸ್ಥಾನಂ ಸಹ ರಾಜಪುರೋಹಿತಾಃ ॥೧॥

ರಾಜಪುರೋಹಿತರೊಂದಿಗೆ ವೇದಪಾರಂಗತರಾದ ಬ್ರಾಹ್ಮಣರು ಆ ರಾತ್ರಿ-ಯನ್ನು ಕಳೆದು ಮಹಾದ್ವಾರದಲ್ಲಿ ಉಪಸ್ಥಿತರಾದರು.

ಉಪಸ್ಥಾನ=ಉಪಸ್ಥಿತರಾಗುವ ಸ್ಥಳ, ರಾಜದ್ವಾರ.

ಅಮಾತ್ಯಾ ಬಲಮುಖ್ಯಾಶ್ಚ ಮುಖ್ಯಾ ಯೇ ನಿಗಮಸ್ಯ ಚ ।
ರಾಘವಸ್ಯಾಭಿಷೇಕಾರ್ಥೇ ಪ್ರೀಯಮಾಣಾಸ್ತು ಸಂಗತಾಃ ॥೨॥

ಮಂತ್ರಿಗಳು ಸೇನಾಪ್ರಮುಖರು ವರ್ತಕರಲ್ಲಿ ಪ್ರಮುಖರಾದವರು ಸಂತೋಷ-ದಿಂದ ರಾಮಾಭಿಷೇಕಕ್ಕಾಗಿ ಬಂದು ಸೇರಿದರು.

ಉದಿತೇ ವಿಮಲೇ ಸೂರ್ಯೇ ಪುಷ್ಯೇ ಚಾಭ್ಯಾಗತೇऽಹನಿ ।
ಲಗ್ನೇ ಕರ್ಕಟಕೇ ಪ್ರಾಪ್ತೇ ಜನ್ಮ ರಾಮಸ್ಯ ಚ ಸ್ಥಿತೇ ॥೩॥

ಅಭಿಷೇಕಾಯ ರಾಮಸ್ಯ ದ್ವಿಜೇಂದ್ರೈರುಪಕಲ್ಪಿತಮ್ ।
ಕಾಂಚನಾ ಜಲಕುಂಭಾಶ್ಚ ಭದ್ರಪೀಠಂ ಸ್ವಲಂಕೃತಮ್ ॥೪॥

ನಿರ್ಮಲನಾದ ಸೂರ್ಯ ಉದಯಿಸಿದ ಬಳಿಕ ಪುಷ್ಯನಕ್ಷತ್ರ ಬಂದಾಗ, ಹಗಲಿ-ನಲ್ಲಿ ರಾಮನ ಜನ್ಮಕಾಲದಲ್ಲಿದ್ದ ಕರ್ಕಾಟಕಲಗ್ನ ಪ್ರಾಪ್ತವಾದಾಗ ಬ್ರಾಹ್ಮಣರು ರಾಮಾಭಿಷೇಕಕ್ಕಾಗಿ ಸಾಮಗ್ರಿಗಳನ್ನು ಸಿದ್ಧಗೊಳಿಸಿದರು. ಬಂಗಾರದ ಜಲಕುಂಭ-ಗಳನ್ನೂ ಚೆನ್ನಾಗಿ ಅಲಂಕೃತವಾದ ಮಂಗಳಕರವಾದ ಆಸನವನ್ನೂ ಸಿದ್ಧಪಡಿಸಿಟ್ಟರು.

ರಥಶ್ಚ ಸಮ್ಯಗಾಸ್ತೀರ್ಣೋ ಭಾಸ್ವತಾ ವ್ಯಾಘ್ರಚರ್ಮಣಾ ।
ಗಂಗಾಯಮುನಯೋಃ ಪುಣ್ಯಾತ್ ಸಂಗಮಾದಾಹೃತಂ ಜಲಮ್ ॥೫॥

ಸುಂದರವಾದ ಹುಲಿಚರ್ಮವನ್ನು ಹಾಸಿದ ರಥ. ಪುಣ್ಯಕರವಾದ ಗಂಗಾ-ಯಮುನಾ ಸಂಗಮದಿಂದ ತಂದ ಜಲ.

ಯಾಶ್ಚಾನ್ಯಾಃ ಸರಿತಃ ಪುಣ್ಯಾ ಹ್ರದಾಃ ಕೂಪಾಃ ಸರಾಂಸಿ ಚ ।
ಪ್ರಾಗ್ವಾಹಾಶ್ಚೋದ್ಗ್ವಾಹಾಶ್ಚ ತಿರ್ಯಗ್ವಾಹಾಃ ಸಮಾಹಿತಾಃ ॥೬॥

ತಾಭ್ಯಶ್ಚೈವಾಹೃತಂ ತೋಯಂ ಸಮುದ್ರೇಭ್ಯಶ್ಚ ಸರ್ವಶಃ ।
ಸಲಾಜಾಃ ಕ್ಷೀರಿಭಿಶ್ಚನ್ನಾ ಘಟಾಃ ಕಾಂಚನರಾಜತಾಃ ॥೭॥

ಪದ್ಮೋತ್ಪಲಯುತಾ ಭಾಂತಿ ಪೂರ್ಣಾಃ ಪರಮವಾರಿಣಾ ।
ಕ್ಷೌದ್ರಂ ದಧಿ ಘೃತಂ ಲಾಜಾ ದರ್ಭಾಃ ಸುಮನಸಃ ಪಯಃ ॥೮॥

ಬೇರೆ ಪುಣ್ಯನದಿ ಮಡು ಕೆರೆ ಬಾವಿಗಳಿಂದ ಪೂರ್ವಕ್ಕೆ ಉತ್ತರಕ್ಕೆ ಪಶ್ಚಿಮಕ್ಕೆ ಹರಿಯುವ ನದಿಗಳಿಂದ, ಎಲ್ಲ ಸಮುದ್ರಗಳಿಂದ ತಂದ ಜಲ, ಅರಳು ಚಿಗುರೆಲೆ-ಗಳಿಂದ ಆವೃತವಾದ ಪದ್ಮ ಉತ್ಪಲಯುಕ್ತವಾಗಿರುವ ಒಳ್ಳೆಯ ಜಲದಿಂದ ಪೂರ್ಣ-ವಾದ ಚಿನ್ನ ಬೆಳ್ಳಿಗಳ ಕಲಶಗಳು. ಜೇನು ಮೊಸರು ತುಪ್ಪ ಅರಳು ದರ್ಭೆ ಹೂ ನೀರು.

ವೇಶ್ಯಾಶ್ಚೈವ ಶುಭಾಚಾರಾಃ ಸರ್ವಾಭರಣಭೂಷಿತಾಃ ।
ಚಂದ್ರಾಂಶುವಿಕಚಪ್ರಖ್ಯಂ ಕಾಂಚನಂ ರತ್ನಭೂಷಿತಮ್ ॥೯॥

ಸಜ್ಜಂ ತಿಷ್ಠತಿ ರಾಮಸ್ಯ ವಾಲವ್ಯಜನಮುತ್ತಮಮ್ ।
ಚಂದ್ರಮಂಡಲಸಂಕಾಶಮಾತಪತ್ರಂ ಚ ಪಾಂಡರಮ್ ॥೧೦॥

ಸಜ್ಜಂ ದ್ಯುತಿಕರಂ ಶ್ರೀಮದಭಿಷೇಕಪುರಸ್ಕೃತಮ್ ।
ಪಾಂಡರಶ್ಚ ವೃಷಃ ಸಜ್ಜಃ ಪಾಂಡರೋಽಶ್ವಶ್ಚ ಸುಷ್ಠಿತಃ ॥೧೧॥

ಪ್ರಸೃತಶ್ಚ ಗಜಃ ಶ್ರೀಮಾನೌಪವಾಹ್ಯಃ ಪ್ರತೀಕ್ಷತೇ ।

'ಶುಭ ಆಚಾರ'ಉಳ್ಳ ಅಂದರೆ ಅಂಗರಾಗ ಮಾಲ್ಯಾಭರಣಾದಿಗಳನ್ನು ಧರಿಸಿರುವ ಸರ್ವಾಭರಣ ಭೂಷಿತರಾದ ವೇಶ್ಯೆಯರಿದ್ದಾರೆ. ಚಂದ್ರ ಪ್ರಕಾಶದಂತೆ ಪಸರಿಸಿದ ಕಾಂತಿಉಳ್ಳ ರತ್ನಖಚಿತವಾದ ಚಿನ್ನದ ಹಿಡಿಯುಳ್ಳ ಉತ್ತಮವಾದ ಚಾಮರ ಮತ್ತು ಬೀಸಣಿಗೆಗಳು ರಾಮಾಭಿಷೇಕಕ್ಕೆ ಸಿದ್ಧವಾಗಿವೆ. ಚಂದ್ರಮಂಡಲದಂತೆ ಬಿಳಿಯಾದ ಛತ್ರವೂ ಹೊಳೆಯುತ್ತ ಅಭಿಷೇಕ ಸಾಮಗ್ರಿಗಳ ಮುಂಭಾಗ ದಲ್ಲಿ ಸಿದ್ಧ-ವಾಗಿರಿಸಲ್ಪಟ್ಟಿದೆ. ಬಿಳಿಯಾದ ವೃಷಭವೂ ಬಿಳಿಯಾದ ಅಶ್ವವೂ ಮದಜಲವನ್ನು ಸುರಿಸುತ್ತ ರಾಜವಾಹನವಾದ ಸುಂದರವಾದ ಗಜವೂ ಅಭಿಷೇಕವನ್ನು ಇದಿರುನೋಡುತ್ತಿದೆ.

ಅಷ್ಟೌ ಚ ಕನ್ಯಾ ಮಾಂಗಲ್ಯಾಃ ಸರ್ವಾಭರಣಭೂಷಿತಾಃ ।
ವಾದಿತ್ರಾಣಿ ಚ ಸರ್ವಾಣಿ ವಂದಿನಶ್ಚ ತಥಾ ಪರೇ ॥೧೨॥

ಮಂಗಲ ವೇಷ ಧರಿಸಿದ ಸರ್ವಾಭರಣ ಭೂಷಿತರಾದ ಎಂಟು ಕನ್ಯೆಯರೂ ಅಭಿಷೇಕಕ್ಕೆ ಕಾದಿದ್ದಾರೆ. ಮಂಗಳವಾದ್ಯದ ವರೂ ವಂದಿಗಳೂ ಬೇರೆಯವರೂ ನೆರೆದಿದ್ದಾರೆ.

ಇಕ್ಷ್ವಾಕೂಣಾಂ ಯಥಾ ರಾಜ್ಯೇ ಸಂಭ್ರಿಯೇತಾಭಿಷೇಚನಮ್ ।
ತಥಾಜಾತೀಯಮಾದಾಯ ರಾಜಪುತ್ರಾಭಿಷೇಚನಮ್ ।
ತೇ ರಾಜವಚನಾತ್ತತ್ರ ಸಮವೇತಾ ಮಹೀಪತಿಮ್ ॥೧೩॥

ಅಪಶ್ಯಂತೋಽಬ್ರುವನ್ ಕೋ ನು ಪ್ರಾಜ್ಞೋ ನಃ ಪ್ರತಿವೇದಯೇತ್ ।
ನ ಪಶ್ಯಾಮಶ್ಚ ರಾಜಾನಮುದಿತಶ್ಚ ದಿವಾಕರಃ ॥೧೪॥

ಇಕ್ಷ್ವಾಕುವಂಶದವರ ರಾಜ್ಯದಲ್ಲಿ ಯಾವ ಬಗೆಯ ಅಭಿಷೇಕ ಸಾಮಗ್ರಿಗಳು ಇರುತ್ತಿದ್ದುವೋ ಅಂಥ ರಾಜಕುಮಾರಾಭಿಷೇಕ ಸಾಮಗ್ರಿಗಳನ್ನು ತಂದು ರಾಜರು ರಾಜನ ಆಮಂತ್ರಣದ ಮೇರೆಗೆ ರಾಜದ್ವಾರದಲ್ಲಿ ಬಂದು ನೆರೆದಿದ್ದರು. ರಾಜನನ್ನು ಕಾಣದೆ ಹೇಳಿದರು, 'ಯಾರು ನಮ್ಮನ್ನು ಬಲ್ಲವರು ನಾವು ಬಂದಿರುವುದನ್ನು ರಾಜನಿಗೆ ತಿಳಿಸುವರು? ರಾಜನ ದರ್ಶನ ನಮಗೆ ಸಿಗುತ್ತಿಲ್ಲ. ಸೂರ್ಯನು ಆಗಲೆ ಉದಿಸಿದ್ದಾನೆ.'

ಯೌವರಾಜ್ಯಾಭಿಷೇಕಶ್ಚ ಸಜ್ಞೋ ರಾಮಸ್ಯ ಧೀಮತಃ ॥೧೫॥

ಧೀಮಂತನಾದ ರಾಮನ ಯುವರಾಜಾಭಿಷೇಕಕ್ಕೆ ಎಲ್ಲ ಸಿದ್ಧತೆಗಳೂ ನಡೆದಿವೆ.'

ಇತಿ ತೇಷು ಬ್ರುವಾಣೇಷು ಸಾರ್ವಭೌಮಾನ್ ಮಹೀಪತೀನ್ ।
ಅಬ್ರವೀತ್ತಾನಿದಂ ಸರ್ವಾನ್ ಸುಮಂತ್ರೋ ರಾಜಸತ್ಕೃತಃ ॥೧೬॥

ಸಾರ್ವಭೌಮರಾದ ರಾಜರು ಹೀಗೆ ಹೇಳುವಾಗ ರಾಜನ ಆದರ ಪಾತ್ರನಾದ ಸುಮಂತ್ರನು ಎಲ್ಲ ರಾಜರಿಗೆ ಹೇಳಿದ.

ರಾಮಂ ರಾಜ್ಞೋ ನಿಯೋಗೇನ ತ್ವರಯಾ ಪ್ರಸ್ಥಿತೋಽಸ್ಮ್ಯಹಮ್ ॥೧೭॥

ರಾಮನನ್ನು ಕರೆತರಲು ರಾಜಾಜ್ಞೆಯಂತೆ ನಾನು ತ್ವರೆಯಿಂದ ಹೊರಟಿದ್ದೇನೆ.

ಪೂಜ್ಯಾ ರಾಜ್ಞೋ ಭವಂತಸ್ತು ರಾಮಸ್ಯ ತು ವಿಶೇಷತಃ ।
ಅಹಂ ಪೃಚ್ಛಾಮಿ ವಚನಾತ್ ಸುಖಮಾಯುಷ್ಮತಾಮಹಮ್ ॥೧೮॥

ಆದರೆ ನೀವು ರಾಜನಿಗೆ ಆದರಣೀಯರು. ರಾಮನಿಗೆ ವಿಶೇಷ ಆದರಣೀಯರು. ನಿಮ್ಮ ಆದೇಶದಂತೆ ನಾನು ನಿಮ್ಮ ಪರವಾಗಿ ರಾಜನ ಸುಖಶಯನವನ್ನು ಕೇಳಿ ತಿಳಿಯುತ್ತೇನೆ.

ರಾಜ್ಞಃ ಸಂಪ್ರತಿಬುದ್ಧಸ್ಯ ಚಾನಾಗಮನಕಾರಣಮ್ ॥೧೯॥

ಎಚ್ಚರಗೊಂಡಿರುವ ರಾಜನು ನಿಮ್ಮನ್ನು ಸ್ವಾಗತಿಸಲು ಇನ್ನೂ ಬಾರದಿದ್ದುದಕ್ಕೆ ಕಾರಣವನ್ನೂ ಕೇಳಿ ತಿಳಿಯುವೆನು.

ಇತ್ಯುಕ್ತ್ವಾ ಽಂತಃಪುರದ್ವಾರಮಾಜಗಾಮ ಪುರಾಣವಿತ್ ।
ಸದಾ ಸಕ್ತಂ ಚ ಯದ್ವೇಶ್ಮ ಸುಮಂತ್ರಃ ಪ್ರವಿವೇಶ ಹ ।
ತುಷ್ಟಾವಾಸ್ಯ ತದಾ ವಂಶಂ ಪ್ರವಿಶ್ಯ ಚ ವಿಶಾಂಪತೇಃ ॥೨೦॥

ಶಯನೀಯಂ ನರೇಂದ್ರಸ್ಯ ತದಾಸಾದ್ಯ ವ್ಯತಿಷ್ಠತ ।
ಸೋ ಽತ್ಯಾಸಾದ್ಯ ತು ತದ್ವೇಶ್ಮ ತಿರಸ್ಕರಣಿಮಂತರಾ ।
ಆಶೀರ್ಭಿರ್ಗುಣಯುಕ್ತಾಭಿರಭಿತುಷ್ಟಾವ ರಾಘವಮ್ ॥೨೧॥

ಹೀಗೆ ಹೇಳಿ ಪುರಾಣಜ್ಞನಾದ ಸುಮಂತ್ರನು ಸದಾ ಹೋಗಿ ಬರುತ್ತಿದ್ದ ರಾಜನ ಅಂತಃಪುರ ದ್ವಾರಕ್ಕೆ ಬಂದು ಪ್ರವೇಶಿಸಿದ. ಪ್ರವೇಶಿಸಿ ಸ್ತುತಿಪಾಠಗೈದ. ಬಳಿಕ ರಾಜನ ಶಯನಾಗಾರವನ್ನು ಪ್ರವೇಶಿಸಿ ನಿಂತ. ಶಯ್ಯೆಗೆ ಅತಿಸಮೀಪಕ್ಕೆ ಹೋಗಿ ತೆರೆಯ ಹೊರಗೆ ನಿಂತು ರಾಜನ ಗುಣಗಳನ್ನು ಹೊಗಳುತ್ತ ಸ್ತುತಿಮಾಡಿದ.

ಮೊದಲೊಮ್ಮೆ ಸುಪ್ರಭಾತದಲ್ಲಿ ಸ್ತುತಿಮಾಡಿದ್ದಾಗಿದೆ. ಇದೀಗ ಪುನಃ ಸ್ತುತಿ ಏಕೆ ಎಂದರೆ, ರಾಜನಿಗೆ ಈಗ ರಾಜರ ಬ್ರಾಹ್ಮಣರ ಆಗಮನದ ಬಗ್ಗೆ ಅರಿಕೆ ಮಾಡುವಾಗಲೂ ಸಂಪ್ರದಾಯದಂತೆ ಮೊದಲಿಗೆ ಸೂತರು ಸ್ತುತಿ ಮಾಡಬೇಕಾಗಿದೆ.

ಸೋಮಸೂರ್ಯೌ ಚ ಕಾಕುತ್ಸ್ಥ ಶಿವವೈಶ್ರವಣಾವಪಿ ।
ವರುಣಶ್ಚಾಗ್ನಿರಿಂದ್ರಶ್ಚ ವಿಜಯಂ ಪ್ರದಿಶಂತು ತೇ ॥೨೨॥

ಸೋಮ ಸೂರ್ಯ ಶಿವ ಕುಬೇರ ವರುಣ ಅಗ್ನಿ ಇಂದ್ರರು ನಿನಗೆ ಜಯ ನೀಡಲಿ.

ಗತಾ ಭಗವತೀ ರಾತ್ರಿರಹಃ ಶಿವಮುಪಸ್ಥಿತಮ್ ।
ಬುಧ್ಯಸ್ವ ನೃಪಶಾರ್ದೂಲ ಕುರು ಕಾರ್ಯಮನಂತರಮ್ ॥೨೩॥

ಭಗವತಿ ರಾತ್ರಿದೇವಿ ಮರೆಯಾಗಿದ್ದಾಳೆ. ಮಂಗಳಕರವಾದ ಹಗಲು ಬಂದಿದೆ. ಮಹಾರಾಜ, ಎದ್ದೇಳು, ಮುಂದೆ ಈಗ ಮಾಡಬೇಕಾಗಿರುವ ಕಾರ್ಯದಲ್ಲಿ ತೊಡಗು.

ಬ್ರಾಹ್ಮಣಾ ಬಲಮುಖ್ಯಾಶ್ಚ ನೈಗಮಾಶ್ಚಾಗತಾ ನೃಪ ।
ದರ್ಶನಂ ತೇऽಭಿಕಾಂಕ್ಷಂತೇ ಪ್ರತಿಬುಧ್ಯಸ್ವ ರಾಘವ ॥೨೪॥

ಬ್ರಾಹ್ಮಣರೂ ಸೇನಾಪ್ರಮುಖರೂ ವರ್ತಕರೂ ಬಂದಿದ್ದಾರೆ. ರಾಜನೆ, ಅವರು ನಿನ್ನ ದರ್ಶನವನ್ನು ಬಯಸಿದ್ದಾರೆ. ಎದ್ದೇಳು.

ಸ್ತುವಂತಂ ತಂ ತದಾ ಸೂತಂ ಸುಮಂತ್ರಂ ಮಂತ್ರಕೋವಿದಮ್ ।
ಪ್ರತಿಬುಧ್ಯ ತತೋ ರಾಜಾ ಇದಂ ವಚನಮಬ್ರವೀತ್ ॥೨೫॥

ರಾಜನೀತಿಜ್ಞನಾದ ಸೂತ ಸುಮಂತ್ರನು ಸ್ತುತಿಮಾಡುವಾಗ ರಾಜಾ ದಶರಥನು ಎದ್ದು ನುಡಿದ—

ರಾಮಮಾನಯ ಸೂತೇತಿ ಯದಸ್ಯಭಿಹಿತೋऽನಯಾ ।
ಕಿಮಿದಂ ಕಾರಣಂ ಯೇನ ಮಮಾಜ್ಞಾ ಪ್ರತಿಹನ್ಯತೇ ।
ನ ಚೈವ ಸಂಪ್ರಸುಪ್ತೋऽಹಮಾನಯೇಹಾಶು ರಾಘವಮ್ ॥೨೬॥

'ಸೂತ, ರಾಮನನ್ನು ಕರೆತರುವಂತೆ ರಾಣಿ ನಿನಗೆ ಹೇಳಿದ್ದಾಳೆ. ನಾನೂ ಹೇಳಿದ್ದೇನೆ ತಾನೆ? ನನ್ನ ಆಜ್ಞೆಯನ್ನು ಏನು ಕಾರಣ ತಿರಸ್ಕರಿಸುವೆ? ನಾನು ನಿದ್ದೆ ಮಾಡುತ್ತಿಲ್ಲ, ರಾಮನನ್ನು ಬೇಗನೆ ಇಲ್ಲಿಗೆ ಕರೆ ತಾ.'

ಇತಿ ರಾಜಾ ದಶರಥಃ ಸೂತಂ ತತ್ರಾನ್ವಶಾತ್ ಪುನಃ ॥೨೭॥

ಸುಮಂತ್ರನನ್ನು ರಾಜಾ ದಶರಥನು ಹೀಗೆ ಪುನಃ ಆಜ್ಞಾಪಿಸಿದ.

ಸ ರಾಜವಚನಂ ಶ್ರುತ್ವಾ ಶಿರಸಾ ಪ್ರತಿಪೂಜ್ಯ ತಮ್ ।
ನಿರ್ಜಗಾಮ ನೃಪಾವಾಸಾನ್ಮನ್ಯಮಾನಃ ಪ್ರಿಯಂ ಮಹತ್ ॥೨೮॥

ಸುಮಂತ್ರನು ರಾಜಾಜ್ಞೆಯನ್ನು ಕೇಳಿ ತಲೆಬಾಗಿ ನಮಿಸಿ ಬಹಳ ಪ್ರಿಯವಾದ ಕಾರ್ಯವಿದು ಎಂದುಕೊಂಡು ಅರಮನೆಯಿಂದ ಹೊರಟ.

'ಕೈಕೇಯಿಯ ವಿವಾಹ ಸಮಯದಲ್ಲಿ ದಶರಥ ಕೈಕೇಯೀ ಪುತ್ರನಿಗೆ ರಾಜ್ಯವನ್ನು ಕೊಡುವುದಾಗಿ ವಾಗ್ದಾನ ಮಾಡಿದ್ದರೂ ಈಗ ರಾಮನಿಗೆ ರಾಜ್ಯವನ್ನು ಕೊಡಲು ಬಯಸಿದ್ದಾನೆ. ಇದಕ್ಕೆ ರಾಮನಲ್ಲಿ ವಾತ್ಸಲ್ಯಭರಿತಳಾದ ದಶರಥನ ಪ್ರೇಮದ ಅರಗಿಣಿಯೂ ಆದ ಕೈಕೇಯಿಯು ಅನುಮತಿ ನೀಡುತ್ತಿದ್ದಾಳೆ. ಅದಕ್ಕೇ ರಾಮನನ್ನು ರಾಜ ಕರೆಸಿಕೊಳ್ಳುತ್ತಿದ್ದಾನೆ' ಎಂದುಕೊಂಡು ಸುಮಂತ್ರನು ರಾಮನನ್ನು ಕರೆತರುವ ಕಾರ್ಯ ತನಗೆ ಬಹಳ ಪ್ರಿಯವೆಂದು ಕೊಳ್ಳುತ್ತಿದ್ದಾನೆ. ಒಂದುವೇಳೆ ಪುರಾಣಗಳು ಹೇಳುವಂತೆ ದಾಸಿಯ ದುರ್ಬೋಧನೆಯಿಂದ ಕೈಕೇಯಿ ಅನುಮತಿ ಕೊಡದೆ ವಿರೋಧವನ್ನೇ ಮಾಡಿದ್ದರೂ ಶ್ರೀರಾಮ ಕಾಡಿಗೆ ಹೋಗಿ ರಾವಣಾದಿ ದುರ್ಜನರ ಸಂಹಾರ ಮಾಡಿ ಬಂದೇಬರುತ್ತಾನೆ ಎಂದು 'ಪುರಾಣವಿತ್' ಪುರಾಣಜ್ಞನಾದ ಸುಮಂತ್ರ ಸಂತೋಷಪಡುತ್ತಾನೆ.

ಪ್ರಪನ್ನೋ ರಾಜಮಾರ್ಗಂ ಚ ಪತಾಕಾಧ್ವಜಶೋಭಿತಮ್ ।
ಹೃಷ್ಟಃ ಪ್ರಮುದಿತಃ ಸೂತೋ ಜಗಾಮಾಶು ವಿಲೋಕಯನ್ ॥೨೯॥

ಪತಾಕೆ ಧ್ವಜಗಳಿಂದ ಶೋಭಿಸುತ್ತಿದ್ದ ರಾಜಮಾರ್ಗಕ್ಕೆ ಇಳಿದು ಅದರ ಸೊಬಗನ್ನು ನೋಡುತ್ತ ಆನಂದಿಸುತ್ತ ಉತ್ಸಾಹಗೊಂಡು ಸುಮಂತ್ರ ರಾಮ ಮಂದಿರದ ಕಡೆಗೆ ನಡೆದ.

ಸ ಸೂತಸ್ತತ್ರ ಶುಶ್ರಾವ ರಾಮಾಧಿಕರಣಾಃ ಕಥಾಃ ।
ಅಭಿಷೇಚನಸಂಯುಕ್ತಾಃ ಸರ್ವಲೋಕಸ್ಯ ಹೃಷ್ಟವತ್ ॥೩೦॥

ರಾಜಮಾರ್ಗದಲ್ಲಿ ಎಲ್ಲೆಡೆ ಎಲ್ಲ ಜನರೂ ರಾಮನ ಬಗ್ಗೆ ಅವನ ಅಭಿಷೇಕದ ಕುರಿತಾಗಿ ಆಡುವ ಮಾತುಗಳನ್ನು ಆನಂದದಿಂದ ಆಲಿಸುತ್ತ ಮುಂದುವರಿದ.

ತತೋ ದದರ್ಶ ರುಚಿರಂ ಕೈಲಾಸಶಿಖರಪ್ರಭಮ್ ।
ರಾಮವೇಶ್ಮ ಸುಮಂತ್ರಸ್ತು ಶಕ್ರವೇಶ್ಮಸಮಪ್ರಭಮ್ ॥೩೧॥

ಬಳಿಕ ಕೈಲಾಸ ಬೆಟ್ಟದ ಶಿಖರದಂತೆ ಹೊಳೆಯುವ ಇಂದ್ರನ ಅರಮನೆಯಂತೆ ಶೋಭಿಸುವ ಸುಂದರವಾದ ಶ್ರೀರಾಮನ ಮಂದಿರವನ್ನು ಸುಮಂತ್ರ ಕಂಡ.

ಮಹಾಕವಾಟಸಂಯುಕ್ತಂ ವಿತರ್ದಿಶತಶೋಭಿತಮ್ ।
ಕಾಂಚನಪ್ರತಿಮೈಕಾಗ್ರಂ ಮಣಿವಿದ್ರುಮತೋರಣಮ್ ॥೩೨॥

ಶಾರದಾಭ್ರಘನಪ್ರಖ್ಯಂ ದೀಪ್ತಂ ಮೇರುಗುಹೋಪಮಮ್ ।
ಮಣಿಭಿರ್ವರಮಾಲ್ಯಾನಾಂ ಸುಮಹದ್ಭಿರಲಂಕೃತಮ್ ॥೩೩॥

ಮುಕ್ತಾಮಣಿಭಿರಾಕೀರ್ಣಂ ಚಂದನಾಗರುಧೂಪಿತಮ್ ।
ಗಂಧಾನ್ಮನೋಜ್ಞಾನ್ ವಿಸೃಜದ್ದಾರ್ದುರಂ ಶಿಖರಂ ಯಥಾ ॥೩೪॥

ಸಾರಸೈಶ್ಚ ಮಯೂರೈಶ್ಚ ನಿನದದ್ಭಿರ್ವಿರಾಜಿತಮ್ ।
ಸುಕೃತೇಹಾಮೃಗಾಕೀರ್ಣಂ ಸುಕೀರ್ಣಂ ಭಕ್ತಿಭಿಸ್ತಥಾ ॥೩೫॥

ಮನಶ್ಚಕ್ಷುಶ್ಚ ಭೂತಾನಾಮಾದದತ್ತಿಗ್ಮತೇಜಸಾ ।
ಚಂದ್ರಭಾಸ್ಕರಸಂಕಾಶಂ ಕುಬೇರಭವನೋಪಮಮ್ ॥೩೬॥

ಮಹೇಂದ್ರಧಾಮಪ್ರತಿಮಂ ನಾನಾಪಕ್ಷಿಸಮಾಕುಲಮ್ ।
ಮೇರುಶೃಂಗಸಮಂ ಸೂತೋ ರಾಮವೇಶ್ಮ ದದರ್ಶ ಹ ॥೩೭॥

ಮಂದಿರದ ಹೆಬ್ಬಾಗಿಲು ಮುಚ್ಚಿತ್ತು. ಇನ್ನೂ ಬೆಳಗಾಗದಿದ್ದುದರಿಂದ ಜನರಿಗೆ ಅಲ್ಲಿ ಸಣ್ಣ ಪ್ರವೇಶದ್ವಾರ ಮಾತ್ರ ತೆರೆದಿತ್ತು. ನೂರಾರು ವೇದಿಕೆಗಳಿದ್ದವು. ಬಂಗಾರದ ಪ್ರತಿಮೆಗಳಿಂದ ಯುಕ್ತವಾದ ಮಣಿ ಹವಳ ಖಚಿತವಾದ ಮಂದಿರದ ಹೊರಬಾಗಿಲು. ಅದರಾಚೆ ಶರತ್ಕಾಲದ ಆಕಾಶದಲ್ಲಿ ತೇಲುವ ಬಿಳಿ ಮೋಡದಂಥ ಮಂದಿರ ಮೇರುಪರ್ವತದ ಗುಹೆಯಂತೆ ಶೋಭಿಸುತ್ತಿದೆ. ಮಹಾಮಣಿಯುಕ್ತ-ವಾದ ಉತ್ತಮ ಮಾಲೆಗಳಿಂದ ಅಲಂಕೃತವಾಗಿದೆ. ಮುತ್ತುಮಣಿಗಳಿಂದಲೇ ಶೋಭಿಸುತ್ತಿದೆ. ಚಂದನ ಅಗುರುಗಳ ಧೂಪದಿಂದ ಸುಗಂಧಿತವಾಗಿದೆ. ಅದರಿಂದ ಮನೋಜ್ಞವಾದ ಸುಗಂಧಗಳನ್ನು ಬೀರುವ ದರ್ದುರವೆಂಬ ಬೆಟ್ಟದ ಶಿಖರದಂತಿತ್ತು ಮಂದಿರ. ಸಾರಸ ನವಿಲುಗಳ ಧ್ವನಿಗಳಿಂದ ರಾರಾಜಿಸುತ್ತಿತ್ತು. ಗೋಡೆಗಳಲ್ಲಿ ಸ್ತಂಭಗಳಲ್ಲಿ ಚಿನ್ನದಿಂದ ನಿರ್ಮಿತವಾದ ತೋಳಗಳ ಪ್ರತಿಮೆ ಚಿತ್ರಗಳು ಇದ್ದುವು. ನೋಡುವವರಿಗೆ ಕಣ್ಮಗಳನ್ನು ಸೂರೆಗೊಳ್ಳುವಂಥ ಪ್ರಕಾಶ ತುಂಬಿತ್ತು. ಚಂದ್ರ-ಸೂರ್ಯರಂತೆ ಬೆಳಗುತ್ತ ಕುಬೇರ ಭವನದಂತೆ ಮಹೇಂದ್ರನ ಅರಮನೆಯಂತೇ ಇತ್ತು. ನಾನಾ ಪಕ್ಷಿಗಳಿಂದ ಕೂಡಿದ್ದು ಮೇರು ಶಿಖರದಂತೆ ರಾರಾಜಿಸುತ್ತಿತ್ತು. ಅಂಥ ಶ್ರೀರಾಮನ ಮಂದಿರವನ್ನು ಸುಮಂತ್ರ ದರ್ಶನ ಮಾಡಿದ.

ಉಪಸ್ಥಿತೈಃ ಸಮಾಕೀರ್ಣಂ ಜನೈರಂಜಲಿಕಾರಿಭಿಃ ॥೩೮॥

ಉಪಾದಾಯ ಸಮಾಕ್ರಾಂತೈಸ್ತಥಾ ಜಾನಪದೈರ್ಜನೈಃ ।
ರಾಮಾಭಿಷೇಕಸುಮುಖೈರುನ್ಮುಖೈಃ ಸಮಲಂಕೃತಮ್ ॥೬೯॥

ಮಹಾಮೇಘಸಮಪ್ರಖ್ಯಮುದಗ್ರಂ ಸುವಿಭೂಷಿತಮ್ ।
ನಾನಾರತ್ನಸಮಾಕೀರ್ಣಂ ಕುಬ್ಜಕೈರಾತಕಾವೃತಮ್ ॥೪೦॥

ಕೈಮುಗಿದು ಉಪಸ್ಥಿತರಾಗಿದ್ದ ಜನರಿಂದ ಮಂದಿರ ತುಂಬಿ ಹೋಗಿತ್ತು. ಅವರು ಉಡುಗೊರೆಗಳನ್ನು ತಂದಿದ್ದರು. ದ್ವಾರಪಾಲಕರು ತಡೆದುದರಿಂದ ರಾಮದರ್ಶನದ ಉತ್ಸುಕತೆಯಿಂದ ಕಾದು ನಿಂತಿದ್ದರು. ಮಹಾಮೇಘ ಸದೃಶವಾದ ಉನ್ನತವಾದ ಭವನ ಅದು. ನಾನಾ ವಿಧ ರತ್ನಗಳಿಂದ ಅಲಂಕೃತವಾಗಿತ್ತು. ಕುಳ್ಳ ಬಡಕಲು ಶರೀರದ ಪರಿಚಾರಕರು ಅಲ್ಲಿ ತುಂಬಿದ್ದರು.

ಸ ವಾಜಿಯುಕ್ತೇನ ರಥೇನ ಸಾರಥಿ-
ರ್ನರಾಕುಲಂ ರಾಜಕುಲಂ ವಿಲೋಕಯನ್ ।
ವರೂಥಿನಾ ರಾಮಗೃಹಾಭಿಪಾತಿನಾ
ಪುರಸ್ಯ ಸರ್ವಸ್ಯ ಮನಾಂಸಿ ರಂಜಯನ್ ॥೪೧॥

ಸುಮಂತ್ರನು ಕುದುರೆಗಳಿಂದ ಯುಕ್ತವಾದ ರಕ್ಷಣಾಕವಚಯುಕ್ತವಾದ ರಥದಿಂದ ರಾಮಮಂದಿರದ ಕಡೆಗೆ ಹೋಗಿ ಜನರಿಂದ ತುಂಬಿದ್ದ ಅರಮನೆಯನ್ನು ತಾನು ಕಂಡ, ತನ್ನ ದರ್ಶನದಿಂದ ನಗರದ ಎಲ್ಲ ಜನರ ಮನಸುಗಳನ್ನು ರಂಜಿಸಿದ.

ತತಃ ಸಮಾಸಾದ್ಯ ಮಹಾಧನಂ ಮಹತ್
ಪ್ರಹೃಷ್ಟರೋಮಾ ಸ ಬಭೂವ ಸಾರಥಿಃ ।
ಮೃಗೈರ್ಮಯೂರೈಶ್ಚ ಸಮಾಕುಲೋಲ್ಬಣಂ
ಗೃಹಂ ವರಾರ್ಹಸ್ಯ ಶಚೀಪತೇರಿವ ॥೪೨॥

ಅಮೂಲ್ಯವಾದ ಆ ಮಂದಿರವನ್ನು ಸೇರಿ ಸುಮಂತ್ರ ರೋಮಾಂಚಗೊಂಡ. ಜಿಂಕೆ ನವಿಲುಗಳಿಂದ ಶೋಭಿಸುತ್ತಿದ್ದ ಶ್ರೇಷ್ಠವಸ್ತುಗಳೆಲ್ಲಕ್ಕೂ ಅರ್ಹನಾದ ರಾಮನ ಆ ಮಂದಿರ ಇಂದ್ರನ ಅರಮನೆಯಂತಿತ್ತು.

ಸ ತತ್ರ ಕೈಲಾಸನಿಭಾಃ ಸ್ವಲಂಕೃತಾಃ
ಪ್ರವಿಶ್ಯ ಕಕ್ಷ್ಯಾಸ್ತ್ರಿದಶಾಲಯೋಪಮಾಃ ।

ಪ್ರಿಯಾನ್ನರಾನ್ ರಾಮಮತೇ ಸ್ಥಿತಾನ್ ಬಹೂ-
ನಪೋಹ್ಯ ಶುದ್ಧಾಂತಮುಪಸ್ಥಿತೋ ರಥೀ ॥೪೩॥

ಕೈಲಾಸದಂತೆ ಬೆಳಗುವ ಅಲಂಕೃತವಾದ ಸ್ವರ್ಗಸದೃಶವಾದ ಹಜಾರಗಳನ್ನು ಪ್ರವೇಶಿಸಿ ಶ್ರೀರಾಮನಿಗೆ ಪ್ರಿಯವಾಗುವಂತೆ ನಡೆದುಕೊಳ್ಳುವ ಪ್ರಿಯರಾದ ಬಹುಜನರನ್ನು ದಾಟಿ, ಅಂತಃಪುರಕ್ಕೆ ಸುಮಂತ್ರ ನಡೆದ.

ಸ ತತ್ರ ಶುಶ್ರಾವ ಚ ಹರ್ಷಯುಕ್ತಾ
ರಾಮಾಭಿಷೇಕಾರ್ಥಯುತಾ ಜನಾನಾಮ್ ।
ನರೇಂದ್ರಸೂನೋರಭಿಮಂಗಲಾರ್ಥಾಃ
ಸರ್ವಸ್ಯ ಲೋಕಸ್ಯ ಗಿರಃ ಪ್ರಸೃಷ್ಟಾಃ ॥೪೪॥

ಅಲ್ಲಿ ರಾಜಕುಮಾರ ರಾಮನ ಮಂಗಳ ವಿಷಯದಲ್ಲಿ ರಾಮಾಭಿಷೇಕ ವಿಷಯದಲ್ಲಿ ಎಲ್ಲ ಜನರೂ ಉತ್ಸಾಹದಿಂದ ಮಾತನಾಡಿಕೊಳ್ಳುತ್ತಿದ್ದುದನ್ನು ಸುಮಂತ್ರ ಆಲಿಸಿದ.

ಮಹೇಂದ್ರಸದ್ಮಪ್ರತಿಮಂ ತು ವೇಶ್ಮ
ರಾಮಸ್ಯ ರಮ್ಯಂ ಮೃಗಪಕ್ಷಿಜುಷ್ಟಮ್ ।
ದದರ್ಶ ಮೇರೋರಿವ ಶೃಂಗಮುಚ್ಚಂ
ವಿಭ್ರಾಜಮಾನಂ ಪ್ರಭಯಾ ಸುಮಂತ್ರಃ ॥೪೫॥

ಮೃಗ ಪಕ್ಷಿಗಳಿಂದ ಕೂಡಿದ, ಉನ್ನತವಾದ ಮೇರುಶಿಖರದಂತೆ ತನ್ನ ಪ್ರತಿಭೆ-ಯಿಂದ ಬೆಳಗುವ ಮಹೇಂದ್ರನ ಅರಮನೆಯಂಥ ರಾಮನ ಅರಮನೆಯನ್ನು ಸುಮಂತ್ರ ದರ್ಶನ ಮಾಡಿದ.

ಉಪಸ್ಥಿತೈರಂಜಲಿಕಾರಿಭಿಶ್ಚ
ಸೋಪಾಯನೈರ್ಜಾನಪದೈರನೇಕೈಃ ।
ಕೋಟ್ಯಾ ಪರಾರ್ಧ್ಯೈಶ್ಚ ವಿಮುಕ್ತಯಾನೈಃ
ಸಮಾಕುಲಂ ದ್ವಾರಪಥಂ ದದರ್ಶ ॥೪೬॥

ಕೋಟಿ ಕೋಟಿ ಜನರು ತಮ್ಮ ವಾಹನಗಳಿಂದ ಇಳಿದು ಬಂದರು. ಉಡುಗೊರೆ ಕಪ್ಪಕಾಣಿಕೆಗಳನ್ನು ತಂದರು. ಕೈಮುಗಿದು ಅರಮನೆದ್ವಾರದ ದಾರಿಯಲ್ಲಿ ನಿಂತರು. ಅವರನ್ನು ಸುಮಂತ್ರ ಕಂಡ.

ತತೋ ಮಹಾಮೇಘಮಹೀಧರಾಭಂ
ಪ್ರಭಿನ್ನಮತ್ಯಂಕುಶಮಪ್ರಸಹ್ಯಮ್ ।
ರಾಮೌಪವಾಹ್ಯಂ ರುಚಿರಂ ದದರ್ಶ
ಶತ್ರುಂಜಯಂ ನಾಗಮುದಗ್ರಕಾಯಮ್ ॥೪೭॥

ದ್ವಾರದಲ್ಲಿ ಮಹಾ ಮೇಘದಂತೆ ಬೆಟ್ಟದಂತೆ ಶೋಭಿಸುವ ಮದಜಲ ಸುರಿಸುತ್ತಿದ್ದ ಅಕುಂಶ ಪ್ರಹಾರವನ್ನು ಲಕ್ಷಿಸದ, ಯಾರಿಗೂ ಸಹಿಸಲಾಗದ, ಮಹಾಉನ್ನತ ಕಾಯದ ಶತ್ರುಂಜಯ ಎಂಬ ರಾಮನ ಸುಂದರವಾದ ಪಟ್ಟದಾನೆಯನ್ನು ಸುಮಂತ್ರ ಕಂಡ.

ಸ್ವಲಂಕೃತಾನ್ ಸಾಶ್ವರಥಾನ್ ಸಕುಂಜರಾ-
ನಮಾತ್ಯಮುಖ್ಯಾನ್ ಶತಶಶ್ಚ ವಲ್ಲಭಾನ್ ।
ವ್ಯಪೋಹ್ಯ ಸೂತಃ ಸಹಿತಾನ್ ಸಮಂತತಃ
ಸಮೃದ್ಧಮಂತಃಪುರಮಾವಿವೇಶ ॥೪೮॥

ಅಲಂಕೃತವಾದ ಅಶ್ವ ರಥ ಗಜಗಳನ್ನೂ ರಾಮನಿಗೆ ಪ್ರಿಯರಾದ ನೂರಾರು ಮಂತ್ರಿಶ್ರೇಷ್ಠರನ್ನೂ ದಾಟಿ ಐಶ್ವರ್ಯಸಮೃದ್ಧವಾದ ಅಂತಃಪುರವನ್ನು ಸುಮಂತ್ರ ಪ್ರವೇಶಿಸಿದ.

ತದದ್ರಿಕೂಟಾಚಲಮೇಘಸಂನಿಭಂ
ಮಹಾವಿಮಾನೋತ್ತಮವೇಶ್ಮಸಂಘವತ್ ।
ಅವಾರ್ಯಮಾಣಃ ಪ್ರವಿವೇಶ ಸಾರಥಿಃ
ಪ್ರಭೂತರತ್ನಂ ಮಕರೋ ಯಥಾರ್ಣವಮ್ ॥೪೯॥

ಪರ್ವತ ಶಿಖರದ ಮೇಲೆ ನಿಶ್ಚಲವಾಗಿ ನಿಂತ ಮೋಡದಂತಿದ್ದ ದೊಡ್ಡಮಹಡಿ-ಗಳಿಂದ ಯುಕ್ತವಾದ ಆ ಅಂತಃಪುರವನ್ನು ಸುಮಂತ್ರನು ಬಹುರತ್ನಗಳಿಂದ ಯುಕ್ತವಾದ ಸಮುದ್ರವನ್ನು ಮೊಸಳೆ ಪ್ರವೇಶಿಸುವಂತೆ ಯಾರ ತಡೆಯೂ ಇಲ್ಲದೆ ಪ್ರವೇಶಿಸಿದ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಹದಿನೈದನೇ ಸರ್ಗ ಮುಗಿಯಿತು.

❖

ಷೋಡಶಃ ಸರ್ಗಃ

ಸರ್ಗ – 16

ಶ್ರೀರಾಮನು ದಶರಥನನ್ನು ನೋಡಲು ಹೊರಡುವುದು.

ಸ ತದಂತಃಪುರದ್ವಾರಂ ಸಮತೀತ್ಯ ಜನಾಕುಲಮ್ ।
ಪ್ರವಿವಿಕ್ತಾಂ ತತಃ ಕಕ್ಷ್ಯಾಮಾಸಸಾದ ಪುರಾಣವಿತ್ ॥೧॥

ಪುರಾಣಜ್ಞನಾದ ಸುಮಂತ್ರನು ಜನರಿಂದ ತುಂಬಿದ್ದ ಆ ಅಂತಃಪುರ ದ್ವಾರವನ್ನು ದಾಟಿ ಜನರಿಲ್ಲದ ಮುಂದಿನ ಕಕ್ಷ್ಯೆಯನ್ನು ಪ್ರವೇಶಿಸಿದ.

ಪ್ರಾಸಕಾರ್ಮುಕಬಿಭ್ರದ್ಭಿರ್ಯುವಭಿರ್ಮೃಷ್ಟಕುಂಡಲೈಃ ।
ಅಪ್ರಮಾದಿಭಿರೇಕಾಗ್ರೈಃ ಸ್ವನುರಕ್ತೈರಧಿಷ್ಠಿತಾಮ್ ॥೨॥

ಅಲ್ಲಿ ಪ್ರಾಸ ಧನುಸ್ಸುಗಳನ್ನು ಹಿಡಿದು ಹೊಳೆಯುವ ಕುಂಡಲ ಧರಿಸಿದ ಅಜಾಗರೂಕತೆ ಇಲ್ಲದ, ಸದಾ ಜಾಗರೂಕರಾಗಿರುವ, ರಾಮನಲ್ಲಿ ಪ್ರೀತಿ-ಯಿಂದಿರುವ ಯುವಕರು ನೋಡಿಕೊಳ್ಳುತ್ತಿದ್ದರು.

ತತ್ರ ಕಾಷಾಯಿಣೋ ವೃದ್ಧಾನ್ ವೇತ್ರಪಾಣೀನ್ ಸ್ವಲಂಕೃತಾನ್ ।
ದದರ್ಶ ನಿಷ್ಠಿತಾನ್ ದ್ವಾರಿ ಸ್ತ್ರ್ಯಧ್ಯಕ್ಷಾನ್ ಸುಸಮಾಹಿತಾನ್ ॥೩॥

ಅಲ್ಲಿ ಅಂತಃಪುರ ಸ್ತ್ರೀಯರನ್ನು ರಕ್ಷಿಸುವವರು ಕುಂಚುಕಿಗಳು ಬೆತ್ತವನ್ನು ಹಿಡಿದು ದ್ವಾರದಲ್ಲಿ ಜಾಗರೂಕತೆಯಿಂದ ಕರ್ತವ್ಯ ನಿಷ್ಠರಾಗಿದ್ದರು. ಅವರು ವೃದ್ಧರು ಕಾವಿ ಬಣ್ಣದ ಉಡುಗೆ ಧರಿಸಿದ್ದರು. ಅವರನ್ನು ಸುಮಂತ್ರ ಕಂಡ.

ತೇ ಸಮೀಕ್ಷ್ಯ ಸಮಾಯಾಂತಂ ರಾಮಪ್ರಿಯಚಿಕೀರ್ಷವಃ ।
ಸಹಸೋತ್ಪತಿತಾಃ ಸರ್ವೇ ಸ್ವಾಸನೇಭ್ಯಃ ಸಸಂಭ್ರಮಮ್ ॥೪॥

ರಾಮನಿಗೆ ಪ್ರಿಯವನ್ನು ಮಾಡಲು ಬಯಸುವ ಅವರು ಸುಮಂತ್ರನು ಬರುತ್ತಿರುವುದನ್ನು ಕಂಡೊಡನೆ ಎಲ್ಲರೂ ಬೇಗನೆ ಸಡಗರದಿಂದ ತಮ್ಮ ಆಸನ-ಗಳಿಂದ ಮೇಲೆದ್ದರು.

ತಾನುವಾಚ ವಿನೀತಾತ್ಮಾ ಸೂತಪುತ್ರಃ ಪ್ರದಕ್ಷಿಣಃ ।
ಕ್ಷಿಪ್ರಮಾಖ್ಯಾತ ರಾಮಾಯ ಸುಮಂತ್ರೋ ದ್ವಾರಿ ತಿಷ್ಠತಿ ॥೫॥

ರಾಜಾಸೇವಾ ದಕ್ಷನಾದ ವಿನಯಶಾಲಿಯಾದ ಸುಮಂತ್ರ ಅವರಿಗೆ ಹೇಳಿದ. ರಾಮನಿಗೆ ಬೇಗನೆ ತಿಳಿಸಿರಿ, 'ಸುಮಂತ್ರ ದ್ವಾರದಲ್ಲಿ ನಿಂತಿದ್ದಾನೆ' ಎಂದು.

ತೇ ರಾಮಮುಪಸಂಗಮ್ಯ ಭರ್ತುಃ ಪ್ರಿಯಚಿಕೀರ್ಷವಃ ।
ಸಹಭಾರ್ಯಾಯ ರಾಮಾಯ ಕ್ಷಿಪ್ರಮೇವಾಚಚಕ್ಷಿರೇ ॥೬॥

ಪ್ರಭುವಿಗೆ ಪ್ರಿಯವನ್ನು ಮಾಡಲು ಬಯಸುವ ಅವರು ಬೇಗನೆ ರಾಮನ ಬಳಿಗೆ ಹೋಗಿ ಭಾರ್ಯಾಸಮೇತನಾದ ರಾಮನಿಗೆ ಹಾಗೆ ಹೇಳಿದರು.

ಪ್ರತಿವೇದಿತಮಾಜ್ಞಾಯ ಸೂತಮಭ್ಯಂತರಂ ಪಿತುಃ ।
ತತ್ರೈವಾನಾಯಯಾಮಾಸ ರಾಘವಃ ಪ್ರಿಯಕಾಮ್ಯಯಾ ॥೭॥

ಕಂಚುಕಿಗಳು ಹೇಳಿದ ಮಾತನ್ನು ಕೇಳಿ ಶ್ರೀರಾಮ ತಂದೆಗೆ ಅಂತರಂಗದವನಾದ ಸುಮಂತ್ರನನ್ನು ತಂದೆಗೆ ಪ್ರಿಯಉಂಟುಮಾಡುವ ಇಚ್ಛೆಯಿಂದ ತಾನಿದ್ದಲ್ಲಿಗೆ ಕರೆಸಿಕೊಂಡ.

ತಂ ವೈಶ್ರವಣಸಂಕಾಶಮುಪವಿಷ್ಟಂ ಸ್ವಲಂಕೃತಮ್ ।
ದದರ್ಶ ಸೂತಃ ಪರ್ಯಂಕೇ ಸೌವರ್ಣೇ ಸೋತ್ತರಚ್ಛದೇ ॥೮॥

ಚೆನ್ನಾಗಿ ಅಲಂಕೃತನಾಗಿ, ಮೇಲುಹಾಸಿನಿಂದ ಯುಕ್ತವಾದ ಬಂಗಾರದ ಮಂಚದ ಮೇಲೆ ಕುಳಿತಿದ್ದ, ಕುಬೇರನಂತೆ ಮೆರೆಯುತ್ತಿದ್ದ ಶ್ರೀರಾಮನನ್ನು ಸುಮಂತ್ರ ದರ್ಶನ ಮಾಡಿದ.

ವರಾಹರುಧಿರಾಭೇಣ ಶುಚಿನಾ ಚ ಸುಗಂಧಿನಾ ।
ಅನುಲಿಪ್ತಂ ಪರಾರ್ಧ್ಯೇನ ಚಂದನೇನ ಪರಂತಪಮ್ ॥೯॥

ಹಂದಿಯ ರಕ್ತದಂತೆ ಕೆಂಪಾದ ಶುಚಿ ಹಾಗೂ ಸುಗಂಧಯುಕ್ತವಾದ ಅತ್ಯಮೂಲ್ಯವಾದ ರಕ್ತಚಂದನ ಲೇಪಿಸಿಕೊಂಡವನು ಶತ್ರುನಾಶಕ ಶ್ರೀರಾಮ.

'ಹಂದಿಯ ರಕ್ತದಂತೆ ಚಂದನ ಕೆಂಪಾಗಿತ್ತು' ಎಂದು ವರ್ಣಮಾತ್ರದಲ್ಲಿ ದೃಷ್ಟಾಂತ ಎಂಬ ಅಭಿಪ್ರಾಯದಿಂದ 'ಶುಚಿ ಸುಗಂಧಯುಕ್ತ' ಎಂದಿದ್ದಾರೆ. ಹಂದಿಗಳನ್ನು ಬೇಟೆಯಾಡುವ ಕ್ಷತ್ರಿಯ ಜಾತಿಯಲ್ಲಿ ಅವತರಿಸಿದ ಶ್ರೀರಾಮನ ವರ್ಣನೆಯಲ್ಲಿ ಹಂದಿಯ ರಕ್ತದೃಷ್ಟಾಂತ ಕೊಡುವುದು ಅನುಚಿತವಲ್ಲ. ನರಸಿಂಹನ ಕೊರಳಿನಲ್ಲಿ ಕರುಳಿನ ಮಾಲೆಯಂತೆ ಅದು ಭೂಷಣವೆ. ಬ್ರಹ್ಮಚಾರಿ ಯತಿಗಳಿಗೆ ಜುಗುಪ್ಸಿತಳಾದ ನಾರಿ ಗೃಹಸ್ಥನಿಗೆ ಜುಗುಪ್ಸಿತಳಲ್ಲ.

ಸ್ಥಿತಯಾ ಪಾರ್ಶ್ವತಶ್ಚಾಪಿ ವಾಲವ್ಯಜನಹಸ್ತಯಾ ।
ಉಪೇತಂ ಸೀತಯಾ ಭೂಯಶ್ಚಿತ್ರಯಾ ಶಶಿನಂ ಯಥಾ ॥೧೦॥

ಚಿತ್ರಾನಕ್ಷತ್ರ ಸಮೇತನಾದ ಹುಣ್ಣಿಮೆ ಚಂದ್ರನನ್ನು ಜನರು ಮತ್ತೆಮತ್ತೆ ನೋಡುವಂತೆ, ಪಾರ್ಶ್ವದಲ್ಲಿ ಚಾಮರ ಬೀಸುತ್ತ ನಿಂತ ಸೀತೆಯಿಂದ ಸಮೇತನಾಗಿದ್ದ ಶ್ರೀರಾಮನನ್ನು ಸುಮಂತ್ರ ಮತ್ತೆಮತ್ತೆ ನೋಡಿದ.

ತಂ ತಪಂತಮಿವಾದಿತ್ಯಮುಪಪನ್ನಂ ಸ್ವತೇಜಸಾ ।
ವವಂದೇ ವರದಂ ವಂದೀ ವಿನಯಜ್ಞೋ ವಿನೀತವತ್ ॥೧೧॥

ತನ್ನ ತೇಜಸ್ಸಿನಿಂದ ಯುಕ್ತನಾಗಿ ಬೆಳಗುವ ಸೂರ್ಯನಂತಿದ್ದ ವರದಾಯಕನಾದ ಶ್ರೀರಾಮನನ್ನು ವಿನಯವನ್ನು ಬಲ್ಲ ಸುಮಂತ್ರನು ವಿನೀತನಾಗಿ ವಂದಿಸಿದ.

ಪ್ರಾಂಜಲಿಸ್ತು ಸುಖಂ ಪೃಷ್ಟ್ವಾ ವಿಹಾರಶಯನಾಸನೇ ।
ರಾಜಪುತ್ರಮುವಾಚೇದಂ ಸುಮಂತ್ರೋ ರಾಜಸತ್ಕೃತಃ ॥೧೨॥

ರಾಜನಿಂದ ಆದರಿಸಲ್ಪಟ್ಟ ಸುಮಂತ್ರನು ಕೈಮುಗಿದುಕೊಂಡು 'ವಿಹಾರಶಯನ ಆಸನಗಳಲ್ಲಿ ಶ್ರೀರಾಮನಿಗೆ ಸುಖವೆ ತಾನೆ?' ಎಂದು ಸುಖವನ್ನು ಕೇಳಿ ನುಡಿದ.

ಕೌಸಲ್ಯಾಸುಪ್ರಜಾ ರಾಮ ಪಿತಾ ತ್ವಾಂ ದ್ರಷ್ಟುಮಿಚ್ಛತಿ ।
ಮಹಿಷ್ಯಾ ಸಹ ಕೈಕೇಯ್ಯಾ ಗಮ್ಯತಾಂ ತತ್ರ ಮಾ ಚಿರಮ್ ॥೧೩॥

ಕೌಸಲ್ಯೆಯ ಸುಪುತ್ರನಾದ ರಾಮನೆ, ತಂದೆ ರಾಣಿಕೈಕೇಯಿಯೊಂದಿಗೆ ನಿನ್ನನ್ನು ನೋಡಲು ಬಯಸಿದ್ದಾನೆ. ಅಲ್ಲಿಗೆ ಹೋಗು, ತಡಮಾಡಬೇಡ.

ಏವಮುಕ್ತಸ್ತು ಸಂಹೃಷ್ಟೋ ನರಸಿಂಹೋ ಮಹಾದ್ಯುತಿಃ ।
ತತಃ ಸಂಮಾನಯಾಮಾಸ ಸೀತಾಮಿದಮುವಾಚ ಹ ॥೧೪॥

ಮಹಾಪ್ರಕಾಶಉಳ್ಳ ಪುರುಷೋತ್ತಮ ಶ್ರೀರಾಮನು ಸುಮಂತ್ರ ಹೀಗೆ ಹೇಳಿದಾಗ ಅವನನ್ನು ಸತ್ಕರಿಸಿದ ಮತ್ತು ಸೀತೆಗೆ ಹೀಗೆ ನುಡಿದ.

ದೇವಿ ದೇವಶ್ಚ ದೇವೀ ಚ ಸಮಾಗಮ್ಯ ಮದಂತರೇ ।
ಮಂತ್ರಯೇತೇ ಧ್ರುವಂ ಕಿಂಚಿದಭಿಷೇಚನಸಂಹಿತಮ್ ॥೧೫॥

ದೇವಿ, ತಂದೆ ತಾಯಿಗಳು ನನ್ನ ವಿಷಯದಲ್ಲಿ ಇಬ್ಬರೂ ಜೊತೆಗೂಡಿ ನಿಶ್ಚಯವಾಗಿ ಅಭಿಷೇಕದ ಬಗ್ಗೆ ವಿಚಾರ ಮಾಡುತ್ತಿದ್ದಾರೆ.

ಲಕ್ಷಯಿತ್ವಾ ಹ್ಯಭಿಪ್ರಾಯಂ ಪ್ರಿಯಕಾಮಾ ಸುದಕ್ಷಿಣಾ ।
ಸಂಚೋದಯತಿ ರಾಜಾನಂ ಮದರ್ಥಂ ಮದಿರೇಕ್ಷಣೇ ॥೧೬॥

ಸೀತೆ, ತಂದೆಯ ಅಭಿಪ್ರಾಯವನ್ನು ತಿಳಿದು 'ಪ್ರಿಯಕಾಮಾ' ತಂದೆಗೆ ಪ್ರಿಯವನ್ನುಂಟು ಮಾಡುವ ಬಯಕೆಯಿಂದ ಸಮರ್ಥಳಾದ ತಾಯಿ 'ಮದರ್ಥಂ' ನನ್ನ ಅಭಿಷೇಕಕ್ಕಾಗಿ ತಂದೆಯನ್ನು ಅವಸರಪಡಿಸುತ್ತಿದ್ದಾಳೆ.

'ಭರತನಿಲ್ಲದಿರುವಾಗ ರಾಮನಿಗೆ ಅಭಿಷೇಕ ಮಾಡುವುದು ನಿನಗೆ ಸಮ್ಮತವೇ?' ಎಂದು ದಶರಥ ಕೇಳಿದಾಗ ಕೈಕೇಯಿ ಹೇಳುತ್ತಾಳೆ— 'ನನಗೆ ಪೂರ್ಣ ಒಪ್ಪಿಗೆಯಿ. ನೀನು ವೃದ್ಧ. ಭರತನಿಗಾಗಿ ಕಾಯಬೇಕಾಗಿಲ್ಲ. ಪ್ರಿಯವಾದ ಈ ಅಭಿಷೇಕ ವಾರ್ತೆ ತಿಳಿದಾಗ ಅವನು ಸಂತೋಷಪಡುತ್ತಾನೆ. ಅದರಿಂದ ರಾಮನನ್ನು ಇಲ್ಲಿಗೆ ಕರೆಸು' ಎಂದು. ಅದರಿಂದ, ತಂದೆ ನನ್ನನ್ನು ಕರೆಸುತ್ತಿದ್ದಾನೆ' ಎಂದು ಶ್ರೀರಾಮ ಸೀತೆಗೆ ಹೇಳುತ್ತಿದ್ದಾನೆ— ವ್ಯಾಖ್ಯಾನಕಾರರ ಅಭಿಪ್ರಾಯವಿದು.

ವಸ್ತುತಃ 'ಮದರ್ಥಂ' ಎಂದರೆ 'ನನ್ನ ವನವಾಸಕ್ಕಾಗಿ' ತಂದೆಯನ್ನು ಅವಸರಪಡಿಸುತ್ತಿದ್ದಾಳೆ ಕೈಕೇಯಿ ಎಂದು ರಾಮ ಹೇಳುತ್ತಿದ್ದಾನೆ. 'ಪ್ರಿಯ ಕಾಮಾ' ಎಂದರೆ ನನ್ನ ಪ್ರಿಯವನ್ನು ಬಯಸುವವಳು ಕೈಕೇಯಿ, ಅವಳಿಗೆ ಅದು ಪ್ರಿಯ. ತನಗೂ ಪ್ರಿಯವೆ. ಆದರೆ ದಶರಥನಿಗೆ ಅದು ಪ್ರಿಯವಾಗುವುದಿಲ್ಲ.

ಸಾ ಪ್ರಹೃಷ್ಟಾ ಮಹಾರಾಜಂ ಹಿತಕಾಮಾನುವರ್ತಿನೀ ।
ಜನನೀ ಚಾರ್ಥಕಾಮಾ ಮೇ ಕೇಕಯಾಧಿಪತೇಃ ಸುತಾ ॥೧೭॥

ಕೈಕೇಯಿ 'ಅರ್ಥಕಾಮಾ' ನನ್ನ ಇಷ್ಟಾರ್ಥವಾದ ವನವಾಸವನ್ನು ಬಯಸಿ 'ಹಿತಕಾಮಾ' ತನ್ನ ಹಿತವನ್ನು ಬಯಸುವವಳು. 'ಅನುವರ್ತಿನೀ' ತನ್ನ ಹಿತವನ್ನು ಅನುಸರಿಸುವಳು. ಅದಕ್ಕೆ ಪ್ರಹೃಷ್ಟಳು, ಬಲು ಉತ್ಸಾಹ ತೋರುತ್ತಾಳೆ ಕೇಕಯಾಧಿಪತಿಯ ಮಗಳು ಕೈಕೇಯಿ.

ದಿಷ್ಟ್ಯಾ ಖಲು ಮಹಾರಾಜೋ ಮಹಿಷ್ಯಾ ಪ್ರಿಯಯಾ ಸಹ ।
ಸುಮಂತ್ರಂ ಪ್ರಾಹಿಣೋದ್ದೂತಮರ್ಥಕಾಮಕರಂ ಮಮ ॥೧೮॥

ಇದು ಸಂತೋಷ. ಮಹಾರಾಜನು ಪ್ರಿಯ ಮಹಿಷಿಯ ಜೊತೆಗೆ ಇದ್ದು ನನ್ನ ಅಭೀಷ್ಟವಾದ ಕಾರ್ಯ ಮಾಡುವ ಸುಮಂತ್ರನನ್ನು ದೂತನನ್ನಾಗಿ ಕಳಿಸಿ ಕೊಟ್ಟಿದ್ದಾನೆ.

ಯಾದೃಶೀ ಪರಿಷತ್ತತ್ರ ತಾದೃಶೋ ದೂತ ಆಗತಃ ।
ಧ್ರುವಮದ್ಯೈವ ಮಾಂ ರಾಜಾ ಯೌವರಾಜ್ಯೇಽಭಿಷೇಕ್ಷ್ಯತಿ ॥೧೯॥

ತಂದೆಯ ಅಂತಃಪುರದಲ್ಲಿ ಯಾವ ಅಭಿಪ್ರಾಯದ ಮಾತುಕತೆ ನಡೆಯಿತೋ ಆ ಅಭಿಪ್ರಾಯದ ದೂತನೆ ಇಲ್ಲಿಗೆ ಬಂದಿದ್ದಾನೆ. ನಿಶ್ಚಿತವಾಗಿ ರಾಜನು ಇಂದೇ ನನ್ನನ್ನು ಯೌವರಾಜ್ಯದಲ್ಲಿ ಅಭಿಷೇಕ ಮಾಡುತ್ತಾರೆ.

'ರಾಜಾ–ಅ ಅಭಿಷೇಕ್ಷ್ಯತಿ' ಎಂದು ನಿಷೇಧಾರ್ಥಕ 'ಅ' ಶಬ್ದ ಪ್ರಶ್ಲೇಷ ಮಾಡಿದರೆ 'ಅಭಿಷೇಕ ಮಾಡುವುದಿಲ್ಲ, ಕಾಡಿಗೆ ಕಳಿಸುತ್ತಾನೆ' ಎಂದು ಧ್ವನಿತವಾಗುತ್ತದೆ.

ಹಂತ ಶೀಘ್ರಮಿತೋ ಗತ್ವಾ ದ್ರಕ್ಷ್ಯಾಮಿ ಚ ಮಹೀಪತಿಮ್ ।
ಸಹ ತ್ವಂ ಪರಿವಾರೇಣ ಸುಖಮಾಸ್ಸ್ವ ರಮಸ್ವ ಚ ॥೨೦॥

ನಾನು ಇಲ್ಲಿಂದ ಬೇಗನೆ ಹೋಗಿ ರಾಜನನ್ನು ಕಾಣುವೆನು. ನೀನು ಪರಿವಾರ-ದೊಂದಿಗೆ ಸುಖವಾಗಿರು, ರಮಿಸುತ್ತಿರು.

ಪತಿಸಂಮಾನಿತಾ ಸೀತಾ ಭರ್ತಾರಮಸಿತೇಕ್ಷಣಾ ।
ಆದ್ವಾರಮನುವವ್ರಾಜ ಮಂಗಲಾನ್ಯಭಿದಧ್ಯುಷೀ ॥೨೧॥

ಪತಿಯಿಂದ ಆದೃತಳಾದ ಕಪ್ಪುಕಣ್ಣಿನ ಸೀತೆ ಮಂಗಳಾಶಂಸನ ಮಾಡುತ್ತ ದ್ವಾರದವರೆಗೆ ಹಿಂಬಾಲಿಸಿದಳು.

ರಾಜ್ಯಂ ದ್ವಿಜಾತಿಭಿರ್ಜುಷ್ಟಂ ರಾಜಸೂಯಾಭಿಷೇಚನಮ್ ।
ಕರ್ತುಮರ್ಹತಿ ತೇ ರಾಜಾ ವಾಸವಸ್ಯೇವ ಲೋಕಕೃತ್ ॥೨೨॥

ರಾಜಸೂಯಾಭಿಷೇಕಕ್ಕೆ ಕಾರಣವಾಗುವ, ದ್ವಿಜರು ಸೇವಿಸುವ, ರಾಜ್ಯಾಡಳಿತ ಕಾರ್ಯವನ್ನು, ಲೋಕಕರ್ತನಾದ ಬ್ರಹ್ಮನು ಇಂದ್ರನಿಗೆ ಹೇಗೋ ಹಾಗೆ, ರಾಜನು ನಿನಗೆ ವಹಿಸಿಕೊಡಲಿ.

'ರಾಜಾ ರಾಜಸೂಯೇನ ಯಜೇತ' ರಾಜ್ಯಾಡಳಿತ ಮಾಡುವ ರಾಜನು ರಾಜಸೂಯಾಭಿಷೇಕ ಮಾಡಿಸಿಕೊಳ್ಳಬೇಕೆಂದು ವಿಧಿ ಇರುವುದರಿಂದ ಈಗ ರಾಮಾಭಿಷೇಕ ನಡೆದರೆ ಮುಂದೆ ರಾಮ ರಾಜಸೂಯಾಭಿಷೇಕ ಮಾಡಿಸಿ ಕೊಳ್ಳುತ್ತಾನೆ. ಅದರಿಂದ ಈ ಅಭಿಷೇಕ ಮುಂದಿನ ಅಭಿಷೇಕಕ್ಕೆ ಕಾರಣವಾಗಲಿ

ಎಂದು ಮೇಲುನೋಟಕ್ಕೆ ಸೀತೆ ಹಾರೈಸುತ್ತಾಳೆ. ವಸ್ತುತಃ 'ಕರ್ತುಮರ್ಹತಿ' ರಾಜ ರಾಮಾಭಿಷೇಕವನ್ನು ಮಾಡಲು ಅರ್ಹನೆ. ಆದರೆ ರಾಮನ ಸಂಕಲ್ಪ ಬೇರೆಯೆ ಇದೆ ಎನ್ನುತ್ತಾಳೆ.

ದೀಕ್ಷಿತಂ ವ್ರತಸಂಪನ್ನಂ ವರಾಜಿನಧರಂ ಶುಚಿಮ್ ।
ಕುರಂಗಶೃಂಗಪಾಣಿಂ ಚ ಪಶ್ಯಂತೀ ತ್ವಾಂ ಭಜಾಮ್ಯಹಮ್ ॥೨೩॥

ರಾಜಸೂಯಯಾಗದಲ್ಲಿ ಮುಂದೆ ನೀನು ದೀಕ್ಷಿತನಾಗಿ ವ್ರತವನ್ನು ಹಿಡಿದು ಶುಚಿಯಾಗಿ ಒಳ್ಳೆಯ ಅಜಿನವನ್ನುಟ್ಟು ಜಿಂಕೆಯ ಕೊಂಬನ್ನು ಹಿಡಿದುಕೊಂಡಾಗ ಅದನ್ನು ನೋಡಿ ನಾನು ನಿನ್ನನ್ನು ಸೇವಿಸುವಂತಾಗಲಿ.

ಪೂರ್ವಾಂ ದಿಶಂ ವಜ್ರಧರೋ ದಕ್ಷಿಣಾಂ ಪಾತು ತೇ ಯಮಃ ।
ವರುಣಃ ಪಶ್ಚಿಮಾಮಾಶಾಂ ಧನೇಶಸ್ತೂತ್ತರಾಂ ದಿಶಮ್ ॥೨೪॥

ನಿನಗೆ ಪೂರ್ವದಲ್ಲಿ ಇಂದ್ರ, ದಕ್ಷಿಣದಲ್ಲಿ ಯಮ ಪಶ್ಚಿಮ ದಿಕ್ಕಿನಲ್ಲಿ ವರುಣ ಹಾಗೂ ಉತ್ತರ ದಿಕ್ಕಿನಲ್ಲಿ ಕುಬೇರ ರಕ್ಷಿಸಲಿ ಎಂದು ಸೀತೆ ಹಾರೈಸಿದಳು.

ಅಥ ಸೀತಾಮನುಜ್ಞಾಪ್ಯ ಕೃತಕೌತುಕಮಂಗಲಃ ।
ನಿಶ್ಚಕ್ರಾಮ ಸುಮಂತ್ರೇಣ ಸಹ ರಾಮೋ ನಿವೇಶನಾತ್ ।
ಪರ್ವತಾದಿವ ನಿಷ್ಕ್ರಮ್ಯ ಸಿಂಹೋ ಗಿರಿಗುಹಾಶಯಃ ॥೨೫॥

ಉತ್ಸವ ಮಂಗಲಾನುಷ್ಠಾನ ನಡೆಸಿದ್ದ ರಾಮ ಸೀತೆಯಿಂದ ಅನುಮತಿ ಪಡೆದು ಸುಮಂತ್ರನೊಂದಿಗೆ ತನ್ನ ಮಂದಿರದಿಂದ ಹೊರಗೆ ಹೊರಟ, ರಾಜ ಮಂದಿರಕ್ಕೆ, ಗಿರಿಗುಹೆಯಲ್ಲಿರುವ ಸಿಂಹ ಬೆಟ್ಟದಿಂದ ಬೆಟ್ಟಕ್ಕೆ ಹೊರಡುವಂತೆ.

ಲಕ್ಷ್ಮಣಂ ದ್ವಾರಿ ಸೋಽಪಶ್ಯತ್ ಪ್ರಹ್ವಾಂಜಲಿಪುಟಂ ಸ್ಥಿತಮ್ ॥೨೬॥

ಪ್ರಥಮದ್ವಾರದಲ್ಲಿ ವಿನೀತನಾಗಿ ಕೈಮುಗಿದು ನಿಂತಿದ್ದ ಲಕ್ಷ್ಮಣನನ್ನು ನೋಡಿದ.

ಅಥ ಮಧ್ಯಮಕಕ್ಷ್ಯಾಯಾಂ ಸಮಾಗಮ್ಯ ಸುಹೃಜ್ಜನೈಃ ।
ಸ ಸರ್ವಾನರ್ಥಿನೋ ದೃಷ್ಟ್ವಾ ಸಮೇತ್ಯ ಪ್ರತಿನಂದ್ಯ ಚ ॥೨೭॥

ಬಳಿಕ ಲಕ್ಷ್ಮಣ ಮುಂತಾದ ಬಂಧುಜನರೊಂದಿಗೆ ಬಂದು ಮಧ್ಯದ ಕಕ್ಷ್ಯೆ–ಯಲ್ಲಿ ದರ್ಶನಾರ್ಥಿಗಳಾಗಿ ಬಂದಿದ್ದ ಎಲ್ಲರನ್ನೂ ಸಂಧಿಸಿ ಆನಂದಗೊಳಿಸಿದ.

ತತಃ ಪರ್ವತಸಂಕಾಶಮಾರುರೋಹ ರಥೋತ್ತಮಮ್ ।
ವೈಯಾಘ್ರಂ ಪುರುಷವ್ಯಾಘ್ರೋ ರಾಜತಂ ರಾಜನಂದನಃ ॥೨೮॥

ಬಳಿಕ ಪುರುಷೋತ್ತಮನಾದ ರಾಜಕುಮಾರ ರಾಮನು ಬೆಟ್ಟದಂತೆ ಉನ್ನತವಾದ ಉತ್ತಮವಾದ ಹುಲಿಚರ್ಮ ಹೊದಿಸಿದ್ದ ಬೆಳ್ಳಿಯ ರಥವನ್ನೇರಿದ.

ಮೇಘನಾದಮಸಂಬಾಧಂ ಮಣಿವಿದ್ರುಮಭೂಷಿತಮ್ ।
ಮುಷ್ಣಂತಮಿವ ಚಕ್ಷೂಂಷಿ ಪ್ರಭಯಾ ಸೂರ್ಯವರ್ಚಸಮ್ ॥೨೯॥

ಆ ರಥವು ಒಳಗೆ ವಿಶಾಲವಾಗಿದ್ದು ಗುಡುಗಿನಂಥ ಶಬ್ದಮಾಡುತ್ತಿತ್ತು. ರತ್ನ-ಹವಳಗಳಿಂದ ಅಲಂಕೃತವಾಗಿತ್ತು. ಪ್ರಭೆಯಿಂದ ಸೂರ್ಯನನ್ನು ಹೋಲುತ್ತ ಜನರ ಕಣ್ಣುಗಳನ್ನು ತನ್ನತ್ತ ಸೆಳೆಯುತ್ತಿತ್ತು.

ಕರೇಣುಶಿಶುಕಲ್ಪೈಶ್ಚ ಯುಕ್ತಂ ಪರಮವಾಜಿಭಿಃ ।
ಹರಿಯುಕ್ತಂ ಸಹಸ್ರಾಕ್ಷೋ ರಥಮಿಂದ್ರ ಇವಾಶುಗಮ್ ।
ಪ್ರಯಯೌ ತೂರ್ಣಮಾಸ್ಥಾಯ ರಾಘವೋ ಜ್ವಲಿತಃ ಶ್ರಿಯಾ ॥೩೦॥

ಅನೆಮರಿಗಳಂತೆ ಪುಷ್ಟವಾದ ಶ್ರೇಷ್ಠ ಕುದುರೆಗಳನ್ನು ಆ ರಥಕ್ಕೆ ಕಟ್ಟಿತ್ತು. ಮರಕತ ವರ್ಣದ ಕುದುರೆ ಕಟ್ಟಿದ ರಥವನ್ನು ಸಹಸ್ರಾಕ್ಷನಾದ ಇಂದ್ರ ಏರುವಂತೆ ವೇಗವಾಗಿ ಓಡುವ ಆ ರಥವನ್ನು ಏರಿ ಕಾಂತಿಯಿಂದ ಜ್ವಲಿಸುತ್ತ ವೇಗದಿಂದ ಪ್ರಯಾಣಗೈದ ಶ್ರೀರಾಮ.

ಸ ಪರ್ಜನ್ಯ ಇವಾಕಾಶೇ ಸ್ವನವಾನಭಿನಾದಯನ್ ।
ನಿಕೇತಾನ್ನಿರ್ಯಯೌ ಶ್ರೀಮಾನ್ ಮಹಾಭ್ರಾದಿವ ಚಂದ್ರಮಾಃ ॥೩೧॥

ಮಹಾಮೇಘದಿಂದ, ಬೆಳಗುವ ಚಂದ್ರ ಹೊರಗೆ ಬರುವಂತೆ, ಅರಮನೆಯಿಂದ ಬೆಳಗುತ್ತ ಹೊರಟ ಶ್ರೀರಾಮ ಆಕಾಶದಲ್ಲಿ ಗುಡುಗುವ ಮೋಡದಂತೆ ರಥಶಬ್ದ ಮಾಡುತ್ತ ಪ್ರಯಾಣ ಮಾಡಿದ.

ಛತ್ರಚಾಮರಪಾಣಿಸ್ತು ಲಕ್ಷ್ಮಣೋ ರಾಘವಾನುಜಃ ।
ಜುಗೋಪ ಭ್ರಾತರಂ ಭ್ರಾತಾ ರಥಮಾಸ್ಥಾಯ ಪೃಷ್ಠತಃ ॥೩೨॥

ರಥದಲ್ಲಿ ರಾಮಾನುಜನಾದ ಲಕ್ಷ್ಮಣ ರಾಮನಿಗೆ ಛತ್ರಚಾಮರಗಳನ್ನು ಹಿಡಿದು ರಥದಲ್ಲಿ ಹಿಂಭಾಗದಲ್ಲಿ ನಿಂತು, ಅಣ್ಣನನ್ನು ತಮ್ಮ ಅಂಗರಕ್ಷಕನಾಗಿ ಜೋಪಾನವಾಗಿ ಕಾಪಾಡಿದ.

ತತೋ ಹಲಹಲಾಶಬ್ದಸ್ತುಮುಲಃ ಸಮಜಾಯತ ।
ತಸ್ಯ ನಿಷ್ಕ್ರಮಮಾಣಸ್ಯ ಜನೌಘಸ್ಯ ಸಮಂತತಃ ॥೩೩॥

ಶ್ರೀರಾಮ ಅರಮನೆಯಿಂದ ಹೊರಡುತ್ತಿದ್ದಂತೆ ಜನಸಮೂಹದ ಗಜಿಬಿಜಿ ಶಬ್ದ ಎಲ್ಲೆಡೆ ಉಂಟಾಯಿತು.

ತತೋ ಹಯವರಾ ಮುಖ್ಯಾ ನಾಗಾಶ್ಚ ಗಿರಿಸಂನಿಭಾಃ ।
ಅನುಜಗ್ಮುಸ್ತದಾ ರಾಮಂ ಶತಶೋಽಥ ಸಹಸ್ರಶಃ ॥೩೪॥

ಆಗ ಶ್ರೇಷ್ಠವಾದ ಅಶ್ವಗಳೂ ಬೆಟ್ಟದಂಥ ಮುಖ್ಯ ಗಜಗಳೂ ನೂರಾರು ಸಾವಿರಾರು ಸಂಖ್ಯೆಯಲ್ಲಿ ಶ್ರೀರಾಮನನ್ನು ಹಿಂಬಾಲಿಸಿದುವು.

ಅಗ್ರತಶ್ಚಾಸ್ಯ ಸಂನದ್ಧಾಶ್ಚಂದನಾಗರುರೂಷಿತಾಃ ।
ಖಡ್ಗಚಾಪಧರಾಃ ಶೂರಾ ಜಗ್ಮುರಾಶಂಸವೋ ಜನಾಃ ॥೩೫॥

ಶ್ರೀರಾಮನ ಈ ರಥೋತ್ಸವದಲ್ಲಿ ರಥದ ಮುಂಭಾಗದಲ್ಲಿ ಚಂದನ ಅಗರು-ಗಳನ್ನು ಲೇಪಿಸಿಕೊಂಡು ಖಡ್ಗಧನುಸ್ಸುಗಳನ್ನು ಹಿಡಿದು ಸನ್ನದ್ಧರಾದ ಶೂರರು ಮತ್ತು ಶ್ರೀರಾಮನಿಗೆ ಮಂಗಳಾಶಂಸನಗೈವ ಜನರೂ ನಡೆಯುತ್ತಿದ್ದರು.

ತತೋ ವಾದಿತ್ರಶಬ್ದಾಶ್ಚ ಸ್ತುತಿಶಬ್ದಾಶ್ಚ ವಂದಿನಾಮ್ ।
ಸಿಂಹನಾದಾಶ್ಚ ಶೂರಾಣಾಂ ತಥಾ ಶುಶ್ರುವಿರೇ ಪಥಿ ॥೩೬॥

ವಾದ್ಯ ಘೋಷಗಳೂ ವಂದಿಗಳ ಸ್ತುತಿ ಶಬ್ದಗಳೂ ಶೂರರ ಸಿಂಹನಾದಗಳೂ ದಾರಿಯುದ್ದಕ್ಕೂ ಕೇಳಿಬಂದುವು.

ಹರ್ಮ್ಯವಾತಾಯನಸ್ಥಾಭಿರ್ಭೂಷಿತಾಭಿಃ ಸಮಂತತಃ ।
ಕೀರ್ಯಮಾಣಃ ಸುಪುಷ್ಪೌಘೈರ್ಯಯೌ ಸ್ತ್ರೀಭಿರರಿಂದಮಃ ॥೩೭॥

ಮಾರ್ಗದ ಇಕ್ಕೆಲಗಳ ಮಹಡಿಮನೆ ಕಿಟಕಿಗಳಲ್ಲಿ ನಿಂತ ಅಲಂಕೃತರಾದ ಸ್ತ್ರೀಯರು ಹೂವಿನ ರಾಶಿಗಳ ಮಳೆಗರೆಯುತ್ತಿದ್ದಂತೆ ಶತ್ರುನಾಶಕ ಶ್ರೀರಾಮ ಮುಂದುವರಿದ.

ರಾಮಂ ಸರ್ವಾನವದ್ಯಾಂಗ್ಯೋ ರಾಮಪಿಪ್ರೀಷಯಾ ತತಃ ।
ವಚೋಭಿರಗ್ರ್ಯೈ ರ್ಹರ್ಮ್ಯಸ್ಥಾಃ ಕ್ಷಿತಿಸ್ಥಾಶ್ಚ ವವಂದಿರೇ ॥೩೮॥

ಮಹಡಿ ಮೇಲೆ ಮತ್ತು ಕೆಳಗೆ ನಿಂತಿದ್ದ ಸರ್ವಾಂಗ ನಿರ್ಮಲರಾದ ಸ್ತ್ರೀಯರು ರಾಮನನ್ನು ಸಂತೋಷಪಡಿಸುವ ಇಚ್ಛೆಯಿಂದ ಚೆಲುನುಡಿಗಳಿಂದ ಗುಣಗಾನ ಮಾಡಿದರು.

ನೂನಂ ನಂದತಿ ತೇ ಮಾತಾ ಕೌಸಲ್ಯಾ ಮಾತೃನಂದನ ।
ಪಶ್ಯಂತಿ ಸಿದ್ಧಯಾತ್ರಂ ತ್ವಾಂ ಪಿತ್ರ್ಯಂ ರಾಜ್ಯಮವಸ್ಥಿತಮ್ ॥೩೯॥

ತಾಯಿಗೆ ಸಂತೋಷ ಉಂಟುಮಾಡುವ ಶ್ರೀರಾಮನೆ, ತಂದೆಯ ರಾಜ್ಯವನ್ನು ಪಡೆಯುತ್ತಿರುವ ನೀನು ರಥೋತ್ಸವವನ್ನು ಹೊಂದುವುದನ್ನು ನೋಡುತ್ತ ನಿನ್ನ ತಾಯಿ ಕೌಸಲ್ಯೆ ನಿಶ್ಚಿತವಾಗಿ ಆನಂದಿಸುವಳು.

ಸರ್ವಸೀಮಂತಿನೀಭ್ಯಶ್ಚ ಸೀತಾಂ ಸೀಮಂತಿನೀಂ ವರಾಮ್ ।
ಅಮನ್ಯಂತ ಹಿ ತಾ ನಾರ್ಯೋ ರಾಮಸ್ಯ ಹೃದಯಪ್ರಿಯಾಮ್ ॥೪೦॥

ಎಲ್ಲ ಸ್ತ್ರೀಯರಿಗಿಂತ ಶ್ರೇಷ್ಠ ಸ್ತ್ರೀ ಎಂದು ರಾಮನ ಹೃದಯಪ್ರಿಯೆಯಾದ ಸೀತೆಯನ್ನು ಆ ನಾರಿಯರು ಕೊಂಡಾಡಿದರು.

ತಯಾ ಸುಚರಿತಂ ದೇವ್ಯಾ ಪುರಾ ನೂನಂ ಮಹತ್ತಪಃ ॥೪೧॥
ರೋಹಿಣೀವ ಶಶಾಂಕೇನ ರಾಮಸಂಯೋಗಮಾಪ ಯಾ ॥೪೨॥

ರೋಹಿಣಿಯು ಚಂದ್ರನನ್ನು ಸೇರಿದಂತೆ ರಾಮನನ್ನು ಸೀತೆ ಸೇರಿದ್ದಾಳೆ. ದೇವಿ ನಿಶ್ಚಯವಾಗಿಯೂ ಹಿಂದೆ ದೊಡ್ಡತಪಸ್ಸನ್ನು ಚೆನ್ನಾಗಿ ಮಾಡಿರುತ್ತಾಳೆ.

ಇತಿ ಪ್ರಾಸಾದಶೃಂಗೇಷು ಪ್ರಮದಾಭಿರ್ನರೋತ್ತಮಃ ।
ಶುಶ್ರಾವ ರಾಜಮಾರ್ಗಸ್ಥಃ ಪ್ರಿಯಾ ವಾಚ ಉದಾಹೃತಾಃ ।
ಆತ್ಮಸಂಪೂಜನೈಃ ಶೃಣ್ವನ್ ಯಯೌ ರಾಮೋ ಮಹಾಪಥಮ್ ॥೪೩॥

ಹೀಗೆ ರಾಜಮಾರ್ಗದಲ್ಲಿ ಹೋಗುವಾಗ ಪುರುಷೋತ್ತಮ ಶ್ರೀರಾಮ ಎತ್ತರದ ಮಹಡಿಗಳಲ್ಲಿ ನಿಂತು ಪ್ರಮದೆಯರು ಆಡಿದ ಮನೋಹರವಾದ ಮಾತುಗಳನ್ನು ಆಲಿಸಿದ. ತನ್ನನ್ನು ಕೊಂಡಾಡುವ ಜನರ ಮಾತುಗಳನ್ನು ಆಲಿಸಿದ. ಹೀಗೆ ರಾಜಮಾರ್ಗದಲ್ಲಿ ಚಲಿಸಿದ.

ಸ ರಾಘವಸ್ತತ್ರ ಕಥಾಪ್ರಪಂಚಾನ್
ಶುಶ್ರಾವ ಲೋಕಸ್ಯ ಸಮಾಗತಸ್ಯ ।
ಆತ್ಮಾಧಿಕಾರಾ ವಿವಿಧಾಶ್ಚ ವಾಚಃ
ಪ್ರಹೃಷ್ಟರೂಪಸ್ಯ ಪುರೋ ಜನಸ್ಯ ॥೪೪॥

ಪುರಜನರು ಬಹಳ ಉತ್ಸಾಹಗೊಂಡು ತನ್ನ ಬಗ್ಗೆ ನಾನಾಬಗೆಯ ಸ್ತುತಿಗಳನ್ನು

ಮಾಡಿದರು. ಸಮಾರಂಭದಲ್ಲಿ ಭಾಗವಹಿಸಲು ಬಂದ ಜನರೂ ಬಹಳ ವಿಸ್ತಾರವಾಗಿ ಸ್ತುತಿಮಾಡಿದರು. ಅವೆಲ್ಲವನ್ನೂ ಶ್ರೀರಾಮ ಆಲಿಸಿದ.

ಏಷ ಶ್ರಿಯಂ ಗಚ್ಛತಿ ರಾಘವೋಽದ್ಯ
ರಾಜಪ್ರಸಾದಾದ್ವಿಪುಲಾಂ ಗಮಿಷ್ಯನ್ ।
ಏತೇ ವಯಂ ಸರ್ವಸಮೃದ್ಧಕಾಮಾ
ಯೇಷಾಮಯಂ ನೋ ಭವಿತಾ ಪ್ರಶಾಸ್ತಾ ॥೪೫॥

'ಶ್ರೀರಾಮನು ಇಂದು ರಾಜಾದಶರಥನ ಅನುಗ್ರಹದಿಂದ ವಿಪುಲವಾದ ರಾಜ್ಯಸಂಪತ್ತನ್ನು ಹೊಂದಲು ಹೋಗುತ್ತಿದ್ದಾನೆ. ನಮಗೆ ಈತ ಆಳುವ ದೊರೆ-ಯಾಗುವುದರಿಂದ ನಮ್ಮ ಎಲ್ಲ ಅಭೀಷ್ಟಗಳು ಸಮೃದ್ಧವಾಗಿ ಸಿದ್ಧಿಸುವುವು.'

ಸತ್ಯಸಂಕಲ್ಪನಾದ ಶ್ರೀರಾಮ ಪ್ರಜೆಗಳ ಸಂಕಲ್ಪವನ್ನು ಮುಂದೆ ರಾವಣ ವಧಾನಂತರ ಅವಶ್ಯ ನಡೆಸುತ್ತಾನೆ.

ಲಾಭೋ ಜನಸ್ಯಾಸ್ಯ ಯದೇಷ ಸರ್ವಂ
ಪ್ರಪತ್ಸ್ಯತೇ ರಾಷ್ಟ್ರಮಿದಂ ಚಿರಾಯ ।
ನ ಹ್ಯಪ್ರಿಯಂ ಕಿಂಚನ ಜಾತು ಕಶ್ಚಿತ್
ಪಶ್ಯೇನ್ನ ದುಃಖಂ ಮನುಜಾಧಿಪೇಽಸ್ಮಿನ್ ॥೪೬॥

'ಶ್ರೀರಾಮ ಬಹುಕಾಲ ಈ ಎಲ್ಲ ರಾಷ್ಟ್ರವನ್ನು ಆಳುವಂತಾದರೆ ನಮಗೆ ಅದು ದೊಡ್ಡ ಲಾಭವಾಗುವುದು. ಈತ ರಾಜನಾಗಿರುವಾಗ ಯಾರೂ ಎಂದೂ ಯಾವುದೇ ಅನಿಷ್ಟವನ್ನು ದುಃಖವನ್ನು ಕಾಣಲಾರ' ಎಂದು.

ಸ ಘೋಷವದ್ಭಿಶ್ಚ ಹಯೈರ್ಮತಂಗಜೈಃ
ಪುರಃಸರೈಃ ಸ್ವಸ್ತಿಕಸೂತಮಾಗಧೈಃ ।
ಮಹೀಯಮಾನಃ ಪ್ರವರೈಶ್ಚ ವಾದಕೈ-
ರಭಿಷ್ಟುತೋ ವೈಶ್ರವಣೋ ಯಥಾ ಯಯೌ ॥೪೭॥

ಶ್ರೀರಾಮನು ಮುಂಭಾಗದಲ್ಲಿ ಘೋಷ ಮಾಡುತ್ತ ಚಲಿಸುವ ಅಶ್ವಗಜಗಳು ಸ್ತೋತ್ರನಿಪುಣರಾದ 'ಸ್ವಸ್ತಿಕ'ರು ಜಯಕಾರ ಮಾಡುವವರು, 'ಸೂತ'ರು ಪುರಾಣಪಾಠಕರು, 'ಮಾಗಧ'ರು ವಂಶಾವಲಿಪಾಠಕರು ಇವರಿಂದ ಸ್ತುತನಾಗಿ ಮಾನಿಸಲ್ಪಡುತ್ತ ಕುಬೇರನಂತೆ ರಾಜಮಾರ್ಗದಲ್ಲಿ ಮುಂದೆ ಮುಂದೆ ಸರಿದ.

ಕರೇಣುಮಾತಂಗರಥಾಶ್ವಸಂಕುಲಂ
ಮಹಾಜನೌಘಪ್ರತಿಪೂರ್ಣಚತ್ವರಮ್ ।
ಪ್ರಭೂತರತ್ನಂ ಬಹುಪಣ್ಯಸಂಚಯಂ
ದದರ್ಶ ರಾಮೋ ರುಚಿರಂ ಮಹಾಪಥಮ್ ॥೪೮॥

ಹೆಣ್ಣಾನೆ ಗಂಡಾನೆ ರಥ ಅಶ್ವಗಳಿಂದ ಮಹಾಜನ ಸಮೂಹಯುಕ್ತವಾದ ಚೌಕಗಳಿಂದ ಬಹುರತ್ನಗಳಿಂದ ಬಹು ಮಾರಾಟದ ಸರಕುಗಳಿಂದ ಯುಕ್ತವಾದ ಸುಂದರವಾದ ರಾಜಮಾರ್ಗವನ್ನು ನೋಡುತ್ತ ಶ್ರೀರಾಮ ಮುಂದೆ ಮುಂದೆ ಸರಿದ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಹದಿನಾರನೇ ಸರ್ಗ ಮುಗಿಯಿತು.

❖

ಸಪ್ತದಶಃ ಸರ್ಗಃ

ಸರ್ಗ – 17

ಶ್ರೀರಾಮ ದಶರಥನ ಬಳಿಗೆ ಹೋದುದು.

ಸ ರಾಮೋ ರಥಮಾಸ್ಥಾಯ ಸಂಪ್ರಹೃಷ್ಟಸುಹೃಜ್ಜನಃ ।
ಪತಾಕಾಧ್ವಜಸಂಪನ್ನಂ ಮಹಾರ್ಹಾಗರುಧೂಪಿತಮ್ ।
ಅಪಶ್ಯನ್ನಗರಂ ಶ್ರೀಮನ್ನಾನಾಜನಸಮಾಕುಲಮ್ ॥೧॥

ಶ್ರೀರಾಮನು ರಥದಲ್ಲಿ ಕುಳಿತು ಬಂಧುಮಿತ್ರ ಜನರಿಗೆ ಹರ್ಷನೀಡುತ್ತ 'ಪತಾಕಾಧ್ವಜ' ಸೌಭಾಗ್ಯ ಸೂಚಕ ಧ್ವಜಗಳಿಂದ ಕೂಡಿದ ಬಹಳ ಬೆಲೆಬಾಳುವ ಅಗರುಧೂಪದಿಂದ ಸುಗಂಧಿತವಾದ ಸುಂದರವಾದ 'ನಾನಾ ಅ-ಜನ' ನಾನಾ ಮುಕ್ತರಿಂದ ತುಂಬಿದ ವೈಕುಂಠಕ್ಕೆ ಸಮವಾದ ಅಯೋಧ್ಯಾ ನಗರವನ್ನು ನೋಡುತ್ತ ಮುಂದೆ ಮುಂದೆ ಸರಿದ.

ಚಿನ್ಮಯನಾದ ವೈಕುಂಠದ ಸನ್ನಿಧಾನದಿಂದ ಅಯೋಧ್ಯೆ ವೈಕುಂಠಕ್ಕೆ ಸಮವಾಗಿತ್ತು.

ಸ ಗೃಹೈರಭ್ರಸಂಕಾಶೈಃ ಪಾಂಡರೈರುಪಶೋಭಿತಮ್ ।
ರಾಜಮಾರ್ಗಂ ಯಯೌ ರಾಮೋ ಮಧ್ಯೇನಾಗರುಧೂಪಿತಮ್ ॥೨॥

ಅಗರುಧೂಪ ಸುಗಂಧಿತವಾದ, ಬಿಳಿಮೋಡಗಳಂತೆ ಶೋಭಿಸುವ ಶುಭ್ರವಾದ ಸೌಧಗಳಿಂದ ಎಸೆವ ರಾಜಮಾರ್ಗದ ಮಧ್ಯದಲ್ಲಿ ಶ್ರೀರಾಮ ಸಂಚರಿಸಿದ.

ಚಂದನಾನಾಂ ಚ ಮುಖ್ಯಾನಾಮಗರೂಣಾಂ ಚ ಸಂಚಯೈಃ ।
ಉತ್ತಮಾನಾಂ ಚ ಗಂಧಾನಾಂ ಕ್ಷೌಮಕೌಶಾಂಬರಸ್ಯ ಚ ॥೩॥

ಅವಿದ್ಧಾಭಿಶ್ಚ ಮುಕ್ತಾಭಿರುತ್ತಮೈಃ ಸ್ಫಟಿಕೈರಪಿ ।
ಶೋಭಮಾನಮಸಂಬಾಧಂ ತಂ ರಾಜಪಥಮುತ್ತಮಮ್ ॥೪॥

ಶ್ರೇಷ್ಠವಾದ ಚಂದನ ಅಗರುಗಳ ರಾಶಿಗಳಿಂದಲೂ ಉತ್ತಮವಾದ ಗಂಧಗಳ ರೇಶಿಮೆ ಬಟ್ಟೆಗಳ ಹೊಸ ಮುತ್ತುಗಳ ಸ್ಫಟಿಕಗಳ ರಾಶಿಗಳಿಂದಲೂ ಶೋಭಿಸುವ ವಿಶಾಲವಾದ ಉತ್ತಮವಾದ ರಾಜಮಾರ್ಗದ ಮಧ್ಯದಲ್ಲಿ ಶ್ರೀರಾಮ ಸಂಚರಿಸಿದ.

ಸಂವೃತಂ ವಿವಿಧೈಃ ಪಣ್ಯೈರ್ಭಕ್ಷ್ಯೈರುಚ್ಚಾವಚೈರಪಿ ।
ದದರ್ಶ ತಂ ರಾಜಪಥಂ ದಿವಿ ದೇವಪಥಂ ಯಥಾ ॥೫॥

ನಾನಾ ಬಗೆಯ ಮಾರಾಟದ ಸರಕುಗಳಿಂದ ಸಣ್ಣದೊಡ್ಡ ಭಕ್ಷ್ಯಗಳಿಂದ ತುಂಬಿದ್ದು ದೇವಲೋಕದ ದೇವಮಾರ್ಗದಂತಿದ್ದ ರಾಜಮಾರ್ಗವನ್ನು ಶ್ರೀರಾಮ ಕಾಣುತ್ತ ಸಂಚರಿಸಿದ.

ದಧ್ಯಕ್ಷತಹವಿರ್ಲಾಜೈರ್ಧೂಪೈರಗರುಚಂದನೈಃ ।
ನಾನಾಮಾಲ್ಯೋಪಗಂಧೈಶ್ಚ ಸದಾಭ್ಯರ್ಚಿತಚತ್ವರಮ್ ॥೬॥

ಮೊಸರು ಅಕ್ಷತೆಗಳು ಹವಿಸ್ಸು ಅರಳು ಧೂಪ ಅಗರು ಚಂದನ ನಾನಾ ಮಾಲೆಗಳು ಗಂಧಗಳಿಂದ ಸದಾ ಅಲಂಕೃತವಾದ ಚೌಕಗಳಿಂದ ಯುಕ್ತವಾದ ರಾಜಮಾರ್ಗದ ಮಧ್ಯದಲ್ಲಿ ಶ್ರೀರಾಮ ಸಂಚರಿಸಿದ.

ಆಶೀರ್ವಾದಾನ್ ಬಹೂನ್ ಶೃಣ್ವನ್ ಸುಹೃದ್ಭಿಃ ಸಮುದೀರಿತಾನ್ ।
ಯಥಾರ್ಹಂ ಚಾಪಿ ಸಂಪೂಜ್ಯ ಸರ್ವಾನೇವ ನರಾನ್ ಯಯೌ ॥೭॥

ಬಂಧುಮಿತ್ರರು ಹೇಳುವ ಬಹು ಆಶೀರ್ವಚನಗಳನ್ನು ಕೇಳುತ್ತ ಎಲ್ಲ ಜನರನ್ನು ಯಥಾಯೋಗ್ಯವಾಗಿ ಆದರದಿಂದ ಕಾಣುತ್ತ ಸಂತೈಸುತ್ತ ಸಂಚರಿಸಿದ, ಶ್ರೀರಾಮ.

ಪಿತಾಮಹೈರಾಚರಿತಂ ತಥೈವ ಪ್ರಪಿತಾಮಹೈಃ ।
ಅದ್ಯೋಪಾದಾಯ ತಂ ಮಾರ್ಗಮಭಿಷಿಕ್ತೋಽನುಪಾಲಯ ॥೮॥

ಜನರು ಆಶೀರ್ವದಿಸಿದರು. 'ನೀನು ನಿನ್ನ ತಾತ ಮುತ್ತಾತರು ನಡೆದುಬಂದ ಮಾರ್ಗವನ್ನೇ ಹಿಡಿದು ಇಂದು ಅಭಿಷಿಕ್ತನಾಗಿ ಪರಿಪಾಲಿಸು.

ಯಥಾ ಸ್ಮ ಲಾಲಿತಾಃ ಪಿತ್ರಾ ಯಥಾ ಪೂರ್ವೈಃ ಪಿತಾಮಹೈಃ ।
ತತಃ ಸುಖಿತರಂ ರಾಮೇ ವತ್ಸ್ಯಾಮಃ ಸತಿ ರಾಜನಿ ॥೯॥

ನಿನ್ನ ತಂದೆಯಿಂದಲೂ ಪೂರ್ವದ ಪಿತಾಮಹಾದಿಗಳಿಂದಲೂ ನಾವು ಹೇಗೆ ಸುಖವಾಗಿ ಪೋಷಿತರಾದೆವೋ ಅದಕ್ಕಿಂತ ಮಿಗಿಲಾಗಿ, ರಾಮ, ನಿನ್ನ ಆಡಳಿತದಲ್ಲಿ ನಾವು ಇನ್ನೂ ಹೆಚ್ಚು ಸುಖವಾಗಿ ವಾಸಮಾಡಲಿರುವೆವು.

ಅರ್ಥೈರಲಂ ಹಿ ಭುಕ್ತೈರ್ನಃ ಪರಮಾರ್ಥೈರಲಂ ಚ ನಃ ।
ಯಥಾ ಪಶ್ಯೇಮ ನಿರ್ಯಾಂತಂ ರಾಮಂ ರಾಜ್ಯೇ ಪ್ರತಿಷ್ಠಿತಮ್ ॥೧೦॥

ನಮಗೆ ಭೋಜನ ಸುಖವೂ ಬೇಡ, ಇತರ ವಿಷಯ ಸುಖವೂ ಬೇಡ, ರಾಜ್ಯದಲ್ಲಿ ಅಭಿಷಿಕ್ತನಾಗಿ ಅರಮನೆಯಿಂದ ನೀನು ಹೊರಟು ಬರುವುದನ್ನು ನಾವು ನೋಡಬೇಕು.

ತತೋ ಹಿ ನಃ ಪ್ರಿಯತರಂ ನಾನ್ಯತ್ಕಿಂಚಿದ್ಭವಿಷ್ಯತಿ ।
ಯಥಾಭಿಷೇಕೋ ರಾಮಸ್ಯ ರಾಜ್ಯೇನಾಮಿತತೇಜಸಃ ॥೧೧॥

ಅಮಿತ ತೇಜನಾದ ರಾಮನ ಅಭಿಷೇಕಕ್ಕಿಂತ ಹೆಚ್ಚು ಪ್ರಿಯವಾದುದು ನಮಗೆ ಬೇರೇನೂ ಇರಲಾರದು.

ಏತಾಶ್ಚಾನ್ಯಾಶ್ಚ ಸುಹೃದಾಮುದಾಸೀನಃ ಕಥಾಃ ಶುಭಾಃ ।
ಆತ್ಮಸಂಪೂಜನೀಃ ಶೃಣ್ವನ್ ಯಯೌ ರಾಮೋ ಮಹಾಪಥಮ್ ॥೧೨॥

ಈ ಹೊಗಳಿಕೆಗಳಿಗಾಗಲಿ ಇನ್ನೂ ಬೇರೆ ಹೊಗಳಿಕೆಗಳಿಗಾಗಲಿ ರಾಮ ಉಬ್ಬಲಿಲ್ಲ. ಅವುಗಳಿಂದ ಪ್ರಯೋಜನ ಹೊಗಳುವವರಿಗೆ ತಮಗೇ ಹೊರತು ರಾಮನಿಗಲ್ಲ. ಬಿಂಬವನ್ನು ಸಿಂಗರಿಸಿದರೆ ಪ್ರತಿಬಿಂಬದ ಚಂದವೇ ಹೆಚ್ಚುವುದು. ಅದರಿಂದ ರಾಮ ಉದಾಸೀನನಾಗಿಯೇ ಕೇಳುತ್ತ ರಾಜಮಾರ್ಗದಲ್ಲಿ ಸಂಚರಿಸಿದ. 'ಭಗವಂತ ಸ್ವಾಭಿಮಾನಿ, ಅವನನ್ನು ಹೊಗಳದಿದ್ದರೂ ತೆಗಳಿದರೂ ಅವನ ಅಭಿಮಾನಕ್ಕೆ ಪೆಟ್ಟು. ಅದನ್ನು ಅವನು ಸಹಿಸಲಾರ' ಅಂದು ಭಾವಿಸಿದರೆ ಅದು ತಪ್ಪೆಂದು ಶ್ರೀರಾಮ ತಿಳಿಸುತ್ತಿದ್ದಾನೆ.

ನ ಹಿ ತಸ್ಮಾನ್ಮನಃ ಕಶ್ಚಿತ್ ಚಕ್ಷುಷೀ ವಾ ನರೋತ್ತಮಾತ್ ।
ನರಃ ಶಕ್ನೋತ್ಯಪಾಕ್ರಷ್ಟುಮತಿಕ್ರಾಂತೇಽಪಿ ರಾಘವೇ ॥೧೩॥

ಪುರುಷೋತ್ತಮನಾದ ರಾಮ ಕಣ್ಣಮುಂದೆ ಹಾದುಹೋದರೂ, ಅವನಲ್ಲೇ ನೆಟ್ಟಿದ್ದ ಕಣ್ಮನಗಳನ್ನು ಜನರು ಈಚೆಗೆ ಸೆಳೆದುಕೊಳ್ಳಲು ಶಕ್ತರಾಗಲಲ್ಲ.

ಯಶ್ಚ ರಾಮಂ ನ ಪಶ್ಯೇತ್ತು ಯಂ ಚ ರಾಮೋ ನ ಪಶ್ಯತಿ ।
ನಿಂದಿತಃ ಸ ಭವೇಲ್ಲೋಕೇ ಸ್ವಾತ್ಮಾಪ್ಯೇನಂ ವಿಗರ್ಹತೇ ॥೧೪॥

ಯಾರು ರಾಮನನ್ನು ಪ್ರೀತಿಯಿಂದ ಕಾಣುವುದಿಲ್ಲವೋ ಮತ್ತು ಯಾರನ್ನು ರಾಮ ಪ್ರೀತಿಯಿಂದ ಕಾಣುವುದಿಲ್ಲವೋ ಅವನ ಬದುಕನ್ನು ಲೋಕವೇ ಹಳಿಯುತ್ತದೆ, ಅವನ ಮನಸ್ಸೇ ಅವನನ್ನು ಹಳಿಯುತ್ತದೆ.

ಸರ್ವೇಷಾಂ ಹಿ ಸ ಧರ್ಮಾತ್ಮಾ ವರ್ಣಾನಾಂ ಕುರುತೇ ದಯಾಮ್ ।
ಚತುರ್ಣಾಂ ಹಿ ವಯಃಸ್ಥಾನಾಂ ತೇನ ತೇ ತಮನುವ್ರತಾಃ ॥೧೫॥

ಧರ್ಮಾತ್ಮನಾದ ರಾಮ ಎಲ್ಲ ನಾಲ್ಕೂ ವರ್ಣದವರಲ್ಲಿ ಅವರ ವಯಸಿಗೆ ಅನುಗುಣವಾಗಿ ದಯೆದೋರುತ್ತಾನೆ. ಅದರಿಂದ ಅವರೆಲ್ಲರೂ ಅವನಲ್ಲಿ ಅನುರಕ್ತರಾಗಿದ್ದಾರೆ.

ಚತುಷ್ಪಥಾನ್ ದೇವಪಥಾಂಶ್ಚೈತ್ಯಾನ್ಯಾಯತನಾನಿ ಚ ।
ಪ್ರದಕ್ಷಿಣಂ ಪರಿಹರನ್ ಜಗಾಮ ನೃಪತೇಃ ಸುತಃ ॥೧೬॥

ಚೌಕಗಳನ್ನೂ ದೇವಾಲಯ ಮಾರ್ಗಗಳನ್ನೂ ಯಾಗಶಾಲೆಗಳನ್ನೂ ದೇವಾಲಯಗಳನ್ನೂ ಬಲಕ್ಕೆ ಬಿಟ್ಟುಕೊಂಡೇ ರಾಜಕುಮಾರ ರಾಮ ಸಂಚರಿಸಿದ.

ಸ ರಾಜಕುಲಮಾಸಾದ್ಯ ಮೇಘಸಂಘೋಪಮೈಃ ಶುಭೈಃ ।
ಪ್ರಾಸಾದಶೃಂಗೈರ್ವಿವಿಧೈಃ ಕೈಲಾಸಶಿಖರೋಪಮೈಃ ॥೧೭॥

ಆವಾರಯದ್ಭಿರ್ಗಗನಂ ವಿಮಾನೈರಿವ ಪಾಂಡರೈಃ ।
ವರ್ಧಮಾನಗೃಹೈಶ್ಚಾಪಿ ರತ್ನಜಾಲಪರಿಷ್ಕೃತೈಃ ॥೧೮॥

ತತ್ ಪೃಥಿವ್ಯಾಂ ಗೃಹವರಂ ಮಹೇಂದ್ರಭವನೋಪಮಮ್ ।
ರಾಜಪುತ್ರಃ ಪಿತುರ್ವೇಶ್ಮ ಪ್ರವಿವೇಶ ಶ್ರಿಯಾ ಜ್ವಲನ್ ॥೧೯॥

ಅರಮನೆಯನ್ನು ತಲುಪಿದ ಬಳಿಕ ಬಿಳಿಮೋಡಗಳ ಸಮೂಹದಂಥ ಶುಭಕರವಾದ ಕೈಲಾಸಶಿಖರದಂಥ ನಾನಾ ವಿಧವಾದ ಉನ್ನತ ಸೌಧಗಳಿಂದ, ಬಿಳಿವಿಮಾನಗಳಂತೆ ಆಕಾಶವನ್ನು ಮುಚ್ಚುವ, ರತ್ನಸಮೂಹಗಳಿಂದ ಅಲಂಕೃತವಾದ 'ವರ್ಧಮಾನ' ದಕ್ಷಿಣದ್ವಾರರಹಿತವಾದ ಶುಭಕರವಾದ ಭವನಗಳಿಂದ ಪರಿವೃತವಾಗಿದ್ದು ಇಂದ್ರಭವನದಂತಿರುವ ಪೃಥಿವಿಯಲ್ಲೇ ಉತ್ತಮ ಗೃಹವೆನಿಸಿದ ತಂದೆಯ ಮನೆಯನ್ನು ರಾಜಕುಮಾರ ರಾಮ ಕಾಂತಿಯಿಂದ ಮೆರೆಯುತ್ತ ಪ್ರವೇಶಿಸಿದ.

'ಪಶ್ಚಿಮದ್ವಾರ ಹೀನಂ ತು ನಂದ್ಯಾವರ್ತಂ ಪ್ರಚಕ್ಷತೇ ।
ದಕ್ಷಿಣದ್ವಾರ ಹೀನಂ ತು ವರ್ಧಮಾನಮುದಾಹೃತಂ'

ಎಂದು ಮತ್ಸ್ಯಪುರಾಣ (ಅ.206)

ಸ ಕಕ್ಷ್ಯಾ ಧನ್ವಿಭಿರ್ಗುಪ್ತಾಸ್ತಿಸ್ರೋಽತಿಕ್ರಮ್ಯ ವಾಜಿಭಿಃ ।
ಪದಾತಿರಪರೇ ಕಕ್ಷ್ಯೇ ದ್ವೇ ಜಗಾಮ ನರೋತ್ತಮಃ ॥೨೦॥

ಧನುರ್ಧಾರಿಗಳಿಂದ ರಕ್ಷಿತವಾದ ಮೂರು ಅಂಗಳಗಳನ್ನು ರಥದಿಂದಲೇ ದಾಟಿ ಮುಂದೆ ಎರಡು ಅಂಗಳಗಳನ್ನು ಕಾಲ್ನಡೆಯಿಂದ ದಾಟಿದ, ಪುರುಷೋತ್ತಮ ಶ್ರೀರಾಮ.

ಸ ಸರ್ವಾಃ ಸಮತಿಕ್ರಮ್ಯ ಕಕ್ಷ್ಯಾ ದಶರಥಾತ್ಮಜಃ ।
ಸಂನಿವರ್ತ್ಯ ಜನಂ ಸರ್ವಂ ಶುದ್ಧಾಂತಂ ಪುನರಭ್ಯಗಾತ್ ॥೨೧॥

ಶ್ರೀರಾಮ ಎಲ್ಲ ಅಂಗಳಗಳನ್ನು ದಾಟಿದ ಬಳಿಕ ತನ್ನನ್ನು ಹಿಂಬಾಲಿಸಿ ಬಂದಿದ್ದ ಎಲ್ಲ ಜನರನ್ನು ಹಿಂದಕ್ಕೆ ಕಳಿಸಿ ಅಂತಃಪುರವನ್ನು ಪ್ರವೇಶಿಸಿದ.

ತತಃ ಪ್ರವಿಷ್ಟೇ ಪಿತುರಂತಿಕಂ ತದಾ
ಜನಃ ಸ ಸರ್ವೋ ಮುದಿತೋ ನೃಪಾತ್ಮಜೇ ।
ಪ್ರತೀಕ್ಷತೇ ತಸ್ಯ ಪುನರ್ವಿನಿರ್ಗಮಂ
ಯಥೋದಯಂ ಚಂದ್ರಮಸಃ ಸರಿತ್ಪತಿಃ ॥೨೨॥

ರಾಜಕುಮಾರ ತಂದೆಯ ಸಮೀಪಕ್ಕೆ ಪ್ರವೇಶಿಸಿದಾಗ ಆ ಎಲ್ಲ ಜನರು ಸಂತೋಷಪಟ್ಟರು. ಚಂದ್ರೋದಯವನ್ನು ಸಾಗರವು ಪ್ರತೀಕ್ಷೆ ಮಾಡುವಂತೆ ರಾಮನು ಪುನಃ ಹೊರಗೆ ಬರುವುದನ್ನು ಜನರು ಪ್ರತೀಕ್ಷೆ ಮಾಡಿದರು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಹದಿನೇಳನೇ ಸರ್ಗ ಮುಗಿಯಿತು.

❖

ಅಷ್ಟಾದಶಃ ಸರ್ಗಃ

ಸರ್ಗ – 18

ಕೈಕೇಯಿ ತನ್ನ ವರಗಳ ವೃತ್ತಾಂತವನ್ನು ಶ್ರೀರಾಮನಿಗೆ ಹೇಳುವುದು.

ಸ ದದರ್ಶಾಸನೇ ರಾಮೋ ವಿಷಣ್ಣಂ ಪಿತರಂ ಶುಭೇ ।
ಕೈಕೇಯೀಸಹಿತಂ ದೀನಂ ಮುಖೇನ ಪರಿಶುಷ್ಯತಾ ॥೧॥

ತಂದೆ ದಶರಥ ಶುಭಾಸನದಲ್ಲಿ ವಿಷಣ್ಣನಾಗಿ ದೀನನಾಗಿ ಬಾಡಿದ ಮುಖದಿಂದ ಕೈಕೇಯಿಯೊಂದಿಗೆ ಕುಳಿತಿದ್ದುದನ್ನು ಶ್ರೀರಾಮ ಕಂಡ.

ಸ ಪಿತುಶ್ಚರಣೌ ಪೂರ್ವಮಭಿವಾದ್ಯ ವಿನೀತವತ್ ।
ತತೋ ವವಂದೇ ಚರಣೌ ಕೈಕೇಯ್ಯಾಃ ಸುಸಮಾಹಿತಃ ॥೨॥

ಅವನು ಮೊದಲಿಗೆ ವಿನೀತನಾಗಿ ತಂದೆಯ ಚರಣಗಳನ್ನು ಅಭಿವಂದಿಸಿ ಬಳಿಕ ಸ್ಥಿರಚಿತ್ತತೆಯಿಂದ ಕೈಕೇಯಿಯ ಚರಣಗಳನ್ನು ವಂದಿಸಿದ.

ರಾಮೇತ್ಯುಕ್ತ್ವಾ ಚ ವಚನಂ ಬಾಷ್ಪಪರ್ಯಾಕುಲೇಕ್ಷಣಃ ।
ಶಶಾಕ ನೃಪತಿರ್ದೀನೋ ನೇಕ್ಷಿತುಂ ನಾಭಿಭಾಷಿತುಮ್ ॥೩॥

ದಶರಥ 'ರಾಮ!' ಎಂದು ಹೇಳಿ ಕಣ್ಣುಗಳಲ್ಲಿ ನೀರು ತುಂಬಿಕೊಂಡು, ದೀನನಾಗಿ, ನೋಡಲೂ ಆಸಮರ್ಥನಾದ, ಮಾತನಾಡಲೂ ಶಕ್ತನಾಗಲಿಲ್ಲ.

ತದಪೂರ್ವಂ ನರಪತೇರ್ದೃಷ್ಟ್ವಾ ರೂಪಂ ಭಯಾವಹಮ್ ।
ರಾಮೋಽಪಿ ಭಯಮಾಪನ್ನಃ ಪದಾ ಸ್ಪೃಷ್ಟ್ವೇವ ಪನ್ನಗಮ್ ॥೪॥

ಭಯ ಉಂಟುಮಾಡುವ, ಎಂದೂ ಕಂಡಿರದ, ರಾಜನ ಆ ರೂಪವನ್ನು ನೋಡಿ ರಾಮನೂ ಹಾವನ್ನು ತುಳಿದಂತೆ ಭಯಗೊಂಡ.

ಇಂದ್ರಿಯೈರಪ್ರಹೃಷ್ಟೈಸ್ತಂ ಶೋಕಸಂತಾಪಕರ್ಶಿತಮ್ ।
ನಿಶ್ವಸಂತಂ ಮಹಾರಾಜಂ ವ್ಯಥಿತಾಕುಲಚೇತಸಮ್ ॥೫॥

ಊರ್ಮಿಮಾಲಿನಮಕ್ಷೋಭ್ಯಂ ಕ್ಷುಭ್ಯಂತಮಿವ ಸಾಗರಮ್ ।
ಉಪಪ್ಲುತಮಿವಾದಿತ್ಯಮುಕ್ತಾನೃತಮೃಷಿಂ ಯಥಾ ॥೬॥

ಮಹಾರಾಜನ ಇಂದ್ರಿಯಗಳು ಖಿನ್ನವಾಗಿವೆ. ಶರೀರ ಶೋಕಸಂತಾಪಗಳಿಂದ ಕೃಶವಾಗಿವೆ. ಮನಸ್ಸು ವ್ಯಥೆ ಕಳವಳಗಳಿಂದ ತುಂಬಿದೆ. ನಿಟ್ಟುಸಿರು ಬಿಡುತ್ತಿದ್ದಾನೆ. ಅವನನ್ನು ಕಂಡರೆ ಕ್ಷುಬ್ಧವಾಗದ ತೆರೆಗಳ ಸಾಲುಳ್ಳ ಸಮುದ್ರವೇ ಕ್ಷುಬ್ಧವಾದಂತಿತ್ತು. ಸೂರ್ಯನು ರಾಹಗ್ರಸ್ತನಾದಂತೆ, ಋಷಿಯು ಸುಳ್ಳಾಡಿದಂತೆ ಇತ್ತು.

ಅಚಿಂತ್ಯಕಲ್ಪಂ ಹಿ ಪಿತುಸ್ತಂ ಶೋಕಮುಪಧಾರಯನ್ ।
ಬಭೂವ ಸಂರಬ್ಧತರಃ ಸಮುದ್ರ ಇವ ಪರ್ವಣಿ ॥೭॥

ಶ್ರೀರಾಮ ದಶರಥನ, ಯೋಚಿಸಲೂ ಆಗದಂಥ, ಆ ಶೋಕವನ್ನು ಕಂಡು ಚಂದ್ರೋದಯ ಕಾಲದ ಸಮುದ್ರದಂತೆ ಬಹಳ ಕ್ಷೋಭೆಗೊಂಡ.

ಚಿಂತಯಾಮಾಸ ಚ ತದಾ ರಾಮಃ ಪಿತೃಹಿತೇ ರತಃ ।
ಕಿಂಸ್ವಿದದ್ಯೈವ ನೃಪತಿರ್ನ ಮಾಂ ಪ್ರತ್ಯಭಿನಂದತಿ ॥೮॥

ತಂದೆಯ ಹಿತವನ್ನೇ ಚಿಂತಿಸುವ ರಾಮ ಆಗ ಚಿಂತಿಸಿದ, 'ಇಂದು ಮಾತ್ರ ರಾಜನೇಕೆ ನನ್ನನ್ನು ನೋಡಿ ಅಭಿನಂದಿಸುತ್ತಿಲ್ಲ?'

ಅನ್ಯದಾ ಮಾಂ ಪಿತಾ ದೃಷ್ಟ್ವಾ ಕುಪಿತೋಽಪಿ ಪ್ರಸೀದತಿ ।
ತಸ್ಯ ಮಾಮದ್ಯ ಸಂಪ್ರೇಕ್ಷ್ಯ ಕಿಮಾಯಾಸಃ ಪ್ರವರ್ತತೇ ॥೯॥

ಹಿಂದೆ ನನ್ನನ್ನು ಕಂಡರೆ ಕುಪಿತನಾದವನೂ ಶಾಂತನಾಗುತ್ತಿದ್ದ. ಅಂಥ ತಂದೆಗೆ ಇಂದು ನನ್ನನ್ನು ನೋಡಿದೊಡನೆ ಏಕೆ ಆಯಾಸ ದುಃಖ ಉಂಟಾಗುತ್ತಿದೆ?

ಸ ದೀನ ಇವ ಶೋಕಾರ್ತೋ ವಿಷಣ್ಣವದನದ್ಯುತಿಃ ।
ಕೈಕೇಯೀಮಭಿವಾದ್ಯೈವ ರಾಮೋ ವಚನಮಬ್ರವೀತ್ ॥೧೦॥

ಶ್ರೀರಾಮ ದೀನನಂತೆ ಶೋಕಾರ್ತನಂತೆ ವಿಷಣ್ಣ ಮುಖಕಾಂತಿಉಳ್ಳವನಂತೆ ಕೈಕೇಯಿಯನ್ನು ಅಭಿವಂದಿಸಿ ನುಡಿದ.

ಕಚ್ಚಿನ್ಮಯಾ ನಾಪರಾದ್ಧಮಜ್ಞಾನಾದ್ಯೇನ ಮೇ ಪಿತಾ ।
ಕುಪಿತಸ್ತನ್ಮಮಾಚಕ್ಷ್ವ ತ್ವಂ ಚೈವೇನಂ ಪ್ರಸಾದಯ ॥೧೧॥

ತಿಳಿಯದೆ ನಾನೇನೂ ತಪ್ಪುಮಾಡಿಲ್ಲತಾನೆ? ನನ್ನ ತಂದೆ ಏಕೆ ಕುಪಿತನಾಗಿದ್ದಾನೆ? ಹೇಳು, ನೀನೆ ಈತನನ್ನು ಸಂತೈಸು.

ಅಪ್ರಸನ್ನಮನಾಃ ಕಿಂ ನು ಸದಾ ಮಾಂ ಪ್ರತಿ ವತ್ಸಲಃ ।
ವಿವರ್ಣವದನೋ ದೀನೋ ನ ಹಿ ಮಾಮಭಿಭಾಷತೇ ॥೧೨॥

ಸದಾ ನನ್ನಲ್ಲಿ ವಾತ್ಸಲ್ಯವನ್ನೇ ತೋರುವವನು ಇಂದು ಏಕೆ ಖಿನ್ನಮನಸ್ಕನಾಗಿದ್ದಾನೆ, ದೀನನಾಗಿ ವಿವರ್ಣಮುಖದವನಾಗಿದ್ದಾನೆ, ನನ್ನೊಡನೆ ಮಾತನ್ನೇ ಆಡುತ್ತಿಲ್ಲ?

ಶಾರೀರೋ ಮಾನಸೋ ವಾಪಿ ಕಚ್ಚಿದೇನಂ ನ ಬಾಧತೇ ।
ಸಂತಾಪೋ ವಾಭಿತಾಪೋ ವಾ ದುರ್ಲಭಂ ಹಿ ಸದಾ ಸುಖಮ್ ॥೧೩॥

ಶರೀರದಲ್ಲಿ ನೋವಾಗಲಿ, ಮನಸ್ಸಿನಲ್ಲಿ ವ್ಯಥೆಯಾಗಲಿ ಈತನನ್ನು ಬಾಧಿಸುತ್ತಿಲ್ಲ ತಾನೆ? ಸದಾ ಸುಖವೆನ್ನುವುದು ದುರ್ಲಭವೆ.

ಕಚ್ಚಿನ್ನ ಕಿಂಚಿದ್ಭರತೇ ಕುಮಾರೇ ಪ್ರಿಯದರ್ಶನೇ ।
ಶತ್ರುಘ್ನೇ ವಾ ಮಹಾಸತ್ತ್ವೇ ಮಾತ್ಯಾಣಾಂ ವಾ ಮಮಾಶುಭಮ್ ॥೧೪॥

ಕುಮಾರ ಭರತನನ್ನಾಗಲಿ ಮಹಾಸತ್ವನಾದ ಶತ್ರುಘ್ನನನ್ನಾಗಲಿ ನೋಡುವುದೇ ಆನಂದ. ಅವರಿಗೇನಾದರೂ ಅಶುಭ ಉಂಟಾಗಿಲ್ಲ ತಾನೆ? ನನ್ನ ತಾಯಂದಿರಲ್ಲಿ ಯಾರಿಗಾದರೂ ಅಶುಭವಾಗಿಲ್ಲ ತಾನೆ?

ಅತೋಷಯನ್ ಮಹಾರಾಜಮಕುರ್ವನ್ ವಾ ಪಿತುರ್ವಚಃ ।
ಮುಹೂರ್ತಮಪಿ ನೇಚ್ಛೇಯಂ ಜೀವಿತುಂ ಕುಪಿತೇ ನೃಪೇ ॥೧೫॥

ತಂದೆಯಾದ ಮಹಾರಾಜ ಕುಪಿತನಾದರೆ ಅವನನ್ನು ಸಂತೋಷಪಡಿಸದೆ, ಅವನ ಮಾತನ್ನು ನಡೆಸದೆ, ನಾನು ಮುಹೂರ್ತಕಾಲವೂ ಬದುಕಿರಲು ಬಯಸಲಾರೆ.

ಯತೋ ಮೂಲಂ ನರಃ ಪಶ್ಯೇತ್ ಪ್ರಾದುರ್ಭಾವಮಿಹಾತ್ಮನಃ ।
ಕಥಂ ತಸ್ಮಿನ್ನ ವರ್ತೇತ ಪ್ರತ್ಯಕ್ಷೇ ಸತಿ ದೈವತೇ ॥೧೬॥

ತನ್ನ ಹುಟ್ಟಿಗೆ ಮೂಲ ಕಾರಣ ತಂದೆ ಎಂದು ತಿಳಿದ ವಿವೇಕಿಯು ಅಂಥ ಪ್ರತ್ಯಕ್ಷ ದೇವತೆಯಾದ ತಂದೆಯ ವಿಷಯದಲ್ಲಿ ಹೇಗೆ ಹಿತಕಾರಿಯಾಗದಿರಲಾರ?

ಕಚ್ಚಿತ್ತೇ ಪರುಷಂ ಕಿಂಚಿದಭಿಮಾನಾತ್ ಪಿತಾ ಮಮ ।
ಉಕ್ತೋ ಭವತ್ಯಾ ಕೋಪೇನ ಯೇನಾಸ್ಯ ಲುಲಿತಂ ಮನಃ ॥೧೭॥

ಪತಿಯು ತನ್ನ ವಶನೆನ್ನುವ ಅಭಿಮಾನದಿಂದ ನೀನೇನಾದರೂ ಕೋಪದಿಂದ ನನ್ನ ತಂದೆಗೆ ಕಟುವಾಗಿ ನುಡಿದೆಯ? ಅದರಿಂದ ತಂದೆಯ ಮನಸ್ಸು ಕದಡಿದೆಯೆ?

ಏತದಾಚಕ್ಷ್ವ ಮೇ ದೇವಿ ತತ್ತ್ವೇನ ಪರಿಪೃಚ್ಛತಃ ।
ಕಿಂನಿಮಿತ್ತಮಪೂರ್ವೋಽಯಂ ವಿಕಾರೋ ಮನುಜಾಧಿಪೇ ॥೧೮॥

ನನಗೆ ನಿಜವಾಗಿ ಹೇಳು, ದೇವಿ, ನಾನು ಕೇಳುತ್ತಿದ್ದೇನೆ. ಎಂದೂ ಇಲ್ಲದಿದ್ದ ಈ ಅಸ್ವಾಸ್ಥ್ಯ ರಾಜನಲ್ಲಿ ಹೇಗೆ ಉಂಟಾಯಿತು?

ಏವಮುಕ್ತಾ ತು ಕೈಕೇಯೀ ರಾಘವೇಣ ಮಹಾತ್ಮನಾ ।
ಉವಾಚೇದಂ ಸುನಿರ್ಲಜ್ಜಾ ಧೃಷ್ಟಮಾತ್ಮಹಿತಂ ವಚಃ ॥೧೯॥

ಮಹಾತ್ಮ ಶ್ರೀರಾಮ ಹೀಗೆ ಹೇಳಿದಾಗ ಕೈಕೇಯಿ ಧಾರ್ಷ್ಟ್ಯದಿಂದ ಏನೂ ಲಜ್ಜೆ ಇಲ್ಲದೆ ತನ್ನ ಕೆಲಸವಾಗುವ ಉದ್ದೇಶದಿಂದ ನುಡಿದಳು.

ನ ರಾಜಾ ಕುಪಿತೋ ರಾಮ ವ್ಯಸನಂ ನಾಸ್ಯ ಕಿಂಚನ ।
ಕಿಂಚಿನ್ಮನೋಗತಂ ತ್ವಸ್ಯ ತ್ವದ್ಭಯಾನ್ನಾಭಿಭಾಷತೇ ॥೨೦॥

ರಾಮ, ಇವನಿಗೆ ಕೋಪವಿಲ್ಲ ಯಾವ ವ್ಯಸನವೂ ಇಲ್ಲ. ಮನಸಿನಲ್ಲಿ ಒಂದು ಅಭಿಪ್ರಾಯವಿದೆ. ನಿನ್ನ ಭಯದಿಂದಾಗಿ ಅದನ್ನು ಹೇಳುತ್ತಿಲ್ಲ, ಅಷ್ಟೆ.

ಪ್ರಿಯಂ ತ್ವಾಮಪ್ರಿಯಂ ವಕ್ತುಂ ವಾಣೀ ನಾಸ್ಯೋಪವರ್ತತೇ ।
ತದವಶ್ಯಂ ತ್ವಯಾ ಕಾರ್ಯಂ ಯದನೇನಾಶ್ರುತಂ ಮಮ ॥೨೧॥

ಪ್ರಿಯನಾದ ನಿನಗೆ, ನಿನಗೆ ಅಪ್ರಿಯವಾಗಬಲ್ಲ ಆ ಅಭಿಪ್ರಾಯವನ್ನು ಹೇಳಲು ಅವನಿಗೆ ಮಾತು ಹೊರಡುವುದಿಲ್ಲ. ಅದರಿಂದ ಅವನು ನನಗೆ ಕೊಟ್ಟ ಮಾತನ್ನು ನೀನು ಅವಶ್ಯ ನಡೆಸಿಕೊಡಬೇಕು.

ಏಷ ಮಹ್ಯಂ ವರಂ ದತ್ತ್ವಾ ಪುರಾ ಮಾಮಭಿಪೂಜ್ಯ ಚ ।
ಸ ಪಶ್ಚಾತ್ತಪ್ಯತೇ ರಾಜಾ ಯಥಾನ್ಯಃ ಪ್ರಾಕೃತಸ್ತಥಾ ॥೨೨॥

ಇವನು ಮೊದಲಿಗೆ ನನ್ನ ಮನ ಒಲಿಸಿ ವರಕೊಟ್ಟು, ಬಳಿಕ ಈಗ, ಬೇರೆ ಸಾಮಾನ್ಯ ಮನುಷ್ಯನಂತೆ, ಪಶ್ಚಾತ್ತಾಪ ಪಡುತ್ತಿದ್ದಾನೆ.

ಅತಿಸೃಜ್ಯ ದದಾನೀತಿ ವರಂ ಮಮ ವಿಶಾಂಪತಿಃ ।
ಸ ನಿರರ್ಥಂ ಗತಜಲೇ ಸೇತುಂ ಬಂಧಿತುಮಿಚ್ಛತಿ ॥೨೩॥

ನನಗೆ ವರಕೊಡುವೆನೆಂದು ವಾಗ್ದಾನ ಮಾಡಿ ರಾಜನು ವ್ಯರ್ಥವಾಗಿ ನೀರು ಹರಿದು ಹೋದ ಮೇಲೆ ಅಡ್ಡ ಕಟ್ಟೆ ಕಟ್ಟಲು ಬಯಸುತ್ತಿದ್ದಾನೆ.

ಧರ್ಮಮೂಲಮಿದಂ ರಾಮ ವಿದಿತಂ ಚ ಸತಾಮಪಿ ।
ತತ್ ಸತ್ಯಂ ನ ತ್ಯಜೇದ್ರಾಜಾ ಕುಪಿತಸ್ತ್ವತ್ಕೃತೇ ಯಥಾ ॥೨೪॥

ಧರ್ಮಕ್ಕೆ ಮೂಲವಾದುದೆಂದು ಎಲ್ಲ ಸಜ್ಜನರೂ ನಂಬಿರುವ ಆ ಸತ್ಯವಚನವನ್ನು ನನ್ನ ಮೇಲಿನ ಕೋಪದಿಂದ ನಿನ್ನ ಸಲುವಾಗಿ ರಾಜನು ಬಿಡದಂತೆ ನೀನು ಅದನ್ನು ನಡೆಸಿಕೊಡಬೇಕು.

ಯದಿ ತದ್ವಕ್ಷ್ಯತೇ ರಾಜಾ ಶುಭಂ ವಾ ಯದಿ ವಾऽಶುಭಮ್ ।
ಕರಿಷ್ಯಸಿ ತತಃ ಸರ್ವಮಾಖ್ಯಾಸ್ಯಾಮಿ ಪುನಸ್ತ್ವಹಮ್ ॥೨೫॥

ಅದು ಶುಭವಿರಬಹುದು ಅಥವಾ ಅಶುಭವಿರಬಹುದು. ಅದನ್ನು ರಾಜ ಹೇಳಿದಂತೆ ನೀನು ನಡೆಸಿಕೊಡುವುದಾದರೆ ಆಗ ಎಲ್ಲವನ್ನೂ ಪುನಃ ನಿನಗೆ ನಾನು ಹೇಳುವೆನು.

ಯದಿ ತ್ವಭಿಹಿತಂ ರಾಜ್ಞಾ ತ್ವಯಿ ತನ್ನ ವಿಪತ್ಸ್ಯತೇ ।
ತತೋऽಹಮಭಿಧಾಸ್ಯಾಮಿ ನ ಹ್ಯೇಷ ತ್ವಯಿ ವಕ್ಷ್ಯತಿ ॥೨೬॥

ರಾಜನು ನನಗೆ ಕೊಟ್ಟ ಆ ಮಾತು ನಿನ್ನಲ್ಲಿ ವಿಫಲಗೊಳ್ಳದಿರುವ ಪಕ್ಷದಲ್ಲಿ ನಾನು ಅದನ್ನು ನಿನಗೆ ಹೇಳಬಲ್ಲೆ. ಈತನು ನಿನಗೆ ಹೇಳಲಾರ.

ಏತತ್ತು ವಚನಂ ಶ್ರುತ್ವಾ ಕೈಕೇಯ್ಯಾ ಸಮುದಾಹೃತಮ್ ।
ಉವಾಚ ವ್ಯಥಿತೋ ರಾಮಸ್ತಾಂ ದೇವೀಂ ನೃಪಸನ್ನಿಧೌ ॥೨೭॥

ಕೈಕೇಯಿ ಹೇಳಿದ ಈ ಮಾತನ್ನು ಕೇಳಿ ಶ್ರೀರಾಮ ವ್ಯಥೆಗೊಂಡು ರಾಜನ ಸಮ್ಮುಖದಲ್ಲಿ ದೇವಿಗೆ ಹೇಳಿದ.

ಅಹೋ ಧಿಙ್ನಾರ್ಹಸೇ ದೇವಿ ವಕ್ತುಂ ಮಾಮೀದೃಶಂ ವಚಃ ।
ಅಹಂ ಹಿ ವಚನಾದ್ರಾಜ್ಞಃ ಪತೇಯಮಪಿ ಪಾವಕೇ ॥೨೮॥

ಭಕ್ಷಯೇಯಂ ವಿಷಂ ತೀಕ್ಷ್ಣಂ ಮಜ್ಜೇಯಮಪಿ ಚಾರ್ಣವೇ ।
ನಿಯುಕ್ತೋ ಗುರುಣಾ ಪಿತ್ರಾ ನೃಪೇಣ ಚ ಹಿತೇನ ಚ ॥೨೯॥

'ರಾಜನು ನನಗೆ ಕೊಟ್ಟ ಮಾತು ನಿನ್ನಲ್ಲಿ ವಿಫಲವಾಗದಿದ್ದರೆ' ಎಂದು ಹೇಳುವ ನಿನಗೆ ನನ್ನಲ್ಲಿ ಸಂಶಯವೆನ್ನುವುದಾದರೆ ಅಯ್ಯೋ ನನಗೆ ಧಿಕ್ಕಾರವಿರಲಿ! ದೇವಿ, ಇಂಥ ಮಾತನ್ನು ನನಗೆ ನೀನು ಹೇಳಬಾರದು. ರಾಜನು ಹೇಳಿದರೆ ನಾನು ಬೆಂಕಿಯಲ್ಲಿ ಬೀಳಲೂ ಸಿದ್ಧನಿದ್ದೇನೆ. ತೀಕ್ಷ್ಣವಾದ ವಿಷವನ್ನು ಕುಡಿಯಲೂ ಸಿದ್ಧನೆ. ಗುರುವೂ ಪಿತನೂ ರಾಜನೂ, ಹಿತಕಾರಿಯೂ ಎಲ್ಲವೂ ಆಗಿರುವ ತಂದೆಯು ಆದೇಶಿಸಿದರೆ ಅದು ನನ್ನಲ್ಲಿ ವಿಫಲವಾಗದು.

ತದ್‌ಬ್ರೂಹಿ ವಚನಂ ದೇವಿ ರಾಜ್ಞೋ ಯದಭಿಕಾಂಕ್ಷಿತಮ್ ।
ಕರಿಷ್ಯೇ ಪ್ರತಿಜಾನೇ ಚ ರಾಮೋ ದ್ವಿರ್ನಾಭಿಭಾಷತೇ ॥೩೦॥

ಅದರಿಂದ ದೇವಿ, ರಾಜನಿಗೆ ನಡೆಸಲು ಇಷ್ಟವಾಗಿರುವ ಆ ಮಾತನ್ನು ನನಗೆ ಹೇಳು. ಅದನ್ನು ನಾನು ನಡೆಸಿಕೊಡುವೆನೆಂದು ಮಾತು ಕೊಡುತ್ತೇನೆ, 'ನಡೆಸಿ ಕೊಡುವೆನೆಂ'ದು ಒಮ್ಮೆ ಹೇಳಿದ ಬಳಿಕ ಪುನಃ 'ಇಲ್ಲ'ವೆಂದು ಎರಡನೆ ಮಾತನ್ನು ಈ ರಾಮ ಎಂದೂ ಹೇಳುವುದಿಲ್ಲ.

ಶ್ರೀರಾಮನು ಕಾಲಪುರುಷನೊಡನೆ ಏಕಾಂತದಲ್ಲಿ ಮಾತನಾಡುವಾಗ ಹೊರಗೆ ದ್ವಾರದಲ್ಲಿ ಲಕ್ಷ್ಮಣನನ್ನು ನಿಲ್ಲಿಸಿ, 'ಒಳಗೆ ಬರುವವನನ್ನು ವಧಿಸುವೆನೆಂ'ದ. ದುರ್ವಾಸರು ಬಂದು 'ನನ್ನಾಗಮನವನ್ನು ಈಗಲೆ ರಾಮನಿಗೆ ತಿಳಿಸು. ಇಲ್ಲ ದಿದ್ದರೆ ಇಡೀ ಅಯೋಧ್ಯೆಯನ್ನು ಶಾಪದಿಂದ ಸುಡುತ್ತೇನೆ' ಎಂದರು. ಲಕ್ಷ್ಮಣ ಬೇಗನೆ ಒಳಗೆ ಹೋಗಿ ತಿಳಿಸಿದ್ದಕ್ಕೆ ರಾಮ ಅವನನ್ನು ವಸಿಷ್ಠರ ಉಪದೇಶದಂತೆ ಕ್ಷತ್ರಿಯ ಧರ್ಮಾನುಸಾರ ತ್ಯಾಗಮಾಡಿದ. ತ್ಯಾಗವು ವಧೆಗೆ ಸಮ ಎಂದು. ಹಾಗೇ ದಶರಥನೂ ಕೈಕೇಯಿಗೆ ಕೊಟ್ಟ ವರವನ್ನು ನಡೆಸಲೇ ಬೇಕಾಯಿತು.

ತಮಾರ್ಜವಸಮಾಯುಕ್ತಮನಾರ್ಯಾ ಸತ್ಯವಾದಿನಮ್ ।
ಉವಾಚ ರಾಮಂ ಕೈಕೇಯೀ ವಚನಂ ಭೃಶದಾರುಣಮ್ ॥೩೧॥

ಸರಳತೆಯಿಂದ ಕೂಡಿದ ಸತ್ಯವಾದಿಯಾದ ಆ ರಾಮನಿಗೆ ದುಷ್ಟೆಯಾದ ಕೈಕೇಯಿ ಬಲು ಕ್ರೂರವಾದ ಮಾತನ್ನು ನುಡಿದಳು.

ಸರಳ ಸ್ವಭಾವದವನಾದ ರಾಮ ಕೈಕೇಯಿ ಏನೂ ಅನ್ಯಾಯದ ಮಾತನ್ನಾಡ ಲಾರಳೆಂದೇ ನಂಬಿದ್ದ. ದಶರಥನೂ ಹಾಗೇ ಅವಳನ್ನು ಅವಳ ಸರಳ ಸ್ವಭಾವ ದಿಂದಲೇ ನಂಬಿ ವಂಚನೆಗೊಳಗಾಗಿದ್ದ. ದಶರಥನಲ್ಲಿ ಸ್ತ್ರೀವ್ಯಾಮೋಹವೂ ಇರಲಿಲ್ಲ. ರಾಮನಲ್ಲಿ ಕುರುಡು ಮಾತೃಭಕ್ತಿಯೂ ಇರಲಿಲ್ಲ. ಅದರಿಂದ 'ಅಮ್ಮ

ಮೊದಲಿಗೆ ಆ ಮಾತೇನು ಹೇಳು, ಶಕ್ಯವಿದ್ದರೆ ನ್ಯಾಯವಾಗಿದ್ದರೆ ನಡೆಸಿ ಕೊಡುತ್ತೇನೆ' ಎನ್ನಲಿಲ್ಲ. ಇದು ಆರ್ಜವ, ಸರಳತೆ, ಕೈಕೇಯಿಯಲ್ಲಿ ದೈವೀ ಸ್ವಭಾವ, ಪುತ್ರವಾತ್ಸಲ್ಯ ಗುಣಗಳಿದ್ದುದರಿಂದ ಶ್ರೀರಾಮ ಅವಳಲ್ಲಿ ಅನುಮಾನ ಪಡಲಿಲ್ಲ, ದಶರಥನಂತೆಯೆ. ಇದರ ದುರುಪಯೋಗ ಪಡೆದುಕೊಂಡಳು ಕೈಕೇಯಿ, ಪ್ರತಿಜ್ಞೆಯಲ್ಲಿ ಸತ್ಯಧರ್ಮದಲ್ಲಿ ದಶರಥನನ್ನು ಕಟ್ಟಿಹಾಕಿದಳು, ರಾಮನನ್ನೂ ಕೂಡ ಕಟ್ಟಿ ಹಾಕಿದಳು. ಬ್ರಹ್ಮನ ವರಬಲದ ಸಾಮರ್ಥ್ಯವಿದು.

ಇದು ಬ್ರಹ್ಮನಿಗೂ ಇಷ್ಟ, ರಾಮನಿಗೂ ಇಷ್ಟ.

ಪುರಾ ದೈವಾಸುರೇ ಯುದ್ಧೇ ಪಿತ್ರಾ ತೇ ಮಮ ರಾಘವ ।
ರಕ್ಷಿತೇನ ವರೌ ದತ್ತೌ ಸಶಲ್ಯೇನ ಮಹಾರಣೇ ॥೩೨॥

ರಾಮ, ಹಿಂದೆ ದೇವಾಸುರ ಯುದ್ಧ ಪ್ರಸಂಗದಲ್ಲಿ ನಡೆದ ಮಹಾ ಯುದ್ಧದಲ್ಲಿ ಗಾಯಗೊಂಡ ನಿನ್ನ ತಂದೆಯನ್ನು ನಾನು ರಕ್ಷಿಸಿದ್ದರಿಂದ ನನಗೆ ಅವನು ಆಗ ಎರಡು ವರಗಳನ್ನು ಕೊಟ್ಟಿದ್ದ.

ತತ್ರ ಮೇ ಯಾಚಿತೋ ರಾಜಾ ಭರತಸ್ಯಾಭಿಷೇಚನಮ್ ।
ಗಮನಂ ದಂಡಕಾರಣ್ಯೇ ತವ ಚಾದ್ಯೈವ ರಾಘವ ॥೩೩॥

ಆ ವರಗಳಲ್ಲಿ ಈಗ ನಾನು ರಾಜನಲ್ಲಿ ಕೇಳಿಕೊಂಡೆ. 'ಭರತನಿಗೆ ಅಭಿಷೇಕ-ವಾಗಬೇಕು ಈಗಲೇ ನೀನು ದಂಡಕಾರಣ್ಯಕ್ಕೆ ಹೋಗಬೇಕು' ಎಂದು.

ಯದಿ ಸತ್ಯಪ್ರತಿಜ್ಞಂ ತ್ವಂ ಪಿತರಂ ಕರ್ತುಮಿಚ್ಛಸಿ ।
ಆತ್ಮಾನಂ ಚ ನರಶ್ರೇಷ್ಠ ಮಮ ವಾಕ್ಯಮಿದಂ ಶೃಣು ॥೩೪॥

ಪುರುಷೋತ್ತಮ, ನೀನು, ತಂದೆ ಕೊಟ್ಟ ಮಾತನ್ನು ಮತ್ತು ನೀನು ಕೊಟ್ಟ ಮಾತನ್ನು ನಡೆಸಿಕೊಡುವಿಯಾದರೆ ನನ್ನ ಮಾತನ್ನು ಕೇಳು.

ಸಂನಿದೇಶೇ ಪಿತುಸ್ತಿಷ್ಠ ಯಥಾನೇನ ಪ್ರತಿಶ್ರುತಮ್ ।
ತ್ವಯಾರಣ್ಯಂ ಪ್ರವೇಷ್ಟವ್ಯಂ ನವ ವರ್ಷಾಣಿ ಪಂಚ ಚ ॥೩೫॥

ಈ ನಿನ್ನ ತಂದೆಯ ಮಾತಿನಂತೆ ಅವನ ಆದೇಶವನ್ನು ಪಾಲಿಸು. ನೀನು ಹದಿನಾಲ್ಕು ವರ್ಷ ಕಾಡಿನಲ್ಲಿರಬೇಕು.

ಹದಿನಾಲ್ಕುವರ್ಷ ಮಾತ್ರ ರಾವಣನಿಗೆ ಆಯುಷ್ಯವಿತ್ತು. ಅದರಿಂದ 'ಹದಿನಾಲ್ಕುವರ್ಷ ವನವಾಸ' ಎಂದು ಕೈಕೇಯಿಯಿಂದ ನುಡಿಸಿದ್ದಾರೆ ದೇವತೆ-

ಗಳು. ಬ್ರಹ್ಮದೇವರು, ಮತ್ತು ಶ್ರೀರಾಮ ಹನ್ನೆರಡೆಂದಿದ್ದರೆ, ರಾವಣನನ್ನು ಕೊಲ್ಲದೇ ರಾಮ ಹಿಂದಿರುಗಬೇಕಿತ್ತು. ಇಪ್ಪತ್ತನಾಲ್ಕೆಂದಿದ್ದರೆ ರಾವಣನನ್ನು ಕೊಂದ ಬಳಿಕವೂ ಅಷ್ಟು ವರ್ಷ ಸುಮ್ಮನೆ ಕಾಡಿನಲ್ಲಿ ವಾಸವಾಗಿ ಇರಬೇಕಿತ್ತು.

ಭರತಸ್ತ್ವಭಿಷಿಚ್ಯೇತ ಯದೇತದಭಿಷೇಚನಮ್ ।
ತ್ವದರ್ಥೇ ವಿಹಿತಂ ರಾಜ್ಞಾ ತೇನ ಸರ್ವೇಣ ರಾಘವ ॥೩೬॥

ರಾಮ, ನಿನ್ನ ಅಭಿಷೇಕಕ್ಕಾಗಿ ರಾಜನು ಏರ್ಪಾಡು ಮಾಡಿರುವ ಎಲ್ಲ ಅಭಿಷೇಕ ಸಾಮಗ್ರಿಯಿಂದಲೂ ಭರತನಿಗೇ ಅಭಿಷೇಕವಾಗಬೇಕು.

ಸಪ್ತ ಸಪ್ತ ಚ ವರ್ಷಾಣಿ ದಂಡಕಾರಣ್ಯಮಾಶ್ರಿತಃ ।
ಅಭಿಷೇಕಮಿಮಂ ತ್ಯಕ್ತ್ವಾ ಜಟಾಚೀರಧರೋ ವಸ ॥೩೭॥

ನಿನಗೆ ಏರ್ಪಾಡಾಗಿರುವ ಈ ಅಭಿಷೇಕವನ್ನು ತೊರೆದು, ಜಡೆ ನಾರುಡೆಗಳನ್ನು ಧರಿಸಿ, ನೀನು ಹದಿನಾಲ್ಕು ವರ್ಷ ದಂಡಕಾರಣ್ಯದಲ್ಲಿ ವಾಸಿಸುತ್ತಿರಬೇಕು.

ಭರತಃ ಕೋಸಲಪುರೇ ಪ್ರಶಾಸ್ತು ವಸುಧಾಮಿಮಾಮ್ ।
ನಾನಾರತ್ನಸಮಾಕೀರ್ಣಾಂ ಸವಾಜಿರಥಕುಂಜರಾಮ್ ॥೩೮॥

ಭರತನು ಅಯೋಧ್ಯೆಯಲ್ಲಿ ನಾನಾ ರತ್ನಗಳಿಂದ ತುಂಬಿದ ಅಶ್ವ ರಥ ಗಜಯುಕ್ತವಾದ ಈ ಭೂಮಿಯನ್ನು ಆಳಬೇಕು.

ಏತೇನ ತ್ವಾಂ ನರೇಂದ್ರೋಽಯಂ ಕಾರುಣ್ಯೇನ ಸಮಾಪ್ಲುತಃ ।
ಶೋಕಸಂಕ್ಲಿಷ್ಟವದನೋ ನ ಶಕ್ನೋತಿ ನಿರೀಕ್ಷಿತುಮ್ ॥೩೯॥

ಈ ಕಾರಣದಿಂದಲೇ ನಿನ್ನಲ್ಲಿ ಅನುಕಂಪೆಯಿಂದ ತುಂಬಿದ ಈ ರಾಜನು ಶೋಕದಿಂದ ಮುಖದಲ್ಲಿ ಪೀಡಿತನಾಗಿ ನಿನ್ನನ್ನು ನೋಡಲು ಅಸಮರ್ಥನಾಗಿದ್ದಾನೆ.

ಏತತ್ ಕುರು ನರೇಂದ್ರಸ್ಯ ವಚನಂ ರಘುನಂದನ ।
ಸತ್ಯೇನ ಮಹತಾ ರಾಮ ತಾರಯಸ್ವ ನರಾಧಿಪಮ್ ॥೪೦॥

ರಾಮ, ರಾಜನ ಈ ಮಾತನ್ನು ನಡೆಸಿಕೊಡು. ಮಹತ್ತಾದ ಸತ್ಯಪಾಶದಿಂದ ರಾಜನನ್ನು ಬಿಡಿಸಿಕೊಳ್ಳು.

'ಸತಾಂ ಹಿತಂ ಸತ್ಯಂ' ಸಜ್ಜನರಿಗೆ ಹಿತವಾದುದು ನಿಜವಿರಲಿ ಸುಳ್ಳೇ ಇರಲಿ
ಅದ 'ಸತ್ಯ' ಎಂದು ಭಾರತ ಹೇಳುವಂತೆ 'ಸತ್ಯ' ಧರ್ಮ ನಡೆಸುವುದೇ ಬೇರೆ,

'ರಾಮೋ ದ್ವಿರ್ನಾಭಿಭಾಷತೇ' ಎಂಬಂತೆ ಕೊಟ್ಟ ಮಾತಿಗೆ ತಪ್ಪದಿರುವ ಧರ್ಮವೇ ಬೇರೆ. ಅದು ಕ್ಷತ್ರಿಯರಿಗೆ ವಿಶೇಷಧರ್ಮ. ಅದನ್ನು ನಡೆಸದಿದ್ದರೆ ಮೂಲೋಕ ಹಾಳಾಗುವವೆಂದು ಲಕ್ಷ್ಮಣತ್ಯಾಗ ಸಂದರ್ಭದಲ್ಲಿ ರಾಮನ ಮಂತ್ರಿಗಳೆಲ್ಲರು ಸಲಹೆ ನೀಡಿದರು! ಎಂದು ಉತ್ತರಕಾಂಡದಲ್ಲಿದೆ.

ಇತೀವ ತಸ್ಯಾಂ ಪರುಷಂ ವದಂತ್ಯಾಂ
ನ ಚೈವ ರಾಮಃ ಪ್ರವಿವೇಶ ಶೋಕಮ್ ।
ಪ್ರವಿವ್ಯಥೇ ಚಾಪಿ ಮಹಾನುಭಾವೋ
ರಾಜಾ ತು ಪುತ್ರವ್ಯಸನಾಭಿತಪ್ತಃ ॥೪೧॥

ಹೀಗೆ ಕೈಕೇಯಿ ಕ್ರೂರವಾಗಿ ನುಡಿಯುತ್ತಿದ್ದರೂ ಶ್ರೀರಾಮ ಮುಖದಲ್ಲಿ ಶೋಕವನ್ನು ತೋರಲಿಲ್ಲ, ಮನಸ್ಸಿನಲ್ಲಿಯೂ ವ್ಯಥೆಪಡಲಿಲ್ಲ. ದಶರಥನು ಮಾತ್ರ ಪುತ್ರಶೋಕದಿಂದ ಪರಿತಪಿಸಿದ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಹದಿನೆಂಟನೇ ಸರ್ಗ ಮುಗಿಯಿತು.

❖

ಏಕೋನವಿಂಶಃ ಸರ್ಗಃ

ಸರ್ಗ – 19

ಶ್ರೀರಾಮನು ಕಾಡಿಗೆ ಹೋಗಲು ಒಪ್ಪುವುದು.

ತದಪ್ರಿಯಮಮಿತ್ರಘ್ನೋ ವಚನಂ ಮರಣೋಪಮಮ್ ।
ಶ್ರುತ್ವಾ ನ ವಿವ್ಯಥೇ ರಾಮಃ ಕೈಕೇಯೀಂ ಚೇದಮಬ್ರವೀತ್ ॥೧॥

ಶತ್ರುನಾಶಕನಾದ ಶ್ರೀರಾಮ ಅಪ್ರಿಯವಾದ ಸಾವಿಗೆ ಸಮಾನವಾದ ಆ ಮಾತನ್ನು ಕೇಳಿ ವ್ಯಥೆ ಪಡಲಿಲ್ಲ. ಕೈಕೇಯಿಗೆ ನುಡಿದ.

ಏವಮಸ್ತು ಗಮಿಷ್ಯಾಮಿ ವನಂ ವಸ್ತುಮಹಂ ತ್ವಿತಃ ।
ಜಟಾಚೀರಧರೋ ರಾಜ್ಞಃ ಪ್ರತಿಜ್ಞಾಮನುಪಾಲಯನ್ ॥೨॥

ಹಾಗೇ ಆಗಲಿ. ನಾನು ರಾಜನ ಮಾತನ್ನು ಕಾಪಾಡುವುದಕ್ಕಾಗಿ ಜಡೆ ನಾರುಡೆಗಳನ್ನು ಧರಿಸಿ ವನದಲ್ಲಿ ವಾಸಮಾಡಲು ಇಲ್ಲಿಂದ ಹೊರಡುತ್ತೇನೆ.

ಇದಂ ತು ಜ್ಞಾತುಮಿಚ್ಛಾಮಿ ಕಿಮರ್ಥಂ ಮಾಂ ಮಹೀಪತಿಃ ।
ನಾಭಿನಂದತಿ ದುರ್ಧರ್ಷೋ ಯಥಾಪೂರ್ವಮರಿಂದಮಃ ॥೩॥

ಆದರೆ ಇದೊಂದನ್ನು ನಾನು ತಿಳಿಯಲು ಬಯಸುತ್ತೇನೆ. ಶತ್ರುದಮನ ಕಾರಿಯಾದ ಯಾರಿಗೂ ಮಣಿಸಲಾಗದ ರಾಜ ಹಿಂದಿನಂತೆ ನನ್ನನ್ನು ಕಂಡು ಏಕೆ ಹರ್ಷ ಪಡುವುದಿಲ್ಲ?

ಮನ್ಯುರ್ನ ಚ ತ್ವಯಾ ಕಾರ್ಯೋ ದೇವಿ ಬ್ರೂಮಿ ತವಾಗ್ರತಃ ।
ಯಾಸ್ಯಾಮಿ ಭವ ಸುಪ್ರೀತಾ ವನಂ ಚೀರಜಟಾಧರಃ ॥೪॥

ದೇವಿ, ನಾನು ತಕ್ಷಣ ವನಕ್ಕೆ ಹೊರಡುತ್ತಿಲ್ಲವೆಂದು ಕೋಪಿಸಿಕೊಳ್ಳಬೇಡ. ನಾನು ಹೇಳುತ್ತೇನೆ, ನಿನ್ನ ಕಣ್ಣ ಮುಂದೆಯೆ ನಾನು ನಾರುಡೆ ಜಡೆ ಧರಿಸಿ ಕಾಡಿಗೆ ಹೊರಡುತ್ತೇನೆ. ಸುಪ್ರೀತಳಾಗು.

ಹಿತೇನ ಗುರುಣಾ ಪಿತ್ರಾ ಕೃತಜ್ಞೇನ ನೃಪೇಣ ಚ ।
ನಿಯುಜ್ಯಮಾನೋ ವಿಸ್ರಬ್ಧಃ ಕಿಂ ನ ಕುರ್ಯಾಮಹಂ ಪ್ರಿಯಮ್ ॥೫॥

ತಂದೆ–ಹಿತಕಾರಿ–ಗುರು–ಕೃತಜ್ಞ–ರಾಜ–ಎಲ್ಲವೂ ಆಗಿರುವ ತಂದೆ ಆಜ್ಞೆ

ಮಾಡಿದರೆ, ಏನೂ ಅನುಮಾನ ಮಾಡದೆ ನಾನು ಅವನಿಗೆ ಪ್ರಿಯವಾದುದನ್ನು ಏಕೆ ಮಾಡದೇ ಇರಲಿ?

ಅಲೀಕಂ ಮಾನಸಂ ತ್ವೇಕಂ ಹೃದಯಂ ದಹತೀವ ಮೇ ।
ಸ್ವಯಂ ಯನ್ನಾಹ ಮಾಂ ರಾಜಾ ಭರತಸ್ಯಾಭಿಷೇಚನಮ್ ॥೬॥

ಆದರೆ ಭರತನಿಗೆ ಅಭಿಷೇಕ ಮಾಡುವೆನೆಂದು ರಾಜನು ಸ್ವತಃ ನನಗೆ ಏಕೆ ಹೇಳ್ತುತಿಲ್ಲ? ಭರತಾಭಿಷೇಕ ನನಗೆ ಪ್ರಿಯವಾಗದೆಂದು ರಾಜ ತಿಳಿದಿರುವನೆ? ಇದೊಂದು ದುಃಖ ನನ್ನ ಮನಸ್ಸಿನಲ್ಲಿದೆ, ನನ್ನ ಹೃದಯವನ್ನು ಸುಡುತ್ತಿದೆ.

ಅಹಂ ಹಿ ಸೀತಾಂ ರಾಜ್ಯಂ ಚ ಪ್ರಾಣಾನಿಷ್ಟಾನ್ ಧನಾನಿ ಚ ।
ಹೃಷ್ಟೋ ಭ್ರಾತ್ರೇ ಸ್ವಯಂ ದದ್ಯಾಂ ಭರತಾಯಾಪ್ರಚೋದಿತಃ ॥೭॥

ಏಕೆಂದರೆ, ಭರತನಿಗೆ ಪ್ರಿಯವಾಗುವುದಾದರೆ, ಯಾರ ಪ್ರೇರಣೆ ಇಲ್ಲದೆಯೆ, ಸ್ವಯಂ ಸೀತೆಯನ್ನೂ ರಾಜ್ಯವನ್ನೂ ಇಷ್ಟವಾದ ಪ್ರಾಣವನ್ನೂ ಧನಸಂಪತ್ತನ್ನೂ ಎಲ್ಲವನ್ನೂ ನಾನು ಸಂತೋಷದಿಂದ ಪರಿತ್ಯಾಗ ಮಾಡುತ್ತಿದ್ದೆ.

'ಪ್ರಾಣಾನ್ ದದ್ಯಾಂ' ಎಂದರೆ ಪ್ರಾಣತ್ಯಾಗವೆ ಹೊರತು ತನ್ನ ಪ್ರಾಣವನ್ನು ಇನ್ನೊಬ್ಬರಿಗೆ ಕೊಡಲು ಬರುವುದಿಲ್ಲ. ಹಾಗೇ ಭರತನು ಇಷ್ಟಪಟ್ಟರೆ, 'ಸೀತೆಯನ್ನು ತ್ಯಾಗ ಮಾಡಬಲ್ಲೆ' ಎನ್ನುತ್ತಾನೆ ಶ್ರೀರಾಮ, ಹೊರತು, ಅವನಿಗೆ ಸೀತೆಯನ್ನು ಕೊಡುವೆನೆನ್ನುವುದಿಲ್ಲ.

ಕಿಂ ಪುನರ್ಮನುಜೇಂದ್ರೇಣ ಸ್ವಯಂ ಪಿತ್ರಾ ಪ್ರಚೋದಿತಃ ।
ತವ ಚ ಪ್ರಿಯಕಾಮಾರ್ಥಂ ಪ್ರತಿಜ್ಞಾಮನುಪಾಲಯನ್ ॥೮॥

ಹಾಗಿರುವಾಗ, ಸ್ವಯಂ ನನ್ನ ತಂದೆ, ರಾಜ, ಆಜ್ಞೆ ಮಾಡುತ್ತಿದ್ದರೆ, ನಿನಗೂ ಪ್ರಿಯವನ್ನು ಉಂಟುಮಾಡುವುದಕ್ಕಾಗಿ, ಪ್ರತಿಜ್ಞಾಪಾಲನಕ್ಕಾಗಿ, ಭರತನಿಗೆ ರಾಜ್ಯವನ್ನು ನಾನು ಬಿಟ್ಟು ಕೊಡುತ್ತಿರಲಿಲ್ಲವೆ?

ತದಾಶ್ವಾಸಯ ಹ್ರೀಮಂತಂ ಕಿಂ ನ್ವಿದಂ ಯನ್ಮಹೀಪತಿಃ ।
ವಸುಧಾಸಕ್ತನಯನೋ ಮಂದಮಶ್ರೂಣಿ ಮುಂಚತಿ ॥೯॥

ಆಜ್ಞೆಮಾಡಲು ಸಂಕೋಚಪಡುತ್ತಿರುವ ರಾಜನನ್ನು ನೀನು ಸಂತೈಸು. ಅವನು ಏಕೆ ನೆಲವನ್ನೇ ದಿಟ್ಟಿಸುತ್ತ ನಿಧಾನವಾಗಿ ಕಣ್ಣೀರಿಡುತ್ತಾನೆ?

ಗಚ್ಛಂತು ಚೈವಾನಯಿತುಂ ದೂತಾಃ ಶೀಘ್ರಜವೈರ್ಹಯೈಃ ।
ಭರತಂ ಮಾತುಲಕುಲಾದದ್ಯೈವ ನೃಪಶಾಸನಾತ್ ॥೧೦॥

ರಾಜಾಜ್ಞೆಯಿಂದ ಭರತನನ್ನು ಸೋದರಮಾವನ ಮನೆಯಿಂದ ಕರೆತರಲು ವೇಗದ ಕುದುರೆಗಳಿಂದ ದೂತರು ಈಗಲೇ ಹೊರಡಲಿ.

ದಂಡಕಾರಣ್ಯಮೇಷೋಽಹಮಿತೋ ಗಚ್ಛಾಮಿ ಸತ್ವರಃ ।
ಅವಿಚಾರ್ಯ ಪಿತುರ್ವಾಕ್ಯಂ ಸಮಾ ವಸ್ತುಂ ಚತುರ್ದಶ ॥೧೧॥

ಇತ್ತ ನಾನು ತಂದೆಯ ಮಾತನ್ನು 'ನನಗೆ ಏಕೆ ನೇರವಾಗಿ ಹೇಳಲಿಲ್ಲ' ಎಂದು ವಿಚಾರ ಮಾಡದೆಯೆ, ಹದಿನಾಲ್ಕು ವರ್ಷಕಾಲ ವನವಾಸ ಮಾಡಲು ಬೇಗನೆ ದಂಡಕಾರಣ್ಯಕ್ಕೆ ಹೊರಡುತ್ತೇನೆ.

ಸಾ ಹೃಷ್ಟಾ ತಸ್ಯ ತದ್ವಾಕ್ಯಂ ಶ್ರುತ್ವಾ ರಾಮಸ್ಯ ಕೈಕಯೀ ।
ಪ್ರಸ್ಥಾನಂ ಶ್ರದ್ದಧಾನಾ ಹಿ ತ್ವರಯಾಮಾಸ ರಾಘವಮ್ ॥೧೨॥

ಕೈಕೇಯಿ ರಾಮನ ಈ ಮಾತನ್ನು ಕೇಳಿ, ಅವನು ಕಾಡಿಗೆ ಹೋಗುವನೆಂದು ವಿಶ್ವಾಸಗೊಂಡು, ಉತ್ಸಾಹದಿಂದ 'ಬೇಗನೆ ಹೋಗೆ'ಂದು ಅವಸರಪಡಿಸಿದಳು.

ಏವಂ ಭವತು ಯಾಸ್ಯಂತಿ ದೂತಾಃ ಶೀಘ್ರಜವೈರ್ಹಯೈಃ ।
ಭರತಂ ಮಾತುಲಕುಲಾದುಪಾವರ್ತಯಿತುಂ ನರಾಃ ॥೧೩॥

'ಹಾಗೆ ಆಗಲಿ, ಭರತನನ್ನು ಸೋದರಮಾವನ ಮನೆಯಿಂದ ಕರೆತರಲು ದೂತರು ವೇಗದ ಕುದುರೆಗಳಿಂದ ಹೊರಡುತ್ತಾರೆ.

ತವ ತ್ವಹಂ ಕ್ಷಮಂ ಮನ್ಯೇ ನೋತ್ಸುಕಸ್ಯ ವಿಲಂಬನಮ್ ।
ರಾಮ ತಸ್ಮಾದಿತಃ ಶೀಘ್ರಂ ವನಂ ತ್ವಂ ಗಂತುಮರ್ಹಸಿ ॥೧೪॥

ಆದರೆ, ರಾಮ, ಕಾಡಿಗೆ ಹೋಗಲು ಉತ್ಸುಕನಾಗಿರುವ ನೀನು ವಿಲಂಬ ಮಾಡುವುದು ಉಚಿತವಲ್ಲ. ಬೇಗನೆ ಕಾಡಿಗೆ ಹೊರಡು.

ವಿಲಂಬವಾದರೆ, ಕಾರಣಾಂತರದಿಂದ ಜ್ಯೇಷ್ಠ ಪುತ್ರನಾದ ರಾಮನು ವನವಾಸ ಕೈಗೊಳ್ಳದೆ ಇದ್ದರೆ, ರಾಜನು ವರವಾಗಿ ಕೊಟ್ಟರೂ ಕೂಡ ಭರತನಿಗೇ ರಾಜ್ಯವು ನ್ಯಾಯವಾಗಿ ಲಭ್ಯವಾಗದು ಎಂದು ಕೈಕೇಯಿಗೆ ಆತಂಕ. 'ಪ್ರತ್ಯಾಸನ್ನ ಕ್ರಮ'ದಿಂದ ರಾಮನ ಅನಂತರವೇ ಭರತನಿಗೆ ರಾಜ್ಯದ ಹಕ್ಕು ಬರುತ್ತದೆ.

ವ್ರೀಡಾನ್ವಿತಃ ಸ್ವಯಂ ಯಚ್ಚ ನೃಪಸ್ತ್ವಾಂ ನಾಭಿಭಾಷತೇ ।
ನೈತತ್ಕಿಂಚಿನ್ನರಶ್ರೇಷ್ಠ ಮನ್ಯುರೇಷೋಽಪನೀಯತಾಮ್ ॥೧೫॥

ಸಂಕೋಚಪಟ್ಟು ರಾಜ ಸ್ವಯಂ ನಿನಗೆ ತನ್ನ ಆಜ್ಞೆಯನ್ನು ಹೇಳುತ್ತಿಲ್ಲ. ಅದಕ್ಕೆ ಬೇರೇನೂ ಕಾರಣವಿಲ್ಲ. ನೀನು ಬೇಗನೆ ಹೊರಡುತ್ತಿಲ್ಲ ಎಂದೇ ಅವನಿಗೆ ಆತಂಕ. ಅದನ್ನು ನೀನೆ ಕಳೆಯಬೇಕು.

ಯಾವತ್ತ್ವಂ ನ ವನಂ ಯಾತಃ ಪುರಾದಸ್ಮಾದಭಿತ್ವರನ್ ।
ಪಿತಾ ತಾವನ್ನ ತೇ ರಾಮ ಸ್ನಾಸ್ಯತೇ ಭೋಕ್ಷ್ಯತೇಽಪಿ ವಾ ॥೧೬॥

ನೀನು ಬೇಗನೆ ಅಯೋಧ್ಯೆಯಿಂದ ಕಾಡಿಗೆ ಹೊರಡದ ವಿನಾ ನಿನ್ನ ತಂದೆ ಸ್ನಾನವನ್ನೂ ಮಾಡುವುದಿಲ್ಲ, ಭೋಜನವನ್ನೂ ಮಾಡುವುದಿಲ್ಲ.

ಇದು ಅಪ್ಪಟ ಸುಳ್ಳು! 'ಈ ಒಂದು ರಾತ್ರಿಯಾದರೂ ನೀನಿಲ್ಲಿ ಇರು' ಎಂದು ಮುಂದೆ ರಾಜ ಬೇಡುತ್ತಾನೆ.

ಧಿಕ್ಕಷ್ಟಮಿತಿ ನಿಃಶ್ವಸ್ಯ ರಾಜಾ ಶೋಕಪರಿಪ್ಲುತಃ ।
ಮೂರ್ಚ್ಛಿತೋ ನ್ಯಪತತ್ತಸ್ಮಿನ್ ಪರ್ಯಂಕೇ ಹೇಮಭೂಷಿತೇ ॥೧೭॥

'ನನಗೆ ಧಿಕ್ಕಾರವಿರಲಿ, ಇದು ಕಷ್ಟ!' ಎಂದು ರಾಜ ಶೋಕದಲ್ಲಿ ಮುಳುಗಿ ಮೂರ್ಛಿತನಾಗಿ ಬಂಗಾರದಿಂದ ಅಲಂಕೃತವಾದ ಮಂಚದಲ್ಲಿ ಬಿದ್ದುಬಿಟ್ಟ.

ರಾಮೋಽಪ್ಯುತ್ಥಾಪ್ಯ ರಾಜಾನಂ ಕೈಕೇಯ್ಯಾಭಿಪ್ರಚೋದಿತಃ ।
ಕಶಯೇವಾಹತೋ ವಾಜೀ ವನಂ ಗಂತುಂ ಕೃತತ್ವರಃ ॥೧೮॥

ಶ್ರೀರಾಮ ರಾಜನನ್ನು ಹಿಡಿದೆತ್ತಿ ಕುಳ್ಳಿರಿಸಿ, ಕೈಕೇಯಿಯ ಪ್ರೇರಣೆಯಿಂದ, ಚಾವಟಿಯಿಂದ ಹೊಡೆದ ಕುದುರೆಯಂತೆ, ಕಾಡಿಗೆ ಹೋಗಲು ತ್ವರೆಗೈದ.

ತದಪ್ರಿಯಮನಾರ್ಯಾಯಾ ವಚನಂ ದಾರುಣೋದಯಮ್ ।
ಶ್ರುತ್ವಾ ಗತವ್ಯಥೋ ರಾಮಃ ಕೈಕೇಯೀಂ ವಾಕ್ಯಮಬ್ರವೀತ್ ॥೧೯॥

ದುಷ್ಟಕೈಕೇಯಿ ಆಡಿದ ಅಪ್ರಿಯವಾದ ಕಠೋರವಾದ ಮಾತನ್ನು ಕೇಳಿ, ಎಂದೂ ಯಾವುದೇ ಕಾರಣದಿಂದಲೂ ವ್ಯಥೆಪಡದಿರುವ ಶ್ರೀರಾಮ ಕೈಕೇಯಿಗೆ ಹೇಳಿದ.

ನಾಹಮರ್ಥಪರೋ ದೇವಿ ಲೋಕಮಾವಸ್ತುಮುತ್ಸಹೇ ।
ವಿದ್ಧಿ ಮಾಮೃಷಿಭಿಸ್ತುಲ್ಯಂ ಕೇವಲಂ ಧರ್ಮಮಾಸ್ಥಿತಮ್ ॥೨೦॥

'ಅರ್ಥ'ದಲ್ಲಿ ಆಸಕ್ತನಾಗಿ ಸಂಪತ್ತಿನ ಮೇಲೆ ಆಸೆಪಟ್ಟು ಲೋಕದಲ್ಲಿ ವಾಸ ಮಾಡಲು ನಾನು ಇಚ್ಛಿಸುವುದಿಲ್ಲ. ದೇವಿ, ನನ್ನನ್ನು ಋಷಿಗಳಂತೆ ಕೇವಲ ಧರ್ಮದಲ್ಲಿ ಆಸಕ್ತನೆಂದು ತಿಳಿ.

ಯದತ್ರಭವತಃ ಕಿಂಚಿತ್ ಶಕ್ಯಂ ಕರ್ತುಂ ಪ್ರಿಯಂ ಮಯಾ ।
ಪ್ರಾಣಾನಪಿ ಪರಿತ್ಯಜ್ಯ ಸರ್ವಥಾ ಕೃತಮೇವ ತತ್ ॥೨೧॥

ಪೂಜ್ಯ ತಂದೆಗೆ ಸ್ವಲ್ಪವಾದರೂ ಪ್ರಿಯವನ್ನು ಮಾಡಲು ಶಕ್ಯವಾಗುವಂತಿದ್ದರೆ ನಾನು ಪ್ರಾಣವನ್ನಾದರೂ ತೊರೆದು ಅದನ್ನು ಸರ್ವಥಾ ಮಾಡಿಯೇ ತೀರುತ್ತೇನೆ.

ನ ಹ್ಯತೋ ಧರ್ಮಚರಣಂ ಕಿಂಚಿದಸ್ತಿ ಮಹತ್ತರಮ್ ।
ಯಥಾ ಪಿತರಿ ಶುಶ್ರೂಷಾ ತಸ್ಯ ವಾ ವಚನಕ್ರಿಯಾ ॥೨೨॥

ತಂದೆಯ ಸೇವೆ ಮಾಡುವುದು, ಅವನ ಮಾತನ್ನು ನಡೆಸುವುದು ಇವುಗಳಿಗಿಂತ ಮಹತ್ತರವಾದ ಧರ್ಮಾಚರಣೆ ಏನೂ ಇಲ್ಲ.'

ಅನುಕ್ತೋಽಪ್ಯತ್ರಭವತಾ ಭವತ್ಯಾ ವಚನಾದಹಮ್ ।
ವನೇ ವತ್ಸ್ಯಾಮಿ ವಿಜನೇ ವರ್ಷಾಣೀಹ ಚತುರ್ದಶ ॥೨೩॥

ಪೂಜ್ಯನು ಸ್ವತಃ ಹೇಳದಿದ್ದರೂ ನಿನ್ನ ಮಾತಿನಂತೆಯೆ ನಾನು ನಿರ್ಜನವಾದ ಅರಣ್ಯದಲ್ಲಿ ಹದಿನಾಲ್ಕು ವರ್ಷ ವಾಸ ಮಾಡುವೆನು.

ನ ನೂನಂ ಮಯಿ ಕೈಕೇಯಿ ಕಿಂಚಿದಾಶಂಸಸೇ ಗುಣಮ್ ।
ಯದ್ರಾಜಾನಮವೋಚಸ್ತ್ವಂ ಮಮೇಶ್ವರತರಾ ಸತೀ ॥೨೪॥

ಕೈಕೇಯಿ, ನೀನು ನನ್ನ ಗುಣವನ್ನು ಸ್ವಲ್ಪವೂ ತಿಳಿದಿಲ್ಲ. ಇದು ನಿಶ್ಚಯ. ಏಕೆಂದರೆ ನನಗೆ ಆಜ್ಞೆಮಾಡಲು, ಪತಿಗಿಂತಲೂ ಹೆಚ್ಚು ಅಧಿಕಾರ ಉಳ್ಳವಳು ನೀನು ಅವನಿಗೇಕೆ ಹೇಳಿದೆ?

ಯಾವನ್ಮಾತರಮಾಪೃಚ್ಛೇ ಸೀತಾಂ ಚಾನುನಯಾಮ್ಯಹಮ್ ।
ತತೋಽದ್ಯೈವ ಗಮಿಷ್ಯಾಮಿ ದಂಡಕಾನಾಂ ಮಹದ್ವನಮ್ ॥೨೫॥

ನಾನೀಗ ತಾಯಿಯ ಅನುಜ್ಞೆ ಪಡೆಯುವೆ, ಸೀತೆಯನ್ನು ಸಂತೈಸುವೆ. ಒಡನೆ ಇಂದೇ ಮಹತ್ತಾದ ದಂಡಕಾರಣ್ಯಕ್ಕೇ ಹೋಗುವೆ.

ಭರತಃ ಪಾಲಯೇದ್ರಾಜ್ಯಂ ಶುಶ್ರೂಷೇಚ್ಚ ಪಿತುರ್ಯಥಾ ।
ತಥಾ ಭವತ್ಯಾ ಕರ್ತವ್ಯಂ ಸ ಹಿ ಧರ್ಮಃ ಸನಾತನಃ ॥೨೬॥

ಭರತನು ರಾಜ್ಯವಾಳಬೇಕು. ಅದೇ ರೀತಿಯಲ್ಲಿ ತಂದೆಯ ಶುಶ್ರೂಷೆಯನ್ನು ಅವನು ಮಾಡಬೇಕು. ಹಾಗೆ ನೀನು ನೋಡಿಕೊಳ್ಳಬೇಕು. ಅದು ಸನಾತನ ಧರ್ಮ.

ಸ ರಾಮಸ್ಯ ವಚಃ ಶ್ರುತ್ವಾ ಭೃಶಂ ದುಃಖಿತಃ ಪಿತಾ ।
ಶೋಕಾದಶಕ್ನುವನ್ ವಕ್ತುಂ ಪ್ರರುರೋದ ಮಹಾಸ್ವನಮ್ ॥೨೭॥

ಶ್ರೀರಾಮನ ಮಾತನ್ನು ಕೇಳಿ ತಂದೆ ಬಹಳ ದುಃಖಪೀಡಿತನಾದ. ಶೋಕದಿಂದ ಮಾತನಾಡಲು ಶಕ್ತನಾಗದೆ ದೊಡ್ಡಧ್ವನಿಯಿಂದ ಅಳಲುತೊಡಗಿದ. ಎಚ್ಚರದಪ್ಪಿದ.

ವಂದಿತ್ವಾ ಚರಣೌ ರಾಮೋ ವಿಸಂಜ್ಞಸ್ಯ ಪಿತುಸ್ತಥಾ ।
ಕೈಕೇಯ್ಯಾಶ್ಚಾಪ್ಯನಾರ್ಯಾಯಾ ನಿಶ್ಚಕ್ರಾಮ ಮಹಾದ್ಯುತಿಃ ॥೨೮॥

ಎಚ್ಚರದಪ್ಪಿದ ತಂದೆಯ ಮತ್ತು ದುಷ್ಟ ಕೈಕೇಯಿಯ ಚರಣಗಳಿಗೆ ವಂದಿಸಿ ಮಹಾಪ್ರಕಾಶವುಳ್ಳ ಶ್ರೀರಾಮ ಅಲ್ಲಿಂದ ಹೊರಟ.

ಸ ರಾಮಃ ಪಿತರಂ ಕೃತ್ವಾ ಕೈಕೇಯೀಂ ಚ ಪ್ರದಕ್ಷಿಣಮ್ ।
ನಿಷ್ಕ್ರಮ್ಯಾಂತಃಪುರಾತ್ತಸ್ಮಾತ್ ಸ್ವಂ ದದರ್ಶ ಸುಹೃಜ್ಜನಮ್ ॥೨೯॥

ಹೊರಡುವ ಮೊದಲು ಶ್ರೀರಾಮ ತಂದೆಗೂ ಕೈಕೇಯಿಗೂ ಪ್ರದಕ್ಷಣೆ ಬಂದು, ಅಂತಃಪುರದಿಂದ ಹೊರಗೆ ಬಂದು, ಬಂಧುಜನರನ್ನು ಕಂಡ.

ತಂ ಬಾಷ್ಪಪರಿಪೂರ್ಣಾಕ್ಷಃ ಪೃಷ್ಠತೋಽನುಜಗಾಮ ಹ ।
ಲಕ್ಷ್ಮಣಃ ಪರಮಕ್ರುದ್ಧಃ ಸುಮಿತ್ರಾನಂದವರ್ಧನಃ ॥೩೦॥

ಅವನನ್ನು ಸುಮಿತ್ರಾತನಯ ಲಕ್ಷ್ಮಣನು ಕಣ್ಣುಗಳಲ್ಲಿ ನೀರು ತುಂಬಿಕೊಂಡು ಬಹಳ ಕ್ರುದ್ಧನಾಗಿ ಹಿಂಬಾಲಿಸಿದ.

ಹಿಂದೆ ಹದಿನಾರನೆ ಸರ್ಗದಲ್ಲಿ 'ಜುಗೋಪ ಭ್ರಾತರಂ ಭ್ರಾತಾ' 'ಅಂಗರಕ್ಷಕ-ನಾಗಿ ಲಕ್ಷ್ಮಣನು ಸದಾ ರಾಮನ ಜೊತೆಗೇ ಇದ್ದ'ನೆಂದು ಹೇಳಿದೆ.

ಆಭಿಷೇಚನಿಕಂ ಭಾಂಡಂ ಕೃತ್ವಾ ರಾಮಃ ಪ್ರದಕ್ಷಿಣಮ್ ।
ಶನೈರ್ಜಗಾಮ ಸಾಪೇಕ್ಷೋ ದೃಷ್ಟಿಂ ತತ್ರಾವಿಚಾಲಯನ್ ॥೩೧॥

ಅಭಿಷೇಕದ ಕಲಶಕ್ಕೆ ಶ್ರೀರಾಮ ಪ್ರದಕ್ಷಿಣೆ ಬಂದು ಆ ಕಲಶದಿಂದ ತನಗೆ ಅಭಿಷೇಕ ನಡೆಯುತ್ತಿದ್ದರೆ ಎಷ್ಟು ಆನಂದವಾಗುತ್ತಿತ್ತೆಂದು ಅಪೇಕ್ಷೆ ಪಡುವವನಂತೆ, ಕಲಶದಿಂದ ಈಚೆಗೆ ದೃಷ್ಟಿಯನ್ನು ಹರಿಸದಂತೆ, ನೋಡುತ್ತ ಮೆಲ್ಲನೆ ಅಡಿ ಇಟ್ಟ.

ನ ಚಾಸ್ಯ ಮಹತೀಂ ಲಕ್ಷ್ಮೀಂ ರಾಜ್ಯನಾಶೋऽಪಕರ್ಷತಿ ।
ಲೋಕಕಾಂತಸ್ಯ ಕಾಂತತ್ವಾಚ್ಚೀತರಶ್ಮೇರಿವ ಕ್ಷಪಾ ॥೩೨॥

ಸಹಜ ಕಾಂತಿಉಳ್ಳ ಚಂದ್ರನು ಲೋಕಕ್ಕೆಲ್ಲ ಕಾಂತಿಯನ್ನು ಚೆಲ್ಲುತ್ತಾನೆ. ಅವನ ಕಾಂತಿಯನ್ನು ರಾತ್ರಿ ಹೇಗೆ ಕಡಿಮೆ ಮಾಡಲಾರದೋ ಹಾಗೆ ರಾಮನ ಮುಖಕಾಂತಿ ಸ್ವಾಭಾವಿಕವಾದ್ದರಿಂದ ರಾಜ್ಯಯೋಗ ಕೈತಪ್ಪಿ ಹೋದರೂ ಅವನ ಮುಖಕಾಂತಿ ಕಡಿಮೆಯಾಗಲಿಲ್ಲ.

ನ ವನಂ ಗಂತುಕಾಮಸ್ಯ ತ್ಯಜತಶ್ಚ ವಸುಂಧರಾಮ್ ।
ಸರ್ವಲೋಕಾತಿಗಸ್ಯೇವ ಲಕ್ಷ್ಯತೇ ಚಿತ್ತವಿಕ್ರಿಯಾ ॥೩೩॥

ರಾಜ್ಯವನ್ನು ಪರಿತ್ಯಾಗ ಮಾಡಿ ಕಾಡಿಗೆ ಹೋಗಲು ಬಯಸಿದ ಶ್ರೀರಾಮನಿಗೆ ಎಲ್ಲ ಲೋಕಗಳ ಸಂಗವನ್ನು ದಾಟಿರುವ ಯೋಗೀಶ್ವರನಂತೆ ಮನಸಿನಲ್ಲಿ ಏನೂ ವಿಕಾರ ಕಂಡುಬರಲಿಲ್ಲ.

ಪ್ರತಿಷಿದ್ಧ ಶುಭಂ ಛತ್ರಂ ವ್ಯಜನೇ ಚ ಸ್ವಲಂಕೃತೇ ।
ವಿಸರ್ಜಯಿತ್ವಾ ಸ್ವಜನಂ ರಥಂ ಪೌರಾಂಸ್ತಥಾ ಜನಾನ್ ॥೩೪॥

ಧಾರಯನ್ಮನಸಾ ದುಃಖಮಿಂದ್ರಿಯಾಣಿ ನಿಗೃಹ್ಯ ಚ ।
ಪ್ರವಿವೇಶಾತ್ಮವಾನ್ ವೇಶ್ಮ ಮಾತುರಪ್ರಿಯಶಂಸಿವಾನ್ ॥೩೫॥

ಮಂಗಳಕರವಾದ ಛತ್ರವನ್ನೂ ಅಲಂಕೃತವಾದ ಚಾಮರಗಳನ್ನೂ ನಿಷೇಧಿಸಿ, ಬಂಧುಜನಗಳನ್ನೂ ರಥವನ್ನೂ ಪೌರಜನರನ್ನೂ ಬಿಟ್ಟು, ಮನಸ್ಸಿನಲ್ಲಿ ದುಃಖವನ್ನು ಮಾತ್ರ ಹೊತ್ತು, ಇಂದ್ರಿಯಗಳನ್ನು ನಿಗ್ರಹಿಸಿಕೊಂಡು, ದೃಢಮನಸ್ಕನಾಗಿ, ಮಾತೆಗೆ ಅಪ್ರಿಯ ವಾರ್ತೆಯನ್ನು ಹೇಳುವುದಕ್ಕಾಗಿ ಅವಳ ಭವನವನ್ನು ಪ್ರವೇಶಿಸಿದ ಶ್ರೀರಾಮ.

ಸರ್ವೋ ಹ್ಯಭಿಜನಃ ಶ್ರೀಮಾನ್ ಶ್ರೀಮತಃ ಸತ್ಯವಾದಿನಃ ।
ನಾಲಕ್ಷಯತ ರಾಮಸ್ಯ ಕಿಂಚಿದಾಕಾರಮಾನನೇ ॥೩೬॥

ಕಾಂತಿಉಳ್ಳ ಜನರು ಯಾರೂ ಕಾಂತಿಉಳ್ಳ ಸತ್ಯವಾದಿಯಾದ ರಾಮನ ಮುಖದಲ್ಲಿ ಯಾವುದೇ ವಿಕಾರವನ್ನು ಕಾಣಲಿಲ್ಲ.

ಉಚಿತಂ ಚ ಮಹಾಬಾಹುರ್ನ ಜಹೌ ಹರ್ಷಮಾತ್ಮನಃ ।
ಶಾರದಃ ಸಮುದೀರ್ಣಾಂಶುಶ್ಚಂದ್ರಸ್ತೇಜ ಇವಾತ್ಮಜಮ್ ॥೩೭॥

ಶರತ್ಕಾಲದ ಪೂರ್ಣಚಂದ್ರನು ತನ್ನ ಸ್ವಾಭಾವಿಕ ಕಾಂತಿಯನ್ನು ಬಿಡುವುದಿಲ್ಲ. ಹಾಗೇ ದೃಢಮನಸ್ಕನಾದ ಮಹಾಬಾಹುಶಾಲಿ ಶ್ರೀರಾಮನು ತನ್ನ ಸ್ವಾಭಾವಿಕ ವಾದ ಹರ್ಷವನ್ನು ಬಿಟ್ಟುಬಿಡಲಿಲ್ಲ.

ವಾಚಾ ಮಧುರಯಾ ರಾಮಃ ಸರ್ವಂ ಸಂಮಾನಯನ್ ಜನಮ್ ।
ಮಾತುಃ ಸಮೀಪಂ ಧರ್ಮಾತ್ಮಾ ಪ್ರವಿವೇಶ ಮಹಾಯಶಾಃ ॥೩೮॥

ಮಹಾಯಶಸ್ವಿ ಧರ್ಮಾತ್ಮನಾದ ಶ್ರೀರಾಮ ಎಲ್ಲ ಜನರನ್ನೂ ಸವಿನುಡಿಯಿಂದ ಆದರಿಸುತ್ತ ತಾಯಿಯ ಸಮೀಪಕ್ಕೆ ನಡೆದ.

ತಂ ಗುಣೈಃ ಸಮತಾಂ ಪ್ರಾಪ್ತೋ ಭ್ರಾತಾ ವಿಪುಲವಿಕ್ರಮಃ ।
ಸೌಮಿತ್ರಿರನುವವ್ರಾಜ ಧಾರಯನ್ ದುಃಖಮಾತ್ಮಜಮ್ ॥೩೯॥

ಗುಣಗಳಿಂದ ರಾಮನ ಸಾಮ್ಯವನ್ನು ಹೊಂದಿದ್ದ ಮಹಾಪರಾಕ್ರಮಿಯಾದ ತಮ್ಮ ಲಕ್ಷ್ಮಣನು ತನ್ನ ಮನಸ್ಸಿನಲ್ಲಿ ಉಂಟಾದ ದುಃಖವನ್ನು ನುಂಗಿಕೊಂಡು ಶ್ರೀರಾಮನನ್ನು ಹಿಂಬಾಲಿಸಿದ.

ಪ್ರವಿಶ್ಯ ವೇಶ್ಮಾತಿಭೃಶಂ ಮುದಾನ್ವಿತಂ
ಸಮೀಕ್ಷ್ಯ ತಾಂ ಚಾರ್ಥವಿಪತ್ತಿಮಾಗತಾಮ್ ।
ನ ಚೈವ ರಾಮೋಽತ್ರ ಜಗಾಮ ವಿಕ್ರಿಯಾಂ
ಸುಹೃಜ್ಜನಸ್ಯಾತ್ಮವಿಪತ್ತಿಶಂಕಯಾ ॥೪೦॥

ಶ್ರೀರಾಮ ಬಲುಬೇಗನೆ ಕೌಸಲ್ಯೆಯ ಆನಂದತುಂಬಿದ ಅಂತಃಪುರವನ್ನು ಪ್ರವೇಶಿಸಿ, ಇಷ್ಟಾರ್ಥ ವಿನಾಶವನ್ನು ಹೊಂದಿದ ತಾಯಿಯನ್ನು ಕಂಡೂ ಕೂಡ ಯಾವ ವಿಕಾರವನ್ನೂ ಹೊಂದಲಿಲ್ಲ. ಬಂಧುಜನರು ತನ್ನ ವಿಕಾರವನ್ನು ಕಂಡರೆ ಆತ್ಮನಾಶ ಹೊಂದಬಹುದೆಂಬ ಭಯದಿಂದ ನಿರ್ವಿಕಾರನಾಗಿಯೇ ಇದ್ದ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಹತ್ತೊಂಭತ್ತನೇ ಸರ್ಗ ಮುಗಿಯಿತು.

ವಿಂಶಃ ಸರ್ಗಃ

ಸರ್ಗ – 20

ಕೌಸಲ್ಯೆಯ ವಿಲಾಪ

ತಸ್ಮಿಂಸ್ತು ಪುರುಷವ್ಯಾಘ್ರೇ ನಿಷ್ಕ್ರಾಮತಿ ಕೃತಾಂಜಲೌ ।
ಆರ್ತಶಬ್ದೋ ಮಹಾನ್ ಜಜ್ಞೇ ಸ್ತ್ರೀಣಾಮಂತಃಪುರೇ ತದಾ ॥೧॥

ಪುರುಷೋತ್ತಮ ಶ್ರೀರಾಮ ಕೈಮುಗಿದುಕೊಂಡು ಹೊರಗೆ ಹೊರಟಾಗ ಸ್ತ್ರೀಯರ ಅಂತಃಪುರದಲ್ಲಿ ದೊಡ್ಡ ಆರ್ತನಾದ ಕೇಳಿಬಂದಿತು.

ಕೃತ್ಯೇಷ್ವಚೋದಿತಃ ಪಿತ್ರಾ ಸರ್ವಸ್ಯಾಂತಃಪುರಸ್ಯ ಚ ।
ಗತಿರ್ಯಃ ಶರಣಂ ಚಾಪಿ ಸ ರಾಮೋಽದ್ಯ ಪ್ರವತ್ಸ್ಯತಿ ॥೨॥

ತಂದೆ ಹೇಳದಿದ್ದರೂ ಎಲ್ಲ ಅಂತಃಪುರದ ಕೃತ್ಯಗಳಲ್ಲಿಯೂ ನಮಗೆ ರಾಮನೇ ಗತಿಯಾಗುತ್ತಿದ್ದ, ರಕ್ಷಕನಾಗುತ್ತಿದ್ದ. ಅಂಥ ರಾಮ ಇಂದು ಕಾಡಿಗೆ ಹೋಗುತ್ತಿದ್ದಾನೆ.

ಕೌಸಲ್ಯಾಯಾಂ ಯಥಾ ಯುಕ್ತೋ ಜನನ್ಯಾಂ ವರ್ತತೇ ಸದಾ ।
ತಥೈವ ವರ್ತತೇಽಸ್ಮಾಸು ಜನ್ಮಪ್ರಭೃತಿ ರಾಘವಃ ॥೩॥

ಹುಟ್ಟಿದಂದಿನಿಂದಲೂ ತಾಯಿ ಕೌಸಲ್ಯೆಯ ಬಳಿ ಸದಾ ಹೇಗೆ ವರ್ತಿಸುತ್ತಿದ್ದನೋ ಹಾಗೇ ನಮ್ಮ ಬಳಿಯೂ ಹಿತಕಾರಿಯಾಗಿ ವರ್ತಿಸುತ್ತಿದ್ದ, ರಾಮ.

ನ ಕ್ರುಧ್ಯತ್ಯಭಿಶಪ್ತೋಽಪಿ ಕ್ರೋಧನೀಯಾನಿ ವರ್ಜಯನ್ ।
ಕ್ರುದ್ಧಾನ್ ಪ್ರಸಾದಯನ್ ಸರ್ವಾನ್ ಸ ಇತೋಽದ್ಯ ಪ್ರವತ್ಸ್ಯತಿ ॥೪॥

ನಾವು ಬೈದರೂ ಅವನು ಕೋಪಿಸಿಕೊಳ್ಳುತ್ತಿರಲಿಲ್ಲ. ಕೋಪ ಬರುವ ಸನ್ನಿವೇಶವನ್ನೇ ಬಾರದಂತೆ ಮಾಡಿಕೊಳ್ಳುತ್ತಿದ್ದ. ನಾವು ಕೋಪಿಸಿಕೊಂಡರೆ ಎಲ್ಲರನ್ನೂ ಸಮಾಧಾನಪಡಿಸುತ್ತಿದ್ದ. ಅಂಥ ರಾಮ ಈಗ ಕಾಡಿಗೆ ಹೋಗುತ್ತಿದ್ದಾನೆ.

ಅಬುದ್ಧಿರ್ಬತ ನೋ ರಾಜಾ ಜೀವಲೋಕಂ ಚರತ್ಯಯಮ್ ।
ಯೋ ಗತಿಂ ಸರ್ವಲೋಕಾನಾಂ ಪರಿತ್ಯಜತಿ ರಾಘವಮ್ ॥೫॥

ನಮ್ಮ ರಾಜ, ಅಯ್ಯೋ, ಬುದ್ಧಿಹೀನನಾಗಿದ್ದಾನೆ. ಸರ್ವಲೋಕಗಳಿಗೆ ಗತಿ-ಯಾದ ರಾಮನನ್ನು ಪರಿತ್ಯಾಗ ಮಾಡುವ ಮೂಲಕ ಜೀವಲೋಕವನ್ನೇ ನಾಶ ಮಾಡುತ್ತಿದ್ದಾನೆ!

ಇತಿ ಸರ್ವಾ ಮಹಿಷ್ಯಸ್ತಾ ವಿವತ್ಸಾ ಇವ ಧೇನವಃ ।
ಪತಿಮಾಚುಕ್ರುಶುಶ್ಚೈವ ಸಸ್ವರಂ ಚಾಪಿ ಚುಕ್ರುಶುಃ ॥೬॥

ಹೀಗೆ ದಶರಥನ ಮೂನ್ನೂರೈವತ್ತು ಮಹಿಷಿಯರು ಎಲ್ಲರೂ ಕರುಗಳನ್ನು ಕಳೆದುಕೊಂಡ ಹಸುಗಳಂತೆ ಪತಿಯನ್ನು ಆಕ್ಷೇಪಿಸಿದರು, ದೊಡ್ಡ ಧ್ವನಿಯಿಂದ ಅತ್ತರು.

ಸ ಹಿ ಚಾಂತಃಪುರೇ ಘೋರಮಾರ್ತಶಬ್ದಂ ಮಹೀಪತಿಃ ।
ಪುತ್ರಶೋಕಾಭಿಸಂತಪ್ತಃ ಶ್ರುತ್ವಾ ವ್ಯಾಲೀಯತಾಸನೇ ॥೭॥

ಅಂತಃಪುರದಲ್ಲಿ ಉಂಟಾದ ಘೋರವಾದ ಆರ್ತನಾದವನ್ನು ಕೇಳಿ, ಮೊದಲೇ ಪುತ್ರವಿಯೋಗದಿಂದ ಸಂತಾಪಪಡುತ್ತಿದ್ದ ದಶರಥನು ಈಗ ಆಸನದಲ್ಲಿ ಮುಸುಕು ಹಾಕಿಕೊಂಡು ಹುದುಗಿಕೊಂಡ.

ರಾಮಸ್ತು ಭೃಶಮಾಯಸ್ತೋ ನಿಃಶ್ವಸನ್ನಿವ ಕುಂಜರಃ ।
ಜಗಾಮ ಸಹಿತೋ ಭ್ರಾತ್ರಾ ಮಾತುರಂತಃಪುರಂ ವಶೀ ॥೮॥

ರಾಮನು ಬಂಧುಗಳು ಗೋಳಿಡುವುದನ್ನು ಕಂಡು ಬಲು ದುಃಖಿತನಾಗಿ ಆನೆಯಂತೆ ನಿಟ್ಟುಸಿರು ಬಿಡುತ್ತ ಲಕ್ಷ್ಮಣನೊಂದಿಗೆ ತಾಯಿಯ ಅಂತಃಪುರಕ್ಕೆ ನಡೆದ.

ಸೋಽಪಶ್ಯತ್ ಪುರುಷಂ ತತ್ರ ವೃದ್ಧಂ ಪರಮಪೂಜಿತಮ್ ।
ಉಪವಿಷ್ಟಂ ಗೃಹದ್ವಾರಿ ತಿಷ್ಠತಶ್ಚಾಪರಾನ್ ಬಹೂನ್ ॥೯॥

ಅಂತಃಪುರ ದ್ವಾರದಲ್ಲಿ ಕುಳಿತಿದ್ದ, ದ್ವಾರಪಾಲಕರೆಲ್ಲರಿಗೂ ಆದರಣೀಯನಾದ, ವೃದ್ಧನಾದ ಮುಖ್ಯದ್ವಾರಪಾಲಕನನ್ನೂ, ನಿಂತಿದ್ದ ಇತರ ಬಹುಮಂದಿ ದ್ವಾರಪಾಲಕ-ರನ್ನೂ ಶ್ರೀರಾಮ ಕಂಡ.

ದೃಷ್ಟ್ವೈವ ತು ತದಾ ರಾಮಂ ತೇ ಸರ್ವೇ ಸಹಸೋತ್ಥಿತಾಃ ।
ಜಯೇನ ಜಯತಾಂ ಶ್ರೇಷ್ಠಂ ವರ್ಧಯಂತಿ ಸ್ಮ ರಾಘವಮ್ ॥೧೦॥

ಶ್ರೀರಾಮನನ್ನು ಕಂಡೊಡನೆ ಅವರೆಲ್ಲರೂ ಒಡನೆ ಎದ್ದುನಿಂತು ಜಯಶೀಲ-ರೆಲ್ಲರಿಗಿಂತ ಶ್ರೇಷ್ಠವಾದ ಆತನನ್ನು 'ಜಯವಾಗಲಿ' ಎಂದು ಅಭಿನಂದಿಸಿದರು.

ಪ್ರವಿಶ್ಯ ಪ್ರಥಮಾಂ ಕಕ್ಷ್ಯಾಂ ದ್ವಿತೀಯಾಯಾಂ ದದರ್ಶ ಸಃ ।
ಬ್ರಾಹ್ಮಣಾನ್ ವೇದಸಂಪನ್ನಾನ್ ವೃದ್ಧಾನ್ ರಾಜ್ಞಾಭಿಸತ್ಕೃತಾನ್ ॥೧೧॥

ಅಂತಃಪುರದ ಮೊದಲನೆ ಅಂಗಳವನ್ನು ದಾಟಿ ಎರಡನೆ ಅಂಗಳದಲ್ಲಿ ವೇದಾ-ಧ್ಯಯನ ಸಂಪನ್ನರು ಜ್ಞಾನವೃದ್ಧರು ವಯೋವೃದ್ಧರು ರಾಜನಿಂದ ಸತ್ಕಾರ ಪಡೆದವರೂ ಆದ ಬ್ರಾಹ್ಮಣರನ್ನು ಶ್ರೀರಾಮ ಕಂಡ.

ಪ್ರಣಮ್ಯ ರಾಮಸ್ತಾನ್ ವೃದ್ಧಾಂಸ್ತತೀಯಾಯಾಂ ದದರ್ಶ ಸಃ ।
ಸ್ತ್ರಿಯೋ ವೃದ್ಧಾಶ್ಚ ಬಾಲಾಶ್ಚ ದ್ವಾರರಕ್ಷಣತತ್ಪರಾಃ ॥೧೨॥

ಆ ವೃದ್ಧಬ್ರಾಹ್ಮಣರನ್ನು ಶ್ರೀರಾಮ ನಮಿಸಿ ಮೂರನೆ ಅಂಗಳದಲ್ಲಿ ಬಾಗಿಲು-ಕಾಯುವುದರಲ್ಲಿ ತತ್ಪರರಾದ ವೃದ್ಧ ಬಾಲ ಸ್ತ್ರೀಯರನ್ನು ಕಂಡ.

ವರ್ಧಯಿತ್ವಾ ಪ್ರಹೃಷ್ಟಾಸ್ತಾಃ ಪ್ರವಿಶ್ಯ ಚ ಗೃಹಂ ಸ್ತ್ರಿಯಃ ।
ನ್ಯವೇದಯಂತ ತ್ವರಿತಾ ರಾಮಮಾತುಃ ಪ್ರಿಯಂ ತದಾ ॥೧೩॥

ಆ ದ್ವಾರಪಾಲಿಕೆಯರೆಲ್ಲರೂ ಬಲು ಹರ್ಷಗೊಂಡು ರಾಮನಿಗೆ ಜಯಕಾರ ಮಾಡಿ ಗೃಹದೊಳಗೆ ಪ್ರವೇಶಿಸಿ ಬೇಗನೆ ರಾಮಮಾತೆಗೆ ಪ್ರಿಯವಾದ ರಾಮನ ಆಗಮನವನ್ನು ತಿಳಿಸಿದರು.

ಕೌಸಲ್ಯಾಪಿ ತದಾ ದೇವೀ ರಾತ್ರಿಂ ಸ್ಥಿತ್ವಾ ಸಮಾಹಿತಾ ।
ಪ್ರಭಾತೇ ತ್ವಕರೋತ್ ಪೂಜಾಂ ವಿಷ್ಣೋಃ ಪುತ್ರಹಿತೈಷಿಣೀ ॥೧೪॥

ದೇವಿ ಕೌಸಲ್ಯೆ ಆಗ ರಾತ್ರಿ ಇಡಿ ಧ್ಯಾನಾಸಕ್ತಳಾಗಿದ್ದು ಬೆಳಗಾದಾಗ ಪುತ್ರ-ಹಿತೇಚ್ಛೆಯಿಂದ ವಿಷ್ಣುವಿಗೆ ಪೂಜೆಗೈದಳು.

ಸಾ ಕ್ಷೌಮವಸನಾ ಹೃಷ್ಟಾ ನಿತ್ಯಂ ವ್ರತಪರಾಯಣಾ ।
ಅಗ್ನಿಂ ಜುಹೋತಿ ಸ್ಮ ತದಾ ಮಂತ್ರವತ್ ಕೃತಮಂಗಲಾ ॥೧೫॥

ಕೌಸಲ್ಯೆ ಪಟ್ಟವಸ್ತ್ರ ಉಟ್ಟು ಸದಾ ಹರ್ಷದಿಂದ ವ್ರತನಿಷ್ಠಳಾಗಿ ಮಂಗಳಾ ಶಂಸನ ಮಾಡಿ ಮಂತ್ರಪೂರ್ವಕವಾಗಿ ಅಗ್ನಿಯಲ್ಲಿ ಹೋಮಮಾಡಿದಳು.

ಪ್ರವಿಶ್ಯ ಚ ತದಾ ರಾಮೋ ಮಾತುರಂತಃಪುರಂ ಶುಭಮ್ ।
ದದರ್ಶ ಮಾತರಂ ತತ್ರ ಹಾವಯಂತೀಂ ಹುತಾಶನಮ್ ॥೧೬॥

ಮಾತೆ ಕೌಸಲ್ಯೆಯ ಭವ್ಯವಾದ ಅಂತಃಪುರವನ್ನು ಶ್ರೀರಾಮನು ಪ್ರವೇಶಿಸಿ ಅಲ್ಲಿ ತಾಯಿ ಅಗ್ನಿಯಲ್ಲಿ ಹೋಮಿಸುತ್ತಿದ್ದುದನ್ನು ನೋಡಿದ.

'ಆಹುರಪ್ಯುತ್ತಮ ಸ್ತ್ರೀಣಾಮಧಿಕಾರಂ ತು ವೈದಿಕೇ'

ಎಂಬಂತೆ ಕೌಸಲ್ಯೆಯಂಥ ಉತ್ತಮ ಸ್ತ್ರೀಯರಿಗೆ ಮಂತ್ರಪೂರ್ವಕ ಹೋಮ ಮಾಡಲು ಅಧಿಕಾರ ಹಿಂದೆ ಇತ್ತು.

ದೇವಕಾರ್ಯನಿಮಿತ್ತಂ ಚ ತತ್ರಾಪಶ್ಯತ್ ಸಮುದ್ಯತಮ್ ।
ದಧ್ಯಕ್ಷತಘೃತಂ ಚೈವ ಮೋದಕಾನ್ ಹವಿಷಸ್ತಥಾ ॥೧೭॥

ಲಾಜಾನ್ ಮಾಲ್ಯಾನಿ ಶುಕ್ಲಾನಿ ಪಾಯಸಂ ಕೃಸರಂ ತಥಾ ।
ಸಮಿಧಃ ಪೂರ್ಣಕುಂಭಾಂಶ್ಚ ದದರ್ಶ ರಘುನಂದನಃ ॥೧೮॥

ದೇವಕಾರ್ಯಕ್ಕಾಗಿ ಸಿದ್ಧಪಡಿಸಿದ್ದ ವಸ್ತುಗಳನ್ನು ಅಲ್ಲಿ ಶ್ರೀರಾಮ ನೋಡಿದ. ಮೊಸರು ಅಕ್ಷತೆಕಾಳು, ತುಪ್ಪ ಮೋದಕ ಹವಿಸ್ಸುಗಳು ಅರಳು ಬಿಳಿಯಾದ ಮಾಲೆಗಳು, ಪಾಯಸ ಎಳ್ಳನ್ನ ಸಮಿತ್ತುಗಳು ಪೂರ್ಣಕಲಶಗಳು ಇವೆಲ್ಲವನ್ನೂ ಶ್ರೀರಾಮ ನೋಡಿದ.

ತಾಂ ಶುಕ್ಲಕ್ಷೌಮಸಂವೀತಾಂ ವ್ರತಯೋಗೇನ ಕರ್ಶಿತಾಮ್ ।
ತರ್ಪಯಂತೀಂ ದದರ್ಶಾದ್ಭಿರ್ದೇವತಾಂ ವರವರ್ಣಿನೀಮ್ ॥೧೯॥

ಒಳ್ಳೆಯ ಗೌರವರ್ಣದವಳಾದ ದೇವಿ ಉಪವಾಸವ್ರತಾನುಷ್ಠಾನದಿಂದ ಕೃಶಳಾಗಿದ್ದು ಬಿಳಿ ರೇಶಿಮೆಸೀರೆ ಉಟ್ಟು ನೀರಿನಿಂದ ಪರದೇವತೆಗೆ ತರ್ಪಣ ನೀಡುತ್ತಿದ್ದುದನ್ನು ಶ್ರೀರಾಮನು ನೋಡಿದ.

ಸಾ ಚಿರಸ್ಯಾತ್ಮಜಂ ದೃಷ್ಟ್ವಾ ಮಾತೃನಂದನಮಾಗತಮ್ ।
ಅಭಿಚಕ್ರಾಮ ಸಂಹೃಷ್ಟಾ ಕಿಶೋರಂ ಬಡಬಾ ಯಥಾ ॥೨೦॥

ಬೆಳಗಾದ ಬಹಳ ಹೊತ್ತಿನ ಮೇಲೆ ತಾಯಿಯರಿಗೆ ಎಲ್ಲರಿಗೂ ಪ್ರಿಯನಾದ ಪುತ್ರರಾಮನು ಬಂದುದನ್ನು ಕಂಡು ಕೌಸಲ್ಯೆ ಬಹಳ ಹರ್ಷಗೊಂಡು, ಮರಿಯನ್ನು ಕಂಡ ತಾಯಿ ಕುದುರೆಯಂತೆ, ಮುಂದೆ ಧಾವಿಸಿದಳು.

ಸ ಮಾತರಮಭಿಕ್ರಾಂತಾಮುಪಸಂಗೃಹ್ಯ ರಾಘವಃ ।
ಪರಿಷ್ವಕ್ತಶ್ಚ ಬಾಹುಭ್ಯಾಮುಪಘ್ರಾತಶ್ಚ ಮೂರ್ಧನಿ ॥೨೧॥

ತನ್ನ ಬಳಿಗೆ ಧಾವಿಸಿ ಬಂದ ತಾಯಿಗೆ ಶ್ರೀರಾಮನು ಉಪಸಂಗ್ರಹಣಪೂರ್ವಕ ಅಭಿವಾದನ ಮಾಡಿದಾಗ ತಾಯಿ ಅವನನ್ನು ಎರಡೂ ತೋಳುಗಳಿಂದ ತಬ್ಬಿಕೊಂಡು ನೆತ್ತಿಯನ್ನು ಆಘ್ರಾಣಿಸಿದಳು.

ತಮುವಾಚ ದುರಾಧರ್ಷಂ ರಾಘವಂ ಸುತಮಾತ್ಮನಃ ।
ಕೌಸಲ್ಯಾ ಪುತ್ರವಾತ್ಸಲ್ಯಾದಿದಂ ಪ್ರಿಯಹಿತಂ ವಚಃ ॥೨೨॥

ಯಾರಿಗೂ ಮಣಿಸಲಾಗದ ತನ್ನ ಪುತ್ರನಾದ ರಾಮನಿಗೆ ಪುತ್ರವಾತ್ಸಲ್ಯದಿಂದ ಕೌಸಲ್ಯೆ ಪ್ರಿಯವಾದ ಹಿತವಾದ ಮಾತನ್ನಾಡಿದಳು.

ವೃದ್ಧಾನಾಂ ಧರ್ಮಶೀಲಾನಾಂ ರಾಜರ್ಷೀಣಾಂ ಮಹಾತ್ಮನಾಮ್ ।
ಪ್ರಾಪ್ನುಹ್ಯಾಯುಶ್ಚ ಕೀರ್ತಿಂ ಚ ಧರ್ಮಂ ಚಾಪ್ಯುಚಿತಂ ಕುಲೇ ॥೨೩॥

'ವೃದ್ಧರಾದ ಧರ್ಮಶೀಲರಾದ ಮಹಾತ್ಮರಾದ ರಾಜರ್ಷಿಗಳ ಕುಲಕ್ಕೆ ಉಚಿತವಾದ ಆಯುಷ್ಯವನ್ನೂ ಕೀರ್ತಿಯನ್ನೂ ಧರ್ಮವನ್ನೂ ನೀನು ಹೊಂದು.'

ಸತ್ಯಪ್ರತಿಜ್ಞಂ ಪಿತರಂ ರಾಜಾನಂ ಪಶ್ಯ ರಾಘವ ।
ಅದ್ಯೈವ ಹಿ ತ್ವಾಂ ಧರ್ಮಾತ್ಮಾ ಯೌವರಾಜ್ಯೇಭಿಷೇಕ್ಷ್ಯತಿ ॥೨೪॥

'ರಾಮ, ತಂದೆಯಾದ ರಾಜನೆಷ್ಟು ಸತ್ಯಪ್ರತಿಜ್ಞನೆನ್ನುವುದನ್ನು ನೋಡು, ಇಂದೇ ಧರ್ಮಾತ್ಮನಾದ ಅವನು ನಿನ್ನನ್ನು ಯುವರಾಜ ಪದವಿಯಲ್ಲಿ ಅಭಿಷೇಕ ಮಾಡುವನು.'

ದತ್ತಮಾಸನಮಾಲಭ್ಯ ಭೋಜನೇನ ನಿಮಂತ್ರಿತಃ ।
ಮಾತರಂ ರಾಘವಃ ಕಿಂಚಿತ್ ಪ್ರಸಾರ್ಯಾಂಜಲಿಮಬ್ರವೀತ್ ॥೨೫॥

ತಾಯಿ ತನ್ನನ್ನು ಭೋಜನಕ್ಕೆ ಕರೆದು ಆಸನ ನೀಡಿದಾಗ ಶ್ರೀರಾಮ ಆಸನವನ್ನು ಕೇವಲ ಸ್ಪರ್ಶಿಸಿ ಸ್ವಲ್ಪ ತಲೆ ತಗ್ಗಿಸಿ ಕೈಬೊಗಸೆಯನ್ನು ಮುಂದೆ ಮಾಡಿ ತಾಯಿಗೆ ನುಡಿದ.

ಸ ಸ್ವಭಾವವಿನೀತಶ್ಚ ಗೌರವಾಚ್ಚ ತದಾನತಃ ।
ಪ್ರಸ್ಥಿತೋ ದಂಡಕಾರಣ್ಯಮಾಪ್ರಷ್ಟುಮುಪಚಕ್ರಮೇ ॥೨೬॥

ದಂಡಕಾರಣ್ಯಕ್ಕೆ ಹೊರಟಿದ್ದ ಶ್ರೀರಾಮನು ಸ್ವಭಾವತಃ ವಿನಯಶಾಲಿಯಾದ್ದರಿಂದ ಮಾತೆಯಲ್ಲಿ ಗೌರವವೂ ಇದ್ದುದರಿಂದ ಬಗ್ಗಿ ಅನುಜ್ಞೆ ಕೇಳಲು ತೊಡಗಿದ.

ದೇವಿ ನೂನಂ ನ ಜಾನೀಷೇ ಮಹದ್ಭಯಮುಪಸ್ಥಿತಮ್ ।
ಇದಂ ತವ ಚ ದುಃಖಾಯ ವೈದೇಹ್ಯಾ ಲಕ್ಷ್ಮಣಸ್ಯ ಚ ॥೨೭॥

ದೇವಿ, ಸರ್ವಥಾ ನೀನರಿಯೆ, ಮಹಾಭಯ ಈಗ ಸನ್ನಿಹಿತವಾಗಿದೆ. ಇದು ನಿನಗೂ ಸೀತೆಗೂ ಲಕ್ಷ್ಮಣನಿಗೂ ದುಃಖಕರವಾಗಿದೆ.

ಗಮಿಷ್ಯೇ ದಂಡಕಾರಣ್ಯಂ ಕಿಮನೇನಾಸನೇನ ಮೇ ।
ವಿಷ್ಟರಾಸನಯೋಗ್ಯೋ ಹಿ ಕಾಲೋಽಯಂ ಮಾಮುಪಸ್ಥಿತಃ ॥೨೮॥

ನಾನು ದಂಡಕಾರಣ್ಯದಲ್ಲಿ ವಾಸಮಾಡಲು ಹೋಗುತ್ತಿದ್ದೇನೆ. ಈ ಆಸನದಿಂದ ನನಗೇನು ಪ್ರಯೋಜನ? ದರ್ಭಾಸನದಲ್ಲಿ ಕುಳಿತುಕೊಳ್ಳಲು ಯೋಗ್ಯವಾದ ಕಾಲ ನನಗೆ ಬಂದಿದೆ.

ಚತುರ್ದಶ ಹಿ ವರ್ಷಾಣಿ ವತ್ಸ್ಯಾಮಿ ವಿಜನೇ ವನೇ ।
ಕಂದಮೂಲಫಲೈರ್ಜೀವನ್ ಹಿತ್ವಾ ಮುನಿವದಾಮಿಷಮ್ ॥೨೯॥

ಹದಿನಾಲ್ಕು ವರ್ಷಕಾಲ ನಿರ್ಜನವಾದ ಅರಣ್ಯದಲ್ಲಿ ವಾಸಮಾಡಲಿದ್ದೇನೆ. ಸಿದ್ಧಪಡಿಸಿದ ಪಕ್ವಾನ್ನಗಳನ್ನು ಭಕ್ಷ್ಯಭೋಜ್ಯಗಳನ್ನು ತೊರೆದು, ಮುನಿಗಳಂತೆ ಗಡ್ಡೆಗೆಣಸು ಹಣ್ಣುಗಳಿಂದಲೆ ಜೀವನ ಸಾಗಿಸಲಿದ್ದೇನೆ.

ಭರತಾಯ ಮಹಾರಾಜೋ ಯೌವರಾಜ್ಯಂ ಪ್ರಯಚ್ಛತಿ ।
ಮಾಂ ಪುನರ್ದಂಡಕಾರಣ್ಯೇ ವಿವಾಸಯತಿ ತಾಪಸಮ್ ॥೩೦॥

ಮಹಾರಾಜನು ಭರತನಿಗೆ ಯುವರಾಜ ಪದವಿಯನ್ನು ನೀಡುತ್ತಿದ್ದಾನೆ. ನನ್ನನ್ನು ತಾಪಸನನ್ನಾಗಿ ಮಾಡಿ ದಂಡಕಾರಣ್ಯಕ್ಕೆ ಕಳಿಸುತ್ತಿದ್ದಾನೆ.

ಸ ಷಟ್ ಚಾಷ್ಟೌ ಚ ವರ್ಷಾಣಿ ವತ್ಸ್ಯಾಮಿ ವಿಜನೇ ವನೇ ।
ಆಸೇವಮಾನೋ ವನ್ಯಾನಿ ಫಲಮೂಲೈಶ್ಚ ವರ್ತಯನ್ ॥೩೧॥

ಹದಿನಾಲ್ಕು ವರ್ಷಕಾಲ ನಿರ್ಜನಾರಣ್ಯದಲ್ಲಿ ನಾನು ವಾಸಮಾಡುತ್ತೇನೆ. ಫಲ-ಮೂಲಗಳಿಂದ ಬದುಕುತ್ತಾ ಕಾಡಿನಲ್ಲಿ ಲಭ್ಯವಿರುವ ಸುಖಗಳನ್ನೇ ಅನುಭವಿಸುತ್ತೇನೆ.

ಸಾ ನಿಕೃತ್ತೇವ ಸಾಲಸ್ಯ ಯಷ್ಟಿಃ ಪರಶುನಾ ವನೇ ।
ಪಪಾತ ಸಹಸಾ ದೇವೀ ದೇವತೇವ ದಿವಶ್ಚ್ಯುತಾ ॥೩೨॥

ಕಾಡಿನಲ್ಲಿ ಕೊಡಲಿ ಏಟಿಗೆ ಕಡಿದು ಬೀಳುವ ಮತ್ತಿಗಿಡದ ರೆಂಬೆಯಂತೆ, ಅಂತರಿಕ್ಷದಿಂದ ಬಿದ್ದ ದೇವತೆಯಂತೆ ದೇವಿ ಕೌಸಲ್ಯೆ ಒಡನೆ ನೆಲದಲ್ಲಿ ಬಿದ್ದಳು.

ತಾಮದುಃಖೋಚಿತಾಂ ದೃಷ್ಟ್ವಾ ಪತಿತಾಂ ಕದಲೀಮಿವ ।
ರಾಮಸ್ತೂತ್ಥಾಪಯಾಮಾಸ ಮಾತರಂ ಗತಚೇತಸಮ್ ॥೩೩॥

ಬಾಳೆಗಿಡದಂತೆ ಬಿದ್ದು ಮೂರ್ಛಿತಳಾದ, ಇಂಥ ದುಃಖಕ್ಕೆ ತಕ್ಕವಳಲ್ಲದ ತಾಯಿಯನ್ನು ಶ್ರೀರಾಮ ಎಬ್ಬಿಸಿದ.

ಉಪಾವೃತ್ಯೋತ್ಥಿತಾಂ ದೀನಾಂ ಬಡಬಾಮಿವ ವಾಹಿತಾಮ್।
ಪಾಂಸುಕುಂಠಿತಸರ್ವಾಂಗೀಂ ವಿಮಮರ್ಶ ಚ ಪಾಣಿನಾ ॥೩೪॥

ಭಾರವನ್ನು ಹೊರಿಸಿದ್ದರಿಂದ ಆಯಾಸಗೊಂಡು ನೆಲದಲ್ಲಿ ಹೊರಳಿ ಎದ್ದ ಹೆಣ್ಣುಕುದುರೆಯಂತೆ, ಮೈಎಲ್ಲ ಧೂಳಾಗಿದ್ದ ದೇವಿಯನ್ನು ಶ್ರೀರಾಮ ಕೈಯಿಂದ ಮೈದಡವಿದ.

ಸ ರಾಘವಮುಪಾಸೀನಮದುಃಖಾರ್ಹಾ ಸುಖೋಚಿತಾ ।
ಉವಾಚ ಪುರುಷವ್ಯಾಘ್ರಮುಪಶೃಣ್ವತಿ ಲಕ್ಷ್ಮಣೇ ॥೩೫॥

ದುಃಖಕ್ಕೆ ತಕ್ಕವಳಲ್ಲದೆ, ಕೇವಲ ಸುಖಕ್ಕೇ ತಕ್ಕವಳಾಗಿದ್ದ, ಆ ಕೌಸಲ್ಯೆ, ಬಳಿಯಲ್ಲಿ ಕುಳಿತ ಶ್ರೀರಾಮನಿಗೆ ನುಡಿದಳು. ಅದನ್ನು ಬಳಿಯಲ್ಲಿ ಲಕ್ಷ್ಮಣನೂ ಆಲಿಸುತ್ತಿದ್ದ.

ಯದಿ ಪುತ್ರ ನ ಜಾಯೇಥಾ ಮಮ ಶೋಕಾಯ ರಾಘವ ।
ನ ಸ್ಮ ದುಃಖಮತೋ ಭೂಯಃ ಪಶ್ಯೇಯಮಹಮಪ್ರಜಾಃ ॥೩೬॥

ಮಗು, ರಾಮ, ನನ್ನ ಶೋಕಕ್ಕೆ ಕಾರಣನಾಗಿ ನೀನು ಹುಟ್ಟದೇ ಇರುತ್ತಿದ್ದರೆ, ಮಕ್ಕಳಿಲ್ಲದವಳು ನಾನು, ಅದಕ್ಕಿಂತ ಹೆಚ್ಚಿನದಾದ ಇಂಥ ದುಃಖವನ್ನು ಕಾಣುತ್ತಿರಲಿಲ್ಲ.

ಏಕ ಏವ ಹಿ ವಂಧ್ಯಾಯಾಃ ಶೋಕೋ ಭವತಿ ಮಾನಸಃ ।
ಅಪ್ರಜಾಸ್ಮೀತಿ ಸಂತಾಪೋ ನ ಹ್ಯನ್ಯಃ ಪುತ್ರ ವಿದ್ಯತೇ ॥೩೭॥

ಮಗು, ಬಂಜೆಗೆ ತಾನು ಮಕ್ಕಳಿಲ್ಲದವಳೆಂದು ಒಂದೇ ಒಂದು ದುಃಖ ಮನಸ್ಸಿನಲ್ಲಿರುತ್ತದೆ. ಬೇರೆ ದುಃಖವಿರುವುದಿಲ್ಲ.

ನ ದೃಷ್ಟಪೂರ್ವಂ ಕಲ್ಯಾಣಂ ಸುಖಂ ವಾ ಪತಿಪೌರುಷೇ ।
ಅಪಿ ಪುತ್ರೇ ತು ಪಶ್ಯೇಯಮಿತಿ ರಾಮಾಸ್ಥಿತಂ ಮಯಾ ॥೩೮॥

ರಾಮ, ಈಗ ನನಗೆ ಸದಾ ದುಃಖವೆ ಎಂದಾಯಿತು. ಹಿಂದೆ ನಾನು ಪತಿ-ಸೌಭಾಗ್ಯದಿಂದ ಉಂಟಾಗಬಹುದಾದ ಯಾವ ವೈಭೋಗವನ್ನಾಗಲಿ ಸುಖವನ್ನಾಗಲಿ ಕಂಡಿಲ್ಲ. ಮಗು ಒಂದು ಹುಟ್ಟಿದ ಮೇಲಾದರೂ ಆ ಸುಖವೈಭೋಗಗಳನ್ನು ಎರಡನ್ನೂ ಪಡೆವೆನೆಂದುಕೊಂಡಿದ್ದೆ.

ಸಾ ಬಹೂನ್ಯಮನೋಜ್ಞಾನಿ ವಾಕ್ಯಾನಿ ಹೃದಯಚ್ಛಿದಾಮ್ ।
ಅಹಂ ಶ್ರೋಷ್ಯೇ ಸಪತ್ನೀನಾಮವರಾಣಾಂ ವರಾ ಸತೀ ॥೩೯॥

ಈಗ ನೋಡು, ನೀನು ಹುಟ್ಟಿದ್ದರಿಂದ ಇಂದಿನವರೆಗೆ ಸವತಿಯರಿಗಿಂತ ಹೆಚ್ಚು ಮೆರೆಯುತ್ತಿದ್ದವಳು ನಾನು, ಇನ್ನು ಮುಂದೆ ನೀನು ಕಾಡಿಗೆ ಹೋದಮೇಲೆ, ಕಿರಿಯರಾದ ಆ ಸವತಿಯರು ಆಡುವ ಎದೆ ಹಿಂಡುವ ಕಟುನುಡಿಗಳನ್ನು ಬಹುವಾಗಿ ಕೇಳಬೇಕಾಗಿದೆ.

ಅತೋ ದುಃಖತರಂ ಕಿಂ ನು ಪ್ರಮದಾನಾಂ ಭವಿಷ್ಯತಿ ।
ಮಮ ಶೋಕೋ ವಿಲಾಪಶ್ಚ ಯಾದೃಶೋऽಯಮನಂತಕಃ ॥೪೦॥

ಇನ್ನು ನನ್ನ ಶೋಕಕ್ಕೆ ವಿಲಾಪಕ್ಕೆ ಕೊನೆಯೆ ಇಲ್ಲ. ಇದಕ್ಕಿಂತ ಹೆಚ್ಚಿನ ದುಃಖ ಒಂದು ಸ್ತ್ರೀಯರಿಗೆ ಏನಿದ್ದೀತು?

ತ್ವಯಿ ಸಂನಿಹಿತೇಪ್ಯೇವಮಹಮಾಸಂ ನಿರಾಕೃತಾ ।
ಕಿಂ ಪುನಃ ಪ್ರೋಷಿತೇ ತಾತ ಧ್ರುವಂ ಮರಣಮೇವ ಮೇ ॥೪೧॥

ನೀನು ಬಳಿಯಲ್ಲಿ ಇದ್ದಾಗಲೂ ನನಗೆ ಸವತಿಯರಿಂದ ಅಪಮಾನವಾಗುತ್ತಲೇ ಇತ್ತು. ಇನ್ನು ನೀನು ದೂರಹೋದಾಗ, ಮಗು, ನನಗೆ ಸಾವು ನಿಶ್ಚಿತ.

ಅತ್ಯಂತಂ ನಿಗೃಹೀತಾಸ್ಮಿ ಭರ್ತುರ್ನಿತ್ಯಮಸಂಮತಾ ।
ಪರಿವಾರೇಣ ಕೈಕೇಯ್ಯಾಃ ಸಮಾ ವಾಪ್ಯಥವಾವರಾ ॥೪೨॥

ನಾನು ಪತಿಗೆ ಎಂದೂ ಬೇಡವಾದವಳು. ಅದರಿಂದ ಕೈಕೇಯಿಯ ದಾಸಿಯರಿಗೆ ನಾನು ಸಮಾನಳಾಗಿ ಅಥವಾ ಕಡಿಮೆಯವಳಾಗಿ ಬಹಳ ತಿರಸ್ಕಾರಕ್ಕೊಳಗಾಗಿದ್ದೇನೆ.

ಯೋ ಹಿ ಮಾಂ ಸೇವತೇ ಕಶ್ಚಿದಥವಾಪ್ಯನುವರ್ತತೇ ।
ಕೈಕೇಯ್ಯಾಃ ಪುತ್ರಮನ್ವೀಕ್ಷ್ಯ ಸ ಜನೋ ನಾಭಿಭಾಷತೇ ॥೪೩॥

ನನ್ನನ್ನು ಸೇವಿಸುವವನು ಅಥವಾ ನಾನು ಹೇಳಿದಂತೆ ಕೇಳುವವನು ಕೂಡ

ಕೈಕೇಯಿಯ ಮಗನನ್ನು ಬಳಿಯಲ್ಲಿ ಕಂಡರೆ ಸಾಕು ನನ್ನೊಂದಿಗೆ ಮಾತನ್ನೂ ಆಡುವುದಿಲ್ಲ.

ನಿತ್ಯಕ್ರೋಧತಯಾ ತಸ್ಯಾಃ ಕಥಂ ನು ಖರವಾದಿ ತತ್ ।
ಕೈಕೇಯ್ಯಾ ವದನಂ ದ್ರಷ್ಟುಂ ಪುತ್ರ ಶಕ್ಷ್ಯಾಮಿ ದುರ್ಗತಾ ॥೪೪॥

ನನ್ನಲ್ಲಿ ಸದಾ ಕೋಪಿಸಿಕೊಳ್ಳುವ ನಿಷ್ಠುರಮಾತನ್ನೆ ಆಡುವ ಕೈಕೇಯಿಯ ಮುಖವನ್ನು ದುಃಸ್ಥಿತಿಯಲ್ಲಿರುವ ನಾನು ಇನ್ನುಮುಂದೆ ನೋಡಲೂ ಶಕ್ತಳಾಗಲಾರೆ, ಮಗು.

ದಶ ಸಪ್ತ ಚ ವರ್ಷಾಣಿ ತವ ಜಾತಸ್ಯ ರಾಘವ ।
ಆಸಿತಾನಿ ಪ್ರಕಾಂಕ್ಷಂತ್ಯಾ ಮಯಾ ದುಃಖಪರಿಕ್ಷಯಮ್ ॥೪೫॥

ನಿನಗೆ ಅಭಿಷೇಕವಾಗಲಿ ನನ್ನೆಲ್ಲ ದುಃಖಕ್ಕೆ ಕೊನೆಯಾಗಲೆಂದು ನಾನು ಆಸೆ-ಯಿಂದ ನಿರೀಕ್ಷಿಸುತ್ತಿದ್ದಂತೆಯೇ ನೀನು ಹುಟ್ಟಿ ಹದಿನೇಳು ವರ್ಷಗಳೆ ಕಳೆದುವು.

ಶ್ರೀರಾಮ ವಿಶ್ವಾಮಿತ್ರನೊಂದಿಗೆ ಮಿಥಿಲೆಗೆ ಹೊರಡುವಾಗ–

ಊನಷೋಡಶ ವರ್ಷೋ ಮೇ ರಾಮೋ ರಾಜೀವಲೋಚನಃ ।
(ಬಾಲ.20.21)

ಎಂದು ದಶರಥ ಹೇಳುವಂತೆ, ಹದಿನೈದು ವರ್ಷವೆಂದಿಟ್ಟುಕೊಂಡರೆ,

ಉಷಿತ್ವಾ ದ್ವಾದಶ ಸಮಾ ಇಕ್ಷ್ವಾಕೂಣಾಂ ನಿವೇಶನೇ ॥ (ಅರ.47.4)

ಎಂದು ಸೀತೆ ರಾವಣ ಸನ್ಯಾಸಿಗೆ ಹೇಳುವಂತೆ ಅವಳು ರಾಮನೊಂದಿಗೆ ಹನ್ನೆರಡು ವರ್ಷ ಅಯೋಧ್ಯೆಯಲ್ಲಿದ್ದಿದ್ದರಿಂದ ಈಗ ರಾಮನಿಗೆ ಇಪ್ಪತ್ತೇಳು ವರ್ಷ ವಯಸ್ಸು. ಸಂಗ್ರಹರಾಮಾಯಣದಲ್ಲಿ 'ಯಾಃ ಸಪ್ತವಿಂಶತಿ ಸಮಾಃ' (ಅಯೋ.5.9) 'ರಾಮ, ನೀನು ಹುಟ್ಟಿ ಇಪ್ಪತ್ತೇಳು ವರ್ಷಗಳಾದವು' ಎಂದೇ ಕೌಸಲ್ಯೆ ಹೇಳುತ್ತಾಳೆ. ವಾಲ್ಮೀಕಿಯ ಕೌಸಲ್ಯೆ ಹದಿನೇಳು ವಯಸ್ಸೆನ್ನುತ್ತಿದ್ದಾಳೆ! ಈ ಸಮಸ್ಯೆಗೆ ಪರಿಹಾರ ಹೀಗೆ—

ಬಾಲೋ ದ್ವಾದಶವರ್ಷೋऽಯಂ ಅಕೃತಾಸ್ತ್ರಶ್ಚ ರಾಘವಃ । (ಅರ.38.6)

ಎಂದು ಮಾರೀಚನು ರಾವಣನಿಗೆ ಭಯ ಹುಟ್ಟಿಸಲು ಶ್ರೀರಾಮ ವಿಶ್ವಾಮಿತ್ರನ ಜೊತೆಗೆ ಇದ್ದಾಗ ಹನ್ನೆರಡು ವರ್ಷದವನಾಗಿದ್ದ ಎಂದರೂ ಆಗ ವಸ್ತುತಃ ಹದಿನೈದು

ವರ್ಷದವನಾಗಿದ್ದ. 'ಊನಷೋಡಶ ವರ್ಷಃ' ಎಂಬ ದಶರಥನ ಮಾತಿಗೆ ಹದಿನೈದು ವರ್ಷದವನೆಂದರ್ಥ. ಸೀತೆಯೊಂದಿಗೆ ರಾಮ ಹನ್ನೆರಡು ವರ್ಷಕಾಲ ಅಯೋಧ್ಯೆಯಲ್ಲಿ ವಿಹಾರ ಮಾಡಿದ್ದರಿಂದ ಅವನು ಈಗ ಇಪ್ಪತ್ತೇಳು ವರ್ಷದವನು.

ಮಮ ಭರ್ತಾ ಮಹಾತೇಜಾ ವಯಸಾ ಪಂಚವಿಂಶಕಃ । (ಅರ.47.10)

ಎಂದು ಸೀತೆ ರಾಮನ ವಯಸ್ಸು ವನವಾಸ ಪ್ರಾರಂಭದಲ್ಲಿ ಇಪ್ಪತ್ತೈದು ಇತ್ತೆಂದು ರಾವಣಸನ್ಯಾಸಿಗೆ ಹೇಳಿದ್ದು ಇವಾರ್ಥ'ಕನ್' ಪ್ರತ್ಯಯವಿರುವುದರಿಂದ 'ಇಪ್ಪತ್ತೈದರಂತೆ' ಚರಯೌವ್ವನ ಉಳ್ಳವನೆಂಬ ಅರ್ಥದಲ್ಲಿ ಸರಿಯಾಗುತ್ತದೆ.

ಅದರಿಂದ ಕೌಸಲ್ಯೆ 'ಹದಿನೇಳು' ಎನ್ನುವುದು ಉಪನಯನಾನಂತರದ ವಯಸ್ಸೆಂದಿಟ್ಟುಕೊಳ್ಳಬೇಕು. ಗರ್ಭೈಕಾದಶ ಅಂದರೆ ಹತ್ತುವರ್ಷ ವಯಸ್ಸಿನಲ್ಲಿ ಉಪನಯನವಾಗಿತ್ತು. 'ಗರ್ಭೈಕಾದಶೇಷು ರಾಜನ್ಯಂ' ಎಂದು ಕ್ಷತ್ರಿಯರಿಗೆ ವಿಹಿತವಾಗಿದೆ. ಉಪನಯನವು ದ್ವಿಜರಿಗೆ ದ್ವಿತೀಯ ಜನ್ಮ. ಈ ಅಭಿಪ್ರಾಯದಿಂದ 'ತವ ಜಾತಸ್ಯ' ಎಂದಿದ್ದಾಳೆ ಕೌಸಲ್ಯೆ. ಉಪನಯನಾನಂತರವೇ ಮಕ್ಕಳಲ್ಲಿ ಬೆಳವಣಿಗೆ ಕಾಣುವುದರಿಂದ ಕೌಸಲ್ಯೆ ಆ ಅಭಿಪ್ರಾಯದಿಂದ ಹೇಳಿದಳೆಂದಿಟ್ಟುಕೊಳ್ಳಬೇಕು.

ತದಕ್ಷಯಮಹಂ ದುಃಖಂ ನೋತ್ಸಹೇ ಸಹಿತುಂ ಚಿರಮ್ ।
ವಿಪ್ರಕಾರಂ ಸಪತ್ನೀನಾಮೇವಂ ಜೀರ್ಣಾಪಿ ರಾಘವ ॥೪೬॥

ಮಗು, ನಾನೀಗ ವೃದ್ಧೆಯೂ ಆಗಿರುವುದರಿಂದ ಅಕ್ಷಯವಾದ ಈ ನಿನ್ನ ವಿಯೋಗ ದುಃಖವನ್ನು ಚಿರಕಾಲ ಸಹಿಸಿಕೊಂಡಿರಲು ನನ್ನಿಂದಾಗುವುದಿಲ್ಲ. ಸವತಿಯರು ಮಾಡುವ ಹಿಂಸೆಯನ್ನೂ ತಾಳಲಾರೆ.

ಅಪಶ್ಯಂತೀ ತವ ಮುಖಂ ಪರಿಪೂರ್ಣಶಶಿಪ್ರಭಮ್ ।
ಕೃಪಣಾ ವರ್ತಯಿಷ್ಯಾಮಿ ಕಥಂ ಕೃಪಣಜೀವಿಕಾಮ್ ॥೪೭॥

ಪರಿಪೂರ್ಣನಾದ ಚಂದ್ರನಂತೆ ಹೊಳೆವ ನಿನ್ನ ಮುಖವನ್ನು ನೋಡದೆ ದೀನಳಾಗುವ ನಾನು ದೈನ್ಯದ ಜೀವನವನ್ನು ಹೇಗೆ ನಡೆಸಲಿ?

ಉಪವಾಸೈಶ್ಚ ಯೋಗೈಶ್ಚ ಬಹುಭಿಶ್ಚ ಪರಿಶ್ರಮೈಃ ।
ದುಃಖಂ ಸಂವರ್ಧಿತೋ ಮೋಘಂ ತ್ವಂ ಹಿ ದುರ್ಗತಯಾ ಮಯಾ॥೪೮॥

ನೀನು ಕಾಡಿಗೆ ಹೋದರೆ ಉಪವಾಸಗಳಿಂದ ಧ್ಯಾನಗಳಿಂದ ಬಹಳ ಶರೀರಾಯಾಸಗಳಿಂದ ದುರ್ಭಾಗ್ಯಳಾದ ನಾನು ನಿನ್ನನ್ನು ಕಷ್ಟದಿಂದ ಬೆಳೆಸಿದ್ದು ವ್ಯರ್ಥವಾಗುವುದು.

ಸ್ಥಿರಂ ತು ಹೃದಯಂ ಮನ್ಯೇ ಮಮೇದಂ ಯನ್ನ ದೀರ್ಯತೇ ।
ಪ್ರಾವೃಷೀವ ಮಹಾನದ್ಯಾಃ ಸ್ಪೃಷ್ಟಂ ಕೂಲಂ ನವಾಂಭಸಾ ॥೪೯॥

ಮಳೆಗಾಲದಲ್ಲಿ ಹೊಸ ನೀರಿನ ಹೊಡೆತದಿಂದ ಮಹಾನದಿಯ ತೀರ ಬಿರಿಯು-ವಂತೆ, ನಿನ್ನ ವಿಯೋಗ ದುಃಖದಿಂದ ನನ್ನೆದೆ ಬಿರಿಯುತ್ತಿಲ್ಲ ಎಂದರೆ ನನ್ನೆದೆ ಬಲು ಗಟ್ಟಿ ಎಂದುಕೊಳ್ಳುತ್ತೇನೆ.

ಮಮೈವ ನೂನಂ ಮರಣಂ ನ ವಿದ್ಯತೇ
ನ ಚಾವಕಾಶೋಽಸ್ತಿ ಯಮಕ್ಷಯೇ ಮಮ ।
ಯದಂತಕೋಽದ್ಯೈವ ನ ಮಾಂ ಜಿಹೀರ್ಷತಿ
ಪ್ರಸಹ್ಯ ಸಿಂಹೋ ರುದತೀಂ ಮೃಗೀಮಿವ ॥೫೦॥

ನನಗೆ ನಿಶ್ಚಯವಾಗಿ ಸಾವೇ ಇಲ್ಲ. ಯಮಸದನದಲ್ಲಿ ನನಗೆ ಜಾಗವಿಲ್ಲ. ರೋದಿಸುವ ಹೆಣ್ಣುಜಿಂಕೆಯನ್ನು ಸಿಂಹವು ಬಲಾತ್ಕಾರವಾಗಿ ಸೆಳೆದೊಯ್ಯುತ್ತದೆ. ಆದರೆ ಯಮನು ನನ್ನನ್ನು ಸೆಳೆದೊಯ್ಯುತ್ತಿಲ್ಲ.

ಸ್ಥಿರಂ ಹಿ ನೂನಂ ಹೃದಯಂ ಮಮಾಯಸಂ
ನ ಭಿದ್ಯತೇ ಯದ್ಭುವಿ ನಾವದೀರ್ಯತೇ ।
ಅನೇನ ದುಃಖೇನ ಚ ದೇಹಮರ್ಪಿತಂ
ಧ್ರುವಂ ಹ್ಯಕಾಲೇ ಮರಣಂ ನ ವಿದ್ಯತೇ ॥೫೧॥

ನನ್ನೆದೆ ನಿಶ್ಚಯವಾಗಿ ಉಕ್ಕಿನಿಂದಾದುದು. ಇಂಥ ದುಃಖದಿಂದ ತುಂಬಿ ನೆಲದಲ್ಲಿ ಬಿದ್ದರೂ ದೇಹ ಒಡೆಯುತ್ತಿಲ್ಲ, ಭಾಗವಾಗುತ್ತಿಲ್ಲ. ನಿಶ್ಚಯವಾಗಿ ಯಾರಿಗೂ ಅಕಾಲದಲ್ಲಿ ಮರಣವೆಂಬುದೆ ಇಲ್ಲ.

ಇದಂ ತು ದುಃಖಂ ಯದನರ್ಥಕಾನಿ ಮೇ
ವ್ರತಾನಿ ದಾನಾನಿ ಚ ಸಂಯಮಾಶ್ಚ ಹಿ ।
ತಪಶ್ಚ ತಪ್ತಂ ಯದಪತ್ಯಕಾರಣಾತ್
ಸುನಿಷ್ಫಲಂ ಬೀಜಮಿವೋಪ್ತಮೂಷರೇ ॥೫೨॥

ಪುತ್ರಸುಖಕ್ಕಾಗಿ ನಾನು ಮಾಡಿದ ವ್ರತ ದಾನ ಇಂದ್ರಿಯನಿಗ್ರಹಗಳು ನಾನು ಮಾಡಿದ ತಪಸ್ಸು ಎಲ್ಲವೂ ಬಂಜರುಭೂಮಿಯಲ್ಲಿ ಬೀಜ ಬಿತ್ತಿದಂತೆ ನಿಷ್ಫಲ-ವಾದುವು ಮಾತ್ರವಲ್ಲ. ಅನರ್ಥಕ್ಕೇ ಕಾರಣವಾದುವು. ಅದರಿಂದ ನನಗೆ ಈ ದುಃಖ ಬಂದಿತು.

ಯದಿ ಹ್ಯಕಾಲೇ ಮರಣಂ ಸ್ವಯೇಚ್ಛಯಾ
ಲಭೇತ ಕಶ್ಚಿದ್ಗುರುದುಃಖಕರ್ಶಿತಃ ।
ಗತಾಹಮದ್ಯೈವ ಪರೇತಸಂಸದಂ
ವಿನಾ ತ್ವಯಾ ಧೇನುರಿವಾತ್ಮಜೇನ ವೈ ॥೫೩॥

ಮಹಾದುಃಖದಿಂದ ಸೊರಗುವವನು ಯಾರಾದರೂ ಅಕಾಲ ಮರಣವನ್ನು ಸ್ವೇಚ್ಛೆಯಿಂದ ಪಡೆಯುವುದು ಶಕ್ಯವಿರುತ್ತಿದ್ದರೆ ನಾನು ಮಗನಾದ ನಿನ್ನನ್ನು ಅಗಲುತ್ತಿರುವವಳು ಕರುವನ್ನಗಲಿದ ಹಸುವಿನಂತೆ ಇಂದೇ ಯಮಸದನಕ್ಕೆ ಹೋಗಿ ಬಿಡುತ್ತಿದ್ದೆ.

ಅಥಾಪಿ ಕಿಂಜೀವಿತಮದ್ಯ ಮೇ ವೃಥಾ
ತ್ವಯಾ ವಿನಾ ಚಂದ್ರನಿಭಾನನಪ್ರಭ ।
ಅನುವ್ರಜಿಷ್ಯಾಮಿ ವನಂ ತ್ವಯೈವ ಗೌಃ
ಸುದುರ್ಬಲಂ ವತ್ಸಮಿವಾನುಕಾಂಕ್ಷಯಾ ॥೫೪॥

ಚಂದ್ರನಂತೆ ಹೊಳೆವ ಮುಖಕಾಂತಿಯುಳ್ಳ ರಾಮನೆ, ಇಂದು ನೀನಿಲ್ಲದ ಕೆಟ್ಟ ಜೀವನದಿಂದ ನನಗೇನೂ ಫಲವಿಲ್ಲ. ಕರುವನ್ನು ಪ್ರೀತಿಯಿಂದ ಹಿಂಬಾಲಿಸುವ ಹಸುವಿನಂತೆ ಅತಿ ದುರ್ಬಲಳಾದ ನಾನು ನಿನ್ನೊಂದಿಗೇ ಹಿಂಬಾಲಿಸಿ ಕಾಡಿಗೆ ನಡೆಯುತ್ತೇನೆ.

ಭೃಶಮಸುಖಮಮರ್ಷಿತಾ ತದಾ
ಬಹು ವಿಲಲಾಪ ಸಮೀಕ್ಷ್ಯ ರಾಘವಮ್ ।
ವ್ಯಸನಮುಪನಿಶಾಮ್ಯ ಸಾ ಮಹತ್
ಸುತಮಿವ ಬದ್ಧಮವೇಕ್ಷ್ಯ ಕಿಂನರೀ ॥೫೫॥

ಅತಿಯಾದ ದುಃಖವನ್ನು ಸಹಿಸಲಾಗದೆ ಕೌಸಲ್ಯೆ ಆಗ ರಾಮನನ್ನು ನೋಡುತ್ತ, ಅವನು ತಂದೆಯ ಮಾತಿಗೆ ಕಟ್ಟುಬಿದ್ದಿರುವುದನ್ನು ಕಂಡು; ಮುಂದೆ ಸವತಿಯರಿಂದ ತನಗೆ ಬರಬಹುದಾದ ವ್ಯಸನವನ್ನೂ ಆಲೋಚಿಸಿ, ಬಂಧನ ಕ್ಕೊಳಗಾದ ಮಗುವನ್ನು ನೋಡುತ್ತ ವಿಲಾಪಗೈವ ಕಿನ್ನರಿಯಂತೆ ವಿಲಾಪಗೈದಳು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಇಪ್ಪತ್ತನೇ ಸರ್ಗ ಮುಗಿಯಿತು.

ಏಕವಿಂಶಃ ಸರ್ಗಃ

ಸರ್ಗ – 21

ಲಕ್ಷ್ಮಣನು ಕೌಸಲ್ಯೆಗೆ ಸಮಾಧಾನವನ್ನು ಹೇಳುವುದು.
ಶ್ರೀರಾಮನು ವನವಾಸಕ್ಕೆ ಅನುಮತಿಯನ್ನು ಕೇಳುವುದು.

ತಥಾ ತು ವಿಲಪಂತೀಂ ತಾಂ ಕೌಸಲ್ಯಾಂ ರಾಮಮಾತರಮ್ ।
ಉವಾಚ ಲಕ್ಷ್ಮಣೋ ದೀನಸ್ತತ್ಕಾಲಸದೃಶಂ ವಚಃ ॥೧॥

ರಾಮಮಾತೆ ಕೌಸಲ್ಯೆ ಹೀಗೆ ವಿಲಾಪ ಮಾಡುವಾಗ ಲಕ್ಷ್ಮಣನು ದೀನನಾಗಿ ಅಂಥ ದುಃಖದ ಕಾಲಕ್ಕೆ ಉಚಿತವಾದ ಮಾತನ್ನಾಡಿದ.

ನ ರೋಚತೇ ಮಮಾಪ್ಯೇತದಾರ್ಯೇ ಯದ್ರಾಘವೋ ವನಮ್ ।
ತ್ಯಕ್ತ್ವಾ ರಾಜ್ಯಶ್ರಿಯಂ ಗಚ್ಛೇತ್ ಸ್ತ್ರಿಯಾ ವಾಕ್ಯವಶಂಗತಃ ॥೨॥

ವಿಪರೀತಶ್ಚ ವೃದ್ಧಶ್ಚ ವಿಷಯೈಶ್ಚ ಪ್ರಧರ್ಷಿತಃ ।
ನೃಪಃ ಕಿಮಿವ ನ ಬ್ರೂಯಾಚ್ಛೋದ್ಯಮಾನಃ ಸಮನ್ಮಥಃ ॥೩॥

ಅಮ್ಮ, ರಾಮನು ರಾಜ್ಯಸಂಪತ್ತನ್ನು ತ್ಯಜಿಸಿ ಕಾಡಿಗೆ ಹೋಗುವುದು ನನಗೆ ಕೂಡ ಸರಿಕಾಣುವುದಿಲ್ಲ. ಹೆಂಡತಿಯ ಮಾತಿಗೆ ಕಟ್ಟುಬಿದ್ದು ಬುದ್ಧಿಪಲ್ಲಟ ಹೊಂದಿದ ವೃದ್ಧನಾದ ವಿಷಯಲಂಪಟನಾದ ರಾಜನು ಹೆಂಡತಿಯ ಮೇಲಿನ ಮೋಹದಿಂದ ಅವಳು ಹೇಳಿದಂತೆ ಕೇಳುತ್ತ ಏನು ನುಡಿಯಲಾರ? ಏನು ಬೇಕಾದರೂ ನುಡಿಯ-ಬಹುದು.

ನಾಸ್ಯಾಪರಾಧಂ ಪಶ್ಯಾಮಿ ನಾಪಿ ದೋಷಂ ತಥಾವಿಧಮ್ ।
ಯೇನ ನಿರ್ವಾಸ್ಯತೇ ರಾಷ್ಟ್ರಾದ್ವನವಾಸಾಯ ರಾಘವಃ ॥೪॥

ರಾಜ್ಯದಿಂದ ಗಡಿಪಾರು ಮಾಡಿ ವನವಾಸಕ್ಕೆ ಕಳಿಸಲು ರಾಮನಲ್ಲಿ ಅಂಥ ದೋಷವಾದರೂ ಏನು? ಅದು ನನಗೇನೂ ಕಾಣುತ್ತಿಲ್ಲ, ಅಪರಾಧವೂ ಕಾಣುತ್ತಿಲ್ಲ.

ನ ತಂ ಪಶ್ಯಾಮ್ಯಹಂ ಲೋಕೇ ಪರೋಕ್ಷಮಪಿ ಯೋ ನರಃ ।
ಸ್ವಮಿತ್ರೋಽಪಿ ನಿರಸ್ತೋಽಪಿ ಯೋಽಸ್ಯ ದೋಷಮುದಾಹರೇತ್ ॥೫॥

ಶತ್ರುವಾಗಲಿ ತಪ್ಪುಮಾಡಿ ಶಿಕ್ಷೆಗೊಳಗಾದವನಾಗಲಿ, ರಾಮನಲ್ಲಿ ಪರೋಕ್ಷ

ದಲ್ಲಿಯೂ ಕೂಡ ದೋಷವಿದೆ ಎನ್ನುವನನ್ನು ಲೋಕದಲ್ಲಿ ಯಾರನ್ನೂ ನಾನು ಕಂಡಿಲ್ಲ.

ದೇವಕಲ್ಪಮೃಜುಂ ದಾಂತಂ ರಿಪೂಣಾಮಪಿ ವತ್ಸಲಮ್ ।
ಅವೇಕ್ಷಮಾಣಃ ಕೋ ಧರ್ಮಂ ತ್ಯಜೇತ್ ಪುತ್ರಮಕಾರಣಾತ್ ॥೬॥

ದೇವನಂಥವನು ಸರಳ ಸ್ವಭಾವದವನು ಜಿತೇಂದ್ರಿಯನು ಶತ್ರುಗಳಿಗೂ ಪ್ರಿಯನಾದವನು ಧರ್ಮಾತ್ಮನು–ಇಂಥವನನ್ನು ತನ್ನ ಮಗನೆಂದು ನೋಡುತ್ತಲೇ ನಿಷ್ಕಾರಣವಾಗಿ ಮಗನನ್ನು ಯಾರುತಾನೆ ತ್ಯಜಿಸುವನು?

ತದಿದಂ ವಚನಂ ರಾಜ್ಞಃ ಪುನರ್ಬಾಲ್ಯಮುಪೇಯುಷಃ ।
ಪುತ್ರಃ ಕೋ ಹೃದಯೇ ಕುರ್ಯಾತ್ ರಾಜವೃತ್ತಮನುಸ್ಮರನ್ ॥೭॥

ವೃದ್ಧನಾಗಿದ್ದು ವೃದ್ಧಾಪ್ಯದಿಂದ ಪುನಃ ಬಾಲಕನಂತಾಗಿರುವ ರಾಜನ ಈ ಮಾತನ್ನು ರಾಜನೀತಿಯನ್ನು ಬಲ್ಲ ಪುತ್ರನು ಯಾರು ತಾನೆ ಒಪ್ಪುತ್ತಾನೆ?

ಯಾವದೇವ ನ ಜಾನಾತಿ ಕಶ್ಚಿದರ್ಥಮಿಮಂ ನರಃ ।
ತಾವದೇವ ಮಯಾ ಸಾರ್ಧಮಾತ್ಮಸ್ಥಂ ಕುರು ಶಾಸನಮ್ ॥೮॥

ಈ ರಾಜಾಜ್ಞೆಯನ್ನು ಯಾವನೊಬ್ಬ ಮನುಷ್ಯನೂ ತಿಳಿಯದ ಮುನ್ನ ರಾಜ್ಯಾಡಳಿತವನ್ನು ನೀನು ನಿನ್ನ ಕೈಗೆ ತೆಗೆದುಕೊಳ್ಳು. ಇದರಲ್ಲಿ ನಾನು ನಿನ್ನ ಜೊತೆಗೆ ಇರುತ್ತೇನೆ.

ಮಯಾ ಪಾರ್ಶ್ವೇ ಸಧನುಷಾ ತವ ಗುಪ್ತಸ್ಯ ರಾಘವ ।
ಕಃ ಸಮರ್ಥೋಽಧಿಕಂ ಕರ್ತುಂ ಕೃತಾಂತಸ್ಯೇವ ತಿಷ್ಠತಃ ॥೯॥

ನಾನು ನಿನ್ನ ಪಕ್ಕದಲ್ಲಿ ಬಿಲ್ಲುಹಿಡಿದು ರಕ್ಷಿಸುತ್ತಿರುವಾಗ, ಶತ್ರುಗಳಿಗೆ ಯಮಧರ್ಮನಂತೆ ನಿಲ್ಲುವ ನಿನ್ನಮೇಲೆ ಆಕ್ರಮಣ ಮಾಡಲು ಯಾರು ತಾನೆ ಸಮರ್ಥ?

ನಿರ್ಮನುಷ್ಯಾಮಿಮಾಂ ಸರ್ವಾಮಯೋಧ್ಯಾಂ ಮನುಜರ್ಷಭ ।
ಕರಿಷ್ಯಾಮಿ ಶರೈಸ್ತೀಕ್ಷ್ಣೈರ್ಯದಿ ಸ್ಥಾಸ್ಯತಿ ವಿಪ್ರಿಯೇ ॥೧೦॥

ಪುರುಷೋತ್ತಮ, ನಿನಗೆ ವಿರೋಧವಾಗಿ ಇಡಿ ಅಯೋಧ್ಯೆಯೇ ನಿಂತರೂ ಸರಿಯೆ, ಈ ಅಯೋಧ್ಯೆಯಲ್ಲಿ ಮನುಷ್ಯರೇ ಇಲ್ಲದಂತೆ ನಾನು ಮಾಡುವೆನು.

ಭರತಸ್ಯಾಥ ಪಕ್ಷ್ಯೋ ವಾ ಯೋ ವಾಸ್ಯ ಹಿತಮಿಚ್ಛತಿ ।
ಸರ್ವಾನೇವ ಹನಿಷ್ಯಾಮಿ ಮೃದುರ್ಹಿ ಪರಿಭೂಯತೇ ॥೧೧॥

ಭರತನ ಕಡೆಯವನಿರಲಿ, ಅವನಿಗೆ ಹಿತವನ್ನು ಬಯಸುವವನೆ ಇರಲಿ ಎಲ್ಲರನ್ನೂ ಕೊಲ್ಲುವೆನು. ಮೆತ್ತಗಿರುವವನು ಎಲ್ಲರ ತಿರಸ್ಕಾರಕ್ಕೊಳಗಾಗುತ್ತಾನೆ.

ಪ್ರೋತ್ಸಾಹಿತೋಽಯಂ ಕೈಕೇಯ್ಯಾ ಸ ದುಷ್ಟೋ ಯದಿ ನಃ ಪಿತಾ ।
ಅಮಿತ್ರಭೂತೋ ನಿಃಸಂಗಂ ವಧ್ಯತಾಂ ಬಧ್ಯತಾಮಪಿ ॥೧೨॥

ಕೈಕೇಯಿಯಿಂದ ಪ್ರೋತ್ಸಾಹಿತನಾಗಿ ದುಷ್ಟನಾಗಿ ನಮ್ಮ ತಂದೆ ನಮಗೇ ಶತ್ರು-ವಾದರೆ, ವಿಚಾರಮಾಡದೆ ಬಂಧನದಲ್ಲಿ ಇರಿಸೋಣ ಅಥವಾ ಕೊಂದೇ ಬಿಡೋಣ.

ಗುರೋರಪ್ಯವಲಿಪ್ತಸ್ಯ ಕಾರ್ಯಾಕಾರ್ಯಮಜಾನತಃ ।
ಉತ್ಪಥಂ ಪ್ರತಿಪನ್ನಸ್ಯ ಕಾರ್ಯಂ ಭವತಿ ಶಾಸನಮ್ ॥೧೩॥

ಹಿರಿಯನೇ ಆದರೂ ಅಹಂಕಾರದಿಂದ ಕಾರ್ಯ ಅಕಾರ್ಯ ವಿವೇಚನೆ ಮಾಡದೆ ತಪ್ಪುದಾರಿ ತುಳಿಯುವವನಿಗೆ ತಕ್ಕ ಶಾಸ್ತಿ ಮಾಡಬೇಕಾಗುತ್ತದೆ.

ಇದು ಮನುವಚನವೆಂದು ಸಂಗ್ರಹರಾಮಾಯಣ (ಅಯೋ.5.38) ಹೇಳಿದೆ

ಬಲಮೇಷ ಕಿಮಾಶ್ರಿತ್ಯ ಹೇತುಂ ವಾ ಪುರುಷರ್ಷಭ ।
ದಾತುಮಿಚ್ಛತಿ ಕೈಕೇಯ್ಯೈ ರಾಜ್ಯಂ ಸ್ಥಿತಮಿದಂ ತವ ॥೧೪॥

ರಾಜ್ಯವು ನ್ಯಾಯವಾಗಿ ನಿನ್ನದಾಗಿರಬೇಕಾಗಿರುವಾಗ, ಪುರುಷೋತ್ತಮ, ರಾಜನು ಯಾವ ಬಲವನ್ನಾಶ್ರಯಿಸಿ, ಅಥವಾ ಯಾವ ಪ್ರಯೋಜನವನ್ನು ಉದ್ದೇಶಿಸಿ ರಾಜ್ಯವನ್ನು ಕೈಕೇಯಿಗೆ ಕೊಡಲು ಬಯಸುತ್ತಿದ್ದಾನೆ?

ತ್ವಯಾ ಚೈವ ಮಯಾ ಚೈವ ಕೃತ್ವಾ ವೈರಮನುತ್ತಮಮ್ ।
ಕಾಸ್ಯ ಶಕ್ತಿಃ ಶ್ರಿಯಂ ದಾತುಂ ಭರತಾಯಾರಿನಾಶನ ॥೧೫॥

ಶತ್ರುನಾಶಕನೆ, ನಿನ್ನೊಡನೆ ಮತ್ತು ನನ್ನೊಡನೆ ಮಹತ್ತಾದ ವೈರ ಕಟ್ಟಿಕೊಂಡು ರಾಜ್ಯಸಂಪತ್ತನ್ನು ಭರತನಿಗೆ ಕೊಡಲು ರಾಜನಿಗೆ ಏನು ಶಕ್ತಿ ಇದೆ?

ಅನುರಕ್ತೋಽಸ್ಮಿ ಭಾವೇನ ಭ್ರಾತರಂ ದೇವಿ ತತ್ತ್ವತಃ ।
ಸತ್ಯೇನ ಧನುಷಾ ಚೈವ ದತ್ತೇನೇಷ್ಟೇನ ತೇ ಶಪೇ ॥೧೬॥

ದೇವಿ, ನಾನು ನನ್ನ ಸತ್ಯನಿಷ್ಠೆ, ಧನುರ್ವಿದ್ಯೆ, ದಾನ, ಯಾಗಗಳ ಮೇಲೆ ಆಣೆಇಟ್ಟು ಹೇಳುತ್ತೇನೆ. ನಾನು ನಿಜವಾಗಿ ಅಣ್ಣನಲ್ಲಿ ಭಕ್ತಿಭಾವದಿಂದ ಅನುರಕ್ತ-ನಾಗಿದ್ದೇನೆ.

ದೀಪ್ತಮಗ್ನಿಮರಣ್ಯಂ ವಾ ಯದಿ ರಾಮಃ ಪ್ರವೇಕ್ಷ್ಯತಿ ।
ಪ್ರವಿಷ್ಟಂ ತತ್ರ ಮಾಂ ದೇವಿ ತ್ವಂ ಪೂರ್ವಮವಧಾರಯ ॥೧೭॥

ಉರಿಯುವ ಬೆಂಕಿಯನ್ನಾಗಲಿ ಕಾಡನ್ನಾಗಲಿ ರಾಮ ಪ್ರವೇಶಿಸುವುದಾದರೆ, ದೇವಿ, ಮೊದಲಿಗೆ ಅಲ್ಲಿ ಪ್ರವೇಶಿಸುವವನು ನಾನೆಂದು ತಿಳಿ.

ಹರಾಮಿ ವೀರ್ಯಾದ್ದುಃಖಂ ತೇ ತಮಃ ಸೂರ್ಯ ಇವೋದಿತಃ ।
ದೇವೀ ಪಶ್ಯತು ಮೇ ವೀರ್ಯಂ ರಾಘವಶ್ಚೈವ ಪಶ್ಯತು ॥೧೮॥

ದೇವಿ ನೀನು ನನ್ನ ಸಾಮರ್ಥ್ಯವನ್ನು ನೋಡು, ರಾಮನೂ ನೋಡಲಿ. ಉದಿಸಿದ ಸೂರ್ಯನು ಕತ್ತಲನ್ನು ಹೇಗೋ ಹಾಗೆ ನಿನ್ನ ದುಃಖವನ್ನು ನಾನು ಸಾಮರ್ಥ್ಯದಿಂದ ದೂರಮಾಡುತ್ತೇನೆ.

ಹನಿಷ್ಯೇ ಪಿತರಂ ವೃದ್ಧಂ ಕೈಕೇಯ್ಯಾಸಕ್ತಮಾನಸಮ್ ।
ಕೃಪಣಂ ಚಾಸ್ಥಿರಂ ಬಾಲಂ ವೃದ್ಧಭಾವೇನ ಗರ್ಹಿತಮ್ ॥೧೯॥

ಪಿತನಾದರೂ ವೃದ್ಧನಾದರೂ ರಾಜ ಕೈಕೇಯಿಯಲ್ಲಿ ಮನಸ್ಸಿಟ್ಟಿದ್ದಾನೆ. ದುರ್ಬಲ ಅಸ್ಥಿರನಾಗಿದ್ದು ವಾರ್ಧಕ್ಯದಿಂದ ಬಾಲಕನಂತಿದ್ದು ನಿಂದ್ಯನಾಗಿದ್ದಾನೆ. ಅದರಿಂದ ಅವನನ್ನು ನಾನು ಕೊಲ್ಲುತ್ತೇನೆ.

ಪಿತೃವಾಕ್ಯ ಪರಿಪಾಲನೆಗಾಗಿ ರಾಜ್ಯತ್ಯಾಗ ಮಾಡುತ್ತಿರುವ ರಾಮನ ಮುಂದೇ ಪಿತೃವಧ ಮಾಡುವೆನೆನ್ನುತ್ತಾನೆ ಲಕ್ಷ್ಮಣ. ಕರ್ಣಕಠೋರವಾಗಿದೆ ಈ ಮಾತು. ವಸ್ತುತಃ ಶೋಕಾವೇಗದಿಂದ ಆಡಿದ ಪ್ರಲಾಪವಿದು. ಪಿತೃವಧ ಮಾಡಲು ಹೊರಡುವವನಲ್ಲ ಲಕ್ಷ್ಮಣ. ದಶರಥನೂ ಲಕ್ಷ್ಮಣನಿಂದ ಹತನಾಗಬೇಕಾಗುವಂಥ ಅನ್ಯಾಯವನ್ನೂ ಮಾಡಿಲ್ಲ. ಮಾಡಿದ್ದರೆ ರಾಮ ಅವನ ವಾಕ್ಯಪರಿಪಾಲನೆ ಏಕೆ ಮಾಡುತ್ತಾನೆ?

ಅಥವಾ ಇದು ರಾಜನೀತಿಗೆ ಸಂಬಂಧಪಟ್ಟವಿಷಯವಾಗಿದ್ದರಿಂದ ದಶರಥನು ತುಂಬ ಎಚ್ಚರದಿಂದಿದ್ದು ಭರತನಲ್ಲಿ ಅನುಮಾನಪಟ್ಟಂತೆ ಕೈಕೇಯಿಯಲ್ಲಿಯೂ ಅನುಮಾನಪಡಬೇಕಾಗಿತ್ತು ಎಂದು ಲಕ್ಷ್ಮಣನ ಆಕ್ಷೇಪ.

ಏತತ್ತು ವಚನಂ ಶ್ರುತ್ವಾ ಲಕ್ಷ್ಮಣಸ್ಯ ಮಹಾತ್ಮನಃ ।
ಉವಾಚ ರಾಮಂ ಕೌಸಲ್ಯಾ ರುದಂತೀ ಶೋಕಲಾಲಸಾ ॥೨೦॥

ಮಹಾತ್ಮ ಲಕ್ಷ್ಮಣನಾಡಿದ ಈ ಮಾತನ್ನು ಕೇಳಿದಾಗ ಶೋಕಪರವಶಳಾಗಿದ್ದ ಕೌಸಲ್ಯೆ ಸ್ವಲ್ಪ ಸಮಾಧಾನಗೊಂಡು ಅಳುತ್ತ ರಾಮನಿಗೆ ಹೇಳಿದಳು.

ಭ್ರಾತುಸ್ತೇ ವದತಃ ಪುತ್ರ ಲಕ್ಷ್ಮಣಸ್ಯ ಶ್ರುತಂ ತ್ವಯಾ ।
ಯದತ್ರಾನಂತರಂ ಕಾರ್ಯಂ ಕುರುಷ್ವ ಯದಿ ರೋಚತೇ ॥೨೧॥

ಮಗು, ತಮ್ಮ ಲಕ್ಷ್ಮಣ ಹೇಳಿದ್ದನ್ನು ನೀನು ಕೇಳಿದೆ ತಾನೆ? ಅದು ಸರಿ–ಯೆನಿಸಿದರೆ ಮುಂದೆ ಮಾಡಬೇಕಾಗಿರುವ ಕಾರ್ಯವನ್ನು ಮಾಡು.

ನ ಚಾಧರ್ಮ್ಯಂ ವಚಃ ಶ್ರುತ್ವಾ ಸಪತ್ನ್ಯಾ ಮಮ ಭಾಷಿತಮ್ ।
ವಿಹಾಯ ಶೋಕಸಂತಪ್ತಾಂ ಮಾಂ ವನಂ ಗಂತುಮರ್ಹಸಿ ॥೨೨॥

ನನ್ನ ಸವತಿ ಅನ್ಯಾಯವಾಗಿ ಹೇಳಿದ ಮಾತನ್ನು ಕೇಳಿ, ಶೋಕಸಂತಪ್ತಳಾದ ನನ್ನನ್ನು ಬಿಟ್ಟು ಕಾಡಿಗೆ ಹೋಗಬೇಡ.

ಧರ್ಮಜ್ಞ ಯದಿ ಧರ್ಮಿಷ್ಠೋ ಧರ್ಮಂ ಚರಿತುಮಿಚ್ಛಸಿ ।
ಶುಶ್ರೂಷ ಮಾಮಿಹಸ್ಥಸ್ತ್ವಂ ಚರ ಧರ್ಮಮನುತ್ತಮಮ್ ॥೨೩॥

ಧರ್ಮವನ್ನು ಅರಿತಿರುವ ರಾಮನೆ, ಧರ್ಮಿಷ್ಠನಾದ ನೀನು ಧರ್ಮಾಚರಣ ಮಾಡಲು ಬಯಸುವುದಾದರೆ ಇಲ್ಲಿಯೇ ಇದ್ದು ಉತ್ತಮವಾದ ಧರ್ಮವನ್ನು ಆಚರಿಸು, ನನ್ನ ಶುಶ್ರೂಷೆ ಮಾಡುತ್ತಿರು.

ಶುಶ್ರೂಷುರ್ಜನನೀಂ ಪುತ್ರಃ ಸ್ವಗೃಹೇ ನಿಯತೋ ವಸನ್।
ಪರೇಣ ತಪಸಾ ಯುಕ್ತಃ ಕಾಶ್ಯಪಸ್ತ್ರಿದಿವಂ ಗತಃ ॥೨೪॥

ಮಗು, ಕಶ್ಯಪ ಪುತ್ರನಾದ ಗರುಡನು ಮಲತಾಯಿಯಾದ ಕದ್ರುವಿಗೆ ಅಮೃತ ತಂದಿತ್ತು ತಾಯಿ ವಿನತೆಯ ದಾಸ್ಯವಿಮೋಚನ ಮಾಡಿ ಶುಶ್ರೂಷೆ ಮಾಡಿದ್ದರಿಂದ ಸ್ವರ್ಗಭಾಗಿಯಾದ.

ಯಥೈವ ರಾಜಾ ಪೂಜ್ಯಸ್ತೇ ಗೌರವೇಣ ತಥಾ ಹ್ಯಹಮ್ ।
ತ್ವಾಂ ನಾಹಮನುಜಾನಾಮಿ ನ ಗಂತವ್ಯಮಿತೋ ವನಮ್ ॥೨೫॥

ರಾಜನು ಗೌರವದಿಂದ ನಿನಗೆ ಹೇಗೆ ಪೂಜ್ಯನೋ ಹಾಗೇ ನಾನೂ ಪೂಜ್ಯಳು.

ನಾನು ನಿನಗೆ ವನವಾಸಕ್ಕೆ ಅನುಜ್ಞೆ ನೀಡುವುದಿಲ್ಲ. ನೀನು ಇಲ್ಲಿಂದ ಕಾಡಿಗೆ ಹೋಗಕೂಡದು.

ತ್ವದ್ವಿಯೋಗಾನ್ನ ಮೇ ಕಾರ್ಯಂ ಜೀವಿತೇನ ಸುಖೇನ ವಾ ।
ತ್ವಯಾ ಸಹ ಮಮ ಶ್ರೇಯಸ್ಸೃಣಾನಾಮಪಿ ಭಕ್ಷಣಮ್ ॥೨೬॥

ನಿನ್ನ ವಿಯೋಗವನ್ನು ಸಹಿಸಿಕೊಂಡು ಬದುಕಿರುವುದರಿಂದಾಗಲಿ ಸುಖ ಭೋಗದಿಂದಾಗಲಿ ನಾನು ಮಾಡಬೇಕಾಗಿರುವುದು ಏನೂ ಇಲ್ಲ. ನಿನ್ನ ಜೊತೆಗಿದ್ದರೆ ಹುಲ್ಲುತಿಂದು ಬದುಕುವುದೂ ನನಗೆ ಶ್ರೇಯಸ್ಕರ.

ಯದಿ ತ್ವಂ ಯಾಸ್ಯಸಿ ವನಂ ತ್ಯಕ್ತ್ವಾ ಮಾಂ ಶೋಕಲಾಲಸಾಮ್ ।
ಅಹಂ ಪ್ರಾಯಮಿಹಾಸಿಷ್ಯೇ ನ ಹಿ ಶಕ್ಷ್ಯಾಮಿ ಜೀವಿತುಮ್ ॥೨೭॥

ಶೋಕಪರವಶಳಾದ ನನ್ನನ್ನು ಬಿಟ್ಟು ನೀನು ಕಾಡಿಗೆ ಹೋಗುವುದಾದರೆ ನಾನು ಇಲ್ಲಿ ಉಪವಾಸವಿದ್ದು ಸಾಯುತ್ತೇನೆ. ಹೊರತು ಬದುಕಿರಲು ಶಕ್ತಳಾಗಲಾರೆ.

ತತಸ್ತ್ವಂ ಪ್ರಾಪ್ಸ್ಯಸೇ ಪುತ್ರ ನಿರಯಂ ಲೋಕವಿಶ್ರುತಮ್ ।
ಬ್ರಹ್ಮಹತ್ಯಾಮಿವಾಧರ್ಮಾತ್ ಸಮುದ್ರಃ ಸರಿತಾಂ ಪತಿಃ ॥೨೮॥

ನಾನು ಹೀಗೆ ಸತ್ತೆನೆಂದರೆ, ಮಗು, ನೀನು ಲೋಕಪ್ರಸಿದ್ಧವಾದ ನರಕವನ್ನು ಹೊಂದುವೆ. ತಾಯಿಯ ಮರಣಕ್ಕೆ ಕಾರಣವಾಗುವ ಪಾಪದಿಂದ ಹಿಂದೆ ಸಮುದ್ರ-ರಾಜ ಬ್ರಹ್ಮಹತ್ಯಾಪಾಪ ಮಾಡಿ ದುಃಖಭಾಗಿಯಾದ.

ತಾಯಿಗೆ ಏನೋ ಒಂದು ದ್ರೋಹ ಮಾಡಿದ ಪಾಪದಿಂದ, ಸಮುದ್ರರಾಜ, ಪಿಪ್ಪಲಾದ ಮುನಿಗೆ ಕ್ಲೇಶ ಉಂಟುಮಾಡಿ ಬ್ರಹ್ಮಹತ್ಯಾ ಪಾಪಕ್ಕೆ ಗುರಿಯಾದ. ಪಿಪ್ಪಲಾದ ಮುನಿಯು ಮಂತ್ರದಿಂದ ಒಂದು ಅಭಿಚಾರ ದೇವತೆಯನ್ನು, ಸೃಜಿಸಿದರೆ ಆ ದೇವತೆಯನ್ನು ಪ್ರತಿಮಂತ್ರದಿಂದ ಸಮುದ್ರರಾಜ ತಡೆದ. ಅದರಿಂದ ಮುನಿಗೆ ಕ್ಲೇಶ ಉಂಟಾದ್ದರಿಂದ ಸಮುದ್ರರಾಜನಿಗೆ ಬ್ರಹ್ಮಹತ್ಯಾ ಪಾಪ ಬಂದಿತು. ಸಮುದ್ರ ಸ್ನಾನಮಾಡುವವರು ಅವನ ಈ ಬ್ರಹ್ಮಹತ್ಯಾ ಪಾಪ ಶಾಂತಿಗಾಗಿ ಅಭಿಚಾರ ದೇವತೆಗೆ ಆಹಾರವಾಗಿ ಒಂದು ಕಲ್ಲನ್ನು ಅರ್ಪಿಸಬೇಕೆಂದು ವಿಧಿ ಇದೆ. ಸಮುದ್ರ ತೀರದಲ್ಲಿ ಒಂದು ಮಳಲಿನ ವರುಣಪ್ರತಿಮೆ ಮಾಡಿ ಅದರ ಮೇಲೆ ಒಂದು ಕಲ್ಲನ್ನಿಟ್ಟು, ಹೀಗೆ ಪ್ರಾರ್ಥಿಸಬೇಕು—

ಪಿಪ್ಪಲಾದ ಸಮುತ್ಪನ್ನೇ ಕೃತ್ಯೇ ಲೋಕಭಯಂಕರಿ ।
ಆಹಾರಾರ್ಥಂ ಮಯಾ ದತ್ತಃ ಪಾಷಾಣಃ ಪ್ರತಿಗೃಹ್ಯತಾಂ ॥

ಹೀಗೆ ಹೇಳಿ ಕಲ್ಲಿನೊಂದಿಗೆ ವರುಣಪ್ರತಿಮಾರೂಪವಾದ ಮರಳಿನ ಮುಷ್ಟಿ-ಯನ್ನು ಸಮುದ್ರದಲ್ಲಿ ಹಾಕಿ ಸ್ನಾನ ಮಾಡಬೇಕು ಎಂದು.

ವಿಲಪಂತೀಂ ತಥಾ ದೀನಾಂ ಕೌಸಲ್ಯಾಂ ಜನನೀಂ ತತಃ ।
ಉವಾಚ ರಾಮೋ ಧರ್ಮಾತ್ಮಾ ವಚನಂ ಧರ್ಮಸಂಹಿತಮ್ ॥೨೯॥

ದೀನಳಾಗಿ ವಿಲಾಪ ಗೈಯುತ್ತಿದ್ದ ತಾಯಿ ಕೌಸಲ್ಯೆಗೆ ಧರ್ಮಾತ್ಮನಾದ ರಾಮ ಧರ್ಮಸಮ್ಮತವಾದ ಮಾತನ್ನಾಡಿದ.

ನಾಸ್ತಿ ಶಕ್ತಿಃ ಪಿತುರ್ವಾಕ್ಯಂ ಸಮತಿಕ್ರಮಿತುಂ ಮಮ ।
ಪ್ರಸಾದಯೇ ತ್ವಾಂ ಶಿರಸಾ ಗಂತುಮಿಚ್ಛಾಮ್ಯಹಂ ವನಮ್ ॥೩೦॥

ತಂದೆಯ ಮಾತನ್ನು ಮೀರಲು ನನಗೆ ಶಕ್ತಿ ಇಲ್ಲ. ನಿನಗೆ ತಲೆಬಾಗಿ ನಮಿಸಿ ಬೇಡಿಕೊಳ್ಳುತ್ತೇನೆ. ನಾನು ಕಾಡಿಗೆ ಹೋಗಲು ಬಯಸುತ್ತೇನೆ. ಅನುಜ್ಞೆ ನೀಡು.

ಋಷಿಣಾ ಚ ಪಿತುರ್ವಾಕ್ಯಂ ಕುರ್ವತಾ ವ್ರತಚಾರಿಣಾ ।
ಗೌರ್ಹತಾ ಜಾನತಾ ಧರ್ಮಂ ಕಂಡುನಾಪಿ ವಿಪಶ್ಚಿತಾ ॥೩೧॥

ವ್ರತನಿಷ್ಠನಾದ ವಿದ್ವಾಂಸನಾದ ಕಂಡುಮುನಿಯು ಧರ್ಮವನ್ನು ತಿಳಿದವ-ನಾದರೂ ಪಿತನ ಮಾತನ್ನು ನಡೆಸಿಕೊಡಲು ಗೋವಧೆ ಮಾಡಿದ.

ಅಸ್ಮಾಕಂ ಚ ಕುಲೇ ಪೂರ್ವಂ ಸಗರಸ್ಯಾಜ್ಞಯಾ ಪಿತುಃ ।
ಖನದ್ಭಿಃ ಸಾಗರೈರ್ಭೂಮಿಮವಾಪ್ತಃ ಸುಮಹಾನ್ ವಧಃ ॥೩೨॥

ನಮ್ಮ ವಂಶದಲ್ಲಿ ಹಿಂದೆ ತಂದೆಯಾದ ಸಗರಚಕ್ರವರ್ತಿಯ ಆಜ್ಞೆಯಿಂದ ಸಗರಪುತ್ರರು ಭೂಮಿಯನ್ನು ಅಗೆದು ಕಪಿಲಮುನಿಯ ನೇತ್ರಾಗ್ನಿಯಿಂದ ಮಹಾವಧೆಯನ್ನು ಹೊಂದಿದರು.

ಜಾಮದಗ್ನ್ಯೇನ ರಾಮೇಣ ರೇಣುಕಾ ಜನನೀ ಸ್ವಯಮ್ ।
ಕೃತ್ತಾ ಪರಶುನಾರಣ್ಯೇ ಪಿತುರ್ವಚನಕಾರಿಣಾ ॥೩೩॥

ಜಮದಗ್ನಿ ಪುತ್ರನಾದ ರಾಮನು ತಂದೆಯ ಮಾತಿನಂತೆ ಸ್ವಯಂ ತಾಯಿ ರೇಣುಕೆಯ ಶಿರವನ್ನು ಪರಶುವಿನಿಂದ ಕತ್ತರಿಸಿದ.

ಏತೈರನ್ಯೈಶ್ಚ ಬಹುಭಿರ್ದೇವಿ ದೇವಸಮೈಃ ಕೃತಮ್ ।
ಪಿತುರ್ವಚನಮಕ್ಲೀಬಂ ಕರಿಷ್ಯಾಮಿ ಪಿತುರ್ಹಿತಮ್ ॥೩೪॥

ಇವರಲ್ಲದೆ ದೇವಿ, ಇನ್ನೂ ಬೇರೆ ದೇವಸದೃಶರಾದ ಪುತ್ರರು ಮಾಡಿದಂತೆ ನಾನೂ ಪಿತನಿಗೆ ಹಿತವಾಗುವಂತೆ ಅವನ ಮಾತನ್ನು ಸತ್ಯವನ್ನಾಗಿ ಮಾಡುವೆನು.

ನ ಖಲ್ವೇತನ್ಮಯೈಕೇನ ಕ್ರಿಯತೇ ಪಿತೃಶಾಸನಮ್ ।
ಏತೈರಪಿ ಕೃತಂ ದೇವಿ ಯೇ ಮಯಾ ತವ ಕೀರ್ತಿತಾಃ ॥೩೫॥

ನಾನೊಬ್ಬನೇ ತಂದೆಯ ಆಜ್ಞೆಯನ್ನು ಪಾಲಿಸುತ್ತಿಲ್ಲ. ದೇವಿ, ನಾನು ನಿನಗೆ ಹೇಳಿದ ಈ ಪುತ್ರರೂ ಹಾಗೇ ಮಾಡಿದ್ದಾರೆ.

ನಾಹಂ ಧರ್ಮಮಪೂರ್ವಂ ತೇ ಪ್ರತಿಕೂಲಂ ಪ್ರವರ್ತಯೇ ।
ಪೂರ್ವೈರಯಮಭಿಪ್ರೇತೋ ಗತೋ ಮಾರ್ಗೋऽನುಗಮ್ಯತೇ ॥೩೬॥

ನಾನು ನಿನಗೆ ವಿರೋಧವಾಗಿ ಹಿಂದೆ ಯಾರೂ ಮಾಡದಿದ್ದ ಹೊಸ ಧರ್ಮಾ-ಚರಣವನ್ನು ಪ್ರಾರಂಭಿಸುತ್ತಿಲ್ಲ. ಹಿಂದಿನವರಿಗೆ ಇದು ಇಷ್ಟವಾಗಿತ್ತು. ಅವರು ನಡೆದ ದಾರಿಯಲ್ಲೇ ನಾನೂ ಅನುಸರಿಸಿ ನಡೆಯುತ್ತಿದ್ದೇನೆ.

ತದೇತತ್ತು ಮಯಾ ಕಾರ್ಯಂ ಕ್ರಿಯತೇ ಭುವಿ ನಾನ್ಯಥಾ ।
ಪಿತುರ್ಹಿ ವಚನಂ ಕುರ್ವನ್ ನ ಕಶ್ಚಿನ್ನಾಮ ಹೀಯತೇ ॥೩೭॥

ಇದನ್ನು ನಾನು ಭೂಮಿಯಲ್ಲಿ ಮಾಡಬೇಕು, ಮಾಡುತ್ತೇನೆ, ಮಾಡದಿರುವು-ದಿಲ್ಲ. ತಂದೆಯ ಮಾತಿನಂತೆ ನಡೆಯುವವನು ಯಾರು ಹಾಳಾಗುವುದಿಲ್ಲ.

ತಾಮೇವಮುಕ್ತ್ವಾ ಜನನೀಂ ಲಕ್ಷ್ಮಣಂ ಪುನರಬ್ರವೀತ್ ।
ವಾಕ್ಯಂ ವಾಕ್ಯವಿದಾಂ ಶ್ರೇಷ್ಠಃ ಶ್ರೇಷ್ಠಃ ಸರ್ವಧನುಷ್ಮತಾಮ್ ॥೩೮॥

ಶ್ರೀರಾಮ ಹೀಗೆ ತಾಯಿಗೆ ಹೇಳಿ, ಪುನಃ ಲಕ್ಷ್ಮಣನಿಗೆ ಹೇಳಿದ. ವಾಕ್ಯಜ್ಞರಲ್ಲಿ ಶ್ರೇಷ್ಠನೂ ಸರ್ವಧನುರ್ಧಾರಿಗಳಲ್ಲಿ ಶ್ರೇಷ್ಠನೂ ಆದ ಶ್ರೀರಾಮ ಹೀಗೆ ಹೇಳಿದ—

ತವ ಲಕ್ಷ್ಮಣ ಜಾನಾಮಿ ಮಯಿ ಸ್ನೇಹಮನುತ್ತಮಮ್ ।
ವಿಕ್ರಮಂ ಚೈವ ಸತ್ತ್ವಂ ಚ ತೇಜಶ್ಚ ಸುದುರಾಸದಮ್ ॥೩೯॥

ಲಕ್ಷ್ಮಣ, ನಿನಗೆ ನನ್ನಲ್ಲಿರುವ ಅತ್ಯುತ್ತಮವಾದ ಭಕ್ತಿ ನನಗೆ ತಿಳಿದಿದೆ. ನಿನ್ನ ಪರಾಕ್ರಮವೂ ಬಲವೂ ಶತ್ರುಗಳಿಗೆ ಇದಿರಿಸಲಾಗದ ತೇಜಸ್ಸೂ ನನಗೆ ತಿಳಿದಿದೆ.

ಮಮ ಮಾತುರ್ಮಹದ್ದುಃಖಮತುಲಂ ಶುಭಲಕ್ಷಣ ।
ಅಭಿಪ್ರಾಯಮವಿಜ್ಞಾಯ ಸತ್ಯಸ್ಯ ಚ ಶಮಸ್ಯ ಚ ॥೪೦॥

ಶುಭಲಕ್ಷಣಉಳ್ಳ ಲಕ್ಷ್ಮಣನೆ, ಸತ್ಯ ಶಮಗಳ ರಹಸ್ಯವನ್ನು ಅರಿಯದಿರುವ ನನ್ನ ತಾಯಿಗೆ ಅನುಪಮವಾದ ಮಹತ್ತಾದ ದುಃಖ ಉಂಟಾಗಿದೆ.

ಧರ್ಮೋ ಹಿ ಪರಮೋ ಲೋಕೇ ಧರ್ಮೇ ಸತ್ಯಂ ಪ್ರತಿಷ್ಠಿತಮ್ ।
ಧರ್ಮಸಂಶ್ರಿತಮೇತಚ್ಚ ಪಿತುರ್ವಚನಮುತ್ತಮಮ್ ॥೪೧॥

ಧರ್ಮವೆ ಲೋಕದಲ್ಲಿ ಶ್ರೇಷ್ಠವಾದ ಕರ್ತವ್ಯ. ಧರ್ಮದಲ್ಲಿ ಸತ್ಯ ಅಡಗಿದೆ. ತಂದೆ ಹೇಳಿದ ಈ ವಚನವು ಧರ್ಮಾನುಸಾರಿಯಾಗಿದೆ.

ಸಂಶ್ರುತ್ಯ ಚ ಪಿತುರ್ವಾಕ್ಯಂ ಮಾತುರ್ವಾ ಬ್ರಾಹ್ಮಣಸ್ಯ ವಾ ।
ನ ಕರ್ತವ್ಯಂ ವೃಥಾ ವೀರ ಧರ್ಮಮಾಶ್ರಿತ್ಯ ತಿಷ್ಠತಾ ॥೪೨॥

ವೀರನೆ, ತಂದೆಗಾಗಲಿ, ತಾಯಿಗಾಗಲಿ, ಬ್ರಾಹ್ಮಣನಿಗಾಗಲಿ ಮಾತುಕೊಟ್ಟು ಅನಂತರ, ಧರ್ಮವನ್ನು ಆಶ್ರಯಿಸಿರುವವನು, ಅದನ್ನು ವ್ಯರ್ಥಮಾಡಬಾರದು.

ಸೋಽಹಂ ನ ಶಕ್ಷ್ಯಾಮಿ ಪಿತುರ್ನಿಯೋಗಮತಿವರ್ತಿತುಮ್ ।
ಪಿತುರ್ಹಿ ವಚನಾದ್ವೀರ ಕೈಕೇಯ್ಯಾಹಂ ಪ್ರಚೋದಿತಃ ॥೪೩॥

ಅದರಿಂದ ವೀರನೆ, ತಂದೆಯ ಮಾತನ್ನು ಮೀರಿಹೋಗಲು ನನಗೆ ಶಕ್ಯವಿಲ್ಲ. ತಂದೆಯ ಮಾತಿಗೆ ಅನುಸಾರವಾಗಿಯೇ ಕೈಕೇಯಿ ನನಗೆ ವನವಾಸ ಮಾಡಲು ಪ್ರಚೋದಿಸಿದ್ದಾಳೆ.

ತದೇನಾಂ ವಿಸೃಜಾನಾರ್ಯಾಂ ಕ್ಷತ್ರಧರ್ಮಾಶ್ರಿತಾಂ ಮತಿಮ್ ।
ಧರ್ಮಮಾಶ್ರಯ ಮಾ ತೈಕ್ಷ್ಣ್ಯಂ ಮದ್ಬುದ್ಧಿರನುಗಮ್ಯತಾಮ್ ॥೪೪॥

ಅದರಿಂದ ನಿನ್ನ ಈ ಧರ್ಮವಿರುದ್ಧವಾದ ಕ್ರೂರ ಕ್ಷತ್ರಧರ್ಮಾನುಸಾರಿ ಯಾದ ಬುದ್ಧಿಯನ್ನು ಬಿಡು. ಧರ್ಮವನ್ನು ಅನುಸರಿಸು. ತಂದೆಯನ್ನು ಕೊಂದು ರಾಜ್ಯಪಡೆವೆನೆನ್ನುವ ಕ್ರೌರ್ಯವನ್ನಲ್ಲ. ನನ್ನ ಧರ್ಮ ಬುದ್ಧಿಯನ್ನು ಅನುಸರಿಸು.

ಮಹಾಭಾರತ ವನಪರ್ವದಲ್ಲಿ ಧರ್ಮರಾಜ ಭೀಮನಿಗೆ ಇದೇ ಮಾತನ್ನಾಡುತ್ತಾನೆ.

ಪೂರ್ವೋಪಕಾರೀ ಯಸ್ತೇ ಸ್ಯಾತ್ ಅಪರಾಧೇ ಗರೀಯಸಿ ।
ಉಪಕಾರೇಣ ತತ್ತಸ್ಯ ಕ್ಷಂತವ್ಯಮಪರಾಧಿನಃ ॥ (ವನ.28.26)

'ದಶರಥ ಕೈಕೇಯಿಯರು ಮಕ್ಕಳಿಗೆ ಪೂರ್ವೋಪಕಾರಿಗಳು. ಅವರ ಅಪರಾಧ ಕ್ಷಮಾರ್ಹವೆ' ಎಂದು.

ತಮೇವಮುಕ್ತ್ವಾ ಸೌಹಾರ್ದಾದ್‌ಭ್ರಾತರಂ ಲಕ್ಷ್ಮಣಾಗ್ರಜಃ ।
ಉವಾಚ ಭೂಯಃ ಕೌಸಲ್ಯಾಂ ಪ್ರಾಂಜಲಿಃ ಶಿರಸಾ ನತಃ ॥೪೫॥

ಹೀಗೆ ಸೌಹಾರ್ದದಿಂದ ಶ್ರೀರಾಮ ಲಕ್ಷ್ಮಣನಿಗೆ ಹೇಳಿ ಕೌಸಲ್ಯೆಗೆ ಕೈಮುಗಿದು ತಲೆ ಬಾಗಿ ನುಡಿದ.

ಅನುಮನ್ಯಸ್ವ ಮಾಂ ದೇವಿ ಗಮಿಷ್ಯಂತಮಿತೋ ವನಮ್ ।
ಶಾಪಿತಾಸಿ ಮಮ ಪ್ರಾಣೈಃ ಕುರು ಸ್ವಸ್ತ್ಯಯನಾನಿ ಮೇ ॥೪೬॥

ದೇವಿ, ನಾನು ಇಲ್ಲಿಂದ ಕಾಡಿಗೆ ಹೋಗುತ್ತೇನೆ. ನನ್ನ ಪ್ರಾಣಗಳ ಮೇಲೆ ಆಣೆ-ಯಿಟ್ಟು ಹೇಳುತ್ತಿದ್ದೇನೆ. ನನಗೆ ಅಡ್ಡಿ ಮಾಡಬೇಡ. ಮಂಗಳವಾಗಲೆಂದು ಹರಸು.

ತೀರ್ಣಪ್ರತಿಜ್ಞಶ್ಚ ವನಾತ್ ಪುನರೇಷ್ಯಾಮ್ಯಹಂ ಪುರೀಮ್ ।
ಯಯಾತಿರಿವ ರಾಜರ್ಷಿಃ ಪುರಾ ಹಿತ್ವಾ ಪುನರ್ದಿವಮ್ ॥೪೭॥

ನನ್ನ ವನವಾಸ ಪ್ರತಿಜ್ಞೆಯನ್ನು ಪೂರೈಸಿ ಕಾಡಿನಿಂದ ತಿರುಗಿ ಅಯೋಧ್ಯೆಗೇ ಹಿಂತಿರುಗುತ್ತೇನೆ. ಹಿಂದೆ ರಾಜರ್ಷಿ ಯಯಾತಿ ಸ್ವರ್ಗದಿಂದ ಚ್ಯುತನಾಗಿ ಭೂಮಿ-ಯಲ್ಲಿ ಬಿದ್ದರೂ ಬಳಿಕ ಭೂಮಿಯನ್ನು ಬಿಟ್ಟು ತಿರುಗಿ ಸ್ವರ್ಗಕ್ಕೇ ಏರಿದ, ಹಾಗೆ.

ಶೋಕಃ ಸಂಧಾರ್ಯತಾಂ ಮಾತರ್ಹೃದಯೇ ಸಾಧು ಮಾ ಶುಚಃ ।
ವನವಾಸಾದಿಹೈಷ್ಯಾಮಿ ಪುನಃ ಕೃತ್ವಾ ಪಿತುರ್ವಚಃ ॥೪೮॥

ಮಾತೆ, ಶೋಕವನ್ನು ಮನಸ್ಸಿನೊಳಗೇ ಚೆನ್ನಾಗಿ ಅಡಗಿಸಿಕೊಳ್ಳು. ಶೋಕಿಸ ಬೇಡ. ತಂದೆಯ ಮಾತನ್ನು ನಡೆಸಿಕೊಟ್ಟು ವನವಾಸವನ್ನು ಪೂರೈಸಿ ಪುನಃ ಇಲ್ಲಿಗೆ ಬರುತ್ತೇನೆ.

ತ್ವಯಾ ಮಯಾ ಚ ವೈದೇಹ್ಯಾ ಲಕ್ಷ್ಮಣೇನ ಸುಮಿತ್ರಯಾ ।
ಪಿತುರ್ನಿಯೋಗೇ ಸ್ಥಾತವ್ಯಮೇಷ ಧರ್ಮಃ ಸನಾತನಃ ॥೪೯॥

ನೀನು, ನಾನು, ಸೀತೆ, ಲಕ್ಷ್ಮಣ, ಸುಮಿತ್ರೆ ಎಲ್ಲರೂ ತಂದೆಯ ಆಜ್ಞೆಗೆ ಅಧೀನರಾಗಿರಬೇಕು. ಇದೇ ಸನಾತನ ಧರ್ಮ.

ಅಂಬ ಸಂಹೃತ್ಯ ಸಂಭಾರಾನ್ ದುಃಖಂ ಹೃದಿ ನಿಗೃಹ್ಯ ಚ ।
ವನವಾಸಕೃತಾ ಬುದ್ಧಿರ್ಮಮ ಧರ್ಮ್ಯಾನುವರ್ತ್ಯತಾಮ್ ॥೫೦॥

ಅಮ್ಮ, ಅಭಿಷೇಕ ಸಾಮಗ್ರಿಯನ್ನು ಬದಿಗಿಟ್ಟು, ದುಃಖವನ್ನು ಎದೆಯಲ್ಲಿ ಅಡಗಿಸಿಕೊಂಡು, ವನವಾಸ ಮಾಡಬೇಕೆನ್ನುವ ನನ್ನ ಈ ಧರ್ಮಾನುಸಾರಿ ಬುದ್ಧಿಯನ್ನು ನೀನು ಒಪ್ಪಿಕೊಳ್ಳು.

ಏತದ್ವಚಸ್ತಸ್ಯ ನಿಶಮ್ಯ ಮಾತಾ
ಸುಧರ್ಮ್ಯಮವ್ಯಗ್ರಮವಿಕ್ಲವಂ ಚ ।
ಮೃತೇವ ಸಂಜ್ಞಾಂ ಪ್ರತಿಲಭ್ಯ ದೇವೀ
ಸಮೀಕ್ಷ್ಯ ರಾಮಂ ಪುನರಿತ್ಯುವಾಚ ॥೫೧॥

ಧರ್ಮಾನುಸಾರಿಯಾದ, ಗಾಬರಿ ಕಳವಳ ಒಂದೂ ಇಲ್ಲದ ರಾಮನ ಈ ಮಾತನ್ನು ಕೇಳಿ ತಾಯಿ ದೇವಿ ಕೌಸಲ್ಯೆ ಕ್ಷಣಕಾಲ ಪ್ರಜ್ಞೆತಪ್ಪಿ ಬಿದ್ದಳು. ಬಳಿಕ ಎಚ್ಚೆತ್ತು ರಾಮನನ್ನು ನೋಡುತ್ತ ಪುನಃ ನುಡಿದಳು.

ಗಾಬರಿ ಕಳವಳ ಒಂದೂ ಇಲ್ಲದವನಲ್ಲ, ರಾಮ. ಸೀತೆಯ ಮುಂದೆ 'ಹೋ' ಎಂದು ಅಳುತ್ತಾನೆ. ತಾಯಿಯ ಮುಂದೆ ಮಾತ್ರ ಗಂಭೀರನಾಗಿರು ತ್ತಾನೆ. ಮೊದಲೆ ಅಳುವವಳ ಮುಂದೆ ತಾನು ಅತ್ತರೆ ಅವಳು ಇನ್ನೂ ಹೆಚ್ಚು ಅಳುವಳೆಂದು ಉಕ್ಕುವ ಅಳುವನ್ನು ತಡೆದುಕೊಂಡಿದ್ದಾನೆ.

ಯಥೈವ ತೇ ಪುತ್ರ ಪಿತಾ ತಥಾಹಂ
ಗುರುಃ ಸ್ವಧರ್ಮೇಣ ಸುಹೃತ್ತಯಾ ಚ ।
ನ ತ್ವಾನುಜಾನಾಮಿ ನ ಮಾಂ ವಿಹಾಯ
ಸುದುಃಖಿತಾಮರ್ಹಸಿ ಗಂತುಮೇವಮ್ ॥೫೨॥

ಮಗು, ನಿನಗೆ ತಂದೆ ಹೇಗೆ ಗುರುವೋ ಹಾಗೇ ನಾನೂ ಕೂಡ ಧರ್ಮದಿಂದ ಮತ್ತು ವಾತ್ಸಲ್ಯದಿಂದ ಗೌರವಕ್ಕೆ ಅರ್ಹಳು ತಾನೆ? ನಿನಗೆ ನಾನು ಅನುಮತಿ ಕೊಡುವುದಿಲ್ಲ. ಬಲು ದುಃಖಿತಳಾಗಿರುವ ನನ್ನನ್ನು ಬಿಟ್ಟು ನೀನು ಕಾಡಿಗೆ ಹೋಗುವುದು ಸರಿಯಲ್ಲ.

ಕಿಂ ಜೀವಿತೇನೇಹ ವಿನಾ ತ್ವಯಾ ಮೇ
ಲೋಕೇನ ವಾ ಕಿಂ ಸ್ವಧಯಾಮೃತೇನ ।
ಶ್ರೇಯೋ ಮುಹೂರ್ತಂ ತವ ಸನ್ನಿಧಾನಂ
ಮಮೇಹ ಕೃತ್ಸ್ನಾದಪಿ ಜೀವಲೋಕಾತ್ ॥೫೩॥

ನೀನಿಲ್ಲದೆ ನಾನು ಇಲ್ಲಿ ಬದುಕಿದ್ದು ಏನು ಪ್ರಯೋಜನ? ಪರಲೋಕದಿಂದಾಗಲಿ, ಪಿತೃಲೋಕದ ಸ್ವಧೆ, ದೇವಲೋಕದ ಸುಧೆಗಳಿಂದಾಗಲಿ ಏನು ಪ್ರಯೋಜನ? ಸಮಸ್ತ ಜೀವಲೋಕಕ್ಕಿಂತಲೂ ಇಲ್ಲಿ ನನಗೆ ಒಂದು ಮುಹೂರ್ತ ಕಾಲವಾದರೂ ನಿನ್ನ ಜೊತೆಗಿರುವುದೇ ಹೆಚ್ಚು ಸುಖಕರವಾಗಿರುತ್ತದೆ.

ನರೈರಿವೋಲ್ಕಾಭಿರಪೋಹ್ಯಮಾನೋ
ಮಹಾಗಜೋऽಧ್ವಾನಮನುಪ್ರವಿಷ್ಟಃ ।
ಭೂಯಃ ಪ್ರಜಜ್ವಾಲ ವಿಲಾಪಮೇನಂ
ನಿಶಮ್ಯ ರಾಮಃ ಕರುಣಂ ಜನನ್ಯಾಃ ॥೫೪॥

ಜನರು ಮದ್ದಾನೆಯನ್ನು ಕೊಳ್ಳಿಗಳಿಂದ ತಡೆದರೂ ಅದನ್ನು ಲೆಕ್ಕಿಸದೆ ಆನೆ ತನ್ನ ಮಾರ್ಗದಲ್ಲಿಯೇ ಮುಂದೆ ಸಾಗುತ್ತದೆ. ಹಾಗೇ ಮಾತೆಯ ಕರುಣಾಜನಕವಾದ ವಿಲಾಪವನ್ನು ಕೇಳಿಯೂ ಶ್ರೀರಾಮ ತನ್ನ ದಾರಿಯಲ್ಲಿಯೇ ಮುಂದೆ ಸಾಗುತ್ತ ಇನ್ನೂ ಹೆಚ್ಚು ದಾರ್ಢ್ಯದಿಂದ ಬೆಳಗಿದ.

ಸ ಮಾತರಂ ಚೈವ ವಿಸಂಜ್ಞಕಲ್ಪಾ-
ಮಾರ್ತಂ ಚ ಸೌಮಿತ್ರಿಮಭಿಪ್ರತಪ್ತಮ್ ।
ಧರ್ಮೇ ಸ್ಥಿತೋ ಧರ್ಮ್ಯಮುವಾಚ ವಾಕ್ಯಂ
ಯಥಾ ಸ ಏವಾರ್ಹತಿ ತತ್ರ ವಕ್ತುಮ್ ॥೫೫॥

ಧರ್ಮಮಾರ್ಗದಲ್ಲಿ ಸ್ಥಿರವಾಗಿ ನಿಂತ ಶ್ರೀರಾಮ ಪ್ರಜ್ಞೆತಪ್ಪಿದವಳಂತಿದ್ದ ಮಾತೆಗೂ, ದುಃಖಾರ್ತನಾಗಿ ಸಂತಾಪಪಡುತ್ತಿದ್ದ ಲಕ್ಷ್ಮಣನಿಗೂ, ಧರ್ಮಸಮ್ಮತ ವಾದ ಉಪದೇಶ ನೀಡಿದ. ಹಾಗೆ ಉಪದೇಶ ನೀಡಬೇಕೆಂದರೆ ಅದಕ್ಕೆ ಅವನೇ ಸಮರ್ಥ.

ಅಹಂ ಹಿ ತೇ ಲಕ್ಷ್ಮಣ ನಿತ್ಯಮೇವ
ಜಾನಾಮಿ ಭಕ್ತಿಂ ಚ ಪರಾಕ್ರಮಂ ಚ ।

ಮಮ ತ್ವಭಿಪ್ರಾಯಮಸಂನಿರೀಕ್ಷ್ಯ
ಮಾತ್ರಾ ಸಹಾಭ್ಯರ್ದಸಿ ಮಾಂ ಸುದುಃಖಿಮ್ ॥೫೬॥

ಲಕ್ಷ್ಮಣ, ನಾನು ನಿನ್ನ ಭಕ್ತಿಯನ್ನೂ ಪರಾಕ್ರಮವನ್ನೂ ನಿತ್ಯವೂ ನೋಡುತ್ತಿದ್ದೇನೆ. ಆದರೂ ನನ್ನ ಅಭಿಪ್ರಾಯವನ್ನು ಸರಿಯಾಗಿ ತಿಳಿಯದೆ, ತಾಯಿಯೊಂದಿಗೆ ಸೇರಿ, ನನಗೆ ಬಲು ದುಃಖವಾಗುವಂತೆ ನನ್ನನ್ನು ಪೀಡಿಸುತ್ತಿರುವೆ.

ಧರ್ಮಾರ್ಥಕಾಮಾಃ ಕಿಲ ಜೀವಲೋಕೇ
ಸಮೀಕ್ಷಿತಾ ಧರ್ಮಫಲೋದಯೇಷು ।
ಯೇ ತತ್ರ ಸರ್ವೇ ಸ್ಯುರಸಂಶಯಂ ಮೇ
ಭಾರ್ಯೇವ ವಶ್ಯಾಭಿಮತಾ ಸುಪುತ್ರಾ ॥೫೭॥

ಧರ್ಮಾಚರಣೆಯಲ್ಲಿ ಧರ್ಮ ಅರ್ಥ ಕಾಮಗಳು ಎಲ್ಲವೂ ಪರಸ್ಪರ ವಿರೋಧವಿಲ್ಲದೆ ಇರುವಲ್ಲಿ, ಧರ್ಮಫಲವಾದ ಎಲ್ಲ ಸುಖಸಮೃದ್ಧಿಗಳಿಗೆ ಅವು ಮೂರೂ ಕಾರಣವಾಗುವುದು ಕಂಡಿದೆ. ಇದರಲ್ಲಿ ನನಗೆ ಸಂಶಯವಿಲ್ಲ. ಇದಕ್ಕೆ ಉದಾಹರಣೆ ಅನುಕೂಲಳಾದ ಪತ್ನಿ. ಅವಳು ಧರ್ಮಕಾರ್ಯಗಳಲ್ಲಿ ಅನುಕೂಲಳಾಗಿ ಧರ್ಮಫಲವನ್ನು, ಪ್ರೇಯಸಿಯಾಗಿ ಕಾಮಸುಖವನ್ನು ಪುತ್ರವತಿಯಾಗಿ ಪುತ್ರನ ಮೂಲಕ ಪಿತೃಲೋಕರೂಪ ಅರ್ಥಫಲವನ್ನೂ ಉಂಟುಮಾಡುವಳು.

ಯಸ್ಮಿಂಸ್ತು ಸರ್ವೇ ಸ್ಯುರಸಂನಿವಿಷ್ಟಾ
ಧರ್ಮೋ ಯತಃ ಸ್ಯಾತ್ತದುಪಕ್ರಮೇತ ।
ದ್ವೇಷ್ಯೋ ಭವತ್ಯರ್ಥಪರೋ ಹಿ ಲೋಕೇ
ಕಾಮಾತ್ಮತಾ ಖಲ್ವಪಿ ನ ಪ್ರಶಸ್ತಾ ॥೫೮॥

ಯಾರಲ್ಲಿ ಧರ್ಮ ಅರ್ಥ ಕಾಮಗಳು ಜೊತೆ ಸೇರಿರುವುದಿಲ್ಲವೋ ಅವನಿಗೆ ಧರ್ಮಸಾಧನೆ ಯಾವುದರಿಂದಾಗುವುದೋ ಅಂಥ ಕರ್ಮದಲ್ಲಿಯೇ ಅವನು ಪ್ರವೃತ್ತಿ ಮಾಡಬೇಕು. ಅರ್ಥಸಂಪಾದನದಲ್ಲೇ ಆಸಕ್ತನಾದರೆ ಲೋಕದಲ್ಲಿ ಎಲ್ಲರೂ ಅವನನ್ನು ದ್ವೇಷ ಮಾಡುತ್ತಾರೆ. ಕೇವಲ ಕಾಮಾಸಕ್ತನಾದರೂ ಕೂಡ ಅವನು ಪಶುತುಲ್ಯನೆನಿಸಿ ಪ್ರಶಂಸೆಗೆ ಅರ್ಹನಾಗುವುದಿಲ್ಲ.

ಗುರುಶ್ಚ ರಾಜಾ ಚ ಪಿತಾ ಚ ವೃದ್ಧಃ
ಕ್ರೋಧಾತ್ ಪ್ರಹರ್ಷಾದ್ಯದಿ ವಾಪಿ ಕಾಮಾತ್ ।

ಯದ್ವಾದಿಶೇತ್ ಕಾರ್ಯಮವೇಕ್ಷ್ಯ ಧರ್ಮಂ
ಕಸ್ತಂ ನ ಕುರ್ಯಾದನೃಶಂಸವೃತ್ತಿಃ ॥೫೯॥

ಪ್ರಕೃತ ಗುರುವೂ ರಾಜನೂ ಪಿತನೂ ವೃದ್ಧನೂ ಆಗಿರುವ ರಾಜನು ಕೋಪದಿಂದಾಗಲಿ ಸಂತೋಷದಿಂದಾಗಲಿ ಅಥವಾ ಕಾಮದಿಂದಾಗಲಿ ತನ್ನ ಪ್ರತಿಜ್ಞಾಪಾಲನ ರೂಪವಾದ ಧರ್ಮವನ್ನು ಉದ್ದೇಶಿಸಿ ಏನು ಕಾರ್ಯ ಮಾಡಲು ಆದೇಶಿಸುತ್ತಾನೋ ಆ ಧರ್ಮಕಾರ್ಯವನ್ನು ಮಾತ್ರವೇ ನಾನು ಮಾಡುತ್ತೇನೆ. ರಾಜದ್ರೋಹಿಯಲ್ಲದವನು ಯಾರು ತಾನೆ ರಾಜನ ಮಾತನ್ನು ನಡೆಸದೆ ಇರುತ್ತಾನೆ?

ಸ ವೈ ನ ಶಕ್ನೋಮಿ ಪಿತುಃ ಪ್ರತಿಜ್ಞಾ-
ಮಿಮಾಮಕರ್ತುಂ ಸಕಲಾಂ ಯಥಾವತ್ ।
ಸ ಹ್ಯಾವಯೋಸ್ತಾತ ಗುರುರ್ನಿಯೋಗೇ
ದೇವ್ಯಾಶ್ಚ ಭರ್ತಾ ಸ ಗತಿಃ ಸ ಧರ್ಮಃ ॥೬೦॥

ತಂದೆಯ ಈ ಆಜ್ಞೆಯನ್ನು ಪೂರ್ತಿಯಾಗಿ ಯಥಾವತ್ತಾಗಿ ಪಾಲಿಸದಿರಲು ನನಗೆ ಸಾಧ್ಯವಿಲ್ಲ. ಲಕ್ಷ್ಮಣ ! ನಮಗಿಬ್ಬರಿಗೂ ಆಜ್ಞೆ ನೀಡುವಲ್ಲಿ ತಂದೆಯೇ ಸಮರ್ಥನಾದ ಗುರು. ದೇವಿಗೂ ಅವನು ಪತಿಯೂ ಗತಿಯೂ ಆಗಿದ್ದಾನೆ. ಅವನು ಹೇಳಿದಂತೆ ನಡೆಯುವುದೇ ನಮಗೆಲ್ಲರಿಗೂ ಧರ್ಮ.

ತಸ್ಮಿನ್ ಪುನರ್ಜೀವತಿ ಧರ್ಮರಾಜೇ
ವಿಶೇಷತಃ ಸ್ವೇ ಪಥಿ ವರ್ತಮಾನೇ ।
ದೇವೀ ಮಯಾ ಸಾರ್ಧಮಿತೋऽಪಗಚ್ಛೇತ್
ಕಥಂಸ್ವಿದನ್ಯಾ ವಿಧವೇವ ನಾರೀ ॥೬೧॥

ಧರ್ಮಪ್ರವರ್ತಕನಾದ ರಾಜನು ಜೀವಿಸಿರುವಾಗ, ವಿಶೇಷವಾಗಿ ಮಗನನ್ನಾದರೂ ತ್ಯಜಿಸಿ, ಕೊಟ್ಟ ಮಾತನ್ನು ಕಾಪಾಡಿಕೊಳ್ಳುವ ತನ್ನ ಧರ್ಮ ಮಾರ್ಗದಲ್ಲಿ ತಾನಿರುವಾಗ, ದೇವಿಯು ಧರ್ಮಭ್ರಷ್ಟಳಾದ ವಿಧವೆಯಾದ ನಾರಿಯಂತೆ, ನನ್ನೊಡನೆ ಹೇಗೆ ಕಾಡಿಗೆ ಬರುತ್ತಾಳೆ?

ಸಾ ಮಾನುಮನ್ಯಸ್ವ ವನಂ ವ್ರಜಂತಂ
ಕುರುಷ್ವ ನಃ ಸ್ವಸ್ತ್ಯಯನಾನಿ ದೇವಿ ।

ಯಥಾ ಸಮಾಪ್ತೇ ಪುನರಾವ್ರಜೇಯಂ
ಯಥಾ ಹಿ ಸತ್ಯೇನ ಪುನರ್ಯಯಾತಿಃ ॥೬೨॥

ದೇವಿ, ನನಗೆ ನೀನು ಕಾಡಿಗೆ ಹೋಗಲು ಅನುಮತಿ ನೀಡು. ವನವಾಸ ಸಮಾಪ್ತಿಯಾದಾಗ, ಸತ್ಯದ ಅವಲಂಬನದಿಂದ ಯಯಾತಿಯು ಪುನಃ ಸ್ವರ್ಗಕ್ಕೆ ಹಿಂತಿರುಗಿದಂತೆ, ನಾನೂ ಸತ್ಯದ ಅವಲಂಬನದಿಂದ ಅಯೋಧ್ಯೆಗೆ ಸುಖವಾಗಿ ಹಿಂತಿರುಗುವಂತೆ ನನಗೆ ಶುಭಾಶಂಸನ ಮಾಡು.

ಯಶೋ ಹ್ಯಹಂ ಕೇವಲರಾಜ್ಯಕಾರಣಾತ್
ನ ಪೃಷ್ಠತಃ ಕರ್ತುಮಲಂ ಮಹೋದಯಮ್ ।
ಅದೀರ್ಘಕಾಲೇ ನ ತು ದೇವಿ ಜೀವಿತೇ
ವೃಣೇಽವರಾಮದ್ಯ ಮಹೀಮಧರ್ಮತಃ ॥೬೩॥

ಕೇವಲ ರಾಜ್ಯಲಾಭಕ್ಕಾಗಿ ಮಹಾಫಲದಾಯಕವಾದ ಯಶಸ್ಸನ್ನು ಕಡೆಗಣಿಸಲಾರೆ. ದೇವಿ, ಜೀವನವು ಅಶಾಶ್ವತವಾಗಿರುವಾಗ ಅದಕ್ಕಾಗಿ ಅಧರ್ಮದಿಂದ ನಿಕೃಷ್ಟವಾದ ರಾಜ್ಯವನ್ನು ನಾನು ಬಯಸಲಾರೆ.

ಪ್ರಸಾದಯನ್ನರವೃಷಭಃ ಸ್ವಮಾತರಂ
ಪರಾಕ್ರಮಾಜ್ಜಿಗಮಿಷುರೇವ ದಂಡಕಾನ್ ।
ಅಥಾನುಜಂ ಭೃಶಮನುಶಾಸ್ಯ ದರ್ಶನಂ
ಚಕಾರ ತಾಂ ಹೃದಿ ಜನನೀಂ ಪ್ರದಕ್ಷಿಣಮ್ ॥೬೪॥

ದೃಢವಾದ ಉತ್ಸಾಹದಿಂದ ದಂಡಕಾರಣ್ಯಕ್ಕೆ ಹೋಗಲು ಸಂಕಲ್ಪಿಸಿದ್ದ ಪುರುಷೋತ್ತಮ ಶ್ರೀರಾಮನು ತನ್ನ ತಾಯಿಯ ಮನಒಲಿಸಿಕೊಂಡು, ತಮ್ಮ ಲಕ್ಷ್ಮಣನಿಗೆ ಧರ್ಮರಹಸ್ಯವನ್ನೂ ಬೋಧಿಸಿ, ತಾಯಿಗೆ ಪ್ರದಕ್ಷಿಣೆ ಮಾಡಿ, ಕಾಡಿಗೆ ಹೋಗಲು ಮನಸ್ಸಿನಲ್ಲಿ ನಿರ್ಧಾರ ಮಾಡಿದ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಇಪ್ಪತ್ತೊಂದನೇ ಸರ್ಗ ಮುಗಿಯಿತು.

❖

ದ್ವಾವಿಂಶಃ ಸರ್ಗಃ

ಸರ್ಗ – 22

ಶ್ರೀರಾಮನು ಲಕ್ಷ್ಮಣನಿಗೆ ದೈವಪ್ರಾಬಲ್ಯವನ್ನು ನಿರೂಪಿಸುವುದು.

ಅಥ ತಂ ವ್ಯಥಯಾ ದೀನಂ ಸವಿಶೇಷಮಮರ್ಷಿತಮ್ ।
ಶ್ವಸಂತಮಿವ ನಾಗೇಂದ್ರಂ ರೋಷವಿಸ್ಫಾರಿತೇಕ್ಷಣಮ್ ॥೧॥

ಆಸಾದ್ಯ ರಾಮಃ ಸೌಮಿತ್ರಿಂ ಸುಹೃದಂ ಭ್ರಾತರಂ ಪ್ರಿಯಮ್ ।
ಉವಾಚೇದಂ ಸ ಧೈರ್ಯೇಣ ಧಾರಯನ್ ಸತ್ತ್ವಮಾತ್ಮವಾನ್ ॥೨॥

ಶ್ರೀರಾಮ ವನವಾಸಕ್ಕೆ ನಿರ್ಧಾರ ಮಾಡಿದ್ದರಿಂದ ಲಕ್ಷ್ಮಣನು ವ್ಯಥೆಯಿಂದ ದೀನನಾದ. ಬಲು ಅಸಹನೆಯಿಂದ ರೋಷದಿಂದ ಕಣ್ಣಗಲಿಸಿದ. ಹಾವಿನಂತೆ ಬುಸುಗುಟ್ಟಿದ. ಪ್ರೀತಿಯ ತಮ್ಮನೂ ಗೆಳೆಯನೂ ಆದ ಆತನನ್ನು ಬಳಿಗೆ ಬರಸೆಳೆದುಕೊಂಡು ದೃಢಮನಸ್ಕನಾದ ಶ್ರೀರಾಮನು ಧೈರ್ಯದಿಂದ ನುಡಿದ.

ನಿಗೃಹ್ಯ ರೋಷಂ ಶೋಕಂ ಚ ಧೈರ್ಯಮಾಶ್ರಿತ್ಯ ಕೇವಲಮ್ ।
ಅವಮಾನಂ ನಿರಸ್ಯೇಮಂ ಗೃಹೀತ್ವಾ ಹರ್ಷಮುತ್ತಮಮ್ ॥೩॥

ಉಪಕ್ಲೃಪ್ತಂ ಹಿ ಯತ್ಕಿಂಚಿದಭಿಷೇಕಾರ್ಥಮದ್ಯ ಮೇ ।
ಸರ್ವಂ ವಿಸರ್ಜಯ ಕ್ಷಿಪ್ರಂ ಕುರು ಕಾರ್ಯಂ ನಿರತ್ಯಯಮ್ ॥೪॥

'ರೋಷವನ್ನು ಶೋಕವನ್ನೂ ತಡೆದುಕೊಂಡು, ಕೇವಲ ಧೈರ್ಯ ತಂದುಕೊಂಡು, ಅವಮಾನವನ್ನು ಬದಿಗಿಟ್ಟು, ಒಳ್ಳೆಯ ಉತ್ಸಾಹವನ್ನು ತುಂಬಿಕೊಂಡು, ನನ್ನ ಅಭಿಷೇಕಕ್ಕಾಗಿ ಈಗ ಸಜ್ಜಾಗಿರುವುದನ್ನು ಎಲ್ಲವನ್ನೂ ವಿಸರ್ಜಿಸು. ಯಾವುದೇ ತೊಂದರೆಯಾಗದಂತೆ ನಮ್ಮ ಕಾರ್ಯವನ್ನು ಬೇಗನೆ ಮಾಡು.

ಸೌಮಿತ್ರೇ ಯೋಽಭಿಷೇಕಾರ್ಥೇ ಮಮ ಸಂಭಾರಸಂಭ್ರಮಃ ।
ಅಭಿಷೇಕನಿವೃತ್ತ್ಯರ್ಥೇ ಸೋಽಸ್ತು ಸಂಭಾರಸಂಭ್ರಮಃ ॥೫॥

ಲಕ್ಷ್ಮಣ, ನನ್ನ ಅಭಿಷೇಕಕ್ಕಾಗಿ ಏನು ಸಿದ್ಧತೆ ನಡೆದಿದೆಯೋ ಆ ಸಿದ್ಧತೆ ನನ್ನ ಅಭಿಷೇಕ ನಿವೃತ್ತಿಗಾಗೇ ಇರಲಿ.

ಯಸ್ಯಾ ಮದಭಿಷೇಕಾರ್ಥೇ ಮಾನಸಂ ಪರಿತಪ್ಯತೇ ।
ಮಾತಾ ಸಾ ಮೇ ಯಥಾ ನ ಸ್ಯಾತ್ ಸವಿಶಂಕಾ ತಥಾ ಕುರು ॥೬॥

ಅರ್ಥ ಅಂದರೆ ನಿವೃತ್ತಿ. ಕೈಕೇಯಿಮಾತೆಗೆ ನನ್ನ ಅಭಿಷೇಕವಾಗಿ ಬಿಡುವುದೋ ಏನೋ ಎಂದು ಅಭಿಷೇಕ ನಿವೃತ್ತಿಗಾಗಿ ಮನಸ್ಸು ಆತಂಕದಿಂದ ಬೇಯುತ್ತದೆ. ಅವಳಿಗೆ ಯಾವ ಆತಂಕವೂ ಬಾರದಂತೆ ಮಾಡು.

ತಸ್ಯಾಃ ಶಂಕಾಮಯಂ ದುಃಖಂ ಮುಹೂರ್ತಮಪಿ ನೋತ್ಸಹೇ ।
ಮನಸಿ ಪ್ರತಿಸಂಜಾತಂ ಸೌಮಿತ್ರೇಽಹಮುಪೇಕ್ಷಿತುಮ್ ॥೭॥

ಆತಂಕರೂಪವಾದ ದುಃಖ ಕೈಕೇಯಿಗೆ ಮುಹೂರ್ತಕಾಲವೂ ಕೂಡ ಮನಸ್ಸಿನಲ್ಲಿ ಉಂಟಾಗುವುದನ್ನು, ಲಕ್ಷ್ಮಣ, ನಾನು ಉಪೇಕ್ಷಿಸಲಾರೆ.

ನ ಬುದ್ಧಿಪೂರ್ವಂ ನಾಬುದ್ಧಂ ಸ್ಮರಾಮೀಹ ಕದಾಚನ ।
ಮಾತೄಣಾಂ ವಾ ಪಿತುರ್ವಾಹಂ ಕೃತಮಲ್ಪಂ ಚ ವಿಪ್ರಿಯಮ್ ॥೮॥

ನಾನು ತಾಯಂದಿರಿಗೂ ತಂದೆಗೂ ತಿಳಿದೋ ತಿಳಿಯದೆಯೋ ಸ್ವಲ್ಪವೂ ಕೂಡ ಅಪ್ರಿಯವನ್ನು ಎಂದೂ ಮಾಡಿಲ್ಲ, ಮಾಡಿದ ನೆನಪು ನನಗಿಲ್ಲ.

ಸತ್ಯಃ ಸತ್ಯಾಭಿಸಂಧಶ್ಚ ನಿತ್ಯಂ ಸತ್ಯಪರಾಕ್ರಮಃ ।
ಪರಲೋಕಭಯಾದ್ಭೀತೋ ನಿರ್ಭಯೋಽಸ್ತು ಪಿತಾ ಮಮ ॥೯॥

ಸತ್ಯವನ್ನೇ ನುಡಿವ ಸ್ವಭಾವದವನು, ಕೊಟ್ಟಮಾತಿಗೆ ತಪ್ಪದಿರುವವನು, ಎಂದೂ ವಿಫಲವಾಗದ ಪರಾಕ್ರಮಉಳ್ಳವನು, ಪರಲೋಕದ ಭೀತಿ ಉಳ್ಳವನು. ನಮ್ಮ ತಂದೆ. ತನ್ನ ಮಾತು ನಡೆಯದಿರುವ ಭಯ ಅವನಿಗೆ ಉಂಟಾಗಬಾರದು. ಅವನು ನಿರ್ಭಯನಾಗಿರಲಿ.

ತಸ್ಯಾಪಿ ಹಿ ಭವೇದಸ್ಮಿನ್ ಕರ್ಮಣ್ಯಪ್ರತಿಸಂಹೃತೇ ।
ಸತ್ಯಂ ನೇತಿ ಮನಸ್ತಾಪಸ್ತಸ್ಯ ತಾಪಸ್ತಪೇಚ್ಚ ಮಾಮ್ ॥೧೦॥

ಈ ಅಭಿಷೇಕ ಕಾರ್ಯವನ್ನು ನಾನು ನಿಲ್ಲಿಸದಿದ್ದರೆ ತನ್ನ ಮಾತು ಸುಳ್ಳಾಗುವು-ದೆಂದು ಅವನಿಗೆ ಮನದಲ್ಲಿ ಪರಿತಾಪ ಉಂಟಾದೀತು. ಅದು ನನಗೆ ಪರಿತಾಪ ಉಂಟುಮಾಡೀತು.

ಅಭಿಷೇಕವಿಧಾನಂ ತು ತಸ್ಮಾತ್ ಸಂಹೃತ್ಯ ಲಕ್ಷ್ಮಣ ।
ಅನ್ವಗೇವಾಹಮಿಚ್ಛಾಮಿ ವನಂ ಗಂತುಮಿತಃ ಪುನಃ ॥೧೧॥

ಅದರಿಂದ ಲಕ್ಷ್ಮಣ, ಈ ಅಭಿಷೇಕ ಕಾರ್ಯಕ್ರಮವನ್ನು ರದ್ದುಗೊಳಿಸಿ ನಾನು ಕೂಡಲೇ ಇಲ್ಲಿಂದ ಕಾಡಿಗೆ ಹೋಗಲು ಇಚ್ಛಿಸುತ್ತೇನೆ.

ಮಮ ಪ್ರವ್ರಾಜನಾದದ್ಯ ಕೃತಕೃತ್ಯಾ ನೃಪಾತ್ಮಜಾ ।
ಸುತಂ ಭರತಮವ್ಯಗ್ರಮಭಿಷೇಚಯತಾಂ ತತಃ ॥೧೨॥

ನಾನು ಹೊರಟು ಹೋಗುವುದರಿಂದ ಕೈಕೇಯಿ ಕೃತಕೃತ್ಯಳಾಗಿ ಪುತ್ರ ಭರತನಿಗೆ ನಿರಾತಂಕವಾಗಿ ಅಭಿಷೇಕ ನಡೆಸಲಿ.

ಮಯಿ ಚೀರಾಜಿನಧರೇ ಜಟಾಮಂಡಲಧಾರಿಣೆ ।
ಗತೇಽರಣ್ಯಂ ಚ ಕೈಕೇಯ್ಯಾ ಭವಿಷ್ಯತಿ ಮನಃಸುಖಮ್ ॥೧೩॥

ನಾನು ನಾರುಡೆ ತೊವಲುಗಳನ್ನು ತೊಟ್ಟು ಜಡೆಕಟ್ಟಿಕೊಂಡು ಕಾಡಿಗೆ ಹೋದೆ-ನೆಂದರೆ ಕೈಕೇಯಿ ಮನಸ್ಸಿಗೆ ನೆಮ್ಮದಿ ಸಿಗುವುದು.

ಬುದ್ಧಿಃ ಪ್ರಣೀತಾ ಯೇನೇಯಂ ಮನಶ್ಚ ಸುಸಮಾಹಿತಮ್ ।
ತಂ ತು ನಾರ್ಹಾಮಿ ಸಂಕ್ಲೇಷ್ಟುಂ ಪ್ರವ್ರಜಿಷ್ಯಾಮಿ ಮಾ ಚಿರಮ್ ॥೧೪॥

ಕೈಕೇಯಿಗೆ ಈ ರೀತಿ ಬುದ್ಧಿ ಕೊಟ್ಟಿದ್ದೂ, ಅವಳ ಮನಸ್ಸಿಗೆ ಅಂಥ ದೃಢತೆಯನ್ನು ಕೊಟ್ಟಿದ್ದೂ ವಿಧಿಯೆ. ಬ್ರಹ್ಮವರವೆ. ಅದನ್ನು ವ್ಯತ್ಯಾಸಮಾಡಲು ನಾನು ಇಷ್ಟ ಪಡುವುದಿಲ್ಲ. ಅದರಿಂದ ನಾನು ತಡಮಾಡದೆ ಕಾಡಿಗೆ ಹೋಗುತ್ತೇನೆ.

ಕೃತಾಂತಸ್ತ್ವೇವ ಸೌಮಿತ್ರೇ ದ್ರಷ್ಟವ್ಯೋ ಮತ್ಪ್ರವಾಸನೇ ।
ರಾಜ್ಯಸ್ಯ ಚ ವಿತೀರ್ಣಸ್ಯ ಪುನರೇವ ನಿವರ್ತನೇ ॥೧೫॥

ಲಕ್ಷ್ಮಣ, ನನಗೆ ವನವಾಸ ಪ್ರಾಪ್ತವಾದುದಕ್ಕೂ, ತಂದೆ ರಾಜ್ಯವನ್ನು ಕೊಡುವೆ-ನೆಂದರೂ ಅದು ನನಗೆ ಲಭ್ಯವಾಗದೆ ಹೋದುದಕ್ಕೂ ವಿಧಿಯೇ ಕಾರಣವೆಂದು ತಿಳಿಯಬೇಕು.

ಕೈಕೇಯ್ಯಾಃ ಪ್ರತಿಪತ್ತಿರ್ಹಿ ಕಥಂ ಸ್ಯಾನ್ಮಮ ಪೀಡನೇ ।
ಯದಿ ತಸ್ಯಾ ನ ಭಾವೋಽಯಂ ಕೃತಾಂತವಿಹಿತೋ ಭವೇತ್ ॥೧೬॥

ಕೈಕೇಯಿಗೆ ನನ್ನನ್ನು ಪೀಡಿಸುವ ಈ ಬುದ್ಧಿ ವಿಧಿವಿಲಾಸವಲ್ಲದಿದ್ದರೆ ಅದು ಅವಳಿಗೆ ಹೇಗೆ ಬರುತ್ತಿತ್ತು?

ಜಾನಾಸಿ ಹಿ ಯಥಾ ಸೌಮ್ಯ ನ ಮಾತೃಷು ಮಮಾಂತರಮ್ ।
ಭೂತಪೂರ್ವೋ ವಿಶೇಷೋ ವಾ ತಸ್ಯಾ ಮಯಿ ಸುತೇಽಪಿ ವಾ ॥೧೭॥

ಲಕ್ಷ್ಮಣ, ನಿನಗೇ ಗೊತ್ತಿದೆ, ನನಗೆ ಮಾತೆಯರಲ್ಲಿ ತಾರತಮ್ಯಭಾವನೆ ಎಂದೂ ಇರಲಿಲ್ಲ. ಕೈಕೇಯಿಗಾದರೂ ನನ್ನಲ್ಲಿ ಮತ್ತು ಭರತನಲ್ಲಿ ತಾರತಮ್ಯಭಾವನೆ ಇರಲಿಲ್ಲ.

ಸೋಽಭಿಷೇಕನಿವೃತ್ತ್ಯರ್ಥೈಃ ಪ್ರವಾಸಾರ್ಥೈಶ್ಚ ದುರ್ವಚೈಃ ।
ಉಗ್ರೈರ್ವಾಕ್ಯೈರಹಂ ತಸ್ಯಾ ನಾನ್ಯದ್ದೈವಾತ್ ಸಮರ್ಥಯೇ ॥೧೮॥

ರಾಮನಿಗೆ ಅಭಿಷೇಕವಾಗದಿರಲಿ ಎಂದು, ಅವನಿಗೆ ವನವಾಸವಾಗಲೆಂದು ಕ್ರೂರವಾಗಿರುವ, ಸ್ವತಃ ಕೈಕೇಯಿಂದಲೂ ನುಡಿಯಲಾಗದಿರುವಂಥ ಮಾತುಗಳಿಂದ ಕೈಕೇಯಿ ತಂದೆಯನ್ನು ಧರ್ಮಸಂಕಟದಲ್ಲಿ ಬೀಳಿಸಿದ್ದುದಕ್ಕೆ ದೈವಕ್ಕಿಂತ ಬೇರೆಯಾದ ಯಾವುದೇ ಕಾರಣವನ್ನು ನಾನು ಒಪ್ಪಲಾರೆ.

ದೈವವೆಂದರೆ ಪೂರ್ವಕರ್ಮವಲ್ಲ. ತದನುಸಾರ ಫಲನೀಡುವ ಪರದೇವತೆ-ಯಾದ ಶ್ರೀರಾಮನೆ, ಶ್ರೀಹರಿಯೆ 'ದೈವ' ವನವಾಸದಲ್ಲಿ ರಾವಣವಧ ಮಾಡುವುದು ರಾಮನ ಸಂಕಲ್ಪವಾಗಿತ್ತು. ಅದಕ್ಕೆ ಅಭಿಷೇಕ ನಿಲ್ಲುವುದು ಬ್ರಹ್ಮನ ಸಂಕಲ್ಪವಾಗಿತ್ತು . ಈ ದೈವಸಂಕಲ್ಪಗಳನ್ನು ತಡೆವ ಶಕ್ತಿ , ಪೌರುಷ, ಯಾವ ಪುರುಷನಿಗೆ ಇರಬಲ್ಲದು?

ಕಥಂ ಪ್ರಕೃತಿಸಂಪನ್ನಾ ರಾಜಪುತ್ರೀ ತಥಾಗುಣಾ ।
ಬ್ರೂಯಾತ್ ಸಾ ಪ್ರಾಕೃತೇವ ಸ್ತ್ರೀ ಮತ್ಪೀಡಾಂ ಭರ್ತೃಸಂನಿಧೌ ॥೧೯॥

ಒಳ್ಳೆಯ ಸ್ವಭಾವದವಳು, ರಾಜಕುಮಾರಿ, ರಾಜಕುಮಾರಿಗೆ ತಕ್ಕ ಗುಣಗಳಿಂದ ಯುಕ್ತಳೂ ಆಗಿದ್ದವಳು ಕೈಕೇಯಿ. ವಿಧಿಯ ಕೈವಾಡ ಇಲ್ಲಿ ಇಲ್ಲದಿರುತ್ತಿದ್ದರೆ ದುಷ್ಟ ಸ್ತ್ರೀಯಂತೆ 'ನನಗೆ ರಾಮನಿಗೆ ಪೀಡೆಯಾಗಲಿ' ಎಂದು ಪತಿಯ ಬಳಿಯಲ್ಲಿ ಅವಳು ಹೇಗೆ ತಾನೆ ನುಡಿಯುತ್ತಿದ್ದಳು?

ಯದಚಿಂತ್ಯಂ ತು ತದ್ದೈವಂ ಭೂತೇಷ್ವಪಿ ನ ಹನ್ಯತೇ ।
ವ್ಯಕ್ತಂ ಮಯಿ ಚ ತಸ್ಯಾಂ ಚ ಪತಿತೋ ಹಿ ವಿಪರ್ಯಯಃ ॥೨೦॥

ಅಚಿಂತ್ಯವಾದ ಆ ದೈವವು ಜೀವಿಗಳಲ್ಲಿ ಎಲ್ಲಿಯೂ ಕುಂಠಿತವಾಗುವುದಿಲ್ಲ.

ಇದರಲ್ಲಿ ಸಂಶಯವಿಲ್ಲ. ನನಗೆ ಅಭಿಷೇಕವಾಗದಿದ್ದುದು ಮತ್ತು ಕೈಕೇಯಿಗೆ ನನ್ನಲ್ಲಿ ವಾತ್ಸಲ್ಯವಿಲ್ಲವಾದುದು ಎರಡೂ ದೈವದ್ದೇ ಪ್ರಭಾವ ಎನ್ನುವುದು ಸ್ಪಷ್ಟವಿದೆ.

ಕಶ್ಚ ದೈವೇನ ಸೌಮಿತ್ರೇ ಯೋದ್ಧುಮುತ್ಸಹತೇ ಪುಮಾನ್ ।
ಯಸ್ಯ ನ ಗ್ರಹಣಂ ಕಿಂಚಿತ್ ಕರ್ಮಣೋಽನ್ಯನ್ನ ದೃಶ್ಯತೇ ॥೨೧॥

ಲಕ್ಷ್ಮಣ, ದೈವಕ್ಕೆ ವಿರೋಧವಾಗಿ ಯಾವ ಮನುಷ್ಯನು ತಾನೆ ಹೋರಾಡಬಲ್ಲ? ಏಕೆಂದರೆ ಅವನಿಗೆ ದೈವ ಕಣ್ಣಿಗೆ ಕಾಣಿಸುವುದೇ ಇಲ್ಲ. ಅದನ್ನು ಅವನಿಗೆ ತಿಳಿಸುವ ಸಾಧನವು ಅದು ಮಾಡುವ ಕರ್ಮಬಿಟ್ಟು ಬೇರೆನೂ ಇಲ್ಲ.

ದಶರಥನಂತೆ ಮಾನವರೂ ಪ್ರಶ್ನಜಾತಕಾದಿಗಳಿಂದ ದೈವ ಪ್ರತಿಕೂಲ ವೆಂದು ತಿಳಿದರೂ ಅದು ಹೇಗೆ ಪ್ರತಿಕೂಲವಾಗುವುದೆಂದು ಮೊದಲಿಗೆ ತಿಳಿಯಲು ಶಕ್ಯವಿಲ್ಲ. ಬಳಿಕ ತಿಳಿದರೆ ಫಲವಿಲ್ಲ.

ಸುಖದುಃಖೇ ಭಯಕ್ರೋಧೌ ಲಾಭಾಲಾಭೌ ಭವಾಭವೌ ।
ಯಚ್ಚ ಕಿಂಚಿತ್ ತಥಾಭೂತಂ ನನು ದೈವಸ್ಯ ಕರ್ಮ ತತ್ ॥೨೨॥

ಸುಖದುಃಖಗಳು, ಭಯಕ್ರೋಧಗಳು ಲಾಭನಷ್ಟಗಳು ಉತ್ಪತ್ತಿನಾಶಗಳು ಮತ್ತು ಇದೇ ರೀತಿ ಅಚಿಂತ್ಯಕಾರಣದಿಂದಾಗುವವುಗಳು ಎಲ್ಲವೂ ದೈವದ ಕಾರ್ಯಗಳೇ ತಾನೆ?

ಋಷಯೋಽಪ್ಯುಗ್ರತಪಸೋ ದೈವೇನಾಭಿಪ್ರಪೀಡಿತಾಃ ।
ಉತ್ಸೃಜ್ಯ ನಿಯಮಾಂಸ್ತೀವ್ರಾನ್ ಭ್ರಶ್ಯಂತೇ ಕಾಮಮನ್ಯುಭಿಃ ॥೨೩॥

ಕಠೋರ ತಪಸ್ಸು ಮಾಡುವ ಋಷಿಗಳು ಕೂಡ ದೈವದಿಂದ ಪೀಡಿತರಾಗಿ ತೀವ್ರವಾದ ನಿಯಮಗಳನ್ನು ತೊರೆದು ಕಾಮಕ್ರೋಧವಶರಾಗಿ ಭ್ರಷ್ಟರಾಗುವುದು ಕಂಡಿದೆ.

ಅಸಂಕಲ್ಪಿತಮೇವೇಹ ಯದಕಸ್ಮಾತ್ ಪ್ರವರ್ತತೇ ।
ನಿವರ್ತ್ಯಾರಬ್ಧಮಾರಂಭೈರ್ನನು ದೈವಸ್ಯ ಕರ್ಮ ತತ್ ॥೨೪॥

ನಾವು ಆಲೋಚನೆಯನ್ನೇ ಮಾಡದಿದ್ದುದು ಈ ಲೋಕದಲ್ಲಿ ಅಕಸ್ಮಾತ್ ನಡೆಯುತ್ತದೆ. ಪ್ರಯತ್ನಪೂರ್ವಕವಾಗಿ ನಾವು ಆರಂಭಿಸಿದ್ದು ನಿಂತುಹೋಗಿರುತ್ತದೆ. ಇದು ದೈವದ ಕೈವಾಡ.

ಏತಯಾ ತತ್ತ್ವಯಾ ಬುದ್ಧ್ಯಾ ಸಂಸ್ತಭ್ಯಾತ್ಮಾನಮಾತ್ಮನಾ ।
ವ್ಯಾಹತೇಽಪ್ಯಭಿಷೇಕೇ ಮೇ ಪರಿತಾಪೋ ನ ವಿದ್ಯತೇ ॥೨೫॥

ಅಬಾಧಿತವಾದ ಈ ಬುದ್ಧಿಯಿಂದ ನಿನ್ನ ಮನಸ್ಸನ್ನು ನೀನು ಸ್ವತಃ ಸ್ಥಿರವಾಗಿಸಿದೆ-ಯಾದರೆ ನನ್ನ ಅಭಿಷೇಕ ನಿಂತರೂ ನಿನಗೆ ಅದರಿಂದ ಪರಿತಾಪವಾಗಲಾರದು.

ತಸ್ಮಾದಪರಿತಾಪಃ ಸಂಸ್ತ್ವಮಪ್ಯನುವಿಧಾಯ ಮಾಮ್ ।
ಪ್ರತಿಸಂಹಾರಯ ಕ್ಷಿಪ್ರಮಾಭಿಷೇಚನಿಕೀಂ ಕ್ರಿಯಾಮ್ ॥೨೬॥

ಅದರಿಂದ ಪರಿತಾಪಪಡದೆ ನೀನೂ ಸಹ ನನ್ನಂತೆಯೆ ಆಲೋಚಿಸಿ ಅಭಿಷೇಕದ ಚಟುವಟಿಕೆಯನ್ನು ಬೇಗನೆ ನಿಲ್ಲಿಸಿಬಿಡು.

ಏಭಿರೇವ ಘಟೈಃ ಸರ್ವೈರಭಿಷೇಚನಸಂಭೃತೈಃ ।
ಮಮ ಲಕ್ಷ್ಮಣ ತಾಪಸ್ಯೇ ವ್ರತಸ್ನಾನಂ ಭವಿಷ್ಯತಿ ॥೨೭॥

ನನ್ನ ರಾಜ್ಯಾಭಿಷೇಕಕ್ಕಾಗಿ ಸಜ್ಜುಗೊಳಿಸಿರುವ ಈ ಎಲ್ಲ ಕಲಶಗಳಿಂದಲೇ, ಲಕ್ಷ್ಮಣ, ನನಗೆ ತಾಪಸವೃತ್ತಿಯ ವ್ರತಾಭಿಷೇಕ ನಡೆಯಲಿ.

ಅಥವಾ ಕಿಂ ಮಮೈತೇನ ರಾಜ್ಯದ್ರವ್ಯಮಯೇನ ತು ।
ಉದ್ಧೃತಂ ಮೇ ಸ್ವಯಂ ತೋಯಂ ವ್ರತಾದೇಶಂ ಕರಿಷ್ಯತಿ ॥೨೮॥

ಅಥವಾ ಈ ರಾಜ್ಯದ್ರವ್ಯಮಯವಾದ ಪುಣ್ಯೋದಕದಿಂದ ನನಗೇನಾಗ ಬೇಕಿದೆ? ನಾನೇ ಸ್ವತಃ ಎತ್ತಿ ತಂದ ನೀರು ವ್ರತಸಂಕಲ್ಪ ಮಾಡಿಸುತ್ತದೆ.

ಮಾ ಚ ಲಕ್ಷ್ಮಣ ಸಂತಾಪಂ ಕಾರ್ಷೀರ್ಲಕ್ಷ್ಮ್ಯಾ ವಿಪರ್ಯಯೇ ।
ರಾಜ್ಯಂ ವಾ ವನವಾಸೋ ವಾ ವನವಾಸೋ ಮಹೋದಯಃ ॥೨೯॥

ಲಕ್ಷ್ಮಣ, ಅಯ್ಯೋ, ಇದು ಒಂದು ಲಕ್ಷ್ಮಿಯ ಬದಲು ಇನ್ನೊಂದು ಲಕ್ಷ್ಮಿ! ಎಂದು ಸಂತಾಪಪಡಬೇಡ. ರಾಜ್ಯಲಕ್ಷ್ಮಿಯಾದರೇನು ಅಥವಾ ವನಲಕ್ಷ್ಮಿಯಾದರೇನು? ನನಗೆ ಎರಡೂ ಒಂದೆ. ನಿಜ ಹೇಳುವುದಾದರೆ ವನವಾಸವೇ ಮಹಾಫಲಪ್ರದ.

ನ ಲಕ್ಷ್ಮಣಾಸ್ಮಿನ್ ಮಮ ರಾಜ್ಯವಿಘ್ನೇ
ಮಾತಾ ಯವೀಯಸ್ಯತಿಶಂಕನೀಯಾ ।

ದೈವಾಭಿಪನ್ನಾ ಹಿ ವದತ್ಯನಿಷ್ಟಂ
ಜಾನಾಸಿ ದೈವಂ ಚ ತಥಾಪ್ರಭಾವಮ್ ॥೩೦॥

ಲಕ್ಷ್ಮಣ, ಈ ಅಭಿಷೇಕ ಕಾರ್ಯನಿಂತಿದ್ದಕ್ಕೆ ಚಿಕ್ಕ ತಾಯಿ ಕಾರಣಳಾದಳೆಂದು ಶಂಕಿಸುವುದು ಬೇಡ. ದೈವಕ್ಕೆ ವಶಳಾಗಿ ಅವಳು ಅನಿಷ್ಟವನ್ನು ನುಡಿಯುತ್ತಾಳೆ. ದೈವದ ಪ್ರಭಾವವೇ ಅಂಥದ್ದೆಂದು ನಿನಗೆ ತಿಳಿಯಿತು ತಾನೆ?

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಇಪ್ಪತ್ತೆರಡನೇ ಸರ್ಗ ಮುಗಿಯಿತು.

❖

ತ್ರಯೋವಿಂಶಃ ಸರ್ಗಃ

ಸರ್ಗ – 23

ಲಕ್ಷ್ಮಣನು ಕ್ರುದ್ಧನಾಗಿ ದೈವಕ್ಕಿಂತ ಪೌರುಷ ಪ್ರಬಲವೆಂದು ವಾದಿಸುವುದು.

ಇತಿ ಬ್ರುವತಿ ರಾಮೇ ತು ಲಕ್ಷ್ಮಣೋಽಧಃಶಿರಾ ಮುಹುಃ ।
ಧ್ಯಾತ್ವಾ ಮಧ್ಯಂ ಜಗಾಮೇವ ಮನಸಾ ದುಃಖಹರ್ಷಯೋಃ ॥೧॥

ಶ್ರೀರಾಮ ಪುನಃ ಹೀಗೆ ನುಡಿದಾಗ ಲಕ್ಷ್ಮಣನು ಅದನ್ನು ಒಪ್ಪದೆ ತಲೆತಗ್ಗಿಸಿ ಆಲೋಚನೆ ಮಾಡಿ ಮನಸ್ಸಿನಲ್ಲಿ ದುಃಖ ಹರ್ಷಗಳ ನಡುವೆ ನಿಂತಂತೆ ಕಾಣಿಸಿಕೊಂಡ.

ರಾಮನ ಧರ್ಮನಿಷ್ಠೆಗೆ ಹರ್ಷ, ವನವಾಸದ ನಿರ್ಧಾರ ಮಾಡಿದ್ದಕ್ಕೆ ದುಃಖ.

ತದಾ ತು ಬದ್ಧ್ವಾ ಭ್ರುಕುಟೀಂ ಭ್ರುವೋರ್ಮಧ್ಯೇ ನರರ್ಷಭಃ ।
ನಿಶಶ್ವಾಸ ಮಹಾಸರ್ಪೋ ಬಿಲಸ್ಥ ಇವ ರೋಷಿತಃ ॥೨॥

ಬಿಲದಲ್ಲಿರುವ ಮಹಾಸರ್ಪ ಕೆಣಕಿದರೆ ಬುಸುಗುಟ್ಟುವಂತೆ ಮಹಾ ಶೇಷಾವತಾರನಾದ ಪುರುಷೋತ್ತಮ ಲಕ್ಷ್ಮಣನೂ ಹುಬ್ಬುಗಳ ನಡುವೆ ಹಣೆಯಲ್ಲಿ, ಹುಬ್ಬು ಗಂಟಿಕ್ಕಿ, ರೋಷದಿಂದ ಬುಸುಗುಟ್ಟಿದ.

ತಸ್ಯ ದುಷ್ಪ್ರತಿವೀಕ್ಷ್ಯಂ ತದ್ಭ್ರುಕುಟೀಸಹಿತಂ ತದಾ ।
ಬಭೌ ಕ್ರುದ್ಧಸ್ಯ ಸಿಂಹಸ್ಯ ಮುಖಸ್ಯ ಸದೃಶಂ ಮುಖಮ್ ॥೩॥

ಹುಬ್ಬುಗಂಟಿಕ್ಕಿದ್ದರಿಂದ ನೋಡಲು ಅಸಾಧ್ಯವಾದ ಲಕ್ಷ್ಮಣನ ಮುಖ ಕ್ರುದ್ಧವಾದ ಸಿಂಹದ ಮುಖದಂತೆ ಕಂಡಿತು.

ಅಗ್ರಹಸ್ತಂ ವಿಧುನ್ವಂಸ್ತು ಹಸ್ತಿಹಸ್ತಮಿವಾತ್ಮನಃ ।
ತಿರ್ಯಗೂರ್ಧ್ವಂ ಶರೀರೇ ಚ ಪಾತಯಿತ್ವಾ ಶಿರೋಧರಾಮ್ ।
ಅಗ್ರಾಕ್ಷ್ಣಾ ವೀಕ್ಷಮಾಣಸ್ತು ತಿರ್ಯಗ್ಭ್ರಾತರಮಬ್ರವೀತ್ ॥೪॥

ಕೋಪಗೊಂಡು ಲಕ್ಷ್ಮಣನು ಆನೆಯ ಸೊಂಡಿಲಿನಂಥ ತನ್ನ ತುದಿಕೈಯನ್ನು ಎತ್ತಿ ಆಡಿಸುತ್ತ, ಕುತ್ತಿಗೆಯನ್ನು ಮೇಲಕ್ಕೂ ಕೆಳಕ್ಕೂ ಶರೀರದ ಪಕ್ಕಗಳಿಗೂ ಅಲುಗಾಡಿಸಿ, ತಲೆತಗ್ಗಿಸಿ ಓರೆಗಣ್ಣಿಂದ ಅಣ್ಣನಿಗೆ ನುಡಿದ.

ಅಸ್ಥಾನೇ ಸಂಭ್ರಮೋ ಯಸ್ಯ ಜಾತೋ ವೈ ಸುಮಹಾನಯಮ್ ।
ಧರ್ಮದೋಷಪ್ರಸಂಗೇನ ಲೋಕಸ್ಯಾನತಿಶಂಕಯಾ ॥೫॥

ತಾನು ಪಿತೃವಾಕ್ಯಪರಿಪಾಲನೆ ಮಾಡದೆ ಹೋದರೆ ಧರ್ಮಲೋಪವಾದೀತೆಂಬ ಪ್ರಸಂಗದಿಂದಲೂ, ಲೋಕದಲ್ಲಿ ಆ ಧರ್ಮ ಲುಪ್ತವಾದೀತೆಂದು ಶಂಕೆಯಿಂದಲೂ, ನೀನು ಕಾಡಿಗೆ ಹೋಗುವ ವಿಷಯದಲ್ಲಿ ತೋರುವ ಅತಿಯಾದ ಉತ್ಸಾಹವು ನಿನಗೆ ಅಯುಕ್ತ.

ಕಥಂ ಹ್ಯೇತದಸಂಭ್ರಾಂತಸ್ತ್ವದ್ವಿಧೋ ವಕ್ತುಮರ್ಹತಿ ।
ಯಥಾ ದೈವಮಶೌಂಡೀರಂ ಶೌಂಡೀರಃ ಕ್ಷತ್ರಿಯರ್ಷಭಃ ॥೬॥

ದುರ್ಬಲವಾಗಿರುವ ದೈವವನ್ನು ಪ್ರಬಲವೆಂದು ನೀನು ಹೇಗೆ ಹೇಳುವೆ? ನಿನ್ನಂಥ ಪ್ರಬಲನಾದ ಕ್ಷತ್ರಿಯೋತ್ತಮನು, ಭ್ರಾಂತಿ ಇಲ್ಲದವನು, ಹಾಗೆ ಹೇಗೆ ಹೇಳಬಲ್ಲ?

ಕಿಂ ನಾಮ ಕೃಪಣಂ ದೈವಮಶಕ್ತಮಭಿಶಂಸಸಿ ॥೭॥

ಅಶಕ್ತರು ನಂಬುವ ಅಶಕ್ತವಾದ ದೈವವನ್ನು ನೀನು ಏಕೆ ಹೊಗಳುವೆ?

ಪಾಪಯೋಸ್ತೇ ಕಥಂ ನಾಮ ತಯೋಃ ಶಂಕಾ ನ ವಿದ್ಯತೇ ।
ಸಂತಿ ಧರ್ಮೋಪಧಾಸಕ್ತಾ ಧರ್ಮಾತ್ಮನ್ ಕಿಂ ನ ಬುಧ್ಯಸೇ ॥೮॥

ಪಾಪಿಗಳಾಗಿರುವ ಆ ದಶರಥ–ಕೈಕೇಯಿಯರ ಬಗ್ಗೆ ನಿನಗೆ ಶಂಕೆ ಏಕೆ ಇಲ್ಲ? ಧರ್ಮದ ಸೋಗಿನಲ್ಲಿಯೇ ಇರಲು ಬಯಸುವವರು ಲೋಕದಲ್ಲಿ ಇರುತ್ತಾರೆ. ಸ್ವಭಾವತಃ ಧರ್ಮಾತ್ಮನಾಗಿರುವವನೆ, ನಿನಗೆ ಏಕೆ ಅದು ತಿಳಿಯುವುದಿಲ್ಲ?

ತಯೋಃ ಸುಚರಿತಂ ಸ್ವಾರ್ಥಂ ಶಾಠ್ಯಾತ್ ಪರಿಜಿಹೀರ್ಷತೋಃ ।
ಯದಿ ನೈವಂ ವ್ಯವಸಿತಂ ಸ್ಯಾದ್ಧಿ ಪ್ರಾಗೇವ ರಾಘವ ।
ತಯೋಃ ಪ್ರಾಗೇವ ದತ್ತಶ್ಚ ಸ್ಯಾದ್ವರಃ ಪ್ರಕೃತಶ್ಚ ಸಃ ॥೯॥

ನಿನ್ನ 'ಸ್ವಾರ್ಥ'ವನ್ನು ರಾಜ್ಯಸಂಪತ್ತನ್ನು ಅಪಹರಿಸಲು ಬಯಸಿರುವ ಈ ತಂದೆತಾಯಿಗಳು ಮೊದಲೇ 'ಸುಚರಿತಂ' ಚೆನ್ನಾಗಿ ಅದನ್ನು ಆಲೋಚಿಸಿ ನಿಶ್ಚಯಿಸಿದ್ದರು. ಹಿಂದೆಯೇ ಹೀಗೆ ನಿಶ್ಚಯಿಸಿರದಿದ್ದರೆ ಕೈಕೇಯಿಗೆ ಆಗಲೆ ನೀಡಬೇಕಾಗಿದ್ದ, ಈಗಲೇ ಪ್ರಕೃತವಾದ, ಈ ವರವನ್ನು ದಶರಥ ಹಿಂದೆಯೇ ಕೊಡುತ್ತಿದ್ದ.

'ಭರತನಿಗೇ ಅಭಿಷೇಕ, ರಾಮನಿಗೆ ವನವಾಸ' ಎಂದು ದಶರಥ ಮತ್ತು ಕೈಕೇಯಿಯರಿಬ್ಬರೂ ಹಿಂದೆಯೇ ಮಾತಾಡಿಕೊಂಡಿದ್ದರು. ಆದರೆ ರಾಮ ಜ್ಯೇಷ್ಠ. ಅವನಿಗೇ ಅಭಿಷೇಕ ನ್ಯಾಯಪ್ರಾಪ್ತವಾಗಿದೆ. ಅದನ್ನು ಹೇಗೆ ತಪ್ಪಿಸಬೇಕು? ದೇವಾಸುರ ಯುದ್ಧಕಾಲದಲ್ಲಿ ಕೈಕೇಯಿಗೆ ಕೊಡಬೇಕಾಗಿದ್ದ ವರವನ್ನು ಅಭಿಷೇಕಕಾಲದಲ್ಲಿ ಕೈಕೇಯಿ ಕೇಳಬೇಕು, ದಶರಥ ನೀಡಬೇಕು. ಆ ವರದಂತೆ ರಾಮನನ್ನು ಕಾಡಿಗೆ ಅಟ್ಟಿ ಭರತನಿಗೆ ಅಭಿಷೇಕ ಮಾಡಬೇಕು, ಎಂದು ಹಿಂದೆಯೇ ಇಬ್ಬರೂ ನಿಶ್ಚಯಿಸಿದ್ದರು. ಇಲ್ಲದಿದ್ದರೆ ಹಿಂದೆ ಕೊಡಬೇಕಾಗಿದ್ದ ವರವನ್ನು ಹಿಂದೆಯೇ ಕೈಕೇಯಿ ಏಕೆ ಕೇಳಲಿಲ್ಲ? ದಶರಥ ಏಕೆ ಕೊಡಲಿಲ್ಲ? ವರವನ್ನು ಸತ್ಯವಾಗಿಸುವ ಧರ್ಮದ ಸೋಗು ಇದು, ರಾಮನಿಗೆ ಏಕೆ ತಿಳಿಯುವುದಿಲ್ಲ?' ಎಂದು ಲಕ್ಷ್ಮಣನ ಆಕ್ಷೇಪ. ಇದಕ್ಕೆ ರಾಮ ಇಲ್ಲಿ ಉತ್ತರ ಕೊಡುವುದಿಲ್ಲ. ಹಿಂದೆಯೆ ಇದೆಲ್ಲವೂ ವಿಧಿಯ ಕೈವಾಡ ಎಂದಿದ್ದಾನೆ.

ಕೈಕೇಯಿ ಹಿಂದೆ ವರ ಕೇಳದಿದ್ದುದಾಗಲಿ ದಶರಥ ಹಿಂದೆ ವರ ಕೊಡದಿದ್ದುದಾಗಲಿ ರಾಮನಿಗೆ ವಂಚನೆ ಮಾಡುವ ಉದ್ದೇಶದ್ದಾಗಿರಲಿಲ್ಲ. ಏಕೆಂದರೆ ರಾಮ ಆಗ ಇನ್ನೂ ಹುಟ್ಟಿಯೇ ಇರಲಿಲ್ಲ. ಹುಟ್ಟಿದ ಬಳಿಕ ಅಭಿಷೇಕ ಪ್ರಸ್ತಾಪ ಬರುವವರೆಗೂ ಕೈಕೇಯಿ ತನ್ನ ನಿಸ್ವಾರ್ಥವಾದ ಪತಿಸೇವೆಗೆ ಫಲವನ್ನು ಬಯಸಿರಲಿಲ್ಲ. ಅದರಿಂದಲೇ ಅವಳು ಹಿಂದೆ ಕೇಳಿರಲಿಲ್ಲ. ರಾಮಭರತರು ಇನ್ನೂ ಹುಟ್ಟಿಯೇ ಇರದಿದ್ದಾಗ ಕೇಳುವ ಪ್ರಸಂಗ ಇರಲಿಲ್ಲ. ಪ್ರಕೃತವೂ ಕೈಕೇಯಿ ಸ್ವತಃ ಅದನ್ನು ಸರ್ವಥಾ ಕೇಳುತ್ತಿರಲಿಲ್ಲ. ಅದೃಷ್ಟವಶಾತ್ ಮಂಥರೆಯ ದುರ್ಬೋಧನೆ ಮತ್ತು ಅಸುರಾವೇಶಗಳಿಂದ ಅವಳಿಗೆ ದುರ್ಬುದ್ಧಿ ಉಂಟಾಯಿತು ಎಂದು ಶ್ರೀರಾಮ ಎಲ್ಲವನ್ನೂ ಈ ಮೊದಲೇ ಹೇಳಿಬಿಟ್ಟಿದ್ದಾನೆ. ಲಕ್ಷ್ಮಣ ಮಾತ್ರ ರಾಮನ ವನವಾಸ ದುಃಖವನ್ನು ಸಹಿಸಲಾರದೆ ತಂದೆ ತಾಯಿಗಳನ್ನು ಸುಮ್ಮನೆ ಆಕ್ಷೇಪಿಸುತ್ತಿದ್ದಾನೆ. ಇದನ್ನು ಅವನೇ ಮುಂದಿನ ವಾಕ್ಯದಲ್ಲಿ ಹೇಳುತ್ತಿದ್ದಾನೆ.

ಲೋಕವಿದ್ವಿಷ್ಟಮಾರಬ್ಧಂ ತ್ವದನ್ಯಸ್ಯಾಭಿಷೇಚನಮ್ ।
ನೋತ್ಸಹೇ ಸಹಿತುಂ ವೀರ ತತ್ರ ಮೇ ಕ್ಷಂತುಮರ್ಹಸಿ ॥೧೦॥

ನಿನ್ನೆ ನಿನ್ನ ಅಭಿಷೇಕ ಆರಂಭವಾಗಿದೆ, ಇಂದು ಇನ್ನೊಬ್ಬನಿಗೆ ಅದನ್ನು ಮಾಡುತ್ತಿದ್ದಾರೆ, ದಶರಥ ಮತ್ತು ಕೈಕೇಯಿ, ಲೋಕಕ್ಕೆ ಇಷ್ಟೇ ಗೊತ್ತು. ಅದರಿಂದ ಇದನ್ನು ಲೋಕ ದ್ವೇಷಿಸುತ್ತದೆ. ಲೋಕ ಸರ್ವಥಾ ಒಪ್ಪಲಾರದು. ನಾನೂ ದುಃಖದಿಂದ ಅದನ್ನು ಸಹಿಸಲಾರೆ, ವೀರನೆ, ಈ ವಿಷಯದಲ್ಲಿ ನೀನು ನನ್ನನ್ನು ಕ್ಷಮಿಸಿಬಿಡು.

ಯೇನೇಯಮಾಗತಾ ದ್ವೈಧಂ ತವ ಬುದ್ಧಿರ್ಮಹಾಮತೇ ।
ಸ ಹಿ ಧರ್ಮೋ ಮಮ ದ್ವೇಷ್ಯಃ ಪ್ರಸಂಗಾದ್ಯಸ್ಯ ಮುಹ್ಯಸಿ ॥೧೧॥

ಮಹಾಮತಿ, ಸರ್ವಜ್ಞನೆ, ನೀನು 'ಅಭಿಷೇಕವಾಗಲಿ' ಎಂದು ಹಿಂದೆ ಒಪ್ಪಿದೆ. ಇದೀಗ 'ಬೇಡ'ವೆನ್ನುತ್ತಿರುವೆ. ನಿನ್ನ ಮನಸ್ಸು ಹೀಗೆ ಇಬ್ಬಗೆಯಾಗಲು ಕಾರಣ ತಂದೆಯ ಮಾತಿನಂತೆ ನಡೆಯುವ ನಿನ್ನ 'ಧರ್ಮ'. ವಸ್ತುತಃ ಇದು ಧರ್ಮವಲ್ಲ. ನೀನು ಧರ್ಮ ಎಂದುಕೊಂಡಿರುವುದರಿಂದ ಅದನ್ನು ಕಡೆಗಣಿಸಿದರೆ ಪಾಪವೆಂದು ಮೋಹಕ್ಕೊಳಗಾಗಿರುವೆ. ಇಂಥ ಧರ್ಮವಲ್ಲದ 'ಧರ್ಮ'ವನ್ನು ನಾನು ಸಹಿಸುವು-ದಿಲ್ಲ, ದ್ವೇಷಿಸುತ್ತೇನೆ.

ಕಥಂ ತ್ವಂ ಕರ್ಮಣಾ ಶಕ್ತಃ ಕೈಕೇಯೀವಶವರ್ತಿನಃ ।
ಕರಿಷ್ಯಸಿ ಪಿತುರ್ವಾಕ್ಯಮಧರ್ಮಿಷ್ಠಂ ವಿಗರ್ಹಿತಮ್ ॥೧೨॥

ಕೈಕೇಯಿಗೆ ವಶನಾಗಿ ವರ್ತಿಸುವ ತಂದೆಯ ಮಾತು ಬಹಳ ಧರ್ಮವಿರುದ್ಧ, ನಿಂದ್ಯ, ಅದನ್ನು ನಡೆಸದಿರಲು ನೀನು ನಿನ್ನ ಕ್ರಿಯಾಶಕ್ತಿಯಿಂದ ಸಮರ್ಥನೇ ಆಗಿರುವಾಗ ಅದನ್ನು ಏಕೆ ನಡೆಸುತ್ತಿರುವೆ?

ಯದ್ಯಯಂ ಕಿಲ್ಬಿಷಾದ್ಭೇದಃ ಕೃತೋಽಪ್ಯೇವಂ ನ ಗೃಹ್ಯತೇ ।
ಜಾಯತೇ ತತ್ರ ಮೇ ದುಃಖಂ ಧರ್ಮಸಂಗಶ್ಚ ಗರ್ಹಿತಃ ॥೧೩॥

'ಅಯಂ ಭೇದಃ' ಈ ಅಭಿಷೇಕ ನಡೆಯದಿರುವುದು ಕೇವಲ 'ಕಿಲ್ಬಿಷ'ದಿಂದ, ವರದ ನೆಪದಿಂದ. ಆದರೂ ನೀನು ಅದನ್ನು ಹಾಗೆ ಒಪ್ಪುತ್ತಿಲ್ಲ, ಎಂದರೆ, ನನಗೆ ದುಃಖವಾಗುತ್ತದೆ. ಇಂಥ 'ಧರ್ಮಾ'ಸಕ್ತಿ ಲೋಕದಲ್ಲಿ ನಿಂದಿತವಾಗಿದೆ.

ತವಾಯಂ ಧರ್ಮಸಂಯೋಗೋ ಲೋಕಸ್ಯಾಸ್ಯ ವಿಗರ್ಹಿತಃ ॥೧೪॥

ನಿನ್ನ ಈ 'ಧರ್ಮ'ಬುದ್ಧಿ ಲೋಕನಿಂದಿತವಾಗಿದೆ.

ಮನಸಾಪಿ ಕಥಂ ಕಾಮಂ ಕುರ್ಯಾಸ್ತ್ವಂ ಕಾಮವೃತ್ತಯೋಃ ।
ತಯೋಸ್ತ್ವಹಿತಯೋರ್ನಿತ್ಯಂ ಶತ್ರ್ವೋಃ ಪಿತ್ರಭಿಧಾನಯೋಃ ॥೧೫॥

ಈ ದಶರಥ ಕೈಕೇಯಿಯರು ಹೆಸರಿಗೆ ಮಾತ್ರ ತಂದೆ ತಾಯಿಗಳು, ಸದಾ ನಮಗೆ ಅಹಿತರೂ ಶತ್ರುಗಳು. ತಮ್ಮ ಇಚ್ಛಾನುಸಾರ ನಡೆಯುವವರು. ಅವರ ಇಷ್ಟವನ್ನು ನೀನು ಮನಸ್ಸಿನಿಂದಾದರೂ ಹೇಗೆ ನಡೆಸಿಕೊಡುವೆ?

ಯದ್ಯಪಿ ಪ್ರತಿಪತ್ತಿಸ್ತೇ ದೈವೀ ಚಾಪಿ ತಯೋರ್ಮತಮ್ ।
ತಥಾಪ್ಯಪೇಕ್ಷಣೀಯಂ ತೇ ನ ಮೇ ತದಪಿ ರೋಚತೇ ॥೧೬॥

ಒಂದುವೇಳೆ ತಂದೆತಾಯಿಗಳ ಈ ಬುದ್ಧಿ ನಿನ್ನ ಪ್ರಕಾರ ದೈವ ಉಂಟು ಮಾಡಿದ್ದೇ ಆದರೂ ಅವರ ಇಷ್ಟವನ್ನು ನೀನು ಕಡೆಗಣಿಸಬೇಕು. ಅದನ್ನು ನೀನು ನಡೆಸಿಕೊಡುವುದು ನನಗೆ ಇಷ್ಟವಾಗುವುದಿಲ್ಲ.

ವಿಕ್ಲಬೋ ವೀರ್ಯಹೀನೋ ಯಃ ಸ ದೈವಮನುವರ್ತತೇ ।
ವೀರಾಃ ಸಂಭಾವಿತಾತ್ಮಾನೋ ನ ದೈವಂ ಪರ್ಯುಪಾಸತೇ ॥೧೭॥

ದೀನನಾದವನು ಪೌರುಷವಿಲ್ಲದವನು ದೈವವನ್ನು ನಂಬಬೇಕಾಗುತ್ತದೆ. ತಮ್ಮ ಪೌರುಷದಲ್ಲಿ ವಿಶ್ವಾಸವುಳ್ಳ ವೀರರು ದೈವವನ್ನು ಆಶ್ರಯಿಸುವುದಿಲ್ಲ.

ದೈವವು ವಸ್ತುತಃ ತಾನೇ ಆಗಿರುವಾಗ ಶ್ರೀರಾಮ ಅದನ್ನು ನಂಬದಿರಲು ಶಕ್ಯವಿಲ್ಲ. ಸರ್ವಶಕ್ತನಾದರೂ ನರಸಿಂಹ ತನ್ನ ಹೊಟ್ಟೆಯನ್ನು ತಾನು ಬಗಿದು ಕೊಳ್ಳುವುದಿಲ್ಲ! ಎನ್ನುತ್ತಾನೆ ರಾಮ.

ದೈವಂ ಪುರುಷಕಾರೇಣ ಯಃ ಸಮರ್ಥಃ ಪ್ರಬಾಧಿತುಮ್ ।
ನ ದೈವೇನ ವಿಪನ್ನಾರ್ಥಃ ಪುರುಷಃ ಸೋಽವಸೀದತಿ ॥೧೮॥

ಪುರುಷಪ್ರಯತ್ನದಿಂದ ದೈವವನ್ನು ಬಾಧಿಸಲು ಯಾರು ಶಕ್ತನೋ ಅಂತಹ ಪುರುಷನು ದೈವದಿಂದ ತನ್ನ ಕಾರ್ಯವನ್ನು ಹಾಳುಮಾಡಿಕೊಳ್ಳುವುದಿಲ್ಲ. ತಾನೂ ಅನರ್ಥ ಭಾಗಿಯಾಗುವುದಿಲ್ಲ.

ಶ್ರೀರಾಮ ಹೇಳುತ್ತಾನೆ— ದೈವವನ್ನು ಬಾಧಿಸಲು ದೈವ ತಾನೇ ಶಕ್ತ, ಹೊರತು ಇನ್ನೊಬ್ಬ ಶಕ್ತನಿಲ್ಲ.

ದ್ರಕ್ಷ್ಯಂತಿ ತ್ವದ್ಯ ದೈವಸ್ಯ ಪೌರುಷಂ ಪುರುಷಸ್ಯ ಚ ।
ದೈವಮಾನುಷಯೋರದ್ಯ ವ್ಯಕ್ತಾ ವ್ಯಕ್ತಿರ್ಭವಿಷ್ಯತಿ ॥೧೯॥

ಪ್ರಜೆಗಳು ಇಂದು ದೈವದ ಪ್ರಭಾವವೇನು ಪುರುಷನ ಪೌರುಷವೇನು ಎಂಬು–ದನ್ನು ಕಣ್ಣಾರೆ ಕಾಣುತ್ತಾರೆ. ದೈವ ಪೌರುಷಗಳ ಸ್ವರೂಪ ಇಂದೇ ವ್ಯಕ್ತವಾಗುತ್ತದೆ.

ಅದ್ಯ ಮತ್ಪೌರುಷಹತಂ ದೈವಂ ದ್ರಕ್ಷ್ಯಂತಿ ವೈ ಜನಾಃ ।
ಯದ್ದೈವಾದಾಹತಂ ತೇಽದ್ಯ ದೃಷ್ಟಂ ರಾಜ್ಯಾಭಿಷೇಚನಮ್ ॥೨೦॥

ಯಾವ ದೈವದಿಂದ ಇಂದು ನಿನ್ನ ರಾಜ್ಯಾಭಿಷೇಕ ನಿಂತು ಹೋದುದನ್ನು ಜನರು ಕಂಡರೋ ಆ ದೈವ ಈಗ ನನ್ನ ಪೌರುಷದಿಂದ ಹತವಾಗುವುದನ್ನೂ ಜನರು ನೋಡುವರು.

ಅತ್ಯಂಕುಶಮಿವೋದ್ದಾಮಂ ಗಜಂ ಮದಬಲೋದ್ಧತಮ್ ।
ಪ್ರಧಾವಿತಮಹಂ ದೈವಂ ಪೌರುಷೇಣ ನಿವರ್ತಯೇ ॥೨೧॥

ಅಂಕುಶವನ್ನು ಲೆಕ್ಕಿಸದೆ, ಸರಪಣಿಯನ್ನೂ ಮುರಿದು, ಮದಬಲದಿಂದ ಉದ್ಧತವಾಗಿ ಧಾವಿಸುವ ಆನೆಯಂತೆ ಇರುವ ದೈವವನ್ನು ನಾನು ಪೌರುಷದಿಂದ ನಾಶಪಡಿಸುತ್ತೇನೆ.

ಲೋಕಪಾಲಾಃ ಸಮಾಸ್ತಾಸ್ತೇ ನಾದ್ಯ ರಾಮಾಭಿಷೇಚನಮ್ ।
ನ ಚ ಕೃತ್ಸ್ನಾಸ್ತ್ರಯೋ ಲೋಕಾ ವಿಹನ್ಯುಃ ಕಿಂ ಪುನಃ ಪಿತಾ ॥೨೨॥

ಎಲ್ಲ ಲೋಕಪಾಲಕರು ಮತ್ತು ಎಲ್ಲ ಮೂರು ಲೋಕಗಳು ಕೂಡ ಇಂದು ರಾಮಾಭಿಷೇಕವಾಗುವುದನ್ನು ತಡೆಯಲಾರರು. ಇನ್ನು ತಂದೆ ಏನು ಮಾಡಬಲ್ಲ?

ಯೈರ್ವಿವಾಸಸ್ತವಾರಣ್ಯೇ ಮಿಥೋ ರಾಜನ್ ಸಮರ್ಥಿತಃ ।
ಅರಣ್ಯೇ ತೇ ವಿವತ್ಸ್ಯಂತಿ ಚತುರ್ದಶ ಸಮಾಸ್ತಥಾ ॥೨೩॥

ರಾಜನೆ, ಯಾರು ಪರಸ್ಪರ ಸೇರಿ ನಿನಗೆ ವನವಾಸವಾಗುವುದಕ್ಕೆ ಸಂಚು ಮಾಡಿದರೋ ಅವರೇ ಮುಂದೆ ಹದಿನಾಲ್ಕು ವರ್ಷ ವನವಾಸ ಮಾಡುತ್ತಾರೆ.

ಅಹಂ ತದಾಶಾಂ ಛೇತ್ಸ್ಯಾಮಿ ಪಿತುಸ್ತಸ್ಯಾಶ್ಚ ಯಾ ತವ ।
ಅಭಿಷೇಕವಿಘಾತೇನ ಪುತ್ರರಾಜ್ಯಾಯ ವರ್ತತೇ ॥೨೪॥

ನಿನಗೆ ಅಭಿಷೇಕವಾಗುವುದನ್ನು ತಡೆದು ಭರತನಿಗೆ ರಾಜ್ಯ ಸಿಗುವಂತೆ ಮಾಡಲು ಯತ್ನಿಸುವ ಈ ಕೈಕೇಯಿ ಮತ್ತು ತಂದೆ ಇವರ ಆ ಆಸೆಯನ್ನು ನಾನು ಭಗ್ನಗೊಳಿಸುತ್ತೇನೆ.

ಮದ್ಬಲೇನ ವಿರುದ್ಧಾಯ ನ ಸ್ಯಾದ್ದೈವಬಲಂ ತಥಾ ।
ಪ್ರಭವಿಷ್ಯತಿ ದುಃಖಾಯ ಯಥೋಗ್ರಂ ಪೌರುಷಂ ಮಮ ॥೨೫॥

ನನ್ನ ಉಗ್ರವಾದ ಪೌರುಷವು ವಿರೋಧಿಗೆ ದುಃಖ ಉಂಟುಮಾಡುವುದರಿಂದ, ನನ್ನ ಬಲದಿಂದ ಅವನಿಗೆ ದೈವಬಲವೂ ಇಲ್ಲವಾಗುತ್ತದೆ.

ಊರ್ಧ್ವಂ ವರ್ಷಸಹಸ್ರಾಂತೇ ಪ್ರಜಾಪಾಲ್ಯಮನಂತರಮ್ ।
ಆರ್ಯಪುತ್ರಾಃ ಕರಿಷ್ಯಂತಿ ವನವಾಸಂ ಗತೇ ತ್ವಯಿ ॥೨೬॥

ಮುಂದೆ ಸಾವಿರ ವರ್ಷಗಳ ಅನಂತರ ನೀನು ವನವಾಸ ಮಾಡುವಾಗ ಆರ್ಯನಾದ ನಿನ್ನ ಪುತ್ರರೇ ಪ್ರಜಾಪಾಲನ ಮಾಡುತ್ತಾರೆ.

ಪೂರ್ವಂ ರಾಜರ್ಷಿವೃತ್ತ್ಯಾ ಹಿ ವನವಾಸೋ ವಿಧೀಯತೇ ।
ಪ್ರಜಾ ನಿಕ್ಷಿಪ್ಯ ಪುತ್ರೇಷು ಪುತ್ರವತ್ ಪರಿಪಾಲನೇ ॥೨೭॥

ಪ್ರಜೆಗಳನ್ನು ಮಕ್ಕಳಂತೆ ಕಾಪಾಡುವ ಉದ್ದೇಶದಿಂದ ಅವರನ್ನು ಪುತ್ರರಲ್ಲಿ ಇರಿಸಿ ರಾಜರ್ಷಿಗಳ ಆಚಾರದಂತೆ ರಾಜನು ತಾನು ವಾನಪ್ರಸ್ಥಾಶ್ರಮದಲ್ಲಿ ವನವಾಸ ಮಾಡುವುದು ಹಿಂದಿನಿಂದಲೂ ರೂಢಿಯಿಂದ ವಿಹಿತವಾಗಿದೆ.

ಸ ಚೇದ್ರಾಜನ್ಯನೇಕಾಗ್ರೇ ರಾಜ್ಯವಿಭ್ರಮಶಂಕಯಾ ।
ನೈವಮಿಚ್ಛಸಿ ಧರ್ಮಾತ್ಮನ್ ರಾಜ್ಯಂ ರಾಮ ತ್ವಮಾತ್ಮನಿ ॥೨೮॥

ಪ್ರತಿಜಾನೇ ಚ ತೇ ವೀರ ಮಾ ಭೂವಂ ವೀರಲೋಕಭಾಕ್ ।
ರಾಜ್ಯಂ ಚ ತವ ರಕ್ಷೇಯಮಹಂ ವೇಲೇವ ಸಾಗರಮ್ ॥೨೯॥

'ಅನೇಕಾಗ್ರೇ' ನಾನಾ ಭೋಗಗಳಲ್ಲಿ ಆಸಕ್ತನಾಗಿದ್ದು ಒಂದು ವಾನಪ್ರಸ್ಥ-ಧರ್ಮದಲ್ಲಿ ಏಕಾಗ್ರತೆ ಇಲ್ಲದವನಾದ 'ರಾಜನಿ' ರಾಜಾ ದಶರಥನಲ್ಲಿ 'ಯದಿ ಸಃ ನ ಚೇತ್' ಜ್ಯೇಷ್ಠನಿಗೆ ಅಭಿಷೇಕಮಾಡಿ ವಾನಪ್ರಸ್ಥ ಸ್ವೀಕಾರ ಮಾಡುವ ಆ ಧರ್ಮವು ಇಲ್ಲದಿದ್ದಲ್ಲಿ, 'ರಾಜ್ಯ ವಿಭ್ರಮಶಂಕಯಾ' ರಾಜ್ಯ ಅಯೋಗ್ಯರ ಪಾಲಾದೀತೆಂಬ ಶಂಕೆಯಿಂದ ಹಾಗಾಗಬಾರದೆಂಬ ಏಕಮಾತ್ರ ಉದ್ದೇಶದಿಂದ 'ಆತ್ಮನಿ' ತನ್ನಲ್ಲಿ 'ರಾಜ್ಯ ಕಾಮತ್ವಂ' ರಾಜ್ಯರೂಪವಾದ ಭೋಗ್ಯದ ಸಂಬಂಧವನ್ನು ನೀನು 'ಇಚ್ಛಸಿ ಚೇತ್' ಅಂಗೀಕರಿಸಿದರೆ, ಅಷ್ಟೇ ಮಾಡು ಸಾಕು. ರಾಜ್ಯರಕ್ಷಣೆಯ ಭಾರವನ್ನು ನನಗೇ ಬಿಡು. ಸಮುದ್ರತೀರವು ಸಮುದ್ರವನ್ನು ರಕ್ಷಿಸುವಂತೆ ನಾನು ರಾಜ್ಯವನ್ನು ರಕ್ಷಿಸುವೆನು. ಇಲ್ಲದಿದ್ದರೆ ನಾನು ವೀರಲೋಕ ಭಾಗಿಯಾಗುವುದೇ ಬೇಡ ಎಂದು ಪ್ರತಿಜ್ಞೆ ಮಾಡುತ್ತೇನೆ.

ಮಂಗಲೈರಭಿಷಿಂಚಸ್ವ ತತ್ರ ತ್ವಂ ವ್ಯಾಪೃತೋ ಭವ ।
ಅಹಮೇಕೋ ಮಹೀಪಾಲಾನಲಂ ವಾರಯಿತುಂ ಬಲಾತ್ ॥೩೦॥

ಮಂಗಳೋದಕಗಳಿಂದ ಅಭಿಷೇಕ ಮಾಡಿಸಿಕೊಳ್ಳು. ವಿರೋಧಿಗಳಿಂದ ಅಡೆತಡೆ ಉಂಟಾಗಬಹುದೆಂಬ ಶಂಕೆಯನ್ನು ಬಿಟ್ಟು ಅಭಿಷೇಕ ಕಾರ್ಯಗಳಲ್ಲಿಯೆ ಮಗ್ನ-ನಾಗಿರು. ವಿರೋಧಿ ರಾಜರನ್ನು ನಾನೊಬ್ಬನೇ ಬಲಾತ್ಕಾರದಿಂದ ತಡೆಯಬಲ್ಲೆ.

ನ ಶೋಭಾರ್ಥಾವಿಮೌ ಬಾಹೂ ನ ಧನುರ್ಭೂಷಣಾಯ ಮೇ ।
ನಾಸಿರಾಬಂಧನಾರ್ಥಾಯ ನ ಶರಾಃ ಸ್ತಂಭಹೇತವಃ ॥೩೧॥

ನನ್ನ ಈ ಬಾಹುಗಳು ಕೇವಲ ಶರೀರ ಶೋಭೆಗಾಗಿ ಇರುವವುಗಳಲ್ಲ. ಧನುಸ್ಸೂ ಅಲಂಕಾರಕ್ಕಾಗಿ ಧರಿಸಿದ್ದಲ್ಲ. ಕತ್ತಿಯೂ ಕೇವಲ ಸೊಂಟಕ್ಕೆ ಕಟ್ಟಿಕೊಳ್ಳುವುದಕ್ಕಾಗಿ ಅಲ್ಲ. ಬಾಣವೂ ಕೇವಲ ಊರುಗೋಲಿಗಾಗಿ ಅಲ್ಲ.

ಅಮಿತ್ರದಮನಾರ್ಥಂ ಮೇ ಸರ್ವಮೇತಚ್ಚತುಷ್ಟಯಮ್ ।
ನ ಚಾಹಂ ಕಾಮಯೇಽತ್ಯರ್ಥಂ ಯಃ ಸ್ಯಾಚ್ಛತ್ರುರ್ಮತೋ ಮಮ ॥

ಈ ನಾಲ್ಕೂ ಕೂಡ ಎಲ್ಲವೂ ನನಗೆ ಶತ್ರುದಮನಕ್ಕಾಗಿ ಇವೆ. ರಣದಲ್ಲಿ ನನಗೆ ಶತ್ರುವೆಂದು ಸಮ್ಮತನಾಗಬಲ್ಲವನನ್ನು ನಾನು ಕಂಡಿಲ್ಲ. ಕಾಣಬೇಕೆಂದು ನನಗೆ ಬಹಳ ಆಸೆ ಇದೆ.

ಅಸಿನಾ ತೀಕ್ಷ್ಣಧಾರೇಣ ವಿದ್ಯುಚ್ಚಲಿತವರ್ಚಸಾ ।
ಪ್ರಗೃಹೀತೇನ ವೈ ಶತ್ರುಂ ವಜ್ರಿಣಂ ವಾ ನ ಕಲ್ಪಯೇ ॥೩೩॥

ಚಂಚಲವಾದ ಮಿಂಚಿನಂತೆ ಹೊಳೆವ ತೀಕ್ಷ್ಣವಾದ ಅಲುಗುಳ್ಳ ಖಡ್ಗವನ್ನು ಹಿಡಿದು ಕತ್ತರಿಸಲು, ದೇವೇಂದ್ರನನ್ನೂ ಕೂಡ ನನಗೆ ಯೋಗ್ಯಶತ್ರುವೆಂದು ನಾನು ಭಾವಿಸುವುದಿಲ್ಲ.

ಖಡ್ಗನಿಷ್ಪೇಷನಿಷ್ಪಿಷ್ಟೈರ್ಗಹನಾ ದುಶ್ಚರಾ ಚ ಮೇ ।
ಹಸ್ತ್ಯಶ್ವರಥಿಹಸ್ತೋರುಶಿರೋಭಿರ್ಭವಿತಾ ಮಹೀ ॥೩೪॥

ಆನೆ-ಕುದುರೆ-ಪದಾತಿಗಳ ಸೊಂಡಿಲು-ತೊಡೆ-ರುಂಡಗಳು ನನ್ನ ಖಡ್ಗದಿಂದ ಕತ್ತರಿಸಿ ಬೀಳುವುದರಿಂದ ರಣಭೂಮಿ ತುಂಬಿ ಹೋಗುವುದು, ಸಂಚರಿಸಲು ಅಸಾಧ್ಯವಾಗುವುದು.

ಖಡ್ಗಧಾರಾಹತಾ ಮೇಽದ್ಯ ದೀಪ್ಯಮಾನಾ ಇವಾದ್ರಯಃ ।
ಪತಿಷ್ಯಂತಿ ದ್ವಿಧಾ ಭೂಮೌ ಮೇಘಾ ಇವ ಸವಿದ್ಯುತಃ ॥೩೫॥

ಬೆಟ್ಟಗಳಂತೆ ಶೋಭಿಸುವ ಆನೆ ಕುದುರೆ ಪದಾತಿಗಳು ನನ್ನ ಖಡ್ಗದ ಅಲುಗಿನಿಂದ ಕತ್ತರಿಸಿ ಎರಡೆರಡು ಭಾಗಗಳಾಗಿ ರಕ್ತದಿಂದ ಸಿಕ್ತವಾಗಿ ಮಿಂಚಿನಿಂದ ಕೂಡಿದ ಮೋಡಗಳಂತೆ ರಣಭೂಮಿಯಲ್ಲಿ ಬೀಳುತ್ತವೆ.

ಬದ್ಧಗೋಧಾಂಗುಳಿತ್ರಾಣೇ ಪ್ರಗೃಹೀತಶರಾಸನೇ ।
ಕಥಂ ಪುರುಷಮಾನೀ ಸ್ಯಾತ್ ಪುರುಷಾಣಾಂ ಮಯಿ ಸ್ಥಿತೇ ॥೩೬॥

ಮುಂಗೈಕವಚ ಬೆರಳುಕಾಪುಗಳನ್ನು ತೊಟ್ಟು ಬಿಲ್ಲು ಹಿಡಿದು ನಾನು ನಿಂತೆನೆಂದರೆ ಪುರುಷರಲ್ಲಿ ಪುರುಷನೆಂದು ಹೇಳಿಕೊಳ್ಳುವವನು ಯಾರು ಇರುತ್ತಾನೆ?

ಬಹುಭಿಶ್ಚೈಕಮತ್ಯಸ್ಯನ್ನೇಕೇನ ಚ ಬಹೂನ್ ಜನಾನ್ ।
ವಿನಿಯೋಕ್ಷ್ಯೆ ಮ್ಯಹಂ ಬಾಣಾನ್ ನೃವಾಜಿಗಜಮರ್ಮಸು ॥೩೭॥

ಬಹುಬಾಣಗಳಿಂದ ಒಬ್ಬನನ್ನು, ಒಂದು ಬಾಣದಿಂದ ಬಹುಜನರನ್ನು – ಹೀಗೆ ಅತಿಯಾಗಿ ನಾಶಪಡಿಸುತ್ತಾ ಪದಾತಿ ಅಶ್ವ ಗಜಗಳ ಮರ್ಮಗಳಲ್ಲಿ ಬಾಣಪ್ರಯೋಗ ಮಾಡುತ್ತೇನೆ ನಾನು.

ಅದ್ಯ ಮೇಽಸ್ತ್ರಪ್ರಭಾವಸ್ಯ ಪ್ರಭಾವಃ ಪ್ರಭವಿಷ್ಯತಿ ।
ರಾಜ್ಞಶ್ಚಾಪ್ರಭುತಾಂ ಕರ್ತುಂ ಪ್ರಭುತ್ವಂ ಚ ತವ ಪ್ರಭೋ ॥೩೮॥

ಪ್ರಭು, ರಾಜನನ್ನು ಅಪ್ರಭುವನ್ನಾಗಿ ನಿನ್ನನ್ನು ಪ್ರಭುವನ್ನಾಗಿ ಮಾಡಲು ಇಂದು ನನ್ನ ಅಸ್ತ್ರಪ್ರಭಾವದ ಪ್ರಭಾವವು ಶಕ್ತವಾಗುತ್ತದೆ.

ಅದ್ಯ ಚಂದನಸಾರಸ್ಯ ಕೇಯೂರಾಮೋಕ್ಷಣಸ್ಯ ಚ ।
ವಸೂನಾಂ ಚ ವಿಮೋಕ್ಷಸ್ಯ ಸುಹೃದಾಂ ಪಾಲನಸ್ಯ ಚ ॥೩೯॥

ಅನುರೂಪಾವಿಮೌ ಬಾಹೂ ರಾಮ ಕರ್ಮ ಕರಿಷ್ಯತಃ ।
ಅಭಿಷೇಚನವಿಘ್ನಸ್ಯ ಕರ್ತ್ರಾಣಾಂ ತೇ ನಿವಾರಣೇ ॥೪೦॥

ಉತ್ತಮ ಗಂಧಲೇಪನಕ್ಕೂ ತೋಳ್ಬಳೆ ತೊಡುವುದಕ್ಕೂ ಧನವನ್ನು ದಾನ-ಮಾಡುವುದಕ್ಕೂ ಮಿತ್ರರ ಸಂರಕ್ಷಣಕ್ಕೂ ಅನುರೂಪವಾದ ನನ್ನ ಈ ಬಾಹುಗಳು ಅಭಿಷೇಕಕ್ಕೆ ಅಡ್ಡಿಪಡಿಸುವವರನ್ನು ತಡೆಯುವ ಕಾರ್ಯದಲ್ಲಿ ಅನುರೂಪವಾದ ಕರ್ಮ ಮಾಡುವುವು.

ಬ್ರವೀಹಿ ಕೋಽದ್ಯೈವ ಮಯಾ ವಿಯುಜ್ಯತಾಂ
ತವಾಸುಹೃತ್ಪ್ರಣಯಶಃಸುಹೃಜ್ಜನೈಃ ।
ಯಥಾ ತವೇಯಂ ವಸುಧಾ ವಶೇ ಭವೇತ್
ತಥೈವ ಮಾಂ ಶಾಧಿ ತವಾಸ್ಮಿ ಕಿಂಕರಃ ॥೪೧॥

ಹೇಳು ನಾನು ಇಂದೇ ನಿನ್ನ ಯಾವ ಶತ್ರುವನ್ನು ಪ್ರಾಣ–ಯಶಸ್ಸು–ಮಿತ್ರ ಜನರಿಂದ ವಿಯುಕ್ತನನ್ನಾಗಿಸಬೇಕು? ಈ ಭೂಮಿಯನ್ನು ನಿನ್ನ ವಶವಾಗುವಂತೆ ಮಾಡಲು ನಾನೇನು ಮಾಡಬೇಕು? ನನಗೆ ಆಜ್ಞೆಮಾಡು. ನಾನು ನಿನ್ನ ದಾಸ-ನಾಗಿರುವೆನು.

ವಿಮೃಜ್ಯ ಬಾಷ್ಪಂ ಪರಿಸಾಂತ್ವ್ಯ ಚಾಸಕೃತ್
ಸ ಲಕ್ಷ್ಮಣಂ ರಾಘವವಂಶವರ್ಧನಃ ।
ಉವಾಚ ಪಿತ್ರ್ಯೇ ವಚನೇ ವ್ಯವಸ್ಥಿತಂ
ನಿಬೋಧ ಮಾಮೇಷ ಹಿ ಸೌಮ್ಯ ಸತ್ಪಥಃ ॥೪೨॥

ರಘುವಂಶ ವರ್ಧನನಾದ ಶ್ರೀರಾಮ ಲಕ್ಷ್ಮಣನ ಕಣ್ಣೀರನ್ನು ಮತ್ತು ಮತ್ತು ಒರೆಸಿ, ಸಂತೈಸಿ ನುಡಿದ, 'ಸೌಮ್ಯನೆ, ಪಿತೃವಾಕ್ಯ ಪರಿಪಾಲನೆಯ ದೃಢ ನಿರ್ಧಾರ ಮಾಡಿದವನು ನಾನು ಎಂದು ತಿಳಿದುಕೊ. ಇದೇ ಸಜ್ಜನರ ಮಾರ್ಗ' ಎಂದು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಇಪ್ಪತ್ತಮೂರನೇ ಸರ್ಗ ಮುಗಿಯಿತು.

ಚತುರ್ವಿಂಶಃ ಸರ್ಗಃ

ಸರ್ಗ – 24

ಶ್ರೀರಾಮನು ಕೌಸಲ್ಯೆಯನ್ನು ಸಂತೈಸಿ ವನವಾಸಕ್ಕೆ ಅನುಜ್ಞೆಯನ್ನು ಪಡೆಯುವುದು.

ತಂ ಸಮೀಕ್ಷ್ಯ ತ್ವವಹಿತಂ ಪಿತುರ್ನಿರ್ದೇಶಪಾಲನೇ ।
ಕೌಸಲ್ಯಾ ಬಾಷ್ಪಸಂರುದ್ಧಾ ವಚೋ ಧರ್ಮಿಷ್ಠಮಬ್ರವೀತ್ ॥೧॥

ಧರ್ಮಿಷ್ಠನಾದ ಶ್ರೀರಾಮನು ಪಿತನ ಆಜ್ಞೆಯನ್ನು ಪಾಲಿಸುವಲ್ಲಿ ದೃಢ ನಿರ್ಧಾರವನ್ನು ಕೈಗೊಂಡಿದ್ದನ್ನು ಕಂಡು ಬಾಷ್ಪಗದ್ಗದಿತಳಾಗಿ ಕೌಸಲ್ಯೆ ನುಡಿದಳು.

ಅದೃಷ್ಟದುಃಖೋ ಧರ್ಮಾತ್ಮಾ ಸರ್ವಭೂತಪ್ರಿಯಂವದಃ ।
ಮಯಿ ಜಾತೋ ದಶರಥಾತ್ ಕಥಮುಂಛೇನ ವರ್ತಯೇತ್ ॥೨॥

ದುಃಖವನ್ನೇ ಕಂಡರಿಯದ, ಧರ್ಮಾತ್ಮನಾದ, ಎಲ್ಲ ಜನರಿಗೂ ಪ್ರಿಯವಾಗಿ ನುಡಿಯುವ, ನನ್ನಲ್ಲಿ ದಶರಥನಿಂದ ಜನಿಸಿದ ಕಂದ, ನೆಲದಲ್ಲಿ ಬಿದ್ದ ಕಾಳುಗಳನ್ನು ಆರಿಸಿ ಹೇಗೆ ಬದುಕಿರಬಲ್ಲ?

ಯಸ್ಯ ಭೃತ್ಯಾಶ್ಚ ದಾಸಾಶ್ಚ ಮೃಷ್ಟಾನ್ಯನ್ನಾನಿ ಭುಂಜತೇ ।
ಕಥಂ ಸ ಭೋಕ್ಷ್ಯತೇ ನಾಥೋ ವನೇ ಮೂಲಫಲಾನ್ಯಯಮ್ ॥೩॥

ಯಾರ ಭಟರೂ ಸೇವಕರೂ ಮೃಷ್ಟಾನ್ನ ಉಣ್ಣುತ್ತಾರೋ ಆ ಪ್ರಭು ಈತ ಕಾಡಿನಲ್ಲಿ ಗಡ್ಡೆ ಗೆಣಸು ಹಣ್ಣುಹಂಪಲುಗಳನ್ನು ಹೇಗೆ ಉಣ್ಣುತ್ತಾನೆ?

ಕ ಏತಚ್ಛ್ರದ್ದಧೇಚ್ಛ್ರುತ್ವಾ ಕಸ್ಯ ವಾ ನ ಭವೇದ್ಭಯಮ್ ।
ಗುಣವಾನ್ ದಯಿತೋ ರಾಜ್ಞೋ ರಾಘವೋ ಯದ್ವಿವಾಸ್ಯತೇ ॥೪॥

ಗುಣವಂತನಾದ, ರಾಜನಿಗೆ ಪ್ರೀತಿಪಾತ್ರನಾದ ರಾಮನನ್ನು ಕಾಡಿಗೆ ಅಟ್ಟಿದ್ದಾರೆ ಎಂದರೆ ಇದನ್ನು ಯಾರು ನಂಬುತ್ತಾರೆ? ಯಾರಿಗೆ ತಾನೆ ಭಯ ಉಂಟಾಗದು? ನಮಗೂ ವನವಾಸವಾದೀತೆಂದು?

ನೂನಂ ತು ಬಲವಾನ್ ಲೋಕೇ ಕೃತಾಂತಃ ಸರ್ವಮಾದಿಶನ್ ।
ಲೋಕೇ ರಾಮಾಭಿರಾಮಸ್ತ್ವಂ ವನಂ ಯತ್ರ ಗಮಿಷ್ಯಸಿ ॥೫॥

ಬಡವಬಲ್ಲಿದರೆಂಬ ಭೇದವಿಲ್ಲದೆ ಎಲ್ಲರಿಗೂ ಸುಖದುಃಖಗಳನ್ನುಂಟು ಮಾಡುವ ವಿಧಿಯೇ ಲೋಕದಲ್ಲಿ ಬಲಿಷ್ಠನೆನ್ನುವುದರಲ್ಲಿ ಸಂಶಯವಿಲ್ಲ. ರಾಮ, ಎಲ್ಲರಿಗೂ ಸುಖನೀಡುವ ನೀನು ವಿಧಿಯಿಂದ ಕಾಡಿಗೆ ಹೋಗುತ್ತಿರುವೆ.

ಅಯಂ ತು ಮಾಮಾತ್ಮಭವಸ್ತವಾದರ್ಶನಮಾರುತಃ ।
ವಿಲಾಪದುಃಖಸಮಿಧೋ ರುದಿತಾಶ್ರುಹುತಾಹುತಿಃ ॥೬॥

ಚಿಂತಾಬಾಷ್ಪಮಹಾಧೂಮಸ್ತವಾಗಮನಚಿಂತಜಃ ।
ಕರ್ಶಯಿತ್ವಾ ಭೃಶಂ ಪುತ್ರ ನಿಃಶ್ವಾಸಾಯಾಸಸಂಭವಃ ॥೭॥

ತ್ವಯಾ ವಿಹೀನಾಮಿಹ ಮಾಂ ಶೋಕಾಗ್ನಿರತುಲೋ ಮಹಾನ್ ।
ಪ್ರಧಕ್ಷ್ಯತಿ ಯಥಾ ಕಕ್ಷ್ಯಂ ಚಿತ್ರಭಾನುರ್ಹಿಮಾತ್ಯಯೇ ॥೮॥

ರಾಮ ನೀನಿಲ್ಲಿಲ್ಲದ್ದರಿಂದ ನನಗೆ ನನ್ನೆದೆಯಲ್ಲಿ ಅತುಲವಾದ ಮಹಾ ಶೋಕಾಗ್ನಿ ಹುಟ್ಟಿ ಬೇಸಗೆಯ ಕಾಡಿನ ಕಾಳ್ಗಿಚ್ಚಿನಂತೆ ಉರಿದು ನನ್ನನ್ನು ಸುಡುತ್ತದೆ. ನಿನ್ನ ಅದರ್ಶನವೇ ಆ ಅಗ್ನಿ ಜ್ವಲಿಸುವಂತೆ ಮಾಡುತ್ತದೆ. ನನ್ನ ವಿಲಾಪ ದುಃಖ ಅದಕ್ಕೆ ಸಮಿತ್ತು. ಕಣ್ಣೀರೇ ಅದಕ್ಕೆ ಹಾಕುವ ಆಹುತಿ. ಚಿಂತೆಯ ಹಬೆಯೇ ದಟ್ಟವಾದ ಹೊಗೆ. 'ನಿನ್ನ ಆಗಮನವೆಂದು?' ಎಂಬ ಚಿಂತೆಯಿಂದ ಅದು ಉಂಟಾಗುತ್ತದೆ. ನಿಶ್ವಾಸರೂಪವಾದ ಪ್ರಯತ್ನದಿಂದ ಅದು ವೃದ್ಧಿಯಾಗುತ್ತದೆ.

ಕಥಂ ಧೇನುಃ ಸ್ವಕಂ ವತ್ಸಂ ಗಚ್ಛಂತಂ ನಾನುಗಚ್ಛತಿ ।
ಅಹಂ ತ್ವಾನುಗಮಿಷ್ಯಾಮಿ ಪುತ್ರ ಯತ್ರ ಗಮಿಷ್ಯಸಿ ॥೯॥

ಮಗು, ನೀನು ಎಲ್ಲಿಗೆ ಹೋಗುವೆಯೋ ಅಲ್ಲಿಗೇ ನಾನು ಹಿಂಬಾಲಿಸಿ ಬರುತ್ತೇನೆ. ಕರು ಹೋದರೆ ತಾಯಿ ಹಸು ಹಿಂದಿನಿಂದ ಹೇಗೆ ಬಾರದಿರುತ್ತದೆ?

ತಥಾ ನಿಗದಿತಂ ಮಾತ್ರಾ ತದ್ವಾಕ್ಯಂ ಪುರುಷರ್ಷಭಃ ।
ಶ್ರುತ್ವಾ ರಾಮೋಽಬ್ರವೀದ್ವಾಕ್ಯಂ ಮಾತರಂ ಭೃಶದುಃಖಿತಾಮ್ ॥೧೦॥

ತಾಯಿ ಹೀಗೆ ಹೇಳಿದಾಗ ಅದನ್ನು ಕೇಳಿದ ಪುರುಷೋತ್ತಮ ರಾಮ ಬಲು ದುಃಖಿತಳಾದ ಆ ತಾಯಿಗೆ ಹೀಗೆ ಹೇಳಿದ.

ಕೈಕೇಯ್ಯಾ ವಂಚಿತೋ ರಾಜಾ ಮಯಿ ಚಾರಣ್ಯಮಾಶ್ರಿತೇ ।
ಭವತ್ಯಾ ಚ ಪರಿತ್ಯಕ್ತೋ ನ ನೂನಂ ವರ್ತಯಿಷ್ಯತಿ ॥೧೧॥

ಕೈಕೇಯಿಯಿಂದ ವಂಚಿತನಾದ ರಾಜ, ನಾನೂ ಕಾಡಿಗೆ ಹೋದಾಗ, ನೀನೂ ಅವನನ್ನು ಬಿಟ್ಟು ಬಿಟ್ಟರೆ, ಅವನು ನಿಶ್ಚಯವಾಗಿ ಬದುಕಿರುವುದಿಲ್ಲ.

ಭರ್ತುಃ ಕಿಲ ಪರಿತ್ಯಾಗೋ ನೃಶಂಸಃ ಕೇವಲಂ ಸ್ತ್ರಿಯಾಃ ।
ಸ ಭವತ್ಯಾ ನ ಕರ್ತವ್ಯೋ ಮನಸಾಪಿ ವಿಗರ್ಹಿತಃ ॥೧೨॥

ಪತಿಯನ್ನು ಪರಿತ್ಯಜಿಸುವುದೆಂದರೆ ಸತಿಗೆ ಅದು ಕೇವಲ ಕ್ರೌರ್ಯ ವೆನಿಸುವುದು. ಅದನ್ನು ನೀನು ಮಾಡಬಾರದು. ಮನಸ್ಸಿನಲ್ಲಿಯೂ ಇಂಥ ಆಲೋಚನೆ ಮಾಡುವುದು ನಿಂದ್ಯವಾಗಿದೆ.

ಯಾವಜ್ಜೀವತಿ ಕಾಕುತ್ಸ್ಥಃ ಪಿತಾ ಮೇ ಜಗತೀಪತಿಃ ।
ಶುಶ್ರೂಷಾ ಕ್ರಿಯತಾಂ ತಾವತ್ ಸ ಹಿ ಧರ್ಮಃ ಸನಾತನಃ ॥೧೩॥

ನನ್ನ ತಂದೆ ರಾಜಾ ದಶರಥ ಬದುಕಿರುವವರೆಗೆ ನೀನು ಅವನ ಶುಶ್ರೂಷೆ ಮಾಡುತ್ತಿರು. ಅದು ಸನಾತನ ಧರ್ಮ.

ಏವಮುಕ್ತಾ ತು ಕೌಸಲ್ಯಾ ರಾಮೇಣ ಶುಭದರ್ಶನಾ ।
ತಥೇತ್ಯುವಾಚ ಸುಪ್ರೀತಾ ರಾಮಮಕ್ಲಿಷ್ಟಕಾರಿಣಮ್ ॥೧೪॥

ದರ್ಶನದಿಂದ ಶುಭಕರಳಾದ ಕೌಸಲ್ಯೆಗೆ ರಾಮ ಹೀಗೆ ಹೇಳಿದಾಗ ಅವಳು ಸಂತುಷ್ಟಳಾಗಿ ಕ್ಲೇಶವಿಲ್ಲದೆ ಎಲ್ಲ ಕಾರ್ಯಮಾಡುವ ಶ್ರೀರಾಮನಿಗೆ 'ಆಗಲಿ ಹಾಗೇ ಮಾಡುವೆನು' ಎಂದಳು.

ಏವಮುಕ್ತಸ್ತು ವಚನಂ ರಾಮೋ ಧರ್ಮಭೃತಾಂ ವರಃ ।
ಭೂಯಸ್ತಾಮಬ್ರವೀದ್ವಾಕ್ಯಂ ಮಾತರಂ ಭೃಶದುಃಖಿತಾಮ್ ॥೧೫॥

ಕೌಸಲ್ಯೆ 'ಹಾಗೇ ಆಗಲಿ' ಎಂದು ಹೇಳಿದರೂ ಅವಳಿಗೆ ಇನ್ನೂ ಪೂರ್ತಿ ಸಮಾಧಾನವಾಗಿಲ್ಲದಿದ್ದನ್ನು ಕಂಡು ಬಲುದುಃಖಿತಳಾಗಿದ್ದ ಮಾತೆಗೆ ರಾಮ ಪುನಃ ಹೇಳಿದ.

ಮಯಾ ಚೈವ ಭವತ್ಯಾ ಚ ಕರ್ತವ್ಯಂ ವಚನಂ ಪಿತುಃ ।
ರಾಜಾ ಭರ್ತಾ ಗುರುಃ ಶ್ರೇಷ್ಠಃ ಸರ್ವೇಷಾಮೀಶ್ವರಃ ಪ್ರಭುಃ ॥೧೬॥

ನಾನಾಗಲಿ ನೀನಾಗಲಿ ಇಬ್ಬರೂ ತಂದೆಯ ಮಾತನ್ನು ನಡೆಸಬೇಕು. ಅವನು ರಾಜ, ಸ್ವಾಮಿ, ಗುರು ಶ್ರೇಷ್ಠ ಎಲ್ಲರನ್ನೂ ಆಳುವ ಪ್ರಭು.

ಇಮಾನಿ ತು ಮಹಾರಣ್ಯೇ ವಿಹೃತ್ಯ ನವ ಪಂಚ ಚ ।
ವರ್ಷಾಣಿ ಪರಮಪ್ರೀತಃ ಸ್ಥಾಸ್ಯಾಮಿ ವಚನೇ ತವ ॥೧೭॥

ನಾನು ಈ ಹದಿನಾಲ್ಕು ವರ್ಷಕಾಲ ಪರಮಸಂತೋಷದಿಂದಲೆ ಮಹಾರಣ್ಯದಲ್ಲಿ ವಿಹಾರ ಮಾಡಿ, ನೀನು ಹೇಳಿದಂತೆಯೇ ಹಿಂತಿರುಗಿ ಬರುತ್ತೇನೆ. ನೀನು ಹೇಳಿದಂತೆಯೆ ನಡೆದುಕೊಳ್ಳುತ್ತೇನೆ.

ಏವಮುಕ್ತಾ ಪ್ರಿಯಂ ಪುತ್ರಂ ಬಾಷ್ಪಪೂರ್ಣಾನನಾ ತದಾ ।
ಉವಾಚ ಪರಮಾರ್ತಾ ತು ಕೌಸಲ್ಯಾ ಪುತ್ರವತ್ಸಲಾ ॥೧೮॥

ಶ್ರೀರಾಮ ಹೀಗೆ ಹೇಳಿದಾಗ ಬಲು ದುಃಖಿತಳಾದ ಪುತ್ರವತ್ಸಲೆಯಾದ ಕೌಸಲ್ಯೆ ಕಣ್ಣೀರಿನಿಂದ ಮುಖವನ್ನು ಒದ್ದೆ ಮಾಡಿಕೊಂಡು ಪ್ರಿಯಪುತ್ರನಿಗೆ ಹೇಳಿದಳು.

ಆಸಾಂ ರಾಮ ಸಪತ್ನೀನಾಂ ವಸ್ತುಂ ಮಧ್ಯೇ ನ ಮೇ ಕ್ಷಮಮ್ ।
ನಯ ಮಾಮಪಿ ಕಾಕುತ್ಸ್ಥ ವನಂ ವನ್ಯಾಂ ಮೃಗೀಂ ಯಥಾ ।
ಯದಿ ತೇ ಗಮನೇ ಬುದ್ಧಿಃ ಕೃತಾ ಪಿತುರಪೇಕ್ಷಯಾ ॥೧೯॥

ಈ ಸವತಿಯರ ನಡುವೆ ವಾಸಮಾಡಲು ನನಗೆ ಶಕ್ಯವಾಗದು, ರಾಮ. ರಾಮ, ಕಾಡಿನ ಹೆಣ್ಣುಜಿಂಕೆಯಂತೆ ಇರುವ ನನ್ನನ್ನೂ ಕೂಡ ನೀನು ಕಾಡಿಗೆ ಕರೆದುಕೊಂಡು ಹೋಗು, ತಂದೆಯ ಅಪೇಕ್ಷೆಯಂತೆ ಕಾಡಿಗೆ ಹೋಗುವ ನಿರ್ಧಾರವನ್ನೇ ನೀನು ಮಾಡಿರುವುದಾದರೆ.

ತಾಂ ತಥಾ ರುದತೀಂ ರಾಮೋ ರುದನ್ ವಚನಮಬ್ರವೀತ್ ।
ಜೀವಂತ್ಯಾ ಹಿ ಸ್ತ್ರಿಯಾ ಭರ್ತಾ ದೈವತಂ ಪ್ರಭುರೇವ ಚ ॥೨೦॥

ಹಾಗೆ ಅಳುತ್ತಿದ್ದ ಕೌಸಲ್ಯೆಗೆ ರಾಮನೂ ಕಣ್ಣೀರಿಡುತ್ತ ನುಡಿದ. ಬದುಕಿರುವ ಸತಿಗೆ ಪತಿಯು ದೈವವೂ ಪ್ರಭುವೂ ಆಗಿರುತ್ತಾನೆ.

ಭವತ್ಯಾ ಮಮ ಚೈವಾದ್ಯ ರಾಜಾ ಪ್ರಭವತಿ ಪ್ರಭುಃ ।
ನ ಹ್ಯನಾಥಾ ವಯಂ ರಾಜ್ಞಾ ಲೋಕನಾಥೇನ ಧೀಮತಾ ॥೨೧॥

ನನಗೂ ನಿನಗೂ ರಾಜನು ಆಜ್ಞೆಮಾಡಲು ಸಮರ್ಥನಾಗಿದ್ದಾನೆ. ಏಕೆಂದರೆ ನಾವು ಲೋಕನಾಥನಾದ ಧೀಮಂತನಾದ ರಾಜನನ್ನು ನಾಥನೆಂದು ಸ್ವೀಕರಿಸಬೇಕು ತಾನೆ? ಅದರಿಂದ ನಾವು ಸನಾಥರು ಹೊರತು ಅನಾಥರಲ್ಲ.

ಭರತಶ್ಚಾಪಿ ಧರ್ಮಾತ್ಮಾ ಸರ್ವಭೂತಪ್ರಿಯಂವದಃ ।
ಭವತೀಮನುವರ್ತೇತ ಸ ಹಿ ಧರ್ಮರತಃ ಸದಾ ॥೨೨॥

ಭರತನೂ ಧರ್ಮಾತ್ಮನೆ. ಎಲ್ಲ ಜನರಿಗೂ ಅವನು ಪ್ರಿಯವಾಗಿಯೆ ಮಾತ-ನಾಡುವವನು. ಅದರಿಂದ ಅವನು ಧರ್ಮನಿರತನಾಗಿದ್ದು ಸದಾ ನಿನ್ನ ಅಪೇಕ್ಷೆಗೆ ಅನುಸಾರವೇ ನಡೆಯುತ್ತಾನೆ.

ಯಥಾ ಮಯಿ ತು ನಿಷ್ಕ್ರಾಂತೇ ಪುತ್ರಶೋಕೇನ ಪಾರ್ಥಿವಃ ।
ಶ್ರಮಂ ನಾವಾಪ್ನುಯಾತ್ಕಿಂಚಿದಪ್ರಮತ್ತಾ ತಥಾ ಕುರು ॥೨೩॥

ಅದರಿಂದ ನಾನು ಹೊರಟು ಹೋದಾಗ ರಾಜನು ಪುತ್ರಶೋಕದಿಂದ ಬಳಲದಂತೆ ನೀನು ಮೈಮರೆಯದೆ ನೋಡಿಕೊಳ್ಳು.

ದಾರುಣಶ್ಚಾಪ್ಯಯಂ ಶೋಕೋ ಯಥೈನಂ ನ ವಿನಾಶಯೇತ್ ।
ರಾಜ್ಞೋ ವೃದ್ಧಸ್ಯ ಸತತಂ ಹಿತಂ ಚರ ಸಮಾಹಿತಾ ॥೨೪॥

ದಾರುಣವಾದ ಈ ಶೋಕವು ರಾಜನನ್ನು ಬಲಿ ತೆಗೆದುಕೊಳ್ಳದಂತೆ ವೃದ್ಧನಾದ ರಾಜನಿಗೆ ನೀನು ಸದಾ ಎಚ್ಚರದಿಂದಿದ್ದು ಹಿತವನ್ನೇ ಮಾಡು.

ವ್ರತೋಪವಾಸನಿರತಾ ಯಾ ನಾರೀ ಪರಮೋತ್ತಮಾ ।
ಭರ್ತಾರಂ ನಾನುವರ್ತೇತ ಸಾ ತು ಪಾಪಗತಿರ್ಭವೇತ್ ॥೨೫॥

ಪರಮ ಉತ್ತಮಳಾದ ಯಾವ ಸತಿಯು ವ್ರತ ಉಪವಾಸಗಳಲ್ಲಿ ನಿರತಳಾಗಿದ್ದೂ ಕೂಡ ಪತಿಯ ಅಭಿಪ್ರಾಯವನ್ನು ಅನುಸರಿಸಿ ನಡೆಯುವುದಿಲ್ಲವೋ ಅವಳು ಪಾಪದಿಂದ ದುರ್ಗತಿಯನ್ನೇ ಹೊಂದುವಳು.

ಭರ್ತುಃ ಶುಶ್ರೂಷಯಾ ನಾರೀ ಲಭತೇ ಸ್ವರ್ಗಮುತ್ತಮಮ್ ।
ಅಪಿ ಯಾ ನಿರ್ನಮಸ್ಕಾರಾ ನಿವೃತ್ತಾ ದೇವಪೂಜನಾತ್ ॥೨೬॥

ಒಂದುವೇಳೆ ದೇವತೆಗಳಿಗೆ ಪೂಜೆ ನಮಸ್ಕಾರಗಳನ್ನು ಮಾಡದಿದ್ದರೂ ನಾರಿಯು ಪತಿಶುಶ್ರೂಷೆಯಿಂದಲೇ ಉತ್ತಮವಾದ ಸ್ವರ್ಗವನ್ನು ಹೊಂದಬಲ್ಲಳು.

ಶುಶ್ರೂಷಾಮೇವ ಕುರ್ವೀತ ಭರ್ತುಃ ಪ್ರಿಯಹಿತೇ ರತಾ ।
ಏಷ ಧರ್ಮಃ ಪುರಾ ದೃಷ್ಟೋ ಲೋಕೇ ವೇದೇ ಶ್ರುತಃ ಸ್ಮೃತಃ ॥೨೭॥

ಸತಿಯು ಸದಾ ಪತಿಯ ಪ್ರಿಯದಲ್ಲಿಯೂ ಹಿತದಲ್ಲಿಯೂ ನಿರತಳಾಗಿದ್ದು ಅವನಿಗೆ ಶುಶ್ರೂಷೆ ಮಾಡಬೇಕು. ಇದು ಹಿಂದಿನಿಂದಲೂ ಶ್ರುತಿ ಸ್ಮೃತಿಗಳಲ್ಲಿ ಉಕ್ತವಾಗಿದ್ದು ಲೋಕದಲ್ಲಿಯೂ ಆಚರಣೆಯಲ್ಲಿ ಕಂಡಿರುವ ಧರ್ಮವಾಗಿದೆ.

ಅಗ್ನಿಕಾರ್ಯೇಷು ಚ ಸದಾ ಸುಮನೋಭಿಶ್ಚ ದೇವತಾಃ ।
ಪೂಜ್ಯಾಸ್ತೇ ಮತ್ಕೃತೇ ದೇವಿ ಬ್ರಾಹ್ಮಣಾಶ್ಚೈವ ಸುವ್ರತಾಃ ॥೨೮॥

ದೇವಿ, ಪತಿಯೊಂದಿಗೆ ಯಾಗ ಹೋಮಾದಿ ಅಗ್ನಿಕಾರ್ಯಗಳಲ್ಲಿಯೂ ನಿರತಳಾಗಬೇಕು, ಹೂಗಳಿಂದ ದೇವತೆಗಳನ್ನೂ ಪೂಜಿಸಬೇಕು. ನನಗೆ ಒಳ್ಳೆಯದಾಗಲೆಂದು ಒಳ್ಳೆಯ ವ್ರತನಿಷ್ಠರಾದ ಬ್ರಾಹ್ಮಣರನ್ನೂ ಆರಾಧಿಸಬೇಕು.

ಏವಂ ಕಾಲಂ ಪ್ರತೀಕ್ಷಸ್ವ ಮಮಾಗಮನಕಾಂಕ್ಷಿಣೀ ।
ನಿಯತಾ ನಿಯತಾಹಾರಾ ಭರ್ತೃಶುಶ್ರೂಷಣೇ ರತಾ ॥೨೯॥

ಹೀಗೇ ನನ್ನ ಆಗಮನವನ್ನು ಬಯಸಿ ಪತಿಶುಶ್ರೂಷೆ ಮಾಡುತ್ತ ನಿಯತಾಹಾರಳಾಗಿ ನಿಯಮಾನುಷ್ಠಾನವನ್ನೂ ಮಾಡುತ್ತ ನಾನು ಬರುವ ಕಾಲವನ್ನು ಇದಿರು ನೋಡುತ್ತಿರು.

ಪ್ರಾಪ್ಸ್ಯಸೇ ಪರಮಂ ಕಾಮಂ ಮಯಿ ಪ್ರತ್ಯಾಗತೇ ಸತಿ ।
ಯದಿ ಧರ್ಮಭೃತಾಂ ಶ್ರೇಷ್ಠೋ ಧಾರಯಿಷ್ಯತಿ ಜೀವಿತಮ್ ॥೩೦॥

ಧಾರ್ಮಿಕರಲ್ಲಿ ಉತ್ತಮನಾದ ತಂದೆ ನಾನು ಬರುವವರೆಗೂ ಬದುಕಿದ್ದರೆ ನಾನು ಹಿಂತಿರುಗಿ ಬಂದಾಗ ನಿನ್ನ ಪರಮಾಭೀಷ್ಟವನ್ನು ನೀನು ಪಡೆಯುವೆ.

ಏವಮುಕ್ತಾ ತು ರಾಮೇಣ ಬಾಷ್ಪಪರ್ಯಾಕುಲೇಕ್ಷಣಾ ।
ಕೌಸಲ್ಯಾ ಪುತ್ರಶೋಕಾರ್ತಾ ರಾಮಂ ವಚನಮಬ್ರವೀತ್ ॥೩೧॥

ಶ್ರೀರಾಮ ಹೀಗೆ ಹೇಳಿದಾಗ ಪುತ್ರಶೋಕದಿಂದ ಆರ್ತಳಾದ ಕೌಸಲ್ಯೆ ಕಣ್ಣಲ್ಲಿ ನೀರು ತುಂಬಿಕೊಂಡು ಹೇಳಿದಳು.

ಗಮನೇ ಸುಕೃತಾಂ ಬುದ್ಧಿಂ ನ ತೇ ಶಕ್ನೋಮಿ ಪುತ್ರಕ ।
ವಿನಿವರ್ತಯಿತುಂ ವೀರ ನೂನಂ ಕಾಲೋ ದುರತ್ಯಯಃ ॥೩೨॥

ವೀರ, ಪುತ್ರನೇ, ಕಾಡಿಗೆ ಹೋಗುವುದರಲ್ಲಿ ನೀನು ಮಾಡಿರುವ ದೃಢವಾದ

ನಿರ್ಧಾರವನ್ನು ಬದಲಿಸಲು ನಾನು ಶಕ್ತಳಾಗುವುದಿಲ್ಲ. ಕಾಲವನ್ನು ಮೀರಲಾಗದು. ಇದು ನಿಶ್ಚಯ.

ಗಚ್ಛ ಪುತ್ರ ತ್ವಮೇಕಾಗ್ರೋ ಭದ್ರಂ ತೇऽಸ್ತು ಸದಾ ವಿಭೋ ।
ಪುನಸ್ತ್ವಯಿ ನಿವೃತ್ತೇ ತು ಭವಿಷ್ಯಾಮಿ ಗತಕ್ಲಮಾ ॥೩೩॥

ತಂದೆಯ ಮಾತನ್ನು ಕಾಪಾಡುವ ಒಂದೇ ಗುರಿ ಇಟ್ಟುಕೊಂಡು, ಮಗು, ನೀನು ಹೋಗು. ನನ್ನ ದೊರೆಯೆ, ನಿನಗೆ ಸದಾ ಒಳ್ಳೆಯದಾಗಲಿ. ನೀನು ಪುನಃ ಹಿಂತಿರುಗಿ ಬಂದಾಗ ನನಗೆ ಎಲ್ಲ ಬಳಲಿಕೆ ಮಾಯವಾಗುವುದು.

ಪ್ರತ್ಯಾಗತೇ ಮಹಾಭಾಗೇ ಕೃತಾರ್ಥೇ ಚರಿತವ್ರತೇ ।
ಪಿತುರಾನೃಣ್ಯತಾಂ ಪ್ರಾಪ್ತೇ ತ್ವಯಿ ಲಪ್ಸ್ಯೇ ಪರಂ ಸುಖಮ್ ॥೩೪॥

ನೀನು ವನವಾಸ ವ್ರತವನ್ನು ಪೂರೈಸಿ ಪಿತೃಋಣ ಪರಿಹರಿಸಿಕೊಂಡು ಕೃತಾರ್ಥ–ನಾಗಿ ಮಹಾಭಾಗ್ಯಶಾಲಿಯಾಗಿ ಹಿಂತಿರುಗಿ ಬಂದಾಗ ನಾನು ಪರಮ ಸುಖ–ಭಾಗಿಯಾಗುವೆನು.

ಕೃತಾಂತಸ್ಯ ಗತಿಃ ಪುತ್ರ ದುರ್ವಿಭಾವ್ಯಾ ಸದಾ ಭುವಿ ।
ಯಸ್ತ್ವಾಂ ಸಂಚೋದಯತಿ ಮೇ ವಚ ಆಚ್ಛಿದ್ಯ ರಾಘವ ॥೩೫॥

ಮಗು, ಭೂಮಿಯಲ್ಲಿ ವಿಧಿಯ ಆಟ ಸದಾ ಊಹಾತೀತವಾಗಿರುತ್ತದೆ. ಏಕೆಂದರೆ, ರಾಮ, ನನ್ನ ಮಾತನ್ನು ವಿಧಿ ನಿರಾಕರಿಸಿ ನಿನ್ನನ್ನು ವನವಾಸಕ್ಕೆ ತಳ್ಳುತ್ತಿದೆ!

ಗಚ್ಛೇದಾನೀಂ ಮಹಾಬಾಹೋ ಕ್ಷೇಮೇಣ ಪುನರಾಗತಃ ।
ನಂದಯಿಷ್ಯಸಿ ಮಾಂ ಪುತ್ರ ಸಾಮ್ನಾ ವಾಕ್ಯೇನ ಚಾರುಣಾ ॥೩೬॥

ಮಹಾಬಾಹು, ನೀನೀಗ ಹೋಗು. ಮಗು, ಕ್ಷೇಮವಾಗಿ ಹಿಂತಿರುಗಿ ಬಂದ ಬಳಿಕ ನನ್ನನ್ನು ನೀನು ಮನೋಹರವಾದ ಸಂತೈಕೆಯ ಮಾತಿನಿಂದ ಆನಂದ ಗೊಳಿಸು.

ಅಪೀದಾನೀಂ ಸ ಕಾಲಃ ಸ್ಯಾದ್ವನಾತ್ತ್ವತ್ಯಾಗತಂ ಪುನಃ ।
ಯತ್ತ್ವಾಂ ಪುತ್ರಕ ಪಶ್ಯೇಯಂ ಜಟಾವಲ್ಕಲಧಾರಿಣಮ್ ॥೩೭॥

ಮಗು, ಜಟೆ ವಲ್ಕಲಗಳನ್ನು ಧರಿಸಿ ನೀನು ಅರಣ್ಯದಿಂದ ಪುನಃ ಹಿಂತಿರುಗಿ ಬರುವುದನ್ನು ನಾನು ಈಗಲೇ ನೋಡುವಂತಾಗಲಿ. ಆ ಕಾಲ ಈಗಲೆ ಬರಲಿ.

ತಥಾ ಹಿ ರಾಮಂ ವನವಾಸನಿಶ್ಚಿತಂ
ಸಮೀಕ್ಷ್ಯ ದೇವೀ ಪರಮೇಣ ಚೇತಸಾ ।
ಉವಾಚ ರಾಮಂ ಶುಭಲಕ್ಷಣಂ ವಚೋ
ಬಭೂವ ಚ ಸ್ವಸ್ಯ ಯನಾಭಿಕಾಂಕ್ಷಿಣೇ ॥೩೮॥

ಹೀಗೆ ವನವಾಸದ ದೃಢ ನಿರ್ಧಾರವನ್ನು ಕೈಗೊಂಡ ರಾಮನನ್ನು ಆದರದಿಂದ ಕಂಡು ದೇವಿ ಕೌಸಲ್ಯೆ ಶುಭಾಶಂಸನದ ಇಚ್ಛೆಯಿಂದ ಶುಭಲಕ್ಷಣ ಸಂಪನ್ನನಾದ ಆತನಿಗೆ ಹೇಳಲು ತೊಡಗಿದಳು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಇಪ್ಪತ್ತನಾಲ್ಕನೇ ಸರ್ಗ ಮುಗಿಯಿತು.

ಪಂಚವಿಂಶಃ ಸರ್ಗಃ

ಸರ್ಗ – 25

ಕೌಸಲ್ಯೆ ಶ್ರೀರಾಮನಿಗೆ ಮಂಗಳಾಶೀರ್ವಾದವನ್ನು ಮಾಡುವುದು.

ಸಾऽಪನೀಯ ತಮಾಯಾಸಮುಪಸ್ಪೃಶ್ಯ ಜಲಂ ಶುಚಿ ।
ಚಕಾರ ಮಾತಾ ರಾಮಸ್ಯ ಮಂಗಲಾನಿ ಮನಸ್ವಿನೀ ॥೧॥

ಮಾತೆ ಕೌಸಲ್ಯೆ ಪುತ್ರಶೋಕದ ಬಳಲಿಕೆಯನ್ನು ಮನಸ್ಸಿನಿಂದ ದೂರಮಾಡಿ ಕೊಂಡು ಶುದ್ಧಾಚಮನ ಮಾಡಿ ಶುದ್ಧಮನದಿಂದ ಶ್ರೀರಾಮನಿಗೆ ಮಂಗಳಾಶಂಸನ ಮಾಡಿದಳು.

ನ ಶಕ್ಯಸೇ ವಾರಯಿತುಂ ಗಚ್ಛೇದಾನೀಂ ರಘೂತ್ತಮ ।
ಶೀಘ್ರಮೇವ ನಿವರ್ತಸ್ವ ವರ್ತಸ್ವ ಚ ಸತಾಂ ಕ್ರಮೇ ॥೨॥

ರಘೂತ್ತಮ ರಾಮ, ನಿನ್ನನ್ನು ತಡೆಯಲು ನನ್ನಿಂದಾಗುವುದಿಲ್ಲ. ಅದರಿಂದ ನೀನು ಈಗ ಹೋಗು, ಬೇಗನೆ ಹಿಂತಿರುಗಿ ಬಂದು ಬಿಡು, ಸತ್ಪುರುಷರ ದಾರಿಯಲ್ಲಿರು.

ಯಂ ಪಾಲಯಸಿ ಧರ್ಮಂ ತ್ವಂ ಧೃತ್ಯಾ ಚ ನಿಯಮೇನ ಚ ।
ಸ ವೈ ರಾಘವಶಾರ್ದೂಲ ಧರ್ಮಸ್ತ್ವಾಮಭಿರಕ್ಷತು ॥೩॥

ನೀನು ಧೈರ್ಯದಿಂದ ನಿಯಮದಿಂದ ಕಾಪಾಡುತ್ತಿರುವ ಆ ಧರ್ಮವೇ, ರಘೂತ್ತಮ, ನಿನ್ನನ್ನು ಕಾಪಾಡಲಿ.

ಯೇಭ್ಯಃ ಪ್ರಣಮಸೇ ಪುತ್ರ ಚೈತ್ಯೇಷ್ವಾಯತನೇಷು ಚ ।
ತೇ ಚ ತ್ವಾಮಭಿರಕ್ಷಂತು ವನೇ ಸಹ ಮಹರ್ಷಿಭಿಃ ॥೪॥

ಯಾಗಶಾಲೆಗಳಲ್ಲಿ ದೇವಾಲಯಗಳಲ್ಲಿ ನೀನು ನಮಿಸುವ ದೇವತೆಗಳು ನಿನ್ನನ್ನು ಮಹರ್ಷಿಗಳೊಂದಿಗೆ ಅರಣ್ಯದಲ್ಲಿ ಸಂರಕ್ಷಿಸುತ್ತಿರಲಿ.

ಯಾನಿ ದತ್ತಾನಿ ತೇऽಸ್ತ್ರಾಣಿ ವಿಶ್ವಾಮಿತ್ರೇಣ ಧೀಮತಾ ।
ತಾನಿ ತ್ವಾಮಭಿರಕ್ಷಂತು ಗುಣೈಃ ಸಮುದಿತಂ ಸದಾ ॥೫॥

ಧೀಮಂತರಾದ ವಿಶ್ವಾಮಿತ್ರರು ನಿನಗೆ ಯಾವ ಅಸ್ತ್ರಗಳನ್ನಿತ್ತರೋ ಆ ಅಸ್ತ್ರದೇವತೆಗಳು ಗುಣ ಸಂಪನ್ನನಾದ ನಿನ್ನನ್ನು ರಕ್ಷಿಸಲಿ.

ಪಿತೃಶುಶ್ರೂಷಯಾ ಪುತ್ರ ಮಾತೃಶುಶ್ರೂಷಯಾ ತಥಾ ।
ಸತ್ಯೇನ ಚ ಮಹಾಬಾಹೋ ಚಿರಂ ಜೀವಾಭಿರಕ್ಷಿತಃ ॥೬॥

ಪಿತೃ ಶುಶ್ರೂಷೆ ಮಾತೃ ಶುಶ್ರೂಷೆ ಸತ್ಯವಚನಗಳ ಪುಣ್ಯದಿಂದ, ಮಹಾಬಾಹುವೆ, ನೀನು ರಕ್ಷಿತನಾಗಿ ಚಿರಕಾಲ ಬಾಳು.

ಸಮಿತ್ಕುಶಪವಿತ್ರಾಣಿ ವೇದ್ಯಶ್ಚಾಯತನಾನಿ ಚ ।
ಸ್ಥಂಡಿಲಾನಿ ಚ ವಿಪ್ರಾಣಾಂ ಶೈಲಾ ವೃಕ್ಷಾಃ ಕ್ಷುಪಾ ಹ್ರದಾಃ ।
ಪತಂಗಾಃ ಪನ್ನಗಾಃ ಸಿಂಹಾಸ್ತಾ ತ್ವಂ ರಕ್ಷಂತು ನರೋತ್ತಮ ॥೭॥

ಸಮಿತ್ತು, ದರ್ಭೆ, ದರ್ಭೆಯ ಪವಿತ್ರ, ಯಜ್ಞವೇದಿ, ದೇವಪೂಜಾಸ್ಥಲಗಳು ವಿಪ್ರರ ಶುದ್ಧವಾದ ನೆಲಗಳು ಬೆಟ್ಟಗಳು ಮರಗಳು ಪೊದೆಗಳು ಜಲಾಶಯಗಳು ಪಕ್ಷಿಗಳು ಪರ್ವತಗಳು ಸಿಂಹಗಳು ಇವುಗಳ ಅಭಿಮಾನಿ ದೇವತೆಗಳು, ಪುರುಷೋತ್ತಮ, ನಿನ್ನನ್ನು ಕಾಪಾಡಲಿ.

ಸ್ವಸ್ತಿ ಸಾಧ್ಯಾಶ್ಚ ವಿಶ್ವೇ ಚ ಮರುತಶ್ಚ ಮಹರ್ಷಯಃ ।
ಸ್ವಸ್ತಿ ಧಾತಾ ವಿಧಾತಾ ಚ ಸ್ವಸ್ತಿ ಪೂಷಾ ಭಗೋऽರ್ಯಮಾ ॥೮॥

ಸಾಧ್ಯರು ವಿಶ್ವೇದೇವತೆಗಳು ಮರುತ್ತುಗಳು ಮಹರ್ಷಿಗಳು ಧಾತ–ವಿಧಾತ–ಪೂಷ–ಭಗ–ಅರ್ಯಮ ಎಂಬ ಆದಿತ್ಯರು ನಿನಗೆ ಮಂಗಳ ಉಂಟುಮಾಡಲಿ.

ಲೋಕಪಾಲಾಶ್ಚ ತೇ ಸರ್ವೇ ವಾಸವಪ್ರಮುಖಾಸ್ತಥಾ ।
ಋತವಶ್ಚೈವ ಪಕ್ಷಾಶ್ಚ ಮಾಸಾಃ ಸಂವತ್ಸರಾಃ ಕ್ಷಪಾಃ ॥೯॥

ದಿನಾನಿ ಚ ಮುಹೂರ್ತಾಶ್ಚ ಸ್ವಸ್ತಿ ಕುರ್ವಂತು ತೇ ಸದಾ ।
ಸ್ಮೃತಿರ್ಧೃತಿಶ್ಚ ಧರ್ಮಶ್ಚ ಪಾತು ತ್ವಾಂ ಪುತ್ರ ಸರ್ವತಃ ॥೧೦॥

ಇಂದ್ರಾದಿ ಲೋಕಪಾಲಕರು, ಋತು–ಪಕ್ಷ–ಮಾಸ–ಸಂವತ್ಸರ–ರಾತ್ರಿ– ಹಗಲು–ಮುಹೂರ್ತಗಳು ನಿನಗೆ ಸದಾ ಮಂಗಳ ಉಂಟುಮಾಡಲಿ. ಮಗು, ನಿನ್ನನ್ನು ಎಲ್ಲೆಡೆ ಸ್ಮೃತಿ ಧೃತಿ ಮತ್ತು ಧರ್ಮಗಳು ಕಾಪಾಡಲಿ.

ಸ್ಕಂದಶ್ಚ ಭಗವಾನ್ದೇವಃ ಸೋಮಶ್ಚ ಸಬೃಹಸ್ಪತಿಃ ।
ಸಪ್ತರ್ಷಯೋ ನಾರದಶ್ಚ ತೇ ತ್ವಾಂ ರಕ್ಷಂತು ಸರ್ವತಃ ॥೧೧॥

ಭಗವಾನ್ ಸ್ಕಂದ, ಸೋಮದೇವ, ಬೃಹಸ್ಪತಿ, ಸಪ್ತರ್ಷಿಗಳು, ನಾರದ ಇವರು ಎಲ್ಲರೂ ನಿನ್ನನ್ನು ಎಲ್ಲೆಡೆ ರಕ್ಷಿಸಲಿ.

ಯೇ ಚಾಪಿ ಸರ್ವತಃ ಸಿದ್ಧಾ ದಿಶಶ್ಚ ಸದಿಗೀಶ್ವರಾಃ ।
ಸ್ತುತಾ ಮಯಾ ವನೇ ತಸ್ಮಿನ್ ಪಾಂತು ತ್ವಾಂ ಪುತ್ರ ನಿತ್ಯಶಃ ॥೧೨॥

ಸಿದ್ಧರೂ ದಿಕ್ಕುಗಳೂ ದಿಕ್ಪಾಲಕರೂ, ನನ್ನಿಂದ ಸ್ತುತರಾದವರು, ಮಗು, ಆ ಕಾಡಿನಲ್ಲಿ ಎಲ್ಲೆಡೆ ನಿತ್ಯವೂ ನಿನ್ನನ್ನು ಕಾಪಾಡಲಿ.

ಶೈಲಾಃ ಸರ್ವೇ ಸಮುದ್ರಾಶ್ಚ ರಾಜಾ ವರುಣ ಏವ ಚ ।
ದ್ಯೌರಂತರಿಕ್ಷಂ ಪೃಥಿವೀ ನದ್ಯಃ ಸರ್ವಾಸ್ತಥೈವ ಚ ॥೧೩॥

ನಕ್ಷತ್ರಾಣಿ ಚ ಸರ್ವಾಣಿ ಗ್ರಹಾಶ್ಚ ಸಹದೇವತಾಃ ।
ಅಹೋರಾತ್ರೇ ತಥಾ ಸಂಧ್ಯೇ ಪಾಂತು ತ್ವಾಂ ವನಮಾಶ್ರಿತಮ್ ॥೧೪॥

ಎಲ್ಲ ಪರ್ವತಗಳು ಸಮುದ್ರಗಳು, ರಾಜಾ ವರುಣನು ಸ್ವರ್ಗ ಅಂತರಿಕ್ಷ ಪೃಥಿವಿ ಎಲ್ಲ ನದಿಗಳು, ಎಲ್ಲ ನಕ್ಷತ್ರಗಳು ಗ್ರಹಗಳು ಅವುಗಳ ಅಧಿದೇವತೆಗಳು ಹಗಲು ರಾತ್ರಿ ಸಂಧ್ಯೆ ಕಾಡಿನಲ್ಲಿ ವಾಸಮಾಡುವ ನಿನ್ನನ್ನು ಕಾಪಾಡಲಿ.

ಋತವಶ್ಚೈವ ಷಟ್ ಪುಣ್ಯಾ ಮಾಸಾಃ ಸಂವತ್ಸರಾಸ್ತಥಾ ।
ಕಲಾಶ್ಚ ಕಾಷ್ಠಾಶ್ಚ ತಥಾ ತವ ಶರ್ಮ ದಿಶಂತು ತೇ ॥೧೫॥

ಪುಣ್ಯಕರವಾದ ಆರು ಋತುಗಳು. ಮಾಸ–ಸಂವತ್ಸರಗಳು ಕಲಾ–ಕಾಷ್ಠಾಗಳು ನಿನಗೆ ಸುಖ ನೀಡಲಿ.

ಮಹಾವನೇ ವಿಚರತೋ ಮುನಿವೇಷಸ್ಯ ಧೀಮತಃ ।
ತವಾದಿತ್ಯಾಶ್ಚ ದೈತ್ಯಾಶ್ಚ ಭವಂತು ಸುಖದಾಃ ಸದಾ ॥೧೬॥

ಮುನಿವೇಷ ಧರಿಸಿ ಮಹಾರಣ್ಯದಲ್ಲಿ ಸಂಚರಿಸುವಾಗ ಧೀಮಂತನಾದ ನಿನಗೆ ದೇವದೈತ್ಯರು ಸದಾ ಸುಖ ನೀಡಲಿ.

ರಾಕ್ಷಸಾನಾಂ ಪಿಶಾಚಾನಾಂ ರೌದ್ರಾಣಾಂ ಕ್ರೂರಕರ್ಮಣಾಮ್ ।
ಕ್ರವ್ಯಾದಾನಾಂ ಚ ಸರ್ವೇಷಾಂ ಮಾ ಭೂತ್‌ಪುತ್ರಕ ತೇ ಭಯಮ್ ॥

ಭಯಂಕರ ಕ್ರೂರಕರ್ಮಿಗಳಾದ ಎಲ್ಲ ರಾಕ್ಷಸ ಪಿಶಾಚ ವನ್ಯಮೃಗಗಳಿಂದ ನಿನಗೆ ಭಯ ಉಂಟಾಗದಿರಲಿ.

ಪ್ಲವಗಾ ವೃಶ್ಚಿಕಾ ದಂಶಾ ಮಶಕಾಶ್ಚೈವ ಕಾನನೇ ।
ಸರೀಸೃಪಾಶ್ಚ ಕೀಟಾಶ್ಚ ಮಾ ಭೂವನ್ ಗಹನೇ ತವ ॥೧೮॥

ಗಹನವಾದ ಕಾಡಿನಲ್ಲಿರುವ ಕಪಿಗಳು ಚೇಳು ನೊಣ ಸೊಳ್ಳೆ ಸರ್ಪಕೀಟಗಳು ನಿನಗೆ ಬಾಧಕವಾಗದಿರಲಿ.

ಮಹಾದ್ವಿಪಾಶ್ಚ ಸಿಂಹಾಶ್ಚ ವ್ಯಾಘ್ರಾ ಋಕ್ಷಾಶ್ಚ ದಂಷ್ಟಿಣಃ ।
ಮಹಿಷಾಃ ಶೃಂಗಿಣೋ ರೌದ್ರಾ ನ ತೇ ದ್ರುಹ್ಯಂತು ಪುತ್ರಕ ॥೧೯॥

ಮಹಾ ಆನೆ ಸಿಂಹ ಹುಲಿ ಕರಡಿಗಳು ಕಾಡುಹಂದಿಗಳು ಭಯಂಕರವಾದ ದೊಡ್ಡ ಕೋಡುಗಳ ಕಾಡುಕೋಣಗಳು, ಕಾಡೆಮ್ಮೆ ಭೀಕರವಾದ ಬೇರೆ ದುಷ್ಟಮೃಗಗಳು ಅರಣ್ಯದಲ್ಲಿ ನಿನ್ನನ್ನು ಹಿಂಸಿಸದಿರಲಿ.

ನೃಮಾಂಸಭೋಜಿನೋ ರೌದ್ರಾ ಯೇ ಚಾನ್ಯೇ ಸತ್ತ್ವಜಾತಯಃ ।
ಮಾ ಚ ತ್ವಾಂ ಹಿಂಸಿಷುಃ ಪುತ್ರ ಮಯಾ ಸಂಪೂಜಿತಾಸ್ತ್ವಹ ॥೨೦॥

ಬೇರೆ ನರಮಾಂಸ ಭಕ್ಷಕ ಭೀಕರ ದುಷ್ಟ ಪ್ರಾಣಿಗಳು ಅರಣ್ಯದಲ್ಲಿ ಮಗು, ನನ್ನ ಪೂಜಾಫಲವಾಗಿ ನಿನಗೆ ಹಿಂಸೆ ಮಾಡದಿರಲಿ.

ಆಗಮಾಸ್ತೇ ಶಿವಾಃ ಸಂತು ಸಿಧ್ಯಂತು ಚ ಪರಾಕ್ರಮಾಃ ।
ಸರ್ವಸಂಪತ್ತಯೇ ರಾಮ ಸ್ವಸ್ತಿಮಾನ್ ಗಚ್ಛ ಪುತ್ರಕ ॥೨೧॥

ರಾಮ, ಅರಣ್ಯ ಮಾರ್ಗಗಳು ನಿನಗೆ ಸುಗಮವಾಗಲಿ. ನಿನ್ನ ಪರಾಕ್ರಮಗಳು ಫಲಪ್ರದವಾಗಲಿ. ಫಲ ಮೂಲಾದಿ ಸರ್ವಸಂಪತ್ತುಗಳು ನಿನಗೆ ಲಭ್ಯವಾಗಲಿ. ಕ್ಷೇಮದಿಂದ ಹೋಗಿ ಬಾ, ಮಗು.

ಸ್ವಸ್ತಿ ತೇಽಸ್ತ್ವಂತರಿಕ್ಷೇಭ್ಯಃ ಪಾರ್ಥಿವೇಭ್ಯಃ ಪುನಃ ಪುನಃ ।
ಸರ್ವೇಭ್ಯಶ್ಚೈವ ದೇವೇಭ್ಯೋ ಯೇ ಚ ತೇ ಪರಿಪಂಥಿನಃ ॥೨೨॥

ಶುಕ್ರಃ ಸೋಮಶ್ಚ ಸೂರ್ಯಶ್ಚ ಧನದೋಽಥ ಯಮಸ್ತಥಾ ।
ಪಾಂತು ತ್ವಾಮರ್ಚಿತಾ ರಾಮ ದಂಡಕಾರಣ್ಯವಾಸಿನಮ್ ॥೨೩॥

ಅಂತರಿಕ್ಷ ಭೂಮಿ ದೇವಲೋಕಗಳಲ್ಲಿರುವ ನಿನ್ನ ವಿರೋಧಿಗಳಿಂದ, ನಾನು ಪೂಜಿಸುವ ಶುಕ್ರ ಸೋಮ ಸೂರ್ಯ ಯಮ ಕುಬೇರರು, ನೀನು ದಂಡಕಾರಣ್ಯ-ದಲ್ಲಿ ವಾಸಮಾಡುವಾಗ, ನಿನ್ನನ್ನು ಕಾಪಾಡಲಿ. ದೇವತೆಗಳಿಂದ ನಿನಗೆ ಕ್ಷೇಮ-ವಾಗಲಿ.

ಅಗ್ನಿರ್ವಾಯುಸ್ತಥಾ ಧೂಮೋ ಮಂತ್ರಾಶ್ಚರ್ಷಿಮುಖಾಚ್ಚ್ಯುತಾಃ ।
ಉಪಸ್ಪರ್ಶನಕಾಲೇ ತು ಪಾಂತು ತ್ವಾಂ ರಘುನಂದನ ॥೨೪॥

ಅಗ್ನಿ ವಾಯು ಹೋಮಧೂಮ ಋಷಿಮುಖದಿಂದ ಕಲಿತ ಮಂತ್ರಗಳು ಸ್ನಾನಕಾಲದಲ್ಲಿ ನಿನ್ನನ್ನು ಕಾಪಾಡಲಿ.

ಸರ್ವಲೋಕಪ್ರಭುರ್ಬ್ರಹ್ಮಾ ಭೂತಭರ್ತಾ ತಥರ್ಷಯಃ ।
ಯೇ ಚ ಶೇಷಾಃ ಸುರಾಃ ಸರ್ವೇ ರಕ್ಷಂತು ವನವಾಸಿನಮ್ ॥೨೫॥

ಸರ್ವಲೋಕ ಪ್ರಭುವಾದ ವಿಷ್ಣು, ಬ್ರಹ್ಮ, ಭೂತಪತಿ ಶಿವ, ಋಷಿಗಳು, ಉಳಿದ ಎಲ್ಲ ದೇವತೆಗಳು ವನವಾಸದಲ್ಲಿ ನಿನ್ನನ್ನು ಕಾಪಾಡಲಿ.

ಇತಿ ಮಾಲ್ಯೈಃ ಸುರಗಣಾನ್ ಗಂಧೈಶ್ಚಾಪಿ ಯಶಸ್ವಿನೀ ।
ಸ್ತುತಿಭಿಶ್ಚಾನುರೂಪಾಭಿರಾನರ್ಚಾಯತಲೋಚನಾ ॥೨೬॥

ಯಶಸ್ವಿನಿ ಆಯತಲೋಚನೆಯಾದ ಕೌಸಲ್ಯೆ ಹೀಗೆ ದೇವಸಮೂಹಗಳನ್ನು ಮಾಲ್ಯ ಗಂಧಗಳಿಂದಲೂ ಅನುರೂಪವಾದ ಸ್ತುತಿಗಳಿಂದಲೂ ಅರ್ಚಿಸಿದಳು.

ಜ್ವಲನಂ ಸಮುಪಾದಾಯ ಬ್ರಾಹ್ಮಣೇನ ಮಹಾತ್ಮನಾ ।
ಹಾವಯಾಮಾಸ ವಿಧಿನಾ ರಾಮಮಂಗಲಕಾರಣಾತ್ ॥೨೭॥

ರಾಮನಿಗೆ ಮಂಗಳ ಉಂಟುಮಾಡುವುದಕ್ಕಾಗಿ ಅಗ್ನಿಯನ್ನು ಪ್ರತಿಷ್ಠೆ ಮಾಡಿಸಿ ಮಹಾತ್ಮನಾದ ಬ್ರಾಹ್ಮಣನಿಂದ ವಿಧ್ಯುಕ್ತವಾಗಿ ಹೋಮ ಮಾಡಿಸಿದಳು.

ಘೃತಂ ಶ್ವೇತಾನಿ ಮಾಲ್ಯಾನಿ ಸಮಿಧಃ ಶ್ವೇತಸರ್ಷಪಾನ್ ।
ಉಪಸಂಪಾದಯಾಮಾಸ ಕೌಸಲ್ಯಾ ಪರಮಾಂಗನಾ ॥೨೮॥

ರಕ್ಷೋಘ್ನ ಹೋಮಕ್ಕೆ ಬೇಕಾದ ತುಪ್ಪ, ಬಿಳಿ ಹೂಮಾಲೆ ಸಮಿತ್ತು ಬಿಳಿಸಾಸಿವೆ–ಗಳನ್ನು ಉತ್ತಮ ಸ್ತ್ರೀಯಾದ ಕೌಸಲ್ಯೆ ಸಿದ್ಧಪಡಿಸಿದಳು.

ಬಿಳಿ ಸಾಸಿವೆಗಳನ್ನು ಅಭಿಮಂತ್ರಿಸಿ ರಾಮನ ಕೈಗೆ ಮಾತೆ ಕಟ್ಟಿದಳೆಂದು ಸಂ.ರಾ.(ಅಯೋ.5.45)ದಲ್ಲಿ ಹೇಳಿದ್ದಾರೆ.

ಉಪಾಧ್ಯಾಯಃ ಸ ವಿಧಿನಾ ಹುತ್ವಾ ಶಾಂತಿಮನಾಮಯಮ್ ।
ಹುತದ್ರವ್ಯಾವಶೇಷೇಣ ಬಾಹ್ಯಂ ಬಲಿಮಕಲ್ಪಯತ್ ॥೨೯॥

ಉಪಾಧ್ಯಾಯನು ವಿಧ್ಯುಕ್ತವಾಗಿ ರಾಮನ ಆರೋಗ್ಯಕ್ಕಾಗಿ ಶಾಂತಿಹೋಮ ಮಾಡಿ ಹುತಶೇಷ ದ್ರವ್ಯದಿಂದ ಬಾಹ್ಯ ಬಲಿಪ್ರದಾನವನ್ನು ಮಾಡಿದನು.

ಮಧುದಧ್ಯಕ್ಷತಘೃತೈಃ ಸ್ವಸ್ತಿವಾಚ್ಯಂ ದ್ವಿಜಾಂಸ್ತತಃ ।
ವಾಚಯಾಮಾಸ ರಾಮಸ್ಯ ವನೇ ಸ್ವಸ್ತ್ಯಯನಕ್ರಿಯಾಃ ॥೩೦॥

ದ್ವಿಜರನ್ನು ಸ್ವಸ್ತಿವಾಚನದ ಉದ್ದೇಶದಿಂದ ಮಧು ದಧಿ ಅಕ್ಷತ ಘೃತಯುಕ್ತರನ್ನಾಗಿ ಮಾಡಿ ಅವರಿಂದ 'ರಾಮನಿಗೆ ಅರಣ್ಯದಲ್ಲಿ ಕ್ಷೇಮವಾಗಲಿ' ಎಂದು ಸ್ವಸ್ತಿವಾಚನ ಮಾಡಿಸಿದಳು.

ತತಸ್ತಸ್ಮೈ ದ್ವಿಜೇಂದ್ರಾಯ ರಾಮಮಾತಾ ಯಶಸ್ವಿನೀ ।
ದಕ್ಷಿಣಾಂ ಪ್ರದದೌ ಕಾಮ್ಯಾಂ ರಾಘವಂ ಚೇದಮಬ್ರವೀತ್ ॥೩೧॥

ಆ ಬ್ರಾಹ್ಮಣೋತ್ತಮನಿಗೆ ಯಶಸ್ವಿನಿಯಾದ ರಾಮಮಾತೆ ಇಷ್ಟವಾದ ದಕ್ಷಿಣೆಯನ್ನು ನೀಡಿ ರಾಮನನ್ನು ಆಶೀರ್ವದಿಸಿದಳು.

ಯನ್ಮಂಗಲಂ ಸಹಸ್ರಾಕ್ಷೇ ಸರ್ವದೇವನಮಸ್ಕೃತೇ ।
ವೃತ್ರನಾಶೇ ಸಮಭವತ್ತತ್ತೇ ಭವತು ಮಂಗಲಮ್ ॥೩೨॥

ವೃತ್ರಾಸುರ ಸಂಹಾರದಲ್ಲಿ ಸರ್ವದೇವ ನಮಸ್ಕೃತನಾದ ಇಂದ್ರನಿಗೆ ಯಾವ ಮಂಗಳ ಉಂಟಾಯಿತೋ ಆ ಮಂಗಳ ನಿನಗೆ ಉಂಟಾಗಲಿ.

ಯನ್ಮಂಗಲಂ ಸುಪರ್ಣಸ್ಯ ವಿನತಾಕಲ್ಪಯತ್ ಪುರಾ ।
ಅಮೃತಂ ಪ್ರಾರ್ಥಯಾನಸ್ಯ ತತ್ತೇ ಭವತು ಮಂಗಲಮ್ ॥೩೩॥

ಹಿಂದೆ ಅಮೃತವನ್ನು ತರಲು ಹೊರಟ ಗರುಡನಿಗೆ ಮಾತೆ ವಿನತಾದೇವಿ ಯಾವ ಮಂಗಳವನ್ನು ನುಡಿದಳೊ ಅಂಥ ಮಂಗಳ ನಿನಗೆ ಉಂಟಾಗಲಿ.

ಅಮೃತೋತ್ಪಾದನೇ ದೈತ್ಯಾನ್ ಘ್ನತೋ ವಜ್ರಧರಸ್ಯ ಯತ್ ।
ಅದಿತಿರ್ಮಂಗಲಂ ಪ್ರಾದಾತ್ತತ್ತೇ ಭವತು ಮಂಗಲಮ್ ॥೩೪॥

ಅಮೃತೋತ್ಪಾದನ ಕಾಲದಲ್ಲಿ ದೈತ್ಯರನ್ನು ನಾಶಮಾಡುವ ಇಂದ್ರನಿಗೆ ಮಾತೆ ಅದಿತಿದೇವಿ ನೀಡಿದ ಮಂಗಳ ನಿನಗಾಗಲಿ.

ತ್ರೀನ್ ವಿಕ್ರಮಾನ್ ಪ್ರಕ್ರಮತೋ ವಿಷ್ಣೋರಮಿತತೇಜಸಃ ।
ಯದಾಸೀನ್ಮಂಗಲಂ ರಾಮ ತತ್ತೇ ಭವತು ಮಂಗಲಮ್ ॥೩೫॥

ಮೂರು ಹೆಜ್ಜೆಗಳಿಂದ ಮೂರ್ಲೋಕವನ್ನು ಅಳೆಯುವಾಗ ಅಮಿತ ಪರಾಕ್ರಮಿ–ಯಾದ ವಿಷ್ಣುವಿಗೆ ಉಂಟಾದ ಮಂಗಳವು ನಿನಗೆ ಲಭ್ಯವಾಗಲಿ.

ಋತವಃ ಸಾಗರಾ ದ್ವೀಪಾ ವೇದಾ ಲೋಕಾ ದಿಶಶ್ಚ ತೇ ।
ಮಂಗಲಾನಿ ಮಹಾಬಾಹೋ ದಿಶಂತು ಶುಭಮಂಗಲಾಃ ॥೩೬॥

ಮಹಾಬಾಹುವೆ, ಮಂಗಳಗಳಿಗೂ ಮಂಗಕರವಾದ ಋತು–ಸಾಗರ–ದ್ವೀಪ–ವೇದ–ಲೋಕ–ದಿಕ್ಕುಗಳು ಮಂಗಳಗಳನ್ನು ನಿನಗೆ ನೀಡಲಿ.

ಇತಿ ಪುತ್ರಸ್ಯ ಶೇಷಾಂಶ್ಚ ಕೃತ್ವಾ ಶಿರಸಿ ಭಾಮಿನೀ ।
ಗಂಧೈಶ್ಚಾಪಿ ಸಮಾಲಭ್ಯ ರಾಮಮಾಯತಲೋಚನಾ ॥೩೭॥

ಓಷಧಿಂ ಚಾಪಿ ಸಿದ್ಧಾರ್ಥಾಂ ವಿಶಲ್ಯಕರಣೀಂ ಶುಭಾಮ್ ।
ಚಕಾರ ರಕ್ಷಾಂ ಕೌಸಲ್ಯಾ ಮಂತ್ರೈರಭಿಜಜಾಪ ಚ ॥೩೮॥

ಹೀಗೆ ಹೇಳಿ ಕೌಸಲ್ಯೆ ರಾಮನ ತಲೆಯಲ್ಲಿ ಅಕ್ಷತೆ ಕಾಳುಗಳನ್ನು ಹಾಕಿ ಗಂಧ–ಗಳಿಂದ ಲೇಪಿಸಿ ಪ್ರತ್ಯಕ್ಷಫಲಪ್ರದವಾದ ವಿಶಲ್ಯಕರಣಿ ಎಂಬ ಶುಭವಾದ ಮೂಲಿಕೆಯನ್ನು ಅಭಿಮಂತ್ರಿಸಿ ರಕ್ಷಣೆಗಾಗಿ ರಾಮನ ಕೈಗೆ ಕಟ್ಟಿ ಮಂತ್ರವನ್ನು ಜಪಿಸಿದಳು.

ಉವಾಚಾತಿಪ್ರಹೃಷ್ಟೇವ ಸಾ ದುಃಖವಶವರ್ತಿನೀ ।
ವಾಙ್ಮಾತ್ರೇಣ ನ ಭಾವೇನ ವಾಚಾ ಸಂಸಜ್ಜಮಾನಯಾ ॥೩೯॥

ಆನಮ್ಯ ಮೂರ್ಧ್ನಿ ಚಾಘ್ರಾಯ ಪರಿಷ್ವಜ್ಯ ಯಶಸ್ವಿನೀ ।
ಅವದತ್ ಪುತ್ರ ಸಿದ್ಧಾರ್ಥೋ ಗಚ್ಛ ರಾಮ ಯಥಾಸುಖಮ್ ॥೪೦॥

ದುಃಖಕ್ಕೆ ವಶಳಾಗಿ ವರ್ತಿಸುವ ಕೌಸಲ್ಯೆ ಬಗ್ಗಿ ರಾಮನ ನೆತ್ತಿಯಲ್ಲಿ ಆಘ್ರಾಣಿಸಿ ತಬ್ಬಿಕೊಂಡು 'ನಿನಗೆ ಅಭೀಷ್ಟ ಸಿದ್ಧಿಯಾಗಲಿ ಸುಖವಾಗಿ ಹೋಗಿ ಬಾ' ಎಂದು, ದುಃಖದಿಂದ ಗದ್ಗದವಾದ ಮಾತಿನಿಂದ ಮಾತ್ರ ಹೊರತು ಭಾವನೆಯಿಂದಲ್ಲ, ಹೊರಗೆ ಅತ್ಯಂತ ಹರ್ಷಗೊಂಡವಳಂತೆ' ನುಡಿದಳು.

ಅರೋಗಂ ಸರ್ವಸಿದ್ಧಾರ್ಥಮಯೋಧ್ಯಾಂ ಪುನರಾಗತಮ್ ।
ಪಶ್ಯಾಮಿ ತ್ವಾಂ ಸುಖಂ ವತ್ಸ ಸಂಧಿತಂ ರಾಜವರ್ತ್ಮಸು ॥೪೧॥

ನೀನು ಆರೋಗ್ಯವಂತನಾಗಿ ಎಲ್ಲ ಅಭೀಷ್ಟವನ್ನು ಸಾಧಿಸಿಕೊಂಡು ಅಯೋಧ್ಯೆಗೆ ಹಿಂತಿರುಗಿ ರಾಜ್ಯವನ್ನು ಪಡೆದು ಸುಖವಾಗಿರುವುದನ್ನು ನೋಡುತ್ತೇನೆ.

ಪ್ರಣಷ್ಟದುಃಖಸಂಕಲ್ಪಾ ಹರ್ಷವಿದ್ಯೋತಿತಾನನಾ ।
ದ್ರಕ್ಷ್ಯಾಮಿ ತ್ವಾಂ ವನಾತ್ ಪ್ರಾಪ್ತಂ ಪೂರ್ಣಚಂದ್ರಮಿವೋದಿತಮ್ ॥

ಕಾಡಿನಿಂದ ಹಿಂತಿರುಗಿ ಉದಿಸಿದ ಪೂರ್ಣಚಂದ್ರನಂತೆ ಬರುವ ನಿನ್ನನ್ನು ನಾನು ನೋಡುವೆನು. ಕಾಡಿನಲ್ಲಿ ನಿನಗೆ ಏನು ದುಃಖ ಬರುವುದೊ ಎಂದು ನನ್ನ ಕಳವಳವೆಲ್ಲ ದೂರವಾಗಲಿ. ನನ್ನ ಮುಖವು ಹರ್ಷದಿಂದ ಬೆಳಗಲಿ.

ಭದ್ರಾಸನಗತಂ ರಾಮ ವನವಾಸಾದಿಹಾಗತಮ್ ।
ದ್ರಕ್ಷ್ಯಾಮಿ ಚ ಪುನಸ್ತ್ವಾಂ ತು ತೀರ್ಣವಂತಂ ಪಿತುರ್ವಚಃ ॥೪೩॥

ರಾಮ, ಪಿತೃವಾಕ್ಯ ಪರಿಪಾಲನ ಮಾಡಿ ಮುಗಿಸಿ ವನವಾಸದಿಂದ ಹಿಂತಿರುಗಿ ಬಂದು ಭದ್ರಾಸನದಲ್ಲಿ ಕುಳ್ಳಿರುವುದನ್ನು ನಾನು ಪುನಃ ನೋಡುವೆನು.

ಮಂಗಲೈರುಪಸಂಪನ್ನೋ ವನವಾಸಾದಿಹಾಗತಃ ।
ವರ್ಧ್ವಮಮ ಚ ನಿತ್ಯಂ ತ್ವಂ ಕಾಮಾನ್ ಸಂವರ್ಧಯ ಪ್ರಭೋ ॥೪೪॥

ವನವಾಸದಿಂದ ಇಲ್ಲಿಗೆ ಹಿಂತಿರುಗಿಬಂದು ಮಂಗಲ ವೇಷಭೂಷಣ-ಗಳಿಂದೊಪ್ಪುತ್ತ ಸೀತೆಗೂ ನನಗೂ ಸದಾ ಸುಖಗಳನ್ನು ಹೆಚ್ಚಿಸುತ್ತಿರು, ಪ್ರಭು.

ಮಯಾರ್ಚಿತಾ ದೇವಗಣಾಃ ಶಿವಾದಯೋ
ಮಹರ್ಷಯೋ ಭೂತಮಹಾಸುರೋರಗಾಃ ।
ಅಭಿಪ್ರಯಾತಸ್ಯ ವನಂ ಚಿರಾಯ ತೇ
ಹಿತಾನಿ ಕಾಂಕ್ಷಂತು ದಿಶಶ್ಚ ರಾಘವ ॥೪೫॥

ನಾನು ಶಿವ ಮುಂತಾದ ದೇವಗಣಗಳನ್ನು ಮಹಾಋಷಿಗಳನ್ನೂ ಭೂತ ಮಹಾ ಅಸುರ ಉರಗಗಳನ್ನೂ ಆರಾಧಿಸಿದ್ದೇನೆ. ಅರಣ್ಯದಲ್ಲಿ ಬಹುಕಾಲ ನೀನು ವಾಸ ಮಾಡುವಾಗ ಇವರೆಲ್ಲರೂ ನಿನ್ನ ಹಿತವನ್ನು ಬಯಸುತ್ತಿರಲಿ. ಎಲ್ಲ ದಿಕ್ಕುಗಳೂ ನಿನಗೆ ಹಿತಕಾರಿಗಳಾಗಲಿ, ರಾಮ.

ಇತೀವ ಚಾಶ್ರುಪ್ರತಿಪೂರ್ಣಲೋಚನಾ
ಸಮಾಪ್ಯ ಚ ಸ್ತಸ್ಯಯನಂ ಯಥಾವಿಧಿ ।
ಪ್ರದಕ್ಷಿಣಂ ಚೈವ ಚಕಾರ ರಾಘವಂ
ಪುನಃ ಪುನಶ್ಚಾಪಿ ನಿಪೀಡ್ಯ ಸಸ್ವಜೇ ॥೪೬॥

ಹೀಗೆ ಕಣ್ಣಲ್ಲಿ ನೀರು ತುಂಬಿಕೊಂಡು ವಿಧ್ಯುಕ್ತವಾಗಿ ಶುಭಾಶಂಸನವನ್ನು ಮುಗಿಸಿ ರಾಮನಿಗೆ ಪ್ರದಕ್ಷಿಣೆ ಮಾಡಿದಳು ಕೌಸಲ್ಯೆ. ಪುನಃ ಪುನಃ ಬಾಚಿ ತಬ್ಬಿಕೊಂಡಳು.

ತಾಯಿ ಮಗನಿಗೆ ಪ್ರದಕ್ಷಿಣೆ ಬರುವುದು ಮಗನ ರಕ್ಷಣೆಗಾಗಿ. ಇದು ಧರ್ಮಶಾಸ್ತ್ರಸಮ್ಮತವಾಗಿದೆ.

ತಥಾ ತು ದೇವ್ಯಾ ಸ ಕೃತಪ್ರದಕ್ಷಿಣೋ
ನಿಪೀಡ್ಯ ಮಾತುಶ್ಚರಣೌ ಪುನಃ ಪುನಃ ।
ಜಗಾಮ ಸೀತಾನಿಲಯಂ ಮಹಾಯಶಾಃ
ಸ ರಾಘವಃ ಪ್ರಜ್ವಲಿತಃ ಸ್ವಯಾ ಶ್ರಿಯಾ ॥೪೭॥

ದೇವಿ ಕೌಸಲ್ಯೆ ರಾಮನಿಗೆ ಪ್ರದಕ್ಷಿಣೆ ಬಂದಾಗ ರಾಮ ಅವಳ ಪಾದಗಳನ್ನು ಪುನಃ ಪುನಃ ಒತ್ತಿದ. ಅಭಿವಾದನ ಮಾಡಿದ. ಮಹಾಯಶಸ್ಸನ್ನು ಹೊಂದಿ ತನ್ನ ಕಾಂತಿಯಿಂದ ಬೆಳಗುವ ರಾಮನು ಬಳಿಕ ಸೀತೆಯ ಅಂತಃಪುರಕ್ಕೆ ನಡೆದ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಇಪ್ಪತ್ತೈದನೇ ಸರ್ಗ ಮುಗಿಯಿತು.

❖

ಷಡ್ವಿಂಶಃ ಸರ್ಗಃ

ಸರ್ಗ – 26

ಶ್ರೀರಾಮನು ಸೀತೆಯನ್ನು ಸಮಾಧಾನಪಡಿಸುವುದು.

ಅಭಿವಾದ್ಯ ಚ ಕೌಸಲ್ಯಾಂ ರಾಮಃ ಸಂಪ್ರಸ್ಥಿತೋ ವನಮ್ ।
ಕೃತಸ್ವಸ್ತ್ಯಯನೋ ಮಾತ್ರಾ ಧರ್ಮಿಷ್ಠೇ ವರ್ತ್ಮನಿ ಸ್ಥಿತಃ ॥೧॥

ಬಹಳ ಧರ್ಮಿಷ್ಠವಾದ ಮಾರ್ಗದಲ್ಲಿ ನಡೆಯುವ ರಾಮನು ತಾಯಿಯಿಂದ ಶುಭಾಶಂಸನ ಮಾಡಿಸಿಕೊಂಡು ಅವಳಿಗೆ ಅಭಿವಾದನ ಮಾಡಿ ಕಾಡಿಗೆ ಹೊರಟ.

ವಿರಾಜಯನ್ ರಾಜಸುತೋ ರಾಜಮಾರ್ಗಂ ನರೈರ್ವೃತಮ್ ।
ಹೃದಯಾನಿ ಮಮಂಥೇವ ಜನಸ್ಯ ಗುಣವತ್ತಯಾ ॥೨॥

ರಾಜಕುಮಾರ ರಾಮನು ಜನರಿಂದ ತುಂಬಿದ್ದ ರಾಜಮಾರ್ಗವನ್ನು ಬೆಳಗುತ್ತ ಹೋಗುವಾಗ ತನ್ನ ಗುಣವಂತಿಕೆಯಿಂದ ಜನರ ಹೃದಯವನ್ನು ಕಲಕಿದ.

ವೈದೇಹೀ ಚಾಪಿ ತತ್ಸರ್ವಂ ನ ಶುಶ್ರಾವ ತಪಸ್ವಿನೀ ।
ತದೇವ ಹೃದಿ ತಸ್ಯಾಶ್ಚ ಯೌವರಾಜ್ಯಾಭಿಷೇಚನಮ್ ॥೩॥

ಸೀತೆ ತಪಸ್ವಿನಿ. ಈ ವೃತ್ತಾಂತವೇನನ್ನೂ ಅವಳು ಕೇಳಿರಲಿಲ್ಲ. ಅವಳ ಹೃದಯ-ದಲ್ಲಿ ಇನ್ನೂ ರಾಮನಿಗೆ ಯುವರಾಜಾಭಿಷೇಕವಾಗುವುದೆಂದೇ ನಿರೀಕ್ಷೆ ಇತ್ತು.

ದೇವಕಾರ್ಯಂ ಸ್ವಯಂ ಕೃತ್ವಾ ಕೃತಜ್ಞಾ ಹೃಷ್ಟಚೇತನಾ ।
ಅಭಿಜ್ಞಾ ರಾಜಧರ್ಮಾಣಾಂ ರಾಜಪುತ್ರಂ ಪ್ರತೀಕ್ಷತೇ ॥೪॥

ಸೀತೆ ದೇವತೆಗಳಲ್ಲಿ ಕೃತಜ್ಞಳಾಗಿ ಹರ್ಷಗೊಂಡ ಮನಸ್ಸಿನಿಂದ ದೇವತಾಪೂಜೆ-ಯನ್ನು ಸ್ವತಃ ಮಾಡಿದಳು. ರಾಜಧರ್ಮಗಳನ್ನು ಬಲ್ಲ ಅವಳು ರಾಜಕುಮಾರ ರಾಮನ ನಿರೀಕ್ಷೆಯಲ್ಲಿದ್ದಳು.

ಪ್ರವಿವೇಶಾಥ ರಾಮಸ್ತು ಸ್ವಂ ವೇಶ್ಮ ಸುವಿಭೂಷಿತಮ್ ।
ಪ್ರಹೃಷ್ಟಜನಸಂಪೂರ್ಣಂ ಹ್ರಿಯಾ ಕಿಂಚಿದವಾಙ್ಮುಖಃ ॥೫॥

ಉತ್ಸಾಹಗೊಂಡ ಜನರಿಂದ ತುಂಬಿಹೋಗಿದ್ದ ಚೆನ್ನಾಗಿ ಅಲಂಕೃತವಾಗಿದ್ದ ತನ್ನ ಮನೆಯನ್ನು ಶ್ರೀರಾಮ ಲಜ್ಜೆಯಿಂದ ಸ್ವಲ್ಪ ಮುಖ ತಗ್ಗಿಸಿಕೊಂಡು ಪ್ರವೇಶಿಸಿದ.

ಅಥ ಸೀತಾ ಸಮುತ್ಪತ್ಯ ವೇಪಮಾನಾ ಚ ತಂ ಪತಿಮ್ ।
ಅಪಶ್ಯಚ್ಛೋಕಸಂತಪ್ತಂ ಚಿಂತಾವ್ಯಾಕುಲಿತೇಂದ್ರಿಯಮ್ ॥೬॥

ಸೀತೆ ದಿಗ್ಗನೆ ಎದ್ದು ತನ್ನ ಪತಿ ಶೋಕತಪ್ತನಾಗಿದ್ದುದನ್ನು ಅವನ ಇಂದ್ರಿಯಗಳು ಚಿಂತೆಯಿಂದ ವ್ಯಥೆಗೊಂಡಿದ್ದುದನ್ನು ಕಂಡು ನಡುಗುತ್ತ ನೋಡಿದಳು.

ತಾಂ ದೃಷ್ಟ್ವಾ ಸ ಹಿ ಧರ್ಮಾತ್ಮಾ ನ ಶಶಾಕ ಮನೋಗತಮ್ ।
ತಂ ಶೋಕಂ ರಾಘವಃ ಸೋಢುಂ ತತೋ ವಿವೃತತಾಂ ಗತಃ ॥೭॥

ಧರ್ಮಾತ್ಮನಾದ ರಾಮ ಸೀತೆಯನ್ನು ಕಂಡಾಗ ಮನಸ್ಸಿನಲ್ಲಿದ್ದ ಶೋಕವನ್ನು ತಡೆದುಕೊಳ್ಳಲು ಶಕ್ತನಾಗಲಿಲ್ಲ. ಅವನು ಎದೆಯಲ್ಲಿ ಮುಚ್ಚಿಟ್ಟುಕೊಂಡಿದ್ದ ಶೋಕ-ಭಾವವು ತೆರೆದುಕೊಂಡಿತು.

ಏನೂ ಸಂವೇದನವೆ ಇಲ್ಲದ ನಿರ್ಜೀವಪಾತ್ರ ಶ್ರೀರಾಮನಲ್ಲ. ಕವಿ ಅದಕ್ಕೆ ಜೀವ ತುಂಬುತ್ತಾನೆ. ರಾಮ ತನ್ನೊಳಗೇ ಪ್ರಯತ್ನದಿಂದ ಅದುಮಿಕೊಂಡಿದ್ದ ಶೋಕವನ್ನು ಈಗ ಸೀತೆಯ ಮುಂದೆ ಹೊರಗೆ ಹಾಕಿ ಶೋಕಭಾರವನ್ನು ಕಡಿಮೆ ಮಾಡಿಕೊಳ್ಳುತ್ತಾನೆ. ಅವನ ಈ ನರನಟನೆ ಅದ್ಭುತ!

ವಿವರ್ಣವದನಂ ದೃಷ್ಟ್ವಾ ತಂ ಪ್ರಸ್ವಿನ್ನಮಮರ್ಷಣಮ್ ।
ಆಹ ದುಃಖಾಭಿಸಂತಪ್ತಾ ಕಿಮಿದಾನೀಮಿದಂ ಪ್ರಭೋ ॥೮॥

ಶ್ರೀರಾಮನ ಮುಖ ವಿವರ್ಣವಾಗಿತ್ತು. ಮೈಬೆವರಿತ್ತು. ದುಃಖವನ್ನು ತಡೆದು-ಕೊಳ್ಳಲು ಶಕ್ತನಾಗದಿದ್ದ ರಾಮನನ್ನು ಕಂಡು ಸೀತೆ ದುಃಖದಿಂದ ಸಂತಾಪಗೊಂಡು ಹೇಳಿದಳು. 'ಪ್ರಭು, ಈಗ ಇದೇನು?'

ಅದ್ಯ ಬಾರ್ಹಸ್ಪತಃ ಶ್ರೀಮಾನ್ ಉಕ್ತಃ ಪುಷ್ಯೋ ನು ರಾಘವ ।
ಪ್ರೋಚ್ಯತೇ ಬ್ರಾಹ್ಮಣೈಃ ಪ್ರಾಜ್ಞೈಃ ಕೇನ ತ್ವಮಸಿ ದುರ್ಮನಾಃ ॥೯॥

ರಾಮ, ಇಂದು ಬೃಹಸ್ಪತಿ ದೇವತಾಕವಾದ, ಸಂಪತ್ಕರವೆಂದು ಉಕ್ತವಾದ, ಚಂದ್ರಯುಕ್ತವಾದ ಪುಷ್ಯನಕ್ಷತ್ರವೆಂದು ಪ್ರಾಜ್ಞರಾದ ಬ್ರಾಹ್ಮಣರು ಹೇಳುತ್ತಿದ್ದಾರೆ. ಯಾವ ಕಾರಣದಿಂದ ದುಃಖಿತನಾಗಿರುವೆ?

ನ ತೇ ಶತಶಲಾಕೇನ ಜಲಫೇನನಿಭೇನ ಚ ।
ಆವೃತಂ ವದನಂ ವಲ್ಗು ಛತ್ರೇಣಾಪಿ ವಿರಾಜತೇ ॥೧೦॥

ನೂರು ಶಲಾಕೆಗಳಿಂದ ಕೂಡಿದ ನೀರಿನ ನೊರೆಯಂತೆ ಬಿಳುಪಾದ ಶ್ವೇತಚ್ಛತ್ರ-ದಿಂದ ನಿನ್ನ ಸುಂದರವಾದ ಮುಖವು ಆವೃತವಾಗಿ ಶೋಭಿಸುತ್ತಿಲ್ಲ, ಏಕೆ?

ವ್ಯಜನಾಭ್ಯಾಂ ಚ ಮುಖ್ಯಾಭ್ಯಾಂ ಶತಪತ್ರನಿಭೇಕ್ಷಣಮ್ ।
ಚಂದ್ರಹಂಸಪ್ರಕಾಶಾಭ್ಯಾಂ ವೀಜ್ಯತೇ ನ ತವಾನನಮ್ ॥೧೧॥

ಚಂದ್ರನಂತೆ ಹಂಸದಂತೆ ಎಸೆವ ಮುಖ್ಯವಾದ ಚಾಮರಗಳು, ಕಮಲದಂತೆ ಕಣ್ಣುಳ್ಳ ನಿನ್ನ ಮುಖವನ್ನು ಬೀಸುತ್ತಿಲ್ಲ.

ವಾಗ್ಮಿನೋ ವಂದಿನಶ್ಚಾಪಿ ಪ್ರಹೃಷ್ಟಾಸ್ತಾ ್ವಂ ನರರ್ಷಭ ।
ಸ್ತುವಂತೋ ನಾತ್ರ ದೃಶ್ಯಂತೇ ಮಂಗಲೈಃ ಸೂತಮಾಗಧಾಃ ॥೧೨॥

ಪುರುಷೋತ್ತಮ, ವಾಗ್ಮಿಗಳಾದ ವಂದಿಗಳು ದೂತರು ಮಾಗಧರು ಸಂತೋಷ-ದಿಂದ ನಿನಗೆ ಮಂಗಲ ಸ್ತುತಿಪಾಠ ಮಾಡುವುದೂ ಕಾಣುತ್ತಿಲ್ಲ.

ನ ತೇ ಕ್ಷೌದ್ರಂ ಚ ದಧಿ ಚ ಬ್ರಾಹ್ಮಣಾ ವೇದಪಾರಗಾಃ ।
ಮೂರ್ಧ್ನಿ ಮೂರ್ಧಾಬಿಷಿಕ್ತಸ್ಯ ದಧತಿ ಸ್ಮ ವಿಧಾನತಃ ॥೧೩॥

ವೇದ ಪಾರಂಗತರಾದ ಬ್ರಾಹ್ಮಣರು ಮೂರ್ಧಾಭಿಷಿಕ್ತನಾದ ನಿನ್ನ ಶಿರಸಿನಲ್ಲಿ ತೀರ್ಥ ಜಲದೊಂದಿಗೆ ಜೇನು ಮೊಸರುಗಳನ್ನು ವಿಧ್ಯುಕ್ತವಾಗಿ ಸುರಿದುದು, ಕಾಣುತ್ತಿಲ್ಲ.

ನ ತ್ವಾಂ ಪ್ರಕೃತಯಃ ಸರ್ವಾಃ ಶ್ರೇಣೀಮುಖ್ಯಾಶ್ಚ ಭೂಷಿತಾಃ ।
ಅನುವ್ರಜಿತುಮಿಚ್ಛಂತಿ ಪೌರಜಾನಪದಾಸ್ತಥಾ ॥೧೪॥

ಅಮಾತ್ಯರು ಅಲಂಕೃತರಾದ ಆಸ್ಥಾನ ಪ್ರಮುಖರು ನಾಗರಿಕರು ದೇಶವಾಸಿ ಗಳು ಯಾರೂ ನಿನ್ನ ಹಿಂದಿನಿಂದ ಬರುತ್ತಿಲ್ಲ.

ಚತುರ್ಭಿರ್ವೇಗಸಂಪನ್ನೈರ್ಹಯೈಃ ಕಾಂಚನಭೂಷಿತೈಃ ।
ಮುಖ್ಯಃ ಪುಷ್ಯರಥೋ ಯುಕ್ತಃ ಕಿಂ ನ ಗಚ್ಛತಿ ತೇಽಗ್ರತಃ ॥೧೫॥

ವೇಗಉಳ್ಳ ಬಂಗಾರದಿಂದ ಅಲಂಕೃತವಾದ ನಾಲ್ಕುಕುದುರೆಗಳನ್ನು ಕಟ್ಟಿದ ಮುಖ್ಯವಾದ ಪುಷ್ಯರಥವು ನಿನ್ನ ಮುಂದೆ ಏಕೆ ಚಲಿಸುತ್ತಿಲ್ಲ?

ಯುದ್ಧಾನರ್ಹವಾದ ವಿಹಾರಯೋಗ್ಯ ರಥ ಪುಷ್ಯರಥ.

ನ ಹಸ್ತೀ ಚಾಗ್ರತಃ ಶ್ರೀಮಾಂಸ್ತವ ಲಕ್ಷಣಪೂಜಿತಃ ।
ಪ್ರಯಾಣೇ ಲಕ್ಷ್ಯತೇ ವೀರ ಕೃಷ್ಣಮೇಘಗಿರಿಪ್ರಭಃ ॥೧೬॥

ಲಕ್ಷಣಗಳಿಂದ ಅಲಂಕೃತವಾದ ಸಂಪತ್ಕರವಾದ ಕಪ್ಪು ಮೋಡದಂತೆ ಬೆಟ್ಟದಂತೆ ಶೋಭಿಸುವ ಪಟ್ಟದಾನೆ ಮೆರವಣಿಗೆಯಲ್ಲಿ ಮುಂದೆ ಕಾಣಿಸುತ್ತಿಲ್ಲ, ಏಕೆ ವೀರ?

ನ ಚ ಕಾಂಚನಚಿತ್ರಂ ತೇ ಪಶ್ಯಾಮಿ ಪ್ರಿಯದರ್ಶನ ।
ಭದ್ರಾಸನಂ ಪುರಸ್ಕೃತ್ಯ ಯಾಂತಂ ವೀರಪುರಸ್ಕೃತಮ್ ॥೧೭॥

ನೋಡಲು ಪ್ರಿಯನಾದ ವೀರನೆ, ಬಂಗಾರದ ಸುಂದರವಾದ ನಿನ್ನ ಭದ್ರಾಸನ-ವನ್ನು ಗೌರವಪೂರ್ವಕವಾಗಿ ಹೊತ್ತು ಮುಂದುಗಡೆ ನಡೆವ ಭೃತ್ಯನನ್ನು ನಾನು ಕಾಣುತ್ತಿಲ್ಲ.

ಅಭಿಷೇಕೋ ಯದಾ ಸಜ್ಜಃ ಕಿಮಿದಾನೀಮಿದಂ ತವ ।
ಅಪೂರ್ವೋ ಮುಖವರ್ಣಶ್ಚ ನ ಪ್ರಹರ್ಷಶ್ಚ ಲಕ್ಷ್ಯತೇ ॥೧೮॥

ಅಭಿಷೇಕದ ಎಲ್ಲ ಏರ್ಪಾಡುಗಳಾಗಿರುವಾಗ ಇದೇನು ಈಗ ನಿನ್ನ ಮುಖದಲ್ಲಿ ಅಪೂರ್ವವಾದ ವರ್ಣ ಕಾಣುತ್ತದೆ. ಹರ್ಷ ಕಾಣುತ್ತಿಲ್ಲ.

ಇತೀವ ವಿಲಪಂತೀಂ ತಾಂ ಪ್ರೋವಾಚ ರಘುನಂದನಃ ।
ಸೀತೇ ತತ್ರಭವಾಂಸ್ತಾತಃ ಪ್ರವ್ರಾಜಯತಿ ಮಾಂ ವನಮ್ ॥೧೯॥

ಹೀಗೆ ಸೀತೆ ವಿಲಾಪ ಮಾಡುವಾಗ ಶ್ರೀರಾಮ ಅವಳಿಗೆ ನುಡಿದ, 'ಸೀತೆ, ಪೂಜ್ಯನಾದ ತಂದೆ ನನ್ನನ್ನು ಕಾಡಿಗೆ ಕಳಿಸುತ್ತಿದ್ದಾನೆ.'

ಕುಲೇ ಮಹತಿ ಸಂಭೂತೇ ಧರ್ಮಜ್ಞೇ ಧರ್ಮಚಾರಿಣಿ ।
ಶೃಣು ಜಾನಕಿ ಯೇನೇದಂ ಕ್ರಮೇಣಾಭ್ಯಾಗತಂ ಮಮ ॥೨೦॥

ದೊಡ್ಡ ಕುಲದಲ್ಲಿ ಹುಟ್ಟಿದ ಧರ್ಮಜ್ಞಳಾದ ಧರ್ಮಚಾರಿಣಿಯಾದ ಜಾನಕಿ, ನನಗೆ ಈ ವನವಾಸ ಯಾವ ಕಾರಣದಿಂದ ಬಂದಿತೆಂದು ಹೇಳುತ್ತೇನೆ, ಕೇಳು.

ರಾಜ್ಞಾ ಸತ್ಯಪ್ರತಿಜ್ಞೇನ ಪಿತ್ರಾ ದಶರಥೇನ ಚ ।
ಕೈಕೇಯ್ಯೈ ಮಮ ಮಾತ್ರೇ ತು ಪುರಾ ದತ್ತೌ ಮಹಾವರೌ ॥೨೧॥

ಸತ್ಯಪ್ರತಿಜ್ಞೆಯನ್ನು ಮಾಡುವ ತಂದೆ ರಾಜಾ ದಶರಥನು ಹಿಂದೆ ನನ್ನ ಮಾತೆ-ಯಾದ ಕೈಕೇಯಿಗೆ ಎರಡು ವರಗಳನ್ನು ವಾಗ್ದಾನ ಮಾಡಿದ್ದನು.

ತಯಾದ್ಯ ಮಮ ಸಜ್ಜೇಽಸ್ಮಿನ್ನಭಿಷೇಕೇ ನೃಪೋದ್ಯತೇ ।
ಪ್ರಚೋದಿತಃ ಸ ಸಮಯೋ ಧರ್ಮೇಣ ಪ್ರತಿನಿರ್ಜಿತಃ ॥೨೨॥

ರಾಜನು ನನಗೆ ಮಾಡಲು ಹೊರಟಿದ್ದ ಅಭಿಷೇಕಕ್ಕೆ ಸಿದ್ಧತೆಗಳಾಗಿರುವಾಗ, ಈಗ ಕೈಕೇಯಿ ಹಿಂದೆ ತನಗೆ ರಾಜನು ವಾಗ್ದಾನ ಮಾಡಿದ್ದ ಎರಡು ವರವನ್ನು ಕಾರ್ಯಗತ ಮಾಡಲು ಒತ್ತಡ ಹೇರಿದಳು. ರಾಜನು ಆ ವರ ಯಾವುದೆಂದು ತಿಳಿದುಕೊಳ್ಳದೇ ಕಾರ್ಯಗತ ಮಾಡಲು ಪ್ರತಿಜ್ಞೆಮಾಡಿ ಧರ್ಮಪಾಶದಲ್ಲಿ ಸಿಲುಕಿ ಪರಾಜಿತನಾದ.

ಚತುರ್ದಶ ಹಿ ವರ್ಷಾಣಿ ವಸ್ತವ್ಯಂ ದಂಡಕೇ ಮಯಾ ।
ಪಿತ್ರಾ ಮೇ ಭರತಶ್ಚಾಪಿ ಯೌವರಾಜ್ಯೇ ನಿಯೋಜಿತಃ ॥೨೩॥

ಹೀಗಾಗಿ ಹದಿನಾಲ್ಕು ವರ್ಷಕಾಲ ನಾನು ದಂಡಕಾರಣ್ಯದಲ್ಲಿ ವಾಸ ಮಾಡ-ಬೇಕಿದೆ. ಮತ್ತು ನನ್ನ ತಂದೆ ಭರತನನ್ನು ಯುವರಾಜಪದವಿಯಲ್ಲಿ ಕೂಡಿಸಬೇಕಿದೆ.

ಸೋಽಹಂ ತ್ವಾಮಾಗತೋ ದ್ರಷ್ಟುಂ ಪ್ರಸ್ಥಿತೋ ವಿಜನಂ ವನಮ್ ।
ಭರತಸ್ಯ ಸಮೀಪೇ ತು ನಾಹಂ ಕಥ್ಯಃ ಕದಾಚನ ॥೨೪॥

ನಾನು ನಿರ್ಜನವಾದ ಅರಣ್ಯಕ್ಕೆ ಹೊರಟು ನಿನ್ನನ್ನು ಕಾಣನು ನಿನ್ನ ಬಳಿಗೆ ಬಂದಿದ್ದೇನೆ. ಭರತನ ಸಮೀಪದಲ್ಲಿ ನೀನು ಎಂದೂ ನನ್ನ ಪ್ರಶಂಸೆ ಮಾಡಬೇಡ.

ಋದ್ಧಿಯುಕ್ತಾ ಹಿ ಪುರುಷಾ ನ ಸಹಂತೇ ಪರಸ್ತವಮ್ ।
ತಸ್ಮಾನ್ನ ತೇ ಗುಣಾಃ ಕಥ್ಯಾ ಭರತಸ್ಯಾಗ್ರತೋ ಮಮ ॥೨೫॥

ಐಶ್ವರ್ಯಯುಕ್ತರಾದ ಪುರುಷರು ಪರರ ಪ್ರಶಂಸೆಯನ್ನು ಸಹಿಸುವುದಿಲ್ಲ. ಅದರಿಂದ ನನ್ನ ಗುಣಗಳನ್ನು ಅವನ ಮುಂದೆ ಹೊಗಳಬೇಡ.

ಅಹಂ ತೇ ನಾನುವಕ್ತವ್ಯೋ ವಿಶೇಷೇಣ ಕದಾಚನ ।
ಅನುಕೂಲತಯಾ ಶಕ್ಯಂ ಸಮೀಪೇ ತಸ್ಯ ವರ್ತಿತುಮ್ ॥೨೬॥

ಸಖಿಯರೊಡನೆ ಮಾತನಾಡುತ್ತ ಭರತನ ಮುಂದೆ ನನ್ನ ಗುಣಗಳನ್ನು ವರ್ಣಿಸ-ಬೇಡ. ಅವನಿಗೆ ಅನುಕೂಲಳಾಗಿದ್ದರೆ ಮಾತ್ರ ಅವನ ಸಮೀಪದಲ್ಲಿ ಇರಲು ಸಾಧ್ಯ.

ತಸ್ಮೈ ದತ್ತಂ ನೃಪತಿನಾ ಯೌವರಾಜ್ಯಂ ಸನಾತನಮ್ ।
ಸ ಪ್ರಸಾದ್ಯಸ್ತ್ವಯಾ ಸೀತೇ ನೃಪತಿಶ್ಚ ವಿಶೇಷತಃ ॥೨೭॥

ಭರತನಿಗೇ ಪರಂಪರೆಯಿಂದ ಬಂದ ಯೌವರಾಜ್ಯವನ್ನು ರಾಜ ಕೊಟ್ಟಿದ್ದಾನೆ. ಅವನನ್ನು, ಸೀತೆ, ನೀನು ವಿಶೇಷವಾಗಿ ಒಲಿಸಿಕೊಳ್ಳಬೇಕು. ಏಕೆಂದರೆ ಅವನು ರಾಜ.

ಅಹಂ ಚಾಪಿ ಪ್ರತಿಜ್ಞಾಂ ತಾಂ ಗುರೋಃ ಸಮನುಪಾಲಯನ್ ।
ವನಮದ್ಯೈವ ಯಾಸ್ಯಾಮಿ ಸ್ಥಿರಾ ಭವ ಮನಸ್ವಿನೀ ॥೨೮॥

ನಾನು ತಂದೆಯ ಪ್ರತಿಜ್ಞೆಯನ್ನು ಪಾಲನೆ ಮಾಡುವುದಕ್ಕಾಗಿ ಇಂದೇ ಕಾಡಿಗೆ ಹೋಗುತ್ತೇನೆ. ಮನೋಬಲ ಉಳ್ಳವಳು ನೀನು ಸ್ಥಿರವಾಗಿರು.

ಯಾತೇ ಚ ಮಯಿ ಕಲ್ಯಾಣಿ ವನಂ ಮುನಿನಿಷೇವಿತಮ್ ।
ವ್ರತೋಪವಾಸಪರಯಾ ಭವಿತವ್ಯಂ ತ್ವಯಾನಘೇ ॥೨೯॥

ಮಂಗಳೆ, ಪಾಪರಹಿತಳೆ, ನಾನು ಮುನಿಗಳು ಸೇವಿಸುವ ಕಾಡಿಗೆ ಹೋಗಿದ್ದಾಗ ನೀನು ವ್ರತ ಉಪವಾಸ ನಿಷ್ಠಳಾಗಿರಬೇಕು.

ಕಲ್ಯಮುತ್ಥಾಯ ದೇವಾನಾಂ ಕೃತ್ವಾ ಪೂಜಾಂ ಯಥಾವಿಧಿ ।
ವಂದಿತವ್ಯೋ ದಶರಥಃ ಪಿತಾ ಮಮ ನರೇಶ್ವರಃ ॥೩೦॥

ಪ್ರತಿ ಉಷಃಕಾಲದಲ್ಲಿ ಎದ್ದು ವಿಧ್ಯುಕ್ತವಾಗಿ ದೇವಪೂಜೆ ಮಾಡಿದ ಬಳಿಕ ನನ್ನ ತಂದೆಯಾದ ರಾಜಾ ದಶರಥನನ್ನು ನಮಿಸಬೇಕು.

ಮಾತಾ ಚ ಮಮ ಕೌಸಲ್ಯಾ ವೃದ್ಧಾ ಸಂತಾಪಕರ್ಶಿತಾ ।
ಧರ್ಮಮೇವಾಗ್ರತಃ ಕೃತ್ವಾ ತತ್ತಃ ಸಂಮಾನಮರ್ಹತಿ ॥೩೧॥

ನನ್ನ ತಾಯಿ ಕೌಸಲ್ಯೆ ವೃದ್ಧೆ. ಪುತ್ರವಿಯೋಗ ಸಂತಾಪದಿಂದ ಕೃಶಳಾಗುತ್ತಾಳೆ. ಧರ್ಮವನ್ನೇ ಆದರಿಸುತ್ತ ಅವಳಿಗೆ ನೀನು ಸಮ್ಮಾನ ಮಾಡಬೇಕು.

ವಂದಿತವ್ಯಾಶ್ಚ ತೇ ನಿತ್ಯಂ ಯಾಃ ಶೇಷಾ ಮಮ ಮಾತರಃ ।
ಸ್ನೇಹಪ್ರಣಯಸಂಭೋಗೈಃ ಸಮಾ ಹಿ ಮಮ ಮಾತರಃ ॥೩೨॥

ನನ್ನ ಇನ್ನುಳಿದ ಮಾತೆಯರನ್ನೂ ಕೂಡ ನೀನು ನಿತ್ಯ ನಮಿಸಬೇಕು. ಪ್ರೀತಿಯಲ್ಲಿ ಸೌಹಾರ್ದದಲ್ಲಿ ಅನ್ನಾದಿಗಳನ್ನಿತ್ತು ಪಾಲನ ಮಾಡುವುದರಲ್ಲಿ ಇವರೂ ನನಗೆ ತಾಯಿ ಸಮಾನರಾಗಿದ್ದಾರೆ.

ಭ್ರಾತೃಪುತ್ರಸಮೌ ಚಾಪಿ ದ್ರಷ್ಟವ್ಯೌ ಚ ವಿಶೇಷತಃ ।
ತ್ವಯಾ ಭರತಶತ್ರುಘ್ನೌ ಪ್ರಾಣೈಃ ಪ್ರಿಯತರೌ ಮಮ ॥೩೩॥

ಭರತಶತ್ರುಘ್ನರೂ ನನಗೆ ಪ್ರಾಣಕ್ಕಿಂತ ಹೆಚ್ಚು ಪ್ರಿಯರು. ಅವರನ್ನು ಸೋದರರಂತೆ ಪುತ್ರರಂತೆ ವಿಶೇಷವಾಗಿ ನೋಡಿಕೊಳ್ಳಬೇಕು.

ವಿಪ್ರಿಯಂ ನ ಚ ಕರ್ತವ್ಯಂ ಭರತಸ್ಯ ಕದಾಚನ ।
ಸ ಹಿ ರಾಜಾ ಪ್ರಭುಶ್ಚೈವ ದೇಶಸ್ಯ ಚ ಕುಲಸ್ಯ ಚ ॥೩೪॥

ಭರತನಿಗೆ ಅಪ್ರಿಯವಾದುದನ್ನು ಎಂದೂ ಮಾಡಬಾರದು. ಅವನು ದೇಶಕ್ಕೆ ಕುಲಕ್ಕೆ ರಾಜನೂ ಪ್ರಭುವೂ ಆಗಿದ್ದಾನೆ.

ಆರಾಧಿತಾ ಹಿ ಶೀಲೇನ ಪ್ರಯತ್ನೈಶ್ಚೋಪಸೇವಿತಾಃ ।
ರಾಜಾನಃ ಸಂಪ್ರಸೀದಂತಿ ಪ್ರಕುಪ್ಯಂತಿ ವಿಪರ್ಯಯೇ ॥೩೫॥

ಒಳ್ಳೆಯ ನಡತೆಯಿಂದಲೂ ಪ್ರಯತ್ನದಿಂದಲೂ ಸೇವಿಸಿದರೆ ಮಾತ್ರ ರಾಜರು ಒಲಿಯುತ್ತಾರೆ ಇಲ್ಲದಿದ್ದರೆ ಮುನಿಸಿಕೊಳ್ಳುತ್ತಾರೆ.

ಔರಸಾನಪಿ ಪುತ್ರಾನ್ ಹಿ ತ್ಯಜಂತ್ಯಹಿತಕಾರಿಣಃ ।
ಸಮರ್ಥಾನ್ ಸಂಪ್ರಗೃಹ್ಣಂತಿ ಪರಾನಪಿ ನರಾಧಿಪಾಃ ॥೩೬॥

ಮಕ್ಕಳನ್ನೂ ಕೂಡ ಅವರು ಅಹಿತಕಾರಿಗಳಾಗಿದ್ದರೆ ರಾಜರು ಪರಿತ್ಯಜಿಸುತ್ತಾರೆ. ಪರಕೀಯರನ್ನೂ ಕೂಡ ಅವರು ಸಮರ್ಥರೂ ಹಿತಕಾರಿಗಳೂ ಆಗಿದ್ದರೆ ಸ್ವೀಕಾರ ಮಾಡುತ್ತಾರೆ.

ಸಾ ತ್ವಂ ವಸೇಹ ಕಲ್ಯಾಣಿ ರಾಜ್ಞಃ ಸಮನುವರ್ತಿನೀ ।
ಭರತಸ್ಯ ರತಾ ಧರ್ಮೇ ಸತ್ಯವ್ರತಪರಾಯಣಾ ॥೩೭॥

ಮಂಗಳೆ, ನೀನು ರಾಜ ಭರತನನ್ನು ಅನುಸರಿಸುತ್ತ ಧರ್ಮನಿರತಳಾಗಿ ಸತ್ಯವ್ರತ ಪರಾಯಣೆಯಾಗಿ ಇಲ್ಲಿ ವಾಸ ಮಾಡು.

ಅಹಂ ಗಮಿಷ್ಯಾಮಿ ಮಹಾವನಂ ಪ್ರಿಯೇ
ತ್ವಯಾ ಹಿ ವಸ್ತವ್ಯಮಿಹೈವ ಭಾಮಿನಿ ।
ಯಥಾ ವ್ಯಲೀಕಂ ಕುರುಷೇ ನ ಕಸ್ಯಚಿತ್
ತಥಾ ತ್ವಯಾ ಕಾರ್ಯಮಿದಂ ವಚೋ ಮಮ ॥೩೯॥

ಪ್ರಿಯೆ, ನಾನು ಮಹಾರಣ್ಯಕ್ಕೆ ಹೋಗುತ್ತೇನೆ. ನೀನು ಇಲ್ಲಿಯೆ ವಾಸಮಾಡಬೇಕು. ನನ್ನ ಯಾವ ಮಾತನ್ನೂ ನೀನು ಮೀರುವುದಿಲ್ಲ. ಅದರಿಂದ ನನ್ನ ಈ ಮಾತನ್ನೂ ನಡೆಸಬೇಕು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಇಪ್ಪತ್ತಾರನೇ ಸರ್ಗ ಮುಗಿಯಿತು.

❖

ಸಪ್ತವಿಂಶಃ ಸರ್ಗಃ

ಸರ್ಗ – 27

ಸೀತೆ ತಾನೂ ವನಕ್ಕೆ ಬರುವೆನೆಂದು ರಾಮನಿಗೆ ಹೇಳುವುದು.

ಏವಮುಕ್ತಾ ತು ವೈದೇಹೀ ಪ್ರಿಯಾರ್ಹಾ ಪ್ರಿಯವಾದಿನೀ ।
ಪ್ರಣಯಾದೇವ ಸಂಕ್ರುದ್ಧಾ ಭರ್ತಾರಮಿದಮಬ್ರವೀತ್ ॥೧॥

ಶ್ರೀರಾಮ ಹೀಗೆ ಹೇಳಿದಾಗ ಪ್ರಿಯಾರ್ಹಳೂ ಪ್ರಿಯವಾದಿನಿಯೂ ಆದ ಸೀತೆ ಪ್ರಣಯದಿಂದಲೇ ಕುಪಿತಳಾಗಿ ಪತಿಗೆ ಹೀಗೆ ಹೇಳಿದಳು.

ಕಿಮಿದಂ ಭಾಷಸೇ ರಾಮ ವಾಕ್ಯಂ ಲಘುತಯಾ ಧ್ರುವಮ್ ।
ತ್ವಯಾ ಯದಪಹಾಸ್ಯಂ ಮೇ ಶ್ರುತ್ವಾ ನರವರಾತ್ಮಜ ॥೨॥

ರಾಮ, ಏಕೆ ನೀನು ನಿಶ್ಚಿತವಾಗಿ ಅರ್ಥಹೀನವಾಗಿ ಇಂಥ ಮಾತನ್ನಾಡುವೆ? ಪುರುಷೋತ್ತಮ, ಅದನ್ನು ಕೇಳಿದರೆ ನನಗೂ ಕೂಡ ಅದು ಹಾಸ್ಯಾಸ್ಪದವಾಗಿದೆ. ಇನ್ನು, ಉಳಿದವರಿಗೆ ಹಾಸ್ಯಾಸ್ಪದವೆಂದು ಬೇರೆನು ಹೇಳಬೇಕು?

ವೀರಾಣಾಂ ರಾಜಪುತ್ರಾಣಾಂ ಶಸ್ತ್ರಾಸ್ತ್ರ ವಿದುಷಾಂ ನೃಪ ।
ಅನರ್ಹಮಯಶಸ್ಯಂ ಚ ನ ಶ್ರೋತವ್ಯಂ ತ್ವಯೇರಿತಂ ॥

ರಾಜನೆ, ನೀನು ಹೇಳಿದ ಮಾತು ವೀರರಾದ ಶಸ್ತ್ರಾಸ್ತ್ರವೇತ್ತರಾದ ರಾಜಪುತ್ರರಿಗೆ ಹೇಳಲು ಅಯೋಗ್ಯ ಮತ್ತು ಅಯಶಸ್ಕರ. ಕೇಳಲೂ ಯೋಗ್ಯವಲ್ಲ.

ಆರ್ಯಪುತ್ರ ಪಿತಾ ಮಾತಾ ಭ್ರಾತಾ ಪುತ್ರಸ್ತಥಾ ಸ್ನುಷಾ ।
ಸ್ವಾನಿ ಪುಣ್ಯಾನಿ ಭುಂಜಾನಾಃ ಸ್ವಂ ಸ್ವಂ ಭಾಗ್ಯಮುಪಾಸತೇ ॥೩॥

ಪತಿಯೆ! ತಂದೆ ತಾಯಿ ಸೋದರ ಪುತ್ರ ಸೊಸೆ ಎಲ್ಲರೂ ತಮ್ಮ ಪುಣ್ಯಫಲಗಳನ್ನು ಉಣ್ಣಲು ತಮ್ಮತಮ್ಮ ಕರ್ಮವನ್ನೇ ಅವಲಂಬಿಸುತ್ತಾರೆ.

ಭರ್ತುರ್ಭಾಗ್ಯಂ ತು ಭಾರ್ಯೈಕಾ ಪ್ರಾಪ್ನೋತಿ ಪುರುಷರ್ಷಭ ।
ಅತಶ್ಚೈವಾಹಮಾದಿಷ್ಟಾ ವನೇ ವಸ್ತವ್ಯಮಿತ್ಯಪಿ ॥೪॥

ಪತ್ನಿಯು ಮಾತ್ರ ಹಾಗಲ್ಲ. ಅವಳು ಮಾತ್ರ ಪತಿಯ ಕರ್ಮಫಲವನ್ನೇ ಹೊಂದುತ್ತಾಳೆ. ಪುರುಷೋತ್ತಮ, ಅದರಿಂದಲೇ ವನವಾಸ ಮಾಡಬೇಕೆನ್ನುವ ಆಜ್ಞೆ ನನಗೂ ಅನ್ವಯಿಸುತ್ತದೆ.

ನ ಪಿತಾ ನಾತ್ಮಜೋ ನಾತ್ಮಾ ನ ಮಾತಾ ನ ಸಖೀಜನಃ ।
ಇಹ ಪ್ರೇತ್ಯ ಚ ನಾರೀಣಾಂ ಪತಿರೇಕೋ ಗತಿಃ ಸದಾ ॥೫॥

ಈ ಲೋಕದಲ್ಲಾಗಲಿ ಪರಲೋಕದಲ್ಲಾಗಲಿ ನಾರಿಯರಿಗೆ ಸದಾ ಆಶ್ರಯನು ತಂದೆಯೂ ಅಲ್ಲ, ಮಗನೂ ಅಲ್ಲ, ತಾನೂ ಅಲ್ಲ. ತಾಯಿಯೂ ಅಲ್ಲ. ಸಖಿಯರೂ ಅಲ್ಲ. ಪತಿಯೊಬ್ಬನೇ ಆಶ್ರಯ.

ಯದಿ ತ್ವಂ ಪ್ರಸ್ಥಿತೋ ದುರ್ಗಂ ವನಮದ್ಯೈವ ರಾಘವ ।
ಅಗ್ರತಸ್ತೇ ಗಮಿಷ್ಯಾಮಿ ಮೃದ್ನಂತೀ ಕುಶಕಂಟಕಾನ್ ॥೬॥

ರಾಮ! ನೀನು ಇಂದೇ ದುರ್ಗಮವಾದ ಅರಣ್ಯಕ್ಕೆ ಹೊರಟರೆ ನಾನೂ ನಿನಗಿಂತ ಮೊದಲೇ ದರ್ಭೆಮುಳ್ಳುಗಳನ್ನು ತುಳಿಯುತ್ತ ಮುಂದೆ ನಡೆಯುತ್ತೇನೆ.

ಈರ್ಷ್ಯಾರೋಷೌ ಬಹಿಷ್ಕೃತ್ಯ ಪೀತಶೇಷಮಿವೋದಕಮ್ ।
ನಯ ಮಾಂ ವೀರ ವಿಸ್ರಬ್ಧಃ ಪಾಪಂ ಮಯಿ ನ ವಿದ್ಯತೇ ॥೭॥

ಕುಡಿದುಳಿದ ನೀರನ್ನು ಚೆಲ್ಲುವಂತೆ, ಹೆಣ್ಣಾಗಿಯೂ ಈಕೆ ವನವಾಸ ಮಾಡುವೆ–ನೆನ್ನುತ್ತಾಳೆ'. ಎಂದು ಅಸಹನೆ, 'ಬೇಡವೆಂದರೂ ಕೇಳುವುದಿಲ್ಲ' ಎಂದು ಕೋಪ–ಗಳನ್ನು ಬಿಟ್ಟು ನನ್ನನ್ನೂ ಕರೆದೊಯ್ಯು. ನನ್ನಲ್ಲಿ ಪಾಪವಿಲ್ಲ. ನಾನು ಕುಡಿದುಳಿದ ನೀರಿನಂತೆ ಅಲ್ಲ.

ಪ್ರಾಸಾದಾಗ್ರೈರ್ವಿಮಾನೈರ್ವಾ ವೈಹಾಯಸಗತೇನ ವಾ ।
ಸರ್ವಾವಸ್ಥಾಗತಾ ಭರ್ತುಃ ಪಾದಚ್ಛಾಯಾ ವಿಶಿಷ್ಯತೇ ॥೮॥

ಅರಮನೆಯ ಮಾಳಿಗೆಯಲ್ಲಿರುವುದಕ್ಕಿಂತಲೂ ವಿಮಾನದಲ್ಲಿ ಹಾರುವುದ–ಕ್ಕಿಂತಲೂ ಯೋಗಬಲದಿಂದ ಆಕಾಶದಲ್ಲಿ ಸಂಚರಿಸುವುದಕ್ಕಿಂತಲೂ ಎಲ್ಲ ಅವಸ್ಥೆ–ಯಲ್ಲಿ ಯಾವಾಗಲೂ ಪತಿಯ ಪಾದದ ನೆರಳಲ್ಲಿರುವುದೇ ಸತಿಗೆ ಹೆಚ್ಚು ಶ್ರೇಯಸ್ಕರ.

ಅನುಶಿಷ್ಟಾಸ್ಮಿ ಮಾತ್ರಾ ಚ ಪಿತ್ರಾ ಚ ವಿವಿಧಾಶ್ರಯಮ್ ।
ನಾಸ್ಮಿ ಸಂಪ್ರತಿ ವಕ್ತವ್ಯಾ ವರ್ತಿತವ್ಯಂ ಯಥಾ ಮಯಾ ॥೯॥

ಪತಿ ನಾನಾ ಅವಸ್ಥೆಗಳಲ್ಲಿರುವಾಗಲೂ ಅವನನ್ನು ಸದಾ ಆಶ್ರಯಿಸಿರಬೇಕೆಂಬ ಉಪದೇಶವನ್ನು ನನಗೆ ತಾಯಿ ತಂದೆಗಳು ಹೇಳಿಕೊಟ್ಟಿದ್ದಾರೆ. ಈಗ ನೀನು ನನಗೆ 'ನಾನು ಭರತಾದಿ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕೆಂ'ದು ಉಪದೇಶಿಸ ಬೇಕಿಲ್ಲ.

ಅಹಂ ದುರ್ಗಂ ಗಮಿಷ್ಯಾಮಿ ವನಂ ಪುರುಷವರ್ಜಿತಮ್ ।
ನಾನಾಮೃಗಗಣಾಕೀರ್ಣಂ ಶಾರ್ದೂಲವೃಕಸೇವಿತಮ್ ॥೧೦॥

ಮನುಷ್ಯರಿಲ್ಲದ ದುರ್ಗಮವಾದ ನಾನಾ ಮೃಗ ಸಮೂಹಗಳಿಂದ ತುಂಬಿದ ಹುಲಿತೋಳಗಳುಳ್ಳ ಕಾಡಿನಲ್ಲಿ ನಾನು ನಿನ್ನನ್ನು ಹಿಂಬಾಲಿಸಿ ಬರುತ್ತೇನೆ.

ಸುಖಂ ವನೇ ವಿವತ್ಸ್ಯಾಮಿ ಯಥೈವ ಭವನೇ ಪಿತುಃ ।
ಅಚಿಂತಯಂತೀ ತ್ರೀನ್ಲೋಕಾಂಶ್ಚಿಂತಯಂತೀ ಪತಿವ್ರತಮ್ ॥೧೧॥

ತವರು ಮನೆಯಲ್ಲಿರುವಂತೆಯೇ ಕಾಡಿನಲ್ಲಿಯೂ ಮೂಲೋಕದ ಸುಖಗಳನ್ನೂ ಚಿಂತಿಸದೆ ಪತಿಸೇವಾವ್ರತವನ್ನೇ ಚಿಂತಿಸುತ್ತ ಸುಖವಾಗಿ ನಾನು ವಾಸಮಾಡುತ್ತೇನೆ.

ಶುಶ್ರೂಷಮಾಣಾ ತೇ ನಿತ್ಯಂ ನಿಯತಾ ಬ್ರಹ್ಮಚಾರಿಣೀ ।
ಸಹ ರಂಸ್ಯೇ ತ್ವಯಾ ವೀರ ವನೇಷು ಮಧುಗಂಧಿಷು ॥೧೨॥

ವೀರನೆ, ನಿಯಮ ಉಳ್ಳವಳಾಗಿ ಬ್ರಹ್ಮಚಾರಿಣಿಯಾಗಿ ಹೂಗಳ ಮಕರಂದದ ಸುವಾಸನೆಉಳ್ಳ ಕಾಡುಗಳಲ್ಲಿ ನಿನ್ನ ಸೇವೆಮಾಡುತ್ತ ನಿನ್ನೊಡನೆ ವಿಹಾರ ಮಾಡುವೆನು.

ತ್ವಂ ಹಿ ಕರ್ತುಂ ವನೇ ಶಕ್ತೋ ರಾಮ ಸಂಪರಿಪಾಲನಮ್ ।
ಅನ್ಯಸ್ಯಾಪಿ ಜನಸ್ಯೇಹ ಕಿಂ ಪುನರ್ಮಮ ಮಾನದ ॥೧೩॥

ಮಾನದಾಯಕನೆ, ರಾಮ, ನೀನು ಕಾಡಿನಲ್ಲಿ ನನ್ನನ್ನು ಕಾಪಾಡಲು ಶಕ್ತನಾಗಿರುವೆ. ಅನ್ಯ ಜನರ ರಕ್ಷಣೆಗೆ ಶಕ್ತನು ನೀನೆಂದ ಮೇಲೆ ನನ್ನ ರಕ್ಷಣೆಗೆ ಶಕ್ತನೆಂದು ಬೇರೇನು ಹೇಳಬೇಕು?

ಸಹ ತ್ವಯಾ ಗಮಿಷ್ಯಾಮಿ ವನಮದ್ಯ ನ ಸಂಶಯಃ ।
ನಾಹಂ ಶಕ್ಯಾ ಮಹಾಭಾಗ ನಿವರ್ತಯಿತುಮುದ್ಯತಾ ॥೧೪॥

ಈಗ ನಾನು ನಿನ್ನೊಂದಿಗೆ ಕಾಡಿಗೆ ಬರುತ್ತೇನೆ. ಇದರಲ್ಲಿ ಸಂಶಯವಿಲ್ಲ. ಮಹಾ-ಭಾಗ್ಯಶಾಲಿಯೆ, ನಿನ್ನೊಂದಿಗೆ ವನವಾಸಕ್ಕೆ ಉದ್ಯುಕ್ತಳಾದ ನನ್ನನ್ನು ಯಾರೂ ತಡೆಯಲಾರರು.

ಫಲಮೂಲಾಶನಾ ನಿತ್ಯಂ ಭವಿಷ್ಯಾಮಿ ನ ಸಂಶಯಃ ।
ನ ತೇ ದುಃಖಂ ಕರಿಷ್ಯಾಮಿ ನಿವಸಂತೀ ಸಹ ತ್ವಯಾ ।
ಅಗ್ರತಸ್ತೇ ಗಮಿಷ್ಯಾಮಿ ಭೋಕ್ಷ್ಯೇ ಭುಕ್ತವತಿ ತ್ವಯಿ ॥೧೫॥

ನಾನು ನಿತ್ಯ ಹಣ್ಣುಗಡ್ಡೆ ತಿಂದು ಬದುಕುತ್ತೇನೆ. ಸಂಶಯವಿಲ್ಲ. ನಿನ್ನೊಂದಿಗೆ ವಾಸ ಮಾಡುವಾಗ ನಿನಗೆ ದುಃಖ ಉಂಟುಮಾಡುವುದಿಲ್ಲ. ನಿನ್ನ ಮುಂದೆ ಮುಂದೇ ನಾನು ಹೋಗುತ್ತಿರುತ್ತೇನೆ. ನೀನುಂಡ ಬಳಿಕವೇ ಉಣ್ಣುತ್ತೇನೆ.

ಇಚ್ಛಾಮಿ ಸರಿತಃ ಶೈಲಾನ್ ಪಲ್ವಲಾನಿ ವನಾನಿ ಚ ।
ದ್ರಷ್ಟುಂ ಸರ್ವತ್ರ ನಿರ್ಭೀತಾ ತ್ವಯಾ ನಾಥೇನ ಧೀಮತಾ ॥೧೬॥

ನದಿ ಬೆಟ್ಟ ಕೊಳ ಕಾಡುಗಳನ್ನು ನೋಡಲು ಬಯಸುತ್ತೇನೆ. ಧೀಮಂತನಾದ ನೀನು ನಾಥನಾದರೆ, ನಿನ್ನೊಂದಿಗೆ ಎಲ್ಲ ಕಡೆ ನಿರ್ಭೀತಳಾಗಿರುತ್ತೇನೆ.

ಹಂಸಕಾರಂಡವಾಕೀರ್ಣಾಃ ಪದ್ಮಿನೀಃ ಸಾಧು ಪುಷ್ಪಿತಾಃ ।
ಇಚ್ಛೇಯಂ ಸುಖಿನೀ ದ್ರಷ್ಟುಂ ತ್ವಯಾ ವೀರೇಣ ಸಂಗತಾ ॥೧೭॥

ಹಂಸ ಕಾರಂಡವ ಪಕ್ಷಿಗಳಿಂದ ತುಂಬಿದ ಪದ್ಮಗಳುಳ್ಳ ಚೆನ್ನಾಗಿ ಹೂಬಿಟ್ಟಿರುವ ಸರೋವರಗಳನ್ನು ನಿನ್ನೊಡಗೂಡಿ ಸುಖವಾಗಿ ನಾನು ನೋಡಲು ಬಯಸುತ್ತೇನೆ.

ಅಭಿಷೇಕಂ ಕರಿಷ್ಯಾಮಿ ತಾಸು ನಿತ್ಯಂ ಯತವ್ರತಾ ।
ಸಹ ತ್ವಯಾ ವಿಶಾಲಾಕ್ಷ ರಂಸ್ಯೇ ಪರಮನಂದಿನೀ ॥೧೮॥

ಅಂಥ ಕೊಳಗಳಲ್ಲಿ ವ್ರತಾನುಷ್ಠಾನಪರಳಾಗಿ ನಾನು ನಿನ್ನೊಡನೆ ನಿತ್ಯ ಸ್ನಾನ ಮಾಡುತ್ತೇನೆ. ವಿಶಾಲನೇತ್ರನೆ, ನಿನ್ನ ಜೊತೆಯಲ್ಲಿ ನಿತ್ಯಾನಂದಭರಿತಳಾಗಿ ವಿಹಾರ ಮಾಡುತ್ತೇನೆ.

ಏವಂ ವರ್ಷಸಹಸ್ರಾಣಿ ಶತಂ ವಾऽಹಂ ತ್ವಯಾ ಸಹ ।
ವ್ಯತಿಕ್ರಮಂ ನ ವೇತ್ಸ್ಯಾಮಿ ಸ್ವರ್ಗೋऽಪಿ ನ ಹಿ ಮೇ ಮತಃ ॥೧೯॥

ನೂರು ಅಥವಾ ಸಾವಿರ ವರ್ಷವಾದರೂ ನಿನ್ನೊಂದಿಗೆ ಹೀಗೇ ವಿಹರಿಸುತ್ತೇನೆ. ಕಾಲ ಕಳೆದುದರ ಪರಿವೆಯೇ ನನಗಿರುವುದಿಲ್ಲ. ಸ್ವರ್ಗವೂ ನನಗೆ ಬೇಡ.

ಸ್ವರ್ಗೇऽಪಿ ಚ ವಿನಾ ವಾಸೋ ಭವಿತಾ ಯದಿ ರಾಘವ ।
ತ್ವಯಾ ಮಮ ನರವ್ಯಾಘ್ರ ನಾಹಂ ತಮಪಿ ರೋಚಯೇ ॥೨೦॥

ರಾಮ, ಪುರುಷೋತ್ತಮ, ಸ್ವರ್ಗದಲ್ಲಿಯೂ ಕೂಡ, ನೀನು ಜೊತೆಗೆ ಇಲ್ಲದ ವಾಸ ನನಗೆ ಲಭಿಸಿದರೆ, ಅದನ್ನು ನಾನು ಇಷ್ಟಪಡಲಾರೆ.

ಅಹಂ ಗಮಿಷ್ಯಾಮಿ ವನಂ ಸುದುರ್ಗಮಂ
ಮೃಗಾಯುತಂ ವಾನರವಾರಣೈರ್ಯುತಮ್ ।
ವನೇ ನಿವತ್ಸ್ಯಾಮಿ ಯಥಾ ಪಿತುರ್ಗೃಹೇ
ತವೈವ ಪಾದಾವುಪಗೃಹ್ಯ ಸಂಯತಾ ॥೨೧॥

ಹತ್ತುಸಾವಿರ ಮೃಗಗಳಿಂದ ಕಪಿ ಆನೆಗಳಿಂದ ಕೂಡಿದ ಬಲು ದುರ್ಗಮವಾದ ಕಾಡಿಗೂ ನಾನು ಬರುತ್ತೇನೆ. ತವರು ಮನೆಯಲ್ಲಿ ಹೇಗೊ ಹಾಗೆ ಕಾಡಿನಲ್ಲಿಯೂ ನಿನ್ನ ಪಾದಗಳನ್ನು ಸೇವಿಸುತ್ತಲೇ ನಿಯಮನಿಷ್ಠಳಾಗಿ ವಾಸಮಾಡುತ್ತೇನೆ.

ಅನನ್ಯಭಾವಾಮನುರಕ್ತಚೇತಸಂ
ತ್ವಯಾ ವಿಯುಕ್ತಾಂ ಮರಣಾಯ ನಿಶ್ಚಿತಾಮ್ ।
ನಯಸ್ವ ಮಾಂ ಸಾಧು ಕುರುಷ್ವ ಯಾಚನಾಂ
ನ ತೇ ಮಯಾತೋ ಗುರುತಾ ಭವಿಷ್ಯತಿ ॥೨೨॥

ನಿನಗಿಂತ ಬೇರೆ ಯಾರನ್ನೂ ಬಯಸದೆ, ನಿನ್ನಲ್ಲಿಯೇ ಅನುರಕ್ತವಾದ ಮನಸಿ-ನವಳು, ನಿನ್ನಿಂದ ವಿಯೋಗವಾದರೆ ಮರಣಕ್ಕೇ ನಿಶ್ಚಯಿಸುವವಳು. ಇಂಥ ನನ್ನನ್ನೂ ಜೊತೆಗೆ ಕರೆದೊಯ್ಯು. ನನ್ನ ಪ್ರಾರ್ಥನೆಯನ್ನು ನಡೆಸಿಕೊಡು. ನನ್ನಿಂದ ನಿನಗೆ ಹೆಚ್ಚಿನ ಭಾರವಾಗುವುದಿಲ್ಲ.

ತಥಾ ಬ್ರುವಾಣಾಮಪಿ ಧರ್ಮವತ್ಸಲೋ
ನ ಚ ಸ್ಮ ಸೀತಾಂ ನೃವರೋ ನಿನೀಷತಿ ।
ಉವಾಚ ಸೀತಾಂ ಬಹು ಸನ್ನಿವರ್ತನೇ
ವನೇ ನಿವಾಸಸ್ಯ ಚ ದುಃಖಿತಾಂ ಪ್ರತಿ ॥೨೩॥

ಧರ್ಮವತ್ಸಲನಾದ ಪುರುಷೋತ್ತಮ ರಾಮನು ಸೀತೆ ಹೀಗೆ ನ್ಯಾಯವಾಗಿ ಹೇಳುತ್ತಿದ್ದರೂ ಅವಳನ್ನು ಜೊತೆಯಲ್ಲಿ ಒಯ್ಯಲು ಬಯಸಲಿಲ್ಲ. 'ನಿವರ್ತನೇ' ಅವಳ ನಿರ್ಧಾರವನ್ನು ಹಿಂತಿರುಗಿಸಲು ವನವಾಸ ದುಃಖಕರವೆಂದು ತಿಳಿಸಲು 'ಸತ್' ಸಂಭಾವಿತವಾದ ಬಹುವಾದಗಳನ್ನು ಅವಳ ಮುಂದಿಟ್ಟ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಇಪ್ಪತ್ತೇಳನೇ ಸರ್ಗ ಮುಗಿಯಿತು.

ಅಷ್ಟಾವಿಂಶಃ ಸರ್ಗಃ

ಸರ್ಗ – 28

ಶ್ರೀರಾಮನು ವನವಾಸದ ದುಃಖಗಳನ್ನು ಸೀತೆಗೆ ವಿವರಿಸಿ ಹೇಳುವುದು.

ಸ ಏವಂ ಬ್ರುವತೀಂ ಸೀತಾಂ ಧರ್ಮಜ್ಞೋ ಧರ್ಮವತ್ಸಲಃ ।
ನ ನೇತುಂ ಕುರುತೇ ಬುದ್ಧಿಂ ವನೇ ದುಃಖಾನಿ ಚಿಂತಯನ್ ॥೧॥

ಧರ್ಮಜ್ಞ ಧರ್ಮವತ್ಸಲನಾದ ಶ್ರೀರಾಮ ಕಾಡಿನಲ್ಲಿರುವ ದುಃಖಗಳನ್ನು ಆಲೋಚಿಸುತ್ತ ಸೀತೆಯನ್ನು ಜೊತೆಗೆ ಕರೆದೊಯ್ಯಲು ಮನಸ್ಸು ಮಾಡಲಿಲ್ಲ.

ಸಾಂತ್ವಯಿತ್ವಾ ಪುನಸ್ತಾಂ ತು ಬಾಷ್ಪಪರ್ಯಾಕುಲೇಕ್ಷಣಾಮ್ ।
ನಿವರ್ತನಾರ್ಥೇ ಧರ್ಮಾತ್ಮಾ ವಾಕ್ಯಮೇತದುವಾಚ ಹ ॥೨॥

ಕಣ್ಣೀರು ತುಂಬಿದ ಕಣ್ಣುಳ್ಳ ಸೀತೆಯನ್ನು ಧರ್ಮಾತ್ಮನಾದ ರಾಮ ಪುನಃ ಸಂತೈಸಿ ಹೀಗೆ ನುಡಿದ.

ಸೀತೇ ಮಹಾಕುಲೀನಾಸಿ ಧರ್ಮೇ ಚ ನಿರತಾ ಸದಾ ।
ಇಹಾಚರಸ್ವ ಧರ್ಮಂ ತ್ವಂ ಯಥಾ ಮೇ ಮನಸಃ ಸುಖಮ್ ॥೩॥

ಸೀತೆ, ದೊಡ್ಡಕುಲದಲ್ಲಿ ಜನಿಸಿರುವೆ. ಸದಾ ಧರ್ಮದಲ್ಲಿ ನಿರತಳಾಗಿರುವೆ. ಇಲ್ಲಿ ಅಯೋಧ್ಯೆಯಲ್ಲಿಯೇ ಇದ್ದು 'ಮೇ' ನನ್ನ ಆಗಮನದ ಉದ್ದೇಶವಾಗಿ 'ಯಥಾ ಮನಸಃ ಸುಖಂ' ಮನಸಿಗೆ ಸುಖವಾಗುವಂತೆ, ಅಂದರೆ, ಯಥಾಶಕ್ತಿ ಸ್ವಧರ್ಮವನ್ನು ಆಚರಿಸು.

ಸೀತೇ ಯಥಾ ತ್ವಾಂ ವಕ್ಷ್ಯಾಮಿ ತಥಾ ಕಾರ್ಯಂ ತ್ವಯಾಬಲೇ ।
ವನೇ ದೋಷಾ ಹಿ ಬಹವೋ ವದತಸ್ತಾನ್ನಿಬೋಧ ಮೇ ॥೪॥

ಅಬಲೆ, ಸೀತೆ, ನೀನು ನಾನು ಹೇಳುವಂತೆ ಮಾಡು. ಕಾಡಿನಲ್ಲಿ ಬಹಳ ಕಷ್ಟ-ಗಳಿವೆ. ನಾನು ಹೇಳುತ್ತೇನೆ ಕೇಳು.

ಸೀತೇ ವಿಮುಚ್ಯತಾಮೇಷಾ ವನವಾಸಕೃತಾ ಮತಿಃ ।
ಬಹುದೋಷಂ ಹಿ ಕಾಂತಾರಂ ವನಮಿತ್ಯಭಿಧೀಯತೇ ॥೫॥

ಸೀತೆ, ವನವಾಸ ಮಾಡುವೆನೆಂದು ನೀನು ಮಾಡಿದ ಈ ನಿರ್ಧಾರವನ್ನು

ಬಿಟ್ಟುಬಿಡು! 'ವನಂ' ಕಾಡು 'ಕಾಂತಾರಂ' ಕಾಂತೆಗೆ ದುರ್ಗಮ. ಅದರಿಂದ ಅದನ್ನು ಬಹುಕಷ್ಟಮಯವೆಂದು ಹೇಳುತ್ತಾರೆ.

'ಕಾಂತಾ–ಅ–ರ' ಕಾಂತೆಗೆ ದುಃಖಕರವಾದ್ದರಿಂದ 'ಕಾಂತಾರ' ಎಂದು ವನವನ್ನು ಹೇಳುತ್ತಾರೆ.

ಹಿತಬುದ್ಧ್ಯಾ ಖಲು ವಚೋ ಮಯ್ಯೇತದಭಿಧೀಯತೇ ।
ಸದಾ ಸುಖಂ ನ ಜಾನಾಮಿ ದುಃಖಮೇವ ಸದಾ ವನಮ್ ॥೬॥

ನಿನಗೆ ಹಿತವಾಗಲೆಂಬ ಭಾವನೆಯಿಂದ ನಾನು ಇದನ್ನು ಹೇಳುತ್ತಿದ್ದೇನೆ. ಅರಣ್ಯದಲ್ಲಿ ಸದಾ ದುಃಖವೆ ಹೊರತು ಎಂದೂ ಸುಖವಿಲ್ಲವೆಂದು ನನಗೆ ಗೊತ್ತಿದೆ.

ಗಿರಿನಿರ್ಝರಸಂಭೂತಾ ಗಿರಿಕಂದರವಾಸಿನಾಮ್ ।
ಸಿಂಹಾನಾಂ ನಿನದಾ ದುಃಖಾಃ ಶ್ರೋತುಂ ದುಃಖಮತೋ ವನಮ್ ॥೭

ಪರ್ವತ ಗುಹೆಗಳಲ್ಲಿ ವಾಸಿಸುವ ಸಿಂಹಗಳ ಶಬ್ದಗಳೂ ಪರ್ವತ ಜಲಪಾತಗಳ ಶಬ್ದಗಳೂ ಕೇಳಲು ದುಃಖಕರ. ಅದರಿಂದ ಕಾಡು ಕಷ್ಟಮಯ.

ಕ್ರೀಡಮಾನಾಶ್ಚ ವಿಸ್ರಬ್ಧಾ ಮತ್ತಾಃ ಶೂನ್ಯೇ ಮಹಾಮೃಗಾಃ ।
ದೃಷ್ಟ್ವಾ ಸಮಭಿವರ್ತಂತೇ ಸೀತೇ ದುಃಖಮತೋ ವನಮ್ ॥೮॥

ನಿರ್ಜನವಾದ ಅರಣ್ಯದಲ್ಲಿ ಮದಿಸಿದ ಮಹಾಮೃಗಗಳು ಭೀತಿ ಇಲ್ಲದೆ ಕುಣಿದಾಡುತ್ತ ಮನುಷ್ಯರನ್ನು ಕಂಡು ಕೊಲ್ಲಲು ಮುನ್ನುಗ್ಗಿ ಬರುತ್ತವೆ. ಸೀತೆ, ಅದರಿಂದ ಕಾಡು ಕಷ್ಟಮಯ.

ಸಗ್ರಾಹಾಃ ಸರಿತಶ್ಚೈವ ಪಂಕವತ್ಯಃ ಸುದುಸ್ತರಾಃ ।
ಮತ್ತೈರಪಿ ಗಜೈರ್ನಿತ್ಯಮತೋ ದುಃಖತರಂ ವನಮ್ ॥೯॥

ನದಿಗಳಲ್ಲಿ ಮೊಸಳೆಗಳಿವೆ. ಕೆಸರೂ ತುಂಬಿದ್ದು ಮದಿಸಿದ ಆನೆಗಳಿಗೂ ಕೂಡ ದಾಟಲು ಅಸಾಧ್ಯವಾಗಿರುತ್ತವೆ. ಅದರಿಂದ ಕಾಡು ಬಲು ಕಷ್ಟಮಯ.

ಲತಾಕಂಟಕಸಂಕೀರ್ಣಾಃ ಕೃಕವಾಕೂಪನಾದಿತಾಃ ।
ನಿರಪಾಶ್ಚ ಸುದುರ್ಗಾಶ್ಚ ಮಾರ್ಗಾ ದುಃಖಮತೋ ವನಮ್ ॥೧೦॥

ಅರಣ್ಯಮಾರ್ಗಗಳು ಮುಳ್ಳುಬಳ್ಳಿಗಳಿಂದ ಆವೃತವಾಗಿರುತ್ತವೆ. ಕಾಡುಕೋಳಿಗಳ ಶಬ್ದಗಳಿಂದ ತುಂಬಿರುತ್ತವೆ. ನೀರು ಇರುವುದಿಲ್ಲ. ದುರ್ಗಮವೂ ಆಗಿರುತ್ತದೆ. ಅದರಿಂದ ಕಾಡು ಕಷ್ಟಮಯ.

ಸುಪ್ಯತೇ ಪರ್ಣಶಾಲಾಸು ಸ್ವಯಂ ಭಗ್ನಾಸು ಭೂತಲೇ ।
ರಾತ್ರಿಷು ಶ್ರಮಖಿನ್ನೇನ ತಸ್ಮಾದ್ದುಃಖತರಂ ವನಮ್ ॥೧೧॥

ಅಗ್ನಿ ಸಮಿತ್ತು ದರ್ಭೆ ಪುಷ್ಪಫಲಾದಿಗಳನ್ನು ತರುವ ಶ್ರಮದಿಂದ ಖಿನ್ನನಾದ ನಾನು ರಾತ್ರಿಗಳಲ್ಲಿ ತಾನಾಗಿ ಉದುರಿದ ತರಗೆಲೆಯ ಶಯ್ಯೆಯಲ್ಲಿ ಮಲಗುತ್ತೇನೆ. ಎಲೆಯ ತಳಿರುಗಳ ಹಾಸಿಗೆಯಲ್ಲಿ ಅಲ್ಲ. ಅದರಲ್ಲಿಯೇ ನೀನೂ ಮಲಗ ಬೇಕಾಗುತ್ತದೆ. ಅದರಿಂದ ಕಾಡು ಬಲು ಕಷ್ಟಮಯ.

ಅಹೋರಾತ್ರಂ ಚ ಸಂತೋಷಃ ಕರ್ತವ್ಯೋ ನಿಯತಾತ್ಮನಾ ।
ಫಲೈರ್ವರ್ತಾವಪತಿತೈಃ ಸೀತೇ ದುಃಖಮತೋ ವನಮ್ ॥೧೨॥

ಹಗಲು ರಾತ್ರಿ ಪೂರ್ತಿಯಾಗಿ ಕೇವಲ ಮರದಿಂದ ಉದುರಿದ ಹಣ್ಣು ಗಳಿಂದಲೇ ಮನೋನಿಗ್ರಹಉಳ್ಳವನು ತೃಪ್ತಿಪಡಬೇಕಾಗುತ್ತದೆ. ಅದರಿಂದ ಕಾಡು ಕಷ್ಟಮಯ.

ಉಪವಾಸಶ್ಚ ಕರ್ತವ್ಯೋ ಯಥಾಪ್ರಾಣೇನ ಮೈಥಿಲಿ ।
ಜಟಾಭಾರಶ್ಚ ಕರ್ತವ್ಯೋ ವಲ್ಕಲಾಂಬರಧಾರಿಣಾ ॥೧೩॥

ಸೀತೆ, ನಾರುಡೆಉಟ್ಟು ಯಥಾಶಕ್ತಿ ಉಪವಾಸ ಮಾಡಬೇಕಾಗುತ್ತದೆ. ಕಂದ-ಮೂಲಗಳನ್ನು ಯಥೇಚ್ಛವಾಗಿ ತಿನ್ನುವಂತಿಲ್ಲ. ಜಡೆಕಟ್ಟುವ ಕೇಶರಾಶಿಯ ಭಾರವನ್ನು ಹೊರಬೇಕಾಗುತ್ತದೆ, ನೀನು.

ದೇವತಾನಾಂ ಪಿತೄಣಾಂ ಚ ಕರ್ತವ್ಯಂ ವಿಧಿಪೂರ್ವಕಮ್ ।
ಪ್ರಾಪ್ತಾನಾಮತಿಥೀನಾಂ ಚ ನಿತ್ಯಶಃ ಪ್ರತಿಪೂಜನಮ್ ॥೧೪॥

ದೇವತೆಗಳಿಗೂ ಪಿತೃಗಳಿಗೂ ಕಾಲಪ್ರಾಪ್ತರಾದ ಅತಿಥಿಗಳಿಗೂ ನಿತ್ಯ ಸತ್ಕಾರ ಪೂಜೆಗಳನ್ನು ವಿಧಿಪೂರ್ವಕ ಮಾಡಬೇಕಾಗುತ್ತದೆ.

ಕಾರ್ಯಸ್ತ್ರಿರಭಿಷೇಕಶ್ಚ ಕಾಲೇ ಕಾಲೇ ಚ ನಿತ್ಯಶಃ ।
ಚರತಾ ನಿಯಮೇನೈವ ತಸ್ಮಾದ್ದುಃಖತರಂ ವನಮ್ ॥೧೫॥

ಕಾಲಕಾಲಗಳಲ್ಲಿ ನಿತ್ಯ ನಿಯಮಾನುಷ್ಠಾನ ಮಾಡುತ್ತ ಮೂರು ಕಾಲಗಳಲ್ಲಿ ಸ್ನಾನ ಮಾಡಬೇಕಾಗುತ್ತದೆ. ಅದರಿಂದ ಕಾಡು ಬಲು ಕಷ್ಟಮಯ.

ಉಪಹಾರಶ್ಚ ಕರ್ತವ್ಯಃ ಕುಸುಮೈಃ ಸ್ವಯಮಾಹೃತೈಃ ।
ಆರ್ಷೇಣ ವಿಧಿನಾ ವೇದ್ಯಾಂ ಬಾಲೇ ದುಃಖಮತೋ ವನಮ್ ॥೧೬॥

ಬಾಲೆ, ತಾನೇ ತಂದ ಹೂಗಳಿಂದ ಋಷಿಪ್ರೋಕ್ತವಾದ ವಿಧಿಯಿಂದ ದೇವತಾ-ರಾಧನೆ ಮಾಡಬೇಕಾಗುತ್ತದೆ. ಅದರಿಂದ ಕಾಡು ಕಷ್ಟಮಯ.

ಯಥಾಲಬ್ಧೇನ ಸಂತೋಷಃ ಕರ್ತವ್ಯಸ್ತೇನ ಮೈಥಿಲಿ ।
ಯತಾಹಾರೈರ್ವನಚರೈರ್ನಿತ್ಯಂ ದುಃಖಮತೋ ವನಮ್ ॥೧೭॥

ಸೀತೆ, ವನವಾಸಿಗಳು ನಿತ್ಯ ದೈವಾತ್ ಸಿಕ್ಕಿದಷ್ಟೇ ಉಂಡು ತೃಪ್ತರಾಗಬೇಕು. ಆಹಾರದಲ್ಲಿ ನಿಯಮಗಳನ್ನು ಪಾಲಿಸಬೇಕು. ಅದರಿಂದ ಕಾಡು ಕಷ್ಟಮಯ.

ಅತೀವ ವಾತಾಸ್ತಿಮಿರಂ ಬುಭುಕ್ಷಾ ಚಾತ್ರ ನಿತ್ಯಶಃ ।
ಭಯಾನಿ ಚ ಮಹಾಂತ್ಯತ್ರ ತತೋ ದುಃಖತರಂ ವನಮ್ ॥೧೮॥

ಕಾಡಿನಲ್ಲಿ ನಿತ್ಯವೂ ಅತಿಯಾದ ಗಾಳಿ, ಕತ್ತಲು, ಹಸಿವು, ಮಹಾಭಯಗಳಿರುತ್ತವೆ. ಅದರಿಂದ ಕಾಡು ಬಲು ಕಷ್ಟಮಯ.

ಸರೀಸೃಪಾಶ್ಚ ಬಹವೋ ಬಹುರೂಪಾಶ್ಚ ಭಾಮಿನಿ ।
ಚರಂತಿ ಪೃಥಿವೀಂ ದರ್ಪಾತ್ತತೋ ದುಃಖತರಂ ವನಮ್ ॥೧೯॥

ಸೀತೆ, ಕಾಡಿನಲ್ಲಿ ಹಾವುಗಳು ಬಹುರೂಪದವುಗಳು ಬಹು ಇರುತ್ತವೆ. ದರ್ಪ-ದಿಂದ ನೆಲದಮೇಲೆ ಹರಿದಾಡುತ್ತವೆ. ಅದರಿಂದ ಕಾಡು ಬಲು ಕಷ್ಟಮಯ.

ನದೀನಿಲಯನಾಃ ಸರ್ಪಾ ನದೀಕುಟಿಲಗಾಮಿನಃ ।
ತಿಷ್ಠಂತ್ಯಾವೃತ್ಯ ಪಂಥಾನಂ ತತೋ ದುಃಖತರಂ ವನಮ್ ॥೨೦॥

ನದಿಯಲ್ಲಿ ವಾಸ ಮಾಡುವ ಹಾವುಗಳು ನದಿಗಳಂತೆ ವಕ್ರವಕ್ರವಾಗಿ ಹರಿದಾಡು-ತ್ತವೆ. ದಾರಿಗಳನ್ನು ಆವರಿಸಿ ನಿಂತಿರುತ್ತವೆ. ಅದರಿಂದ ಕಾಡು ಬಲು ಕಷ್ಟಮಯ.

ಪತಂಗಾ ವೃಶ್ಚಿಕಾಃ ಕೀಟಾ ದಂಶಾಶ್ಚ ಮಶಕೈಃ ಸಹ ।
ಬಾಧಂತೇ ನಿತ್ಯಮಬಲೇ ತಸ್ಮಾದ್ದುಃಖತರಂ ವನಮ್ ॥೨೧॥

ಮಿಡತೆ ಚೇಳು ಕಣಜ ಕಾಡುನೊಣ ಸೊಳ್ಳೆಗಳು ಸದಾ ನಮ್ಮನ್ನು ಬಾಧಿಸುತ್ತವೆ. ಅದರಿಂದ ಕಾಡು ಬಲು ದುಃಖಕರ.

ದ್ರುಮಾಃ ಕಂಟಕಿನಶ್ಚೈವ ಕುಶಕಾಶಾಶ್ಚ ಭಾಮಿನಿ ।
ವನೇ ವ್ಯಾಕುಲಶಾಖಾಗ್ರಾಸ್ತೇನ ದುಃಖತರಂ ವನಮ್ ॥೨೨॥

ಸೀತೆ, ಅಡ್ಡಾದಿಡ್ಡಿಯಾಗಿ ಹರಡಿದ ಕೊಂಬೆಗಳುಳ್ಳ ಮರಗಳೂ ಮುಳ್ಳುಗಳಿಂದ ಕೂಡಿದವು. ದರ್ಭೆಗಳು ಜೊಂಡುಹುಲ್ಲುಗಳು ಕಾಡಿನಲ್ಲಿ ತುಂಬಿರುತ್ತವೆ. ಅದರಿಂದ ಕಾಡು ಬಲು ದುಃಖಕರ.

ಕಾರ್ಯಕ್ಲೇಶಾಶ್ಚ ಬಹವೋ ಭಯಾನಿ ವಿವಿಧಾನಿ ಚ ।
ಅರಣ್ಯವಾಸೇ ವಸತೋ ದುಃಖಮೇವ ತತೋ ವನಮ್ ॥೨೩॥

ಕಾರ್ಯಕ್ಲೇಶಗಳು ಬಹಳ, ನಾನಾ ವಿಧವಾದ ಭಯಗಳೂ ಬಹಳ. ಅದರಿಂದ ಅರಣ್ಯವಾಸ ಮಾಡುವವನಿಗೆ ಬರಿ ದುಃಖಕರವೇ ಕಾಡು.

ಕ್ರೋಧಲೋಭೌ ವಿಮೋಕ್ತವ್ಯೌ ಕರ್ತವ್ಯಾ ತಪಸೇ ಮತಿಃ ।
ನ ಭೇತವ್ಯಂ ಚ ಭೇತವ್ಯೇ ನಿತ್ಯಂ ದುಃಖಮತೋ ವನಮ್ ॥೨೪॥

ಕ್ರೋಧಲೋಭಗಳನ್ನು ಬಿಡಬೇಕಾಗುತ್ತದೆ. ತಪಸಿನಲ್ಲಿ ಆಸಕ್ತಿ ಮಾಡಬೇಕಾಗುತ್ತದೆ. ಭಯಕಾರಣಗಳಿರುತ್ತವೆ. ಆದರೆ ಭಯ ಪಡಬಾರದು. ಅದರಿಂದ ಕಾಡು ನಿತ್ಯ ದುಃಖಕರ.

ತದಲಂ ತೇ ವನಂ ಗತ್ವಾ ಕ್ಷಮಂ ನ ಹಿ ವನಂ ತವ ।
ವಿಮೃಶನ್ನಿಹ ಪಶ್ಯಾಮಿ ಬಹುದೋಷಕರಂ ವನಮ್ ॥೨೫॥

ಅದರಿಂದ ನೀನು ಕಾಡಿಗೆ ಹೋಗುವುದು ಬೇಡ. ಕಾಡಿನಲ್ಲಿ ವಾಸ ಮಾಡುವುದು ನಿನ್ನಿಂದಾಗದು. ಇದನ್ನೆಲ್ಲ ವಿಮರ್ಶಿಸಿ ಮನಗಂಡು ನಿನಗೆ ಹೇಳುತ್ತೇನೆ ಕಾಡು ಬಲು ಕಷ್ಟಕರವಾದುದು.

ವನಂ ತು ನೇತುಂ ನ ಕೃತಾ ಮತಿಸ್ತದಾ
ಬಭೂವ ರಾಮೇಣ ಯದಾ ಮಹಾತ್ಮನಾ ।
ನ ತಸ್ಯ ಸೀತಾ ವಚನಂ ಚಕಾರ ತತ್
ತತೋಽಬ್ರವೀದ್ರಾಮಮಿದಂ ಸುದುಃಖಿತಾ ॥೨೬॥

ಮಹಾತ್ಮನಾದ ಶ್ರೀರಾಮ ಸೀತೆಯನ್ನು ಕಾಡಿಗೆ ಕರೆದುಕೊಂಡು ಹೋಗಲು ಮನಸು ಮಾಡದಿದ್ದಾಗ ಸೀತೆ ಅವನ ಮಾತನ್ನು ಕೇಳಲಿಲ್ಲ. ಬಲು ದುಃಖಿತಳಾಗಿ ರಾಮನಿಗೆ ಹೇಳಿದಳು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಇಪ್ಪತ್ತೆಂಟನೇ ಸರ್ಗ ಮುಗಿಯಿತು.

ಏಕೋನತ್ರಿಂಶಃ ಸರ್ಗಃ

ಸರ್ಗ – 29

ಸೀತೆ ತನ್ನನ್ನು ಕಾಡಿಗೆ ಕರೆದುಕೊಂಡು ಹೋಗಲು ರಾಮನನ್ನು ನಿರ್ಬಂಧಿಸುವುದು.

ಏತತ್ತು ವಚನಂ ಶ್ರುತ್ವಾ ಸೀತಾ ರಾಮಸ್ಯ ದುಃಖಿತಾ ।
ಪ್ರಸಕ್ತಾಶ್ರುಮುಖೀ ಮಂದಮಿದಂ ವಚನಮಬ್ರವೀತ್ ॥೧॥

ಶ್ರೀರಾಮನ ಈ ಮಾತನ್ನು ಕೇಳಿ ದುಃಖಿತಳಾದ ಸೀತೆ ಕಣ್ಣಲ್ಲಿ ನೀರು ತುಂಬಿಕೊಂಡು ಅನುರಾಗಯುಕ್ತಳಾಗಿ ರಾಮನಿಗೆ ಮೆಲ್ಲಮೆಲ್ಲನೆ ನುಡಿದಳು.

ಯೇ ತ್ವಯಾ ಕೀರ್ತಿತಾ ದೋಷಾ ವನೇಽವಸ್ತವ್ಯತಾಂ ಪ್ರತಿ ।
ಗುಣಾನಿತ್ಯೇವ ತಾನ್ವಿದ್ಧಿ ತವ ಸ್ನೇಹಪುರಸ್ಕೃತಾನ್ ॥೨॥

ಕಾಡಿನಲ್ಲಿ ವಾಸಮಾಡಬಾರದೆನ್ನುವ ವಿಷಯದಲ್ಲಿ ನೀನೇನು ಕಷ್ಟಗಳನ್ನು ಹೇಳಿದೆಯೋ ಅವೆಲ್ಲವೂ ನಿನ್ನ ಪ್ರೀತಿ ಒಂದಿದ್ದರೆ ಏನೂ ಕಷ್ಟವೇ ಅಲ್ಲ, ಇಷ್ಟವೇ ಆಗುತ್ತವೆ ಎಂದು ತಿಳಿ.

ಮೃಗಾಃ ಸಿಂಹಾ ಗಜಾಶ್ಚೈವ ಶಾರ್ದೂಲಾಃ ಶರಭಾಸ್ತಥಾ ।
ಚಮರಾಃ ಸೃಮರಾಶ್ಚೈವ ಯೇ ಚಾನ್ಯೇ ವನಚಾರಿಣಃ ॥೩॥

ಅದೃಷ್ಟರೂಪಪೂರ್ವತ್ವಾತ್ ತ್ವತ್ ಸರ್ವೇ ತೇ ತವ ರಾಘವ ।
ರೂಪಂ ದೃಷ್ಟ್ವಾಪಸರ್ಪೇಯುರ್ಭಯೇ ಸರ್ವೇ ಹಿ ಬಿಭ್ಯತಿ ॥೪॥

ಸಿಂಹ ಆನೆ ಹುಲಿ ಶರಭ ಚಮರ ಸೃಮರ ಮತ್ತು ಇನ್ನೂ ಬೇರೆ ಬೇರೆಯಾದ ವನಚರ ಮೃಗಗಳು ನಿನ್ನ ಆಕಾರವನ್ನು ಹಿಂದೆ ಎಂದೂ ನೋಡಿರದವು-ಗಳಾದ್ದರಿಂದ, ರಾಮ, ನಿನ್ನ ಆಕಾರವನ್ನು ಅವು ಕಂಡಾಗ ಭಯದಿಂದ ದೂರ ಸರಿಯುತ್ತವೆ. ಭಯಕಾರಣವು ಮುಂದೆ ಬಂದಾಗ ಎಲ್ಲ ಮಾನವರೂ ಮೃಗ ಪಕ್ಷಿಗಳೂ ಕೂಡ ಭಯಪಡುತ್ತಾರೆ, 'ಭೀಷಾಸ್ಮಾದ್ವಾತಃ ಪವತೇ' ಎಂಬಂತೆ ತಾನೆ?

ತ್ವಯಾ ಚ ಸಹ ಗಂತವ್ಯಂ ಮಯಾ ಗುರುಜನಾಜ್ಞಯಾ ।
ತ್ವದ್ವಿಯೋಗೇನ ಮೇ ರಾಮ ತ್ಯಕ್ತವ್ಯಮಿಹ ಜೀವಿತಮ್ ॥೫॥

ಇಯಂ ಸೀತಾ ಮಮ ಸುತಾ...ಛಾಯೇವಾನುಗತಾ ಸದಾ (ಬಾಲ. ೭೩.೨೬) 'ನನ್ನ ಮಗಳು ಸೀತೆ ನಿನಗೆ ಛಾಯೆಯಂತೆ ಅನುಸರಿಸುವಳೆಂ'ದು ನನ್ನ 'ಗುರು' ತಂದೆ ವಿವಾಹಕಾಲದಲ್ಲಿ ಆಜ್ಞೆ ಮಾಡಿದ್ದರಿಂದ, ರಾಮ, ನಾನು ನಿನ್ನೊಂದಿಗೇ ಕಾಡಿಗೆ ಹೋಗಬೇಕಾಗಿದೆ. ನಿನ್ನ ವಿಯೋಗವಾದರೆ ನಾನು ಜೀವನವನ್ನೇ ಪರಿತ್ಯಾಗ ಮಾಡಬೇಕು.

ನ ಚ ಮಾಂ ತ್ವತ್ಸಮೀಪಸ್ಥಮಪಿ ಶಕ್ನೋತಿ ರಾಘವ ।
ಸುರಾಣಾಮೀಶ್ವರಃ ಶಕ್ರಃ ಪ್ರಧರ್ಷಯಿತುಮೋಜಸಾ ॥೬॥

ರಾಮ, ನಿನ್ನ ಸಮೀಪದಲ್ಲಿದ್ದರೆ ನನ್ನನ್ನು ದೇವರಾಜ ಇಂದ್ರನೂ ಕೂಡ ಪರಾಕ್ರಮದಿಂದ ಬಲಾತ್ಕರಿಸಲು ಶಕ್ತನಾಗಲಾರ.

ಪತಿಹೀನಾ ತು ಯಾ ನಾರೀ ನ ಸಾ ಶಕ್ಷ್ಯತಿ ಜೀವಿತುಮ್ ।
ಕಾಮಮೇವಂವಿಧಂ ರಾಮ ತ್ವಯಾ ಮಮ ವಿದರ್ಶಿತಮ್ ॥೭॥

ಪತಿ ದೂರದಲ್ಲಿದ್ದರೆ ಸತಿ ಒಬ್ಬಂಟಿಗಳಾಗಿ ಭಯಂಕರವಾದ ಕಾಡಿನಲ್ಲಿ ಜೀವಿಸಲು ಶಕ್ತಳಾಗಲಾರಳು. ನಿಜ. ಇದನ್ನು ನೀನು, ಭರತನಿಗೆ ಅನುಕೂಲವಾಗಿ ನಡೆಯ-ಬೇಕೆಂದು ಉಪದೇಶಿಸುವ ಮೂಲಕ 'ವಿ–ದರ್ಶಿತಂ' ವಿಶೇಷವಾಗಿ ತಿಳಿಸಿರುವೆ.

ಇಲ್ಲಿ 'ಪತಿಹೀನ'ಳೆಂದರೆ ವಿಧವೆಯಲ್ಲ. ಶ್ರೀರಾಮ ವಿಧವೆಯಾದವಳಿಗೆ ಜೀವನ ಕ್ರಮವನ್ನು ಬೋಧಿಸಲಿಲ್ಲ. ಕಾರಣಾಂತರದಿಂದ ಪತಿ ದೂರದಲ್ಲಿದ್ದಾಗ ಸತಿಯು ಹೇಗೆ ಜೀವಿಸಬೇಕೆಂದು ಹೇಳಿದ್ದಾನೆ.

'ವಿ–ದರ್ಶಿತಂ' ಎಂದರೆ 'ವಿಪರೀತವಾಗಿ ತಿಳಿಸಿರುವೆ' ಎಂದರ್ಥ ಮಾಡುವ ಪಕ್ಷದಲ್ಲಿ ಸೀತೆ ರಾಮನನ್ನು ಆಕ್ಷೇಪಿಸುತ್ತಿದ್ದಾಳೆ— 'ಪತಿಹೀನಾ' ಎಂದರೆ ವಿಧವೆ. ವಿಧವೆಗೆ 'ಬ್ರಹ್ಮಚರ್ಯಂ ಅನ್ವಾರೋಹಣಂ ವಾ' ಬ್ರಹ್ಮಚರ್ಯ ಅಥವಾ ಸಹಗಮನ ವಿಹಿತವಾಗಿರುವುದರಿಂದ, ಅನ್ಯರಿಗೆ ಅನುಕೂಲಳಾಗಿ ಸುಖ ಜೀವನ ನಡೆಸೆಂದು ಉಪದೇಶ ನೀಡುವುದು ಅಸಂಗತ ಎಂದು. ಆದರೆ ಪ್ರಕೃತ ರಾಮನ ವನವಾಸದ ಸಂದರ್ಭಕ್ಕೆ ಇದು ಹೊಂದಿಕೆ ಯಾಗುವುದಿಲ್ಲ.

ಅಥವಾಪಿ ಮಹಾಪ್ರಾಜ್ಞ ಬ್ರಾಹ್ಮಣಾನಾಂ ಮಯಾ ಶ್ರುತಮ್ ।
ಪುರಾ ಪಿತೃಗೃಹೇ ಸತ್ಯಂ ವಸ್ತವ್ಯಂ ಕಿಲ ಮೇ ವನೇ ॥೮॥

ಅಥವಾ ವನವಾಸ ಕಷ್ಟವೆ ಇಷ್ಟವೆ ಎನ್ನುವ ವಿಚಾರವೇ ಬೇಡ. ಮಹಾಪ್ರಾಜ್ಞ

ರಾಮ, ಹಿಂದೆ ನಾನು ತಂದೆಯ ಮನೆಯಲ್ಲಿ ಸಾಮುದ್ರಿಕಶಾಸ್ತ್ರಜ್ಞರಾದ ಬ್ರಾಹ್ಮಣರ ಮುಖದಿಂದ ಕೇಳಿದ್ದೇನೆ. 'ನಾನು ಪತಿಯೊಂದಿಗೆ ವನವಾಸ ಮಾಡುವ ಸಂದರ್ಭ ಬರುತ್ತದೆ' ಎಂದು.

ಲಕ್ಷಣಜ್ಞೋ ದ್ವಿಜಾತಿಭ್ಯಃ ಶ್ರುತ್ವಾಹಂ ವಚನಂ ಪುರಾ ।
ವನವಾಸಕೃತೋತ್ಸಾಹಾ ನಿತ್ಯಮೇವ ಮಹಾಬಲ ॥೯॥

ಹೀಗೆ ಹಿಂದೆ ಸಾಮುದ್ರಿಕ ಲಕ್ಷಣಜ್ಞರಾದ ಬ್ರಾಹ್ಮಣರಿಂದ ಈ ಮಾತನ್ನು ಕೇಳಿದ ಮೇಲೆ, ಮಹಾಬಲ, ರಾಮ, ನಾನು ನಿನ್ನೊಂದಿಗೆ ವನವಾಸ ಮಾಡಬೇಕೆಂದು ನಿತ್ಯ ಉತ್ಸಾಹಪಡುತ್ತಿದ್ದೇನೆ.

ಆದೇಶೋ ವನವಾಸಸ್ಯ ಪ್ರಾಪ್ತವ್ಯಃ ಸ ಮಯಾ ಕಿಲ ।
ಸಾ ತ್ವಯಾ ಸಹ ತತ್ರಾಹಂ ಯಾಸ್ಯಾಮಿ ಪ್ರಿಯ ನಾನ್ಯಥಾ ॥೧೦॥

ಬ್ರಾಹ್ಮಣರು ಹೇಳಿದ ಆ ವನವಾಸಾದೇಶವನ್ನು ನಾನು ಪಡೆಯುವುದು ಅನಿವಾರ್ಯ ತಾನೆ? ಪ್ರಿಯನೆ ನಿನ್ನೊಂದಿಗೇ ನಾನು ವನಕ್ಕೆ ಹೋಗುವೆನು. ಒಂಟಿಯಾಗಿ ಅಲ್ಲ.

ಕೃತಾದೇಶಾ ಭವಿಷ್ಯಾಮಿ ಗಮಿಷ್ಯಾಮಿ ಸಹ ತ್ವಯಾ ।
ಕಾಲಶ್ಚಾಯಂ ಸಮುತ್ಪನ್ನಃ ಸತ್ಯವಾಗ್ಭವತು ದ್ವಿಜಃ ॥೧೧॥

ಪತಿಗೆ ಬಂದಿರುವ ವನವಾಸಾಜ್ಞೆ ಸತಿಗೂ ಬಂದಿರುವುದರಿಂದ ಆ ಆಜ್ಞೆಯಂತೆ ನಿನ್ನೊಂದಿಗೆ ನಾನೂ ಬರುತ್ತೇನೆ. ಬ್ರಾಹ್ಮಣರು ಹೇಳಿದ ವನವಾಸ ಕಾಲ ಇದೀಗ ಪ್ರಾಪ್ತವಾಗಿದೆ. ನಾನು ವನವಾಸ ಮಾಡುವುದರಿಂದ ಅವರ ಮಾತು ಸತ್ಯವಾಗಲಿ.

ವನವಾಸೇ ಹಿ ಜಾನಾಮಿ ದುಃಖಾನಿ ಬಹುಧಾ ಕಿಲ ।
ಪ್ರಾಪ್ಯಂತೇ ನಿಯತಂ ವೀರ ಪುರುಷೈರಕೃತಾತ್ಮಭಿಃ ॥೧೨॥

ವನವಾಸದಲ್ಲಿ ಕಷ್ಟಗಳು ಬಹಳ ಎಂದು ನನಗೆ ಗೊತ್ತಿದೆ. ಆದರೆ ವೀರನೆ, ಆ ಕಷ್ಟಗಳು ಜಿತೇಂದ್ರಿಯರಲ್ಲದವರಿಗೆ ವಿಷಯಭೋಗ ಲಾಲಸೆಉಳ್ಳವರಿಗೆ ನಿಯಮೇನ ಬರುತ್ತವೆ. ನಾವು ಜಿತೇಂದ್ರಿಯರು ಅದನ್ನು ಚಿಂತಿಸಬೇಕಿಲ್ಲ.

ಕನ್ಯಯಾ ಚ ಪಿತುರ್ಗೇಹೇ ವನವಾಸಃ ಶ್ರುತೋ ಮಯಾ ।
ಭಿಕ್ಷಿಣ್ಯಾಃ ಸಾಧುವೃತ್ತಾಯಾ ಮಮ ಮಾತುರಿಹಾಗ್ರತಃ ॥೧೩॥

ನಾನು ಕನ್ಯೆಯಾಗಿ ತಂದೆಯ ಮನೆಯಲ್ಲಿದ್ದಾಗ ನನ್ನ 'ಇಹ ಮಾತುಃ' ಈ ಜನ್ಮದ ಮಾತೆಯ ಮುಂದೆ, 'ಸಾಧು'ವಾದ, ವಂಚನೆ ಮಾಡದೆ ಯಥಾರ್ಥವನ್ನೇ ನುಡಿವ, 'ವೃತ್ತ' ನಡತೆಯವಳಾದ ಓರ್ವ 'ಭಿಕ್ಷಿಣಿ' ಕೌರವಂಜಿ ನನ್ನ ವನವಾಸದ ಬಗ್ಗೆ ಹೀಗೇ ಹೇಳಿದ್ದನ್ನು ನಾನು ಕೇಳಿದ್ದೇನೆ.

ಪ್ರಸಾದಿತಶ್ಚ ವೈ ಪೂರ್ವಂ ತ್ವಂ ವೈ ಬಹುವಿಧಂ ಪ್ರಭೋ ।
ಗಮನಂ ವನವಾಸಸ್ಯ ಕಾಂಕ್ಷಿತಂ ಹಿ ಸಹ ತ್ವಯಾ ॥೧೪॥

ಪ್ರಭು, ಹಿಂದೆ ನಾನು ನಿನ್ನೊಂದಿಗೆ ವನವಾಸಕ್ಕಾಗಿ ಕಾಡಿಗೆ ಹೋಗಲು ಬಯಸಿ, ಅದಕ್ಕೆ ನಿನ್ನನ್ನು ಬಹುವಿಧವಾಗಿ ಒಲಿಸಿಕೊಂಡಿದ್ದೆ.

ಕೃತಕ್ಷಣಾಹಂ ಭದ್ರಂ ತೇ ಗಮನಂ ಪ್ರತಿ ರಾಘವ ।
ವನವಾಸಸ್ಯ ಶೂರಸ್ಯ ಚರ್ಯಾ ಹಿ ಮಮ ರೋಚತೇ ॥೧೫॥

ಆಗ ಕಾಡಿಗೆ ಹೋಗಲು, ನನಗೆ ನೀನು ಅನುಮತಿಯನ್ನೂ ನೀಡಿದ್ದೆ. ರಾಮ, ನಿನಗೆ ಮಂಗಳವಾಗಲಿ. ಶೂರನಾದ ನೀನು ವನವಾಸ ಮಾಡುವಾಗ ನಿನ್ನ ಸೇವೆ ಮಾಡುವುದು ನನಗೆ ಇಷ್ಟವಾಗಿದೆ.

ಶುದ್ಧಾತ್ಮನ್ ಪ್ರೇಮಭಾವಾದ್ಧಿ ಭವಿಷ್ಯಾಮಿ ವಿಕಲ್ಮಷಾ ।
ಭರ್ತಾರಮನುಗಚ್ಛಂತೀ ಭರ್ತಾ ಹಿ ಮಮ ದೈವತಮ್ ॥೧೬॥

ಶುದ್ಧಾತ್ಮನೆ, ಪ್ರೇಮಭಾವದಿಂದ ಪತಿಯನ್ನು ಅನುಸರಿಸಿ ನಾನು ಕಲ್ಮಷರಹಿತ-ಳೆನಿಸುತ್ತೇನೆ. ಪತಿಯೇ ನನಗೆ ದೇವರು.

ಪ್ರೇತ್ಯಭಾವೇಽಪಿ ಕಲ್ಯಾಣಃ ಸಂಗಮೋ ಮೇ ಸಹ ತ್ವಯಾ ।
ಶ್ರುತಿರ್ಹಿ ಶ್ರೂಯತೇ ಪುಣ್ಯಾ ಬ್ರಾಹ್ಮಣಾನಾಂ ತಪಸ್ವಿನಾಮ್ ॥೧೭॥

ಪರಲೋಕದಲ್ಲಿಯೂ ನನಗೆ ನಿನ್ನ ಜೊತೆಗೆ ಮಂಗಳಕರವಾದ ಸಂಗಮವಿದ್ದೇ ಇದೆ. ಈ ವಿಷಯದಲ್ಲಿ ತಪಸ್ವಿಗಳಾದ ಬ್ರಾಹ್ಮಣರು ಹೇಳುವ ಪುಣ್ಯಕರವಾದ ಶ್ರುತಿ ಇದೆ.

ಇಹ ಲೋಕೇ ಚ ಪಿತೃಭಿರ್ಯಾ ಸ್ತ್ರೀ ಯಸ್ಯ ಮಹಾಮತೇ ।
ಅದ್ಭಿರ್ದತ್ತಾ ಸ್ವಧರ್ಮೇಣ ಪ್ರೇತ್ಯಭಾವೇಽಪಿ ತಸ್ಯ ಸಾ ॥೧೮॥

ಮಹಾಮತಿಯೆ, ಆ ಶ್ರುತಿಯು ಹೀಗೆ ಇದೆ— 'ಈ ಲೋಕದಲ್ಲಿ ತಂದೆ ತಾಯಿಗಳು ಯಾವ ಕನ್ಯೆಯನ್ನು ಯಾರಿಗೆ ಸ್ವಧರ್ಮಾನುಸಾರ ಧಾರೆ ಎರೆದು ಕೊಡುವರೋ ಅವನೆ ಆ ಕನ್ಯೆಗೆ ಪರಲೋಕದಲ್ಲಿಯೂ ಪತಿಯಾಗುತ್ತಾನೆ.'

ಏವಮಸ್ಮಾತ್ ಸ್ವಕಾಂ ನಾರೀಂ ಸುವೃತ್ತಾಂ ಹಿಂ ಪತಿವ್ರತಾಮ್ ।
ನಾಭಿರೋಚಯಸೇ ನೇತುಂ ತ್ವಂ ಮಾಂ ಕೇನೇಹ ಹೇತುನಾ ॥೧೯॥

ಹೀಗೆ ಶ್ರುತಿ ಹೇಳುವಂತೆ ನಮ್ಮಿಬ್ಬರಿಗೆ ನಿತ್ಯಸಂಬಂಧವಿರುವುದರಿಂದ, ಒಳ್ಳೆಯ ನಡತೆಉಳ್ಳ ಪತಿವ್ರತೆಯಾದ ನಿನ್ನ ಪತ್ನಿಯಾದ ನನ್ನನ್ನು ಇಲ್ಲಿಂದ ಅರಣ್ಯಕ್ಕೆ ಕರೆದೊಯ್ಯಲು ನೀನು ಈಗ ಬಯಸುತ್ತಿಲ್ಲವೆಂದರೆ ಅದು ಯಾವ ಕಾರಣದಿಂದ?

ಭಕ್ತಾಂ ಪತಿವ್ರತಾಂ ದೀನಾಂ ಮಾಂ ಸಮಾಂ ಸುಖದುಃಖಯೋಃ ।
ನೇತುಮರ್ಹಸಿ ಕಾಕುತ್ಸ್ಥ ಸಮಾನಸುಖದುಃಖಿನೀಮ್ ॥೨೦॥

ನಾನು ನಿನ್ನ ಭಕ್ತೆ, ಪತಿವ್ರತೆ, ದೀನೆ, ನಿನ್ನ ಸುಖದುಃಖಗಳಲ್ಲಿ ಸಹಭಾಗಿನಿ. ಸುಖದುಃಖಿವೆರಡನ್ನೂ ಸಮಾನವಾಗಿ ಕಾಣುವ ನನ್ನನ್ನು, ರಾಮ, ಅರಣ್ಯಕ್ಕೆ ನೀನು ಕರೆದೊಯ್ಯಬೇಕು.

ಯದಿ ಮಾಂ ದುಃಖಿತಾಮೇವಂ ವನಂ ನೇತುಂ ನ ಚೇಚ್ಛಸಿ ।
ವಿಷಮಗ್ನಿಂ ಜಲಂ ವಾಹಮಾಸ್ಥಾಸ್ಯೇ ಮೃತ್ಯುಕಾರಣಾತ್ ॥೨೧॥

ಹೀಗೆ ದುಃಖಿತೆಯಾದ ನನ್ನನ್ನು ಕಾಡಿಗೆ ಕರೆದೊಯ್ಯಲು ನೀನು ಒಪ್ಪದಿದ್ದರೆ ಮರಣ ಹೊಂದುವ ಸಲುವಾಗಿ ವಿಷವನ್ನು ಅಗ್ನಿಯನ್ನು ಅಥವಾ ಜಲವನ್ನು ಆಶ್ರಯಿಸುತ್ತೇನೆ.

ಏವಂ ಬಹುವಿಧಂ ತಂ ಸಾ ಯಯಾಚೇ ಗಮನಂ ಪ್ರತಿ ।
ನಾನುಮೇನೇ ಮಹಾಬಾಹುಸ್ತಾಂ ನೇತುಂ ವಿಜನಂ ವನಮ್ ॥೨೨॥

ಹೀಗೆ ಬಹುವಿಧವಾಗಿ ಸೀತೆ ರಾಮನನ್ನು ಕಾಡಿಗೆ ಕರೆದೊಯ್ಯಲು ಕೇಳಿ ಕೊಂಡಳು. ಆದರೂ ನಿರ್ಜನವಾದ ಅರಣ್ಯಕ್ಕೆ ಅವಳನ್ನು ಕರೆದೊಯ್ಯಲು ರಾಮ ಒಪ್ಪಲಿಲ್ಲ.

ಏವಮುಕ್ತಾ ತು ಸಾ ಚಿಂತಾಂ ಮೈಥಿಲೀ ಸಮುಪಾಗತಾ ।
ಸ್ನಾಪಯಂತೀವ ಗಾಮುಷ್ಣೈರಶ್ರುಭಿರ್ನಯನಚ್ಯುತೈಃ ॥೨೩॥

ಹೀಗೆ ರಾಮನು ಹೇಳಿದಾಗ ಸೀತೆ ಚಿಂತಾಮಗ್ನಳಾದಳು. ಕಣ್ಣುಗಳಿಂದ ಸುರಿಸುವ ಬಿಸಿಯಾದ ಕಣ್ಣೀರಿನಿಂದ ನೆಲವನ್ನು ತೋಯಿಸುವಂತೆ ಕಂಡು ಬಂದಳು.

ಚಿಂತಯಂತೀಂ ತಥಾ ತಾಂ ತು ನಿವರ್ತಯಿತುಮಾತ್ಮವಾನ್ ।
ಕ್ರೋಧಾವಿಷ್ಟಾಂ ತು ವೈದೇಹೀಂ ಕಾಕುತ್ಸ್ಥೋ ಬಹ್ವಸಾಂತ್ವಯತ್ ॥೨೪॥

ಹೀಗೆ ಚಿಂತಿಸುತ್ತ ಕೋಪಾವಿಷ್ಟಳಾದ ಸೀತೆಯನ್ನು ಜಿತೇಂದ್ರಿಯನಾದ ಶ್ರೀರಾಮನು ಅವಳ ವನವಾಸ ನಿರ್ಧಾರದಿಂದ ಹಿಮ್ಮೆಟ್ಟಿಸಲು ಬಹುವಾಗಿ ಸಂತೈಸಿದ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಇಪ್ಪತ್ತೊಂಭತ್ತನೇ ಸರ್ಗ ಮುಗಿಯಿತು.

❖

ತ್ರಿಂಶಃ ಸರ್ಗಃ

ಸರ್ಗ – 30

ಸೀತೆ ಕಾಡಿಗೆ ಬರುವುದಕ್ಕೆ ಶ್ರೀರಾಮನು ಸಮ್ಮತಿಸುವುದು.

ಸಾಂತ್ಪ್ಯಮಾನಾ ತು ರಾಮೇಣ ಮೈಥಿಲೀ ಜನಕಾತ್ಮಜಾ ।
ವನವಾಸನಿಮಿತ್ತಾರ್ಥಂ ಭರ್ತಾರಮಿದಮಬ್ರವೀತ್ ॥೧॥

ಜನಕಕುಮಾರಿ ಸೀತೆಯನ್ನು ರಾಮನು ಸಂತೈಸುವಾಗ ವನವಾಸ ನಿಮಿತ್ತವಾಗಿ ರಾವಣಾದಿ ವಧವಾಗುವುದನ್ನು ಅಪೇಕ್ಷಿಸಿ ಸೀತೆ ರಾಮನಿಗೆ ಹೇಳಿದಳು.

ಸಾ ತಮುತ್ತಮಸಂವಿಗ್ನಾ ಸೀತಾ ವಿಪುಲವಕ್ಷಸಮ್ ।
ಪ್ರಣಯಾಚ್ಚಾಭಿಮಾನಾಚ್ಚ ಪರಿಚಿಕ್ಷೇಪ ರಾಘವಮ್ ॥೨॥

ಸೀತೆ ತನ್ನನ್ನು ರಾಮ ಬಿಟ್ಟು ಹೋಗುವನೆಂಬ ಭಯದಿಂದ ಬಹಳ ನಡುಗುತ್ತ ವಿಶಾಲವಾದ ಎದೆಯುಳ್ಳ ರಾಮನನ್ನು ತನ್ನ ಸರ್ವಸ್ವವೆಂದು ಅಭಿಮಾನಪಡುತ್ತ ಪ್ರಣಯದಿಂದ ಕುಪಿತಳಾಗಿ ಆಕ್ಷೇಪಿಸಿದಳು.

ಕಿಂ ತ್ವಾಮನ್ಯತ ವೈದೇಹಃ ಪಿತಾ ಮೇ ಮಿಥಿಲಾಧಿಪಃ ।
ರಾಮ ಜಾಮಾತರಂ ಪ್ರಾಪ್ಯ ಸ್ತ್ರಿಯಂ ಪುರುಷವಿಗ್ರಹಮ್ ॥೩॥

ರಾಮ, ನನ್ನ ತಂದೆ ಜನಕರಾಜ ನಿನ್ನನ್ನು ಅಳಿಯನೆಂದು ಸ್ವೀಕರಿಸುವಾಗ ನಿನ್ನನ್ನು ಪುರುಷಶರೀರದ ಸ್ತ್ರೀ ಎಂದು ತಿಳಿದಿದ್ದನೆ? ಇಲ್ಲ, ತಿಳಿದಿದ್ದರೆ ಕನ್ಯಾದಾನ ಮಾಡುತ್ತಿರಲಿಲ್ಲ.

ಅನೃತಂ ಬತ ಲೋಕೋಽಯಮಜ್ಞಾನಾದ್ಯದ್ಧಿ ವಕ್ಷ್ಯತಿ ।
ತೇಜೋ ನಾಸ್ತಿ ಪರಂ ರಾಮೇ ತಪತೀವ ದಿವಾಕರೇ ॥೪॥

ರಾಮನಲ್ಲಿ ಉರಿಯುವ ಸೂರ್ಯನಂತೆ ಉತ್ತಮವಾದ ತೇಜಸ್ಸಿಲ್ಲ. ಲೋಕವು ಅಜ್ಞಾನದಿಂದ 'ಇದೆ' ಎಂದು ಮುಂದೆ ಹೇಳಿದರೆ, ಅಯ್ಯೋ! ಅದು ಸುಳ್ಳೇ ಆಗುತ್ತದೆ!

ಸೂರ್ಯನ ತೇಜಸ್ಸು ಅಲ್ಪ, ಅಸ್ವತಂತ್ರ. ಅಂಥ ತೇಜಸ್ಸು ರಾಮನಲ್ಲಿಲ್ಲ!
'ತಮೇವ ಭಾಂತ ಮನುಭಾತಿ ಸರ್ವಂ' ಎಂದು ಶ್ರುತಿ ಹೇಳುತ್ತದೆ.

ಕಿಂ ಹಿ ಕೃತ್ವಾ ವಿಷಣ್ಣಸ್ತ್ವಂ ಕುತೋ ವಾ ಭಯಮಸ್ತಿ ತೇ ।
ಯತ್ ಪರಿತ್ಯಕ್ತುಕಾಮಸ್ತ್ವಂ ಮಾಮನನ್ಯಪರಾಯಣಾಮ್ ॥೫॥

ಮನದಲ್ಲಿ ಏನು ಮಾಡಿಕೊಂಡು ವಿಷಣ್ಣನಾಗಿರುವೆ? ನಿನಗೆ ಏಕೆ ಭಯ? ಅನನ್ಯ ಶರಣಳಾದ ಪತಿಯನ್ನೇ ಆಶ್ರಯಿಸಿರುವ ನನ್ನನ್ನು ಏಕೆ ಬಿಟ್ಟು ಹೋಗಲು ಬಯಸುವೆ?

ದ್ಯುಮತ್ಸೇನಸುತಂ ವೀರ ಸತ್ಯವಂತಮನುವ್ರತಾಮ್ ।
ಸಾವಿತ್ರೀಮಿವ ಮಾಂ ವಿದ್ಧಿ ತ್ವಮಾತ್ಮವಶವರ್ತಿನೀಮ್ ॥೬॥

ವೀರನೆ, ದ್ಯುಮತ್ಸೇನಸುತನಾದ ಸತ್ಯವಂತನನ್ನು ಹಿಂಬಾಲಿಸಿ ಯಮ ಸದನಕ್ಕೂ ಹೋದ ಸಾವಿತ್ರಿಯಂತೆ ನಾನು ನಿನಗೆ ವಶವರ್ತಿನಿಯಾಗಿರುವೆನೆಂದು ತಿಳಿ.

ನ ತ್ವಹಂ ಮನಸಾಪ್ಯನ್ಯಂ ದ್ರಷ್ಟಾಸ್ಮಿ ತ್ವದೃತೇಽನಘ ।
ತ್ವಯಾ ರಾಘವ ಗಚ್ಛೇಯಂ ಯಥಾನ್ಯಾ ಕುಲಪಾಂಸನೀ ॥೭॥

ಬೇರೆ ಕುಲಕಳಂಕಿನಿಯಂತೆ ನಾನು ಮನಸ್ಸಿನಲ್ಲೂ ಕೂಡ ನಿನ್ನನ್ನು ಬಿಟ್ಟು ಅನ್ಯರನ್ನು ಕಣ್ಣೆತ್ತಿ ನೋಡಲಾರೆ. ದೋಷರಹಿತನಾದ ರಾಮನೆ, ನಾನು ನಿನ್ನೊಡನೆಯೆ ಬರುವೆನು.

ಸ್ವಯಂ ತು ಭಾರ್ಯಾಂ ಕೌಮಾರೀಂ ಚಿರಮಧ್ಯುಷಿತಾಂ ಸತೀಮ್ ।
ಶೈಲೂಷ ಇವ ಮಾಂ ರಾಮ ಪರೇಭ್ಯೋ ದಾತುಮಿಚ್ಛಸಿ ॥೮॥

ನಾನು ಯುವತಿ, ಬಹುಕಾಲ ನಿನ್ನೊಡನೆ ಇದ್ದವಳು. ಪತಿವ್ರತೆ. ಮೋಸಗಾರನಾದ ನರ್ತಕನಂತೆ ನಿನ್ನ ಭಾರ್ಯೆಯಾದ ನನ್ನನ್ನು ನೀನೇ ಸ್ವತಃ ಪರರಿಗೆ ಒಪ್ಪಿಸಲು ಬಯಸುವೆಯ?

ಯಸ್ಯ ಪಥ್ಯಂಚರಾಮಾತ್ಥ ಯಸ್ಯ ಚಾರ್ಥೇಽವರುಧ್ಯಸೇ ।
ತ್ವಂ ತಸ್ಯ ಭವವಶ್ಯಶ್ಚ ವಿಧೇಯಶ್ಚ ಸದಾನಘ ॥೯॥

ನನ್ನನ್ನು ಯಾವ ಭರತನಿಗೆ ಅಧೀನಳಾಗಿ ನಡೆದುಕೊಳ್ಳಲು ಹೇಳುತ್ತಿರುವೆಯೋ 'ಪಥ್ಯಂಚರಾಂ ಆತ್ಥ', ಯಾವ ಭರತನ ಸ್ವಾರ್ಥಕ್ಕಾಗಿ ನೀನು ನಿನ್ನ ಸ್ವಾರ್ಥವನ್ನು ಬಲಿಕೊಡುತ್ತಿರುವೆಯೋ, ಆ ಭರತನಿಗೆ, 'ಭವವಶ್ಯಃ' ಭವನೇ ಶಿವನೇ ನಿನಗೆ ವಶ್ಯನಾಗಿದ್ದಾನೆ, ಅಂಥ ನೀನು, 'ವಿಧೇಯಃ' ಹೇಳಿದಂತೆ ನಡೆಯುವವನು ಅಧೀನ ಎನಿಸುವೆಯ? 'ಸದಾऽನಘ' ಸದಾ ನಿರ್ದೋಷನು ನೀನು ಹೇ ರಾಮ!

'ಭವ ವಶ್ಯಃ' 'ಭವ ವಿಧೇಯಃ' ಎಂದರೆ ಪುನರುಕ್ತಿಯಾಗುವುದು. 'ವಶ್ಯ', 'ವಿಧೇಯ' ಎಂದರೆ ಒಂದೇ ಅರ್ಥ. ಅದರಿಂದ 'ಭವವಶ್ಯಃ' ಎಂದು ಸಮಾಸ-ವಿಟ್ಟುಕೊಳ್ಳಬೇಕು ಎಂದು ಶ್ರೀಸತ್ಯಧರ್ಮರು ಹೇಳುತ್ತಾರೆ.

ಸ ಮಾಮನಾದಾಯ ವನಂ ನ ತ್ವಂ ಪ್ರಸ್ಥಾತುಮರ್ಹಸಿ ।
ತಪೋ ವಾ ಯದಿ ವಾರಣ್ಯಂ ಸ್ವರ್ಗೋ ವಾ ಸ್ಯಾತ್ತ್ವಯಾ ಸಹ ॥೧೦॥

ಅದರಿಂದ ನೀನು ನನ್ನನ್ನು ಬಿಟ್ಟು ಕಾಡಿಗೆ ಹೊರಡುವುದು ಸರಿಯಲ್ಲ. ತಪಸ್ಸಿರಲಿ, ವನವಾಸವಿರಲಿ, ಸ್ವರ್ಗವೇ ಇರಲಿ, ಅದು ಏನಿದ್ದರೂ ನನಗೆ ನಿನ್ನೊಂದಿಗೇ ಇರಲಿ.

ನ ಚ ಮೇ ಭವಿತಾ ತತ್ರ ಕಶ್ಚಿತ್ ಪಥಿ ಪರಿಶ್ರಮಃ ।
ಪೃಷ್ಠತಸ್ತವ ಗಚ್ಛಂತ್ಯಾ ವಿಹಾರಶಯನೇಷ್ವಿವ ॥೧೧॥

ನಿನ್ನನ್ನು ಹಿಂಬಾಲಿಸಿ ಕಾಡುದಾರಿಯಲ್ಲಿ ಸಂಚರಿಸುವಾಗ ನನಗೆ ಏನೂ ಪರಿಶ್ರಮವಾಗುವುದಿಲ್ಲ. ಉದ್ಯಾನವಿಹಾರದಲ್ಲಿ ಶಯನದಲ್ಲಿ ಹೇಗೋ ಹಾಗೇ ಕಾಡುದಾರಿಯಲ್ಲಿಯೂ ನಿನ್ನೊಡನೇ ಇರುವಾಗ ನನಗೆ ಶ್ರಮವಿಲ್ಲ.

ಕುಶಕಾಶಶರೇಷೀಕಾ ಯೇ ಚ ಕಂಟಕಿನೋ ದ್ರುಮಾಃ ।
ತೂಲಾಜಿನಸಮಸ್ಪರ್ಶಾ ಮಾರ್ಗೇ ಮಮ ಸಹ ತ್ವಯಾ ॥೧೨॥

ದರ್ಭೆ ಜೊಂಡುಹುಲ್ಲು ಜಂಬುಹುಲ್ಲು ಮುಳ್ಳುಗಿಡಗಳು ಎಲ್ಲವೂ ನಿನ್ನೊಂದಿಗೆ ಮಾರ್ಗದಲ್ಲಿ ನಡೆಯುವಾಗ ನನಗೆ ಹತ್ತಿಯ ಕೃಷ್ಣಾಜಿನದ ಸ್ಪರ್ಶಕ್ಕೆ ಸಮವಾಗಿರುತ್ತವೆ.

ಮಹಾವಾತಸಮುದ್ಧೂತಂ ಯನ್ಮಾಮವಕರಿಷ್ಯತಿ ।
ರಜೋ ರಮಣ ತನ್ಮನ್ಯೇ ಪರಾರ್ಧ್ಯಮಿವ ಚಂದನಮ್ ॥೧೩॥

ಬಿರುಗಾಳಿಯಿಂದ ಏಳುವ ದೂಳು ನನ್ನ ಮೈಯನ್ನು ಆವರಿಸಿದರೆ, ರಾಮ, ಅದನ್ನು ಅತ್ಯುತ್ತಮವಾದ ಚಂದನದೂಳೆಂದು ತಿಳಿಯುತ್ತೇನೆ.

ಶಾದ್ವಲೇಷು ಯಥಾ ಶಿಶ್ಯೇ ವನಾಂತೇ ವನಗೋಚರ ।
ಕುಥಾಸ್ತರಣತಲ್ಪೇಷು ಕಿಂ ಸ್ಯಾತ್ ಸುಖಕರಂ ತತಃ ॥೧೪॥

ಹೇ ವನವಾಸಿ ರಾಮನೆ, ನಿನ್ನೊಂದಿಗೆ, ಕಾಡಿನ ಮಧ್ಯದಲ್ಲಿರುವ ಹುಲ್ಲುಗಾವಲಿ-ನಲ್ಲಿ ಮಲಗುವ ಸುಖಕ್ಕಿಂತ, ರತ್ನಗಂಬಳಿ ಹಾಸಿದ ತಲ್ಪಗಳಲ್ಲಿ ಒಬ್ಬಳೇ ಮಲಗುವ ಸುಖ ನನಗೆ ಹೆಚ್ಚು ಹೇಗಾದೀತು?

ಪತ್ರಂ ಮೂಲಂ ಫಲಂ ಯತ್ತ್ವಮಲ್ಪಂ ವಾ ಯದಿ ವಾ ಬಹು ।
ದಾಸ್ಯಸಿ ಸ್ವಯಮಾಹೃತ್ಯ ತನ್ಮೇಽಮೃತರಸೋಪಮಮ್ ॥೧೫॥

ಎಲೆ, ಗಡ್ಡೆ, ಹಣ್ಣು ಯಾವುದೇ ಇರಲಿ ನೀನು ಸ್ವತಃ ತಂದುಕೊಟ್ಟಾಗ ಅದು ಅಲ್ಪವೆ ಇರಲಿ, ಬಹು ಇರಲಿ, ನನಗೆ ಅದು ಅಮೃತ ರಸೋಪಮವೆ.

ನ ಮಾತುರ್ನ ಪಿತುಸ್ತತ್ರ ಸ್ಮರಿಷ್ಯಾಮಿ ನ ವೇಶ್ಮನಃ ।
ಆರ್ತವಾನ್ಯುಪಭುಂಜಾನಾ ಪುಷ್ಪಾಣಿ ಚ ಫಲಾನಿ ಚ ॥೧೬॥

ಕಾಡಿನಲ್ಲಿ ನಿನ್ನೊಂದಿಗೆ ಆಯಾ ಋತುಗಳಲ್ಲಿ ಸಿಗುವ ಹೂ ಹಣ್ಣುಗಳನ್ನು ಉಪಭೋಗಿಸುವಾಗ ನಾನು ತಾಯಿಯನ್ನು ನೆನೆಯುವುದಿಲ್ಲ, ತಂದೆಯನ್ನು ನೆನೆಯುವುದಿಲ್ಲ. ಅರಮನೆಯನ್ನೂ ನೆನೆಯುವುದಿಲ್ಲ.

ನ ಚ ತತ್ರ ಗತಃ ಕಿಂಚಿದ್ದ್ರಷ್ಟುಮರ್ಹಸಿ ವಿಪ್ರಿಯಮ್ ।
ಮತ್ಕೃತೇ ನ ಚ ತೇ ಶೋಕೋ ನ ಭವಿಷ್ಯಾಮಿ ದುರ್ಭರಾ ॥೧೭॥

ನೀನು ಅರಣ್ಯದಲ್ಲಿರುವಾಗ ನನ್ನಿಂದ ಅಪ್ರಿಯವೇನನ್ನೂ ನೀನು ಕಾಣಲಾರೆ. ನನ್ನ ಸಲುವಾಗಿ ನಿನಗೆ ಶೋಕವಿರುವುದಿಲ್ಲ. ನನ್ನ ಪೋಷಣೆ ನಿನಗೆ ಕಷ್ಟವೆನಿಸುವುದಿಲ್ಲ.

ಯಸ್ತ್ವಯಾ ಸಹ ಸ ಸ್ವರ್ಗೋ ನಿರಯೋ ಯಸ್ತ್ವಯಾ ವಿನಾ ।
ಇತಿ ಜಾನನ್ ಪರಾಂ ಪ್ರೀತಿಂ ಗಚ್ಛ ರಾಮ ಮಯಾ ಸಹ ॥೧೮॥

ರಾಮ, ನಿನ್ನೊಡನೆ ಇರುವುದೇ ನನಗೆ ಸ್ವರ್ಗ. ನಿನ್ನನ್ನು ಬಿಟ್ಟಿರುವುದೇ ನರಕ. ಇದರಿಂದ, ನಿನ್ನ ಮೇಲೆ ನನಗಿರುವ ಗಾಢವಾದ ಪ್ರೀತಿಯನ್ನು ತಿಳಿದು, ನನ್ನೊಂದಿಗೇ ಅರಣ್ಯಕ್ಕೆ ಹೊರಡು.

ಅಥ ಮಾಮೇವಮವ್ಯಗ್ರಂ ವನಂ ನೈವ ನಯಿಷ್ಯಸಿ ।
ವಿಷಮದ್ಯೈವ ಪಾಸ್ಯಾಮಿ ಮಾವಿಶಂ ದ್ವಿಷತಾಂ ವಶಮ್ ॥೧೯॥

ಹೀಗೆ ನಿನ್ನೊಡನೆ ಕಾಡಿಗೆ ಹೋಗುವ ವಿಷಯದಲ್ಲಿ ಸ್ಥಿರಚಿತ್ತಳಾದ ನನ್ನನ್ನು ನೀನು ಜೊತೆಗೆ ಕರೆದೊಯ್ಯದಿದ್ದರೆ ನಾನು ಈಗಲೇ ವಿಷವನ್ನು ಕುಡಿಯುವೆನು, ದ್ವೇಷಿಗಳ ವಶದಲ್ಲಿರಲಾರೆ.

ಪಶ್ಚಾದಪಿ ಹಿ ದುಃಖೇನ ಮಮ ನೈವಾಸ್ತಿ ಜೀವಿತಮ್ ।
ಉಜ್ಝಿತಾಯಾಸ್ತ್ವಯಾ ನಾಥ ತದೈವ ಮರಣಂ ವರಮ್ ॥೨೦॥

ನಾಥ, ನೀನು ನನ್ನನ್ನು ಬಿಟ್ಟುಹೋದರೆ ಮುಂದೆಯೂ ಕೂಡ ದುಃಖದಿಂದ ನನಗೆ ಬದುಕು ಸರ್ವಥಾ ಇಲ್ಲ. ಆಗಲೇ ವಿಷಕುಡಿದು ಸಾಯುವುದು ನನಗೆ ಲೇಸು.

ಇಮಂ ಹಿ ಸಹಿತುಂ ಶೋಕಂ ಮುಹೂರ್ತಮಪಿ ನೋತ್ಸಹೇ ।
ಕಿಂ ಪುನರ್ದಶ ವರ್ಷಾಣಿ ತ್ರೀಣಿ ಚೈಕಂ ಚ ದುಃಖಿತಾ ॥೨೧॥

ನಿನ್ನ ವಿಯೋಗ ದುಃಖವನ್ನು ಮುಹೂರ್ತಕಾಲವೂ ನಾನು ಸಹಿಸಲಾರೆ. ಇನ್ನು, ಅಬ್ಬಾ! ಹತ್ತುವರ್ಷಗಳು, ತಿರುಗಿ ಮೂರುವರ್ಷಗಳು ಅದರ ಮೇಲೆ ಪುನಃ ಒಂದು ವರ್ಷಕಾಲ ದುಃಖಿತಳಾಗಿ ಬದುಕುವುದು ಆಗದ ಮಾತು ಎಂದು ಬೇರೇನು ಹೇಳಬೇಕು?

ಇತಿ ಸಾ ಶೋಕಸಂತಪ್ತಾ ವಿಲಪ್ಯ ಕರುಣಂ ಬಹು ।
ಚುಕ್ರೋಶ ಪತಿಮಾಯಸ್ತಾ ಭೃಶಮಾಲಿಂಗ್ಯ ಸಸ್ವರಮ್ ॥೨೨॥

ಹೀಗೆ ಸೀತೆ ಶೋಕದಿಂದ ಬೆಂದು ಕರುಣಾಜನಕವಾಗಿ ಬಹುವಾಗಿ ಗೋಳಿಟ್ಟು ಆಯಾಸಗೊಂಡು ಪತಿಯನ್ನು ಗಾಢವಾಗಿ ಆಲಿಂಗಿಸಿ ಜೋರಾಗಿ ಅತ್ತಳು.

ಸಾ ವಿದ್ಧಾ ಬಹುಭಿರ್ವಾಕ್ಯೈರ್ದಿಗ್ಧೈರಿವ ಗಜಾಂಗನಾ ।
ಚಿರಸಂನಿಯತಂ ಬಾಷ್ಪಂ ಮುಮೋಚಾಗ್ನಿಮಿವಾರಣಿಃ ॥೨೩॥

ವಿಷಲಿಪ್ತ ಬಾಣಗಳಿಂದ ಹೊಡೆಸಿಕೊಂಡ ಹೆಣ್ಣಾನೆಯಂತೆ ರಾಮನ ಬಹು-ಮಾತುಗಳಿಂದ ಹೊಡೆಸಿಕೊಂಡ ಸೀತೆ ಅರಣಿಕಾಷ್ಠವು ಅಗ್ನಿಯನ್ನು ಉಗುಳುವಂತೆ ಚಿರಕಾಲದಿಂದ ನಿಯಂತ್ರಿಸಿಟ್ಟುಕೊಂಡಿದ್ದ ಕಣ್ಣೀರನ್ನು ಸುರಿಸಿದಳು.

ತಸ್ಯಾಃ ಸ್ಫಟಿಕಸಂಕಾಶಂ ವಾರಿ ಸಂತಾಪಸಂಭವಮ್ ।
ನೇತ್ರಾಭ್ಯಾಂ ಪರಿಸುಸ್ರಾವ ಪಂಕಜಾಭ್ಯಾಮಿವೋದಕಮ್ ॥೨೪॥

ನೀರಿಂದ ಹೊರ ತೆಗೆದ ಎರಡು ಕಮಲದ ಹೂಗಳಿಂದ ನೀರು ಸುರಿಯುವಂತೆ ಸೀತೆಯ ಎರಡೂ ಕಣ್ಣುಗಳಿಂದ, ಸಂತಾಪದಿಂದ ಉಂಟಾದ, ಸ್ಫಟಿಕದಂತೆ ಸ್ವಚ್ಛವಾದ, ಕಣ್ಣೀರು ಸುರಿಯಿತು.

ತತ್ತಸ್ತಾಮಲಚಂದ್ರಾಭಂ ಮುಖಮಾಯತಲೋಚನಮ್ ।
ಪರ್ಯಶುಷ್ಯತ ಬಾಷ್ಪೇಣ ಜಲೋದ್ಧೃತಮಿವಾಂಬುಜಮ್ ॥೨೫॥

ಹುಣ್ಣಿಮೆಯ ನಿರ್ಮಲಚಂದ್ರನಂತಿದ್ದ, ವಿಶಾಲಕಣ್ಣುಗಳಿಂದ ಕೂಡಿದ ಸೀತೆಯ ಮುಖ, ನೀರಿನಿಂದ ಹೊರತೆಗೆದ ಕಮಲದಂತೆ, ಬಿಸಿ ಕಣ್ಣೀರಿಂದ ಬಾಡಿತು.

ತಾಂ ಪರಿಷ್ವಜ್ಯ ಬಾಹುಭ್ಯಾಂ ವಿಸಂಜ್ಞಾಮಿವ ದುಃಖಿತಾಮ್ ।
ಉವಾಚ ವಚನಂ ರಾಮಃ ಪರಿವಿಶ್ವಾಸಯಂಸ್ತದಾ ॥೨೬॥

ದುಃಖದಿಂದ ಮೂರ್ಛಿತಳಾದಂತಿದ್ದ ಸೀತೆಯನ್ನು ಶ್ರೀರಾಮ ಎರಡು ತೋಳುಗಳಿಂದ ತಬ್ಬಿಕೊಂಡು ಹೊಸಚೈತನ್ಯವನ್ನು ತುಂಬುವಂತೆ ನುಡಿದ.

ನ ದೇವಿ ತವ ದುಃಖೇನ ಸ್ವರ್ಗಮಪ್ಯಭಿರೋಚಯೇ ।
ನ ಹಿ ಮೇಽಸ್ತಿ ಭಯಂ ಕಿಂಚಿತ್ ಸ್ವಯಂಭೋರಿವ ಸರ್ವತಃ ॥೨೭॥

ದೇವಿ, ನೀನು ದುಃಖಪಡುತ್ತಿದ್ದರೆ ನಾನು ಸ್ವರ್ಗವನ್ನೂ ಇಷ್ಟಪಡಲಾರೆ. ಸ್ವಯಂಭು ಬ್ರಹ್ಮದೇವನಿಗೆ 'ಸರ್ವತಃ' ಸರ್ವ ಎಂದರೆ ಶಿವ. ಶಿವಾದಿಗಳಿಂದ ಯಾರಿಂದಲೂ ಹೇಗೆ ಭಯವಿಲ್ಲವೋ ಹಾಗೆ ನನಗೂ ಬ್ರಹ್ಮಾದಿಗಳಿಂದ ಯಾರಿಂದಲೂ ಭಯ ಒಂದಿಷ್ಟೂ ಇರುವುದಿಲ್ಲ.

'ಕುತೋ ವಾ ಭಯಮಸ್ತಿ ತೇ?' (ಶ್ಲೋ.5) ಎಂದು ಸೀತೆ ಕೇಳಿದ್ದಕ್ಕೆ ಶ್ರೀರಾಮ ಹೀಗೆ ಹೇಳುತ್ತಿದ್ದಾನೆ.

ತವ ಸರ್ವಮಭಿಪ್ರಾಯಮವಿಜ್ಞಾಯ ಶುಭಾನನೇ ।
ವಾಸಂ ನ ರೋಚಯೇಽರಣ್ಯೇ ಶಕ್ತಿಮಾನಪಿ ರಕ್ಷಣೇ ॥೨೮॥

ಸೀತೆ, ಅರಣ್ಯದಲ್ಲಿ ನಿನ್ನನ್ನು ರಕ್ಷಿಸಲು ಶಕ್ತಿ ಉಳ್ಳವನೆ ಆದರೂ ನಿನ್ನ ಅಭಿಪ್ರಾಯವನ್ನು ಪೂರ್ತಿ ತಿಳಿಯದೆ ನಿನಗೆ ವನವಾಸವನ್ನು ನಾನು ಒಪ್ಪಲಿಲ್ಲ.

ಯತ್ ಸೃಷ್ಟಾಸಿ ಮಯಾ ಸಾರ್ಧಂ ವನವಾಸಾಯ ಮೈಥಿಲಿ ।
ನ ವಿಹಾತುಂ ಮಯಾ ಶಕ್ಯಾ ಕೀರ್ತಿರಾತ್ಮವತಾ ಯಥಾ ॥೨೯॥

ಸೀತೆ, ನನ್ನೊಂದಿಗೆ ವನವಾಸಕ್ಕೆಂದೇ ನೀನು ಅವತರಿಸಿರುವೆ. ಆದರಿಂದ, ಜಿತೇಂದ್ರಿಯನು ಕೀರ್ತಿಯನ್ನು ಬಿಡದಿರುವಂತೆ ನಾನೂ ನಿನ್ನನ್ನು ಬಿಟ್ಟಿರಲಾರೆ.

ಧರ್ಮಸ್ತು ಗಜನಾಸೋರು ಸದ್ಭಿರಾಚರಿತಃ ಪುರಾ ।
ತಂ ಚಾಹಮನುವರ್ತೇಽದ್ಯ ಯಥಾ ಸೂರ್ಯಂ ಸುವರ್ಚಲಾ ॥೩೦॥

ಪತ್ನಿಯೊಂದಿಗೆ ವನದಲ್ಲಿ ವಾಸಿಸುವ ವಾನಪ್ರಸ್ಥಧರ್ಮವು ಹಿಂದಿನಿಂದಲೂ

ಸಜ್ಜನರಿಂದ ರಾಜರ್ಷಿಗಳಿಂದ ಅನುಷ್ಠಿತವಾಗಿದೆ. ಪತಿಯಾದ ಸೂರ್ಯನನ್ನು ಸುವರ್ಚಲಾದೇವಿ ಅನುಸರಿಸುವಂತೆ, ನಾನು ಈ ಧರ್ಮವನ್ನು ಈಗ ಅನುಸರಿಸುತ್ತಿದ್ದೇನೆ, ನಿನ್ನೊಂದಿಗೇ ವನವಾಸ ಮಾಡುತ್ತಿದ್ದೇನೆ.

ನ ಖಲ್ವಹಂ ನ ಗಚ್ಛೇಯಂ ವನಂ ಜನಕನಂದಿನಿ ।
ವಚನಂ ತನ್ನಯತಿ ಮಾಂ ಪಿತುಃ ಸತ್ಯೋಪಬೃಂಹಿತಮ್ ॥೩೧॥

ಸೀತೆ, ನಾನು ಕಾಡಿಗೆ ಹೋಗದಿರುವುದಿಲ್ಲ. ಏಕೆಂದರೆ ಸತ್ಯಪಾಶದಿಂದ ಯುಕ್ತವಾದ ಪಿತೃವಚನವು ನನ್ನನ್ನು ಕಾಡಿಗೆ ಎಳೆದುಕೊಂಡು ಹೋಗುತ್ತಿದೆ.

ಏಷ ಧರ್ಮಸ್ತು ಸುಶ್ರೋಣಿ ಪಿತುರ್ಮಾತುಶ್ಚ ವಶ್ಯತಾ ।
ಅತಶ್ಚ ತಂ ವ್ಯತಿಕ್ರಮ್ಯ ನಾಹಂ ಜೀವಿತುಮುತ್ಸಹೇ ॥೩೨॥

ತಂದೆತಾಯಿಗಳಿಗೆ ವಿಧೇಯನಾಗಿರುವುದು ಪುತ್ರನಿಗೆ ಧರ್ಮ. ಅದರಿಂದ ಆ ಧರ್ಮವನ್ನು ಅತಿಕ್ರಮಿಸಿ ನಾನು ಜೀವಿಸಲಾರೆ.

ಸ್ವಾಧೀನಂ ಸಮತಿಕ್ರಮ್ಯ ಮಾತರಂ ಪಿತರಂ ಗುರುಮ್ ।
ಅಸ್ವಾಧೀನಂ ಕಥಂ ದೈವಂ ಪ್ರಕಾರೈರಭಿರಾಧ್ಯತೇ ॥೩೩॥

ಪ್ರತ್ಯಕ್ಷವಾಗಿ ಲಭ್ಯರಾದ ತಾಯಿ ತಂದೆ ಗುರುಗಳನ್ನು ಬಿಟ್ಟು ಪ್ರತ್ಯಕ್ಷ ಲಭ್ಯವಾಗದ ದೈವವನ್ನು ನಾನಾ ಪ್ರಕಾರಗಳಿಂದ ಹೇಗೆ ತಾನೆ ಆರಾಧಿಸಲು ಸಾಧ್ಯ?

ಯತ್ರ್ತಯಂ ತತ್ರ್ತಯೋ ಲೋಕಾಃ ಪವಿತ್ರಂ ತತ್ಸಮಂ ಭುವಿ ।
ನಾನ್ಯದಸ್ತಿ ಶುಭಾಪಾಂಗೇ ತೇನೇದಮಭಿರಾಧ್ಯತೇ ॥೩೪॥

ತಂದೆ–ತಾಯಿ–ಗುರು ಈ ಮೂರು ಮೂಲೋಕರೂಪವಾಗಿದೆ. ಅದಕ್ಕೆ ಸಮ–ಪವಿತ್ರವಾದುದು ಭೂಮಿಯಲ್ಲಿ ಬೇರೆ ಇಲ್ಲ. ಅದರಿಂದ ಇದೇ ನನ್ನಿಂದ ಆರಾಧ್ಯವಾಗಿದೆ.

ಇದಕ್ಕೆ ಪ್ರದಕ್ಷಿಣೆ ಮಾಡಿದರೆ ಸಾಕು ಮೂಲೋಕಕ್ಕೆ ಪ್ರದಕ್ಷಿಣೆ ಮಾಡಿದ ಫಲ ಬರುತ್ತದೆ.

ನ ಸತ್ಯಂ ದಾನಮಾನೌ ವಾ ನ ಯಜ್ಞಶ್ಚಾಪ್ತದಕ್ಷಿಣಾಃ ।
ತಥಾ ಬಲಕರಾಃ ಸೀತೇ ಯಥಾ ಸೇವಾ ಪಿತುರ್ಹಿತಾ ॥೩೫॥

ಸತ್ಯ ನುಡಿಯುವುದು ದಾನ ನೀಡುವುದು ಸನ್ಮಾನ ಮಾಡುವುದು ಅಥವಾ ಬಹುದಕ್ಷಿಣೆಗಳಿಂದ ಕೂಡಿದ ಯಜ್ಞಗಳು ಇವು ಯಾವುವೂ ತಂದೆಗೆ ಮಾಡುವ ಹಿತಕರವಾದ ಸೇವೆಯಂತೆ ಪುಷ್ಟಿಕರವಾಗುವುದಿಲ್ಲ.

ಸ್ವರ್ಗೋ ಧನಂ ವಾ ಧಾನ್ಯಂ ವಾ ವಿದ್ಯಾಃ ಪುತ್ರಾಃ ಸುಖಾನಿ ಚ ।
ಗುರುವೃತ್ತ್ಯನುರೋಧೇನ ನ ಕಿಂಚಿದಪಿ ದುರ್ಲಭಮ್ ॥೩೬॥

ಸ್ವರ್ಗ ಧನ ಧಾನ್ಯ ವಿದ್ಯೆ ಪುತ್ರರು ಸುಖಗಳು ಇವುಗಳಲ್ಲಿ ಯಾವುದೂ ಕೂಡ ಮಾತಾಪಿತೃಗುರುಗಳ ಚಿತ್ತವೃತ್ತಿಯನ್ನು ಅನುಸರಣ ಮಾಡುವುದರಿಂದ ಲಭಿಸದೇ ಇರುವುದಿಲ್ಲ.

ದೇವಗಂಧರ್ವಗೋಲೋಕಾನ್ ಬ್ರಹ್ಮಲೋಕಾಂಸ್ತಥಾ ನರಾಃ ।
ಪ್ರಾಪ್ನುವಂತಿ ಮಹಾತ್ಮಾನೋ ಮಾತಾಪಿತೃಪರಾಯಣಾಃ ॥೩೭॥

ಮಾತಾಪಿತರ ಸೇವೆಯಲ್ಲಿಯೆ ನಿರತರಾದ ಮಹಾತ್ಮರು ದೇವ ಗಂಧರ್ವ ಚಂದ್ರಲೋಕಗಳನ್ನೂ ಬ್ರಹ್ಮಲೋಕಗಳನ್ನೂ ಹೊಂದುವರು.

ಸ ಮಾಂ ಪಿತಾ ಯಥಾ ಶಾಸ್ತಿ ಸತ್ಯಧರ್ಮಪಥೇ ಸ್ಥಿತಃ ।
ತಥಾ ವರ್ತಿತುಮಿಚ್ಛಾಮಿ ಸ ಹಿ ಧರ್ಮಃ ಸನಾತನಃ ॥೩೮॥

ಸತ್ಯಧರ್ಮಪಥದಲ್ಲಿ ಸ್ಥಿತನಾದ ತಂದೆ ನನ್ನನ್ನು ಹೇಗೆ ಆಜ್ಞಾಪಿಸುವನೋ ಹಾಗೇ ನಡೆಯಲು ನಾನು ಇಚ್ಛಿಸುತ್ತೇನೆ. ಇದು ಸನಾತನ ಧರ್ಮ.

ಮಮ ಸನ್ನಾಽಮತಿಃ ಸೀತೇ ತ್ವಾಂ ನೇತುಂ ದಂಡಕಾವನಮ್ ।
ವಸಿಷ್ಯಾಮೀತಿ ಸಾ ತ್ವಂ ಮಾಮನುಯಾತುಂ ಸುನಿಶ್ಚಿತಾ ॥೩೯॥

ವನವಾಸ ಮಾಡುವೆನೆಂದು ನನ್ನನ್ನು ಹಿಂಬಾಲಿಸಿ ಬರಲು ನೀನು ದೃಢ ನಿಶ್ಚಯ ಮಾಡಿದ್ದರಿಂದ ನಿನ್ನನ್ನು ದಂಡಕಾರಣ್ಯಕ್ಕೆ ಕರೆದೊಯ್ಯಲು ನಿರಾಕರಿಸುವ ನನ್ನ ಬುದ್ಧಿ ಇದೀಗ ಶಿಥಿಲವಾಗಿದೆ.

ಸಾ ಹಿ ಸೃಷ್ಟಾನವದ್ಯಾಂಗೀ ವನಾಯ ಮದಿರೇಕ್ಷಣೇ ।
ಅನುಗಚ್ಛಸ್ವ ಮಾಂ ಭೀರು ಸಹಧರ್ಮಚರೀ ಭವ ॥೪೦॥

ಸೀತೆ, ನೀನು ವನವಾಸ ಮಾಡುವ ಸಲುವಾಗಿಯೇ ಅವತರಿಸಿದವಳಾದ್ದರಿಂದ

ನನ್ನನ್ನು ಅನುಸರಿಸಿ ಅರಣ್ಯಕ್ಕೆ ನೀನು ಬರಬಹುದು. ನನಗೆ ಸಹಧರ್ಮಿಣಿ-ಯಾಗಬಹುದು.

ಸರ್ವಥಾ ಸದೃಶಂ ಸೀತೇ ಮಮ ಸ್ವಸ್ಯ ಕುಲಸ್ಯ ಚ ।
ವ್ಯವಸಾಯಮನುಕ್ರಾಂತಾ ಸೀತೇ ತ್ವಮತಿಶೋಭನಮ್ ॥೪೧॥

ನನ್ನ ಕುಲಕ್ಕೂ ನಿನ್ನ ಕುಲಕ್ಕೂ ಅನುರೂಪವಾಗಿ ನೀನು ಏನು ವನವಾಸದ ನಿರ್ಧಾರವನ್ನು ಕೈಗೊಂಡಿರುವೆಯೋ ಅದು, ಸೀತೆ, ಪರಮಮಂಗಳಕರವಾಗಿದೆ.

ಆರಭಸ್ವ ಗುರುಶ್ರೋಣಿ ವನವಾಸಕ್ಷಮಾಃ ಕ್ರಿಯಾಃ ।
ನೇದಾನೀಂ ತ್ವದೃತೇ ಸೀತೇ ಸ್ವರ್ಗೋಽಪಿ ಮಮ ರೋಚತೇ ॥೪೨॥

ವನವಾಸಕ್ಕೆ ಯೋಗ್ಯವಾದ ಪೂರ್ವಾಂಗ ದಾನಾದಿಕರ್ಮಗಳನ್ನು ಆರಂಭಿಸು. ಸೀತೆ, ಈಗ ಈ ನಿನ್ನ ದೃಢನಿಶ್ಚಯವನ್ನು ಕಂಡಮೇಲೆ ನೀನಿಲ್ಲದೆ ಸ್ವರ್ಗವೂ ನನಗೆ ಇಷ್ಟವಾಗಲಾರದು.

ಬ್ರಾಹ್ಮಣೇಭ್ಯಶ್ಚ ರತ್ನಾನಿ ಭಿಕ್ಷುಕೇಭ್ಯಶ್ಚ ಭೋಜನಮ್ ।
ದೇಹಿ ಚಾಶಂಸಮಾನೇಭ್ಯಃ ಸಂತ್ವರಸ್ವ ಚ ಮಾ ಚಿರಮ್ ॥೪೩॥

ಶುಭಾಶಂಸನ ಮಾಡುವ ಬ್ರಾಹ್ಮಣರಿಗೆ ರತ್ನ ಮುಂತಾದ ಉತ್ತಮ ವಸ್ತುಗಳನ್ನೂ ಭಿಕ್ಷುಕರಿಗೆ ಭೋಜನವನ್ನೂ ನೀಡು. ತ್ವರೆಮಾಡು. ವಿಲಂಬ ಮಾಡಬೇಡ.

ಭೂಷಣಾನಿ ಮಹಾರ್ಹಾಣಿ ವರವಸ್ತ್ರಾಣಿ ಯಾನಿ ಚ ।
ರಮಣೀಯಾಶ್ಚ ಯೇ ಕೇಚಿತ್ ಕ್ರೀಡಾರ್ಥಾಶ್ಚಾಪ್ಯುಪಸ್ಕರಾಃ ॥೪೪॥

ಶಯನೀಯಾನಿ ಯಾನಾನಿ ಮಮ ಚಾನ್ಯಾನಿ ಯಾನಿ ಚ ।
ದೇಹಿ ಸ್ವಭೃತ್ಯವರ್ಗಸ್ಯ ಬ್ರಾಹ್ಮಣಾನಾಮನಂತರಮ್ ॥೪೫॥

ಬಹಳ ಬೆಲೆಬಾಳುವ ಆಭರಣ ಉತ್ತಮ ವಸ್ತ್ರಗಳು ವಿಹಾರಕ್ಕೆ ಉಪಯುಕ್ತ ವಾದ ಸುಂದರ ಸಲಕರಣೆಗಳು ಹಾಸಿಗೆ ಮಂಚ ವಾಹನಗಳು ಮತ್ತು ಇನ್ನಿತರ ಉತ್ತಮವಸ್ತುಗಳು ಇವನ್ನೆಲ್ಲ ಬ್ರಾಹ್ಮಣರಿಗೆ ಕೊಟ್ಟ ಬಳಿಕ ಸೇವಕ ವರ್ಗದವರಿಗೂ ದಾನ ಮಾಡು.

ಅನುಕೂಲಂ ತು ಸಾ ಭರ್ತುರ್ಜ್ಞಾತ್ವಾ ಗಮನಮಾತ್ಮನಃ ।
ಕ್ಷಿಪ್ರಂ ಪ್ರಮುದಿತಾ ದೇವೀ ದಾತುಮೇವೋಪಚಕ್ರಮೇ ॥೪೬॥

ತಾನು ವನವಾಸಕ್ಕೆ ಹೋಗುವುದು ಪತಿಗೆ ಒಪ್ಪಿಗೆಯೆ ಎಂದು ತಿಳಿದು ಬಲು ಸಂತೋಷಗೊಂಡ ದೇವಿ ಬೇಗನೆ ದಾನ ಮಾಡಲು ಉಪಕ್ರಮಿಸಿದಳು.

ತತಃ ಪ್ರಹೃಷ್ಟಾ ಪರಿಪೂರ್ಣಮಾನಸಾ
ಯಶಸ್ವಿನೀ ಭರ್ತುರವೇಕ್ಷ್ಯ ಭಾಷಿತಮ್ ।
ಧನಾನಿ ರತ್ನಾನಿ ಚ ದಾತುಮಂಗನಾ
ಪ್ರಚಕ್ರಮೇ ಧರ್ಮಭೃತಾಂ ಮನಸ್ವಿನೀ ॥೪೭॥

ಪತಿ ಶ್ರೀರಾಮನಾಡಿದ ಮಾತನ್ನು ತಿಳಿದು ತನ್ನಿಚ್ಛೆ ಚೆನ್ನಾಗಿ ಪೂರೈಸಿತೆಂದು ಬಹಳ ಹರ್ಷದಿಂದ ಯಶಸ್ವಿನಿ ಮನಸ್ವಿನಿ ಅಂಗನೆಯಾದ ಸೀತೆ ಧರ್ಮಾತ್ಮರಿಗೆ ಧನಗಳನ್ನೂ ಉತ್ತಮ ವಸ್ತುಗಳನ್ನೂ ದಾನಮಾಡಲು ತೊಡಗಿದಳು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಮೂವತ್ತನೇ ಸರ್ಗ ಮುಗಿಯಿತು.

❖

ಏಕತ್ರಿಂಶಃ ಸರ್ಗಃ

ಸರ್ಗ – 31

ಶ್ರೀರಾಮನು ಲಕ್ಷ್ಮಣನಿಗೆ ವನಕ್ಕೆ ಬರಲು ಅನುಜ್ಞೆ ನೀಡುವುದು.

ಏವಂ ಶ್ರುತ್ವಾ ತು ಸಂವಾದಂ ಲಕ್ಷ್ಮಣಃ ಪೂರ್ವಮಾಗತಃ ।
ಬಾಷ್ಪಪರ್ಯಾಕುಲಮುಖಃ ಶೋಕಂ ಸೋಢುಮಶಕ್ನುವನ್ ॥೧॥

ಹೀಗೆ ಸೀತಾ–ರಾಮರ ಸಂವಾದವನ್ನು ರಾಮನೊಂದಿಗೆ ಅಲ್ಲಿಗೆ ಮೊದಲೇ ಬಂದಿದ್ದ ಲಕ್ಷ್ಮಣ ಕೇಳಿ, ಸೀತಾರಾಮರಿಬ್ಬರೂ ಕಾಡಿಗೆ ಹೋಗುತ್ತಿರುವುದನ್ನು ಕಂಡು ಶೋಕವನ್ನು ತಡೆಯಲಾರದೆ ಕಣ್ಣೀರಿಂದ ಮುಖವೆಲ್ಲ ತೋಯಿಸಿಕೊಂಡ.

ಸ ಭ್ರಾತುಶ್ಚರಣೌ ಗಾಢಂ ನಿಪೀಡ್ಯ ರಘುನಂದನಃ ।
ಸೀತಾಮುವಾಚಾತಿಯಶಾ ರಾಘವಂ ಚ ಮಹಾವ್ರತಮ್ ॥೨॥

ಶ್ರೀರಾಮನ ಎರಡೂ ಪಾದಗಳನ್ನು ಭದ್ರವಾಗಿ ಹಿಡಿದು ಒತ್ತಿ ವನವಾಸ ಮಹಾವ್ರತವನ್ನು ಹಿಡಿದ ಶ್ರೀರಾಮನಿಗೂ ಸೀತೆಗೂ ನುಡಿದ, ಮಹಾಯಶಸ್ವಿ-ಯಾದ ಲಕ್ಷ್ಮಣ.

ಯದಿ ಗಂತುಂ ಕೃತಾ ಬುದ್ಧಿರ್ವನಂ ಮೃಗಗಜಾಯುತಮ್ ।
ಅಹಂ ತ್ವಾನುಗಮಿಷ್ಯಾಮಿ ವನಮಗ್ರೇ ಧನುರ್ಧರಃ ॥೩॥

ಮೃಗಗಳಿಂದಲೂ ಆನೆಗಳಿಂದಲೂ ತುಂಬಿರುವ ಕಾಡಿಗೆ ಹೋಗಲು ನೀನು ನಿರ್ಧಾರ ಮಾಡಿದ್ದೇ ಆದರೆ, ನಾನೂ ನಿನ್ನನ್ನು ಹಿಂಬಾಲಿಸಿ ಕಾಡಿಗೆ ಬರುತ್ತೇನೆ, ಧನುರ್ಧರನಾಗಿ ಮುಂದಿನಿಂದ ನಡೆಯುತ್ತೇನೆ.

ಮಯಾ ಸಮೇತೋಽರಣ್ಯಾನಿ ಬಹೂನಿ ವಿಚರಿಷ್ಯಸಿ ।
ಪಕ್ಷಿಭಿರ್ಮೃಗಯೂಥೈಶ್ಚ ಸಂಘುಷ್ಟಾನಿ ಸಮಂತತಃ ॥೪॥

ಎಲ್ಲೆಡೆ ಪಕ್ಷಿ ಹಾಗೂ ಮೃಗಸಮೂಹಗಳ ಶಬ್ದಗಳಿಂದ ತುಂಬಿದ ಬಹು ಅರಣ್ಯಗಳಲ್ಲಿ ನನ್ನೊಂದಿಗೇ ನೀನು ಸಂಚರಿಸು.

ನ ದೇವಲೋಕಾಕ್ರಮಣಂ ನಾಮರತ್ವಮಹಂ ವೃಣೇ ।
ಐಶ್ವರ್ಯಂ ವಾಪಿ ಲೋಕಾನಾಂ ಕಾಮಯೇ ನ ತ್ವಯಾ ವಿನಾ ॥೫॥

ನೀನಿಲ್ಲದೆ ದೇವಲೋಕವನ್ನು ಆಕ್ರಮಿಸುವುದಾಗಲಿ ದೇವತ್ವವಾಗಲಿ ಲೋಕಾಧಿಪತ್ಯಗಳಾಗಲಿ ನನಗೆ ಇಷ್ಟವಾಗುವುದಿಲ್ಲ.

ಏವಂ ಬ್ರುವಾಣಃ ಸೌಮಿತ್ರಿರ್ವನವಾಸಾಯ ನಿಶ್ಚಿತಃ ।
ರಾಮೇಣ ಬಹುಭಿಃ ಸಾಂತ್ವೈರ್ನಿಷಿದ್ಧಃ ಪುನರಬ್ರವೀತ್ ॥೬॥

ವನವಾಸಕ್ಕೆ ತಾನೂ ಹೋಗುವೆನೆಂದು ನಿರ್ಧಾರ ಮಾಡಿದ್ದ ಲಕ್ಷ್ಮಣ ಹೀಗೆ ಹೇಳಿದಾಗ ಶ್ರೀರಾಮ ಅವನನ್ನು ಸಂತೈಸುತ್ತ ಬಹುವಾಗಿ 'ನಿನಗೆ ವನವಾಸ ಬೇಡ'ವೆಂದು ಬೋಧಿಸಿದ. ಆದರೂ ಲಕ್ಷ್ಮಣ ಪುನಃ ನುಡಿದ.

ಅನುಜ್ಞಾತಶ್ಚ ಭವತಾ ಪೂರ್ವಮೇವ ಯದಸ್ಮ್ಯಹಮ್ ।
ಕಿಮಿದಾನೀಂ ಪುನರಿದಂ ಕ್ರಿಯತೇ ಮೇ ನಿವಾರಣಮ್ ॥೭॥

ಹಿಂದೆಯೆ ನೀನು ನನಗೆ ವನವಾಸಕ್ಕೆ ಅನುಜ್ಞೆ ನೀಡಿರುವೆ. ಈಗ ಏಕೆ ನನ್ನನ್ನು ತಡೆಯುತ್ತಿವುವೆ?

ಹಿಂದೆ,

ಭ್ರಾತೃಪುತ್ರ ಸಮೌ ಚಾಪಿ ದ್ರಷ್ಟವ್ಯೌ ಚ ವಿಶೇಷತಃ ।
ತ್ವಯಾ ಭರತಶತ್ರುಘ್ನೌ ಪ್ರಾಣೈಃ ಪ್ರಿಯತರೌ ಮಮ ॥ (ಅಯೋ.26.33)

'ಭರತ ಶತ್ರುಘ್ನರು ನನಗೆ ಪ್ರಾಣಕ್ಕಿಂತ ಹೆಚ್ಚು ಪ್ರಿಯರು. ಅವರನ್ನು ಸೋದರರಂತೆ ಪುತ್ರರಂತೆ ವಿಶೇಷವಾಗಿ ನೋಡಿಕೊಳ್ಳು' ಎಂದು ಶ್ರೀರಾಮ ಸೀತೆಗೆ ಹೇಳುವಾಗ. ಸೀತೆ ಅಯೋಧ್ಯೆಯಲ್ಲಿಯೇ ಇದ್ದು, ಭರತ ಶತ್ರುಘ್ನರನ್ನು ಪ್ರೀತಿ-ಯಿಂದ ನೋಡಿಕೊಳ್ಳಬೇಕು, ಎಂದಿದ್ದ. 'ಲಕ್ಷ್ಮಣ ಶತ್ರುಘ್ನರನ್ನು ನೋಡಿಕೊಳ್ಳ-ಬೇಕೆ'ನ್ನಲಿಲ್ಲ. ಲಕ್ಷ್ಮಣ ನನ್ನೊಂದಿಗೆ ಕಾಡಿಗೇ ಬರುತ್ತಾನೆ ಎಂದು ಶ್ರೀರಾಮನ ಅಭಿಪ್ರಾಯ ಈ ಶ್ಲೋಕದಲ್ಲಿ ಕಾಣುತ್ತದೆ. ಲಕ್ಷ್ಮಣ ಆಗಲೆ ತನಗೆ ವನವಾಸಕ್ಕೆ ಶ್ರೀರಾಮನ ಅನುಜ್ಞೆ ದೊರಕಿದೆ ಎಂದು ನಿಶ್ಚಯ ಮಾಡಿಕೊಂಡಿದ್ದ.

ಯದರ್ಥಂ ಪ್ರತಿಷೇಧೋ ಮೇ ಕ್ರಿಯತೇ ಗಂತುಮಿಚ್ಛತಃ ।
ಏತದಿಚ್ಛಾಮಿ ವಿಜ್ಞಾತುಂ ಸಂಶಯೋಽಯಂ ಮಮಾನಘ ॥೮॥

ದೋಷರಹಿತನಾದ ರಾಮನೆ, ಕಾಡಿಗೆ ಬರಲು ಆಸೆಪಡುತ್ತಿರುವ ನನ್ನನ್ನು ಏಕೆ ತಡೆಯುತ್ತಿರುವೆ? ಇದನ್ನು ನಾನೀಗ ತಿಳಿಯಲು ಬಯಸುತ್ತೇನೆ. ನನಗೆ ಸಂಶಯ ಉಂಟಾಗಿದೆ. ನಾನೇನಾದರೂ ಅಪರಾಧ ಮಾಡಿರುವೆನೆ? ಎಂದು.

ತತೋಽಬ್ರವೀನ್ಮಹಾತೇಜಾ ರಾಮೋ ಲಕ್ಷ್ಮಣಮಗ್ರತಃ ।
ಸ್ಥಿತಂ ಪ್ರಾಗ್ಗಾಮಿನಂ ವೀರಂ ಯಾಚಮಾನಂ ಕೃತಾಂಜಲಿಮ್ ॥೯॥

ತನ್ನ ಮುಂದೆ ಕೈಮುಗಿದು ತನಗಿಂತ ಮೊದಲೆ ಕಾಡಿಗೆ ಹೊರಟು ಅನುಜ್ಞೆ-ಯನ್ನು ಬೇಡುತ್ತ ನಿಂತ ಲಕ್ಷ್ಮಣನಿಗೆ ಮಹಾತೇಜನಾದ ಶ್ರೀರಾಮ ನುಡಿದ.

ಸ್ನಿಗ್ಧೋ ಧರ್ಮರತೋ ವೀರ ಸತತಂ ಸತ್ಪಥೇ ಸ್ಥಿತಃ ।
ಪ್ರಿಯಃ ಪ್ರಾಣಸಮೋ ವಶ್ಯೋ ಭ್ರಾತಾ ಚಾಪಿ ಸಖಾ ಚ ಮೇ ॥೧೦॥

ವೀರ ಲಕ್ಷ್ಮಣ, ನೀನು ನನ್ನಲ್ಲಿ ಭಕ್ತಿ ಇರಿಸಿದವನು, ಧರ್ಮನಿರತ. ಸದಾ ಸನ್ಮಾರ್ಗದಲ್ಲಿರುವವನು, ಪ್ರಾಣಸಮಾನನಾದ ಪ್ರಿಯ ಭ್ರಾತ, ನನಗೆ ವಿಧೇಯ-ನಾದ ಸ್ನೇಹಿತನೂ ಆಗಿರುವೆ.

ಮಯಾದ್ಯ ಸಹ ಸೌಮಿತ್ರೇ ತ್ವಯಿ ಗಚ್ಛತಿ ತದ್ವನಮ್ ।
ಕೋ ಭರಿಷ್ಯತಿ ಕೌಸಲ್ಯಾಂ ಸುಮಿತ್ರಾಂ ವಾ ಯಶಸ್ವಿನೀಮ್ ॥೧೧॥

ಲಕ್ಷ್ಮಣ! ನೀನೀಗ ನನ್ನೊಂದಿಗೆ ಅರಣ್ಯಕ್ಕೆ ಹೋದರೆ ಯಶಸ್ವಿನಿಯಾದ ಕೌಸಲ್ಯೆ-ಯನ್ನಾಗಲಿ ಸುಮಿತ್ರೆಯನ್ನಾಗಲಿ ಇಲ್ಲಿ ಯಾರು ನೋಡಿಕೊಳ್ಳುತ್ತಾರೆ?

ಅಭಿವರ್ಷತಿ ಕಾಮೈರ್ಯಃ ಪರ್ಜನ್ಯಃ ಪೃಥಿವೀಮಿವ ।
ಸ ಕಾಮಪಾಶಪರ್ಯಸ್ತೋ ಮಹಾತೇಜಾ ಮಹೀಪತಿಃ ॥೧೨॥

ಮೋಡವು ಲೋಕಕ್ಕೆ ಅಭೀಷ್ಟವಾದ ಮಳೆಯನ್ನು ಸುರಿಸುವಂತೆ ಪ್ರಜೆಗಳಿಗೆ ಎಲ್ಲ ಅಭೀಷ್ಟಗಳನ್ನು ನೀಡುವ ಮಹಾತೇಜನಾದ ರಾಜಾ ದಶರಥನು ಕೈಕೇಯಿಯ ಮೇಲಿನ ಕಾಮಪಾಶದಿಂದ ಬಂಧಿತನಾಗಿದ್ದಾನೆ.

ಇಲ್ಲಿ 'ಕಾಮ' ಎಂದರೆ ವಸ್ತುತಃ ಅಭೀಷ್ಟವಾದ ವರದಾನ. ಅದು, ಪಾಶ-ದಂತಿದೆ, ಹಿಂದೆ ಹೇಳಿದಂತೆ 'ಸತ್ಯೋಪ ಬೃಂಹಿತ' (ಶ್ಲೋ.30.31) ಸತ್ಯಪಾಶ ಯುಕ್ತವಾಗಿದ್ದು ಅನುಲ್ಲಂಘನೀಯವಾಗಿದೆ ಎಂದರ್ಥ. ಹೊರತು 'ಇನ್ನೂ ದಶರಥ ಕೈಕೇಯಿಯ ಮೋಹಪಾಶದಿಂದ ಬದ್ಧನಾಗಿದ್ದಾನೆ' ಎಂದರೆ ಅದು ವಸ್ತುಸ್ಥಿತಿಗೆ ಬಲುದೂರ. ಅವನು 'ಯಸ್ತೇ ಮಂತ್ರಕೃತಃ (14.14) ಎಂದು ಹಿಂದೆ ಹೇಳಿದಂತೆ, ಮುಂದೆಯೂ 'ಕೈಕೇಯಿ ಮಾ ಮಮಾಂಗಾನಿ' (42.6) ಎಂದು ಹೇಳುವಂತೆ, ಅವಳನ್ನು ಪರಿತ್ಯಾಗ ಮಾಡಿ ಅವಳ ಸ್ಪರ್ಶವನ್ನೂ ಬೇಡವೆನ್ನುತ್ತಾನೆ. ಕೇವಲ ಲಕ್ಷ್ಮಣನ ಮನ ಒಲಿಸುವುದಕ್ಕಾಗಿ ಶ್ರೀರಾಮ ಮೋಹಕವಾಗಿ ಮಾತನಾಡು-

ತ್ತಿದ್ದಾನೆ. ಹೀಗೇ ಭರತನನ್ನೂ ಮುಂದಿನ ಶ್ಲೋಕದಲ್ಲಿ 'ನ ಸ್ಮರಿಷ್ಯತಿ ಕೌಸಲ್ಯಾಂ' ಎಂದು ಅವಹೇಳನ ಮಾಡುತ್ತಾನೆ.

ಸಾ ಹಿ ರಾಜ್ಯಮಿದಂ ಪ್ರಾಪ್ಯ ನೃಪಸ್ಯಾಶ್ವಪತೇಃ ಸುತಾ ।
ದುಃಖಿತಾನಾಂ ಸಪತ್ನೀನಾಂ ನ ಕರಿಷ್ಯತಿ ಶೋಭನಮ್ ॥೧೩॥

ರಾಜಾ ಅಶ್ವಪತಿಯ ಮಗಳಾದ ಕೈಕೇಯಿ ರಾಜ್ಯವನ್ನು ಪಡೆದ ಬಳಿಕ ದುಃಖಿತ-ರಾದ ಸವತಿಯರಿಗೆ ಒಳ್ಳೆಯದನ್ನು ಮಾಡುವುದಿಲ್ಲ.

ಇದೂ ಮೋಹಕವಾದ ಮಾತು. ಕೈಕೇಯಿಯಲ್ಲಿ ಅಸುರಾವೇಶ ಸ್ಥಿರ-ವಾಗಿರುವುದಿಲ್ಲ ಎಂದು ಶ್ರೀರಾಮ ತಿಳಿಯದವನಲ್ಲ.

'ಅತ್ಯಲ್ಪಸ್ತ್ವಸುರಾವೇಶೋ ದೇವಾನಾಂ ಚ ಕ್ವಚಿದ್ ಭವೇತ್'

ಎಂದು ಅನುವ್ಯಾಖ್ಯಾನದಲ್ಲಿ ಹೇಳಿದಂತೆ, ಅಲ್ಪಕಾಲದಲ್ಲಿ ಅಲ್ಪ ಅಸುರಾವೇಶ ದೇವತೆಗಳಲ್ಲಿರುತ್ತದೆ. ಭರತ ಅಭಿಷೇಕವನ್ನು ತಿರಸ್ಕರಿಸಿ ದೊಡನೇ ಕೈಕೇಯಿ ಯಲ್ಲಿ ಅಸುರಾವೇಶ ತಾನಾಗಿಯೇ ಇಳಿದುಹೋಗಿತ್ತು.

ನ ಸ್ಮರಿಷ್ಯತಿ ಕೌಸಲ್ಯಾಂ ಸುಮಿತ್ರಾಂ ಚ ಸುದುಃಖಿತಾಮ್ ।
ಭರತೋ ರಾಜ್ಯಮಾಸಾದ್ಯ ಕೈಕೇಯ್ಯಾಂ ಪರ್ಯವಸ್ಥಿತಃ ॥೧೪॥

ಭರತನು ರಾಜ್ಯವನ್ನು ಪಡೆದು ಕೈಕೇಯಿಯ ನಿಯಂತ್ರಣದಲ್ಲಿದ್ದು ಬಲು ದುಃಖಿತರಾದ ಕೌಸಲ್ಯೆ ಸುಮಿತ್ರೆಯರ ಸ್ಮರಣವನ್ನೂ ಮಾಡದಿರುತ್ತಾನೆ.

ತಾಮಾರ್ಯಾಂ ಸ್ವಯಮೇವೇಹ ರಾಜಾನುಗ್ರಹಣೇನ ವಾ ।
ಸೌಮಿತ್ರೇ ಭರ ಕೌಸಲ್ಯಾಮುಕ್ತಮರ್ಥಮಿಮಂ ಚರ ॥೧೫॥

ಆರ್ಯೆ ಕೌಸಲ್ಯೆಯನ್ನು, ಲಕ್ಷ್ಮಣ, ನೀನು ನಿನ್ನ ಸ್ವಸಾಮರ್ಥ್ಯದಿಂದಾಗಲಿ ರಾಜನ ಅನುಗ್ರಹದಿಂದಾಗಲಿ ಪೋಷಣ ಮಾಡುತ್ತ ಅಯೋಧ್ಯೆಯಲ್ಲೇ ಇರು. ನಾನು ಹೇಳಿದ ಈ ಕಾರ್ಯವನ್ನು ಮಾಡು.

ಏವಂ ಮಯಿ ಚ ತೇ ಭಕ್ತಿರ್ಭವಿಷ್ಯತಿ ಸುದರ್ಶಿತಾ ।
ಧರ್ಮಜ್ಞ ಗುರುಪೂಜಾಯಾಂ ಧರ್ಮಶ್ಚಾಪ್ಯತುಲೋ ಮಹಾನ್॥೧೬॥

ಹೀಗೆ ಮಾಡಿದರೆ, ನಿನಗೆ ನನ್ನಲ್ಲಿರುವ ಭಕ್ತಿ ಚೆನ್ನಾಗಿ ಬೆಳಕಿಗೆ ಬರುತ್ತದೆ. ಧರ್ಮಜ್ಞನೆ, ಗುರುಹಿರಿಯರ ಸೇವೆ ಮಾಡುವುದರಿಂದ ಅನುಪಮವಾದ ಮಹಾಪುಣ್ಯ ಲಭಿಸುವುದು.

ಏವಂ ಕುರುಷ್ವ ಸೌಮಿತ್ರೇ ಮತ್ಕೃತೇ ರಘುನಂದನ ।
ಅಸ್ಮಾಭಿರ್ವಿಪ್ರಹೀಣಾಯಾ ಮಾತುರ್ನೋ ನ ಭವೇತ್ ಸುಖಮ್ ।೧೭।

ಲಕ್ಷ್ಮಣ, ನನಗಾಗಿ ನೀನು ಈ ಕೆಲಸವನ್ನು ಮಾಡಬೇಕು. ಇಲ್ಲದಿದ್ದರೆ ನಾವು ಬಳಿಯಲ್ಲಿಲ್ಲದಿರುವಾಗ ನಮ್ಮ ತಾಯಿಗೆ ಸುಖ ಉಂಟಾಗದು.

ಏವಮುಕ್ತಸ್ತು ರಾಮೇಣ ಲಕ್ಷ್ಮಣಃ ಶ್ಲಕ್ಷ್ಣಯಾ ಗಿರಾ ।
ಪ್ರತ್ಯುವಾಚ ತದಾ ರಾಮಂ ವಾಕ್ಯಜ್ಞೋ ವಾಕ್ಯಕೋವಿದಮ್ ॥೧೮॥

ಶ್ರೀರಾಮ ಹೀಗೆ ಹೇಳಿದಾಗ ಮಾತಿನ ಕಲೆಯಲ್ಲಿ ಕೋವಿದನಾದ ರಾಮನಿಗೆ ಮಾತಿನ ಕಲಾವಿದನಾದ ಲಕ್ಷ್ಮಣನು ಮೃದುವಾಗಿ ಪ್ರತಿಯಾಗಿ ನುಡಿದ.

ತವೈವ ತೇಜಸಾ ವೀರ ಭರತಃ ಪೂಜಯಿಷ್ಯತಿ ।
ಕೌಸಲ್ಯಾಂ ಚ ಸುಮಿತ್ರಾಂ ಚ ಪ್ರಯತೋ ನಾತ್ರ ಸಂಶಯಃ ॥೧೯॥

ವೀರನೆ, ನಿನ್ನ ತೇಜಃಪ್ರಭಾವದಿಂದಲೇ ಭರತನು ಪ್ರಯತ್ನಪೂರ್ವಕವಾಗಿ ಕೌಸಲ್ಯೆಯನ್ನೂ ಸುಮಿತ್ರೆಯನ್ನೂ ಆದರಿಸುತ್ತಾನೆ. ಇದರಲ್ಲಿ ಸಂಶಯವಿಲ್ಲ.

ಯದಿ ದುಃಸ್ಥೋ ನ ರಕ್ಷೇತ ಭರತೋ ರಾಜ್ಯಮುತ್ತಮಮ್ ।
ಪ್ರಾಪ್ಯ ದುರ್ಮನಸಾ ವೀರ ಗರ್ವೇಣ ಚ ವಿಶೇಷತಃ ॥೨೦॥

ತಮಹಂ ದುರ್ಮತಿಂ ಕ್ರೂರಂ ವಧಿಷ್ಯಾಮಿ ನ ಸಂಶಯಃ ।
ತತ್ಪಕ್ಷ್ಯಾನಪಿ ತಾನ್ ಸರ್ವಾಂಸ್ತ್ರೈಲೋಕ್ಯಮಪಿ ಕಿಂ ತು ಸಾ ॥೨೧॥

ಕೌಸಲ್ಯಾ ಬಿಭೃಯಾದಾರ್ಯಾ ಸಹಸ್ರಮಪಿ ಮದ್ವಿಧಾನ್ ।
ಯಸ್ಯಾಃ ಸಹಸ್ರಂ ಗ್ರಾಮಾಣಾಂ ಸಂಪ್ರಾಪ್ತಮುಪಜೀವಿನಾಮ್ ॥೨೨॥

ಒಂದುವೇಳೆ ಭರತನು ಉತ್ತಮವಾದ ರಾಜ್ಯವನ್ನು ಪಡೆದು ದುರ್ಬುದ್ಧಿಯಿಂದ, ವಿಶೇಷವಾಗಿ ಅಹಂಕಾರದಿಂದ ತಾಯಂದಿರನ್ನು ರಕ್ಷಿಸದಿದ್ದರೆ ದುರ್ಮತಿಯೂ ಕ್ರೂರನೂ ಆದ ಆತನನ್ನು ನಾನು ಕೊಲ್ಲುವೆನು. ಇದರಲ್ಲಿ ಸಂಶಯವಿಲ್ಲ. ಅವನ ಕಡೆಯವರನ್ನೂ ಕೂಡ ಎಲ್ಲರನ್ನೂ, ಮೂಲೋಕವನ್ನೂ ಸಂಹರಿಸುವೆನು. ಆದರೆ, ಆರ್ಯೆ ಕೌಸಲ್ಯೆ ನನ್ನಂಥ ಸಾವಿರ ಮಂದಿಯನ್ನಾದರು ಭರಿಸಬಲ್ಲಳು. ಅವಳ ಆಶ್ರಯದಲ್ಲಿರುವವರಿಗೆ ಕೂಡ ಸಾವಿರಾರು ಗ್ರಾಮಗಳು ಲಭಿಸಿವೆ.

ತದಾತ್ಮಭರಣೇ ಚೈವ ಮಮ ಮಾತುಸ್ತಥೈವ ಚ ।
ಪರ್ಯಾಪ್ತಾ ಮದ್ವಿಧಾನಾಂ ಚ ಭರಣಾಯ ಮನಸ್ವಿನೀ ॥೨೩॥

ಅದರಿಂದ ಮನಸ್ವಿನಿಯಾದ ಕೌಸಲ್ಯೆ ತನ್ನನ್ನು ಮಾತ್ರವಲ್ಲದೆ ನನ್ನ ಮಾತೆಯನ್ನೂ ನನ್ನಂಥ ಬೇರೆಯವರನ್ನೂ ಭರಿಸಲು ಸಮರ್ಥಳು.

ಕುರುಷ್ವ ಮಾಮನುಚರಂ ವೈಧರ್ಮ್ಯಂ ನೇಹ ವಿದ್ಯತೇ ।
ಕೃತಾರ್ಥೋಽಹಂ ಭವಿಷ್ಯಾಮಿ ತವ ಚಾರ್ಥಃ ಪ್ರಕಲ್ಪತೇ ॥೨೪॥

ನನ್ನನ್ನು ನಿನ್ನ ಸೇವಕನನ್ನಾಗಿ ಮಾಡಿಕೊಳ್ಳು. ಇದರಲ್ಲಿ ಧರ್ಮವಿರೋಧ ವೇನಿಲ್ಲ. ನಾನು ನಿನ್ನ ಸೇವೆ ಮಾಡುತ್ತಿದ್ದರೆ ಫಲಮೂಲ ಮುಂತಾದವನ್ನು ತರುವ ನಿನ್ನ ಕಾರ್ಯವೂ ಸಿದ್ಧವಾಗುತ್ತದೆ. ನಾನೂ ಕೃತಾರ್ಥನಾಗುತ್ತೇನೆ.

ಧರ್ಮವಿರೋಧವೆಂದರೆ, ತನ್ನ ಮಾತೆಯ ಸಂರಕ್ಷಣೆ ಮಾಡಬೇಕಾಗಿರುವ ಲಕ್ಷ್ಮಣನನ್ನು ರಾಮ ತನ್ನ ರಕ್ಷಣೆಗೆ ಇರಿಸಿಕೊಳ್ಳುವುದು ಅಧರ್ಮವಾಗುತ್ತದೆ, ಆದರೆ ವಸ್ತುತಃ ಮಾತೆಯ ಸಂರಕ್ಷಣೆ ಸ್ವತಃ ಮಾತೆಯಿಂದಲೇ ಮಾಡಿಕೊಳ್ಳಲು ಸಾಧ್ಯವಿರುವುದರಿಂದ ಅಧರ್ಮ ಪ್ರಸಕ್ತಿ ಇಲ್ಲ.

ಧನುರಾದಾಯ ಸಶರಂ ಖನಿತ್ರಪಿಟಕಾಧರಃ ।
ಅಗ್ರತಸ್ತೇ ಗಮಿಷ್ಯಾಮಿ ಪಂಥಾನಮನುದರ್ಶಯನ್ ॥೨೫॥

ನಾನು ಧನುರ್ಬಾಣಗಳನ್ನೂ ಗುದ್ದಲಿ ಮಂಕರಿಗಳನ್ನೂ ಧರಿಸಿ ನಿನಗೆ ದಾರಿಯನ್ನು ತೋರಿಸುತ್ತಾ ಮುಂದೆ ನಡೆಯುತ್ತೇನೆ.

ಆಹರಿಷ್ಯಾಮಿ ತೇ ನಿತ್ಯಂ ಮೂಲಾನಿ ಚ ಫಲಾನಿ ಚ ।
ವನ್ಯಾನಿ ಯಾನಿ ಚಾನ್ಯಾನಿ ಸ್ವಾಹಾರಾಣಿ ತಪಸ್ವಿನಾಮ್ ॥೨೬॥

ಮತ್ತು ಫಲ ಮೂಲಗಳನ್ನೂ ಕಾಡಿನಲ್ಲಿ ಲಭ್ಯವಿರುವ ತಪಸ್ವಿಗಳಿಗೆ ಯೋಗ್ಯವಾದ ಬೇರೆ ಆಹಾರ ಪದಾರ್ಥಗಳನ್ನೂ ನಾನು ನಿತ್ಯ ನಿನಗೆ ತರುತ್ತೇನೆ.

ಭವಾಂಸ್ತು ಸಹ ವೈದೇಹ್ಯಾ ಗಿರಿಸಾನುಷು ರಂಸ್ಯತೇ ।
ಅಹಂ ಸರ್ವಂ ಕರಿಷ್ಯಾಮಿ ಜಾಗ್ರತಃ ಸ್ವಪತಶ್ಚ ತೇ ॥೨೭॥

ನೀನು ಸೀತೆಯೊಂದಿಗೆ ಪರ್ವತದ ತಪ್ಪಲು ಪ್ರದೇಶಗಳಲ್ಲಿ ವಿಹರಿಸು. ನೀನು ಎಚ್ಚರದಲ್ಲಿರುವಾಗಲೂ ಮಲಗಿರುವಾಗಲೂ ನಾನೇ ನಿನ್ನ ಎಲ್ಲ ಕಾರ್ಯಗಳನ್ನು ಮಾಡುತ್ತೇನೆ.

ರಾಮಸ್ತ್ವನೇನ ವಾಕ್ಯೇನ ಸುಪ್ರೀತಃ ಪ್ರತ್ಯುವಾಚ ತಮ್ ।
ವ್ರಜಾಪೃಚ್ಛಸ್ವ ಸೌಮಿತ್ರೇ ಸರ್ವಮೇವ ಸುಹೃಜ್ಜನಮ್ ॥೨೮॥

ಶ್ರೀರಾಮ ಲಕ್ಷ್ಮಣನ ಈ ಮಾತಿನಿಂದ ಸುಪ್ರೀತನಾಗಿ ಅವನಿಗೆ ಪ್ರತಿಯಾಗಿ ನುಡಿದ, 'ಲಕ್ಷ್ಮಣ, ಹೋಗು ಎಲ್ಲ ಬಂಧುಗಳಲ್ಲಿಯೂ ವನವಾಸಕ್ಕೆ ಅನುಮತಿ-ಯನ್ನು ಕೇಳು.

ಯೇ ಚ ರಾಜ್ಞೋ ದದೌ ದಿವ್ಯೇ ಮಹಾತ್ಮಾ ವರುಣಃ ಸ್ವಯಮ್ ।
ಜನಕಸ್ಯ ಮಹಾಯಜ್ಞೇ ಧನುಷೀ ರೌದ್ರದರ್ಶನೇ ॥೨೯॥

ಅಭೇದ್ಯಕವಚೇ ದಿವ್ಯೇ ತೂಣೀ ಚಾಕ್ಷಯಸಾಯಕೌ ।
ಆದಿತ್ಯವಿಮಲೌ ಚೋಭೌ ಖಡ್ಗೌ ಹೇಮಪರಿಷ್ಕೃತೌ ॥೩೦॥

ಸತ್ಕೃತ್ಯ ನಿಹಿತಂ ಸರ್ವಮೇತದಾಚಾರ್ಯಸದ್ಮನಿ ।
ಸರ್ವಮಾಯುಧಮಾದಾಯ ಕ್ಷಿಪ್ರಮಾವ್ರಜ ಲಕ್ಷ್ಮಣ ॥೩೧॥

ಜನಕರಾಜನ ಮಹಾಯಜ್ಞದಲ್ಲಿ ಸ್ವತಃ ಮಹಾತ್ಮ ವರುಣನು, ನೋಡಲು ಭಯಂಕರವಾದ ಯಾವ ಎರಡು ಧನುಸ್ಸುಗಳನ್ನು ರಾಜನಿಗೆ ಇತ್ತನೋ ಆ ಧನುಸ್ಸು ಗಳನ್ನೂ, ಅಭೇದ್ಯವಾದ ಎರಡು ಕವಚಗಳನ್ನೂ, ಅಕ್ಷಯ ಬಾಣಗಳುಳ್ಳ ದಿವ್ಯವಾದ ಎರಡು ಬತ್ತಳಿಕೆಗಳನ್ನೂ, ಸೂರ್ಯನಂತೆ ನಿರ್ಮಲವಾಗಿ ಹೊಳೆಯುವ ಬಂಗಾರದ ಹಿಡಿಯುಳ್ಳ ಎರಡು ಖಡ್ಗಗಳನ್ನೂ, ವಿಧ್ಯುಕ್ತವಾಗಿ ಪೂಜಿಸಲಿ ಎಂದು ಆಚಾರ್ಯ-ರಾದ ವಸಿಷ್ಠರ ಮನೆಯಲ್ಲಿ, ಅವರನ್ನು ಪೂಜಿಸಿ ಅವರ ಬಳಿ ಇಟ್ಟಿರುವೆನು. ಆ ಆಯುಧಗಳೆಲ್ಲವನ್ನೂ ನೀನು ಎತ್ತಿಕೊಂಡು ಬೇಗನೆ ಬಂದುಬಿಡು, ಲಕ್ಷ್ಮಣ.

'ಯೇ ರಾಜ್ಞೇ ವರುಣ ಪ್ರತ್ತೇ'(ಸಂ.ರಾ.ಅಯೋ.6.14) ಎಂದು ಹೇಳಿದಂತೆ, ಇಲ್ಲಿ 'ಜನಕ' ಎಂದರೆ ತಂದೆಯಾದ ದಶರಥನೆಂದಿಟ್ಟು ಕೊಳ್ಳುವುದು ಯುಕ್ತ.

ಸ ಸುಹೃಜ್ಜನಮಾಮಂತ್ರ್ಯ ವನವಾಸಾಯ ನಿಶ್ಚಿತಃ ।
ಇಕ್ಷ್ವಾಕುಗುರುಮಾಗಮ್ಯ ಜಗ್ರಾಹಾಯುಧಮುತ್ತಮಮ್ ॥೩೨॥

ಲಕ್ಷ್ಮಣನು ವನವಾಸಕ್ಕೆ ಬಂಧುಮಿತ್ರರ ಅನುಮತಿ ಕೇಳಿ ಪಡೆದು ವನವಾಸಕ್ಕೆ ನಿಶ್ಚಯಮಾಡಿ ಇಕ್ಷ್ವಾಕು ವಂಶದವರಿಗೆಲ್ಲರಿಗೂ ರಾಜಗುರುವಾದ ವಸಿಷ್ಠರ ಬಳಿಗೆ ಬಂದು ಉತ್ತಮವಾದ ಆಯುಧವನ್ನು ಸ್ವೀಕರಿಸಿದ.

ತದ್ದಿವ್ಯಂ ರಘುಶಾರ್ದೂಲಃ ಸತ್ಕೃತಂ ಮಾಲ್ಯಭೂಷಿತಮ್ ।
ರಾಮಾಯ ದರ್ಶಯಾಮಾಸ ಸೌಮಿತ್ರಿಃ ಸರ್ವಮಾಯುಧಮ್ ॥೩೩॥

ಮಾಲೆಗಳಿಂದ ಅಲಂಕೃತವಾದ ಪೂಜಿತವಾದ ದಿವ್ಯವಾದ ಆ ಎಲ್ಲ ಆಯುಧ-ವನ್ನೂ ಲಕ್ಷ್ಮಣನು ರಾಮನಿಗೆ ತಂದು ತೋರಿಸಿದ.

ತಮುವಾಚಾತ್ಮವಾನ್ ರಾಮಃ ಪ್ರೀತ್ಯಾ ಲಕ್ಷ್ಮಣಮಾಗತಮ್ ।
ಕಾಲೇ ತ್ವಮಾಗತಃ ಸೌಮ್ಯ ಕಾಂಕ್ಷಿತೇ ಮಮ ಲಕ್ಷ್ಮಣ ॥೩೪॥

ಲಕ್ಷ್ಮಣ ಬಂದಾಗ ಜಿತೇಂದ್ರಿಯನಾದ ಶ್ರೀರಾಮ ಪ್ರೀತಿಯಿಂದ ನುಡಿದ. ಲಕ್ಷ್ಮಣ, ನಾನು ಬಯಸಿದ ಕಾಲಕ್ಕೆ ಸರಿಯಾಗಿಯೇ ನೀನು ಬಂದಿರುವೆ.

ಅಹಂ ಪ್ರದಾತುಮಿಚ್ಛಾಮಿ ಯದಿದಂ ಮಾಮಕಂ ಧನಮ್ ।
ಬ್ರಾಹ್ಮಣೇಭ್ಯಸ್ತಪಸ್ವಿಭ್ಯಸ್ತ್ವಯಾ ಸಹ ಪರಂತಪ ॥೩೫॥

ನನ್ನ ಸಕಲ ಐಶ್ವರ್ಯಗಳನ್ನೂ ನಿನ್ನೊಡನೆ ನಾನು ಬ್ರಾಹ್ಮಣರಿಗೆ ತಪಸ್ವಿಗಳಿಗೆ ಕೊಡಲು ಇಚ್ಛಿಸುತ್ತೇನೆ.

ವಸಂತೀಹ ದೃಢಂ ಭಕ್ತ್ಯಾ ಗುರುಷು ದ್ವಿಜಸತ್ತಮಾಃ ।
ತೇಷಾಮಪಿ ಚ ಮೇ ಭೂಯಃ ಸರ್ವೇಷಾಂ ಚೋಪಜೀವಿನಾಮ್ ॥೩೬॥

ಗುರುಗಳಲ್ಲಿ ದೃಢ ಭಕ್ತಿಯಿಂದಿರುವ ಶ್ರೇಷ್ಠ ಬ್ರಾಹ್ಮಣರಿಗೂ ಮತ್ತು ನನ್ನನ್ನಾ-ಶ್ರಯಿಸಿರುವ ಎಲ್ಲರಿಗೂ ದಾನಮಾಡಲು ಇಚ್ಛಿಸುತ್ತೇನೆ.

ವಸಿಷ್ಠಪುತ್ರಂ ತು ಸುಯಜ್ಞಮಾರ್ಯಂ
ತ್ವಮಾನಯಾಶು ಪ್ರವರಂ ದ್ವಿಜಾನಾಮ್ ।
ಅಭಿಪ್ರಯಾಸ್ಯಾಮಿ ವನಂ ಸಮಸ್ತಾನ್
ಅಭ್ಯರ್ಚ್ಯ ಶಿಷ್ಟಾನಪರಾನ್ ದ್ವಿಜಾತೀನ್ ॥೩೭॥

ವಸಿಷ್ಠಪುತ್ರನಾದ, ದ್ವಿಜರಲ್ಲಿ ಶ್ರೇಷ್ಠನಾದ ಆರ್ಯ ಸುಯಜ್ಞನನ್ನು ಕರೆದುಕೊಂಡು ಬಾ. ಉಳಿದ ಬೇರೆ ದ್ವಿಜರನ್ನೂ ಕರೆದು ತಾ. ಎಲ್ಲರನ್ನೂ ಸತ್ಕರಿಸಿ ಕಾಡಿಗೆ ಪ್ರಯಾಣ ಮಾಡುತ್ತೇನೆ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಮೂವತ್ತೊಂದನೇ ಸರ್ಗ ಮುಗಿಯಿತು.

ದ್ವಾತ್ರಿಂಶಃ ಸರ್ಗಃ

ಸರ್ಗ – 32

ವನವಾಸಕ್ಕೆ ಹೊರಡುವ ಮೊದಲು ಶ್ರೀರಾಮನು ಸರ್ವಸ್ವವನ್ನೂ ದಾನ ಮಾಡುವುದು.

ತತಃ ಶಾಸನಮಾಜ್ಞಾಯ ಭ್ರಾತುಃ ಶುಭತರಂ ಪ್ರಿಯಮ್ ।
ಗತ್ವಾ ಸ ಪ್ರವಿವೇಶಾಶು ಸುಯಜ್ಞಸ್ಯ ನಿವೇಶನಮ್ ॥೧॥

ಬಳಿಕ ಲಕ್ಷ್ಮಣನು ಶ್ರೀರಾಮನಾಜ್ಞೆಯನ್ನು ತಿಳಿದು ಬಲು ಶುಭಕರವಾದ ಪ್ರಿಯವಾದ ಸುಯಜ್ಞನ ಮನೆಗೆ ಬೇಗನೆ ಹೋಗಿ ಪ್ರವೇಶಿಸಿದನು.

ತಂ ವಿಪ್ರಮಗ್ನ್ಯಗಾರಸ್ಥಂ ವಂದಿತ್ವಾ ಲಕ್ಷ್ಮಣೋಽಬ್ರವೀತ್ ।
ಸಖೇಽಭ್ಯಾಗಚ್ಛ ಪಶ್ಯ ತ್ವಂ ವೇಶ್ಮ ದುಷ್ಕರಕಾರಿಣಃ ॥೨॥

ಅಗ್ನಿಶಾಲೆಯಲ್ಲಿದ್ದ ಸುಯಜ್ಞನನ್ನು ವಂದಿಸಿ ಲಕ್ಷ್ಮಣನು ನುಡಿದ— 'ಮಿತ್ರನೆ, ಬಾ, ದುಷ್ಕರವಾದ ವನವಾಸವನ್ನು ಮಾಡಲಿರುವ ಶ್ರೀರಾಮನ ಮಂದಿರವನ್ನು ನೋಡು.'

ತತಃ ಸಂಧ್ಯಾಮುಪಾಸ್ಯಾಶು ಗತ್ವಾ ಸೌಮಿತ್ರಿಣಾ ಸಹ ।
ಜುಷ್ಟಂ ತತ್ಪ್ರವಿಶಲ್ಲಕ್ಷ್ಮ್ಯಾ ರಮ್ಯಂ ರಾಮನಿವೇಶನಮ್ ॥೩॥

ಆಗ ಸುಯಜ್ಞನು ಬೇಗನೆ ಸಂಧ್ಯಾವಂದನೆಯನ್ನು ಮುಗಿಸಿ ಲಕ್ಷ್ಮಣನೊಡನೆ ರಮ್ಯವಾದ, ಧನಲಕ್ಷ್ಮಿಯಿಂದ ತುಂಬಿದ ಶ್ರೀರಾಮನ ಮಂದಿರವನ್ನು ಪ್ರವೇಶಿಸಿದ.

ತಮಾಗತಂ ವೇದವಿದಂ ಪ್ರಾಂಜಲಿಃ ಸೀತಯಾ ಸಹ ।
ಸುಯಜ್ಞಮಭಿಚಕ್ರಾಮ ರಾಘವೋಽಗ್ನಿಮಿವಾರ್ಚಿತಮ್ ॥೪॥

ವೇದಜ್ಞನಾದ ಸುಯಜ್ಞನು ಬಂದಾಗ, ಯಜ್ಞದಲ್ಲಿ ಪೂಜಿತನಾದ ಅಗ್ನಿ-ಯಂತಿದ್ದ ಆ ಸುಯಜ್ಞನನ್ನು ಸೀತಾಸಮೇತನಾದ ಶ್ರೀರಾಮನು ಕೈಮುಗಿದು ಇದಿರುಗೊಂಡ.

ಜಾತರೂಪಮಯೈರ್ಮುಖ್ಯೈ ರಂಗದೈಃ ಕುಂಡಲೈಃ ಶುಭೈಃ ।
ಸಹೇಮಸೂತ್ರೈರ್ಮಣಿಭಿಃ ಕೇಯೂರೈರ್ವಲಯೈರಪಿ ॥೫॥

ಅನ್ಯೈಶ್ಚ ರತ್ನೈರ್ಬಹುಭಿಃ ಕಾಕುತ್ಸ್ಥಃ ಪ್ರತ್ಯಪೂಜಯತ್ ।
ಸುಯಜ್ಞಂ ಸ ತದೋವಾಚ ರಾಮಃ ಸೀತಾಪ್ರಚೋದಿತಃ ॥೬॥

ಸುವರ್ಣಮಯವಾದ ಶ್ರೇಷ್ಠವಾದ ಭುಜಕೀರ್ತಿಗಳು, ಶುಭಪ್ರದವಾದ ಕುಂಡಲಗಳು ಚಿನ್ನದ ಸೂತ್ರಗಳು ಮಣಿಗಳು ಕೇಯೂರಗಳು, ಕಡಗಗಳು, ಇನ್ನೂ ಬೇರೆ ಬಹುರತ್ನಗಳು. ಇವುಗಳಿಂದ ಶ್ರೀರಾಮನು ಸುಯಜ್ಞನನ್ನು ಸತ್ಕರಿಸಿದ. ಮತ್ತು ಸೀತೆಯಿಂದ ಪ್ರೇರಿತನಾಗಿ ನುಡಿದ.

ಹಾರಂ ಚ ಹೇಮಸೂತ್ರಂ ಚ ಭಾರ್ಯಾಯೈ ಸೌಮ್ಯ ಹಾರಯ ।
ರಶನಾಂ ಚಾಧುನಾ ಸೀತಾ ದಾತುಮಿಚ್ಛತಿ ತೇ ಸಖೇ ॥೭॥

ಸೌಮ್ಯನೆ, ನಿನ್ನ ಪತ್ನಿಗಾಗಿ ಸೀತೆಯ ಹಾರ, ಚಿನ್ನದ ಸೂತ್ರ, ಮತ್ತು ಒಡ್ಯಾಣ-ಗಳನ್ನು ಈಗ ಸೀತೆ ಕೊಡಲು ಇಚ್ಛಿಸುತ್ತಾಳೆ.

ಅಂಗದಾನಿ ವಿಚಿತ್ರಾಣಿ ಕೇಯೂರಾಣಿ ಶುಭಾನಿ ಚ ।
ಪ್ರಯಚ್ಛತಿ ಸಖೇ ತುಭ್ಯಂ ಭಾರ್ಯಾಯೈ ಗಚ್ಛತೀ ವನಮ್ ॥೮॥

ಮಿತ್ರನೆ, ಈ ತೋಳ್ಬಳೆಗಳನ್ನು ಶುಭಪ್ರದವಾದ ಕೇಯೂರಗಳನ್ನೂ ಕಾಡಿಗೆ ಹೊರಟಿರುವ ಸೀತೆ ನಿನ್ನ ಪತ್ನಿಗಾಗಿ ನಿನಗೆ ನೀಡುತ್ತಿದ್ದಾಳೆ.

ಪರ್ಯಂಕಮಗ್ರ್ಯಾಸ್ತರಣಂ ನಾನಾರತ್ನವಿಭೂಷಿತಮ್ ।
ತಮಪೀಚ್ಛತಿ ವೈದೇಹೀ ಪ್ರತಿಷ್ಠಾಪಯಿತುಂ ತ್ವಯಿ ॥೯॥

ಉತ್ತಮವಾದ ಹಾಸಿಗೆಯಿಂದ ಕೂಡಿದ ನಾನಾ ರತ್ನಗಳಿಂದ ಅಲಂಕೃತವಾದ ಮಂಚವನ್ನೂ ನಿನಗೆ ದಾನವಾಗಿ ಕೊಡಲು ಬಯಸಿದ್ದಾಳೆ.

ನಾಗಃ ಶತ್ರುಂಜಯೋ ನಾಮ ಮಾತುಲೋ ಯಂ ದದೌ ಮಮ ।
ತಂ ತೇ ನಿಷ್ಕಸಹಸ್ರೇಣ ದದಾಮಿ ದ್ವಿಜಪುಂಗವ ॥೧೦॥

ನನ್ನ ಸೋದರಮಾವ ನನಗೆ ಕೊಟ್ಟಿದ್ದ 'ಶತ್ರುಂಜಯ' ಎಂಬ ಆನೆಯನ್ನು ಸಾವಿರ ಚಿನ್ನದ ನಾಣ್ಯಗಳೊಂದಿಗೆ ನಿನಗೆ ಕೊಡುತ್ತಿದ್ದೇನೆ.

ಇತ್ಯುಕ್ತಃ ಸ ಹಿ ರಾಮೇಣ ಸುಯಜ್ಞಃ ಪ್ರತಿಗೃಹ್ಯ ತತ್ ।
ರಾಮಲಕ್ಷ್ಮಣಸೀತಾನಾಂ ಪ್ರಯುಯೋಜಾಶಿಷಃ ಶಿವಾಃ ॥೧೧॥

ಶ್ರೀರಾಮ ಹೀಗೆ ಹೇಳಿದಾಗ ಸುಯಜ್ಞನು ಎಲ್ಲವನ್ನೂ ಸ್ವೀಕರಿಸಿ ರಾಮಲಕ್ಷ್ಮಣ ಸೀತೆಯರಿಗೆ ಮಂಗಳಕರವಾದ ಆಶೀರ್ವಾದಗಳನ್ನು ಮಾಡಿದ.

ಅಥ ಭ್ರಾತರಮವ್ಯಗ್ರಂ ಪ್ರಿಯಂ ರಾಮಃ ಪ್ರಿಯಂವದಮ್ ।
ಸೌಮಿತ್ರಿಂ ತಮುವಾಚೇದಂ ಬ್ರಹ್ಮೇವ ತ್ರಿದಶೇಶ್ವರಮ್ ॥೧೨॥

ಬಳಿಕ ಶ್ರೀರಾಮನು ಪ್ರಿಯವಾದ ಪ್ರಿಯವನ್ನೇ ಆಡುವ ಏಕಾಗ್ರಚಿತ್ತನಾದ ಲಕ್ಷ್ಮಣನಿಗೆ, ಬ್ರಹ್ಮನು ಇಂದ್ರನಿಗೆ ಹೇಗೋ ಹಾಗೆ, ಆಜ್ಞೆ ಮಾಡಿದ.

ಅಗಸ್ತ್ಯಂ ಕೌಶಿಕಂ ಚೈವ ತಾವುಭೌ ಬ್ರಾಹ್ಮಣೋತ್ತಮೌ ।
ಅರ್ಚಯಾಹೂಯ ಸೌಮಿತ್ರೇ ರತ್ನೈಃ ಸಸ್ಯಮಿವಾಂಬುಭಿಃ ॥೧೩॥

ತರ್ಪಯಸ್ವ ಮಹಾಬಾಹೋ ಗೋಸಹಸ್ರೈಶ್ಚ ಮಾನದ ।
ಸುವರ್ಣೈ ರಾಜತೈಶ್ಚೈವ ಮಣಿಭಿಶ್ಚ ಮಹಾಧನೈಃ ॥೧೪॥

ಲಕ್ಷ್ಮಣ, ಅಗಸ್ತ್ಯ ವಿಶ್ವಾಮಿತ್ರರ ಪುತ್ರರಾದ ಇಬ್ಬರು ಬ್ರಾಹ್ಮಣೋತ್ತಮರನ್ನು ಕರೆದು, ಸಸಿಗಳಿಗೆ ನೀರಿನಿಂದ ಉಪಚಾರ ಮಾಡುವಂತೆ, ರತ್ನಗಳಿಂದ ಸಾವಿರ ಗೋವುಗಳಿಂದ ಅಮೂಲ್ಯವಾದ ಚಿನ್ನ ಬೆಳ್ಳಿ ಮಣಿಗಳಿಂದ ಅವರನ್ನು ತೃಪ್ತಿಗೊಳಿಸು.

ಕೌಸಲ್ಯಾಂ ಚ ಸುಮಿತ್ರಾಂ ಚ ಭಕ್ತಃ ಪರ್ಯುಪತಿಷ್ಠತಿ ।
ಆಚಾರ್ಯಸ್ತೈತ್ತಿರೀಯಾಣಾಮಭಿರೂಪಶ್ಚ ವೇದವಿತ್ ॥೧೫॥

ತೈತ್ತಿರೀಯ ಶಾಖೆಯವರಿಗೆ ಆಚಾರ್ಯನಾದ, ಪಂಡಿತ, ವೇದಜ್ಞ ಭಗವದ್ ಭಕ್ತನಾದ ದ್ವಿಜನು ಕೌಸಲ್ಯೆಯನ್ನೂ ಸುಮಿತ್ರೆಯನ್ನೂ ವಿಶೇಷವಾಗಿ ಆಶೀರ್ವದಿಸುತ್ತಾನೆ.

ತಸ್ಯ ಯಾನಂ ಚ ದಾಸೀಶ್ಚ ಸೌಮಿತ್ರೇ ಸಂಪ್ರದಾಪಯ ।
ಕೌಶೇಯಾನಿ ಚ ವಸ್ತ್ರಾಣಿ ಯಾವತ್ತುಷ್ಯತಿ ಸ ದ್ವಿಜಃ ॥೧೬॥

ಅವನಿಗೆ ರಥವನ್ನೂ ದಾಸಿಯರನ್ನೂ ರೇಷ್ಮೆವಸ್ತ್ರಗಳನ್ನೂ ತೃಪ್ತಿಯಾಗುವಷ್ಟು ಕೊಡಿಸು.

ಸೂತಶ್ಚಿತ್ರರಥಶ್ಚಾರ್ಯಃ ಸಚಿವಃ ಸುಚಿರೋಷಿತಃ ।
ತೋಷಯೈನಂ ಮಹಾರ್ಹೈಶ್ಚ ರತ್ನೈರ್ವಸ್ತ್ರೈರ್ಧನೈಸ್ತಥಾ ।
ಪಶುಕಾಭಿಶ್ಚ ಸರ್ವಾಭಿರ್ಗವಾಂ ದಶಶತೇನ ಚ ॥೧೭॥

ನನಗೆ ಸಚಿವನೂ ಸೂತನೂ ಆದ ಆರ್ಯ ಚಿತ್ರರಥನು ಸುಮಂತ್ರನಂತೆ ಬಹುಕಾಲದಿಂದ ನಮ್ಮ ಮನೆಯಲ್ಲಿ ವಾಸವಾಗಿರುವವನು, ಅವನನ್ನು ಅನರ್ಘ-ವಾದ ರತ್ನ ವಸ್ತ್ರಗಳಿಂದಲೂ ಧನಗಳಿಂದಲೂ ಎಲ್ಲ ಯಜ್ಞಪಶು ಗಳಿಂದಲೂ ಸಾವಿರ ಗೋವುಗಳಿಂದಲೂ ಸಂತೋಷಗೊಳಿಸು.

ಯೇ ಚೇಮೇ ಕಠಕಾಲಾಪಾ ಬಹವೋ ದಂಡಮಾಣವಾಃ ।
ನಿತ್ಯಸ್ವಾಧ್ಯಾಯಶೀಲತ್ವಾನ್ನಾನ್ಯತ್ ಕುರ್ವಂತಿ ಕಿಂಚನ ॥೧೮॥

ಕಠ ಕಾಲಾಪ ಶಾಖಾಧ್ಯಯನನಿರತರಾದ ದಂಡಧಾರಿಗಳಾದ ಬ್ರಹ್ಮಚಾರಿಗಳು ನಿತ್ಯ ವೇದಾಧ್ಯಯನ ಶೀಲರಾದ್ದರಿಂದ ಬೇರೆ ಯಾವ ಕಾರ್ಯವನ್ನೂ ಮಾಡುವುದಿಲ್ಲ.

ಅಲಸಾಃ ಸ್ವಾದುಕಾಮಾಶ್ಚ ಮಹತಾಂ ಚಾಪಿ ಸಂಮತಾಃ ।
ತೇಷಾಮಶೀತಿಯಾನಾನಿ ರತ್ನಪೂರ್ಣಾನಿ ದಾಪಯ ॥೧೯॥

ಬೇರೆ ಕಾರ್ಯಗಳಲ್ಲಿ ಸೋಮಾರಿಗಳು, ಮೃಷ್ಟಾನ್ನ ಉಣಲು ಬಯಸುತ್ತಾರೆ. ಗುರುಹಿರಿಯರಿಗೂ ಅವರು ಪ್ರೀತಿಪಾತ್ರರು. ಅವರಿಗೆ ರತ್ನಗಳಿಂದ ತುಂಬಿದ ಎಂಬತ್ತು ಗಾಡಿಗಳನ್ನು ಕೊಡಿಸು.

ಶಾಲಿವಾಹಸಹಸ್ರಂ ಚ ದ್ವೇ ಶತೇ ಭದ್ರಕಾಂಸ್ತಥಾ ।
ವ್ಯಂಜನಾರ್ಥಂ ಚ ಸೌಮಿತ್ರೇ ಗೋಸಹಸ್ರಮುಪಾಕುರು ॥೨೦॥

ಭತ್ತವನ್ನು ತುಂಬಿದ ಸಾವಿರ ಬಂಡಿಗಳನ್ನೂ ಧಾನ್ಯಗಳನ್ನು ತುಂಬಿದ ಇನ್ನೂರು ಬಂಡಿಗಳನ್ನೂ ಹಾಲು ಮೊಸರು ತುಪ್ಪಗಳಿಗಾಗಿ ಸಾವಿರ ಗೋವುಗಳನ್ನೂ ಅವರಿಗೆ ಕೊಡಿಸು.

ಮೇಖಲೀನಾಂ ಮಹಾಸಂಘಃ ಕೌಸಲ್ಯಾಂ ಸಮುಪಸ್ಥಿತಃ ।
ತೇಷಾಂ ಸಹಸ್ರಂ ಸೌಮಿತ್ರೇ ಪ್ರತ್ಯೇಕಂ ಸಂಪ್ರದಾಪಯ ॥೨೧॥

ಕೌಸಲ್ಯೆಯನ್ನು ಆಶ್ರಯಿಸಿರುವ ಬ್ರಹ್ಮಚಾರಿಗಳ ಸಂಘದಲ್ಲಿ ಪ್ರತಿಯೊಬ್ಬನಿಗೂ ವಿವಾಹಕ್ಕಾಗಿ ಸಾವಿರಗೋವುಗಳನ್ನು ಕೊಡಿಸು.

ಅಂಬಾ ಯಥಾ ಚ ಸಾ ನಂದೇತ್ ಕೌಸಲ್ಯಾ ಮಮ ದಕ್ಷಿಣಾಮ್ ।
ತಥಾ ದ್ವಿಜಾತೀಂಸ್ತಾನ್ ಸರ್ವಾನ್ ಲಕ್ಷ್ಮಣಾರ್ಚಯ ಸರ್ವಶಃ ॥೨೨॥

ನಾನು ಕೊಡುವ ದಕ್ಷಿಣೆಯನ್ನು ನೋಡಿ ತಾಯಿ ಕೌಸಲ್ಯೆ ಸಂತುಷ್ಟಳಾಗುವಂತೆ ಎಲ್ಲ ಬ್ರಾಹ್ಮಣರನ್ನು ಸತ್ಕರಿಸಿ ಯಥೇಚ್ಛ ದಾನ ಕೊಡಿಸು.

ತತಃ ಸ ಪುರುಷವ್ಯಾಘ್ರಸ್ತದ್ಧನಂ ಲಕ್ಷ್ಮಣಃ ಸ್ವಯಮ್ ।
ಯಥೋಕ್ತಂ ಬ್ರಾಹ್ಮಣೇಂದ್ರಾಣಾಮದದಾದ್ಧನದೋ ಯಥಾ ॥೨೩॥

ಶ್ರೀರಾಮ ಹೇಳಿದಂತೆಯೆ ಪುರುಷೋತ್ತಮನಾದ ಲಕ್ಷ್ಮಣ ಕುಬೇರನಂತೆ ಬ್ರಾಹ್ಮಣೋತ್ತಮರಿಗೆ ದಾನ ನೀಡಿದ.

ಅಥಾಬ್ರವೀದ್ಬಾಷ್ಪಕಲಾಂಸ್ತಿಷ್ಠತಶ್ಚೋಪಜೀವಿನಃ ।
ಸಂಪ್ರದಾಯ ಬಹು ದ್ರವ್ಯಮೇಕೈಕಸ್ಯೋಪಜೀವನಮ್ ॥೨೪॥

ಕಣ್ಣೀರು ಸುರಿಸುತ್ತ ನಿಂತಿದ್ದ ಆಶ್ರಿತ ಜನರಿಗೆ ಒಬ್ಬೊಬ್ಬರಿಗೂ ಉಪಜೀವನಕ್ಕಾಗಿ ಬಹುದ್ರವ್ಯವನ್ನು ನೀಡಿ ಶ್ರೀರಾಮ ನುಡಿದ.

ಲಕ್ಷ್ಮಣಸ್ಯ ಚ ತದ್ವೇಶ್ಮ ಗೃಹಂ ಚ ಯದಿದಂ ಮಮ ।
ಅಶೂನ್ಯಂ ಕಾರ್ಯಮೇಕೈಕಂ ಯಾವದಾಗಮನಂ ಮಮ ॥೨೫॥

ಲಕ್ಷ್ಮಣನ ಮನೆಯನ್ನೂ ನನ್ನ ಈ ಮನೆಯನ್ನೂ ನಾನು ಹಿಂತಿರುಗಿ ಬರುವ-ವರೆಗೂ, ನೀವು ಎಂದು ತೊರೆದು ಶೂನ್ಯವಾಗಿ ಮಾಡಬಾರದು ಎಂದು.

ಇತ್ಯುಕ್ತ್ವಾ ದುಃಖಿತಂ ಸರ್ವಂ ಜನಂ ತಮುಪಜೀವಿನಮ್ ।
ಉವಾಚೇದಂ ಧನಾಧ್ಯಕ್ಷಂ ಧನಮಾನೀಯತಾಮಿತಿ ॥೨೬॥

ದುಃಖಿತರಾದ ಎಲ್ಲ ಆಶ್ರಿತ ಜನರಿಗೂ ಹೀಗೆ ಹೇಳಿ ತನ್ನ ಕೋಶಾಧ್ಯಕ್ಷನಿಂದ ಧನವನ್ನು ತರಿಸಲು ಆಜ್ಞಾಪಿಸಿದ.

ತತೋಽಸ್ಯ ಧನಮಾಜಹ್ರುಃ ಸರ್ವಮೇವೋಪಜೀವಿನಃ ।
ಸ ರಾಶಿಃ ಸುಮಹಾಂಸ್ತತ್ರ ದರ್ಶನೀಯೋ ಹ್ಯದೃಶ್ಯತ ॥೨೭॥

ಆಗ ಆಶ್ರಿತಜನರು ರಾಮನ ಎಲ್ಲ ಧನವನ್ನೂ ಅವನ ಕೋಶದಿಂದ ತಂದು ಸುರಿದರು. ಆ ರಾಶಿ ದೊಡ್ಡದಾಗಿದ್ದು ನೋಡಲು ಸುಂದರವಾಗಿತ್ತು.

ತತಃ ಸ ಪುರುಷವ್ಯಾಘ್ರಸ್ತದ್ಧನಂ ಸಹಲಕ್ಷ್ಮಣಃ ।
ದ್ವಿಜೇಭ್ಯೋ ಬಾಲವೃದ್ಧೇಭ್ಯಃ ಕೃಪಣೇಭ್ಯೋ ಹ್ಯದಾಪಯತ್ ॥೨೮॥

ಪುರುಷೋತ್ತಮನಾದ ಶ್ರೀರಾಮ ಲಕ್ಷ್ಮಣಸಮೇತನಾಗಿ ಆ ಎಲ್ಲ ಧನವನ್ನೂ ದ್ವಿಜರಿಗೂ ಬಾಲರಿಗೂ ವೃದ್ಧರಿಗೂ ದೀನರಿಗೂ ಕೊಡಿಸಿದ.

ತತ್ರಾಸೀತ್ತ್ರಿಂಗಲೋ ಗಾರ್ಗ್ಯಸ್ತ್ರಿಜಟೋ ನಾಮ ವೈ ದ್ವಿಜಃ ।
ಉಂಛವೃತ್ತಿರ್ವನೇ ನಿತ್ಯಂ ಫಾಲಕುದ್ದಾಲಲಾಂಗಲೀ ॥೨೯॥

ಆ ದ್ವಿಜರ ಮಧ್ಯದಲ್ಲಿ ಕಂದುಬಣ್ಣದವನು ಗರ್ಗಕುಲದವನು ತ್ರಿಜಟನೆಂಬ ವೃದ್ಧ ಬ್ರಾಹ್ಮಣನಿದ್ದ. ಭಿಕ್ಷೆ ಬೇಡುತ್ತಿರಲಿಲ್ಲ. ವಾನಪ್ರಸ್ಥನಾಗಿ ಕಾಡಿನಲ್ಲಿ ಕೊಡಲಿ ಗುದ್ದಲಿ ಮತ್ತು ಹಣ್ಣು ಕೀಳುವ ಕೊಕ್ಕೆಯಿರುವ ಕೋಲು ಹಿಡಿದು ಗಡ್ಡೆಗೆಣಸು ಸಂಗ್ರಹಿಸುತ್ತಿದ್ದ. ಉಂಛ ವೃತ್ತಿಯಿಂದ ಕಾಡು ಧಾನ್ಯಗಳನ್ನು ಹೆಕ್ಕುತ್ತಿದ್ದ.

ತಂ ವೃದ್ಧಂ ತರುಣೀ ಭಾರ್ಯಾ ಬಾಲಾನಾದಾಯ ದಾರಕಾನ್ ।
ಅಬ್ರವೀದ್ಬ್ರಾಹ್ಮಣಂ ವಾಕ್ಯಂ ದಾರಿದ್ರ್ಯೇಣಾಭಿಪೀಡಿತಾ ॥೩೦॥

ಅವನ ಹೆಂಡತಿ ಯುವತಿ. ಮಕ್ಕಳು ಸಣ್ಣ ವಯಸಿನವು. ದಾರಿದ್ರ್ಯ ಪೀಡೆಯಿಂದ ಅವಳು ತ್ರಿಜಟನಿಗೆ ಹೇಳಿದಳು.

ಅಪಾಸ್ಯ ಫಾಲಂ ಕುದ್ದಾಲಂ ಕುರುಷ್ವ ವಚನಂ ಮಮ ।
ರಾಮಂ ದರ್ಶಯ ಧರ್ಮಜ್ಞಂ ಯದಿ ಕಿಂಚಿದವಾಪ್ಸ್ಯಸಿ ॥೩೧॥

ನೀನು ಈ ಕೊಡಲಿ ಗುದ್ದಲಿಗಳನ್ನು ಬದಿಗಿಟ್ಟು ನಾನು ಹೇಳಿದಂತೆ ಮಾಡು. ಧರ್ಮಜ್ಞನಾದ ರಾಮನ ದರ್ಶನ ಮಾಡಿದರೆ ಏನಾದರೂ ನಿನಗೆ ಸಿಗಬಹುದು.

ಭಾರ್ಯಾಯಾ ವಚನಂ ಶ್ರುತ್ವಾ ಶಾಟೀಮಾಚ್ಛಾದ್ಯ ದುಶ್ಚದಾಮ್ ।
ಸ ಪ್ರಾತಿಷ್ಠತ ಪಂಥಾನಂ ಯತ್ರ ರಾಮನಿವೇಶನಮ್ ॥೩೨॥

ಹೆಂಡತಿಯ ಮಾತನ್ನು ಕೇಳಿ, ಹೊದೆಯಲಾಗದ ಹರಕು ಬಟ್ಟೆಯನ್ನು ಹೊದ್ದು, ಶ್ರೀರಾಮನ ಅರಮನೆಯ ಮಾರ್ಗವನ್ನು ಹಿಡಿದುಹೊರಟ.

ಭೃಗ್ವಂಗಿರಃಸಮಂ ದೀಪ್ತ್ಯಾ ತ್ರಿಜಟಂ ಜನಸಂಸದಿ ।
ಆ ಪಂಚಮಾಯಾಃ ಕಕ್ಷ್ಯಾಯಾ ನೈನಂ ಕಶ್ಚಿದವಾರಯತ್ ॥೩೩॥

ಭೃಗು ಅಂಗಿರಸರಂತೆ ಬೆಳಗುತ್ತಿದ್ದ ತ್ರಿಜಟನನ್ನು ಅರಮನೆಯ ಐದನೆ ಆವರಣದವರೆಗೂ ಜನಸಮೂಹದಲ್ಲಿ ಯಾರೂ ತಡೆಯಲಿಲ್ಲ.

ಸ ರಾಜಪುತ್ರಮಾಸಾದ್ಯ ತ್ರಿಜಟೋ ವಾಕ್ಯಮಬ್ರವೀತ್ ।
ನಿರ್ಧನೋ ಬಹುಪುತ್ರೋಽಸ್ಮಿ ರಾಜಪುತ್ರ ಮಹಾಯಶಃ ॥೩೪॥

ಶ್ರೀರಾಮನನ್ನು ಕಂಡು ತ್ರಿಜಟನು ಹೇಳಿದನು. 'ಮಹಾಯಶಸ್ವಿಯಾದ ರಾಜಕುಮಾರನೆ, ನಾನು ನಿರ್ಧನ, ನನಗೆ ಬಹುಪುತ್ರರು ಇದ್ದಾರೆ.'

ಉಂಛವೃತ್ತಿರ್ವನೇ ನಿತ್ಯಂ ಪ್ರತ್ಯವೇಕ್ಷಸ್ವ ಮಾಮಿತಿ ।
ತಮುವಾಚ ತದಾ ರಾಮಃ ಪರಿಹಾಸಸಮನ್ವಿತಮ್ ॥೩೫॥

'ಕಾಡಿನಲ್ಲಿ ನಿತ್ಯವೂ ಉಂಛ ವೃತ್ತಿಯಿಂದ ಕಾಡುಧಾನ್ಯಗಳನ್ನು ಹೆಕ್ಕಿಕೊಂಡು ಬದುಕುತ್ತಿದ್ದೇನೆ. ನನ್ನ ಅವಸ್ಥೆಯನ್ನು ದಯೆಯಿಂದ ನೋಡು' ಆಗ ಶ್ರೀರಾಮ ನಗುತ್ತ ನುಡಿದ.

ಗವಾಂ ಸಹಸ್ರಮಪ್ಯೇಕಂ ನ ತು ವಿಶ್ರಾಣಿತಂ ಮಯಾ ।
ಪರಿಕ್ಷಿಪಸಿ ದಂಡೇನ ಯಾವತ್ತಾವದವಾಪ್ಸ್ಯಸಿ ॥೩೬॥

'ಸಾವಿರ ಗೋ ಸಮೂಹವನ್ನು ಒಂದನ್ನೂ ಕೂಡ ಇನ್ನೂ ನಾನು ದಾನ ಮಾಡಿಲ್ಲ. ದಂಡವನ್ನು ನಿನ್ನ ಊರುಗೋಲನ್ನು ಬೀಸಿ ಒಗೆದು ಅದೆಷ್ಟು ಪ್ರದೇಶವನ್ನು ತನ್ನದಾಗಿಸಿಕೊಳ್ಳುವೆಯೋ ಅಷ್ಟು ಪ್ರದೇಶದಲ್ಲಿರುವ ಎಲ್ಲಾ ಗೋವುಗಳನ್ನು ನಿನಗೆ ನೀಡುವೆನು.'

ಸ ಶಾಟೀಂ ಪರಿತಃ ಕಟ್ಯಾಂ ಸಂಭ್ರಾಂತಃ ಪರಿವೇಷ್ಟ್ಯತಾಮ್ ।
ಆವಿಧ್ಯ ದಂಡಂ ಚಿಕ್ಷೇಪ ಸರ್ವಪ್ರಾಣೇನ ವೇಗಿತಃ ॥೩೭॥

ತ್ರಿಜಟನು ಬೇಗನೆ ಸೊಂಟದಲ್ಲಿ ಸುತ್ತಲೂ ಬಟ್ಟೆಯನ್ನು ಬಿಗಿದು ದಂಡವನ್ನು ಸರ್ವಶಕ್ತಿಯಿಂದ ವೇಗವಾಗಿ ತಿರುಗಿಸಿ ಎಸೆದ.

ಸ ತೀರ್ತ್ವಾ ಸರಯೂಪಾರಂ ದಂಡಸ್ತಸ್ಯ ಕರಾಚ್ಚ್ಯುತಃ ।
ಗೋವ್ರಜೇ ಬಹುಸಾಹಸ್ರೇ ಪಪಾತೋಕ್ಷಣಸಂನಿಧೌ ॥೩೮॥

ಅವನು ಕೈಯಿಂದ ಎಸೆದ ಆ ದಂಡವು ಸರಯೂ ನದಿಯ ಆಚೆ ದಂಡೆಯನ್ನು ದಾಟಿ ಹಲವು ಸಾವಿರ ಗೋಸಮೂಹಗಳ ಮಧ್ಯದಲ್ಲಿ ಎತ್ತಿನ ಬಳಿಯಲ್ಲಿ ಬಿದ್ದಿತು.

ತಂ ಪರಿಷ್ವಜ್ಯ ಧರ್ಮಾತ್ಮಾ ಆ ತಸ್ಮಾತ್ ಸರಯೂತಟಾತ್ ।
ಆನಯಾಮಾಸ ತಾ ಗೋಪೈಸ್ತ್ರಿಜಟಾಯಾಶ್ರಮಂ ಪ್ರತಿ ॥೩೯॥

ಧರ್ಮಾತ್ಮನಾದ ಶ್ರೀರಾಮ ತ್ರಿಜಟನನ್ನು ಆಲಿಂಗಿಸಿ ಅವನ ಶ್ರಮವನ್ನು ಕಳೆದು, ಸರಯೂ ದಂಡೆಯವರೆಗಿನ ಪ್ರದೇಶದಲ್ಲಿದ್ದ ಎಲ್ಲ ಗೋವುಗಳನ್ನು ಗೋಪಾಲಕ-ರಿಂದ ತ್ರಿಜಟನಿಗಾಗಿ ಅವನಾಶ್ರಮಕ್ಕೆ ಕಳಿಸಿಕೊಟ್ಟ.

ಉವಾಚ ಚ ತತೋ ರಾಮಸ್ತಂ ಗಾರ್ಗ್ಯಮಭಿಸಾಂತ್ವಯನ್ ।
ಮನ್ಯುರ್ನ ಖಲು ಕರ್ತವ್ಯಃ ಪರಿಹಾಸೋ ಹ್ಯಯಂ ಮಮ ॥೪೦॥

ಆ ಗಾರ್ಗ್ಯನನ್ನು ಸಂತೈಸುತ್ತ ಶ್ರೀರಾಮ ನುಡಿದ, 'ಕೋಪಿಸಿಕೊಳ್ಳಬೇಡ ಕೇವಲ ನನ್ನ ವಿನೋದಕ್ಕಾಗಿ ಹೀಗೆ ಮಾಡಿದ್ದೇನೆ.'

ಇದಂ ಹಿ ತೇಜಸ್ತವ ಯದ್ದುರತ್ಯಯಂ
ತದೇವ ಜಿಜ್ಞಾಸಿತುಮಿಚ್ಛತಾ ಮಯಾ ।
ಇಮಂ ಭವಾನರ್ಥಮಭಿಪ್ರಚೋದಿತೋ
ವೃಣೀಷ್ವ ಕಿಂ ಚೇದಪರಂ ವ್ಯವಸ್ಯತಿ ॥೪೧॥

'ನಿನ್ನ ಕೊನೆಯಿಲ್ಲದ ತಪಃಶಕ್ತಿಯನ್ನು ಪರೀಕ್ಷಿಸುವ ಇಚ್ಛೆಯಿಂದಲೇ ದಂಡವನ್ನು ಎಸೆಯುವ ಈ ಪಂದ್ಯವನ್ನು ನಿನಗೆ ಪ್ರಚೋದಿಸಿದೆನಷ್ಟೆ. ಇನ್ನೇನಾದರೂ ಅಪೇಕ್ಷಿಸುತ್ತಿಯಾದರೆ ಏನು ಬೇಕು, ಹೇಳು.'

ಬ್ರವೀಮಿ ಸತ್ಯೇನ ನ ತೇಽಸ್ತಿ ಯಂತ್ರಣಾ
ಧನಂ ಹಿ ಯದ್ಯನ್ಮಮ ವಿಪ್ರಕಾರಣಾತ್ ।
ಭವತ್ಸು ಸಮ್ಯಕ್ ಪ್ರತಿಪಾದನೇನ ತನ್-
ಮಯಾರ್ಜಿತಂ ಪ್ರೀತಿಯಶಸ್ಕರಂ ಭವೇತ್ ॥೪೨॥

'ಸತ್ಯವಾಗಿಯೂ ಹೇಳುತ್ತೇನೆ. ನಿನಗೆ ಏನೂ ಸಂಕೋಚ ಬೇಡ. ನನ್ನ ಧನವೆಲ್ಲವೂ ಬ್ರಾಹ್ಮಣರ ಸಲುವಾಗಿಯೇ ಇದೆ. ನಾನು ಸಂಪಾದಿಸಿದ್ದನ್ನು ನಿಮ್ಮಲ್ಲಿ ಸದ್ವಿನಿಯೋಗ ಮಾಡಿದರೇ ನನಗೆ ಸಂತೋಷ ಉಂಟಾಗುತ್ತದೆ, ಕೀರ್ತಿಯೂ ಬರುತ್ತದೆ.'

ತತಃ ಸಭಾರ್ಯಸ್ತ್ರಿಜಟೋ ಮಹಾಮುನಿ
ರ್ಗವಾಮನೀಕಂ ಪ್ರತಿಗೃಹ್ಯ ಮೋದಿತಃ ।
ಯಶೋಬಲಪ್ರೀತಿಸುಖೋಪಬೃಂಹಿಣೇ
ಸ್ತದಾಶಿಷಃ ಪ್ರತ್ಯವದನ್ಮಹಾತ್ಮನಃ ॥೪೩॥

ತ್ರಿಜಟ ಮಹಾಮುನಿ ಪತ್ನೀ ಸಮೇತನಾಗಿ ಗೋಸಮೂಹಗಳನ್ನು ಪಡೆದು ಆನಂದಪಟ್ಟ. ಮಹಾತ್ಮ ಶ್ರೀರಾಮನಿಗೆ 'ಯಶಸ್ಸು ಬಲ ತೃಪ್ತಿ ಸುಖಗಳು ವೃದ್ಧಿ ಹೊಂದಲಿ' ಎಂದು ಆಶೀರ್ವಾದ ಮಾಡಿದ.

ಶ್ರೀರಾಮ ಸಂ.ರಾಮಾ. ಪ್ರಕಾರ ಮುನಿಗೆ ಯಜ್ಞಕ್ಕಾಗಿ ತನ್ನಲ್ಲಿ ಉಳಿದಿದ್ದ ಸರ್ವಸ್ವವನ್ನೂ ದಾನಮಾಡಿದ.

ಸ ಚಾಪಿ ರಾಮಃ ಪರಿಪೂರ್ಣಮಾನಸೋ
ಮಹದ್ಧನಂ ಧರ್ಮಬಲೈರುಪಾರ್ಜಿತಮ್ ।
ನಿಯೋಜಯಾಮಾಸ ಸುಹೃಜ್ಜನೇ ಚಿರಾದ್
ಯಥಾರ್ಹಸಂಮಾನವಚಃಪ್ರಚೋದಿತಃ ॥೪೪॥

ಶ್ರೀರಾಮನು ತುಂಬಿದ ಮನಸಿನಿಂದ ತಾನು ಧರ್ಮದಿಂದ ಪರಾಕ್ರಮದಿಂದ ಸಂಪಾದಿಸಿದ್ದ ಸರ್ವಸ್ವವನ್ನು ಹೀಗೆ ಸಜ್ಜನರಿಗೆ ದಾನ ಮಾಡಿದ. ಚಿರಕಾಲ ಸಜ್ಜನರು ಮುಕ್ತಕಂಠದಿಂದ ಅವನನ್ನು ಸಮ್ಮಾನಿಸಿದರು.

ದ್ವಿಜಃ ಸುಹೃದ್ಭೃತ್ಯಜನೋऽಥವಾ ತದಾ
ದರಿದ್ರಭಿಕ್ಷಾಚರಣಶ್ಚ ಯೋऽಭವತ್ ।
ನ ತತ್ರ ಕಶ್ಚಿನ್ನ ಬಭೂವ ತರ್ಪಿತೋ
ಯಥಾರ್ಹಸಂಮಾನನದಾನಸಂಭ್ರಮೈಃ ॥೪೫॥

ದ್ವಿಜನಿರಲಿ, ಬಂಧು ಇರಲಿ, ಸೇವಕ ಜನರಿರಲಿ ಅಥವಾ ದರಿದ್ರರಾದ ಭಿಕ್ಷುಕರಿರಲಿ ಅವರಲ್ಲಿ ಯಾರೂ ಶ್ರೀರಾಮನ ಯಥಾರ್ಹವಾದ ಸಮ್ಮಾನ ದಾನ ಸಂಭ್ರಮಗಳಿಂದ ತೃಪ್ತಿ ಹೊಂದದೇ ಇರಲಿಲ್ಲ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಮೂವತ್ತೆರಡನೇ ಸರ್ಗ ಮುಗಿಯಿತು.

❖

ತ್ರಯಸ್ತ್ರಿಂಶಃ ಸರ್ಗಃ

ಸರ್ಗ – 33

ಶ್ರೀರಾಮ ವನವಾಸಕ್ಕೆ ಹೋಗುವನೆಂದು ದುಃಖದಿಂದ ಪೌರರ ವಿಲಾಪ

ದತ್ತ್ವಾ ತು ಸಹ ವೈದೇಹ್ಯಾ ಬ್ರಾಹ್ಮಣೇಭ್ಯೋ ಧನಂ ಬಹು ।
ಜಗ್ಮತುಃ ಪಿತರಂ ದ್ರಷ್ಟುಂ ಸೀತಯಾ ಸಹ ರಾಘವೌ ॥೧॥

ಬ್ರಾಹ್ಮಣರಿಗೆ ಬಹಳ ಧನವನ್ನು ದಾನಮಾಡಿ ರಾಮಲಕ್ಷ್ಮಣರು ಸೀತೆಯೊಂದಿಗೆ ತಂದೆಯನ್ನು ನೋಡಲು ಹೊರಟರು.

ತತೋ ಗೃಹೀತೇ ದುಷ್ಪ್ರೇಕ್ಷೇ ತ್ವಶೋಭೇತಾಂ ತದಾಯುಧೇ ।
ಮಾಲಾದಾಮಭಿರಾಬದ್ಧೇ ಸೀತಯಾ ಸಮಲಂಕೃತೇ ॥೨॥

ರಾಮಲಕ್ಷ್ಮಣರು ಹಿಡಿದುಕೊಂಡ ಅವರ ಆಯುಧಗಳು ಸೀತೆಯಿಂದ ಅಲಂಕರಿಸಲ್ಪಟ್ಟು ಹೂಮಾಲೆಗಳಿಂದ ಯುಕ್ತವಾಗಿ ಕಣ್ಣು ಕೋರೈಸುವಂತೆ ಹೊಳೆಯುತ್ತ ಶೋಭಿಸಿದುವು.

ತತಃ ಪ್ರಾಸಾದಹರ್ಮ್ಯಾಣಿ ವಿಮಾನಶಿಖರಾಣಿ ಚ ।
ಅಧಿರುಹ್ಯ ಜನಃ ಶ್ರೀಮಾನುದಾಸೀನೋ ವ್ಯಲೋಕಯತ್ ॥೩॥

ಶ್ರೀಮಂತ ಜನರು 'ಪ್ರಾಸಾದ' ಎರಡುಮೂರು ಮಾಳಿಗೆಗಳುಳ್ಳ ಮನೆಗಳ 'ಹರ್ಮ್ಯ' ಮಾಳಿಗೆಗಳನ್ನು ಮತ್ತು 'ವಿಮಾನ'ದ ಏಳುಮಾಳಿಗೆ ಉಳ್ಳ ಮನೆಯ ಶಿಖರಗಳನ್ನೂ ಏರಿ, ಉದಾಸೀನ ಭಾವದಿಂದ ನಿರುತ್ಸಾಹದಿಂದ ವೀಕ್ಷಿಸಿದರು.

ನ ಹಿ ರಥ್ಯಾಃ ಸ್ಮ ಶಕ್ಯಂತೇ ಗಂತುಂ ಬಹುಜನಾಕುಲಾಃ ।
ಆರುಹ್ಯ ತಸ್ಮಾತ್ ಪ್ರಾಸಾದಾದ್ದೀನಾಃ ಪಶ್ಯಂತಿ ರಾಘವಮ್ ॥೪॥

ರಾಜಮಾರ್ಗವು ಬಹುಜನರಿಂದ ನಿಬಿಡವಾಗಿದ್ದರಿಂದ ಸಂಚರಿಸಲು ಶಕ್ಯ-ವಿಲ್ಲವೆಂದು ಮಾಳಿಗೆ ಮನೆಗಳ ಮೇಲೆ ಏರಿಯೇ ಅಲ್ಲಿಂದ ದೀನರಾಗಿ ಶ್ರೀರಾಮನನ್ನು ಕಂಡರು.

ಪದಾತಿಂ ಸಾನುಜಂ ದೃಷ್ಟ್ವಾ ಸಸೀತಂ ಚ ಜನಾಸ್ತದಾ ।
ಊಚುರ್ಬಹುವಿಧಾ ವಾಚಃ ಶೋಕೋಪಹತಚೇತಸಃ ॥೫॥

ಸೀತಾಲಕ್ಷ್ಮಣ ಸಮೇತನಾಗಿ ಶ್ರೀರಾಮ ಕಾಲ್ನಡಿಗೆಯಿಂದ ಹೋಗುವುದನ್ನು ಕಂಡು ಜನರು ಶೋಕದಿಂದ ಮನಸಿನಲ್ಲಿ ಕುಗ್ಗಿ ನಾನಾವಿಧವಾಗಿ ಮಾತನಾಡಿ ಕೊಂಡರು.

ಯಂ ಯಾಂತಮನುಯಾತಿ ಸ್ಮ ಚತುರಂಗಬಲಂ ಮಹತ್ ।
ತಮೇಕಂ ಸೀತಯಾ ಸಾರ್ಧಮನುಯಾತಿ ಸ್ಮ ಲಕ್ಷ್ಮಣಃ ॥೬॥

ಶ್ರೀರಾಮನು ಹೊರಟರೆ ದೊಡ್ಡ ಚತುರಂಗ ಸೈನ್ಯವೇ ಅವನನ್ನು ಹಿಂಬಾಲಿ-ಸುತ್ತಿತ್ತು. ಇದೀಗ ಸೀತೆಯೊಂದಿಗೆ ಅವನು ಒಬ್ಬನೇ ನಡೆಯುತ್ತಿದ್ದಾನೆ, ಲಕ್ಷ್ಮಣ ಅವನನ್ನು ಹಿಂಬಾಲಿಸುತ್ತಿದ್ದಾನೆ.

ಐಶ್ವರ್ಯಸ್ಯ ರಸಜ್ಞಃ ಸನ್ ಕಾಮಿನಾಂ ಚೈವ ಕಾಮದಃ ।
ನೇಚ್ಛತ್ಯೇವಾನೃತಂ ಕರ್ತುಂ ಪಿತರಂ ಧರ್ಮಗೌರವಾತ್ ॥೭॥

ಐಶ್ವರ್ಯದ ರುಚಿಯನ್ನು ಕಂಡವನೂ ಕೇಳಿದರೆ ಇಷ್ಟಾರ್ಥ ನೀಡುತ್ತಿದ್ದವನೂ ಆಗಿದ್ದು ಶ್ರೀರಾಮ ಈಗ ಧರ್ಮದ ಮೇಲಿನ ಗೌರವದಿಂದ ತಂದೆಯ ಮಾತನ್ನು ಸುಳ್ಳಾಗಿಸಲು ಸರ್ವಥಾ ಒಪ್ಪುತ್ತಿಲ್ಲ.

ಯಾ ನ ಶಕ್ಯಾ ಪುರಾ ದ್ರಷ್ಟುಂ ಭೂತೈರಾಕಾಶಗೈರಪಿ ।
ತಾಮದ್ಯ ಸೀತಾಂ ಪಶ್ಯಂತಿ ರಾಜಮಾರ್ಗಗತಾಂ ಜನಾಃ ॥೮॥

ಹಿಂದೆ ಸೀತೆ ಗಗನಚಾರಿ ಜಂತುಗಳಿಗೂ ನೋಡಲು ಸಿಗುತ್ತಿರಲಿಲ್ಲ. ಇದೀಗ ರಾಜಮಾರ್ಗದಲ್ಲಿ ನಡೆಯತ್ತಿರುವ, ಆ ಸೀತೆಯನ್ನು ಎಲ್ಲರೂ ನೋಡುವಂತಾಗಿದೆ.

ಅಂಗರಾಗೋಚಿತಾಂ ಸೀತಾಂ ರಕ್ತಚಂದನಸೇವಿನೀಮ್ ।
ವರ್ಷಮುಷ್ಣಂ ಚ ಶೀತಂ ಚ ನೇಷ್ಯತ್ಯಾಶು ವಿವರ್ಣತಾಮ್ ॥೯॥

ಅಂಗರಾಗವನ್ನು ಮೈಗೆ ಬಳಿದುಕೊಂಡು ಕೆಂಪುಚಂದನವನ್ನು ಧರಿಸುತ್ತಿದ್ದ ಸೀತೆಯನ್ನು ಇನ್ನು ಮುಂದೆ ಮಳೆ ಬಿಸಿಲು ಚಳಿ ವಿವರ್ಣಗೊಳಿಸುತ್ತವೆ.

ಅದ್ಯ ನೂನಂ ದಶರಥಃ ಸತ್ತ್ವಮಾವಿಶ್ಯ ಭಾಷತೇ ।
ನ ಹಿ ರಾಜಾ ಪ್ರಿಯಂ ಪುತ್ರಂ ವಿವಾಸಯಿತುಮಿಚ್ಛತಿ ॥೧೦॥

ಇಂದು ದಶರಥನು ಸಾವರಿಸಿಕೊಂಡು ಕಷ್ಟದಿಂದ ಮಾತನಾಡುವುದು ನಿಶ್ಚಿತ. ರಾಜನು ಪ್ರಿಯಪುತ್ರನನ್ನು ಕಾಡಿಗೆ ಅಟ್ಟಲು ಇಚ್ಛಿಸಲಾರ.

ನಿರ್ಗುಣಸ್ಯಾಪಿ ಪುತ್ರಸ್ಯ ಕಥಂ ಸ್ಯಾದ್ವಿಪ್ರವಾಸನಮ್ ।
ಕಿಂ ಪುನರ್ಯಸ್ಯ ಲೋಕೋಽಯಂ ಜಿತೋ ವೃತ್ತೇನ ಕೇವಲಮ್ ॥೧೧॥

ಪುತ್ರನು ಗುಣವಂತನಲ್ಲದಿದ್ದರೂ ತಂದೆಗೆ ಅವನನ್ನು ಕಾಡಿಗೆ ಕಳಿಸುವುದು ಹೇಗೆ ಶಕ್ಯವಾಗುವುದು? ಎಂದಮೇಲೆ, ಕೇವಲ ಸದ್ ವರ್ತನೆಯಿಂದಲೇ ಜನಮನವನ್ನು ಗೆದ್ದಿರುವ ರಾಮನ ವಿಷಯದಲ್ಲಿ ಏನು ಹೇಳಬೇಕಿದೆ?

ಆನೃಶಂಸ್ಯಮನುಕ್ರೋಶಃ ಶ್ರುತಂ ಶೀಲಂ ದಮಃ ಶಮಃ ।
ರಾಘವಂ ಶೋಭಯಂತ್ಯೇತೇ ಷಡ್ಗುಣಾಃ ಪುರುಷರ್ಷಭಮ್ ॥೧೨॥

ಅಹಿಂಸೆ, ದಯೆ, ಅಧ್ಯಯನ ಶೀಲ ಶಮ ದಮ ಈ ಆರು ಗುಣಗಳು ಪುರುಷೋತ್ತಮನಾದ ಶ್ರೀರಾಮನಿಗೆ ಬಹಳ ಶೋಭೆ ತಂದಿವೆ.

ತಸ್ಮಾತ್ತಸ್ಯೋಪಘಾತೇನ ಪ್ರಜಾಃ ಪರಮಪೀಡಿತಾಃ ।
ಔದಕಾನೀವ ಸತ್ತ್ವಾನಿ ಗ್ರೀಷ್ಮೇ ಸಲಿಲಸಂಕ್ಷಯಾತ್ ॥೧೩॥

ಅದರಿಂದ ಬೇಸಗೆಯಲ್ಲಿ ನೀರು ಬತ್ತಿದರೆ ಜಲಚರ ಪ್ರಾಣಿಗಳು ಪೀಡೆಗೊಳಗಾಗುವಂತೆ ಶ್ರೀರಾಮನು ಕುಗ್ಗಿದ್ದರಿಂದ ಪ್ರಜೆಗಳು ಬಹಳ ಪೀಡಿತರಾಗಿದ್ದಾರೆ.

ಪೀಡಯಾ ಪೀಡಿತಂ ಸರ್ವಂ ಜಗದಸ್ಯ ಜಗತ್ಪತೇಃ ।
ಮೂಲಸ್ಯೇವೋಪಘಾತೇನ ವೃಕ್ಷಃ ಪುಷ್ಪಫಲೋಪಗಃ ॥೧೪॥

ಜಗತ್ಪತಿಗೆ ಪೀಡೆಯಾಗುವುದರಿಂದ ಎಲ್ಲ ಜಗತ್ತು ಪೀಡಿತವಾಗುತ್ತದೆ. ಬೇರಿಗೆ ಪೀಡೆಯಾದರೆ ಪುಷ್ಪಫಲ ಯುಕ್ತವಾದ ವೃಕ್ಷಕ್ಕೆ ಪೀಡೆಯಾಗುವುದು ಅನಿವಾರ್ಯ.

ಮೂಲಂ ಹ್ಯೇಷ ಮನುಷ್ಯಾಣಾಂ ಧರ್ಮಸಾರೋ ಮಹಾದ್ಯುತಿಃ ।
ಪುಷ್ಪಂ ಫಲಂ ಚ ಪತ್ರಂ ಚ ಶಾಖಾಶ್ಚಾನ್ಯೇತರೇ ಜನಾಃ ॥೧೫॥

ಧರ್ಮವೇ ಸಾರವಾಗಿರುವ ಮಹಾಕಾಂತಿಯುಳ್ಳ ಶ್ರೀರಾಮ ಮನುಷ್ಯರಿಗೆ ಬೇರಿನಂತೆ. ಪುಷ್ಪ ಫಲ ಪತ್ರ ಶಾಖೆಗಳೆಲ್ಲವೂ ಇತರ ಜನರು ನಾವು.

ತೇ ಲಕ್ಷ್ಮಣ ಇವ ಕ್ಷಿಪ್ರಂ ಸಪತ್ನ್ಯಃ ಸಹಬಾಂಧವಾಃ ।
ಗಚ್ಛಂತಮನುಗಚ್ಛಾಮೋ ಯೇನ ಗಚ್ಛತಿ ರಾಘವಃ ॥೧೬॥

ಅದರಿಂದ ನಾವು ನಮ್ಮ ಸತಿಯರೊಂದಿಗೆ ಬಾಂಧವರೊಂದಿಗೆ ಬೇಗನೆ ಲಕ್ಷ್ಮಣನಂತೆ ರಾಮನು ಹೋಗುವ ಮಾರ್ಗದಲ್ಲಿ ಹಿಂಬಾಲಿಸಿ ಹೋಗೋಣ.

ಉದ್ಯಾನಾನಿ ಪರಿತ್ಯಜ್ಯ ಕ್ಷೇತ್ರಾಣಿ ಚ ಗೃಹಾಣಿ ಚ ।
ಏಕದುಃಖಸುಖಾ ರಾಮಮನುಗಚ್ಛಾಮ ಧಾರ್ಮಿಕಮ್ ॥೧೭॥

ಉದ್ಯಾನ ಹೊಲಗದ್ದೆಗಳನ್ನೂ ಮನೆಗಳನ್ನೂ ಬಿಟ್ಟು ಶ್ರೀರಾಮನ ದುಃಖ ಸುಖಗಳಲ್ಲಿ ಸಹಭಾಗಿಗಳಾಗಿ ಧಾರ್ಮಿಕನಾದ ಶ್ರೀರಾಮನನ್ನೇ ಹಿಂಬಾಲಿಸಿ ಹೋಗೋಣ.

ಸಮುದ್ಧೃತನಿಧಾನಾನಿ ಪರಿಧ್ವಸ್ತಾಜಿರಾಣಿ ಚ ।
ಉಪಾತ್ತಧನಧಾನ್ಯಾನಿ ಹೃತಸಾರಾಣಿ ಸರ್ವಶಃ ॥೧೮॥

ರಜಸಾಭ್ಯವಕೀರ್ಣಾನಿ ಪರಿತ್ಯಕ್ತಾನಿ ದೈವತೈಃ ।
ಮೂಷಕೈಃ ಪರಿಧಾವದ್ಭಿರುದ್ಬಿಲೈರಾವೃತಾನಿ ಚ ॥೧೯॥

ಅಪೇತೋದಕಧೂಮಾನಿ ಹೀನಸಂಮಾರ್ಜನಾನಿ ಚ ।
ಪ್ರಣಷ್ಟಬಲಿಕರ್ಮೇಜ್ಯಾಮಂತ್ರಹೋಮಜಪಾನಿ ಚ ॥೨೦॥

ದುಷ್ಕಾಲೇನೇವ ಭಗ್ನಾನಿ ಭಿನ್ನಭಾಜನವಂತಿ ಚ ।
ಅಸ್ಮತ್ಯಕ್ತಾನಿ ವೇಶ್ಮಾನಿ ಕೈಕೇಯೀ ಪ್ರತಿಪದ್ಯತಾಮ್ ॥೨೧॥

ನಮ್ಮ ಮನೆಗಳಲ್ಲಿರುವ ನಿಕ್ಷೇಪಗಳನ್ನು ಎತ್ತಿಕೊಂಡಿರುತ್ತೇವೆ. ಅಂಗಳಗಳು ನಾಶವಾಗಿರುತ್ತವೆ. ಧನಧಾನ್ಯಗಳನ್ನೂ ಉತ್ತಮವಸ್ತುಗಳನ್ನೂ ಎತ್ತಿಕೊಂಡಿರುತ್ತೇವೆ. ದೂಳು ಹರಡಿರುತ್ತದೆ. ದೇವತೆಗಳ ಆವಾಸವಿರುವುದಿಲ್ಲ. ಬಿಲದಿಂದ ಹೊರಗೆ ಬಂದು ಓಡಾಡುವ ಇಲಿ ಹೆಗ್ಗಣಗಳಿಂದಲೆ ತುಂಬಿರುತ್ತವೆ. ನೀರು ಸಿಂಪಡಿಸು-ವುದಿಲ್ಲ, ಸುಗಂಧ ಧೂಮವಿರುವುದಿಲ್ಲ. ನೆಲ ಗುಡಿಸಿ ಸಾರಿಸಿರುವುದಿಲ್ಲ. ಬಲಿಹರಣ ಯಾಗ ಮಂತ್ರ ಹೋಮ ಜಪ ಒಂದೂ ಇರುವುದಿಲ್ಲ. ಮನೆಗಳು ಮುರಿದಿರುತ್ತವೆ, ಪಾತ್ರೆಗಳೂ ಮುರಿದಿರುತ್ತವೆ, ದುಷ್ಕಾಲಕ್ಕೆ ತುತ್ತಾದಂತಿರುತ್ತವೆ, ನಾವು ತೊರೆಯುವ ಮನೆಗಳು. ಅವುಗಳನ್ನು ಕೈಕೇಯಿ ಸ್ವೀಕರಿಸಲಿ. ಅವಳೇ ಅವುಗಳಿಗೆ ಒಡತಿಯಾಗಲಿ.

ವನಂ ನಗರಮೇವಾಸ್ತು ಯೇನ ಗಚ್ಛತಿ ರಾಘವಃ ।
ಅಸ್ಮಾಭಿಶ್ಚ ಪರಿತ್ಯಕ್ತಂ ಪುರಂ ಸಂಪದ್ಯತಾಂ ವನಮ್ ॥೨೨॥

ಶ್ರೀರಾಮನು ಹೋಗುವ ಅರಣ್ಯವೇ ನಗರವಾಗಲಿ, ನಾವು ಬಿಟ್ಟು ಬರುವ ನಗರವೇ ಅರಣ್ಯವಾಗಲಿ.

ಬಿಲಾನಿ ದಂಷ್ಟ್ರಿಣಃ ಸರ್ವೇ ಸಾನೂನಿ ಮೃಗಪಕ್ಷಿಣಃ ।
ತ್ಯಜಂತ್ವಸ್ಮದ್ಭಯಾದ್ಭೀತಾ ಗಜಾಃ ಸಿಂಹಾ ವನಾನ್ಯಪಿ ।
ಅಸ್ಮತ್ಪ್ರಯುಕ್ತಂ ಪ್ರಪದ್ಯಂತಾಂ ಸೇವ್ಯಮಾನಂ ತ್ಯಜಂತು ಚ ॥೨೩॥

ಅರಣ್ಯದಲ್ಲಿ ಹಾವುಗಳು ಬಿಲಗಳನ್ನು ತೊರೆಯಲಿ, ಮೃಗಪಕ್ಷಿಗಳು ಗಿರಿತಪ್ಪಲು-ಗಳನ್ನು ತೊರೆಯಲಿ. ನಮ್ಮ ಭಯದಿಂದ ಭೀತವಾಗಿ ಆನೆ ಸಿಂಹಗಳು ಕಾಡುಗಳನ್ನು ತೊರೆಯಲಿ. ನಾವು ಬಿಟ್ಟುಬಂದ ಪ್ರದೇಶವನ್ನು ಅವು ಸೇರಲಿ, ನಾವು ಸೇವಿಸುವ ಪ್ರದೇಶವನ್ನು ಅವ ಬಿಟ್ಟು ಬಿಡಲಿ.

ತೃಣಮಾಂಸಫಲಾದಾನಾಂ ದೇಶಂ ವ್ಯಾಲಮೃಗದ್ವಿಜಮ್ ।
ಪ್ರಪದ್ಯತಾಂ ಹಿ ಕೈಕೇಯೀ ಸಪುತ್ರಾ ಸಹ ಬಾಂಧವೈಃ ॥೨೪॥

ತೃಣ–ಮಾಂಸ–ಫಲಗಳನ್ನುಣ್ಣುವ ಜಿಂಕೆ–ಹುಲಿ–ಕಪಿಗಳ ಪ್ರದೇಶವಾಗಿ ಕ್ರೂರ ಮೃಗಪಕ್ಷಿಗಳಿಗಾಶ್ರಯವಾಗಿ ಪರಿವರ್ತಿತವಾಗುವ ನಮ್ಮ ನಗರವನ್ನು ಪುತ್ರಮಿತ್ರ-ಬಂಧುಗಳೊಂದಿಗೆ ಕೈಕೇಯಿ ಆಳಲಿ.

ರಾಘವೇಣ ವನೇ ಸರ್ವೇ ಸಹ ವತ್ಸ್ಯಾಮ ನಿರ್ವೃತಾಃ ॥೨೫॥

ನಾವು ಎಲ್ಲರೂ ಶ್ರೀರಾಮನೊಂದಿಗೆ ಸುಖವಾಗಿ ಅರಣ್ಯದಲ್ಲಿಯೇ ವಾಸ ಮಾಡೋಣ.

ಇತ್ಯೇವಂ ವಿವಿಧಾ ವಾಚೋ ನಾನಾಜನಸಮೀರಿತಾಃ ।
ಶುಶ್ರಾವ ರಾಘವಃ ಶ್ರುತ್ವಾ ನ ವಿಚಕ್ರೇಽಸ್ಯ ಮಾನಸಮ್ ॥೨೬॥

ಹೀಗೆಂದು ನಾನಾ ಬಗೆಯಾಗಿ ನಾನಾ ಜನರು ಆಡಿಕೊಳ್ಳುತ್ತಿದ್ದುದನ್ನು ಶ್ರೀರಾಮ ಆಲಿಸಿದ. ಆಲಿಸಿದರೂ ಅವನ ಮನಸ್ಸು ಏನೂ ವಿಕಾರಗೊಳ್ಳಲಿಲ್ಲ.

ಸ ತು ವೇಶ್ಮ ಪಿತುರ್ದೂರಾತ್ ಕೈಲಾಸಶಿಖರಪ್ರಭಮ್।
ಅಭಿಚಕ್ರಾಮ ಧರ್ಮಾತ್ಮಾ ಮತ್ತಮಾತಂಗವಿಕ್ರಮಃ ॥೨೭॥

ಧರ್ಮಾತ್ಮನಾದ ಶ್ರೀರಾಮ ದೂರದಿಂದ ಕೈಲಾಸಶಿಖರದಂತೆ ಬೆಳಗುವ ತಂದೆಯ ಅರಮನೆಯ ಕಡೆಗೆ ಮದ್ದಾನೆ ನಡೆಯುವಂತೆ ಹೆಜ್ಜೆ ಹಾಕಿದ.

ವಿನೀತವೀರಪುರುಷಂ ಸ ಪ್ರವಿಶ್ಯ ನೃಪಾಲಯಮ್ ।
ದದರ್ಶಾವಸ್ಥಿತಂ ದೀನಂ ಸುಮಂತ್ರಮವಿದೂರತಃ ॥೨೮॥

ವಿನೀತರಾದ ವೀರಪುರುಷರಿಂದ ತುಂಬಿದ ಅರಮನೆಯನ್ನು ಪ್ರವೇಶಿಸಿ ಶ್ರೀರಾಮ ದೀನನಾಗಿ ನಿಂತಿದ್ದ ಸುಮಂತ್ರನನ್ನು ಸಮೀಪದಿಂದ ಕಂಡ.

ಪ್ರತೀಕ್ಷಮಾಣೋಽಪಿ ಜನಂ ತದಾರ್ತಂ
ಅನಾರ್ತರೂಪಃ ಪ್ರಹಸನ್ನಿವಾಥ ।
ಜಗಾಮ ರಾಮಃ ಪಿತರಂ ದಿದೃಕ್ಷುಃ
ಪಿತುರ್ನಿದೇಶಂ ವಿಧಿವಚ್ಚಿಕೀರ್ಷುಃ ॥೨೯॥

ಆರ್ತರಾದ ಜನರನ್ನು ಕಂಡೂ ಕೂಡ ತಾನು ಆರ್ತರೂಪನಾಗದೆ ನಗುತ್ತಲೇ ಶ್ರೀರಾಮ ತಂದೆಯ ಆಜ್ಞೆಯನ್ನು ಯಥಾವತ್ತಾಗಿ ನಡೆಸಲು ಬಯಸಿ ತಂದೆಯನ್ನು ನೋಡಲು ನಡೆದ.

ತತ್ಪೂರ್ವಮೈಕ್ಷ್ವಾಕಸುತೋ ಮಹಾತ್ಮಾ
ರಾಮೋ ಗಮಿಷ್ಯನ್ ನೃಪಮಾರ್ತರೂಪಮ್ ।
ವ್ಯತಿಷ್ಠತ ಪ್ರೇಕ್ಷ್ಯ ತದಾ ಸುಮಂತ್ರಂ
ಪಿತುರ್ಮಹಾತ್ಮಾ ಪ್ರತಿಹಾರಣಾರ್ಥಮ್ ॥೩೦॥

ಅದಕ್ಕೆ ಮೊದಲು ಇಕ್ಷ್ವಾಕುವಂಶಜನಾದ ಮಹಾತ್ಮ ರಾಮನು ಆರ್ತರೂಪನಾದ ರಾಜನನ್ನು ಕಾಣಲು ಹೋಗುವುದಕ್ಕಾಗಿ, ಸುಮಂತ್ರನನ್ನು ನೋಡಿ, ತಂದೆಗೆ ತನ್ನ ಆಗಮನವನ್ನು ತಿಳಿಸೆಂದು ಹೇಳಿ ನಿಂತುಕೊಂಡ.

ಪಿತುರ್ನಿದೇಶೇನ ತು ಧರ್ಮವತ್ಸಲೋ
ವನಪ್ರವೇಶೇ ಕೃತಬುದ್ಧಿನಿಶ್ಚಯಃ ।
ಸ ರಾಘವಃ ಪ್ರೇಕ್ಷ್ಯ ಸುಮಂತ್ರಮಬ್ರವೀತ್
ನಿವೇದಯಸ್ವಾಗಮನಂ ನೃಪಾಯ ಮೇ ॥೩೧॥

ಧರ್ಮವತ್ಸಲನಾದ, ತಂದೆಯ ಆಜ್ಞೆಯಂತೆ ಕಾಡಿಗೆ ಹೋಗಲು ಮನಸಿನಲ್ಲಿ ನಿಶ್ಚಯಮಾಡಿಕೊಂಡಿದ್ದ ಶ್ರೀರಾಮ ಸುಮಂತ್ರನನ್ನು ಕಂಡು 'ನನ್ನ ಆಗಮನವನ್ನು ರಾಜನಿಗೆ ತಿಳಿಸು' ಎಂದ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಮೂವತ್ತಮೂರನೇ ಸರ್ಗ ಮುಗಿಯಿತು.

ಚತುಸ್ತ್ರಿಂಶಃ ಸರ್ಗಃ

ಸರ್ಗ – 34

ಶ್ರೀರಾಮನು ಸೀತಾಲಕ್ಷ್ಮಣ ಸಮೇತನಾಗಿ ದಶರಥನ ಬಳಿ ವನವಾಸಕ್ಕೆ ಅನುಜ್ಞೆ ಬೇಡುವುದು. ದಶರಥ ಶೋಕಿಸುವುದು.

ತತಃ ಕಮಲಪತ್ರಾಕ್ಷಃ ಶ್ಯಾಮೋ ನಿರುಪಮೋ ಮಹಾನ್ ।
ಉವಾಚ ರಾಮಸ್ತಂ ಸೂತಂ ಪಿತುರಾಖ್ಯಾಹಿ ಮಾಮಿತಿ ॥೧॥

ಕಮಲದಳ ನಯನ, ಶ್ಯಾಮವರ್ಣ, ನಿರುಪಮ, ಮಹಾತ್ಮನಾದ ಶ್ರೀರಾಮನು 'ತಂದೆಗೆ ನನ್ನಾಗಮವನ್ನು ತಿಳಿಸೆಂ'ದು ಸುಮಂತ್ರನಿಗೆ ನುಡಿದ.

ಸ ರಾಮಪ್ರೇಷಿತಃ ಕ್ಷಿಪ್ರಂ ಸಂತಾಪಕಲುಷೇಂದ್ರಿಯಃ ।
ಪ್ರವಿಶ್ಯ ನೃಪತಿಂ ಸೂತೋ ನಿಃಶ್ವಸಂತಂ ದದರ್ಶ ಹ ॥೨॥

ಶ್ರೀರಾಮನು ತನ್ನನ್ನು ಕಳಿಸಿದೊಡನೆ ಸುಮಂತ್ರ ಸಂತಾಪದಿಂದ ತನ್ನ ಇಂದ್ರಿಯಗಳು ಕಲುಷಗೊಂಡಿದ್ದರೂ ಬೇಗನೆ ಒಳಗೆ ಪ್ರವೇಶಿಸಿ ನಿಟ್ಟುಸಿರು ಬಿಡುತ್ತಿದ್ದ ದಶರಥನನ್ನು ಕಂಡ.

ಉಪರಕ್ತಮಿವಾದಿತ್ಯಂ ಭಸ್ಮಚ್ಛನ್ನಮಿವಾನಲಮ್ ।
ತಟಾಕಮಿವ ನಿಸ್ತೋಯಮಪಶ್ಯಜ್ಜಗತೀಪತಿಮ್ ॥೩॥

ಗ್ರಹಣಕಾಲದ ಸೂರ್ಯನಂತೆ ಬೂದಿಮುಚ್ಚಿದ ಕೆಂಡದಂತೆ ನೀರು ಒಣಗಿರುವ ಕೆರೆಯಂತೆ ದಶರಥನಿದ್ದುದನ್ನು ಸುಮಂತ್ರ ಕಂಡ.

ಆಲೋಕ್ಯ ತಂ ಮಹಾಪ್ರಾಜ್ಞಃ ಪರಮಾಕುಲಚೇತಸಮ್ ।
ರಾಮಮೇವಾನುಶೋಚಂತಂ ಸೂತಃ ಪ್ರಾಂಜಲಿರಾಸದತ್ ॥೪॥

ಮಹಾಪ್ರಾಜ್ಞನಾದ ಸುಮಂತ್ರನು ಶ್ರೀರಾಮನನ್ನೇ ಕುರಿತು ಶೋಕಿಸುತ್ತಿದ್ದ ಅತ್ಯಂತ ಆಕುಲಚಿತ್ತನಾದ ದಶರಥನನ್ನು ಕಂಡು ಕೈಮುಗಿದುಕೊಂಡು ಬಳಿ ಸಾರಿದ.

ತಂ ವರ್ಧಯಿತ್ವಾ ರಾಜಾನಂ ಸೂತಃ ಪೂರ್ವಂ ಜಯಾಶಿಷಾ ।
ಭಯವಿಕ್ಲವಯಾ ವಾಚಾ ಮಂದಯಾ ಶ್ಲಕ್ಷ್ಣಮಬ್ರವೀತ್ ॥೫॥

ಸುಮಂತ್ರನು ಮೊದಲಿಗೆ 'ಜಯವಾಗಲಿ' ಎಂದು ಅಭಿನಂದಿಸಿ, ಮೆಲ್ಲನೆ ಮಿದುವಾಗಿ ಭಯದಿಂದ ನುಡಿದ.

ಅಯಂ ಸ ಪುರುಷವ್ಯಾಘ್ರೋ ದ್ವಾರಿ ತಿಷ್ಠತಿ ತೇ ಸುತಃ ।
ಬ್ರಾಹ್ಮಣೇಭ್ಯೋ ಧನಂ ದತ್ತ್ವಾ ಸರ್ವಂ ಚೈವೋಪಜೀವಿನಾಮ್ ॥೬॥

'ಪುರುಷೋತ್ತಮನಾದ ನಿನ್ನ ಪುತ್ರನು ಬ್ರಾಹ್ಮಣರಿಗೂ ಆಶ್ರಿತ ಜನರಿಗೂ ಎಲ್ಲ ಧನವನ್ನು ನೀಡಿ ಬಾಗಿಲಲ್ಲಿ ಬಂದು ನಿಂತಿದ್ದಾನೆ.'

ಸ ತ್ವಾಂ ಪಶ್ಯತು ಭದ್ರಂ ತೇ ರಾಮಃ ಸತ್ಯಪರಾಕ್ರಮಃ ।
ಸರ್ವಾನ್ ಸುಹೃದ ಆಪೃಚ್ಛ್ಯ ತ್ವಾಮಿದಾನೀಂ ದಿದೃಕ್ಷತೇ ॥೭॥

'ಅವನು ನಿನ್ನನ್ನು ಕಾಣಲಿ, ನಿನಗೆ ಮಂಗಳವಾಗಲಿ. ಸತ್ಯಪರಾಕ್ರಮ ಉಳ್ಳ ರಾಮನು ಎಲ್ಲ ಬಂಧುಮಿತ್ರರ ಅನುಜ್ಞೆಯನ್ನು ಪಡೆದು ಈಗ ನಿನ್ನನ್ನು ಕಾಣಲು ಬಂದಿದ್ದಾನೆ.

ಗಮಿಷ್ಯಂತಂ ಮಹಾರಣ್ಯಂ ತಂ ಪಶ್ಯ ಜಗತೀಪತೇ ।
ವೃತಂ ರಾಜಗುಣೈಃ ಸರ್ವೈರಾದಿತ್ಯಮಿವ ರಶ್ಮಿಭಿಃ ॥೮॥

'ರಾಜನೆ, ಕಿರಣಗಳಿಂದ ತುಂಬಿದ ಸೂರ್ಯನಂತೆ ರಾಜಯೋಗ್ಯವಾದ ಎಲ್ಲ ಗುಣಗಳಿಂದ ತುಂಬಿದ ರಾಮನು ಮಹಾ ಅರಣ್ಯವನ್ನು ಪ್ರವೇಶಿಸಲಿದ್ದಾನೆ. ಅವನನ್ನು ನೋಡು.'

ಸ ಸತ್ಯವಾದೀ ಧರ್ಮಾತ್ಮಾ ಗಾಂಭೀರ್ಯಾತ್ ಸಾಗರೋಪಮಃ ।
ಆಕಾಶ ಇವ ನಿಷ್ಪಂಕೋ ನರೇಂದ್ರಃ ಪ್ರತ್ಯುವಾಚ ತಮ್ ॥೯॥

ಸತ್ಯವಾದಿ, ಧರ್ಮಾತ್ಮ, ಗಾಂಭೀರ್ಯದಲ್ಲಿ ಸಾಗರದಂತೆ, ನಿರ್ಮಲತ್ವದಲ್ಲಿ ಆಕಾಶದಂತೆ ಇರುವ ರಾಜಾ ದಶರಥ ಸುಮಂತ್ರನಿಗೆ ಪ್ರತಿಯಾಗಿ ನುಡಿದ.

ಸುಮಂತ್ರಾನಯ ಮೇ ದಾರಾನ್ ಯೇ ಕೇಚಿದಿಹ ಮಾಮಕಾಃ ।
ದಾರೈಃ ಪರಿವೃತಃ ಸರ್ವೈರ್ದ್ರಷ್ಟುಮಿಚ್ಛಾಮಿ ಧಾರ್ಮಿಕಮ್ ॥೧೦॥

ಸುಮಂತ್ರ, ನನ್ನ ಪತ್ನಿಯರನ್ನೂ ಎಲ್ಲರನ್ನೂ ಇಲ್ಲಿಗೆ ಕರೆದುಕೊಂಡು ಬಾ. ಎಲ್ಲ ಪತ್ನಿಯರೊಡನೆ ಧಾರ್ಮಿಕನಾದ ರಾಮನನ್ನು ನೋಡಲು ಬಯಸುತ್ತೇನೆ.

ಸೋಽಂತಃಪುರಮತೀತ್ಯೈವ ಸ್ತ್ರಿಯಸ್ತಾ ವಾಕ್ಯಮಬ್ರವೀತ್ ।
ಆರ್ಯಾ ಹ್ವಯತಿ ವೋ ರಾಜಾ ಗಮ್ಯತಾಂ ತತ್ರ ಮಾ ಚಿರಮ್ ॥೧೧॥

ಸುಮಂತ್ರನು 'ಅತಿ–ಇತ್ಯ' ಅತಿವೇಗದಿಂದ ಅಂತಃಪುರವನ್ನು ಸೇರಿ 'ಆರ್ಯಾಃ' 'ಆರ್ಯೆಯರೆ, ನಿಮ್ಮನ್ನು ರಾಜನು ಕರೆಯುತ್ತಿದ್ದಾನೆ, ಅಲ್ಲಿಗೆ ಹೋಗಿರಿ, ತಡ ಮಾಡಬೇಡಿರಿ' ಎಂದ.

ಏವಮುಕ್ತಾಃ ಸ್ತ್ರಿಯಃ ಸರ್ವಾಃ ಸುಮಂತ್ರೇಣ ನೃಪಾಜ್ಞಯಾ ।
ಪ್ರಚಕ್ರಮುಸ್ತದ್ಭವನಂ ಭರ್ತುರಾಜ್ಞಾಯ ಶಾಸನಮ್ ॥೧೨॥

ರಾಜಾಜ್ಞೆಯಂತೆ ಸುಮಂತ್ರನು ಹೀಗೆ ಹೇಳಿದಾಗ, ರಾಣಿಯರೆಲ್ಲರೂ ಪತಿಯಾಜ್ಞೆಯನ್ನು ತಿಳಿದು ಅವನ ಮಂದಿರಕ್ಕೆ ಬಂದರು.

ಅರ್ಧಸಪ್ತಶತಾಸ್ತಾಸ್ತು ಪ್ರಮದಾಸ್ತಾಮ್ರಲೋಚನಾಃ ।
ಕೌಸಲ್ಯಾಂ ಪರಿವಾರ್ಯಾಥ ಶನೈರ್ಜಗ್ಮುರ್ಧೃತವ್ರತಾಃ ॥೧೩॥

ವ್ರತನಿಷ್ಠರಾದ ಕೆಂಪುಕಣ್ಣಿನವರಾದ ಮುನ್ನೂರ ಐವತ್ತು ರಾಣಿಯರು ಕೌಸಲ್ಯೆಯನ್ನು ಸುತ್ತುವರಿದು ಮೆಲ್ಲನೆ ನಡೆದರು.

ಆಗತೇಷು ಚ ದಾರೇಷು ಸಮವೇಕ್ಷ್ಯ ಮಹೀಪತಿಃ ।
ಉವಾಚ ರಾಜಾ ತಂ ಸೂತಂ ಸುಮಂತ್ರಾನಯ ಮೇ ಸುತಮ್ ॥೧೪॥

ಪತ್ನಿಯರು ಬಂದುದನ್ನು ಕಂಡು ರಾಜನು ಸಾರಥಿಗೆ ನುಡಿದ 'ಸುಮಂತ್ರ! ನನ್ನ ಮಗನನ್ನು ಕರೆ ತಾ'

ಸ ಸೂತೋ ರಾಮಮಾದಾಯ ಲಕ್ಷ್ಮಣಂ ಮೈಥಿಲೀಂ ತದಾ ।
ಜಗಾಮಾಭಿಮುಖಸ್ತೂರ್ಣಂ ಸಕಾಶಂ ಜಗತೀಪತೇಃ ॥೧೫॥

ಸುಮಂತ್ರನು ರಾಮಲಕ್ಷ್ಮಣಸೀತೆಯರನ್ನು ಕರೆದುಕೊಂಡು ರಾಜನ ಸಂಮುಖಕ್ಕೆ ಬೇಗನೆ ನಡೆದ.

ಸ ರಾಜಾ ಪುತ್ರಮಾಯಾಂತಂ ದೃಷ್ಟ್ವಾ ದೂರಾತ್ ಕೃತಾಂಜಲಿಮ್ ।
ಉತ್ಪಪಾತಾಸನಾತ್ತೂರ್ಣಮಾರ್ತಃ ಸ್ತ್ರೀಜನಸಂವೃತಃ ॥೧೬॥

ರಾಜಾ ದಶರಥನು, ಪುತ್ರನು ಕೈಮುಗಿದುಕೊಂಡು ಬರುವುದನ್ನು ದೂರದಿಂದ ಕಂಡು, ಆರ್ತನಾಗಿ, ರಾಣಿಯರೊಂದಿಗೆ ವೇಗವಾಗಿ ಆಸನದಿಂದ ಎದ್ದುಬಂದ.

ಸೋಽಭಿದುದ್ರಾವ ವೇಗೇನ ರಾಮಂ ದೃಷ್ಟ್ವಾ ವಿಶಾಂಪತಿಃ ।
ತಮಸಂಪ್ರಾಪ್ಯ ದುಃಖಾರ್ತಃ ಪಪಾತ ಭುವಿ ಮೂರ್ಛಿತಃ ॥೧೭॥

ರಾಜನು ರಾಮನನ್ನು ಕಂಡು ವೇಗದಿಂದ ಇದಿರಾಗಿ ಧಾವಿಸಿ ಬಂದ. ಆದರೆ ರಾಮನ ಬಳಿಗೆ ಹೋಗಲಾರದೆ ದುಃಖಾರ್ತನಾಗಿ ಮೈಮರೆತು ನೆಲದಮೇಲೆ ಕುಸಿದು ಬಿದ್ದ.

ತಂ ರಾಮೋಽಭ್ಯಪತತ್ ಕ್ಷಿಪ್ರಂ ಲಕ್ಷ್ಮಣಶ್ಚ ಮಹಾರಥಃ ।
ವಿಸಂಜ್ಞಮಿವ ದುಃಖೇನ ಸಶೋಕಂ ನೃಪತಿಂ ತದಾ ॥೧೮॥

ರಾಮನೂ ಮಹಾರಥನಾದ ಲಕ್ಷ್ಮಣನೂ, ದುಃಖದಿಂದ ಪ್ರಜ್ಞೆತಪ್ಪಿದವನಂತಿದ್ದ ಶೋಕಯುಕ್ತನಾದ ರಾಜನ ಬಳಿಗೆ ಬೇಗನೆ ಧಾವಿಸಿ ಬಂದರು.

ಸ್ತ್ರೀಸಹಸ್ರನಿನಾದಶ್ಚ ಸಂಜಜ್ಞೇ ರಾಜವೇಶ್ಮನಿ ।
ಹಾ ಹಾ ರಾಮೇತಿ ಸಹಸಾ ಭೂಷಣಧ್ವನಿಮೂರ್ಛಿತಃ ॥೧೯॥

ಅರಮನೆಯಲ್ಲಿ 'ಹಾ ರಾಮ ಹಾ ರಾಮ' ಎನ್ನುವ ಸಾವಿರ ಸ್ತ್ರೀಯರ ಕಂಠ ಧ್ವನಿಯೊಂದಿಗೆ ಅವರ ಕೈಬಳೆ ಮುಂತಾದವುಗಳ ಧ್ವನಿ ಸೇರಿತು.

ತಂ ಪರಿಷ್ವಜ್ಯ ಬಾಹುಭ್ಯಾಂ ತಾವುಭೌ ರಾಮಲಕ್ಷ್ಮಣೌ ।
ಪರ್ಯಂಕೇ ಸೀತಯಾ ಸಾರ್ಧಂ ರುದಂತಃ ಸಮವೇಶಯನ್ ॥೨೦॥

ರಾಮಲಕ್ಷ್ಮಣರಿಬ್ಬರೂ ದಶರಥನನ್ನು ಬಾಹುಗಳಿಂದ ತಬ್ಬಿಕೊಂಡು ಸೀತೆಯೊಂದಿಗೆ ಅಳುತ್ತ ಆತನನ್ನು ಮೇಲೆತ್ತಿ ಮಂಚದಲ್ಲಿರಿಸಿದರು.

ಅಥ ರಾಮೋ ಮುಹೂರ್ತೇನ ಲಬ್ಧಸಂಜ್ಞಂ ಮಹೀಪತಿಮ್ ।
ಉವಾಚ ಪ್ರಾಂಜಲಿರ್ಭೂತ್ವಾ ಶೋಕಾರ್ಣವಪರಿಪ್ಲುತಮ್ ॥೨೧॥

ಮುಹೂರ್ತ ಕಳೆದ ಮೇಲೆ ಎಚ್ಚರಗೊಂಡ, ಶೋಕಸಾಗರದಲ್ಲಿ ಮಳುಗಿದ್ದ, ರಾಜನಿಗೆ ರಾಮ ಕೈಮುಗಿದು ನುಡಿದ,

ಆಪೃಚ್ಛೇ ತ್ವಾಂ ಮಹಾರಾಜ ಸರ್ವೇಷಾಮೀಶ್ವರೋಽಸಿ ನಃ ।
ಪ್ರಸ್ಥಿತಂ ದಂಡಕಾರಣ್ಯಂ ಪಶ್ಯ ತ್ವಂ ಕುಶಲೇನ ಮಾಮ್ ॥೨೨॥

'ಮಹಾರಾಜ, ನಿನ್ನ ಅನುಮತಿಯನ್ನು ಬೇಡುತ್ತೇನೆ. ನಮಗೆಲ್ಲರಿಗೂ ನೀನು ಸ್ವಾಮಿಯಾಗಿರುವೆ. ದಂಡಕಾರಣ್ಯಕ್ಕೆ ಹೊರಟಿರುವ ನನ್ನನ್ನು ಸೌಮ್ಯದೃಷ್ಟಿಯಿಂದ ನೋಡು, ಹರಸು.

ಲಕ್ಷ್ಮಣಂ ಚಾನುಜಾನೀಹಿ ಸೀತಾ ಚಾನ್ವೇತಿ ಮಾಂ ವನಮ್ ।
ಕಾರಣೈರ್ಬಹುಭಿಸ್ತಥ್ಯೈರ್ವಾರ್ಯಮಾಣೌ ನ ಚೇಚ್ಛತಃ ॥೨೩॥

ಲಕ್ಷ್ಮಣನಿಗೂ ಅನುಮತಿ ನೀಡು. ಸೀತೆಯೂ ನನ್ನ ಜೊತೆಗೆ ಕಾಡಿಗೆ ಬರುತ್ತಾಳೆ. ಸರಿಯಾದ ಬಹು ಕಾರಣಗಳನ್ನು ಕೊಟ್ಟು ಅವರನ್ನು ತಡೆದರೂ ಅವರು ಒಪ್ಪುತ್ತಿಲ್ಲ.

ಅನುಜಾನೀಹಿ ಸರ್ವಾನ್ನಃ ಶೋಕಮುತ್ಸೃಜ್ಯ ಮಾನದ ।
ಲಕ್ಷ್ಮಣಂ ಮಾಂ ಚ ಸೀತಾಂ ಚ ಪ್ರಜಾಪತಿರಿವಾತ್ಮಜಾನ್ ॥೨೪॥

ಎಲ್ಲರಿಗೂ ಸಮ್ಮಾನ ನೀಡುವವನೆ, ಬ್ರಹ್ಮನು ಮಕ್ಕಳಾದ ಸನಕಾದಿಗಳಿಗೆ ತಪಸ್ಸಿಗೆ ಅನುಮತಿ ನೀಡಿದಂತೆ ನೀನೂ ಶೋಕವನ್ನು ಬಿಟ್ಟು ಲಕ್ಷ್ಮಣನಿಗೂ ನನಗೂ ಸೀತೆಗೂ ಮೂವರಿಗೂ ವನವಾಸಕ್ಕೆ ಅನುಮತಿ ನೀಡು.

ಪ್ರತೀಕ್ಷಮಾಣಮವ್ಯಗ್ರಮನುಜ್ಞಾಂ ಜಗತೀಪತಿಃ ।
ಉವಾಚ ರಾಜಾ ಸಂಪ್ರೇಕ್ಷ್ಯ ವನವಾಸಾಯ ರಾಘವಮ್ ॥೨೫॥

ಒಮ್ಮನಸಿನಿಂದ ವನವಾಸಕ್ಕೆ ಅನುಜ್ಞೆಯನ್ನು ನಿರೀಕ್ಷಿಸುತ್ತಿದ್ದ ರಾಮನನ್ನು ನೋಡಿ ರಾಜಾ ದಶರಥನು ನುಡಿದ.

ಅಹಂ ರಾಘವ ಕೈಕೇಯ್ಯಾ ವರದಾನೇನ ಮೋಹಿತಃ ।
ಅಯೋಧ್ಯಾಯಾಸ್ತ್ವಮೇವಾದ್ಯ ಭವ ರಾಜಾ ನಿಗೃಹ್ಯ ಮಾಮ್ ॥೨೬॥

'ರಾಮ, ನಾನು ಹಿಂದೆ ಎಂದೋ ವಾಗ್ದಾನ ಮಾಡಿದ್ದ ವರದಾನದ ನೆಪದಿಂದ ಕೈಕೇಯಿ ನನ್ನಿಂದ ಶಪಥಮಾಡಿಸಿ ವಂಚಿಸಿದಳು. ಅವಳಿಗೆ ಉತ್ತರ ನೀಡಲಾರದೆ ಶೋಕಪರವಶನಾಗಿ ರಾಜ್ಯಪಾಲನ ಮಾಡಲು ಅಶಕ್ತನಾಗಿದ್ದೇನೆ. ರಾಜನಾಗಿರಲು ಅನರ್ಹನಾಗಿದ್ದೇನೆ. ನನ್ನನ್ನು ಬಂಧಿಸಿ ನೀನು ಸ್ವಸಾಮರ್ಥ್ಯದಿಂದಲೇ ರಾಜನಾಗು. ಅಭಿಷೇಕ ಮಾಡಿಸಿಕೊಳ್ಳು.'

ಏವಮುಕ್ತೋ ನೃಪತಿನಾ ರಾಮೋ ಧರ್ಮಭೃತಾಂ ವರಃ ।
ಪ್ರತ್ಯುವಾಚಾಂಜಲಿಂ ಕೃತ್ವಾ ಪಿತರಂ ವಾಕ್ಯಕೋವಿದಃ ॥೨೭॥

ಹೀಗೆ ರಾಜನು ಹೇಳಿದಾಗ ಧರ್ಮನಿಷ್ಠರಲ್ಲಿ ಶ್ರೇಷ್ಠನಾದ ಮಾತಿನಲ್ಲಿಯೂ ನಿಪುಣನಾದ ರಾಮನು ಕೈಮುಗಿದು ಪ್ರತಿಯಾಗಿ ನುಡಿದ.

ಭವಾನ್ ವರ್ಷಸಹಸ್ರಾಯುಃ ಪೃಥಿವ್ಯಾ ನೃಪತೇ ಪತಿಃ ।
ಅಹಂ ತ್ವರಣ್ಯೇ ವತ್ಸ್ಯಾಮಿ ನ ಮೇ ರಾಜ್ಯಸ್ಯ ಕಾಂಕ್ಷಿತಾ ॥೨೮॥

'ರಾಜನೆ, ನೀನು ಅನೇಕ ಸಾವಿರ ವರ್ಷ ಆಯುಷ್ಯಉಳ್ಳವನಾಗಿ ರಾಜನಾಗಿದ್ದವನು. ಈಗ ನಿನ್ನನ್ನು ಬಂಧನದಲ್ಲಿಡುವುದು ಯುಕ್ತವಲ್ಲ. ನನಗೆ ರಾಜ್ಯದ ಅಪೇಕ್ಷೆಯೂ ಇಲ್ಲ. ಅದರಿಂದ ನಾನು ಕಾಡಿನಲ್ಲಿಯೇ ವಾಸ ಮಾಡುತ್ತೇನೆ.'

ಇಲ್ಲಿ 'ಭವಾನ್ ವರ್ಷಸಹಸ್ರಾಯ' ಎಂದೇ ಪ್ರಚಲಿತಪಾಠವಿದೆ. 'ಸಾವಿರ ವರ್ಷ ನೀನು ರಾಜನಾಗಿರು' ಎಂದು ಈ ಪಾಠದಲ್ಲಿ ರಾಮ ಹೇಳುತ್ತಾನೆ. ಇದನ್ನು ಒಪ್ಪಿದರೆ ರಾಮ ಸುಳ್ಳೆ ಹೇಳಿದನೆಂದಾಗುತ್ತದೆ. ದಶರಥನ ಆಯುಷ್ಯ ಇನ್ನು ಕೇವಲ ಐದು ದಿನವಿತ್ತೆಂದು ಮುಂದೆ ಸ್ಪಷ್ಟವಾಗುತ್ತದೆ.

ಮುಂದಿನ ಶ್ಲೋಕದಲ್ಲಿ—

ಪುನಃ ಪಾದೌ ಗ್ರಹೀಷ್ಯಾಮಿ ಪ್ರತಿಜ್ಞಾಂತೇ ನರಾಧಿಪ ।

'ಹದಿನಾಲ್ಕು ವರ್ಷ ವನವಾಸ ಪ್ರತಿಜ್ಞೆಯನ್ನು ಪೂರೈಸಿದ ಬಳಿಕ ನಾನು ನಿನ್ನ ಪಾದವಂದನೆ ಮಾಡುವೆನು' ಎಂದು ರಾಮ ಹೇಳುವುದು ಸುಳ್ಳಾದೀತೆಂದು ಬಗೆದು ಯುದ್ಧಕಾಂಡದಲ್ಲಿ ರಾಮ ಸ್ವರ್ಗದಿಂದ ದಶರಥನನ್ನು ತರಿಸಿ ಪಾದವಂದನೆ ಮಾಡಿದನೆಂದು ವಾಲ್ಮೀಕಿ ಹೇಳುತ್ತಾರೆ—

ಮಹಾದೇವವಚಃ ಶ್ರುತ್ವಾ ರಾಘವಃ ಸಹಲಕ್ಷ್ಮಣಃ ।
ವಿಮಾನ ಶಿಖರಸ್ಥಸ್ಯ ಪ್ರಣಾಮಮಕರೋತ್ ಪಿತುಃ ॥(ಯುದ್ಧ.119.9)

ಅದರಿಂದ ರಾಮ ಹೇಳುವುದು ಎಂದೂ ಸುಳ್ಳಾಗಲಾರದು. ಅದಕ್ಕೆ 'ಭವಾನ್ ವರ್ಷಸಹಸ್ರಾಯುಃ' ಎಂದೇ ಪಾಠವಿಟ್ಟುಕೊಳ್ಳಬೇಕು. 'ಸಾವಿರಾರು ವರ್ಷ ನೀನು ರಾಜನಾಗಿರಬೇಕು' ಎಂದು ಅದಕ್ಕೆ ಅರ್ಥವಿಟ್ಟುಕೊಳ್ಳದೆ, 'ಸಾವಿರಾರು ವರ್ಷ ನೀನು ರಾಜನಾಗಿದ್ದೆ' ಎಂದು ಅರ್ಥವಿಟ್ಟುಕೊಳ್ಳಬೇಕು ಎಂದು ಶ್ರೀಸತ್ಯಧರ್ಮತೀರ್ಥರ ವ್ಯಾಖ್ಯಾನದಲ್ಲಿ ಸ್ಫುಟವಿದೆ.

ನವ ಪಂಚ ಚ ವರ್ಷಾಣಿ ವನವಾಸೇ ವಿಹೃತ್ಯ ತೇ ।
ಪುನಃ ಪಾದೌ ಗ್ರಹೀಷ್ಯಾಮಿ ಪ್ರತಿಜ್ಞಾಂತೇ ನರಾಧಿಪ ॥೨೯॥

'ಹದಿನಾಲ್ಕು ವರ್ಷ ವನವಾಸದಲ್ಲಿ ವಿಹಾರಮಾಡಿ ಪುನಃ ನಿನ್ನ ಪಾದವಂದನೆ ಮಾಡುತ್ತೇನೆ.'

ಇಲ್ಲಿ 'ವಿಹೃತ್ಯ' ವಿಹಾರಮಾಡಿ ಎಂದರೆ ರಾವಣ ವಧಾದಿಗಳೆಲ್ಲ ನನಗೆ ಬರಿ ಲೀಲಾವಿಹಾರ ಎಂದರ್ಥ.

ರುದನ್ನಾರ್ತಃ ಪ್ರಿಯಂ ಪುತ್ರಂ ಸತ್ಯಪಾಶೇನ ಸಂಯತಃ ।
ಕೈಕೇಯ್ಯಾ ಚೋದ್ಯಮಾನಸ್ತು ಮಿಥೋ ರಾಜಾ ತಮಬ್ರವೀತ್ ॥೩೦॥

ಸತ್ಯಪಾಶದಿಂದ ಬದ್ಧನಾಗಿ ಆರ್ತನಾಗಿ ಅಳುತ್ತ 'ಮಿಥಃ' ರಹಸ್ಯದಲ್ಲಿ ಕೈಕೇಯಿಂದ ಪ್ರೇರಿತನಾಗಿ ದಶರಥ ರಾಮನಿಗೆ ನುಡಿದ.

ಶ್ರೇಯಸೇ ವೃದ್ಧಯೇ ತಾತ ಪುನರಾಗಮನಾಯ ಚ ।
ಗಚ್ಛಸ್ವಾರಿಷ್ಟಮವ್ಯಗ್ರಃ ಪಂಥಾನಮಕುತೋಭಯಮ್ ॥೩೧॥

'ಮಗು, ಒಮ್ಮನಸಿನಿಂದ ಹೋಗು, ನಿನ್ನ ಮಾರ್ಗವು ಯಾವುದೇ ಅಪಾಯ-ದಿಂದ ರಹಿತವಾಗಿರಲಿ. ವಿಘ್ನ ಬಾರದಿರಲಿ. ಪುನಃ ಹಿಂತಿರುಗಿ ಬಾ. ಶ್ರೇಯಸ್ಸಾಗಲಿ ಸುಖಸಮೃದ್ಧಿ ಉಂಟಾಗಲಿ.'

ನ ಹಿ ಸತ್ಯಾತ್ಮನಸ್ತಾತ ಧರ್ಮಾಭಿಮನಸಸ್ತವ ।
ವಿನಿವರ್ತಯಿತುಂ ಬುದ್ಧಿಃ ಶಕ್ಯತೇ ರಘುನಂದನ ॥೩೨॥

'ಮಗು ಶ್ರೀರಾಮ, ಸತ್ಯಸ್ವಭಾವದವನು ಧರ್ಮನಿಷ್ಠ ಮನಸಿನವನು ನೀನು. ನಿನ್ನ ಬುದ್ಧಿಯನ್ನು ತಿರುಗಿಸಲು ಶಕ್ಯವಿಲ್ಲ.'

ಅದ್ಯ ತ್ವಿದಾನೀಂ ರಜನೀಂ ಪುತ್ರ ಮಾ ಗಚ್ಛ ಸರ್ವಥಾ ।
ಏಕಾಹಂ ದರ್ಶನೇನಾಪಿ ಸಾಧು ತಾವಚ್ಚರಾಮ್ಯಹಮ್ ॥೩೩॥

'ಆದರೆ ಈ ರಾತ್ರಿಯಲ್ಲಿ ಮಾತ್ರ, ಮಗು, ನೀನು ಸರ್ವಥಾ ಪ್ರಯಾಣ ಮಾಡಬೇಡ. ಒಂದು ದಿನವಾದರೂ ನಿನ್ನ ದರ್ಶನದಿಂದ 'ಸಾಧು' ಸುಖವನ್ನು ಅನುಭವಿಸುತ್ತೇನೆ.'

ಮಾತರಂ ಮಾಂ ಚ ಸಂಪಶ್ಯನ್ ವಸೇಮಾಮದ್ಯ ಶರ್ವರೀಮ್ ।
ತರ್ಪಿತಃ ಸರ್ವಕಾಮೈಸ್ತ್ವಂ ಶ್ವಃ ಕರ್ತ್ಯೇ ಸಾಧಯಿಷ್ಯಸಿ ॥೩೪॥

ತಾಯಿಯನ್ನೂ ನನ್ನನ್ನೂ ನೋಡುತ್ತ ಈ ರಾತ್ರಿ ಇಲ್ಲಿ ವಾಸ ಮಾಡು. ಈ ರಾತ್ರಿ ಎಲ್ಲ ಅಭೀಷ್ಟಗಳನ್ನು ಪಡೆದು ತೃಪ್ತನಾಗಿ ನಾಳೆ ಬೆಳಿಗ್ಗೆ ಪ್ರಯಾಣ ಮಾಡು.

ದುಷ್ಕರಂ ಕ್ರಿಯತೇ ಪುತ್ರ ಸರ್ವಥಾ ರಾಘವ ತ್ವಯಾ ।
ಮತ್ಪ್ರಿಯಾರ್ಥಂ ಪ್ರಿಯಾಂಸ್ತ್ಯಕ್ತ್ವಾ ಯದ್ಯಾಸಿ ವಿಜನಂ ವನಮ್ ॥೩೫॥

ಮಗು ರಾಮ, ನೀನು ಸರ್ವಥಾ ದುಷ್ಕರವಾದ ವನವಾಸ ಮಾಡುತ್ತಿರುವೆ. ನನಗೆ ಪರಲೋಕದಲ್ಲಿ ಪ್ರಿಯ ಉಂಟು ಮಾಡುವುದಕ್ಕಾಗಿ ನಿನಗೆ ಪ್ರಿಯರಾದ ಬಂಧುಮಿತ್ರರನ್ನೆಲ್ಲ ತ್ಯಜಿಸಿ ನಿರ್ಜನವಾದ ಅರಣ್ಯಕ್ಕೆ ಹೋಗುತ್ತಿರುವೆ.

ನ ಚೈತನ್ಮೇ ಪ್ರಿಯಂ ಪುತ್ರ ಶಪೇ ಸತ್ಯೇನ ರಾಘವ ।
ಛನ್ನಯಾ ಚಲಿತಸ್ತ್ವಸ್ಮಿ ಸ್ತ್ರಿಯಾ ಛನ್ನಾಗ್ನಿಕಲ್ಪಯಾ ॥೩೬॥

ಇದು ನನಗೆ ಇಷ್ಟವಲ್ಲ, ಮಗು ರಾಮ, ಸತ್ಯದ ಮೇಲೆ ಆಣೆ ಇಟ್ಟು ಹೇಳುತ್ತೇನೆ. ಬೂದಿಮುಚ್ಚಿದ ಕೆಂಡದಂತಿರುವ ಗೂಢವಾದ ದುರುದ್ದೇಶವಿಟ್ಟು ಕೊಂಡಿರುವ ಕೈಕೇಯಿ ನನ್ನನ್ನು ಸತ್‌ಸಂಕಲ್ಪದಿಂದ ವಿಚಲಿತಗೊಳಿಸಿದಳು.

ವಂಚನಾ ಯಾ ತು ಲಬ್ಧಾ ಮೇ ತಾಂ ತ್ವಂ ನಿಸ್ತರ್ತುಮಿಚ್ಛಸಿ ।
ಅನಯಾ ವೃತ್ತಸಾದಿನ್ಯಾ ಕೈಕೇಯ್ಯಾಭಿಪ್ರಚೋದಿತಃ ॥೩೭॥

ನಾನು ಎಂದೋ ಒಂದು ಸಾಮಾನ್ಯವಾಗಿ ವಾಗ್ದಾನ ಮಾಡಿದ್ದ ವರವನ್ನು ಈಗ ದುರುಪಯೋಗಪಡಿಸಿಕೊಂಡು ಕೈಕೇಯಿ ನನಗೆ ಮಹಾ ವಂಚನೆ ಮಾಡಿದ್ದಾಳೆ. ಕುಲಾಚಾರ ನಾಶಮಾಡುತ್ತಿರುವ ಆ ಕೈಕೇಯಿಯಿಂದ ನೀನೂ ಪ್ರೇರಿತನಾಗಿ ಅವಳ ವಂಚನೆಯ ಮಾತನ್ನು ನಡೆಸಿಕೊಡಲು ಬಯಸುವಿ.

ನ ಚೈತದಾಶ್ಚರ್ಯತಮಂ ಯತ್ತ್ವಂ ಜ್ಯೇಷ್ಠಃ ಸುತೋ ಮಮ ।
ಅಪಾನೃತಕಥಂ ಪುತ್ರ ಪಿತರಂ ಕರ್ತುಮಿಚ್ಛಸಿ ॥೩೮॥

ನೀನು ನನ್ನ ಜ್ಯೇಷ್ಠಪುತ್ರ ಗುಣದಲ್ಲಿಯೂ ಜ್ಯೇಷ್ಠ. ಅದರಿಂದ ತಂದೆಯನ್ನು ಸುಳ್ಳು ಹೇಳುವವನಲ್ಲವೆಂದು ಸಾಬೀತು ಮಾಡಲು ಬಯಸಿರುವೆ. ಇದರಲ್ಲಿ ಅತಿ ಆಶ್ಚರ್ಯವಿಲ್ಲ.

ಅಥ ರಾಮಸ್ತಥಾ ಶ್ರುತ್ವಾ ಪಿತುರಾರ್ತಸ್ಯ ಭಾಷಿತಮ್ ।
ಲಕ್ಷ್ಮಣೇನ ಸಹ ಭ್ರಾತ್ರಾ ದೀನೋ ವಚನಮಬ್ರವೀತ್ ॥೩೯॥

ಆರ್ತನಾದ ತಂದೆ ಹೇಳಿದ ಎಲ್ಲ ಮಾತನ್ನು ಕೇಳಿ ರಾಮ ದೀನನಾಗಿ ನುಡಿದ. ಲಕ್ಷ್ಮಣನೂ ಅದಕ್ಕೆ ದನಿಗೂಡಿಸಿದ.

ಪ್ರಾಪ್ಸ್ಯಾಮಿ ಯಾನದ್ಯ ಗುಣಾನ್ ಕೋ ಮೇ ಶ್ವಸ್ತಾನ್ ಪ್ರದಾಸ್ಯತಿ ।
ಅಪಕ್ರಮಣಮೇವಾತಃ ಸರ್ವಕಾಮೈರಹಂ ವೃಣೇ ॥೪೦॥

'ಈಗಲೆ ಕಾಡಿಗೆ ಹೊರಡುವುದರಿಂದ ಪಿತೃವಾಕ್ಯ ಪರಿಪಾಲನ ಮುಂತಾದ ಯಾವ ಗುಣಗಳನ್ನು ನಾನು ಸಾಧಿಸಿಕೊಳ್ಳುವೆನೋ ಅವುಗಳನ್ನು ನಾಳೆ ಹೊರಡು-ವುದರಿಂದ ಯಾರು ಕೊಡಬಲ್ಲ? ಅದರಿಂದ ಈ ರಾತ್ರಿ ಎಲ್ಲ ಅಭೀಷ್ಟಗಳನ್ನು ಪೂರೈಸಿಕೊಳ್ಳುವುದಕ್ಕಿಂತಲೂ ಈಗಲೆ ಕಾಡಿಗೆ ಹೊರಡುವುದನ್ನೇ ನಾನು ಇಷ್ಟಪಡುತ್ತೇನೆ.'

ಇಯಂ ಸರಾಷ್ಟ್ರಾ ಸಜನಾ ಧನಧಾನ್ಯಸಮಾಕುಲಾ ।
ಮಯಾ ವಿಸೃಷ್ಟಾ ವಸುಧಾ ಭರತಾಯ ಪ್ರದೀಯತಾಮ್ ॥೪೧॥

ರಾಷ್ಟ್ರದಿಂದ ಜನತೆಯಿಂದ ಕೂಡಿ ಧನಧಾನ್ಯ ಸಮೃದ್ಧವಾಗಿರುವ ಈ ಭೂಮಿಯನ್ನು ನಾನು ಪರಿತ್ಯಜಿಸಿದ್ದೇನೆ. ಅದನ್ನು ಭರತನಿಗೆ ನೀಡು.

ವನವಾಸಕೃತಾ ಬುದ್ಧಿರ್ನ ಚ ಮೇಽದ್ಯ ಚಲಿಷ್ಯತಿ ।
ಯಸ್ತುಷ್ಟೇನ ವರೋ ದತ್ತಃ ಕೈಕೇಯ್ಯೈ ವರದ ತ್ವಯಾ ।
ದೀಯತಾಂ ನಿಖಿಲೇನೈವ ಸತ್ಯಸ್ತ ್ವಂ ಭವ ಪಾರ್ಥಿವ ॥೪೨॥

ವನವಾಸ ವಿಷಯದಲ್ಲಿ ನಾನು ಕೈಗೊಂಡ ನಿರ್ಧಾರ ಬದಲಾಗುವುದಿಲ್ಲ. ಹಿಂದೆ ನೀನು ಸಂತೋಷದಿಂದ ಕೈಕೇಯಿಗೆ ಕೊಟ್ಟಿದ್ದ ವರವನ್ನು ಈಗ ಪೂರ್ತಿಯಾಗಿಯೇ ಕೊಟ್ಟುಬಿಡು. ನಿನ್ನ ಮಾತಿಗೆ ನೀನು ತಪ್ಪದಿರು.

ಅಹಂ ನಿದೇಶಂ ಭವತೋ ಯಥೋಕ್ತಮನುಪಾಲಯನ್ ।
ಚತುರ್ದಶ ಸಮಾ ವತ್ಸ್ಯೇ ವನೇ ವನಚರೈಃ ಸಹ ॥೪೩॥

ನಾನು ನಿನ್ನ ಆದೇಶವನ್ನು ಯಥಾವತ್ತಾಗಿ ನಡೆಸುತ್ತ ಹದಿನಾಲ್ಕು ವರ್ಷಕಾಲ ವನವಾಸಿಗಳೊಂದಿಗೆ ಕಾಡಿನಲ್ಲಿ ವಾಸ ಮಾಡುವೆನು.

ಮಾ ವಿಮರ್ಶೋ ವಸುಮತೀ ಭರತಾಯ ಪ್ರದೀಯತಾಮ್ ॥೪೪॥

ಏನೂ ಆಲೋಚನೆ ಮಾಡುವುದು ಬೇಡ. ಭರತನಿಗೆ ರಾಜ್ಯವನ್ನು ಕೊಟ್ಟು ಬಿಡು.

ನ ಹಿ ಮೇ ಕಾಂಕ್ಷಿತಂ ರಾಜ್ಯಂ ಸುಖಮಾತ್ಮನಿ ವಾ ಪ್ರಿಯಮ್ ।
ಯಥಾನಿದೇಶಂ ಕರ್ತುಂ ವೈ ತವೈವ ರಘುನಂದನ ॥೪೫॥

ನನ್ನ ಸುಖವನ್ನಾಗಲಿ ನನ್ನವರ ಸಂತೋಷವನ್ನಾಗಲಿ ಮನಸ್ಸಿನಲ್ಲಿಟ್ಟುಕೊಂಡು ರಾಜ್ಯವನ್ನು ನಾನು ಬಯಸಲಿಲ್ಲ. ನೀನು ಆದೇಶಿಸಿದೆ ಎಂದೇ ಅದನ್ನು ನಡೆಸುವುದಕ್ಕಾಗಿ ಬಯಸಿದೆನಷ್ಟೆ.

ಅಪಗಚ್ಛತು ತೇ ದುಃಖಂ ಮಾ ಭೂರ್ಬಾಷ್ಪಪರಿಪ್ಲುತಃ ।
ನ ಹಿ ಕ್ಷುಭ್ಯತಿ ದುರ್ಧರ್ಷಃ ಸಮುದ್ರಃ ಸರಿತಾಂ ಪತಿಃ ॥೪೬॥

ನಿನ್ನ ದುಃಖ ದೂರವಾಗಲಿ. ಕಣ್ಣೀರಿನಲ್ಲಿ ಮುಳುಗಬೇಡ. ಯಾರಿಗೂ ಮಣಿಸಲಾಗದ, ನದಿಗಳಿಗೆ ಪತಿಯಾದ, ಸಾಗರ ಕ್ಷೋಭೆಗೊಳ್ಳುವುದಿಲ್ಲ.

ನೈವಾಹಂ ರಾಜ್ಯಮಿಚ್ಛಾಮಿ ನ ಸುಖಂ ನ ಚ ಮೈಥಿಲೀಮ್ ।
ನೈವ ಸರ್ವಾನಿಮಾನ್ ಕಾಮಾನ್ನ ಸ್ವರ್ಗಂ ನೈವ ಜೀವಿತಮ್ ॥೪೭॥

ನನಗೆ ಸರ್ವಥಾ ರಾಜ್ಯದ ಮೇಲೆ ಆಸೆಯಿಲ್ಲ, ಸುಖದ ಆಸೆಯಿಲ್ಲ, ಸೀತೆಯ ಮೇಲೂ ಆಸೆ ಇಲ್ಲ. ಇವಾವುದನ್ನೂ ನನ್ನ ಸುಖಕ್ಕಾಗಿ ನಾನು ಬಯಸುವುದಿಲ್ಲ. ಸ್ವರ್ಗವೂ ಬೇಡ, ಬದುಕೂ ಬೇಡ.

ತ್ವಾಮಹಂ ಸತ್ಯಮಿಚ್ಛಾಮಿ ನಾನೃತಂ ಪುರುಷರ್ಷಭ ।
ಪ್ರತ್ಯಕ್ಷಂ ತವ ಸತ್ಯೇನ ಸುಕೃತೇನ ಚ ತೇ ಶಪೇ ॥೪೮॥

ಪುರುಷೋತ್ತಮ, ನೀನು ಸತ್ಯವಾದಿಯಾಗಿರಬೇಕು. ಸುಳ್ಳನೆನಿಸಬಾರದು ಎಂಬುದೊಂದೇ ನನ್ನಾಸೆ. ನಿನ್ನೆದುರಿಗೇ ನಾನು ಹೀಗೆ ಸತ್ಯದ ಮೇಲೆ ಸುಕೃತದ ಮೇಲೆ ಆಣೆಯಿಟ್ಟು ಹೇಳುತ್ತಿದ್ದೇನೆ.

ನ ಚ ಶಕ್ಯಂ ಮಯಾ ತಾತ ಸ್ಥಾತುಂ ಕ್ಷಣಮಪಿ ಪ್ರಭೋ ।
ನ ಶೋಕಂ ಧಾರಯಸ್ವೈನಂ ನ ಹಿ ಮೇಽಸ್ತಿ ವಿಪರ್ಯಯಃ ॥೪೯॥

ತಾತ, ಪ್ರಭು, ನನಗೆ ಒಂದುಕ್ಷಣವೂ ಇಲ್ಲಿರಲು ಸಾಧ್ಯವಿಲ್ಲ. ಸುಮ್ಮನೆ

ಶೋಕವನ್ನು ಮನಸ್ಸಿನಲ್ಲಿಟ್ಟುಕೊಳ್ಳಲೆಬೇಡ. ವನವಾಸ ಬೇಡವೆನ್ನುವ ಬುದ್ಧಿ ನನಗೆ ಸರ್ವಥಾ ಬರಲಾರದು.

ಅರ್ಥಿತೋ ಹ್ಯಸ್ಮಿ ಕೈಕೇಯ್ಯಾ ವನಂ ಗಚ್ಛೇತಿ ರಾಘವ ।
ಮಯಾ ಚೋಕ್ತಂ ವ್ರಜಾಮೀತಿ ತತ್ ಸತ್ಯಮನುಪಾಲಯೇ ॥೫೦॥

ಕೈಕೇಯಿ ನನ್ನನ್ನು ಕಾಡಿಗೆ ಹೋಗೆಂದು ಕೇಳಿಕೊಂಡಳು. ನಾನು ಹೋಗುವೆ-ನೆಂದೆ. ಆ ಮಾತನ್ನು ಸತ್ಯವಾಗುವಂತೆ ನಾನು ಕಾಪಾಡುತ್ತೇನೆ.

ಮಾ ಚೋತ್ಕಂಠಾಂ ಕೃಥಾ ದೇವ ವನೇ ರಂಸ್ಯಾಮಹೇ ವಯಮ್ ।
ಪ್ರಶಾಂತಹರಿಣಾಕೀರ್ಣೇ ನಾನಾಶಕುನನಾದಿತೇ ॥೫೧॥

ದೇವ, ನಮ್ಮನ್ನು ತಡೆಯಲು ಉತ್ಕಂಠಿತನಾಗಬೇಡ. ಪ್ರಶಾಂತವಾದ ಜಿಂಕೆಗಳ ಓಡಾಟ, ನಾನಾ ಪಕ್ಷಿಗಳ ಧ್ವನಿಗಳಿಂದ ಯುಕ್ತವಾದ ಅರಣ್ಯದಲ್ಲಿ ನಾವು ಸುಖ-ವಾಗಿಯೇ ಇರುತ್ತೇವೆ.

ಪಿತಾ ಹಿ ದೈವತಂ ತಾತ ದೇವತಾನಾಮಪಿ ಸ್ಮೃತಮ್ ।
ತಸ್ಮಾದ್ದೈವತಮಿತ್ಯೇವ ಕರಿಷ್ಯಾಮಿ ಪಿತುರ್ವಚಃ ॥೫೨॥

ದೇವತೆಗಳಿಗೂ ಕೂಡ ಪಿತನು ದೇವತೆ ಎಂದು ಸ್ಮೃತಿ ಪುರಾಣಗಳು ಹೇಳುತ್ತವೆ. ಅದರಿಂದ ನೀನು ನಮಗೆ ದೇವತೆ ಎಂದೇ ನಿನ್ನ ಮಾತನ್ನು ನಡೆಸುತ್ತೇನೆ.

ಚತುರ್ದಶಸು ವರ್ಷೇಷು ಗತೇಷು ನರಸತ್ತಮ ।
ಪುನರ್ದ್ರಕ್ಷ್ಯಸಿ ಮಾಂ ಪ್ರಾಪ್ತಂ ಸಂತಾಪೋಽಯಂ
ವಿಮುಚ್ಯತಾಮ್ ॥೫೩॥

ಹದಿನಾಲ್ಕು ವರ್ಷಗಳು ಕಳೆದಾಗ ಪುನಃ ನಾನು ಬರುವುದನ್ನು ನೀನು ನೋಡುವೆ, ಈ ಸಂತಾಪವನ್ನು ಬಿಟ್ಟುಬಿಡು.

ಯೇನ ಸಂಸ್ತಂಭನೀಯೋಽಯಂ ಸರ್ವೋ ಬಾಷ್ಪಗಲೋ ಜನಃ ।
ಸ ತ್ವಂ ಪುರುಷಶಾರ್ದೂಲ ಕಿಮರ್ಥಂ ವಿಕ್ರಿಯಾಂ ಗತಃ ॥೫೪॥

ಎಲ್ಲ ಜನ ಬಾಷ್ಪದಿಂದ ಗದ್ಗದಿತರಾಗಿದ್ದಾರೆ. ಅವರ ಕಣ್ಣೀರನ್ನು ನಿಲ್ಲಿಸ ಬೇಕಾದವನು, ಪುರುಷೋತ್ತಮ! ನೀನು. ನೀನೆ ಏಕೆ ಉದ್ವೇಗಗೊಳ್ಳುತ್ತಿರುವೆ?

ಪುರಂ ಚ ರಾಷ್ಟ್ರಂ ಚ ಮಹೀ ಚ ಕೇವಲಾ
ಮಯಾ ನಿಸೃಷ್ಟಾ ಭರತಾಯ ದೀಯತಾಮ್ ।
ಅಹಂ ನಿದೇಶಂ ಭವತೋಽನುಪಾಲಯನ್
ವನಂ ಗಮಿಷ್ಯಾಮಿ ಚಿರಾಯ ಸೇವಿತುಮ್ ॥೫೫॥

ಪುರವನ್ನು ರಾಷ್ಟ್ರವನ್ನು ಸಮಸ್ತ ಪೃಥಿವಿಯನ್ನು ನಾನು ಪರಿತ್ಯಜಿಸಿದ್ದೇನೆ, ಅದನ್ನು ಭರತನಿಗೆ ನೀಡು. ನಾನು ನಿನ್ನ ಆದೇಶವನ್ನು ಪಾಲಿಸುತ್ತ ಬಹುಕಾಲ ವನವಾಸ ಮಾಡಲು ಹೋಗುವೆನು.

ಮಯಾ ನಿಸೃಷ್ಟಾಂ ಭರತೋ ಮಹೀಮಿಮಾಂ
ಸಶೈಲಖಂಡಾಂ ಸಪುರಾಂ ಸಕಾನನಾಮ್ ।
ಶಿವಾಂ ಸುಸೀಮಾಮನುಶಾಸ್ತು ಕೇವಲಂ
ತ್ವಯಾ ಯದುಕ್ತಂ ನೃಪತೇ ತಥಾಸ್ತು ತತ್ ॥೫೬॥

ನಾನು ಪರಿತ್ಯಜಿಸಿರುವ ಪರ್ವತಪ್ರದೇಶ, ನಗರ ಅರಣ್ಯಗಳಿಂದ ಯುಕ್ತವಾದ ಸಮುದ್ರ ಪರ್ಯಂತವಾದ ಭವ್ಯವಾದ ಈ ಭೂಮಿಯನ್ನು ಕೇವಲ ಭರತನು ಆಳಲಿ. ನೀನು ಕೈಕೇಯಿಗೆ ಮಾತುಕೊಟ್ಟಂತೆಯೇ ನಡೆಯಲಿ.

ನ ಮೇ ತಥಾ ಪಾರ್ಥಿವ ಧೀಯತೇ ಮನೋ
ಮಹತ್ಸು ಕಾಮೇಷು ನ ಚಾತ್ಮನಃ ಪ್ರಿಯೇ ।
ಯಥಾ ನಿದೇಶೇ ತವ ಶಿಷ್ಟಸಂಮತೇ
ವ್ಯಪೈತು ದುಃಖಂ ತವ ಮತ್ಕೃತೇಽನಘ ॥೫೭॥

ನನ್ನ ಮನಸ್ಸು ಸಜ್ಜನ ಸಮ್ಮತವಾದ ನಿನ್ನಾಜ್ಞೆಯನ್ನು ನಡೆಸುವುದರಲ್ಲಿ ನೆಲೆಸು-ವಂತೆ, ಮಹಾಭೋಗ್ಯವಸ್ತುಗಳಲ್ಲಾಗಲಿ ನನ್ನ ಸಂತೋಷದಲ್ಲಾಗಲಿ ನೆಲೆಸುವುದಿಲ್ಲ. ನನಗಾಗಿ ನೀನು ಮರುಗುವುದು ಬೇಡ.

ತದದ್ಯ ನೈವಾನಘ ರಾಜ್ಯಮವ್ಯಯಂ
ನ ಸರ್ವಕಾಮಾನ್ನ ಸುಖಂ ನ ಮೈಥಿಲೀಮ್ ।
ನ ಜೀವಿತಂ ತ್ವಾಮನೃತೇನ ಯೋಜಯನ್
ವೃಣೇಯ ಸತ್ಯಂ ವ್ರತಮಸ್ತು ತೇ ತಥಾ ॥೫೮॥

ನಿನ್ನನ್ನು ಸುಳ್ಳನನ್ನಾಗಿಸಿ, ನಾಶರಹಿತವಾದ ರಾಜ್ಯ , ಸಮಸ್ತ ಭೋಗಭಾಗ್ಯ, ಸುಖ, ಸೀತೆ ನನ್ನ ಬದುಕು ಇವಾವುದನ್ನೂ ನಾನು ವರಿಸಲಾರೆ. ನಿನ್ನ ಪ್ರತಿಜ್ಞಾ ಪಾಲನ ವ್ರತವೇ ಸತ್ಯವಾಗಿ ಪೂರೈಸಲಿ.

ಫಲಾನಿ ಮೂಲಾನಿ ಚ ಭಕ್ಷಯನ್ ವನೇ
ಗಿರೀಂಶ್ಚ ಪಶ್ಯನ್ ಸರಿತಃ ಸರಾಂಸಿ ಚ ।
ವನಂ ಪ್ರವಿಶ್ಯೈವ ವಿಚಿತ್ರಪಾದಪಂ
ಸುಖೀ ಭವಿಷ್ಯಾಮಿ ತವಾಸ್ತು ನಿರ್ವೃತಿಃ ॥೫೯॥

ಕಾಡಿನಲ್ಲಿ ಫಲ ಮೂಲಗಳನ್ನು ಉಣ್ಣುತ್ತ ಪರ್ವತ ನದಿ ಸರೋವರಗಳನ್ನು ವೀಕ್ಷಿಸುತ್ತ ವಿಚಿತ್ರ ವೃಕ್ಷಗಳೇ ತುಂಬಿದ ಕಾಡನ್ನು ಪ್ರವೇಶಿಸಿ ಸುಖಿಯಾಗಿಯೇ ಇರುತ್ತೇನೆ. ನೀನು ನೆಮ್ಮದಿಯಿಂದಿರು.

ಏವಂ ಸ ರಾಜಾ ವ್ಯಸನಾಭಿಪನ್ನಃ
ಶೋಕೇನ ದುಃಖೇನ ಚ ತಾಪ್ಯಮಾನಃ ।
ಆಲಿಂಗ್ಯ ಪುತ್ರಂ ಸುವಿನಷ್ಟಸಂಜ್ಞೋ
ಮೋಹಂ ಗತೋ ನೈವ ಚಚೇಷ್ಟ ಕಿಂಚಿತ್ ॥೬೦॥

ಹೀಗೆ ಶ್ರೀರಾಮ ಸಂತೈಸಿದರೂ ದಶರಥ ಇನ್ನೂ ವ್ಯಸನದಲ್ಲಿ ಮುಳುಗಿಯೆ ಇದ್ದ. ಶೋಕ ದುಃಖಗಳಿಂದ ಬೇಯುತ್ತಲೆ ಇದ್ದ. ಅದರಿಂದ ಮಗನನ್ನು ಆಲಿಂಗಿಸಿ ಮೈಮರೆತು ಮೂರ್ಛೆ ಹೊಂದಿದ. ನಿಶ್ಚೇಷ್ಟನಾದ.

ದೇವ್ಯಸ್ತತಃಸಂರುರುದುಃ ಸಮೇತಾಃ
ತಾಂ ವರ್ಜಯಿತ್ವಾ ನರದೇವಪತ್ನೀಮ್।
ರುದನ್ ಸುಮಂತ್ರೋಽಪಿ ಜಗಾಮ ಮೂರ್ಚ್ಛಾಂ
ಹಾಹಾಕೃತಂ ತತ್ರ ಬಭೂವ ಸರ್ವಮ್ ॥೬೧॥

ಕೈಕೇಯಿಯು ಹೊರತಾಗಿ ಎಲ್ಲ ರಾಣಿಯರೂ ಗೋಳಿಟ್ಟರು. ಸುಮಂತ್ರನು ರೋದಿಸುತ್ತ ಮೂರ್ಛೆ ಹೊಂದಿದ. ಅರಮನೆ ಇಡಿ ಹಾಹಾಕಾರ ಮಾಡಿತು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಮೂವತ್ತನಾಲ್ಕನೇ ಸರ್ಗ ಮುಗಿಯಿತು.

ಪಂಚತ್ರಿಂಶಃ ಸರ್ಗಃ

ಸರ್ಗ – 35

ಸುಮಂತ್ರನು ಕೈಕೇಯಿಯನ್ನು ನಿಂದಿಸುವುದು.

ತತೋ ನಿರ್ಧೂಯ ಸಹಸಾ ಶಿರೋ ನಿಃಶ್ವಸ್ಯ ಚಾಸಕೃತ್ ।
ಪಾಣೌ ಪಾಣೌ ವಿನಿಷ್ಪಿಷ್ಯ ದಂತಾನ್ ಕಟಕಟಾಪ್ಯ ಚ ॥೧॥

ಲೋಚನೇ ಕೋಪಸಂರಕ್ತೇ ವರ್ಣಂ ಪೂರ್ವೋಚಿತಂ ಜಹತ್ ।
ಕೋಪಾಭಿಭೂತಃ ಸಹಸಾ ಸಂತಾಪಮಶುಭಂ ಗತಃ ॥೨॥

ಸುಮಂತ್ರ ಎಚ್ಚೆತ್ತು ವೇಗವಾಗಿ ತಲೆಯಾಡಿಸಿ ಪುನಃ ಪುನಃ ನಿಟ್ಟುಸಿರಿಟ್ಟು ಕೈಕೈ ಹಿಸುಕುತ್ತ ಹಲ್ಲುಕಡಿಯುತ್ತ ಕೋಪದಿಂದ ಕಣ್ಣುಕೆಂಪಗೆ ಮಾಡಿಕೊಂಡು ಹಿಂದೆ ಇದ್ದ ಮೈಬಣ್ಣವನ್ನೇ ಬಿಟ್ಟು ಕೋಪಪರವಶನಾಗಿ ತೀವ್ರವಾಗಿ ಮೈಯೆಲ್ಲ ಉರಿಯ-ತೊಡಗಿದ.

ಮನಃ ಸಮೀಕ್ಷಮಾಣಶ್ಚ ಸೂತೋ ದಶರಥಸ್ಯ ಸಃ ।
ಕಂಪಯನ್ನಿವ ಕೈಕೇಯ್ಯಾ ಹೃದಯಂ ವಾಕ್ಶರೈಃ ಶಿತೈಃ ॥೩॥

ವಾಕ್ಯವಜ್ರೈರನುಪಮೈರ್ನಿರ್ಭಿಂದನ್ನಿವ ಚಾಶುಗೈಃ ।
ಕೈಕೇಯ್ಯಾಃ ಸರ್ವಮರ್ಮಾಣಿ ಸುಮಂತ್ರಃ ಪ್ರತ್ಯಭಾಷತ ॥೪॥

ಸುಮಂತ್ರನು ದಶರಥನ ಮನಃಸ್ಥಿತಿಯನ್ನು ಚೆನ್ನಾಗಿ ಅರ್ಥಮಾಡಿಕೊಂಡು ತೀಕ್ಷ್ಣವಾದ ವಾಗ್ಬಾಣಗಳಿಂದ ಕೈಕೇಯಿಯ ಹೃದಯವನ್ನು ನಡುಗಿಸುತ್ತ, ವೇಗದ ವಜ್ರಾಯುಧದಂಥ ಅನುಪಮವಾದ ಮಾತುಗಳಿಂದ ಅವಳ ಎಲ್ಲ ಮರ್ಮಗಳನ್ನೂ ಭೇದಿಸುತ್ತ ನುಡಿದ.

ಯಸ್ಯಾಸ್ತವ ಪತಿಸ್ತ್ಯಕ್ತೋ ರಾಜಾ ದಶರಥಃ ಸ್ವಯಮ್ ।
ಭರ್ತಾ ಸರ್ವಸ್ಯ ಜಗತಃ ಸ್ಥಾವರಸ್ಯ ಚರಸ್ಯ ಚ ।
ನ ಹ್ಯಕಾರ್ಯತಮಂ ಕಿಂಚಿತ್ ತವ ದೇವೀಹ ವಿದ್ಯತೇ ॥೫॥

ಸ್ಥಾವರ ಜಂಗಮಾತ್ಮಕವಾದ ಸರ್ವಜಗತ್ ಪತಿಯಾದ, ನಿನ್ನ ಪತಿಯಾದ ರಾಜಾ ದಶರಥನನ್ನು ಸ್ವಯಂ ನೀನೆ ತ್ಯಾಗ ಮಾಡಿದ್ದೇನಿದೆ, ಇದಕ್ಕಿಂತ ಅತ್ಯಂತ ಹೇಯವಾದ ಕೃತ್ಯ ನಿನಗೆ ಇನ್ನೊಂದು ಇಲ್ಲ.

ಪತಿಘ್ನೀಂ ತ್ವಾಮಹಂ ಮನ್ಯೇ ಕುಲಘ್ನೀಮಪಿ ಚಾಂತತಃ ॥೬॥

ಪತಿಯನ್ನು ನಾಶ ಮಾಡಿದವಳು ನೀನು ಅಂತತಃ ಕುಲವನ್ನೇ ನಾಶ ಮಾಡಿ-ದಂತಾಯಿತೆಂದು ನಾನು ಭಾವಿಸುತ್ತೇನೆ.

ಯನ್ಮಹೇಂದ್ರಮಿವಾಜಯ್ಯಂ ದುಷ್ಪ್ರಕಂಪ್ಯಮಿವಾಚಲಮ್ ।
ಮಹೋದಧಿಮಿವಾಕ್ಷೋಭ್ಯಂ ಸಂತಾಪಯಸಿ ಕರ್ಮಭಿಃ ॥೭॥

ಮಹೇಂದ್ರನಂತೆ ಅಜೇಯನು ಬೆಟ್ಟದಂತೆ ಅಲುಗಾಡಿಸಲಾಗದವನು ಮಹಾ ಸಮುದ್ರದಂತೆ ಕ್ಷೋಭೆಗೊಳ್ಳದವನು ಅಂಥ ಪತಿಯನ್ನು ನಿನ್ನ ಅಕೃತ್ಯಗಳಿಂದ ಸಂತಾಪಗೊಳಿಸುತ್ತಿರುವೆ.

ಮಾವಮಂಸ್ಥಾ ದಶರಥಂ ಭರ್ತಾರಂ ವರದಂ ಪತಿಮ್ ।
ಭರ್ತುರಿಚ್ಛಾ ಹಿ ನಾರೀಣಾಂ ಪುತ್ರಕೋಟ್ಯಾ ವಿಶಿಷ್ಯತೇ ॥೮॥

ಪೋಷಕನೂ ವರದಾಯಕನೂ ಪತಿಯೂ ಆಗಿರುವ ದಶರಥನನ್ನು ಅವಮಾನಿಸಬೇಡ. ನಾರಿಯರಿಗೆ ಕೋಟಿ ಪುತ್ರರ ಇಚ್ಛೆಗಳಿಗಿಂತ ಒಬ್ಬ ಪತಿಯ ಇಚ್ಛೆಯೇ ಮೇಲು. ಅವನಿಗೆ ಸರ್ವಥಾ ನಿರಾಸೆ ಉಂಟುಮಾಡಬಾರದು.

ಯಥಾವಯೋ ಹಿ ರಾಜ್ಯಾನಿ ಪ್ರಾಪ್ನುವಂತಿ ನೃಪಕ್ಷಯೇ ।
ಇಕ್ಷ್ವಾಕುಕುಲನಾಥೇಽಸ್ಮಿಂಸ್ತಲ್ಲೋಪಯಿತುಮಿಚ್ಛಸಿ ॥೯॥

ರಾಜನ ಅವಸಾನವಾದಾಗ ವಯಸಿನ ಕ್ರಮದಂತೆ ಮಕ್ಕಳಿಗೆ ರಾಜ್ಯಾಧಿಕಾರ ಬರುತ್ತದೆ. ಇಕ್ಷ್ವಾಕುಕುಲನಾಥನ ವಿಷಯದಲ್ಲಿ ಈ ಸಂಪ್ರದಾಯವನ್ನು ಮುರಿಯಲು ನೀನು ಬಯಸುವೆ.

ರಾಜಾ ಭವತು ತೇ ಪುತ್ರೋ ಭರತಃ ಶಾಸ್ತು ಮೇದಿನೀಮ್ ।
ವಯಂ ತತ್ರ ಗಮಿಷ್ಯಾಮೋ ಯತ್ರ ರಾಮೋ ಗಮಿಷ್ಯತಿ ॥೧೦॥

ನಿನ್ನ ಮಗ ಭರತ ರಾಜನಾಗಲಿ ರಾಜ್ಯವಾಳಲಿ. ರಾಮನು ಎಲ್ಲಿಗೆ ಹೋಗು-ವನೋ ಅಲ್ಲಿಗೇ ನಾವು ಹೋಗುವೆವು.

ನ ಹಿ ತೇ ವಿಷಯೇ ಕಶ್ಚಿತ್ ಬ್ರಾಹ್ಮಣೋ ವಸ್ತುಮರ್ಹತಿ ।
ತಾದೃಶಂ ತ್ವಮಮರ್ಯಾದಮದ್ಯ ಕರ್ಮ ಚಿಕೀರ್ಷಸಿ ॥೧೧॥

ನಿನ್ನ ರಾಜ್ಯದಲ್ಲಿ ಯಾವನೇ ಬ್ರಾಹ್ಮಣ ವಾಸಿಸಲಾರ. ಅಂತಹ ಅನ್ಯಾಯದ ಕೃತ್ಯವನ್ನು ನೀನೀಗ ಮಾಡಲು ಹೊರಟಿರುವಿ.

ಆಶ್ಚರ್ಯಮಿವ ಪಶ್ಯಾಮಿ ಯಸ್ಯಾಸ್ತೇ ವೃತ್ತಮೀದೃಶಮ್ ।
ಆಚರಂತ್ಯಾ ನ ವಿದೃತಾ ಸದ್ಯೋ ಭವತಿ ಮೇದಿನೀ ॥೧೨॥

ಇದೊಂದು ಆಶ್ಚರ್ಯವೆಂದು ನನಗೆ ಅನಿಸುತ್ತದೆ. ಅದೇನೆಂದರೆ, ನೀನು ಈ ರೀತಿಯ ಅಕೃತ್ಯವನ್ನು ಮಾಡುತ್ತಿದ್ದರೂ ಭೂಮಿ ಒಡನೆ ಒಡೆದು ಸೀಳಾಗುತ್ತಿಲ್ಲ.

ಮಹಾಬ್ರಹ್ಮರ್ಷಿಸೃಷ್ಟಾ ಹಿ ಜ್ವಲಂತೋ ಭೀಮದರ್ಶನಾಃ ।
ಧಿಗ್ವಾಗ್ದಂಡಾ ನ ಹಿಂಸಂತಿ ರಾಮಪ್ರವ್ರಾಜನೇ ಸ್ಥಿತಾಮ್ ॥೧೩॥

ರಾಮನನ್ನು ಕಾಡಿಗೆ ಅಟ್ಟುವಲ್ಲಿ ಸ್ಥಿರವಾಗಿ ನಿಂತಿರುವ ನಿನ್ನನ್ನು ವಸಿಷ್ಠರಂಥ ಮಹಾಬ್ರಹ್ಮರ್ಷಿಗಳು ಉಚ್ಚರಿಸುವ ಧಿಕ್ಕಾರ ವಚನದಂಡಗಳು ಹಿಂಸಿಸುತ್ತಿಲ್ಲ ಎನ್ನುವುದು ಇನ್ನೊಂದು ಆಶ್ಚರ್ಯ.

ರಾಮನ ಇಚ್ಛಾನುಸಾರವಾಗಿ ಬ್ರಹ್ಮನು ಮಂಥರೆಗೆ ನೀಡಿದ ವರಬಲದಂದಲೇ ಭೂಮಿ ಬಿರಿಯಲಿಲ್ಲ. ಬ್ರಹ್ಮರ್ಷಿಗಳು ಮುನಿಸಿಕೊಳ್ಳಲಿಲ್ಲ.

ಆಮ್ರಂ ಛಿತ್ವಾ ಕುಠಾರೇಣ ನಿಂಬಂ ಪರಿಚರೇತ್ತು ಯಃ ।
ಯಶ್ಚೈನಂ ಪಯಸಾ ಸಿಂಚೇನ್ನೈವಾಸ್ಯ ಮಧುರೋ ಭವೇತ್ ॥೧೪॥

ಮಾವಿನ ಮರವನ್ನು ಕೊಡಲಿಯಿಂದ ಕಡಿದು ತೆಗೆದು ಅಲ್ಲಿ ಬೇವಿನಗಿಡ ನೆಟ್ಟು ಬೆಳೆಸಿದರೆ ನೀರೆರೆದರೆ ಅದು ಸಿಹಿಯನ್ನು ನೀಡಲಾರದು.

ಅಭಿಜಾತಂ ಹಿ ತೇ ಮನ್ಯೇ ಯಥಾ ಮಾತುಸ್ತಥೈವ ಚ ।
ನ ಹಿ ನಿಂಬಾತ್ ಸ್ರವೇತ್ ಕ್ಷೌದ್ರಂ ಲೋಕೇ ನಿಗದಿತಂ ವಚಃ ॥೧೫॥

ನಿನ್ನ ತಾಯಿಗೆ ಹೇಗೋ ಹಾಗೇ ನಿನಗೂ ಅದು ಆನುವಂಶಿಕವಾಗಿ ಬಂದ ದುರ್ಗುಣ. ಬೇವಿನಿಂದ ಜೇನು ಸುರಿಯದೆಂಬುದು ಒಂದು ಗಾದೆ ಮಾತು.

ತವ ಮಾತುರಸದ್ಗ್ರಾಹಂ ವಿದ್ಮಃ ಪೂರ್ವಂ ಯಥಾಶ್ರುತಮ್ ॥೧೬॥

ನಿನ್ನ ತಾಯಿಯ ದುರಾಗ್ರಹ ಸ್ವಭಾವ, ನಾವು ಹಿಂದೆಯೇ ಕೇಳಿ ತಿಳಿದಿದ್ದೇವೆ.

ಪಿತುಸ್ತೇ ವರದಃ ಕಶ್ಚಿದ್ದದೌ ವರಮನುತ್ತಮಮ್ ।
ಸರ್ವಭೂತರುತಂ ತಸ್ಮಾತ್ ಸಂಜಜ್ಞೇ ವಸುಧಾಧಿಪಃ ।
ತೇನ ತಿರ್ಯಗ್ಗತಾನಾಂ ಚ ಭೂತಾನಾಂ ವಿದಿತಂ ವಚಃ ॥೧೭॥

ನಿನ್ನ ತಂದೆಗೆ ಒಬ್ಬ ವರದಾಯಕನಾದ ಗಂಧರ್ವನು ಉತ್ತಮವಾದ ವರವನ್ನಿತ್ತ. ಅದರಿಂದ ಕೇಕಯರಾಜ ಎಲ್ಲ ಪ್ರಾಣಿಗಳ ಭಾಷೆಯನ್ನು ತಿಳಿದಿದ್ದ. ಅದರಿಂದ ಪಶುಪಕ್ಷಿಗಳ ಮಾತು ಅವನಿಗೆ ತಿಳಿಯುತ್ತಿತ್ತು.

ತತೋ ಜೃಂಭಸ್ಯ ಶಯನೇ ವಿರುತಾದ್ ಭೂರಿವರ್ಚಸಃ ।
ಪಿತುಸ್ತೇ ವಿದಿತೋ ಭಾವಃ ಸ ತತ್ರ ಬಹುಧಾಹಸತ್ ॥೧೮॥

ಅದರಿಂದ ಮಹಾತೇಜಸ್ವಿಯಾದ ನಿನ್ನ ತಂದೆ ಮಲಗಿದ್ದಾಗ ಒಂದು ಜೃಂಭ–ಪಕ್ಷಿಯ ಕೂಗಿನಿಂದ ಅದರ ಭಾವ ಅವನಿಗೆ ತಿಳಿಯಿತು. ಆಗ ಅನೇಕ ಬಾರಿ ಆತ ನಕ್ಕ.

ತತ್ರ ತೇ ಜನನೀ ಕ್ರುದ್ಧಾ ಮೃತ್ಯುಪಾಶಮಭೀಪ್ಸತೀ ।
ಹಾಸಂ ತೇ ನೃಪತೇ ಸೌಮ್ಯ ಜಿಜ್ಞಾಸಾಮೀತಿ ಚಾಬ್ರವೀತ್ ॥೧೯॥

ಆಗ ನಿನ್ನ ತಾಯಿ ಕ್ರೋಧಗೊಂಡು ಪತಿಯು ತನ್ನನ್ನು ಅಪಹಾಸ ಮಾಡುತ್ತಾನೆ ಎಂದುಕೊಂಡು ಅವನನ್ನು ಮೃತ್ಯುಪಾಶದಿಂದ ಬಂಧಿಸಲು ಬಯಸಿ, ಹೇಳಿದಳು, ''ರಾಜನೆ, ನಾನು ಈಗ ನೀನು ನಗಲು ಕಾರಣವನ್ನು ತಿಳಿಯಬಯಸುತ್ತೇನೆ' ಎಂದು.

ನೃಪಶ್ಚೋವಾಚ ತಾಂ ದೇವೀಂ ದೇವಿ ಶಂಸಾಮಿ ತೇ ಯದಿ ।
ತತೋ ಮೇ ಮರಣಂ ಸದ್ಯೋ ಭವಿಷ್ಯತಿ ನ ಸಂಶಯಃ ॥೨೦॥

ರಾಜನು ದೇವಿಗೆ ನುಡಿದ, 'ದೇವಿ, ಕಾರಣವನ್ನು ನಿನಗೆ ಹೇಳಿದೆನೆಂದರೆ ನಾನು ಒಡನೆ ಮರಣ ಹೊಂದುವೆನು, ಸಂಶಯವಿಲ್ಲ' ಎಂದು.

ಮಾತಾ ತೇ ಪಿತರಂ ದೇವೀ ತತಃ ಕೇಕಯಮಬ್ರವೀತ್ ।
ಶಂಸ ಮೇ ಜೀವ ವಾ ಮಾ ವಾ ನ ಮಾಮಪಹಸಿಷ್ಯಸಿ ॥೨೧॥

ನಿನ್ನ ತಾಯಿ ದೇವಿ, ತಂದೆ ಕೇಕಯರಾಜನಿಗೆ ಹೇಳಿದಳು— 'ಕಾರಣವನ್ನು ಹೇಳು, ಬದುಕು ಅಥವಾ ಸಾಯಿ, ನನಗೆ ನೀನು ಅಪಹಾಸ ಮಾಡುತ್ತಿಲ್ಲ ಎಂಬುದನ್ನಂತೂ ನಾನು ತಿಳಿಯಲೇಬೇಕು' ಎಂದು.

ಪ್ರಿಯಯಾ ಚ ತಥೋಕ್ತಃ ಸನ್ ಕೇಕಯಃ ಪೃಥಿವೀಪತಿಃ ।
ತಸ್ಮೈ ತಂ ವರದಾಯಾರ್ಘಂ ಕಥಯಾಮಾಸ ತತ್ತ್ವತಃ ॥೨೨॥

ಪ್ರೇಯಸಿ ಹೀಗೆ ಹೇಳಿದಾಗ, ಕೇಕಯರಾಜ ತನಗೆ ವರವಿತ್ತ ಗಂಧರ್ವನಿಗೆ ವಿಷಯವನ್ನು ಯಥಾವತ್ತಾಗಿ ಹೇಳಿದ.

ತತಃ ಸ ವರದಃ ಸಾಧೂ ರಾಜಾನಂ ಪ್ರತ್ಯಭಾಷತ ।
ಯದಿ ತ್ವಂ ಶಂಸಸೇ ರಾಜನ್ ಮರಣಂ ತೇ ಭವೇದ್ ಧ್ರುವಮ್ ।
ಮ್ರಿಯತಾಂ ಧ್ವಂಸತಾಂ ವೇಯಂ ಮಾ ಕೃಥಾಸ್ತ್ವಂ ಮಹೀಪತೇ ॥೨೩॥

ವರದಾಯಕನಾದ ಆ ಸಾಧು ಗಂಧರ್ವ ನುಡಿದ, 'ರಾಜನೆ, ನೀನು ಹೇಳಿದೆ-ಯಾದರೆ ನಿನಗೆ ಮರಣ ಬರುವುದು ನಿಶ್ಚಿತ. ಆದರಿಂದ ರಾಜನೆ, ನಿನ್ನ ರಾಣಿ ಸಾಯಲಿ ಇಲ್ಲವೆ ದೂರ ತೊಲಗಲಿ. ಈ ರಹಸ್ಯವನ್ನು ಮಾತ್ರ ಅವಳಿಗೆ ಹೇಳಬೇಡ' ಎಂದು.

ಸ ತಚ್ಛ್ರುತ್ವಾ ವಚಸ್ತಸ್ಯ ಪ್ರಸನ್ನಮನಸೋ ನೃಪಃ ।
ಮಾತರಂ ತೇ ನಿರಸ್ಯಾಶು ವಿಜಹಾರ ಕುಬೇರವತ್ ॥೨೪॥

ಬಳಿಕ ರಾಜ ಪ್ರಸನ್ನ ಮನಸ್ಸಿನ ಗಂಧರ್ವನ ಈ ಮಾತನ್ನು ಕೇಳಿ ನಿನ್ನ ತಾಯಿಯನ್ನು ಬೇಗನೆ ತೊಲಗಿಸಿ ಕುಬೇರನಂತೆ ವಿಹರಿಸಿದ.

ತಥಾ ತ್ವಮಪಿ ರಾಜಾನಂ ದುರ್ಜನಾಚರಿತೇ ಪಥಿ ।
ಅಸದ್ಗ್ರಾಹಮಿಮಂ ಮೋಹಾತ್ ಕುರುಷೇ ಪಾಪದರ್ಶಿನೀ ॥೨೫॥

ಇದೇರೀತಿ ನೀನೂ ಕೂಡ ದುರ್ಜನರು ನಡೆವ ದಾರಿಯಲ್ಲಿದ್ದು ಮೋಹದಿಂದ ಈ ದುರಾಗ್ರಹವನ್ನು ಮಾಡುತ್ತಿರುವೆ.

ಸತ್ಯಶ್ಚಾದ್ಯ ಪ್ರವಾದೋಽಯಂ ಲೌಕಿಕಃ ಪ್ರತಿಭಾತಿ ಮಾ ।
ಪಿತ್ರ್ಯಾನ್ ಸಮನುಜಾಯಂತೇ ನರಾ ಮಾತರಮಂಗನಾಃ ॥೨೬॥

ಲೋಕದಲ್ಲಿರುವ ಒಂದು ಗಾದೆ ಮಾತು ಸತ್ಯವೆಂದು ನನಗೆ ಈಗ ಕಾಣುತ್ತದೆ. ಗಂಡುಮಕ್ಕಳು ತಂದೆಯಂತೇ, ಹೆಣ್ಣುಮಕ್ಕಳು ತಾಯಿಯಂತೇ ಹುಟ್ಟುತ್ತಾರೆ ಎಂದು.

ನೈವಂ ಭವ ಗೃಹಾಣೇದಂ ಯಥಾಹ ವಸುಧಾಧಿಪಃ ।
ಭರ್ತುರಿಚ್ಛಾಮುಪಾಸ್ವೇಹ ಜನಸ್ಯಾಸ್ಯ ಗತಿರ್ಭವ ॥೨೭॥

ನೀನು ನಿನ್ನ ತಾಯಿಯಂತಾಗಬೇಡ. ರಾಜನು ಹೇಳಿದಂತೆ ಕೇಳು. ಪತಿಯ ಇಚ್ಛೆಯನ್ನು ಮನ್ನಿಸು. ಈ ನಮ್ಮ ಪ್ರಜೆಗಳಿಗೂ ಆಸರೆಯಾಗು.

ಮಾ ತ್ವಂ ಪ್ರೋತ್ಸಾಹಿತಾ ಪಾಪೈರ್ದೇವರಾಜಸಮಪ್ರಭಮ್ ।
ಭರ್ತಾರಂ ಲೋಕಭರ್ತಾರಮಸದ್ಧರ್ಮಮುಪಾದಧಾಃ ॥೨೮॥

ಪಾಪಿಗಳ ಚಾಡಿಮಾತು ಕೇಳಿ ದೇವರಾಜನಂತಿರುವ ಜಗತ್ ಪತಿಯಾದ ನಿನ್ನ ಪತಿಯಿಂದ, ಹಿರಿಮಗನನ್ನು ಕಾಡಿಗೆ ಕಳಿಸಿ ಕಿರಿಯನಿಗೆ ಅಭಿಷೇಕ ಮಾಡುವ ಈ ಅಧರ್ಮಕಾರ್ಯವನ್ನು ಮಾಡಿಸಬೇಡ.

ನ ಹಿ ಮಿಥ್ಯಾ ಪ್ರತಿಜ್ಞಾತಂ ಕರಿಷ್ಯತಿ ತವಾನಘಃ ।
ಶ್ರೀಮಾನ್ ದಶರಥೋ ರಾಜಾ ದೇವಿ ರಾಜೀವಲೋಚನಃ ॥೨೯॥

ದೇವಿ, ಕಮಲದಂಥ ಕಣ್ಣಿನ ಶ್ರೀಮಾನ್‌ರಾಜಾ ದಶರಥ ನಿನಗೆ ಹಿಂದೆ ವಾಗ್ದಾನ ಮಾಡಿದ್ದ ವರವನ್ನು ಸುಳ್ಳು ಮಾಡುವುದಿಲ್ಲ. ಅದರಿಂದ ಅಧರ್ಮ ಕಾರ್ಯಕ್ಕೂ ಒಪ್ಪಿಗೆ ನೀಡುತ್ತಿದ್ದಾನೆ. ಅದಕ್ಕೆ ಅವಕಾಶ ನೀಡದೆ ನೀನು ಬೇರೆಯೇ ವರವನ್ನು ಕೇಳು.

ಜ್ಯೇಷ್ಠೋ ವದಾನ್ಯಃ ಕರ್ಮಣ್ಯಃ ಸ್ವಧರ್ಮಸ್ಯಾಭಿರಕ್ಷಿತಾ ।
ರಕ್ಷಿತಾ ಜೀವಲೋಕಸ್ಯ ಬ್ರೂಹಿ ರಾಮೋಽಭಿಷಿಚ್ಯತಾಮ್ ॥೩೦॥

ಜ್ಯೇಷ್ಠಪುತ್ರ, ಉದಾರಿ, ಸದಾಚಾರಿ, ತನ್ನ ಕ್ಷಾತ್ರಧರ್ಮವನ್ನು ರಕ್ಷಿಸಿಕೊಳ್ಳುವವನು, ಜೀವಲೋಕವನ್ನು ರಕ್ಷಿಸುವವನು, ರಾಮ ಅಭಿಷಿಕ್ತನಾಗಲಿ ಎಂದು ಹೇಳು.

ಪರಿವಾದೋ ಹಿ ತೇ ದೇವಿ ಮಹಾನ್ಲೋಕೇ ಚರಿಷ್ಯತಿ ।
ಯದಿ ರಾಮೋ ವನಂ ಯಾತಿ ವಿಹಾಯ ಪಿತರಂ ನೃಪಮ್ ॥೩೧॥

ರಾಮನು ತಂದೆಯಾದ ರಾಜನನ್ನು ತೊರೆದು ಕಾಡಿಗೆ ಹೋದರೆ, ದೇವಿ, ನೀನು ಅವನನ್ನು ಕಾಡಿಗೆ ಅಟ್ಟಿದೆ ಎಂದು ದೊಡ್ಡ ಅಪವಾದ ಲೋಕದಲ್ಲಿ ಹರಡುತ್ತದೆ.

ಸ್ವರಾಜ್ಯಂ ರಾಘವಃ ಪಾತು ಭವ ತ್ವಂ ವಿಗತಜ್ವರಾ ।
ನ ಹಿ ತೇ ರಾಘವಾದನ್ಯಃ ಕ್ಷಮಃ ಪುರವರೇ ವಸನ್ ॥೩೨॥

ಅದರಿಂದ ತನ್ನ ರಾಜ್ಯವನ್ನು ರಾಮ ಆಳಲಿ. ನೀನು ದುಗುಡವನ್ನು ಬಿಟ್ಟುಬಿಡು. ರಾಮ ಹೊರಗೆ ಹೋದರೆ ನಗರದಲ್ಲಿ ಯಾರೆ ಇರಲಿ ಅವನು ನಿನಗೆ ಅನುಕೂಲನಾಗಿರುವುದಿಲ್ಲ. ಭರತನೂ ನಿನ್ನನ್ನು ವಿರೋಧಿಸುವುದು ನಿಶ್ಚಯ.

ರಾಮೇ ಹಿ ಯೌವರಾಜ್ಯಸ್ಥೇ ರಾಜಾ ದಶರಥೋ ವನಮ್ ।
ಪ್ರವೇಕ್ಷ್ಯತಿ ಮಹೇಷ್ವಾಸಃ ಪೂರ್ವವೃತ್ತಮನುಸ್ಮರನ್ ॥೩೩॥

ರಾಮನು ಯುವರಾಜನಾದರೆ ಮಹಾಬಿಲ್ಲಾರನಾದ ರಾಜಾ ದಶರಥನು ಕೃತಕೃತ್ಯನಾಗಿ ಪೂರ್ವಜರ ಆಚರಣೆಯನ್ನು ಸ್ಮರಿಸಿ ವಾನಪ್ರಸ್ಥನಾಗಿ ಕಾಡಿಗೆ ಹೊರಟು ಹೋಗುವನು.

ಇತಿ ಸಾಂತ್ವಶ್ಚ ತೀಕ್ಷ್ಣಶ್ಚ ಕೈಕೇಯೀಂ ರಾಜಸಂಸದಿ ।
ಸುಮಂತ್ರಃ ಕ್ಷೋಭಯಾಮಾಸ ಭೂಯ ಏವ ಕೃತಾಂಜಲಿಃ ॥೩೪॥

ಹೀಗೆ ಸುಮಂತ್ರನು ರಾಜಸಭೆಯಲ್ಲಿ ಕೈಕೇಯಿಗೆ ಕೈಮುಗಿದು ಮತ್ತು ಮತ್ತು ಸಮಾಧಾನದ ಮಾತುಗಳನ್ನೂ ಆಡಿದ, ತೀಕ್ಷ್ಣವಾದ ಮಾತುಗಳಿಂದಲೂ ಕ್ಷೋಭೆ-ಗೊಳಿಸಲು ಯತ್ನಿಸಿದ.

ನೈವ ಸಾ ಕ್ಷುಭ್ಯತೇ ದೇವೀ ನ ಚ ಸ್ಮ ಪರಿದೂಯತೇ ।
ನ ಚಾಸ್ಯಾ ಮುಖವರ್ಣಸ್ಯ ಲಕ್ಷ್ಯತೇ ವಿಕ್ರಿಯಾ ತದಾ ॥೩೫॥

ಆದರೆ ದೇವಿ ಕ್ಷೋಭೆಗೊಳ್ಳಲೂ ಇಲ್ಲ, ವಿಷಾದ ಪಡಲೂ ಇಲ್ಲ. ಅವಳ ಮುಖವರ್ಣದಲ್ಲಿ ಬದಲಾವಣೆ ಕಂಡುಬರಲಿಲ್ಲ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಮೂವತ್ತೈದನೇ ಸರ್ಗ ಮುಗಿಯಿತು.

❖

ಷಟ್‌ತ್ರಿಂಶಃ ಸರ್ಗಃ

ಸರ್ಗ – 36

ದಶರಥನು ಶ್ರೀರಾಮನೊಂದಿಗೆ ಸುಖಸಾಮಗ್ರಿಗಳನ್ನು ಕಳಿಸುವುದಕ್ಕೆ ಕೈಕೇಯಿಯ ವಿರೋಧ. ಸಿದ್ಧಾರ್ಥನೆಂಬ ಮಂತ್ರಿಯ ಬುದ್ಧಿವಾದ.

ತತಃ ಸುಮಂತ್ರಮೈಕ್ಷ್ವಾಕಃ ಪೀಡಿತೋಽತ್ರ ಪ್ರತಿಜ್ಞಯಾ ।
ಸಬಾಷ್ಪಮತಿನಿಃಶ್ವಸ್ಯ ಜಗಾದೇದಂ ಪುನಃ ಪುನಃ ॥೧॥

ದಶರಥನು ವರದಾನ ಪ್ರತಿಜ್ಞೆಯಿಂದ ಪೀಡಿತನಾಗಿ ಪುನಃಪುನಃ ಕಂಬನಿ ಸುರಿಸಿ ನಿಟ್ಟುಸಿರಿಟ್ಟು ಸುಮಂತ್ರನಿಗೆ ನುಡಿದ.

ಸೂತ ರತ್ನಸುಸಂಪೂರ್ಣಾ ಚತುರ್ವಿಧಬಲಾ ಚಮೂಃ ।
ರಾಘವಸ್ಯಾನುಯಾತ್ರಾರ್ಥಂ ಕ್ಷಿಪ್ರಂ ಪ್ರತಿವಿಧೀಯತಾಮ್ ॥೨॥

ಸುಮಂತ್ರ, ರತ್ನಗಳಿಂದ ಪೂರ್ತಿ ತುಂಬಿದ ಬೊಕ್ಕಸದೊಂದಿಗೆ ಚತುರಂಗ ಸೈನ್ಯ ರಾಮನ ಸೇವೆಗೆ ಬೇಗನೆ ಹೋಗುವಂತೆ ವ್ಯವಸ್ಥೆ ಮಾಡು.

ರೂಪಾಜೀವಾಶ್ಚ ವಾದಿನ್ಯೋ ವಣಿಜಶ್ಚ ಮಹಾಧನಾಃ ।
ಶೋಭಯಂತು ಕುಮಾರಸ್ಯ ವಾಹಿನೀಂ ಸುಪ್ರಸಾರಿತಾಃ ॥೩॥

ಪ್ರಿಯವಾಗಿ ಮಾತನಾಡುವ ವೇಶ್ಯೆಯರು, ಮಾರಾಟದ ಸರಕುಗಳನ್ನು ಪ್ರದರ್ಶಿಸುವ ಮಹಾಧನಿಕರಾದ ವರ್ತಕರು ಕುಮಾರನ ಸೈನ್ಯಕ್ಕೆ ಶೋಭೆ ಉಂಟುಮಾಡಲಿ.

ಯೇ ಚೈನಮುಪಜೀವಂತಿ ರಮತೇ ಯೈಶ್ಚ ವೀರ್ಯತಃ ।
ತೇಷಾಂ ಬಹುವಿಧಂ ದತ್ತ್ವಾ ತಾನಪ್ಯತ್ರ ನಿಯೋಜಯ ॥೪॥

ರಾಮನನ್ನು ಆಶ್ರಯಿಸಿದವರು ವೀರ್ಯಪ್ರದರ್ಶನದಿಂದ ರಾಮನಿಗೆ ಉತ್ಸಾಹ ನೀಡುವವರು ಇವರೆಲ್ಲರಿಗೂ ಬಹುವಿಧವಾದ ಧನವನ್ನಿತ್ತು ರಾಮನನ್ನು ಹಿಂಬಾಲಿಸಲು ಆಜ್ಞೆ ಮಾಡು.

ಆಯುಧಾನಿ ಚ ಮುಖ್ಯಾನಿ ನಾಗರಾಃ ಶಕಟಾನಿ ಚ ।
ಅನುಗಚ್ಛಂತು ಕಾಕುತ್ಸ್ಥಂ ವ್ಯಾಧಾಶ್ಚಾರಣ್ಯಗೋಚರಾಃ ॥೫॥

ಮುಖ್ಯ ಆಯುಧಗಳು ಪೌರರು ಬಂಡಿಗಳು ಮತ್ತು ಅರಣ್ಯ ಮಾರ್ಗದ ಪರಿಚಯಉಳ್ಳ ಬೇಡರು ರಾಮನನ್ನು ಹಿಂಬಾಲಿಸಿ ಹೋಗಲಿ.

ನಿಘ್ನನ್ ಮೃಗಾನ್ ಕುಂಜರಾಂಶ್ಚ ಪಿಬಂಶ್ಚಾರಣ್ಯಕಂ ಮಧು ।
ನದೀಶ್ಚ ವಿವಿಧಾಃ ಪಶ್ಯನ್ನ ರಾಜ್ಯಸ್ಯ ಸ್ಮರಿಷ್ಯತಿ ॥೬॥

ಮೃಗಗಳನ್ನೂ ಆನೆಗಳನ್ನೂ ದೂರ ಓಡಿಸುತ್ತ ಕಾಡಿನ ಜೇನನ್ನು ಕುಡಿಯುತ್ತ ವಿವಿಧ ನದಿಗಳನ್ನು ನೋಡುತ್ತ ರಾಮನು ನಾಡನ್ನು ಸ್ಮರಿಸದಿರಲಿ.

ಧಾನ್ಯಕೋಶಶ್ಚ ಯಃಕಶ್ಚಿದ್ಧನಕೋಶಶ್ಚ ಮಾಮಕಃ ।
ತೌ ರಾಮಮನುಗಚ್ಛೇತಾಂ ವಸಂತಂ ನಿರ್ಜನೇ ವನೇ ॥೭॥

ನನ್ನ ಧಾನ್ಯಕೋಶ ಧನಕೋಶಗಳು ಕೂಡ ನಿರ್ಜನಾರಣ್ಯದಲ್ಲಿ ವಾಸಮಾಡುವ ರಾಮನನ್ನು ಹಿಂಬಾಲಿಸಿ ಹೋಗಲಿ.

ಯಜನ್ ಪುಣ್ಯೇಷು ದೇಶೇಷು ವಿಸೃಜಂಶ್ಚಾಪ್ತದಕ್ಷಿಣಾಃ ।
ಋಷಿಭಿಶ್ಚ ಸಮಾಗಮ್ಯ ಪ್ರವತ್ಸ್ಯತಿ ಸುಖಂ ವನೇ ॥೮॥

ಪುಣ್ಯಕ್ಷೇತ್ರಗಳಲ್ಲಿ ಯಾಗ ಮಾಡುತ್ತ ಬಹುದಕ್ಷಿಣೆಗಳನ್ನು ನೀಡುತ್ತ ಋಷಿ-ಗಳೊಂದಿಗೆ ಬೆಳೆಯುತ್ತ ಸುಖವಾಗಿ ರಾಮ ವಾಸ ಮಾಡಲಿ.

ಭರತಶ್ಚ ಮಹಾಬಾಹುರಯೋಧ್ಯಾಂ ಪಾಲಯಿಷ್ಯತಿ ।
ಸರ್ವಕಾಮೈಃ ಸಹ ಶ್ರೀಮಾನ್ ರಾಮಃ ಸಂಸಾಧ್ಯತಾಮಿತಿ ॥೯॥

ಭರತನು ಅಯೋಧ್ಯೆಯನ್ನು ಪಾಲಿಸುತ್ತಿರಲಿ. ಎಲ್ಲ ಭೋಗವಸ್ತುಗಳೊಂದಿಗೆ ಸಂಪದ್ಯುಕ್ತನಾಗಿ ರಾಮ ಕಾಡಿಗೆ ಹೋಗಲಿ.

ಏವಂ ಬ್ರುವತಿ ಕಾಕುತ್ಸ್ಥೇ ಕೈಕೇಯ್ಯಾ ಭಯಮಾಗತಮ್ ।
ಮುಖಂ ಚಾಪ್ಯಗಮಚ್ಛೋಷಂ ಸ್ವರಶ್ಚಾಪಿ ನ್ಯರುಧ್ಯತ ॥೧೦॥

ದಶರಥ ಹೀಗೆ ಹೇಳುವಾಗ ಕೈಕೇಯಿಗೆ ಭಯ ಉಂಟಾಯಿತು. ಮುಖ ಬಾಡಿತು. ಬಾಯಿಂದ ಮಾತು ಹೊರಡದಾಯಿತು.

ಸಾ ವಿಷಣ್ಣಾ ಚ ಸಂತ್ರಸ್ತಾ ಮುಖೇನ ಪರಿಶುಷ್ಯತಾ ।
ರಾಜಾನಮೇವಾಭಿಮುಖೀ ಕೈಕೇಯೀ ವಾಕ್ಯಮಬ್ರವೀತ್ ॥೧೧॥

ಅವಳು ವಿಷಣ್ಣಳಾಗಿ ಭೀತಳಾಗಿ ಬಾಡಿದ ಮುಖದಿಂದ ರಾಜನಿಗೆ ಎದುರಾಗಿ ನಿಂತು ನುಡಿದಳು.

ರಾಜ್ಯಂ ಗತಧನಂ ಸಾಧೋ ಪೀತಮಂಡಾಂ ಸುರಾಮಿವ ।
ನಿರಾಸ್ವಾದ್ಯತಮಂ ಶೂನ್ಯಂ ಭರತೋ ನಾಭಿಪತ್ಸ್ಯತೇ ॥೧೨॥

ರಾಜನೆ, ಸಾರವನ್ನು ಕುಡಿದ ಬಳಿಕ ಉಳಿಯುವ ನಿಸ್ಸಾರವಾದ ಮದ್ಯದಂತೆ ಧನವೆಲ್ಲವೂ ಹೋದಮೇಲೆ ಅತ್ಯಂತ ನೀರಸವಾದ ಶೂನ್ಯವಾದ ರಾಜ್ಯವನ್ನು ಭರತನು ಸ್ವೀಕರಿಸಲಾರ.

ಕೈಕೇಯ್ಯಾಂ ಮುಕ್ತಲಜ್ಜಾಯಾಂ ವದಂತ್ಯಾಮತಿದಾರುಣಮ್ ।
ರಾಜಾ ದಶರಥೋ ವಾಕ್ಯಮುವಾಚಾಯತಲೋಚನಾಮ್ ॥೧೩॥

ಕೈಕೇಯಿ ಲಜ್ಜೆಬಿಟ್ಟು ಅತಿಕ್ರೂರವಾಗಿ ಹೀಗೆ ಹೇಳುವಾಗ ರಾಜಾ ದಶರಥನು ವಿಶಾಲನೇತ್ರೆಯಾದ ಕೈಕೇಯಿಗೆ ನುಡಿದ.

ವಹಂತಂ ಕಿಂ ತುದಸಿ ಮಾಂ ನಿಯುಜ್ಯ ಧುರಿ ಮಾऽಹಿತೇ ।
ಅನಾರ್ಯೇ ಕೃತ್ಯಮಾರಬ್ಧಂ ಕಿಂ ನ ಪೂರ್ವಮುಪಾರುಧಃ ॥೧೪॥

ಅಹಿತಳಾದ ಅನಾರ್ಯೆಯಾದ ಕೈಕೇಯಿಯೆ, ನನ್ನ ಮೇಲೆ ಭಾರ ಹೊರಿಸಿ, ನಾನು ಹೊರುತ್ತಿರುವಾಗಲೆ ಮತ್ತೆ ನನ್ನನ್ನು ವಾಗ್‌ಬಾಣಗಳಿಂದ ಏಕೆ ಹಿಂಸಿಸುವೆ? ರಾಮನನ್ನು ಕಾಡಿಗೆ ಅಟ್ಟುವ ಕಾರ್ಯ ಆರಂಭವಾಗಿದೆ. ಈಗ ರಾಮನೊಡನೆ ಯಾರೂ ಹೋಗಕೂಡದೆನ್ನುವುದೇಕೆ? ಮೊದಲೇ ಅದನ್ನು ಏಕೆ ವಿರೋಧಿಸಲಿಲ್ಲ?

ರಾಮನೊಡನೆ ಸೈನ್ಯ ಬೊಕ್ಕಸವೆಲ್ಲವೂ ಕಾಡಿಗೆ ಹೋದರೆ ನಿರ್ಧನವಾದ ರಾಜ್ಯವನ್ನು ಭರತನಿಗೆ ಕೊಟ್ಟಂತಾಗುವುದು. ಕೈಕೇಯಿಗೆ ವರವನ್ನು ಪೂರ್ತಿಯಾಗಿ ಕೊಟ್ಟಲ್ಲವೆಂದಾಗುವುದು. 'ಯಸ್ತುಷ್ಟೇನ ವರೋ ದತ್ತಃ' (34.42) ಎಂದು ರಾಮ ಹೇಳುವಂತೆ ವರವು ಪೂರ್ತಿ ಸತ್ಯವಾಗಿಲ್ಲವೆಂದಾಗುವುದು ದಶರಥನಿಗೆ ಸಮಸ್ಯೆಯಾಗಿದೆ.

ತಸ್ಯೈತತ್ ಕ್ರೋಧಸಂಯುಕ್ತಮುಕ್ತಂ ಶ್ರುತ್ವಾ ವರಾಂಗನಾ ।
ಕೈಕೇಯೀ ದ್ವಿಗುಣಂ ಕ್ರುದ್ಧಾ ರಾಜಾನಮಿದಮಬ್ರವೀತ್ ॥೧೫॥

ದಶರಥನು ಕೋಪದಿಂದ ಹೀಗೆ ಹೇಳಿದ್ದನ್ನು ಕೇಳಿ ಕೈಕೇಯಿ ಇಮ್ಮಡಿ ಕೋಪಗೊಂಡು ಅವನಿಗೆ ಹೇಳಿದಳು.

ತವೈವ ವಂಶೇ ಸಗರೋ ಜ್ಯೇಷ್ಠಪುತ್ರಮುಪಾರುಧತ್ ।
ಅಸಮಂಜ ಇತಿ ಖ್ಯಾತಂ ತಥಾಯಂ ಗಂತುಮರ್ಹತಿ ॥೧೬॥

ನಿನ್ನ ವಂಶದಲ್ಲಿಯೇ ಸಗರ ಚಕ್ರವರ್ತಿ ಅಸಮಂಜಸನೆಂದು ಖ್ಯಾತನಾದ ಜ್ಯೇಷ್ಠ ಪುತ್ರನನ್ನು ಒಬ್ಬನನ್ನೇ ಅರಣ್ಯಕ್ಕೆ ಕಳಿಸಿದ ಹಾಗೆಯೇ ರಾಮನೂ ಏಕಾಕಿಯಾಗಿ ಹೋಗಬೇಕು.

ಏವಮುಕ್ತೋ ಧಿಗಿತ್ಯೇವ ರಾಜಾ ದಶರಥೋಽಬ್ರವೀತ್ ।
ವ್ರೀಡಿತಶ್ಚ ಜನಃ ಸರ್ವಃ ಸಾ ಚ ತನ್ನಾವಬುಧ್ಯತ ॥೧೭॥

ಕೈಕೇಯಿ ಹೀಗೆ ಹೇಳಿದಾಗ ರಾಜಾ ದಶರಥನು 'ನಿನಗೆ ಧಿಕ್ಕಾರ' ಎಂದ. ಜನರೂ ಎಲ್ಲರೂ ಅವಳ ಮಾತನ್ನು ಕೇಳಿ ನಾಚಿದರು. ಅವಳು ಅದನ್ನು ಗಂಭೀರವಾಗಿ ಪರಿಗಣಿಸಲಿಲ್ಲ.

ತತ್ರ ವೃದ್ಧೋ ಮಹಾಮಾತ್ರಃ ಸಿದ್ಧಾರ್ಥೋ ನಾಮ ನಾಮತಃ ।
ಶುಚಿರ್ಬಹುಮತೋ ರಾಜ್ಞಃ ಕೈಕೇಯೀಮಿದಮಬ್ರವೀತ್ ॥೧೮॥

ಆಗ ವೃದ್ಧ, ಶುಚಿ ಮತ್ತು ರಾಜನಿಗೆ ಅಭಿಮಾನಪಾತ್ರನಾದ ಸಿದ್ಧಾರ್ಥನೆಂಬ ಮಹಾಮಂತ್ರಿ ಕೈಕೇಯಿಗೆ ಹೇಳಿದ.

ಅಸಮಂಜೋ ಗೃಹೀತ್ವಾ ತು ಕ್ರೀಡತಃ ಪಥಿ ದಾರಕಾನ್।
ಸರಯ್ವಾಃ ಪ್ರಕ್ಷಿಪನ್ನಪ್ಸು ರಮತೇ ತೇನ ದುರ್ಮತಿಃ ॥೧೯॥

ಅಸಮಂಜ ದುರ್ಬುದ್ಧಿಯವನಾಗಿದ್ದ. ಬೀದಿಯಲ್ಲಿ ಆಟವಾಡುತ್ತಿದ್ದ ಮಕ್ಕಳನ್ನು ಎತ್ತಿ ಸರಯೂನದೀ ಜಲದಲ್ಲಿ ಎಸೆದು ಸಂತೋಷಪಡುತ್ತಿದ್ದ.

ತಂ ದೃಷ್ಟ್ವಾ ನಾಗರಾಃ ಸರ್ವೇ ಕ್ರುದ್ಧಾ ರಾಜಾನಮಬ್ರುವನ್ ।
ಅಸಮಂಜಂ ವೃಣೀಷ್ವೈಕಮಸ್ಮಾನ್ ವಾ ರಾಷ್ಟ್ರವರ್ಧನ ॥೨೦॥

ಅವನನ್ನು ನೋಡಿ ನಾಗರಿಕರೆಲ್ಲರೂ ಕ್ರುದ್ಧರಾಗಿ ರಾಜನಿಗೆ ಹೇಳಿದರು— 'ರಾಷ್ಟ್ರಕ್ಕೆ ಅಭಿವೃದ್ಧಿ ಉಂಟುಮಾಡುವ ರಾಜನೆ, ನೀನು ಅಸಮಂಜಸನೊಬ್ಬನನ್ನೇ ಇಟ್ಟುಕೊಳ್ಳು ಅಥವಾ ನಮ್ಮನ್ನು ಇಟ್ಟುಕೊಳ್ಳು. ಅವನೊಂದಿಗೆ ನಾವಿರಲಾರೆವು.'

ತಾನುವಾಚ ತತೋ ರಾಜಾ ಕಿಂ ನಿಮಿತ್ತಮಿದಂ ಭಯಮ್ ।
ತಾಶ್ಚಾಪಿ ರಾಜ್ಞಾ ಸಂಪೃಷ್ಟಾ ವಾಕ್ಯಂ ಪ್ರಕೃತಯೋಽಬ್ರುವನ್ ॥೨೧॥

ರಾಜನು ಪ್ರಜೆಗಳನ್ನು ಕೇಳಿದ, 'ನಿಮಗೆ ಏಕೆ ಈ ಭಯ?' ರಾಜ ಹೀಗೆ ಹೇಳಿದಾಗ ಪ್ರಜೆಗಳು ಹೇಳಿದರು.

ಕ್ರೀಡತಸ್ತೇ ವೀವ ನಃ ಪುತ್ರಾನ್ ಬಾಲಾನುದ್ಭ್ರಾಂತಚೇತನಃ ।
ಸರಯ್ವಾಂ ಪ್ರಕ್ಷಿಪನ್ ಮೌಖ್ಯಾದತುಲಾಂ ಪ್ರೀತಿಮಶ್ನುತೇ ॥೨೨॥

ತಲೆಕೆಟ್ಟ ನಿನ್ನ ಮಗ ಆಟವಾಡುತ್ತಿರುವ ನಮ್ಮ ಎಳೆಮಕ್ಕಳನ್ನು ಸರಯುವಿನಲ್ಲಿ ಎಸೆದು ಮೂರ್ಖತನದಿಂದ ಅದರಲ್ಲಿಯೇ ಅಪಾರ ಸಂತೋಷವನ್ನು ಸವಿಯುತ್ತಾನೆ.'

ಭಾಗವತ (9.8.16)ದಲ್ಲಿ ಈ ಅಸಮಂಜಸನು ಪೂರ್ವಜನ್ಮದಲ್ಲಿ ಒಬ್ಬ ಯೋಗಿ. ಬಂಧುಜನ ಸಂಪರ್ಕದ ಪರಿಣಾಮವಾಗಿ ಯೋಗಭ್ರಷ್ಟನಾಗಿದ್ದ. ಈ ಜನ್ಮದಲ್ಲಿ ಪೂರ್ವಜನ್ಮಸ್ಮರಣೆ ಇದ್ದುದರಿಂದ ಈತ ಪಶ್ಚಾತ್ತಾಪಗೊಂಡು ಬಂಧು-ಜನರಿಂದ ದೂರವಾಗುವುದಕ್ಕಾಗಿ ತನ್ನನ್ನು ಮಹಾದುಷ್ಟ, ಮೂರ್ಖನೆಂಬಂತೆ ತೋರಿಸಿಕೊಂಡು ಆಟವಾಡುವ ಮಕ್ಕಳನ್ನು ಎತ್ತಿ ಸರಯೂನದಿಯಲ್ಲಿ ಎಸೆಯು-ತ್ತಿದ್ದ. ತಂದೆ ಸಗರಚಕ್ರವರ್ತಿ ಮಗನನ್ನು ಪರಿತ್ಯಾಗ ಮಾಡಿದ. ಮಗನಿಗೆ ಅದೇ ಬೇಕಾಗಿತ್ತು. ಆತ ಹೋಗುವಾಗ ತನ್ನ ಯೋಗಶಕ್ತಿಯಿಂದ ಸತ್ತ ಮಕ್ಕಳನ್ನು ತಿರುಗಿ ಬದುಕಿಸಿಕೊಟ್ಟು ಹೊರಟುಹೋದ. ಆಗ ಜನರು ಅಚ್ಚರಿಗೊಂಡರು, ರಾಜ ಪಶ್ಚಾತ್ತಾಪಟ್ಟನೆಂದು ಕಥೆ ಇದೆ. ಅದರಂತೆ ಅಸಮಂಜಸನು ದುಷ್ಟನಂತೆ ಕಂಡಿದ್ದ-ರಿಂದ ರಾಜನಿಂದ ಪರಿತ್ಯಕ್ತನಾಗಿದ್ದ. ಶ್ರೀರಾಮ ಮರ್ಯಾದಾ ಪುರುಷೋತ್ತಮ-ನಾಗಿರುವಾಗ ಅವನನ್ನು ಪರಿತ್ಯಜಿಸುವುದು ಯಾವ ನ್ಯಾಯ ಎಂದು ಸಿದ್ಧಾರ್ಥ ಕೇಳುತ್ತಿದ್ದಾನೆ.

ಸ ತಾಸಾಂ ವಚನಂ ಶ್ರುತ್ವಾ ಪ್ರಕೃತೀನಾಂ ನರಾಧಿಪಃ ।
ತಂ ತತ್ಯಾಜಾಹಿತಂ ಪುತ್ರಂ ತಾಸಾಂ ಪ್ರಿಯಚಿಕೀರ್ಷಯಾ ॥೨೩॥

ಪ್ರಜೆಗಳ ಮಾತನ್ನು ಕೇಳಿ ಸಗರ ಚಕ್ರವರ್ತಿ ಅಹಿತಕಾರಿಯಾದ ಪುತ್ರನನ್ನು ಪ್ರಜೆಗಳಿಗೆ ಸಂತೋಷ ಉಂಟುಮಾಡುವ ಇಚ್ಛೆಯಿಂದ ಪರಿತ್ಯಜಿಸಿದ.

ತಂ ಯಾನಂ ಶೀಘ್ರಮಾರೋಪ್ಯ ಸಭಾರ್ಯಂ ಸಪರಿಚ್ಛದಮ್ ।
ಯಾವಜ್ಜೀವಂ ವಿವಾಸ್ಯೋಽಯಮಿತಿ ಸ್ವಾನನ್ವಶಾತ್ಪಿತಾ ॥೨೪॥

'ಅಸಮಂಜನನ್ನು ಪತ್ನಿಯೊಂದಿಗೆ ರಥದಲ್ಲಿ ಕುಳ್ಳಿರಿಸಿ ಬೇಕಾದ ಸಾಮಗ್ರಿ-

ಗಳೊಂದಿಗೆ ಬದುಕಿರುವವರೆಗೂ ಕಾಡಿನಲ್ಲಿರುವಂತೆ, ಹೊರಗೆ ಅಟ್ಟಿರಿ' ಎಂದು ತನ್ನವರಿಗೆ ಆಜ್ಞೆ ಮಾಡಿದ.

ಸ ಫಾಲಪಿಟಕಂ ಗೃಹ್ಯ ಗಿರಿದುರ್ಗಾಣ್ಯಲೋಕಯತ್ ।
ದಿಶಃ ಸರ್ವಾಸ್ತ್ವನುಚರನ್ ಸ ಯಥಾ ಪಾಪಕರ್ಮಕೃತ್ ॥೨೫॥

ಅಸಮಂಜನು ಗುದ್ದಲಿ ಮಂಕರಿಗಳನ್ನು ಹಿಡಿದುಕೊಂಡು ಎಲ್ಲ ದಿಕ್ಕುಗಳಿಗೆ ಸಂಚರಿಸುತ್ತ ಗಿರಿದುರ್ಗಗಳನ್ನು ಸಂದರ್ಶಿಸಿದ. ಪಾಪಕರ್ಮ ಮಾಡಿದವನಂತೆ.

'ಯಥಾಪಾಪಕರ್ಮಕೃತ್' 'ಯಥೋಕ್ತ ಪಾಪಕರ್ಮ ಮಾಡಿದವನು ಅಸಮಂಜ' ಎಂದು ಮೇಲುನೋಟಕ್ಕೆ ಅರ್ಥವಾಗುತ್ತದೆ. ಆದರೆ 'ಅಸಮಂಜನು ಪಾಪ ಮಾಡಿರಲಿಲ್ಲ! ಮಾಡಿದವನಂತೆ ತೋರಿಕೊಂಡ!' ಎಂಬ ಅರ್ಥದಲ್ಲಿ 'ಯಥಾ' ಎಂದು 'ಪಾಪಕರ್ಮಕೃತ್' ಎಂದು ಎರಡು ಪದಗಳನ್ನಿಟ್ಟುಕೊಳ್ಳುವುದು ಯುಕ್ತ. ಆಗ ಭಾಗವತ ವಿರೋಧ ಪರಿಹಾರವಾಗುತ್ತದೆ.

ಇತ್ಯೇವಮತ್ಯಜದ್ರಾಜಾ ಸಗರೋ ವೈ ಸುಧಾರ್ಮಿಕಃ ।
ರಾಮಃ ಕಿಮಕರೋತ್ಪಾಪಂ ಯೇನೈವಮುಪರುಧ್ಯತೇ ॥೨೬॥

ಹೀಗೆ ಬಹಳ ಧಾರ್ಮಿಕನಾದ ಸಗರನು ಮಗನನ್ನು ಪರಿತ್ಯಾಗ ಮಾಡಿದ. ರಾಮ ಏನು ಪಾಪ ಮಾಡಿದ್ದಾನೆ? ಅವನನ್ನೇಕೆ ಕಾಡಿಗೆ ಅಟ್ಟಬೇಕು?

ನ ಹಿ ಕಂಚನ ಪಶ್ಯಾಮೋ ರಾಘವಸ್ಯಾಗುಣಂ ವಯಮ್ ।
ದುರ್ಲಭೋ ಹ್ಯಸ್ಯ ನಿರಯಃ ಶಶಾಂಕಸ್ಯೇವ ಕಲ್ಮಷಮ್ ॥೨೭॥

ರಾಮನಲ್ಲಿ ಒಂದೇ ದುರ್ಗುಣವನ್ನು ನಾವು ಕಾಣೆವು. ಚಂದ್ರನಲ್ಲಿ ಕಲ್ಮಷದಂತೆ ರಾಮನಲ್ಲಿ ಪಾಪ ನೋಡಲು ಸಿಗಲಾರದು.

ಅಥವಾ ದೇವಿ ದೋಷಂ ತ್ವಂ ಕಂಚಿತ್ ಪಶ್ಯಸಿ ರಾಘವೇ ।
ತಮದ್ಯ ಬ್ರೂಹಿ ತತ್ತ್ವೇನ ತತೋ ರಾಮೋ ವಿವಾಸ್ಯತೇ ॥೨೮॥

ಅಥವಾ, ದೇವಿ, ನೀನೆ ರಾಮನಲ್ಲಿ ಯಾವುದಾದರೊಂದು ದೋಷವನ್ನು ಕಾಣುತ್ತಿದ್ದರೆ ರಾಮನನ್ನು ಅರಣ್ಯಕ್ಕೆ ಕಳಿಸಬಹುದು. ಆ ದೋಷವನ್ನು ಈಗಲೇ ಯಥಾವತ್ತಾಗಿ ನೀನೆ ಹೇಳು.

ಅದುಷ್ಟಸ್ಯ ಹಿ ಸಂತ್ಯಾಗಃ ಸತ್ಪಥೇ ನಿರತಸ್ಯ ಚ ।
ನಿರ್ದಹೇದಪಿ ಶಕ್ರಸ್ಯ ದ್ಯುತಿಂ ಧರ್ಮನಿರೋಧನಾತ್ ॥೨೯॥

ಸನ್ಮಾರ್ಗದಲ್ಲಿಯೇ ಆಸಕ್ತನಾಗಿರುವ ದೋಷರಹಿತನಾದ ಪುರುಷನ ಪರಿತ್ಯಾಗವು ಧರ್ಮವಿರೋಧಿಯಾದ್ದರಿಂದ ಇಂದ್ರನ ವರ್ಚಸ್ಸನ್ನೂ ದಹಿಸೀತು.

ತದಲಂ ದೇವಿ ರಾಮಸ್ಯ ಶ್ರಿಯಾ ವಿಹತಯಾ ತ್ವಯಾ ।
ಲೋಕತೋಽಪಿ ಹಿ ತೇ ರಕ್ಷ್ಯಃ ಪರಿವಾದಃ ಶುಭಾನನೇ ॥೩೦॥

ಸುಂದರ ಮುಖದವಳೆ, ದೇವಿ, ರಾಮನ ರಾಜ್ಯಶ್ರೀಯನ್ನು ನೀನು ಕೆಡಿಸಿದ್ದರಿಂದ ಫಲವಿಲ್ಲ. ಕೇವಲ ಲೋಕಾಪವಾದ ಉಂಟಾಗುವುದು. ಅದರಿಂದ ನೀನು ನಿನ್ನನ್ನು ರಕ್ಷಣೆ ಮಾಡಿಕೊಳ್ಳಬೇಕಾಗುವುದು.

ಶ್ರುತ್ವಾ ತು ಸಿದ್ಧಾರ್ಥವಚೋ ರಾಜಾ ಶ್ರಾಂತತರಸ್ವನಃ ।
ಶೋಕೋಪಹತಯಾ ವಾಚಾ ಕೈಕೇಯೀಮಿದಮಬ್ರವೀತ್ ॥೩೧॥

ಸಿದ್ಧಾರ್ಥನ ಮಾತನ್ನು ಕೇಳಿದ ಬಳಿಕ ಇನ್ನೂ ಹೆಚ್ಚು ಆಯಾಸಗೊಂಡ ಧ್ವನಿಯಿಂದ ರಾಜಾ ದಶರಥ ಶೋಕಗದ್ಗದವಾದ ಮಾತನ್ನು ಕೈಕೇಯಿಗೆ ನುಡಿದ.

ಏತದ್ವಚೋ ನೇಚ್ಛಸಿ ಪಾಪವೃತ್ತೇ
ಹಿತಂ ನ ಜಾನಾಸಿ ಮಮಾತ್ಮನೋ ವಾ ।
ಆಸ್ಥಾಯ ಮಾರ್ಗಂ ಕೃಪಣಂ ಕುಚೇಷ್ಟಾ
ಚೇಷ್ಟಾ ಹಿ ತೇ ಸಾಧುಪಥಾದಪೇತಾ ॥೩೨॥

ಪಾಪಕರ ನಡತೆಯವಳೆ, ಕೆಟ್ಟ ನಡತೆಯುಳ್ಳ ನೀನು ಕೆಟ್ಟ ಮಾರ್ಗದಲ್ಲಿದ್ದು ನನ್ನ ಹಿತವನ್ನು ತಿಳಿಯುವುದಿಲ್ಲ. ನಿನ್ನ ಹಿತವನ್ನಾದರೂ ತಿಳಿಯುವುದಿಲ್ಲ. ನಿನ್ನ ನಡತೆ ಒಳ್ಳೆಯ ಮಾರ್ಗದಿಂದ ದೂರ ಹೋಗಿದೆ. ಅದರಿಂದ ಸಿದ್ಧಾರ್ಥನ ಮಾತನ್ನು ನೀನು ಒಪ್ಪುವುದಿಲ್ಲ.

ಅನುವ್ರಜಿಷ್ಯಾಮ್ಯಹಮದ್ಯ ರಾಮಂ
ರಾಜ್ಯಂ ಪರಿತ್ಯಜ್ಯ ಧನಂ ಸುಖಂ ಚ ।
ಸಹೈವ ರಾಜ್ಞಾ ಭರತೇನ ಚ ತ್ವಂ
ಯಥಾಸುಖಂ ಭುಂಕ್ಷ್ವ ಚಿರಾಯ ರಾಜ್ಯಮ್ ॥೩೩॥

ನಾನು ಈಗ ರಾಜ್ಯವನ್ನು ಧನವನ್ನು ಸುಖವನ್ನು ಪರಿತ್ಯಾಗ ಮಾಡಿ ರಾಮನನ್ನು ಹಿಂಬಾಲಿಸಿ ಹೋಗುವೆನು. ರಾಜಾ ಭರತನೊಂದಿಗೆ ನೀನೇ ಸುಖವಾಗಿ ಬಹುಕಾಲ ರಾಜ್ಯಸುಖವನ್ನು ಅನುಭವಿಸು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಮೂವತ್ತಾರನೇ ಸರ್ಗ ಮುಗಿಯಿತು.

ಸಪ್ತತ್ರಿಂಶಃ ಸರ್ಗಃ

ಸರ್ಗ – 37

ಕೈಕೇಯಿ ತಂದುಕೊಡುವ ನಾರುಡೆಯನ್ನು ರಾಮಲಕ್ಷ್ಮಣಸೀತೆಯರು ಧರಿಸುವುದು. ವಸಿಷ್ಠರ ಕೋಪ

ಮಹಾಮಾತ್ರವಚಃ ಶ್ರುತ್ವಾ ರಾಮೋ ದಶರಥಂ ತದಾ ।
ಅಭ್ಯಭಾಷತ ವಾಕ್ಯಂ ತು ವಿನಯಜ್ಞೋ ವಿನೀತವತ್ ॥೧॥

ಪ್ರಧಾನ ಮಂತ್ರಿ ಸಿದ್ಧಾರ್ಥನು ಹೇಳಿದ್ದನ್ನು ಕೇಳಿ ವಿನಯಜ್ಞನಾದ ಶ್ರೀರಾಮ ವಿನೀತನಾಗಿ ದಶರಥನಿಗೆ ನುಡಿದ.

ತ್ಯಕ್ತಭೋಗಸ್ಯ ಮೇ ರಾಜನ್ ವನೇ ವನ್ಯೇನ ಜೀವತಃ ।
ಕಿಂ ಕಾರ್ಯಮನುಯಾತ್ರೇಣ ತ್ಯಕ್ತಸಂಗಸ್ಯ ಸರ್ವತಃ ॥೨॥

ಸಕಲ ಭೋಗಗಳನ್ನು ತ್ಯಜಿಸಿ ಕಾಡಿನಲ್ಲಿ ಸಿಗುವುದನ್ನು ಉಂಡು ಜೀವನ ಸಾಗಿಸಲು ಹೊರಟಿರುವ, ಸರ್ವಸಂಗ ಪರಿತ್ಯಾಗ ಮಾಡಿರುವ ನನಗೆ ಚತುರಂಗ ಬಲ ಹಿಂಬಾಲಿಸಿ ಬರುವುದರಿಂದೇನು ಪ್ರಯೋಜನ ?

ಯೋ ಹಿ ದತ್ತ್ವಾ ಗಜಶ್ರೇಷ್ಠಂ ಕಕ್ಷ್ಯಾಯಾಂ ಕುರುತೇ ಮನಃ ।
ರಜ್ಜುಸ್ನೇಹೇನ ಕಿಂ ತಸ್ಯ ತ್ಯಜತಃ ಕುಂಜರೋತ್ತಮಮ್ ॥೩॥

ಶ್ರೇಷ್ಠ ಆನೆಯನ್ನೇ ಕೊಟ್ಟಮೇಲೆ ಅದರ ನಡುಕಟ್ಟಿನಲ್ಲಿ ಯಾರು ಆಸೆ ಪಡುತ್ತಾನೆ? ಹಗ್ಗದ ಮೇಲಿನ ಆಸೆಯಿಂದ ಅವನಿಗೆ ಆಗಬೇಕಾದ್ದೇನು? ಶ್ರೇಷ್ಠವಾದ ಆನೆಯನ್ನು ಬಿಟ್ಟಮೇಲೆ ಹಗ್ಗದಿಂದೇನಾಗಬೇಕು?

ತಥಾ ಮಮ ಸತಾಂ ಶ್ರೇಷ್ಠ ಕಿಂ ಧ್ವಜಿನ್ಯಾ ಜಗತ್ಪತೇ ।
ಸರ್ವಾಣ್ಯೇವಾನುಜಾನಾಮಿ ಚೀರಾಣ್ಯೇವಾನಯಂತು ಮೇ ॥೪॥

ಹಾಗೇ, ಸಜ್ಜನರಲ್ಲಿ ಶ್ರೇಷ್ಠನಾದ ರಾಜನೆ, ನನಗೆ ಸೈನ್ಯವೇಕೆ? ಎಲ್ಲವನ್ನೂ ನಾನು ಭರತನಿಗಾಗಿ ಬಿಟ್ಟುಕೊಡುತ್ತಿದ್ದೇನೆ. ನಾರುಡೆಗಳನ್ನೇ ದಾಸಿಯರು ತಂದುಕೊಡಲಿ.

ಖನಿತ್ರಪಿಟಕೇ ಚೋಭೇ ಸಮಾನಯತ ಗಚ್ಛತ ।
ಚತುರ್ದಶ ವನೇ ವಾಸಂ ವರ್ಷಾಣಿ ವಸತೋ ಮಮ ॥೫॥

ಎರಡು ಗುದ್ದಲಿ ಮಂಕರಿಗಳನ್ನು ಮಾತ್ರ, ದಾಸಿಯರೇ, ಹದಿನಾಲ್ಕು ವರ್ಷಕಾಲ ವಾಸಮಾಡಲಿರುವ ನನಗೆ ತಂದುಕೊಡಿ, ಹೋಗಿ.

ಅಥ ಚೀರಾಣಿ ಕೈಕೇಯೀ ಸ್ವಯಮಾಹೃತ್ಯ ರಾಘವಮ್ ।
ಉವಾಚ ಪರಿಧತ್ಸ್ವೇತಿ ಜನೌಘೇ ನಿರಪತ್ರಪಾ ॥೬॥

'ನಾಚಿಕೆಗೆಟ್ಟ ಕೈಕೇಯಿ ಕೂಡಲೇ ತಾನೇ ಹೋಗಿ ನಾರುಡೆಗಳನ್ನು ತಂದು ಜನಸಮೂಹದ ನಡುವೇ ರಾಮನಿಗೆ ಕೊಟ್ಟು, ಇಕೋ ಉಟ್ಟುಕೋ' ಎಂದಳು.

ಸ ಚೀರೇ ಪುರುಷವ್ಯಾಘ್ರಃ ಕೈಕೇಯ್ಯಾಃ ಪ್ರತಿಗೃಹ್ಯ ತೇ ।
ಸೂಕ್ಷ್ಮವಸ್ತ್ರಮವಕ್ಷಿಪ್ಯ ಮುನಿವಸ್ತ್ರ್ಯಾವಸ್ತ ಹ ॥೭॥

ಪುರುಷೋತ್ತಮ ರಾಮ ಎರಡು ನಾರುಡೆಗಳನ್ನು ಕೈಕೇಯಿಯಿಂದ ತೆಗೆದು-ಕೊಂಡು ತನ್ನ ಸೂಕ್ಷ್ಮವಸ್ತ್ರಗಳನ್ನು ತ್ಯಜಿಸಿ ಆ ಮುನಿವಸ್ತ್ರಗಳನ್ನು ಧರಿಸಿದ.

ಲಕ್ಷ್ಮಣಶ್ಚಾಪಿ ತತ್ರೈವ ವಿಹಾಯ ವಸನೇ ಶುಭೇ ।
ತಾಪಸಾಚ್ಛಾದನೇ ಚೈವ ಜಗ್ರಾಹ ಪಿತುರಗ್ರತಃ ॥೮॥

ಲಕ್ಷ್ಮಣನೂ ಕೂಡ ಅಲ್ಲಿಯೇ ಶುಭವಸ್ತ್ರಗಳನ್ನು ಬಿಚ್ಚಿ ತಂದೆಯ ಎದುರಿ-ನಲ್ಲಿಯೇ ತಾಪಸರ ವಸ್ತ್ರಗಳನ್ನು ಧರಿಸಿದ.

ಅಥಾತ್ಮಪರಿಧಾನಾರ್ಥಂ ಸೀತಾ ಕೌಶೇಯವಾಸಿನೀ ।
ಸಂಪ್ರೇಕ್ಷ್ಯ ಚೀರಂ ಸಂತ್ರಸ್ತಾ ಪೃಷತೀ ವಾಗುರಾಮಿವ ॥೯॥

ಪಟ್ಟೆಪೀತಾಂಬರ ಉಟ್ಟಿದ್ದ ಸೀತೆ ತಾನೂ ನಾರುಡೆ ಉಡಲು ಅವನ್ನು ನೋಡಿ ಹೆಣ್ಣು ಜಿಂಕೆ ಬೇಡನ ಬಲೆಯನ್ನು ಕಂಡು ಬೆದರುವಂತೆ ಬೆದರಿದಳು.

ಸಾ ವ್ಯಪತ್ರಪಮಾಣೈವ ಪ್ರಗೃಹ್ಯ ಚ ಸುದುರ್ಮನಾಃ ।
ಕೈಕೇಯ್ಯಾಃ ಕುಶಚೀರೇ ತೇ ಜಾನಕೀ ಶುಭಲಕ್ಷಣಾ ॥೧೦॥

ನಾಚುತ್ತಲೇ ಕೈಕೇಯಿಯಿಂದ, ದರ್ಭೆಯಿಂದ ನಿರ್ಮಿತವಾದ ವಸ್ತ್ರಗಳನ್ನು ತೆಗೆದುಕೊಂಡು, ಶುಭಲಕ್ಷಣೆಯಾದ ಸೀತೆ ಬಲು ದುಃಖಿಸಿದಳು.

ಅಶ್ರುಸಂಪೂರ್ಣನೇತ್ರಾ ಚ ಧರ್ಮಜ್ಞಾ ಧರ್ಮದರ್ಶಿನೀ ।
ಗಂಧರ್ವರಾಜಪ್ರತಿಮಂ ಭರ್ತಾರಮಿದಮಬ್ರವೀತ್ ॥೧೧॥

ಕಣ್ಣಲ್ಲಿ ನೀರು ತುಂಬಿಕೊಂಡಳು, ಧರ್ಮಜ್ಞಳಾದ ಧರ್ಮದರ್ಶಿನಿ ಸೀತೆ. ಗಂಧರ್ವರಾಜ ಸದೃಶನಾದ ಪತಿಗೆ ಹೇಳಿದಳು.

ಕಥಂ ನು ಚೀರಂ ಬಧ್ನಂತಿ ಮುನಯೋ ವನವಾಸಿನಃ ।
ಇತಿ ಹ್ಯಕುಶಲಾ ಸೀತಾ ಸಾ ಮುಮೋಹ ಮುಹುರ್ಮುಹುಃ ॥೧೨॥

'ವನವಾಸಿಗಳಾದ ಮುನಿಗಳು ಹೇಗೆ ಈ ನಾರು ಬಟ್ಟೆ ಉಡುತ್ತಾರೆ?' ಎಂದು. ಹೀಗೆ ನಾರುಡೆ ಉಡುವುದರಲ್ಲಿ ಕುಶಲತೆಯಿಲ್ಲದ ಸೀತೆ ಅದನ್ನು ತಿರುಗಿಸಿ ತಿರುಗಿಸಿ ನೋಡಿ ಏನೂ ತೋಚದೆ ಸುಮ್ಮನೆ ನಿಂತುಬಿಟ್ಟಳು.

ಕೃತ್ವಾ ಕಂಠೇ ಚ ಸಾ ಚೀರಮೇಕಮಾದಾಯ ಪಾಣಿನಾ ।
ತಸ್ಥೌ ಹ್ಯಕುಶಲಾ ತತ್ರ ವ್ರೀಡಿತಾ ಜನಕಾತ್ಮಜಾ ॥೧೩॥

ಬಳಿಕ ಒಂದು ನಾರುಡೆಯನ್ನು ಕತ್ತಿನಲ್ಲಿ ಇಳಿಬಿಟ್ಟು ಇನ್ನೊಂದನ್ನು ಕೈಯಲ್ಲಿ ಹಿಡಿದು ಉಡಲು ಗೊತ್ತಿಲ್ಲದೆ ನಾಚಿ ನಿಂತಳು.

ತಸ್ಯಾಸ್ತತ್ ಕ್ಷಿಪ್ರಮಾಗಮ್ಯ ರಾಮೋ ಧರ್ಮಭೃತಾಂ ವರಃ ।
ಚೀರಂ ಬಬಂಧ ಸೀತಾಯಾಃ ಕೌಶೇಯಸ್ಯೋಪರಿ ಸ್ವಯಮ್ ॥೧೪॥

ಧರ್ಮಾತ್ಮರಲ್ಲಿ ಶ್ರೇಷ್ಠನಾದ ಶ್ರೀರಾಮ ಒಡನೆ ಬಂದು ಸೀತೆಯ ಪೀತಾಂಬರದ ಮೇಲೆ ನಾರುಡೆಯನ್ನು ಸ್ವತಃ ಉಡಿಸಿದ.

ರಾಮಂ ಪ್ರೇಕ್ಷ್ಯ ತು ಸೀತಾಯಾ ಬಧ್ನಂತಂ ಚೀರಮುತ್ತಮಮ್ ।
ಅಂತಃಪುರಗತಾ ನಾರ್ಯೋ ಮುಮುಚುರ್ವಾರಿ ನೇತ್ರಜಮ್ ॥೧೫॥

ಸೀತೆಗೆ ನಾರುಡೆ ಉಡಿಸುತ್ತಿದ್ದಾಗ ಉತ್ತಮನಾದ ರಾಮನನ್ನು ಅಂತಃಪುರದ ನಾರಿಯರು ನೋಡಿ ಕಣ್ಣೀರು ಸುರಿಸಿದರು.

ಊಚುಶ್ಚ ಪರಮಾಯಸ್ತಾ ರಾಮಂ ಜ್ವಲಿತತೇಜಸಮ್ ।
ವತ್ಸ ನೈವಂ ನಿಯುಕ್ತೇಯಂ ವನವಾಸೇ ಮನಸ್ವಿನೀ ॥೧೬॥

ಬಲು ಖಿನ್ನರಾದ ನಾರಿಯರು ತೇಜಸ್ಸಿನಿಂದ ಬೆಳಗುವ ರಾಮನಿಗೆ ನುಡಿದರು; ಮಗು, ಮನಸ್ವಿನಿಯಾದ ಸೀತೆ ಕಾಡಿಗೆ ಹೋಗಲು ರಾಜನ ಆಜ್ಞೆ ಇಲ್ಲ.

ಪಿತುರ್ವಾಕ್ಯಾನುರೋಧೇನ ಗತಸ್ಯ ವಿಜನಂ ವನಮ್ ।
ತಾವದ್ದರ್ಶನಮಸ್ಯಾ ನಃ ಸಫಲಂ ಭವತು ಪ್ರಭೋ ॥೧೭॥

ಪಿತೃವಾಕ್ಯಾನುಸಾರ ನೀನು ನಿರ್ಜನವಾದ ಅರಣ್ಯದಲ್ಲಿ ವಾಸಮಾಡಿ ಹಿಂತಿರುಗಿ ಬರುವವರೆಗೆ, ಪ್ರಭು, ನಮ್ಮ ಜನ್ಮ ಇಲ್ಲಿ ಇವಳ ದರ್ಶನದಿಂದ ಸಫಲವಾಗಲಿ.

ಲಕ್ಷ್ಮಣೇನ ಸಹಾಯೇನ ವನಂ ಗಚ್ಛಸ್ವ ಪುತ್ರಕ ।
ನೇಯಮರ್ಹತಿ ಕಲ್ಯಾಣೀ ವಸ್ತುಂ ತಾಪಸವದ್ವನೇ ॥೧೮॥

ಮಗು, ಲಕ್ಷ್ಮಣನೊಂದಿಗೇ ನೀನು ಕಾಡಿಗೆ ಹೋಗು. ಶೋಭನೆಯಾದ ಸೀತೆ ತಾಪಸರಂತೆ ಕಾಡಿನಲ್ಲಿ ವಾಸ ಮಾಡಬಾರದು.

ಕುರು ನೋ ಯಾಚನಾಂ ಪುತ್ರ ಸೀತಾ ತಿಷ್ಠತು ಭಾಮಿನೀ ।
ಧರ್ಮನಿತ್ಯಃ ಸ್ವಯಂ ಸ್ಥಾತುಂ ನ ಹೀದಾನೀಂ ತ್ವಮಿಚ್ಛಸಿ ॥೧೯॥

ಮಗು, ನಮ್ಮ ಬೇಡಿಕೆಯನ್ನು ಈಡೇರಿಸು, ಸೀತೆ ಇಲ್ಲಿಯೆ ಇರಲಿ, ಧರ್ಮ-ನಿಷ್ಠನಾದ ನೀನಂತೂ ಸ್ವತಃ ಇಲ್ಲಿ ನಿಲ್ಲಲು ಒಪ್ಪುತ್ತಿಲ್ಲ.

ತಾಸಾಮೇವಂವಿಧಾ ವಾಚಃ ಶೃಣ್ವನ್ ದಶರಥಾತ್ಮಜಃ ।
ಬಬಂಧೈವ ತದಾ ಚೀರಂ ಸೀತಯಾ ತುಲ್ಯಶೀಲಯಾ ॥೨೦॥

ಚೀರೇ ಗೃಹೀತೇ ತು ತಯಾ ಸಮೀಕ್ಷ್ಯ ನೃಪತೇರ್ಗುರುಃ ।
ನಿವಾರ್ಯ ಸೀತಾಂ ಕೈಕೇಯೀಂ ವಸಿಷ್ಠೋ ವಾಕ್ಯಮಬ್ರವೀತ್ ॥೨೧॥

ಅಂತಃಪುರನಾರಿಯರ ಇಂಥ ಮಾತುಗಳನ್ನು ಆಲಿಸುತ್ತಲೆ ಶ್ರೀರಾಮ ಸೀತೆಗೆ ನಾರುಡೆ ಉಡಿಸಿಯೇಬಿಟ್ಟ. ರಾಮನಿಗೆ ಅನುರೂಪವಾದ ಶೀಲಉಳ್ಳ ಸೀತೆ ನಾರುಡೆಯನ್ನು ತೆಗೆದುಕೊಂಡಾಗ ರಾಜಗುರು ವಸಿಷ್ಠರು ಅವಳನ್ನು ತಡೆದು ಕೈಕೇಯಿಗೆ ನುಡಿದರು.

ಅತಿಪ್ರವೃತ್ತೇ ದುರ್ಮೇಧೇ ಕೈಕೇಯಿ ಕುಲಪಾಂಸನಿ ।
ವಂಚಯಿತ್ವಾ ಚ ರಾಜಾನಂ ನ ಪ್ರಮಾಣೇऽವತಿಷ್ಠಸೇ ॥೨೨॥

ಮೇರೆ ಮೀರಿದ ದುರ್ನಡತೆಯವಳೆ, ದುರ್ಬುದ್ಧಿಯವಳೆ, ಕುಲಕ್ಕೆ ಕಳಂಕ ತರುವವಳೆ ಕೈಕೇಯಿ, ರಾಜನನ್ನು ವಂಚಿಸಿ ವರಪಡೆದೂ ಕೂಡ ಅದರ ಎಲ್ಲೆಯೊಳಗೇ ನೀನು ನಿಲ್ಲುತ್ತಿಲ್ಲ.

ನ ಗಂತವ್ಯಂ ವನಂ ದೇವ್ಯಾ ಸೀತಯಾ ಶೀಲವರ್ಜಿತೇ ।
ಅನುಷ್ಠಾಸ್ಯತಿ ರಾಮಸ್ಯ ಸೀತಾ ಪ್ರಕೃತಮಾಸನಮ್ ॥೨೩॥

ಶೀಲವಿಲ್ಲದವಳೆ, ದೇವಿ ಸೀತೆ ಕಾಡಿಗೆ ಹೋಗಬಾರದು. ಅವಳು ಕಾಡಿಗೆ ಹೋಗಬೇಕೆಂದು ನೀನು ಪಡೆದ ವರದಲ್ಲಿ ಸೇರಿಲ್ಲ. ರಾಮನಿಗೆಂದು ನಿಶ್ಚಿತವಾದ ರಾಜಸಿಂಹಾಸನವನ್ನು ಅವನು ಕಾಡಿಂದ ಹಿಂತಿರುಗಿ ಬರುವವರೆಗೆ ಸೀತೆ ಅಲಂಕರಿ-ಸುತ್ತಾಳೆ.

ಆತ್ಮಾ ಹಿ ದಾರಾಃ ಸರ್ವೇಷಾಂ ದಾರಸಂಗ್ರಹವರ್ತಿನಾಮ್ ।
ಆತ್ಮೇಯಮಿತಿ ರಾಮಸ್ಯ ಪಾಲಯಿಷ್ಯತಿ ಮೇದಿನೀಮ್ ॥೨೪॥

ಗೃಹಸ್ಥಾಶ್ರಮದಲ್ಲಿರುವವರಿಗೆ ಪತ್ನಿ ಪತಿಯ ಒಂದು ಭಾಗವೇ ಆಗಿರುತ್ತಾಳೆ. 'ಅರ್ಧೋ ವಾ ಏಷ ಆತ್ಮನೋ ಯತ್ ಪತ್ನೀ' ಎಂದು ಶ್ರುತಿ ಇದೆ. ಹೀಗಾಗಿ ರಾಮನ ಭಾಗವಾಗಿರುವ ಸೀತೆ ರಾಜ್ಯವನ್ನಾಳಲಿ.

ಅಥ ಯಾಸ್ಯತಿ ವೈದೇಹೀ ವನಂ ರಾಮೇಣ ಸಂಗತಾ ।
ವಯಮಪ್ಯನುಯಾಸ್ಯಾಮಃ ಪುರಂ ಚೇದಂ ಗಮಿಷ್ಯತಿ ॥೨೫॥

ಆದರೂ ಸೀತೆ ರಾಮನೊಂದಿಗೆ ಕಾಡಿಗೆ ಹೋದರೆ ನಾವೆಲ್ಲರೂ ಅವನನ್ನು ಹಿಂಬಾಲಿಸುತ್ತೇವೆ. ಇಡೀ ಅಯೋಧ್ಯೆಯೇ ಅನನ್ನು ಹಿಂಬಾಲಿಸಿ ಹೋಗುತ್ತದೆ.

ಅಂತಪಾಲಾಶ್ಚ ಯಾಸ್ಯಂತಿ ಸದಾರೋ ಯತ್ರ ರಾಘವಃ ।
ಸಹೋಪಜೀವ್ಯಂ ರಾಷ್ಟ್ರಂ ಚ ಪುರಂ ಚ ಸಪರಿಚ್ಛದಮ್ ॥೨೬॥

ಅಂತಃಪುರ ಜನರೂ ಧನಧಾನ್ಯಯುಕ್ತರಾದ ಪ್ರಜೆಗಳೂ ದಾಸದಾಸೀ ಯುಕ್ತವಾದ ನಗರವೂ ಪತ್ನೀಸಮೇತನಾಗಿ ಶ್ರೀರಾಮನೆಲ್ಲಿರುವನೋ ಅಲ್ಲಿಗೇ ಹೋಗುವರು.

ಭರತಶ್ಚ ಸಶತ್ರುಘ್ನಶ್ಚೀರವಾಸಾ ವನೇಚರಃ ।
ವನೇ ವಸಂತಂ ಕಾಕುತ್ಸ್ಥಮನುವತ್ಸ್ಯತಿ ಪೂರ್ವಜಮ್ ॥೨೭॥

ಭರತನೂ ಶತ್ರುಘ್ನನೂ ನಾರುಡೆ ಉಟ್ಟು ವನವಾಸಿಗಳಾಗಿ ಅರಣ್ಯದಲ್ಲಿ ವಾಸಮಾಡುವ ಅಣ್ಣನಾದ ರಾಮನನ್ನೇ ಅನುಸರಿಸಿ ವಾಸಮಾಡುವರು.

ತತಃ ಶೂನ್ಯಾಂ ಗತಜನಾಂ ವಸುಧಾಂ ಪಾದಪೈಃ ಸಹ ।
ತ್ವಮೇಕಾ ಶಾಧಿ ದುರ್ಮತ್ತಾ ಪ್ರಜಾನಾಮಹಿತೇ ರತಾ ॥೨೮॥

ಆಗ ಶೂನ್ಯವಾದ ನಿರ್ಜನವಾದ ಭೂಮಿಯನ್ನು ದುರ್ಮಡತೆಯವಳು ಪ್ರಜೆಗಳಿಗೆ ಅಹಿತ ಉಂಟುಮಾಡುವುದರಲ್ಲಿಯೆ ನಿರತಳಾದ ನೀನು ಮರಗಿಡ-ಗಳೊಂದಿಗೆ ಒರ್ವಳೇ ಆಳುತ್ತಿರು.

ನ ಹಿ ತದ್ಭವಿತಾ ರಾಷ್ಟ್ರಂ ಯತ್ರ ರಾಮೋ ನ ಭೂಪತಿಃ ।
ತದ್ವನಂ ಭವಿತಾ ರಾಷ್ಟ್ರಂ ಯತ್ರ ರಾಮೋ ನಿವತ್ಸ್ಯತಿ ॥೨೯॥

ರಾಮನು ರಾಜನಾಗದಿದ್ದಲ್ಲಿ ರಾಷ್ಟ್ರವು ರಾಷ್ಟ್ರವಾಗಿರುವುದಿಲ್ಲ. ರಾಮ ರಾಜನಾಗಿರುವಲ್ಲಿ ವನವೂ ರಾಷ್ಟ್ರವಾಗುತ್ತದೆ.

ನ ಹ್ಯದತ್ತಾಂ ಮಹೀಂ ಪಿತ್ರಾ ಭರತಃ ಶಾಸ್ತುಮರ್ಹತಿ ।
ತ್ವಯಿ ವಾ ಪುತ್ರವದ್ವಸ್ತುಂ ಯದಿ ಜಾತೋ ಮಹೀಪತೇಃ ॥೩೦॥

ಭರತ ನಿಜವಾಗಿ ರಾಜನಿಗೆ ಹುಟ್ಟಿದವನೇ ಆದರೆ ತಂದೆ ಪ್ರೀತಿಯಿಂದ ಕೊಡದಿರುವ ಭೂಮಿಯನ್ನು ತಾನು ಆಳಲು ಬಯಸಲಾರ. ನಿನ್ನ ಬಳಿ ಮಗನಂತೆ ವಾಸಮಾಡಲು ಬಯಸಲಾರ.

ಯದ್ಯಪಿ ತ್ವಂ ಕ್ಷಿತಿತಲಾದ್ಗಗನಂ ಚೋತ್ಪತಿಷ್ಯಸಿ ।
ಪಿತೃವಂಶಚರಿತ್ರಜ್ಞಃ ಸೋಽನ್ಯಥಾ ನ ಕರಿಷ್ಯತಿ ॥೩೧॥

ಯದ್ಯಪಿ ಭೂತಲದಿಂದ ಗಗನಕ್ಕೇ ನೀನು ನೆಗೆದರೂ ಪಿತೃವಂಶದ ಇತಿಹಾಸ-ವನ್ನು ಬಲ್ಲ ಭರತನು ಮಾತ್ರ ನಾನು ಹೇಳಿದಂತೇ ಮಾಡುವನು ಹೊರತು ಅನ್ಯಥಾ ಮಾಡುವುದಿಲ್ಲ.

ತತ್ತ್ವಯಾ ಪುತ್ರಗರ್ಧಿನ್ಯಾ ಪುತ್ರಸ್ಯ ಕೃತಮಪ್ರಿಯಮ್ ।
ಲೋಕೇ ಹಿ ನ ಸ ವಿದ್ಯೇತ ಯೋ ನ ರಾಮಮನುವ್ರತಃ ॥೩೨॥

ಪುತ್ರನನ್ನು ಪ್ರೀತಿಸುವ ನೀನು ನಿಜವಾಗಿ ಪುತ್ರನಿಗೆ ಅಪ್ರಿಯವಾದ ಕಾರ್ಯ-ವನ್ನೇ ಮಾಡಿರುವೆ. ರಾಮನನ್ನು ಅನುಸರಿಸದವನು ಲೋಕದಲ್ಲಿ ಯಾರೂ ಇರಲಾರ.

ದ್ರಕ್ಷ್ಯಸ್ಯದ್ಯೈವ ಕೈಕೇಯಿ ಪಶುವ್ಯಾಲಮೃಗದ್ವಿಜಾನ್ ।
ಗಚ್ಛತಃ ಸಹ ರಾಮೇಣ ಪಾದಪಾಂಶ್ಚ ತದುನ್ಮುಖಾನ್ ॥೩೩॥

ಕೈಕೇಯಿ, ನೀನು ಇಂದೇ ಪಶು ಸರ್ಪ ಮೃಗ ಪಕ್ಷಿಗಳು ಕೂಡ ರಾಮನೊಂದಿಗೇ ಹೋಗುವುದನ್ನು ನೋಡುವೆ, ಮರಗಿಡಗಳೂ ರಾಮನ ಕಡೆಗೇ ತಿರುಗುವುದನ್ನು ಕಾಣುವೆ.

ಅಥೋತ್ತಮಾನ್ಯಾಭರಣಾನಿ ದೇವಿ
ದೇಹಿ ಸ್ನುಷಾಯೈ ವ್ಯಪನೀಯ ಚೀರಮ್ ।
ನ ಚೀರಮಸ್ಯಾಃ ಪ್ರವಿಧೀಯತೇತಿ
ನ್ಯವಾರಯತ್ತದ್ವಸನಂ ವಸಿಷ್ಠಃ ॥೩೪॥

'ದೇವಿ, ಸೀತೆ ಉಟ್ಟಿರುವ ನಾರುಡೆಯನ್ನು ತೆಗೆದುಹಾಕಿ ಉತ್ತಮವಾದ ಆಭರಣಗಳನ್ನು ಅವಳಿಗೆ ನೀಡು. ನಿನಗೆ ರಾಜ ಕೊಟ್ಟ ವರದ ಪ್ರಕಾರ ಸೀತೆಗೆ ನಾರುಡೆ ಉಡುವುದು ವಿಹಿತವಾಗಿಲ್ಲ' ಎಂದು ವಸಿಷ್ಠರು ಸೀತೆ ನಾರುಡೆ ಉಡುವು-ದನ್ನು ತಡೆದರು.

ಏಕಸ್ಯ ರಾಮಸ್ಯ ವನೇ ನಿವಾಸ-
ಸ್ತ್ವಯಾ ವೃತಃ ಕೇಕಯರಾಜಪುತ್ರಿ ।
ವಿಭೂಷಿತೇಯಂ ಪ್ರತಿಕರ್ಮನಿತ್ಯಾ
ವಸತ್ವರಣ್ಯೇ ಸಹ ರಾಘವೇಣ ॥೩೫॥

ರಾಮನಿಗೊಬ್ಬನಿಗೇ ವನವಾಸ ವರವನ್ನು ಕೇಳಿ ಪಡೆದಿರುವೆ. ಅದರಿಂದ ಕೈಕೇಯಿ, ಸೀತೆ ನಿತ್ಯವೂ ಅಲಂಕಾರ ಮಾಡಿಕೊಂಡು ಅಲಂಕೃತಳಾಗಿಯೆ ರಾಮ-ನೊಂದಿಗೆ ಅರಣ್ಯದಲ್ಲಿ ವಾಸಮಾಡಲಿ.

ಯಾನೈಶ್ಚ ಮುಖ್ಯೈಃ ಪರಿಚಾರಕೈಶ್ಚ
ಸುಸಂವೃತಾ ಗಚ್ಛತು ರಾಜಪುತ್ರೀ ।
ವಸ್ತ್ರೈಶ್ಚ ಸರ್ವೈಃ ಸಹಿತಾ ವಿಧಾನೈ-
ರ್ನೇಯಂ ವೃತಾ ತೇ ವರಸಂಪ್ರದಾನೇ ॥೩೬॥

ಶ್ರೇಷ್ಠ ವಾಹನಗಳಿಂದಲೂ ಪರಿಚಾರಕರಿಂದಲೂ ಕೂಡಿಯೇ ಎಲ್ಲ ವಸ್ತ್ರ

ಉಪಕರಣಗಳೊಂದಿಗೆ ರಾಜಕುಮಾರಿ ಸೀತೆ ರಾಮನೊಡನೆ ಅರಣ್ಯಕ್ಕೆ ಹೋಗಲಿ. ಸೀತೆಯೂ ತಾಪಸವೇಷ ಧರಿಸಬೇಕೆಂದೇನೂ ವರದಾನಕಾಲದಲ್ಲಿ ಹೇಳಿಲ್ಲ.

ತಸ್ಮಿಂಸ್ತಥಾ ಜಲ್ಪತಿ ವಿಪ್ರಮುಖ್ಯೇ
ಗುರೌ ನೃಪಸ್ಯಾಪ್ರಮಿತಪ್ರಭಾವೇ ।
ನೈವ ಸ್ಮ ಸೀತಾ ವಿನಿವೃತ್ತಭಾವಾ
ಪ್ರಿಯಸ್ಯ ಭರ್ತುಃ ಪ್ರತಿಕಾರಕಾಮಾ ॥೩೭॥

ಅಮಿತ ಪ್ರಭಾವಉಳ್ಳ ಬ್ರಾಹ್ಮಣೋತ್ತಮರಾದ ರಾಜಗುರು ವಸಿಷ್ಠರು ಹೀಗೆ ಹೇಳುತ್ತಿದ್ದರೂ ಪ್ರಿಯ ಪತಿಗೆ ಸದೃಶಳಾಗಿರಬೇಕೆಂಬ ಇಚ್ಛೆಯಿಂದ ಸೀತೆ ನಾರುಡೆ ಉಡುವ ತನ್ನ ನಿರ್ಧಾರದಿಂದ ವಿಚಲಿತಳಾಗಲಿಲ್ಲ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಮೂವತ್ತೇಳನೇ ಸರ್ಗ ಮುಗಿಯಿತು.

❖

ಅಷ್ಟಾತ್ರಿಂಶಃ ಸರ್ಗಃ

ಸರ್ಗ – 38

ಸೀತೆ ನಾರುಡೆ ಉಡುವುದನ್ನು ಕಂಡು ಜನರು ದಶರಥನನ್ನು ನಿಂದಿಸಿದಾಗ ದಶರಥ ಕೈಕೇಯಿಯನ್ನು ಆಕ್ಷೇಪಿಸುವುದು. ರಾಮನು ತಂದೆಯಲ್ಲಿ ಕೌಸಲ್ಯೆಯನ್ನು ಸರಿಯಾಗಿ ನೋಡಿಕೊಳ್ಳಲು ಪ್ರಾರ್ಥಿಸುವುದು.

ತಸ್ಯಾಂ ಚೀರಂ ವಸಾನಾಯಾಂ ನಾಥವತ್ಯಾಮನಾಥವತ್ ।
ಪ್ರಚುಕ್ರೋಶ ಜನಃ ಸರ್ವೋ ಧಿಕ್ತ್ವಾಂ ದಶರಥಂ ತ್ವಿತಿ ॥೧॥

ನಾಥನಿದ್ದರೂ ಅನಾಥೆಯಂತೆ ಸೀತೆ ವಿಧವೆಯರಿಗೇ ಯೋಗ್ಯವಾದ ನಾರುಡೆ ಉಡುವಾಗ ಜನರೆಲ್ಲರೂ ದಶರಥನಿಗೆ ಧಿಕ್ಕಾರ ಎಂದು ಕೂಗಿಕೊಂಡರು.

ತೇನ ತತ್ರ ಪ್ರಣಾದೇನ ದುಃಖಿತಃ ಸ ಮಹೀಪತಿಃ ।
ಚಿಚ್ಛೇದ ಜೀವಿತೇ ಶ್ರದ್ಧಾಂ ಧರ್ಮೇ ಯಶಸಿ ಚಾತ್ಮನಃ ॥೨॥

ಜನರ ಧಿಕ್ಕಾರದ ಧ್ವನಿಯನ್ನು ಕೇಳಿ ದುಃಖಿತನಾದ ದಶರಥನು ತನ್ನ ಬದುಕಿನಲ್ಲಿಯೂ ಧರ್ಮದಲ್ಲಿಯೂ ಯಶಸ್ಸಿನಲ್ಲಿಯೂ ಆಸಕ್ತಿಯನ್ನೇ ಕಳೆದುಕೊಂಡ.

ಸ ನಿಃಶ್ವಸ್ಯೋಷ್ಣಮೈಕ್ಷ್ವಾಕಸ್ತಾಂ ಭಾರ್ಯಾಮಿದಮಬ್ರವೀತ್ ।
ಕೈಕೇಯಿ ಕುಶಚೀರೇಣ ನ ಸೀತಾ ಗಂತುಮರ್ಹತಿ ॥೩॥

ದಶರಥನು ಬಿಸಿ ನಿಟ್ಟುಸಿರು ಬಿಡುತ್ತ ಕೈಕೇಯಿಗೆ ನುಡಿದ— ಕೈಕೇಯಿ, ದರ್ಭೆಯ ವಸ್ತ್ರವುಟ್ಟು ಸೀತೆ ಹೋಗಬಾರದು.

ಸುಕುಮಾರಾ ಚ ಬಾಲಾ ಚ ಸತತಂ ಚ ಸುಖೋಚಿತಾ ।
ನೇಯಂ ವನಸ್ಯ ಯೋಗ್ಯೇತಿ ಸತ್ಯಮಾಹ ಗುರುರ್ಮಮ ॥೪॥

ಸುಕುಮಾರಿ, ಬಾಲೆ, ಸದಾ ಸುಖವನ್ನು ಅನುಭವಿಸಲು ಯೋಗ್ಯಳು ಸೀತೆ. ವನವಾಸಕ್ಕೆ ಇವಳು ತಕ್ಕವಳಲ್ಲ ಎಂದು ನನ್ನ ಗುರು ವಸಿಷ್ಠರು ಸತ್ಯವನ್ನೇ ಹೇಳುತ್ತಿದ್ದಾರೆ.

ಇಯಂ ಹಿ ಕಸ್ಯಾಪಕರೋತಿ ಕಿಂಚಿತ್
ತಪಸ್ವಿನೀ ರಾಜವರಸ್ಯ ಕನ್ಯಾ ।

ಯಾ ಚೀರಮಾಸಾದ್ಯ ಜನಸ್ಯ ಮಧ್ಯೇ
ಸ್ಥಿತಾ ವಿಸಂಜ್ಞಾ ಶ್ರಮಣೇವ ಕಾಚಿತ್ ॥೫॥

ಸೀತೆ ರಾಜಕುಮಾರಿ, ತಪಸ್ವಿನಿ, ಯಾರಿಗೆ ಸ್ವಲ್ಪವಾದರೂ ಅಪಕಾರ ಮಾಡು-ತ್ತಾಳೆ? ಅವಳು ಈಗ ನಾರುಡೆ ಉಟ್ಟು ಜನರ ಮಧ್ಯದಲ್ಲಿ ಭಿಕ್ಷುಕಿಯಂತೆ ನಿಂತು ಗಾಬರಿಯಲ್ಲಿ ಮೈಮರೆಯುತ್ತಾಳೆ!

ಚೀರಾಣ್ಯಪಾಸ್ಯಾಜ್ಜನಕಸ್ಯ ಕನ್ಯಾ
ನೇಯಂ ಪ್ರತಿಜ್ಞಾ ಮಮ ದತ್ತಪೂರ್ವಾ ।
ಯಥಾಸುಖಂ ಗಚ್ಛತು ರಾಜಪುತ್ರೀ
ವನಂ ಸಮಗ್ರಾ ಸಹ ಸರ್ವರತ್ನೈಃ ॥೬॥

ಜಾನಕಿ ನಾರುಡೆಗಳನ್ನು ಬಿಚ್ಚಿಹಾಕಲಿ. ಇವಳಿಗೆ ನಾರುಡೆ ಉಡಿಸುವ ಆಜ್ಞೆ-ಯನ್ನು ನಾನು ಕೊಟ್ಟೇ ಇಲ್ಲ. ಎಲ್ಲ ರತ್ನಗಳಿಂದ ಯುಕ್ತಳಾಗಿಯೇ ರಾಜಕುಮಾರಿ ಸುಖವಾಗಿ ಕಾಡಿಗೆ ಹೋಗಲಿ.

ಅಜೀವನಾರ್ಹೇಣ ಮಯಾ ನೃಶಂಸಾ
ಕೃತಾ ಪ್ರತಿಜ್ಞಾ ನಿಯಮೇನ ತಾವತ್।
ತ್ವಯಾ ಹಿ ಬಾಲ್ಯಾತ್ ಪ್ರತಿಪನ್ನಮೇತತ್
ತನ್ಮಾಂ ದಹೇದ್ವೇಣುಮಿವಾತ್ಮಪುಷ್ಪಮ್ ॥೭॥

ಬದುಕಿರಲು ಯೋಗ್ಯನೇ ಅಲ್ಲದ ನಾನು ಆಣೆಯಿಟ್ಟು ಕ್ರೂರವಾದ ಪ್ರತಿಜ್ಞೆ-ಯನ್ನು ಮಾಡಿಬಿಟ್ಟೆ. ನೀನು ಮೂರ್ಖತನದಿಂದ ಆ ವರವನ್ನು ಕಸಿದುಕೊಂಡೆ. ಬಿದಿರಿನ ಹೂವು ಬಿದಿರಿನ ನಾಶಕ್ಕೆ ಕಾರಣವಾಗುವಂತೆ ನಾನು ಮಾಡಿದ ಪ್ರತಿಜ್ಞೆ ನನ್ನನ್ನು ದಹಿಸುತ್ತಿದೆ.

ರಾಮೇಣ ಯದಿ ತೇ ಪಾಪೇ ಕಿಂಚಿತ್ ಕೃತಮಶೋಭನಮ್ ।
ಅಪಕಾರಃ ಕ ಇಹ ತೇ ವೈದೇಹ್ಯಾ ದರ್ಶಿತೋऽಧಮೇ ॥೮॥

ಪಾಪಿಷ್ಠೆಯೆ, ರಾಮ ನಿನ್ನಲ್ಲಿ ಏನಾದರೂ ಅಪರಾಧವನ್ನು ಒಂದುವೇಳೆ ಮಾಡಿದ್ದರೂ, ಸೀತೆಯಿಂದಾದುದೆಂದು ಏನು ಅಪರಾಧವನ್ನು ನೀನು ತೋರಿಸಿರುವೆ, ಅಧಮಳೆ!

ಮೃಗೀವೋತ್ಫುಲ್ಲನಯನಾ ಮೃದುಶೀಲಾ ತಪಸ್ವಿನೀ ।
ಅಪಕಾರಂ ಕಮಿಹ ತೇ ಕರೋತಿ ಜನಕಾತ್ಮಜಾ ॥೯॥

ಹೆಣ್ಣು ಜಿಂಕೆಯಂತೆ ಅರಳಿದ ಕಣ್ಣಿನವಳು ಮೃದುಸ್ವಭಾವದವಳು ತಪಸ್ವಿನಿ ಸೀತೆ ನಿನಗೆ ಏನು ಅಪರಾಧ ಮಾಡಬಲ್ಲಳು?

ನನು ಪರ್ಯಾಪ್ತಮೇತತ್ತೇ ಪಾಪೇ ರಾಮವಿವಾಸನಮ್।
ಕಿಮೇಭಿಃ ಕೃಪಣೈರ್ಭೂಯಃ ಪಾತಕೈರಪಿ ತೇ ಕೃತೈಃ ॥೧೦॥

ಪಾಪಿಷ್ಠೆಯೇ, ರಾಮನನ್ನು ಕಾಡಿಗೆ ಕಳಿಸಿದ ಪಾಪ ಒಂದೇ ನಿನ್ನ ನರಕ ಪ್ರಾಪ್ತಿಗೆ ಸಾಕು. ಪುನಃ ಕೆಟ್ಟ ಈ ಪಾಪಗಳನ್ನು ಮಾಡಿ ನೀನು ಏನು ಪಡೆಯುವೆ?

ಪ್ರತಿಜ್ಞಾತಂ ಮಯಾ ತಾವತ್ತ್ವಯೋಕ್ತಂ ದೇವಿ ಶೃಣ್ವತಾ ।
ರಾಮಂ ಯದಭಿಷೇಕಾಯ ತ್ವಮಿಹಾಗತಮಬ್ರವೀಃ ॥೧೧॥

ದೇವಿ, ನೀನು ಹೇಳಿದ್ದನ್ನು ಕೇಳಿ ನಾನು ಏನು ಪ್ರತಿಜ್ಞೆ ಮಾಡಿದೆನೋ ಅದನ್ನು ಅಭಿಷೇಕಕ್ಕಾಗಿ ಇಲ್ಲಿಗೆ ಬಂದ ರಾಮನಿಗೆ ನೀನು ಹೇಳಿದ್ದಾಗಿದೆ.

ತತ್ತೇ ತ್ವೇತತ್ ಸಮತಿಕ್ರಮ್ಯ ನಿರಯಂ ಗಂತುಮಿಚ್ಛಸಿ ।
ಮೈಥಿಲೀಮಪಿ ಯಾ ಹಿ ತ್ವಮೀಕ್ಷಸೇ ಚೀರವಾಸಿನೀಮ್ ॥೧೨॥

ನನ್ನ ಪ್ರತಿಜ್ಞಾವಚನವನ್ನು ಅತಿಕ್ರಮಿಸಿ ಈಗ ನೀನು ಸೀತೆಯನ್ನೂ ನಾರುಡೆ–ಯಲ್ಲಿ ಕಾಣಲು ಯತ್ನಿಸಿ ನರಕಕ್ಕೆ ಹೋಗಲು ಬಯಸುವೆಯ?

ಇತೀವ ರಾಜಾ ವಿಲಪನ್ಮಹಾತ್ಮಾ
ಶೋಕಸ್ಯ ನಾಂತಂ ಸ ದದರ್ಶ ಕಿಂಚಿತ್।
ಭೃಶಾತುರತ್ವಾಚ್ಚ ಪಪಾತ ಭೂಮೌ
ತೇನೈವ ಪುತ್ರವ್ಯಸನೇ ನಿಮಗ್ನಃ ॥೧೩॥

ಹೀಗೆ ವಿಲಾಪಮಾಡುತ್ತ ಶೋಕಕ್ಕೆ ಕೊನೆಯನ್ನು ಕಾಣಲಾರದವನಾದ. ಮಹಾತ್ಮ ದಶರಥ. ಪುತ್ರಶೋಕದಲ್ಲಿ ಮುಳುಗಿದ ರಾಜನು ಈಗ ಇನ್ನೂ ಹೆಚ್ಚು ಶೋಕಾತುರ–ನಾಗಿ ಭೂಮಿಯಲ್ಲಿ ಕುಸಿದ.

ಏವಂ ಬ್ರುವಂತಂ ಪಿತರಂ ರಾಮಃ ಸಂಪ್ರಸ್ಥಿತೋ ವನಮ್ ।
ಅವಾಕ್ಶಿರಸಮಾಸೀನಮಿದಂ ವಚನಮಬ್ರವೀತ್ ॥೧೪॥

ಕಾಡಿಗೆ ಹೊರಟಿದ್ದ ಶ್ರೀರಾಮ, ತಲೆತಗ್ಗಿಸಿ ಕುಳಿತು ವಿಲಾಪ ಮಾಡುತ್ತಿದ್ದ ತಂದೆಗೆ ನುಡಿದ.

ಇಯಂ ಧಾರ್ಮಿಕ ಕೌಸಲ್ಯಾ ಮಮ ಮಾತಾ ಯಶಸ್ವಿನೀ ।
ವೃದ್ಧಾ ಚಾಕ್ಷುದ್ರಶೀಲಾ ಚ ನ ಚ ತ್ವಾಂ ದೇವ ಗರ್ಹತೇ ॥೧೫॥

ಧಾರ್ಮಿಕನಾದ ತಂದೆಯೆ, ನನ್ನ ಮಾತೆ ಯಶಸ್ವಿನಿಯಾದ ಕೌಸಲ್ಯೆ ವೃದ್ಧೆ, ಉದಾತ್ತ ಶೀಲ ಸಂಪನ್ನೆ, ನಿನ್ನನ್ನು ಎಂದೂ ನಿಂದಿಸುವುದಿಲ್ಲ.

ಮಯಾ ವಿಹೀನಾಂ ವರದ ಪ್ರಪನ್ನಾಂ ಶೋಕಸಾಗರಮ್ ।
ಅದೃಷ್ಟಪೂರ್ವವ್ಯಸನಾಂ ಭೂಯಃ ಸಂಮಂತುಮರ್ಹಸಿ ॥೧೬॥

ವರದಾಯಕನೆ, ನನ್ನ ವಿಯೋಗದಿಂದ ಶೋಕಸಾಗರದಲ್ಲಿ ಮುಳುಗಿದ್ದಾಳೆ. ಹಿಂದೆ ಎಂದೂ ಕಾಣದಿದ್ದ ದುಃಖವನ್ನು ಹೊಂದಿದ್ದಾಳೆ. ಇವಳನ್ನು ಹಿಂದಿಗಿಂತ ಹೆಚ್ಚಾಗಿ ನೀನು ಆದರಿಸಬೇಕು.

ಪುತ್ರಶೋಕಂ ಯಥಾ ನಾರ್ಚ್ಛೇತ್ತ್ವಯಾ ಪೂಜ್ಯೇನ ಪೂಜಿತಾ ।
ಮಾಂ ಹಿ ಸಂಚಿಂತಯಂತೀಯಂ ತ್ವಯಿ ಜೀವೇತ್ತಪಸ್ವಿನೀ ॥೧೭॥

ನನ್ನನ್ನೇ ಚಿಂತಿಸುತ್ತ ಪುತ್ರಶೋಕವನ್ನು ಹೊಂದದಂತೆ ಪೂಜ್ಯನಾದ ನೀನು ಮಾತೆಯನ್ನು ಆದರಿಸಿದರೆ ತಪಸ್ವಿನಿ ನಿನ್ನೊಂದಿಗೆ ಬದುಕಿರುತ್ತಾಳೆ.

ಇಮಾಂ ಮಹೇಂದ್ರೋಪಮ ಜಾತಗರ್ಧಿನೀಂ
ತಥಾ ವಿಧಾತುಂ ಜನನೀಂ ಮಮಾರ್ಹಸಿ ।
ಯಥಾ ವನಸ್ಥೇ ಮಯಿ ಶೋಕಕರ್ಶಿತಾ
ನ ಜೀವಿತಂ ನ್ಯಸ್ಯ ಯಮಕ್ಷಯಂ ವ್ರಜೇತ್ ॥೧೮॥

ಮಹೇಂದ್ರ ಸಮಾನನೆ, ನಾನು ಕಾಡಿನಲ್ಲಿರುವಾಗ ಮಾತೆ ಶೋಕದಿಂದ ಕೊರಗಿ ಜೀವನವನ್ನೆ ತ್ಯಜಿಸಿ ಯಮಲೋಕಕ್ಕೆ ಹೋಗಬಾರದು. ನನ್ನ ಪುನರಾಗಮನ ಒಂದನ್ನೇ ಬಯಸುವ ನನ್ನ ಈ ಮಾತೆಯನ್ನು ನೀನು ನೋಡಿಕೊಳ್ಳಬೇಕು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಮೂವತ್ತೆಂಟನೇ ಸರ್ಗ ಮುಗಿಯಿತು.

❖

ಏಕೋನ ಚತ್ವಾರಿಂಶಃ ಸರ್ಗಃ

ಸರ್ಗ – 39

ಶ್ರೀರಾಮನನ್ನು ಕಾಡಿಗೆ ಕಳಿಸಲು ಸುಮಂತ್ರನು ರಥವನ್ನು ಸಿದ್ಧಪಡಿಸುವುದು, ಸೀತೆಗೆ ಕೌಸಲ್ಯೆಯ ಉಪದೇಶ, ರಾಮನು ತಾಯಂದಿರನ್ನು ಬೀಳ್ಕೊಡುವುದು.

ರಾಮಸ್ಯ ತು ವಚಃ ಶ್ರುತ್ವಾ ಮುನಿವೇಷಧರಂ ಚ ತಮ್ ।
ಸಮೀಕ್ಷ್ಯ ಸಹ ಭಾರ್ಯಾಭೀ ರಾಜಾ ವಿಗತಚೇತನಃ ॥೧॥

ಶ್ರೀರಾಮನ ಮಾತನ್ನು ಕೇಳಿ, ಅವನು ಮುನಿವೇಷ ಧರಿಸಿದ್ದನ್ನೂ ನೋಡಿ ಪತ್ನಿ-ಯರೊಂದಿಗೆ ಕುಳಿತು ರಾಜಾ ದಶರಥ ಏನು ಮಾಡಬೇಕೆಂದು ತಿಳಿಯದವನಾದ.

ನೈನಂ ದುಃಖೇನ ಸಂತಪ್ತಃ ಪ್ರತ್ಯವೈಕ್ಷತ ರಾಘವಮ್ ।
ನ ಚೈನಮಭಿಸಂಪ್ರೇಕ್ಷ್ಯ ಪ್ರತ್ಯಭಾಷತ ದುರ್ಮನಾಃ ॥೨॥

ದುಃಖದಿಂದ ಬೆಂದುಹೋದ ರಾಜ ಖಿನ್ನಮನಸ್ಕನಾಗಿ ರಾಮನನ್ನು ಕಣ್ಣೆತ್ತಿ ನೋಡಲಿಲ್ಲ. ನೋಡಿ ಮಾತನಾಡಲಿಲ್ಲ.

ಸ ಮುಹೂರ್ತಮಿವಾಸಂಜ್ಞೋ ದುಃಖಿತಶ್ಚ ಮಹೀಪತಿಃ ।
ವಿಲಲಾಪ ಮಹಾಬಾಹೂ ರಾಮಮೇವಾನುಚಿಂತಯನ್ ॥೩॥

ಒಂದು ಮುಹೂರ್ತಕಾಲ ಮಹಾಬಾಹು ರಾಜನು ದುಃಖದಿಂದ ಮೈಮರೆತು ರಾಮನನ್ನೇ ಚಿಂತಿಸುತ್ತ ವಿಲಾಪಮಾಡಿದ.

ಮನ್ಯೇ ಖಲು ಮಯಾ ಪೂರ್ವಂ ವಿವತ್ಸಾ ಬಹವಃ ಕೃತಾಃ ।
ಪ್ರಾಣಿನೋ ಹಿಂಸಿತಾ ವಾಪಿ ತಸ್ಮಾದಿದಮುಪಸ್ಥಿತಮ್ ॥೪॥

ನಾನು ಪ್ರಾಯಃ ಪೂರ್ವಜನ್ಮದಲ್ಲಿ ಬಹು ಪ್ರಾಣಿಗಳಿಗೆ ಮರಿಗಳ ವಿಯೋಗ-ವನ್ನುಂಟುಮಾಡಿ ಹಿಂಸೆ ಮಾಡಿರಬೇಕು. ಅದರಿಂದ ನನಗೆ ಈಗ ಇಂಥ ದುಃಖ ಬಂದೊದಗಿದೆ.

ನ ತ್ವೇವಾನಾಗತೇ ಕಾಲೇ ದೇಹಾಚ್ಛ್ಯವತಿ ಜೀವಿತಮ್ ।
ಕೈಕೇಯ್ಯಾ ಕ್ಲಿಶ್ಯಮಾನಸ್ಯ ಮೃತ್ಯುರ್ಮಮ ನ ವಿದ್ಯತೇ ॥೫॥

ಮರಣಕಾಲ ಬಾರದೆ ಶರೀರದಿಂದ ಪ್ರಾಣ ಹೋಗುವುದಿಲ್ಲ. ಅದರಿಂದ ಕೈಕೇಯಿ ನನ್ನನ್ನು ಇಷ್ಟು ಕ್ಲೇಶಪಡಿಸಿದರೂ ನನಗೆ ಮರಣ ಬರುತ್ತಿಲ್ಲ.

ಯೋಽಹಂ ಪಾವಕಸಂಕಾಶಂ ಪಶ್ಯಾಮಿ ಪುರತಃ ಸ್ಥಿತಮ್ ।
ವಿಹಾಯ ವಸನೇ ಸೂಕ್ಷ್ಮೇ ತಾಪಸಾಚ್ಛಾದಮಾತ್ಮಜಮ್ ॥೬॥

ಬೆಂಕಿಯಂತೆ ಜಾಜ್ವಲ್ಯಮಾನನಾದ ನನ್ನ ಮಗನು ಸೂಕ್ಷ್ಮವಸ್ತ್ರಗಳನ್ನು ಬಿಟ್ಟು ಈಗ ತಾಪಸರ ಬಟ್ಟೆ ಉಟ್ಟು ನನ್ನ ಮುಂದೆ ನಿಂತಿರುವುದನ್ನು ನಾನು ನೋಡುತ್ತಿದ್ದೇನೆ.

ಏಕಸ್ಯಾಃ ಖಲು ಕೈಕೇಯ್ಯಾಃ ಕೃತೇಽಯಂ ಕ್ಲಿಶ್ಯತೇ ಜನಃ ।
ಸ್ವಾರ್ಥೇ ಪ್ರಯತಮಾನಾಯಾಃ ಸಂಶ್ರಿತ್ಯ ನಿಕೃತಿಂ ತ್ವಿಮಾಮ್ ॥೭॥

ಈ ನಿಕೃತಿ ರಾಕ್ಷಸಿಯನ್ನು ಆಶ್ರಯಿಸಿ ಸ್ವಾರ್ಥಸಾಧನೆಯಲ್ಲಿ ಪ್ರಯತ್ನಿಸುವ ಕೇಕೇಯಿಯಿಂದಾಗಿಯೇ ನಾನು ಕ್ಲೇಶ ಪಡುತ್ತಿದ್ದೇನೆ, ಹೊರತು, ಒಬ್ಬಳು ಕೈಕೇಯಿಯಿಂದಾಗಿ ಅಲ್ಲ.

ಇಲ್ಲಿ ದಶರಥ ತನ್ನ ಮೋಹದ ಮಡದಿ ಕೈಕೇಯಿಯಲ್ಲಿ 'ನಿಕೃತಿ' ಎಂಬ ರಾಕ್ಷಸಿಯ ಆವೇಶವಾಗಿರುವುದನ್ನು ಜ್ಞಾನ ಚಕ್ಷುಸ್ಸಿನಿಂದ ಕಾಣುತ್ತಿದ್ದಾನೆ. 'ಅಯಂ ಜನಃ' ಅಂದರೆ ನಾನು. 'ಖಲು' ಶಬ್ದ ನಿಷೇಧಾರ್ಥಕ.

ನಿಷೇಧ ವಾಕ್ಯಾಲಂಕಾರ ಜಿಜ್ಞಾಸಾನುನಯೇ ಖಲು'

ಎಂದು ಅಮರಕೋಶವಿದೆ. ಮಾಘಕಾವ್ಯ (2.70)ದಲ್ಲಿ

ಸಂಪ್ರತ್ಯಸಾಂಪ್ರತಂ ವಕ್ತುಂ ಉಕ್ತೇ ಮುಸಲಪಾಣಿನಾ ।
ನಿರ್ಧಾರಿತೇಽರ್ಥೇ ಲೇಖೇನ ಖಲೂಕ್ತ್ವಾ ಖಲು ವಾಚಿಕಮ್ ॥

ಎಂಬಲ್ಲಿ

'ಅತ್ಯಾದ್ಯಃ ಖಲುಶಬ್ದಃ ಪ್ರತಿಷೇಧಾರ್ಥೇ, ದ್ವಿತೀಯೋ ವಾಕ್ಯಾಲಂಕಾರೇ'

ಎಂದು ಮಲ್ಲಿನಾಥನ ವ್ಯಾಖ್ಯಾನವಿದೆ. ಭಾಗವತ ಗೋಪೀಗೀತದಲ್ಲಿಯೂ

'ಸ ಖಲು ಗೋಪಿಕಾ ನಂದನೋ ಭವಾನ್'

ಎಂಬಲ್ಲಿ 'ಖಲು' ಶಬ್ದವು ನಿಷೇಧಾರ್ಥವೆಂದು ಶ್ರೀಸತ್ಯಧರ್ಮರ ಟೀಕೆ ಇದೆ. ನಿರ್ಣಯ (9.97)ದಲ್ಲಿ ನಿಕೃತಿಗೆ ತಮಃಪ್ರಾಪ್ತಿ ಉಕ್ತವಾಗಿದೆ.

ಏವಮುಕ್ತ್ವಾ ತು ವಚನಂ ಬಾಷ್ಪೇಣ ಪಿಹಿತೇಂದ್ರಿಯಃ ।
ರಾಮೇತಿ ಸಕೃದೇವೋಕ್ತ್ವಾ ವ್ಯಾಹರ್ತುಂ ನ ಶಶಾಕ ಹ ॥೮॥

ಹೀಗೆ ಹೇಳಿ, ಬಾಷ್ಪದಿಂದ ಇಂದ್ರಿಯಗಳು ಬಲಗುಂದಿದ್ದರಿಂದ, 'ರಾಮ!' ಎಂದು ಒಂದು ಬಾರಿ ಮಾತ್ರ ಹೇಳಿ, ಮುಂದೆ ಮಾತನಾಡಲೂ ಶಕ್ತನೇ ಆಗಲಿಲ್ಲ, ದಶರಥ.

'ರಾಮ! ಇದು ನಿನ್ನ ಸಂಕಲ್ಪ. ನಾನೇನು ಮಾಡಲಿ?' ಎಂದುಕೊಳ್ಳುತ್ತಾನೆ.

ಸಂಜ್ಞಾಂ ತು ಪ್ರತಿಲಭ್ಯೈವ ಮುಹೂರ್ತಾತ್ ಸ ಮಹೀಪತಿಃ ।
ನೇತ್ರಾಭ್ಯಾಮಶ್ರುಪೂರ್ಣಾಭ್ಯಾಂ ಸುಮಂತ್ರಮಿದಮಬ್ರವೀತ್ ॥೯॥

ಮುಹೂರ್ತ ಕಳೆದ ಬಳಿಕ ರಾಜ ಎಚ್ಚೆತ್ತು ಕಣ್ಣುಗಳಲ್ಲಿ ನೀರು ತುಂಬಿಕೊಂಡು ಸುಮಂತ್ರನಿಗೆ ನುಡಿದ.

ಔಪವಾಹ್ಯಂ ರಥಂ ಯುಕ್ತ್ವಾ ತ್ವಮಾಯಾಹಿ ಹಯೋತ್ತಮೈಃ ।
ಪ್ರಾಪಯೈನಂ ಮಹಾಭಾಗಮಿತೋ ಜನಪದಾತ್ ಪರಮ್ ॥೧೦॥

ರಾಜಪ್ರಯಾಣಕ್ಕೆ ಯೋಗ್ಯವಾದ ರಥಕ್ಕೆ ಉತ್ತಮವಾದ ಕುದುರೆಗಳನ್ನು ಕಟ್ಟಿ ಮಹಾಭಾಗ್ಯಶಾಲಿಯಾದ ರಾಮನನ್ನು ರಾಜ್ಯದಿಂದಾಚೆಗೆ ಒಯ್ದು ಬಿಡು.

ಏವಂ ಮನ್ಯೇ ಗುಣವತಾಂ ಗುಣಾನಾಂ ಫಲಮುಚ್ಯತೇ ।
ಪಿತ್ರಾ ಮಾತ್ರಾ ಚ ಯಃ ಸಾಧುರ್ವೀರೋ ನಿರ್ವಾಸ್ಯತೇ ವನಮ್ ।೧೧।

ಗುಣವಂತರ ಗುಣಗಳಿಗೆ ಸಿಗುವ ಫಲ ಇಂತಹುದೇ ಎಂದು ನಾನು ಭಾವಿಸುತ್ತೇನೆ. ಏಕೆಂದರೆ, ತಂದೆತಾಯಿಗಳು ಸತ್ಪುರುಷನಾದ ಮಗನನ್ನು ಕಾಡಿಗೆ ಅಟ್ಟುತ್ತಾರೆ.

ರಾಜ್ಞೋ ವಚನಮಾಜ್ಞಾಯ ಸುಮಂತ್ರಃ ಶೀಘ್ರವಿಕ್ರಮಃ ।
ಯೋಜಯಿತ್ವಾऽऽಕಯಯೌ ತತ್ರ ರಥಮಶ್ವೈರಲಂಕೃತಮ್ ॥೧೨॥

ರಾಜನ ಮಾತನ್ನು ತಿಳಿದು ಶೀಘ್ರಕಾರ್ಯಕಾರಿಯಾದ ಸುಮಂತ್ರನು ಅಲಂಕೃತವಾದ ರಥಕ್ಕೆ ಕುದುರೆಗಳನ್ನು ಹೂಡಿ ಅಲ್ಲಿಗೆ ಬಂದನು.

ತಂ ರಥಂ ರಾಜಪುತ್ರಾಯ ಸೂತಃ ಕನಕಭೂಷಿತಮ್ ।
ಆಚಚಕ್ಷೇऽಂಜಲಿಂ ಕೃತ್ವಾ ಯುಕ್ತಂ ಪರಮವಾಜಿಭಿಃ ॥೧೩॥

ಬಂಗಾರದಿಂದ ಅಲಂಕೃತವಾದ, ಉತ್ತಮವಾದ ಕುದುರೆಗಳಿಂದ ಯುಕ್ತವಾದ ಆ ರಥವನ್ನು ಸೂತನು ಕೈಮುಗಿದು ರಾಜಕುಮಾರ ರಾಮನಿಗೆ 'ರಥ ಬಂದಿದೆ' ಎಂದು ನಿವೇದಿಸಿದ.

ರಾಜಾ ಸತ್ವರಮಾಹೂಯ ವ್ಯಾಪೃತಂ ವಿತ್ತಸಂಚಯೇ ।
ಉವಾಚ ದೇಶಕಾಲಜ್ಞೋ ನಿಶ್ಚಿತಂ ಸರ್ವತಃ ಶುಚಿಃ ॥೧೪॥

ಇಹ ಪರಗಳಲ್ಲಿ ಋಣಮುಕ್ತನಾಗಿ ಸರ್ವತಃ ಶುಚಿಯಾಗಿರುವ, ದೇಶಕಾಲ ವಿಭಾಗ ಜ್ಞಾನಿಯಾಗಿರುವ ರಾಜನು ಕೋಶಾಧ್ಯಕ್ಷನನ್ನು ಬೇಗನೆ ಕರೆಸಿ ನಿಶ್ಚಿತವಾದ ಮಾತನ್ನು ಆಡಿದ.

ವಾಸಾಂಸಿ ಚ ಮಹಾರ್ಹಾಣಿ ಭೂಷಣಾನಿ ವರಾಣಿ ಚ ।
ವರ್ಷಾಣ್ಯೇತಾನಿ ಸಂಖ್ಯಾಯ ವೈದೇಹ್ಯಾಃ ಕ್ಷಿಪ್ರಮಾನಯ ॥೧೫॥

ಹದಿನಾಲ್ಕು ವರ್ಷಗಳ ವನವಾಸಕ್ಕೆ ಗಣನೆಮಾಡಿ ಸಾಕಾಗುವಷ್ಟು ಬಹು ಮೂಲ್ಯವಾದ ಶ್ರೇಷ್ಠವಾದ ವಸ್ತ್ರ ಆಭರಣಗಳನ್ನು ಸೀತೆಗೆ ಬೇಗನೆ ತೆಗೆದುಕೊಂಡು ಬಾ' ಎಂದು.

ನರೇಂದ್ರೇಣೈವಮುಕ್ತಸ್ತು ಗತ್ವಾ ಕೋಶಗೃಹಂ ತತಃ ।
ಪ್ರಾಯಚ್ಛತ್ ಸರ್ವಮಾಹೃತ್ಯ ಸೀತಾಯೈ ಕ್ಷಿಪ್ರಮೇವ ತತ್ ॥೧೬॥

ರಾಜ ಹೀಗೆ ಹೇಳಿದಾಗ ಕೋಶಾಧ್ಯಕ್ಷನು ಕೋಶಾಗಾರಕ್ಕೆ ಹೋಗಿ ಅಲ್ಲಿಂದ ಎಲ್ಲವನ್ನೂ ತಂದು ಬೇಗನೆ ಸೀತೆಗೆ ಒಪ್ಪಿಸಿದ.

ಸಾ ಸುಜಾತಾ ಸುಜಾತಾನಿ ವೈದೇಹೀ ಪ್ರಸ್ಥಿತಾ ವನಮ್ ।
ಭೂಷಯಾಮಾಸ ಗಾತ್ರಾಣಿ ತೈರ್ವಿಚಿತ್ರೈರ್ವಿಭೂಷಣೈಃ ॥೧೭॥

ಕಾಡಿಗೆ ಹೊರಟು ನಿಂತ ಸುಂದರಿಯಾದ ಸೀತೆ ಆ ವಿಚಿತ್ರವಾದ ಆಭರಣ-ಗಳಿಂದ ಸುಂದರ ಅಂಗಾಂಗಳನ್ನು ಅಲಂಕರಿಸಿಕೊಂಡಳು.

ವ್ಯರಾಜಯತ ವೈದೇಹೀ ವೇಶ್ಮ ತತ್ ಸುವಿಭೂಷಿತಾ ।
ಉದ್ಯತೋಽಂಶುಮತಃ ಕಾಲೇ ಖಂ ಪ್ರಭೇವ ವಿವಸ್ವತಃ ॥೧೮॥

ಪ್ರಾತಃಕಾಲದಲ್ಲಿ ಉದಿಸುವ ಸೂರ್ಯನ ಪ್ರಭೆ ಆಕಾಶವನ್ನು ಬೆಳಗುವಂತೆ ಆ ಆಭರಣಗಳಿಂದ ಚೆನ್ನಾಗಿ ಭೂಷಿತಳಾದ ಸೀತೆ ಅರಮನೆಯನ್ನು ಬೆಳಗಿದಳು.

ತತ್ರ ಸೀತಾ ಮಹಾಭಾಗಾ ವವಂದೇ ಶ್ವಶ್ರುಪಾದಯೋಃ ।
ತಾಂ ಭುಜಾಭ್ಯಾಂ ಪರಿಷ್ವಜ್ಯ ಶ್ವಶ್ರೂರ್ವಚನಮಬ್ರವೀತ್ ।
ಅನಾಚರಂತೀಂ ಕೃಪಣಂ ಮೂಧ್ನ್ಯುಪಾಘ್ರಾಯ ಮೈಥಿಲೀಮ್ ॥೧೯॥

ಮಹಾಭಾಗ್ಯಶಾಲಿಯಾದ ಸೀತೆ ಅತ್ತೆಯ ಪಾದಗಳಿಗೆ ವಂದಿಸಿದಳು. ಕ್ಷುದ್ರಾಚಾರವನ್ನು ಮಾಡದಿರುವ ಮೈಥಿಲಿಯನ್ನು ಅತ್ತೆ ಕೌಸಲ್ಯೆ ಎರಡು ತೋಳುಗಳಿಂದ ಅಪ್ಪಿ ನೆತ್ತಿಯನ್ನು ಆಘ್ರಾಣಿಸಿ ನುಡಿದಳು,

ಅಸತ್ಯಃ ಸರ್ವಲೋಕೇಽಸ್ಮಿನ್ ಸತತಂ ಸತ್ಕೃತಾಃ ಪ್ರಿಯೈಃ ।
ಭರ್ತಾರಂ ನಾನುಮನ್ಯಂತೇ ವಿನಿಪಾತಗತಂ ಸ್ತ್ರಿಯಃ ॥೨೦॥

ಸತತವಾಗಿ ಪ್ರಿಯರಾದ ಪತಿಗಳಿಂದ ಸತ್ಕೃತರಾದರೂ, ಕುಲಟೆಯರಾದ ಸ್ತ್ರೀಯರು, ಎಲ್ಲ ಲೋಕದಲ್ಲಿಯೂ, ಕಷ್ಟದಲ್ಲಿ ಸಿಲುಕಿದ ಪತಿಯನ್ನು ಸೇವಿಸಲು ಒಪ್ಪುವುದಿಲ್ಲ.

ಏಷ ಸ್ವಭಾವೋ ನಾರೀಣಾಮನುಭೂಯ ಪುರಾ ಸುಖಮ್ ।
ಅಲ್ಪಾಮಪ್ಯಾಪದಂ ಪ್ರಾಪ್ಯ ದುಷ್ಯಂತಿ ಪ್ರಜಹತ್ಯಪಿ ॥೨೧॥

ಕುಲಟೆಯರ ಸ್ವಭಾವವೇ ಇದು. ಹಿಂದೆ ಬಹಳ ಸುಖವನ್ನು ಅನುಭವಿಸಿಯೂ ಕೂಡ, ಬಳಿಕ ಸ್ವಲ್ಪ ಕಷ್ಟ ಬಂದರೂ ದುಷ್ಟರಾಗಿ ಪತಿಯನ್ನು ಪರಿತ್ಯಜಿಸುತ್ತಾರೆ.

ಅಸತ್ಯಶೀಲಾ ವಿಕೃತಾ ದುರ್ಗಾ ಅಹೃದಯಾಃ ಸದಾ ।
ಅಸತ್ಯಃ ಪಾಪಸಂಕಲ್ಪಾಃ ಕ್ಷಣಮಾತ್ರವಿರಾಗಿಣಃ ॥೨೨॥

ಕುಲಟೆಯರು ಸುಳ್ಳಾಡುವ ಸ್ವಭಾವದವರು ಪರಪುರುಷರಿಗೆ ವಿಕಾರ ಉಂಟು-ಮಾಡುವವರು, ತಿಳಿಯಲಸಾಧ್ಯರು, ಹೃದಯಶೂನ್ಯರು ಪಾಪ ಮಾಡಲು ಸಂಕಲ್ಪಿಸುವವರು, ಕ್ಷಣಮಾತ್ರದಲ್ಲಿ ಅನುರಾಗವನ್ನು ತೊರೆಯುವವರು.

ನ ಕುಲಂ ನ ಕೃತಂ ವಿದ್ಯಾ ನ ದತ್ತಂ ನಾಪಿ ಸಂಗ್ರಹಮ್ ।
ಸ್ತ್ರೀಣಾಂ ಗೃಹ್ಣಾತಿ ಹೃದಯಮನಿತ್ಯಹೃದಯಾ ಹಿ ತಾಃ ॥೨೩॥

ಒಳ್ಳೆಯ ಕುಲ, ಕರ್ಮ, ವಿದ್ಯೆ, ದಾನ ಧರ್ಮ ಪ್ರಾಣಿಗ್ರಹಣ ಇವು ಯಾವುದನ್ನೂ ಕುಲಟೆಯರ ಹೃದಯ ಮೆಚ್ಚಿಕೊಳ್ಳಲಾರದು. ಅವರ ಮನಸ್ಸು ಚಂಚಲ.

ಸಾಧ್ವೀನಾಂ ತು ಸ್ಥಿತಾನಾಂ ಹಿ ಶೀಲೇ ಸತ್ಯೇ ಶ್ರುತೇ ಸ್ಥಿತೇ ।
ಸ್ತ್ರೀಣಾಂ ಪವಿತ್ರಂ ಪರಮಂ ಪತಿರೇಕೋ ವಿಶಿಷ್ಯತೇ ॥೨೪॥

ಒಳ್ಳೆಯ ಶೀಲದಲ್ಲಿ ಸತ್ಯವಚನದಲ್ಲಿ ಗುರುಹಿರಿಯರ ಉಪದೇಶದಲ್ಲಿ, ಕುಲಮರ್ಯಾದೆಯಲ್ಲಿ ನಿಷ್ಠೆಯಿಂದಿರುವ ಪತಿವ್ರತಾಸ್ತ್ರೀಯರಿಗೆ ಪರಮಪವಿತ್ರ ವಸ್ತು ಪತಿಯೊಬ್ಬನೇ. ಎಲ್ಲಕ್ಕಿಂತ ಅವನೇ ಅವಳಿಗೆ ಹೆಚ್ಚು.

ಸ ತ್ವಯಾ ನಾವಮಂತವ್ಯಃ ಪುತ್ರಃ ಪ್ರವ್ರಾಜಿತೋ ವನಮ್ ।
ತವ ದೇವಸಮಸ್ತ್ವೇಷ ನಿರ್ಧನಃ ಸಧನೋಽಪಿ ವಾ ॥೨೫॥

ಪುತ್ರ ರಾಮನನ್ನು ಕಾಡಿಗೆ ಅಟ್ಟಿದ್ದೇವೆ ಎನ್ನುವ ಕಾರಣಕ್ಕೆ ಅವನನ್ನು ನೀನು ಅವಮಾನಿಸಬಾರದು. ಅವನು ಧನಿಕನಿರಲಿ, ದರಿದ್ರನಿರಲಿ ನಿನಗೆ ಅವನು ದೇವಸಮಾನ.'

ವಿಜ್ಞಾಯ ವಚನಂ ಸೀತಾ ತಸ್ಯಾ ಧರ್ಮಾರ್ಥಸಂಹಿತಮ್ ।
ಕೃತಾಂಜಲಿರುವಾಚೇದಂ ಶ್ವಶ್ರೂಮಭಿಮುಖೇ ಸ್ಥಿತಾ ॥೨೬॥

ಕೌಸಲ್ಯೆ ಆಡಿದ ಧರ್ಮ ಅರ್ಥ ಸಮ್ಮತವಾದ ಮಾತನ್ನು ಕೇಳಿ ಸೀತೆ ಅತ್ತೆಯ ಎದುರಿಗೆ ಕೈಮುಗಿದು ನಿಂತು ನುಡಿದಳು.

ಕರಿಷ್ಯೇ ಸರ್ವಮೇವಾಹಮಾರ್ಯಾ ಯದನುಶಾಸ್ತಿ ಮಾಮ್ ।
ಅಭಿಜ್ಞಾಸ್ಮಿ ಯಥಾಭರ್ತುರ್ವರ್ತಿತವ್ಯಂ ಶ್ರುತಂ ಚ ಮೇ ॥೨೭॥

ಪೂಜ್ಯಳು ನನಗೆ ಏನು ಉಪದೇಶ ಮಾಡಿರುವೆಯೋ, ಅದೆಲ್ಲವನ್ನೂ ನಡೆಸುತ್ತೇನೆ. ಪತಿಯಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ನಾನು ಬಲ್ಲೆ. ಎಲ್ಲವನ್ನು ಹೆತ್ತವರಿಂದ ಕೇಳಿ ತಿಳಿದಿದ್ದೇನೆ.

ನ ಮಾಮಸಜ್ಜನೇನಾರ್ಯಾ ಸಮಾನಯಿತುಮರ್ಹತಿ ।
ಧರ್ಮಾದ್ವಿಚಲಿತುಂ ನಾಹಮಲಂ ಚಂದ್ರಮಿವ ಪ್ರಭಾ ॥೨೮॥

ಕುಲಟೆಯರಿಗೆ ಹೋಲಿಸಿ ಪೂಜ್ಯಳು ನನ್ನನ್ನು ನೋಡಬಾರದು. ಚಂದ್ರನಿಂದ ಬೆಳದಿಂಗಳಂತೆ ಧರ್ಮದಿಂದ ನಾನು ವಿಚಲಿತಳಾಗಲಾರೆ.

ನಾತಂತ್ರೀ ವಾದ್ಯತೇ ವೀಣಾ ನಾಚಕ್ರೋ ವರ್ತತೇ ರಥಃ ।
ನಾಪತಿಃ ಸುಖಮೇಧೇತ ಯಾ ಸ್ಯಾದಪಿ ಶತಾತ್ಮಜಾ ॥೨೯॥

ತಂತಿ ಇಲ್ಲದ ವೀಣೆ ನುಡಿಯುವುದಿಲ್ಲ. ಚಕ್ರವಿಲ್ಲದ ರಥ ಚಲಿಸುವುದಿಲ್ಲ. ನೂರು ಮಕ್ಕಳಿದ್ದರೂ ಪತಿ ಇಲ್ಲದ ನಾರಿ ಸುಖದಿಂದಿರಲಾರಳು.

ಮಿತಂ ದದಾತಿ ಹಿ ಪಿತಾ ಮಿತಂ ಮಾತಾ ಮಿತಂ ಸುತಃ ।
ಅಮಿತಸ್ಯ ಹಿ ದಾತಾರಂ ಭರ್ತಾರಂ ಕಾ ನ ಪೂಜಯೇತ್ ॥೩೦॥

ತಂದೆ ಕೊಡುವ ಸುಖ ಅಲ್ಪ, ತಾಯಿ ಕೊಡುವ ಸುಖವೂ ಅಲ್ಪ, ಅಮಿತ ಸುಖ ಕೊಡುವವನು ಪತಿ. ಅವನನ್ನು ಯಾವ ಸತಿ ಪೂಜಿಸದಿರುತ್ತಾಳೆ?

ಸಾಹಮೇವಂಗತಾ ಶ್ರೇಷ್ಠಾಶ್ರುತಧರ್ಮಪರಾ ವರಾ ।
ಆರ್ಯೇ ಕಿಮವಮನ್ಯೇಹಂ ಸ್ತ್ರೀಣಾಂ ಭರ್ತಾ ಹಿ ದೈವತಮ್ ॥೩೧॥

ಪೂಜ್ಯಳೆ, ನಾನು ಹೀಗೆ ಹಿರಿಯರಿಂದ ಕೇಳಿ ತಿಳಿದವಳು. ಅವರಿಂದ ತಿಳಿದ ಪಾತಿವ್ರತ್ಯಧರ್ಮದ ವಿಷಯದಲ್ಲಿ ನಿಷ್ಠಳು. ಉತ್ತಮ ಕುಲದವಳು. ಪತಿಯನ್ನು ನಾನು ಏಕೆ ಅವಮಾನಿಸುವೆನು? ಸ್ತ್ರೀಯರಿಗೆ ಪತಿಯೆ ದೇವತೆ.

ಸೀತಾಯಾ ವಚನಂ ಶ್ರುತ್ವಾ ಕೌಸಲ್ಯಾ ಹೃದಯಂಗಮಮ್ ।
ಶುದ್ಧಸತ್ತ್ವಾ ಮುಮೋಚಾಶ್ರು ಸಹಸಾ ದುಃಖಹರ್ಷಜಮ್ ॥೩೨॥

ಹೃದಯಂಗಮವಾದ ಈ ಸೀತಾವಚನವನ್ನು ಕೇಳಿ ಕೌಸಲ್ಯೆ ಒಡನೆ ಅವಳ ವನವಾಸದ ದುಃಖಕ್ಕೂ ಮತ್ತು ಪತಿಭಕ್ತಿಯ ಹರ್ಷಕ್ಕೂ ಕಂಬನಿಯನ್ನು ಸುರಿಸಿದಳು.

ತಾಂ ಪ್ರಾಂಜಲಿರಭಿಕ್ರಮ್ಯ ಮಾತೃಮಧ್ಯೇऽತಿಸತ್ಕೃತಾಮ್ ।
ರಾಮಃ ಪರಮಧರ್ಮಾತ್ಮಾ ಮಾತರಂ ವಾಕ್ಯಮಬ್ರವೀತ್ ॥೩೩॥

ಪರಮ ಧರ್ಮಾತ್ಮನಾದ ಶ್ರೀರಾಮ ಮಾತೆಯರ ನಡುವೆ ಬಹಳ ಆದರಣೀಯಳಾಗಿ ಕುಳಿತಿದ್ದ ಕೌಸಲ್ಯೆಯ ಬಳಿಗೆ ಹೋಗಿ ಕೈಮುಗಿದು ನುಡಿದ.

ಅಂಬ ಮಾ ದುಃಖಿತಾ ಭೂತ್ವಾ ಪಶ್ಯೇಸ್ತ್ವಂ ಪಿತರಂ ಮಮ ।
ಕ್ಷಯೋ ಹಿ ವನವಾಸಸ್ಯ ಕ್ಷಿಪ್ರಮೇವ ಭವಿಷ್ಯತಿ ॥೩೪॥

ಮಾತೆ, ದುಃಖಿತಳಾಗಿ ಅಳುತ್ತ ನನ್ನ ತಂದೆಯನ್ನು ನೋಡಬೇಡ. ಅದರಿಂದ ಅವನಿಗೆ ಇನ್ನೂ ದುಃಖ ಹೆಚ್ಚೀತು. ವನವಾಸದ ಅವಧಿ ಬೇಗನೆ ಮುಗಿಯುತ್ತದೆ.

ಸುಪ್ತಾಯಾಸ್ತೇ ಗಮಿಷ್ಯಂತಿ ನವ ವರ್ಷಾಣಿ ಪಂಚ ಚ ।
ಸಾ ಸಮಗ್ರಮಿಹ ಪ್ರಾಪ್ತಂ ಮಾಂ ದ್ರಕ್ಷ್ಯಸಿ ಸುಹೃದ್ವೃತಮ್ ॥೩೫॥

ನೀನು ಮಲಗಿ ಏಳುವಷ್ಟರಲ್ಲಿಯೆ ಹದಿನಾಲ್ಕು ವರ್ಷಗಳು ಹದಿನಾಲ್ಕು ಗಳಿಗೆಗಳಂತೆ ಕಳೆದುಹೋಗುತ್ತವೆ. ಆಗ ನಾನು ಪರಿಪೂರ್ಣನಾಗಿ ಸೀತಾ ಸಮೇತ-ನಾಗಿ ಬಂದು ಎಲ್ಲ ಬಂಧುಮಿತ್ರರೊಡಗೂಡುವುದನ್ನು ನೀನು ಕಾಣುವೆ.

ಏತಾವದಭಿನೀತಾರ್ಥಮುಕ್ತ್ವಾ ಸ ಜನನೀಂ ವಚಃ ।
ತ್ರಯಃಶತಶತಾರ್ಧಾಶ್ಚ ದದರ್ಶಾವೇಕ್ಷ್ಯ ಮಾತರಃ ॥೩೬॥

ಶ್ರೀರಾಮನು ತಾಯಿಗೆ ಹೇಳಬೇಕಾದುದನ್ನೆಲ್ಲ ಇಷ್ಟು ಮಾತಿನಿಂದ ಹೇಳಿ ಮುನ್ನೂರೈವತ್ತು ಮಂದಿ ಮಾತೆಯರನ್ನೂ ಪ್ರತ್ಯೇಕಪ್ರತ್ಯೇಕವಾಗಿ ಸಂದರ್ಶಿಸಿದ.

ತಾಶ್ಚಾಪಿ ಸ ತಥೈವಾರ್ತಾ ಮಾತ್ಸ್ಯಾರ್ದಶರಥಾತ್ಮಜಃ ।
ಧರ್ಮಯುಕ್ತಮಿದಂ ವಾಕ್ಯಂ ನಿಜಗಾದ ಕೃತಾಂಜಲಿಃ ॥೩೭॥

ಶ್ರೀರಾಮನು ಕೌಸಲ್ಯೆಯಂತೆಯೇ ಶೋಕಾರ್ತರಾಗಿದ್ದ ಆ ತಾಯಂದಿರಿಗೆ ಕೈಮುಗಿದು ಧರ್ಮಸಮ್ಮತ ಮಾತುಗಳನ್ನು ಹೇಳಿದ.

ಸಂವಾಸಾತ್ ಪರುಷಂ ಕಿಂಚಿದಜ್ಞಾನಾದಪಿ ಯತ್ ಕೃತಮ್ ।
ತನ್ಮೇ ಸಮನುಜಾನೀತ ಸರ್ವಾಶ್ಚಾಮಂತ್ರಯಾಮಿ ವಃ ॥೩೮॥

ಒಟ್ಟಿಗೆ ವಾಸಮಾಡಿದ ಸಲಿಗೆಯಿಂದ ಅಥವಾ ಅಜ್ಞಾನದಿಂದ ನಾನು ನಿಮ್ಮಲ್ಲಿ ಅಪರಾಧ ಮಾಡಿದ್ದರೆ ಅದನ್ನು ಕ್ಷಮಿಸಿರಿ. ನಿಮ್ಮೆಲ್ಲರ ಅನುಜ್ಞೆಯನ್ನು ಬೇಡುತ್ತೇನೆ.

ವಚನಂ ರಾಘವಸ್ಯೈತದ್ಧರ್ಮಯುಕ್ತಂ ಸಮಾಹಿತಮ್ ।
ಶುಶ್ರುವುಸ್ತಾಃ ಸ್ತ್ರಿಯಃ ಸರ್ವಾಃ ಶೋಕೋಪಹತಚೇತಸಃ ॥೩೯॥

ಧರ್ಮಯುಕ್ತವಾದ ಸಮಾಧಾನಕರವಾದ ರಾಮನ ಮಾತನ್ನು ಶೋಕದಿಂದ ಬೆಂದ ಹೃದಯದವರಾದ ಆ ಎಲ್ಲ ಮಾತೆಯರು ಕೇಳಿದರು.

ಜಜ್ಞೇಽಥ ತಾಸಾಂ ಸಂನಾದಃ ಕ್ರೌಂಚೀನಾಮಿವ ನಿಸ್ವನಃ ।
ಮಾನವೇಂದ್ರಸ್ಯ ಭಾರ್ಯಾಣಾಮೇವಂ ವದತಿ ರಾಘವೇ ॥೪೦॥

ಶ್ರೀರಾಮನು ಹೀಗೆ ಹೇಳುತ್ತಿದ್ದಂತೆ, ಕ್ರೌಂಚಪಕ್ಷಿಗಳ ಧ್ವನಿಯಂತೆ ದಶರಥನ ಪತ್ನಿಯರ ಹಾಹಾಕಾರ ಧ್ವನಿ, ಕೇಳಿಬಂದಿತು.

ಮುರಜಪಣವಮೇಘಘೋಷವ-
ದ್ದಶರಥವೇಶ್ಮ ಬಭೂವ ಯತ್ ಪುರಾ ।
ವಿಲಪಿತಪರಿದೇವನಾಕುಲಂ
ವ್ಯಸನಗತಂ ತದಭೂತ್ ಸುದುಃಖಿತಮ್ ॥೪೧॥

ಹಿಂದೆ ಮೇಘ ಧ್ವನಿಯಂತಿದ್ದ ಭೇರೀಮೃದಂಗ ಧ್ವನಿಗಳಿಂದ ತುಂಬಿದ್ದ ದಶರಥನ ಅರಮನೆ ಈಗ ವಿಲಾಪಗೋಳಾಟಗಳಿಂದ ತುಂಬಿ ವ್ಯಸನದಲ್ಲಿ ಮುಳುಗಿ ದುಃಖಪೂರ್ಣವಾಯಿತು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಮೂವತ್ತೊಂಭತ್ತನೇ ಸರ್ಗ ಮುಗಿಯಿತು.

❖

ಚತ್ವಾರಿಂಶಃ ಸರ್ಗಃ

ಸರ್ಗ – 40

ಶ್ರೀರಾಮನು ಸೀತಾಲಕ್ಷ್ಮಣರೊಡನೆ ಕಾಡಿಗೆ ಹೋಗುವುದು. ದಶರಥ ಕೌಸಲ್ಯೆಯರ ಮತ್ತು ಪ್ರಜೆಗಳ ವಿಲಾಪ.

ಅಥ ರಾಮಶ್ಚ ಸೀತಾ ಚ ಲಕ್ಷ್ಮಣಶ್ಚ ಕೃತಾಂಜಲಿಃ ।
ಉಪಸಂಗೃಹ್ಯ ರಾಜಾನಂ ಚಕ್ರುರ್ದೀನಾಃ ಪ್ರದಕ್ಷಿಣಮ್ ॥೧॥

ರಾಮ ಸೀತೆ ಲಕ್ಷ್ಮಣರು ಕೈಮುಗಿದು ದೀನರಾಗಿ ದಶರಥನ ಕಾಲುಮುಟ್ಟಿ ನಮಸ್ಕರಿಸಿ ಪ್ರದಕ್ಷಿಣೆ ಮಾಡಿದರು.

ತಂ ಚಾಪಿ ಸಮನುಜ್ಞಾಪ್ಯ ಧರ್ಮಜ್ಞಃ ಸೀತಯಾ ಸಹ ।
ರಾಘವಃ ಶೋಕಸಂಮೂಢೋ ಜನನೀಮಭ್ಯವಾದಯತ್ ॥೨॥

ಧರ್ಮಜ್ಞನಾದ ರಾಮನು ತಂದೆಯ ಅನುಮತಿಯನ್ನು ಪಡೆದು ಸೀತಾ ಸಮೇತನಾಗಿ ಶೋಕಾಕುಲನಂತೆ ತೋರಿಕೊಳ್ಳುತ್ತ ತಾಯಿಯನ್ನು ಅಭಿವಾದನ ಮಾಡಿದ.

ಅನ್ವಕ್ಷಂ ಲಕ್ಷ್ಮಣೋ ಭ್ರಾತುಃ ಕೌಸಲ್ಯಾಮಭ್ಯವಾದಯತ್ ।
ಅಥ ಮಾತುಃ ಸುಮಿತ್ರಾಯಾ ಜಗ್ರಾಹ ಚರಣೌ ಪುನಃ ॥೩॥

ಶ್ರೀರಾಮನ ಅನಂತರ ಲಕ್ಷ್ಮಣನೂ ಕೌಸಲ್ಯೆಗೆ ಅಭಿವಾದನ ಮಾಡಿದ. ಅನಂತರ ತಾಯಿಯಾದ ಸುಮಿತ್ರೆಗೂ ಕಾಲು ಮುಟ್ಟಿ ಅಭಿವಾದನ ಮಾಡಿದ.

ತಂ ವಂದಮಾನಂ ರುದತೀ ಮಾತಾ ಸೌಮಿತ್ರಿಮಬ್ರವೀತ್ ।
ಹಿತಕಾಮಾ ಮಹಾಬಾಹುಂ ಮೂರ್ಧ್ನ್ಯುಪಾಘ್ರಾಯ ಲಕ್ಷ್ಮಣಮ್ ॥

ಮಹಾಬಾಹುವಾದ ಲಕ್ಷ್ಮಣ ವಂದಿಸುವಾಗ ತಾಯಿ ಸುಮಿತ್ರೆ ಅವನ ನೆತ್ತಿಯನ್ನು ಆಘ್ರಾಣಿಸಿ ಹಿತಕಾಮನೆಯಿಂದ ನುಡಿದಳು.

ಸೃಷ್ಟಸ್ತ್ವಂ ವನವಾಸಾಯ ಸ್ವನುರಕ್ತಃ ಸುಹೃಜ್ಜನೇ ।
ರಾಮೇ ಪ್ರಮಾದಂ ಮಾ ಕಾರ್ಷೀಃ ಪುತ್ರ ಭ್ರಾತರಿ ಗಚ್ಛತಿ ॥೫॥

ಪುತ್ರ, ಬಂಧುಜನರಲ್ಲಿ ಅನುರಾಗಉಳ್ಳವನು ನೀನು ವನವಾಸಕ್ಕೆ ಅನುಮತನಾಗಿರುವೆ. ಅಣ್ಣ ರಾಮನು ಸಂಚರಿಸುವಾಗ ನೀನು ಅವನ ರಕ್ಷಣೆಯ ವಿಷಯದಲ್ಲಿ ಅಜಾಗರೂಕತೆಯಿಂದ ವರ್ತಿಸಬೇಡ.

ವ್ಯಸನೀ ವಾ ಸಮೃದ್ಧೋ ವಾ ಗತಿರೇಷ ತವಾನಘ ।
ಏಷ ಲೋಕೇ ಸತಾಂ ಧರ್ಮೋ ಯಜ್ಜ್ಯೇಷ್ಠವಶಗೋ ಭವೇತ್ ॥೬॥

ನಿಷ್ಪಾಪನೆ, ಕಷ್ಟದಲ್ಲಿರಲಿ ಸುಖದಲ್ಲಿರಲಿ ಇವನೇ ನಿನಗೆ ಆಸರೆ. ತಮ್ಮನು ಅಣ್ಣನ ಅಧೀನದಲ್ಲಿರುವುದೇ ಲೋಕದಲ್ಲಿ ಸಜ್ಜನ ಸಮ್ಮತವಾದ ಧರ್ಮವಾಗಿರುತ್ತದೆ.

ಇದಂ ಹಿ ವೃತ್ತಮುಚಿತಂ ಕುಲಸ್ಯಾಸ್ಯ ಸನಾತನಮ್ ।
ದಾನಂ ದೀಕ್ಷಾ ಚ ಯಜ್ಞೇಷು ತನುತ್ಯಾಗೋ ಮೃಧೇಷು ಚ ॥೭॥

ಕುಲಕ್ಕೆ ಉಚಿತವಾದ ಸನಾತನವಾದ ಆಚಾರವಿದು. ದಾನ ಮಾಡುವುದು ಯಜ್ಞದೀಕ್ಷೆ ಪಡೆಯುವುದು ಯುದ್ಧಗಳಲ್ಲಿ ಶರೀರತ್ಯಾಗ ಮಾಡುವುದು ಇವುಗಳಂತೆ ತಮ್ಮನು ಅಣ್ಣನ ಸೇವೆ ಮಾಡುವುದೂ ಕುಲಧರ್ಮವಾಗಿದೆ.

ಲಕ್ಷ್ಮಣಂ ತ್ವೇವಮುಕ್ತ್ವಾ ಸಾ ಸಂಸಿದ್ಧಂ ಪ್ರಿಯರಾಘವಮ್ ।
ಸುಮಿತ್ರಾ ಗಚ್ಛ ಗಚ್ಛೇತಿ ಪುನಃ ಪುನರುವಾಚ ತಮ್ ॥೮॥

ಹೋಗಲು ಸಿದ್ಧನಾಗಿದ್ದ ಪ್ರಿಯ ರಾಘವನಾದ ಲಕ್ಷ್ಮಣನಿಗೆ ಹೀಗೆ ಹೇಳಿ ಸುಮಿತ್ರೆ ಹೋಗು ಹೋಗೆಂದು ಪುನಃ ಪುನಃ ಆದರದಿಂದ ಶಕುನಸಿದ್ಧಿಗಾಗಿ ನುಡಿದಳು.

ರಾಮಂ ದಶರಥಂ ವಿದ್ಧಿ ಮಾಂ ವಿದ್ಧಿ ಜನಕಾತ್ಮಜಾಮ್ ।
ಅಯೋಧ್ಯಾಮಟವೀಂ ವಿದ್ಧಿ ಗಚ್ಛ ತಾತ ಯಥಾಸುಖಮ್ ॥೯॥

ರಾಮನನ್ನು ದಶರಥನಂತೆ, ತಂದೆಯಂತೆ ಕಾಣುತ್ತ, ಸೀತೆಯನ್ನು ನನ್ನಂತೆ, ತಾಯಿಯಂತೆ ಕಾಣುತ್ತ, ಕಾಡನ್ನು ಅಯೋಧ್ಯೆಯಂತೆ, ಹುಟ್ಟೂರಿನಂತೆ ಕಾಣುತ್ತ ಸುಖವಾಗಿ ಕಾಡಿಗೆ ಹೋಗಿ ಬಾ.

ವಸ್ತುತಃ, 'ರಾಮನನ್ನು ಮುಖ್ಯವಾಗಿ ತಂದೆ ಎಂದೇ ಕಾಣು. ಸೀತೆಯನ್ನು ಮುಖ್ಯವಾಗಿ ತಾಯಿಯೆಂದೇ ಕಾಣು. ಸೀತಾರಾಮರು ಎಲ್ಲಿಯೇ ಇರಲಿ ಆ ಸ್ಥಳದಲ್ಲಿ ಸಾಕ್ಷಾತ್ ಲಕ್ಷ್ಮ್ಯಾತ್ಮಕವಾದ ವಿಷ್ಣುಲೋಕವಾದ ಅಯೋಧ್ಯೆ ಇರುತ್ತದೆ ಎಂದು ತಿಳಿ. ಆಗಲೇ ಕಾಡಿನಲ್ಲಿ ನಿನಗೆ ಮೋಕ್ಷಸುಖ ಲಭ್ಯವಾಗುತ್ತದೆ. ಲೌಕಿಕ ತಂದೆತಾಯಿಗಳ ಮತ್ತು ಇಹದ ಜನ್ಮಸ್ಥಳದ ಹಂಬಲವನ್ನು ಬಿಡು. ಅವುಗಳ ಮೇಲಿನ ಅಭಿಮಾನದಿಂದ ಯಾರಿಗೂ ಸುಖವಿಲ್ಲ' ಎನ್ನುತ್ತಿದ್ದಾಳೆ ಸುಮಿತ್ರೆ ತನಗರಿವಿಲ್ಲದಂತೆ. ಸುಮಿತ್ರೆಯ ಬಾಯಿಂದ ಮಿತ್ರಸಮ್ಮಿತೋಪದೇಶವನ್ನು ನುಡಿಸುತ್ತಿದ್ದಾನೆ ವಾಲ್ಮೀಕಿ. ಮಗನಿಗೆ ತಾಯಿಯ ಹರಕೆ ಹೀಗೇ ಇರಬೇಕು ಎನ್ನುತ್ತಿದ್ದಾನೆ.

ತತಃ ಸುಮಂತ್ರಃ ಕಾಕುತ್ಸ್ಥಂ ಪ್ರಾಂಜಲಿರ್ವಾಕ್ಯಮಬ್ರವೀತ್ ।
ವಿನೀತೋ ವಿನಯಜ್ಞಶ್ಚ ಮಾತಲಿರ್ವಾಸವಂ ಯಥಾ ॥೧೦॥

ಸಾರಥಿ ಮಾತಲಿ ಇಂದ್ರನಿಗೆ ಹೇಳುವಂತೆ ವಿನೀತನಾದ ವಿನಯಜ್ಞನಾದ ಸುಮಂತ್ರನು ಕೈಮುಗಿದು ಶ್ರೀರಾಮನಿಗೆ ಹೇಳುತ್ತಾನೆ—

ರಥಮಾರೋಹ ಭದ್ರಂ ತೇ ರಾಜಪುತ್ರ ಮಹಾಯಶಃ ।
ಕ್ಷಿಪ್ರಂ ತ್ವಾಂ ಪ್ರಾಪಯಿಷ್ಯಾಮಿ ಯತ್ರ ಮಾಂ ರಾಮ ವಕ್ಷ್ಯಸಿ ॥೧೧॥

ಮಹಾಯಶಸ್ವಿಯಾದ ರಾಜಕುಮಾರನೆ, ನಿನಗೆ ಶುಭವಾಗಲಿ. ರಥವನ್ನೇರು. ನೀನು ಹೇಳುವಲ್ಲಿಗೆ ಬೇಗ ನಿನ್ನನ್ನು ಕೊಂಡೊಯ್ಯುತ್ತೇನೆ.

ಚತುರ್ದಶ ಹಿ ವರ್ಷಾಣಿ ವಸ್ತವ್ಯಾನಿ ವನೇ ತ್ವಯಾ ।
ತಾನ್ಯುಪಕ್ರಮಿತವ್ಯಾನಿ ಯಾನಿ ದೇವ್ಯಾಸಿ ಚೋದಿತಃ ॥೧೨॥

ಹದಿನಾಲ್ಕು ವರ್ಷ ವನವಾಸವನ್ನು ನೀನು ಮಾಡಬೇಕಾಗಿದೆ ತಾನೆ? ಆ ಹದಿನಾಲ್ಕು ವರ್ಷಗಳ ವನವಾಸವನ್ನು ಇಂದಿನಿಂದಲೇ ಪ್ರಾರಂಭಿಸು. ಏಕೆಂದರೆ ದೇವಿ ಹಾಗೇ ಆಜ್ಞೆ ಮಾಡಿದ್ದಾಳೆ. ಮತ್ತು ಹದಿನಾಲ್ಕು ವರ್ಷಗಳಲ್ಲಿ ಇಂದಿನ ಒಂದು ದಿನ ಕಳೆದರೂ ಅದು ದೊಡ್ಡ ಲಾಭವಾಗುತ್ತದೆ.

ತಂ ರಥಂ ಸೂರ್ಯಸಂಕಾಶಂ ಸೀತಾ ಹೃಷ್ಟೇನ ಚೇತಸಾ ।
ಆರುರೋಹ ವರಾರೋಹಾ ಕೃತ್ವಾಲಂಕಾರಮಾತ್ಮನಃ ॥೧೩॥

ಸೀತೆ ತನ್ನನ್ನು ಸಿಂಗರಿಸಿಕೊಂಡು ಸಂತೋಷದಿಂದ ಸೂರ್ಯನಂತೆ ಬೆಳಗುವ ರಥವನ್ನು ಏರಿದಳು.

ವನವಾಸಂ ಹಿ ಸಂಖ್ಯಾಯ ವಾಸಾಂಸ್ಯಾಭರಣಾನಿ ಚ ।
ಭರ್ತಾರಮನುಗಚ್ಛಂತ್ಯೈ ಸೀತಾಯೈ ಶ್ವಶುರೋ ದದೌ ॥೧೪॥

ವನವಾಸದ ದಿನಗಳನ್ನು ಎಣಿಸಿ ಅಷ್ಟು ದಿನಗಳಿಗೆ ಸಾಕಾಗುವಷ್ಟು ವಸ್ತ್ರ ಆಭರಣಗಳನ್ನು, ಪತಿಯನ್ನು ಹಿಂಬಾಲಿಸಿ ಹೊರಟಿದ್ದ ಸೀತೆಗೆ ಮಾವ ದಶರಥನು ಕೊಟ್ಟು ರಥವನ್ನೇರಿಸಿದ.

ತಥೈವಾಯುಧಜಾಲಾನಿ ಭ್ರಾತೃಭ್ಯಾಂ ಕವಚಾನಿ ಚ ।
ರಥೋಪಸ್ಥೇ ಪ್ರತಿನ್ಯಸ್ಯ ಸಚರ್ಮ ಕಠಿನಂ ಚ ತತ್ ॥೧೫॥

ಹಾಗೆಯೇ ರಾಮಲಕ್ಷ್ಮಣ ಸೋದರರಿಗೆ ಎಂದು ಆಯುಧ ಸಮೂಹಗಳನ್ನೂ ಕವಚಗಳನ್ನೂ ಚರ್ಮಹೊದಿಸಿದ ಮಂಕರಿ ಹಾಗೂ ಗುದ್ದಲಿಗಳನ್ನೂ ರಥದ ಮಧ್ಯದಲ್ಲಿ ಇರಿಸಿಕೊಟ್ಟ ದಶರಥ.

ಅಥೋ ಜ್ವಲನಸಂಕಾಶಂ ಚಾಮೀಕರವಿಭೂಷಿತಮ್ ।
ತಮಾರುರುಹತುಸ್ತೂರ್ಣಂ ಭ್ರಾತರೌ ರಾಮಲಕ್ಷ್ಮಣೌ ॥೧೬॥

ಬಳಿಕ ಬಂಗಾರದಿಂದ ಅಲಂಕೃತವಾದ ಬೆಂಕಿಯೆಂತೆ ಹೊಳೆಯುವ ರಥವನ್ನು ರಾಮಲಕ್ಷ್ಮಣರು ಸೋದರರು ಬೇಗನೆ ಹತ್ತಿದರು.

ಸೀತಾತೃತೀಯಾನಾರೂಢಾನ್ ದೃಷ್ಟ್ವಾ ಧೃಷ್ಟಮಚೋದಯತ್ ।
ಸುಮಂತ್ರಃ ಸಂಮತಾನಶ್ವಾನ್ ವಾಯುವೇಗಸಮಾನ್ ಜವೇ ॥೧೭॥

ಸೀತೆಯೂ ಸೇರಿ ಮೂವರು ರಥದಲ್ಲಿ ಹತ್ತಿ ಕುಳಿತುದನ್ನು ಕಂಡು ಸುಮಂತ್ರನು ವೇಗದಲ್ಲಿ ವಾಯುಸಮವಾದ ಶ್ರೇಷ್ಠವಾದ ಕುದುರೆಗಳನ್ನು ಧೈರ್ಯದಿಂದ ಸಂಕೋಚಮಾಡದೆ ವೇಗದಿಂದಲೆ ಓಡಿಸಿದ.

ವನವಾಸ ಪ್ರಾರಂಭ ಮಾಡುವುದರಲ್ಲಿ ವಿಲಂಬವಾದರೆ ಹಿಂತಿರುಗಿ ಬರುವು-ದರಲ್ಲಿ ವಿಲಂಬವಾದೀತೆಂದು ಭಯ.

ಪ್ರತಿಯಾತೇ ಮಹಾರಣ್ಯಂ ಚಿರರಾತ್ರಾಯ ರಾಘವೇ ।
ಬಭೂವ ನಗರೇ ಮೂರ್ಚ್ಛಾ ಬಲಮೂರ್ಚ್ಛಾ ಜನಸ್ಯ ಚ ॥೧೮॥

ಶ್ರೀರಾಮ ಬಹುಕಾಲ ವಾಸಮಾಡಲು ಮಹಾ ಅರಣ್ಯಕ್ಕೆ ಹೊರಟಾಗ ನಗರ-ದಲ್ಲಿರುವ ಜನರಿಗೆ ಮೂರ್ಛೆ ಉಂಟಾಯಿತು. ಚತುರಂಗ ಸೈನ್ಯಕ್ಕೂ ಮೂರ್ಛೆ ಉಂಟಾಯಿತು.

ತತ್ಸಮಾಕುಲಸಂಭ್ರಾಂತಂ ಮತ್ತಸಂಕುಪಿತದ್ವಿಪಮ್ ।
ಹಯಶಿಂಜಿತನಿರ್ಘೋಷಂ ಪುರಮಾಸೀನ್ಮಹಾಸ್ವನಮ್ ॥೧೯॥

ಅಯೋಧ್ಯೆಯಲ್ಲಿ ಎಲ್ಲೆಡೆ ಜನರು ಏನೂ ತೋಚದೆ ರಾಮನನ್ನು ಹಿಂಬಾಲಿಸಲು ತ್ವರೆ ಮಾಡಿದರು. ಮದಿಸಿದ ಆನೆಗಳು ಕುಪಿತವಾದವು. ಕುದುರೆಗಳು ಕೆನೆಯುವ ಶಬ್ದ ಅವುಗಳ ಆಭರಣಗಳ ಸದ್ದುಗಳು ಸೇರಿ ನಗರ ಮಹಾಶಬ್ದದಿಂದ ತುಂಬಿತು.

ತತಃ ಸಬಾಲವೃದ್ಧಾ ಸಾ ಪುರೀ ಪರಮಪೀಡಿತಾ ।
ರಾಮಮೇವಾಭಿದುದ್ರಾವ ಘರ್ಮಾರ್ತಃ ಸಲಿಲಂ ಯಥಾ ॥೨೦॥

ಬಿಸಿಲಿನಿಂದ ಆಯಾಸಗೊಂಡವನು ನೀರಿನ ಕಡೆಗೆ ಧಾವಿಸುವಂತೆ. ಮಕ್ಕಳು ವೃದ್ಧರೆನ್ನದೆ ಇಡಿ ನಗರವೇ ಬಲು ದುಃಖದಿಂದ ನೊಂದು ರಾಮನ ಕಡೆಗೆ ಧಾವಿಸಿತು.

ಪಾರ್ಶ್ವತಃ ಪೃಷ್ಠತಶ್ಚಾಪಿ ಲಂಬಮಾನಾಸ್ತದುನ್ಮುಖಾಃ ।
ಬಾಷ್ಪಪೂರ್ಣಮುಖಾಃ ಸರ್ವೇ ತಮೂಚುರ್ಭೃಶನಿಸ್ವನಾಃ ॥೨೧॥

ಪಾರ್ಶ್ವಗಳಲ್ಲಿಯೂ ಹಿಂಬದಿಯಲ್ಲಿಯೂ ರಥಕ್ಕೆ ಜೋತುಬಿದ್ದ ಜನರು ರಾಮನ ಕಡೆಗೆ ಮುಖಮಾಡಿ ಕಣ್ಣೀರು ಸುರಿಸುತ್ತ ದೊಡ್ಡ ಧ್ವನಿಯಿಂದ ನುಡಿದರು.

ಸಂಯಚ್ಛ ವಾಜಿನಾಂ ರಶ್ಮೀನ್ ಸೂತ ಯಾಹಿ ಶನೈಃ ಶನೈಃ ।
ಮುಖಂ ದ್ರಕ್ಷ್ಯಾಮ ರಾಮಸ್ಯ ದುರ್ದರ್ಶಂ ನೋ ಭವಿಷ್ಯತಿ ॥೨೨॥

ಸುಮಂತ್ರ, ಕುದುರೆಗಳ ಕಡಿವಾಣಗಳನ್ನು ಎಳೆದು ಹಿಡಿದುಕೊಳ್ಳು. ಮೆಲ್ಲ-ಮೆಲ್ಲನೆ ಹೋಗು. ನಾವು ರಾಮನ ಮುಖವನ್ನು ನೋಡಬೇಕು. ಅವನ ದರ್ಶನ ನಮಗೆ ಇನ್ನು ದುರ್ಲಭವಾಗುವುದು.

ಆಯಸಂ ಹೃದಯಂ ನೂನಂ ರಾಮಮಾತುರಸಂಶಯಮ್ ।
ಯದ್ದೇವಗರ್ಭಪ್ರತಿಮೇ ವನಂ ಯಾತಿ ನ ಭಿದ್ಯತೇ ॥೨೩॥

ರಾಮಮಾತೆಯ ಎದೆ ನಿಶ್ಚಯವಾಗಿ ಕಬ್ಬಿಣದ್ದೇ; ಏಕೆಂದರೆ ದೇವಕುಮಾರನಂಥ ಮಗನು ಕಾಡಿಗೆ ಹೋಗುವಾಗ ಅದು ಒಡೆಯುತ್ತಿಲ್ಲ!

ಕೃತಕೃತ್ಯಾ ಹಿ ವೈದೇಹೀ ಛಾಯೇವಾನುಗತಾ ಪತಿಮ್ ।
ನ ಜಹಾತಿ ರತಾ ಧರ್ಮೇ ಮೇರುಮರ್ಕಪ್ರಭಾ ಯಥಾ ॥೨೪॥

ಸೀತೆ ಧನ್ಯೆ. ಸೂರ್ಯನ ಪ್ರಭೆ ಮೇರುಪರ್ವತವನ್ನು ಬಿಟ್ಟು ಹೋಗದಿರುವಂತೆ ಧರ್ಮನಿರತಳಾದ ದೇವಿ ಪತಿಯನ್ನು ನೆರಳಿನಂತೆ ಹಿಂಬಾಲಿಸುತ್ತಾಳೆ.

ಇಲ್ಲಿ ರಾತ್ರಿಯಾದಾಗಲೂ ಮೇರುವಿನ ಆಚೆ ಪಾರ್ಶ್ವದಲ್ಲಿ ಹಗಲಿರುತ್ತದೆ.

ಅಹೋ ಲಕ್ಷ್ಮಣ ಸಿದ್ಧಾರ್ಥಃ ಸತತಂ ಪ್ರಿಯವಾದಿನಂ ।
ಭ್ರಾತರಂ ದೇವಸಂಕಾಶಂ ಯಸ್ತ್ವಂ ಪರಿಚರಿಷ್ಯಸಿ ॥೨೫॥

ಓ ಲಕ್ಷ್ಮಣ, ನೀನು ಧನ್ಯ. ಸದಾ ಪ್ರಿಯವನ್ನೇ ನುಡಿಯುವ ದೇವಸದೃಶನಾದ ಅಣ್ಣ ರಾಮನನ್ನು ಸತತ ಸೇವೆ ಮಾಡುವೆ.

ಮಹತ್ಯೇಷಾ ಹಿ ತೇ ಸಿದ್ಧಿರೇಷ ಚಾಭ್ಯುದಯೋ ಮಹಾನ್ ।
ಏಷ ಸ್ವರ್ಗಸ್ಯ ಮಾರ್ಗಶ್ಚ ಯದೇನಮನುಗಚ್ಛಸಿ ॥೨೬॥

ಲಕ್ಷ್ಮಣ, ನೀನು ರಾಮನನ್ನು ಹಿಂಬಾಲಿಸುತ್ತಿರುವುದು ಒಂದು ದೊಡ್ಡ ಸಿದ್ಧಿ. ಇದೇ ಮಹಾ ಅಭ್ಯುದಯ. ಇದೇ ಸ್ವರ್ಗಕ್ಕೆ ಸೋಪಾನವೂ ಆಗಿದೆ.

ಏವಂ ವದಂತಸ್ತೇ ಸೋಢುಂ ನ ಶೇಕುರ್ಬಾಷ್ಪಮಾಗತಮ್ ।
ನರಾಸ್ತಮನುಗಚ್ಛಂತಃ ಪ್ರಿಯಮಿಕ್ಷ್ವಾಕುನಂದನಮ್ ॥೨೭॥

ಹೀಗೆ ಹೇಳುತ್ತ ಪ್ರಿಯನಾದ ರಾಮನನ್ನು ಹಿಂಬಾಲಿಸಿದ ಆ ಜನರು ಕಣ್ಣಿಂದ ನೀರು ಸುರಿಯುವುದನ್ನು ತಡೆಯಲಾರದವರಾದರು.

ಅಥ ರಾಜಾ ವೃತಃ ಸ್ತ್ರೀಭಿರ್ದೀನಾಭಿರ್ದೀನಚೇತನಃ ।
ನಿರ್ಜಗಾಮ ಪ್ರಿಯಂ ಪುತ್ರಂ ದ್ರಕ್ಷ್ಯಾಮೀತಿ ಬ್ರುವನ್ ಗೃಹಾತ್ ॥೨೮॥

ದೀನರಾದ ಸ್ತ್ರೀಯರಿಂದ ಕೂಡಿದ ದೀನಮನಸ್ಸಿನವನಾದ ದಶರಥನು ಪ್ರಿಯ ಪುತ್ರನನ್ನು ಕಾಣುವೆನೆನ್ನುತ್ತ ಅರಮನೆಯಿಂದ ಹೊರಟುಬಂದ.

ಶುಶ್ರುವೇ ಚಾಗ್ರತಃ ಸ್ತ್ರೀಣಾಂ ರುದಂತೀನಾಂ ಮಹಾಸ್ವನಃ ।
ಯಥಾ ನಾದಃ ಕರೇಣೂನಾಂ ಬದ್ಧೇ ಮಹತಿ ಕುಂಜರೇ ॥೨೯॥

ಅವನ ಮುಂಭಾಗದಲ್ಲಿ, ಮದ್ದಾನೆ ಬಂಧನದಲ್ಲಿ ಸಿಲುಕಿರುವಾಗ ಹೆಣ್ಣಾನೆಗಳ ಕೂಗಿನಂತೆ, ಅಳುವ ಸ್ತ್ರೀಯರ ಮಹಾನಾದ ಕೇಳಿ ಬಂದಿತು.

ಪಿತಾ ಹಿ ರಾಜಾ ಕಾಕುತ್ಸ್ಥಃ ಶ್ರೀಮಾನ್ ಸನ್ನಸ್ತದಾಭವತ್ ।
ಪರಿಪೂರ್ಣಃ ಶಶೀ ಕಾಲೇ ಗ್ರಹೇಣೋಪಪ್ಲುತೋ ಯಥಾ ॥೩೦॥

ಪೂರ್ಣಚಂದ್ರನು ಪರ್ವಕಾಲದಲ್ಲಿ ರಾಹುಗ್ರಸ್ತನಾಗುವಂತೆ ತಂದೆಯಾದ ತೇಜಸ್ವಿ ರಾಜಾ ದಶರಥ ಕಳೆಗುಂದಿದ.

ಸ ಚ ಶ್ರೀಮಾನಚಿಂತ್ಯಾತ್ಮಾ ರಾಮೋ ದಶರಥಾತ್ಮಜಃ ।
ಸೂತಂ ಸಂಚೋದಯಾಮಾಸ ತ್ವರಿತಂ ವಾಹ್ಯತಾಮಿತಿ ॥೩೧॥

ಆಗ ಅಚಿಂತ್ಯಸ್ವರೂಪನಾದ ತೇಜಸ್ವಿಯಾದ ದಶರಥಪುತ್ರ ಶ್ರೀರಾಮನು ಸುಮಂತ್ರನಿಗೆ ಹೇಳಿದ 'ಬೇಗನೆ ರಥವನ್ನು ಓಡಿಸು' ಎಂದು.

ರಾಮೋ ಯಾಹೀತಿ ಸೂತಂ ತಂ ತಿಷ್ಠೇತಿ ಸ ಜನಸ್ತದಾ ।
ಉಭಯಂ ನಾಶಕತ್ ಸೂತಃ ಕರ್ತುಮಧ್ವನಿ ಚೋದಿತಃ ॥೩೨॥

ಸುಮಂತ್ರನನ್ನು ರಾಮ ಹೋಗೆಂದರೆ ಜನರು ನಿಲ್ಲು ಎಂದರು. ನಡುದಾರಿ-ಯಲ್ಲಿ ಹೀಗೆ ಹೇಳಿದರೆ, ಸಾರಥಿ ಹೋಗಬೇಕೆ? ನಿಲ್ಲಬೇಕೆ? ಎರಡನ್ನೂ ಮಾಡಲು ಅವನು ಶಕ್ತನಾಗಲಿಲ್ಲ.

ನಿರ್ಗಚ್ಛತಿ ಮಹಾಬಾಹೌ ರಾಮೇ ಪೌರಜನಾಶ್ರುಭಿಃ ।
ಪತಿತೈರಭ್ಯವಹಿತಂ ಪ್ರಶಶಾಮ ಮಹೀರಜಃ ॥೩೩॥

ಮಹಾಬಾಹು ರಾಮ ಹೊರಟಾಗ ನೆಲದಿಂದ ಎದ್ದ ಧೂಳು ಪೌರಜನರ ಕಣ್ಣೀರಿನಿಂದ ತೊಯ್ದು ಉಡುಗಿತು.

ರುದಿತಾಶ್ರುಪರಿದ್ಯೂನಂ ಹಾಹಾಕೃತಮಚೇತನಮ್ ।
ಪ್ರಯಾಣೇ ರಾಘವಸ್ಯಾಸೀತ್ ಪುರಂ ಪರಮಪೀಡಿತಮ್ ॥೩೪॥

ರಾಮನು ಪ್ರಯಾಣ ಮಾಡುವಾಗ ನಗರವು ಅತ್ತು ಕಣ್ಣೀರಿನಿಂದ ತೊಯ್ದಿತು. ಹಾಹಾಕಾರ ಮಾಡಿತು, ಅಚೇತನವಾಯಿತು. ಬಲು ಪೀಡಿತವಾಯಿತು.

ಸುಸ್ರಾವ ನಯನೈಃ ಸ್ತ್ರೀಣಾಮಸ್ರಮಾಯಾಸಸಂಭವಮ್ ।
ಮೀನಸಂಕ್ಷೋಭಚಲಿತೈಃ ಸಲಿಲಂ ಪಂಕಜೈರಿವ ॥೩೫॥

ಮೀನುಗಳ ಸಂಚಲನೆಯಿಂದ ಕಮಲ ಅಲುಗಾಡುವಾಗ ಅದರಿಂದ ನೀರು ಸುರಿಯುವಂತೆ ಸ್ತ್ರೀಯರ ಕಣ್ಣುಗಳಿಂದ ಶೋಕದ ಕಣ್ಣೀರು ಸುರಿಯಿತು.

ದೃಷ್ಟ್ವಾತು ನೃಪತಿಃ ಶ್ರೀಮಾನೇಕಚಿತ್ತಗತಂ ಪುರಮ್ ।
ನಿಪಪಾತೈವ ದುಃಖೇನ ಕೃತ್ತಮೂಲ ಇವ ದ್ರುಮಃ ॥೩೬॥

ನಗರವು ಏಕರೀತಿಯಿಂದ ಮನ ನೊಂದಿರುವುದನ್ನು ಕಂಡು, ಬುಡ ಕಡಿದ ಮರದಂತೆ ದುಃಖದಿಂದ ದೊಪ್ಪನೆ ಬಿದ್ದ, ರಾಜಾ ದಶರಥ.

ತತೋ ಹಲಹಲಾಶಬ್ದೋ ಜಜ್ಞೇ ರಾಮಸ್ಯ ಪೃಷ್ಠತಃ ।
ನರಾಣಾಂ ಪ್ರೇಕ್ಷ್ಯ ರಾಜಾನಂ ಸೀದಂತಂ ಭೃಶದುಃಖಿತಮ್ ॥೩೭॥

ರಾಜನು ಬಲು ದುಃಖಿತನಾಗಿ ಕುಸಿದು ಬಿದ್ದುದನ್ನು ಕಂಡು ರಾಮನ ಹಿಂದುಗಡೆ ಬರುತ್ತಿದ್ದ ಜನರ ಹಾಹಾಕಾರ ಶಬ್ದ ಉಂಟಾಯಿತು.

ಹಾ ರಾಮೇತಿ ಜನಾಃ ಕೇಚಿದ್ರಾಮಮಾತೇತಿ ಚಾಪರೇ ।
ಅಂತಃಪುರಂ ಸಮೃದ್ಧಂ ಚ ಕ್ರೋಶಂತಃ ಪರ್ಯದೇವಯನ್ ॥೩೮॥

ಕೆಲವು ಜನರು 'ಹಾ ರಾಮ' ಎಂದು, ಇನ್ನು ಕೆಲವರು 'ರಾಮಮಾತೆ!' ಎಂದು ಎಲ್ಲ ಅಂತಃಪುರ ಜನರೂ ಉಚ್ಚಧ್ವನಿಯಿಂದ ಗೋಳಿಟ್ಟರು.

ಅನ್ವೀಕ್ಷಮಾಣೋ ರಾಮಸ್ತು ವಿಷಣ್ಣಂ ಭ್ರಾಂತಚೇತನಮ್ ।
ರಾಜಾನಂ ಮಾತರಂ ಚೈವ ದದರ್ಶಾನುಗತೌ ಪಥಿ ॥೩೯॥

ರಾಮನು ಸ್ವಲ್ಪ ಹಿಂದಿರುಗಿ ನೋಡಿ, ವಿಷಣ್ಣನಾದ ಬುದ್ಧಿಭ್ರಮೆ ಹೊಂದಿದವನಂತಿದ್ದ ರಾಜನೂ ಮಾತೆಯೂ ತನ್ನನ್ನು ಮಾರ್ಗದಲ್ಲಿ ಹಿಂಬಾಲಿಸಿ ಬರುತ್ತಿದ್ದುದನ್ನು ಕಂಡ.

ಸ ಬದ್ಧ ಇವ ಪಾಶೇನ ಕಿಶೋರೋ ಮಾತರಂ ಯಥಾ ।
ಧರ್ಮಪಾಶೇನ ಸಂಕ್ಷಿಪ್ತಃ ಪ್ರಕಾಶಂ ನಾಭ್ಯುದೈಕ್ಷತ ॥೪೦॥

ಹಗ್ಗದಿಂದ ಕಟ್ಟಿದ ಕುದುರೆಮರಿ ತಾಯಿಯನ್ನು ಹೇಗೋ ಹಾಗೆ ಧರ್ಮಪಾಶದಿಂದ ಬದ್ಧನಾದ ರಾಮನೂ ತಂದೆತಾಯಿಗಳನ್ನು ಪೂರ್ತಿ ಹಿಂತಿರುಗಿ ನೋಡಲಿಲ್ಲ.

ಪದಾತಿನೌ ಚ ಯಾನಾರ್ಹಾವದುಃಖಾರ್ಹೌ ಸುಖೋಚಿತೌ ।
ದೃಷ್ಟ್ವಾ ಸಂಚೋದಯಾಮಾಸ ಶೀಘ್ರಂ ಯಾಹೀತಿ ಸಾರಥಿಮ್ ॥೪೧॥

ವಾಹನವೇರಿ ಸುಖವಾಗಿ ಬರಲು ತಕ್ಕವರು, ಕಾಲ್ನಡಿಗೆಯಿಂದ ದುಃಖದಿಂದ ಬರಲು ತಕ್ಕವರಲ್ಲ, ಇಂಥ ತಂದೆತಾಯಿಗಳು ಕಾಲ್ನಡಿಗೆಯಿಂದ ಬರುತ್ತಿದ್ದರೂ ರಾಮ ನೋಡಿ ಸಾರಥಿಗೆ ಬೇಗ ಹೋಗೆಂದ.

ನ ಹಿ ತತ್ ಪುರುಷವ್ಯಾಘ್ರೋ ದುಃಖದಂ ದರ್ಶನಂ ಪಿತುಃ ।
ಮಾತುಶ್ಚ ಸಹಿತುಂ ಶಕ್ತಸ್ತ್ರೋತ್ರಾರ್ದಿತ ಇವ ದ್ವಿಪಃ ॥೪೨॥

ಪುರುಷೋತ್ತಮನಾದ ರಾಮನು ಹಿಂತಿರುಗಿ ನೋಡಿ ದುಃಖದಾಯಕವಾದ

ಮಾತಾಪಿತರ ದರ್ಶನವನ್ನು ಸಹಿಸಿಕೊಳ್ಳಲು ಶಕ್ತನಾಗಿರಲಿಲ್ಲ. ಅಂಕುಶದಿಂದ ಪೀಡಿತವಾದ ಆನೆ ಹಿಂತಿರುಗಿ ನೋಡಲಾರದು. ಕೈಕೇಯಿಯ ಮಾತಿನ ಅಂಕುಶ-ದಿಂದ ಶ್ರೀರಾಮ ಪೀಡಿತನಾಗಿ ಹಿಂತಿರುಗಿ ನೋಡಲಿಲ್ಲ.

ಪ್ರತ್ಯಗಾರಮಿವಾಯಾಂತೀ ವತ್ಸಲಾ ವತ್ಸಕಾರಣಾತ್ ।
ಬದ್ಧವತ್ಸಾ ಯಥಾ ಧೇನೂ ರಾಮಮಾತಾಭ್ಯಧಾವತ ॥೪೩॥

ಕಟ್ಟಿದ ಕರುವನ್ನು ಕಾಣಲು ವಾತ್ಸಲ್ಯದಿಂದ ತಾಯಿ ಹಸು ಕೊಟ್ಟಿಗೆಗೆ ಧಾವಿಸಿ ಬರುವಂತೆ ಧರ್ಮಪಾಶಬದ್ಧನಾದ ರಾಮನನ್ನು ಕಾಣಲು ತಾಯಿ ಹಿಂದಿನಿಂದ ಧಾವಿಸಿ ಬಂದಳು.

ತಥಾ ರುದಂತೀಂ ಕೌಸಲ್ಯಾಂ ರಥಂ ತಮನುಧಾವತೀಮ್ ।
ಕ್ರೋಶಂತೀಂ ರಾಮ ರಾಮೇತಿ ಹಾ ಸೀತೇ ಲಕ್ಷ್ಮಣೇತಿ ಚ ॥೪೪॥

ರಾಮಲಕ್ಷ್ಮಣಸೀತಾರ್ಥಂ ಸ್ರವಂತೀಂ ವಾರಿ ನೇತ್ರಜಮ್ ।
ಅಸಕೃತ್ ಪ್ರೈಕ್ಷತ ಸ ತಾಂ ನೃತ್ಯಂತೀಮಿವ ಮಾತರಮ್ ॥೪೫॥

'ರಾಮ ರಾಮ' ಎಂದು 'ಹಾ ಸೀತೆ, ಹಾ ಲಕ್ಷ್ಮಣ' ಎಂದು ಕೂಗುತ್ತ ರಾಮ ಲಕ್ಷ್ಮಣ ಸೀತೆಯರಿಗಾಗಿ ಅಳುತ್ತ ಕಣ್ಣೀರು ಸುರಿಸುತ್ತ ಆ ರಥವನ್ನು ಬೆಂಬತ್ತಿ ಧಾವಿಸಿ ನರ್ತಿಸುವಂತೆ ಅತ್ತಿತ್ತ ಸುತ್ತುತ್ತ ಬರುತ್ತಿದ್ದ ಮಾತೆಯನ್ನು ಶ್ರೀರಾಮ ಪುನಃ ತಿರುಗಿ ನೋಡಿದ.

ತಿಷ್ಠೇತಿ ರಾಜಾ ಚುಕ್ರೋಶ ಯಾಹಿ ಯಾಹೀತಿ ರಾಘವಃ ।
ಸುಮಂತ್ರಸ್ಯ ಬಭೂವಾತ್ಮಾ ಚಕ್ರಯೋರಿವ ಚಾಂತರಾ ॥೪೬॥

'ನಿಲ್ಲು' ಎಂದು ರಾಜ ಕೂಗಿಕೊಂಡರೆ ಹೋಗು ಹೋಗೆಂದು ರಾಮ ಹೇಳು-ತ್ತಾನೆ. ಎರಡು ಚಕ್ರಗಳ ನಡುವೆ ಸಿಕ್ಕಿಕೊಂಡವನಂತೆ ಸುಮಂತ್ರನ ಮನಸ್ಸು ಹೊಯ್ದಾಡಿತು.

ನಾಶ್ರೌಷಮಿತಿ ರಾಜಾನಮುಪಾಲಬ್ಧೋಽಪಿ ವಕ್ಷ್ಯಸಿ ।
ಚಿರಂ ದುಃಖಸ್ಯ ಪಾಪಿಷ್ಠಮಿತಿ ರಾಮಸ್ತಮಬ್ರವೀತ್ ॥೪೭॥

'ರಥವನ್ನೇಕೆ ನಿಲ್ಲಿಸಲಿಲ್ಲ?' ಎಂದು ಮುಂದೆ ನಿನ್ನನ್ನು ರಾಜ ಆಕ್ಷೇಪಿಸಿದರೆ 'ನಿನ್ನ ಮಾತು ನನಗೆ ಕೇಳಿಸಲಿಲ್ಲ' ಎಂದು ಹೇಳು. ಈಗ ಹೋಗು. ದುಃಖ ಚಿರಕಾಲವಿದ್ದರೆ ಅಸಹನೀಯವಾಗುತ್ತದೆ, ಎಂದ ಶ್ರೀರಾಮ ಸುಮಂತ್ರನಿಗೆ.

ರಾಮಸ್ಯ ಚ ವಚಃ ಕುರ್ವನ್ನನುಜ್ಞಾಪ್ಯ ಚ ತಂ ಜನಮ್ ।
ವ್ರಜತೋಽಪಿ ಹಯಾನ್ ಶೀಘ್ರಂ ಚೋದಯಾಮಾಸ ಸಾರಥಿಃ ॥೪೮॥

ಸಾರಥಿಯು ರಾಮನ ಮಾತಿನಂತೆ ನಡೆಯುವುದಕ್ಕಾಗಿ, ರಥದ ಹಿಂದೆ ಮುಂದೆ ಇದ್ದ ಎಲ್ಲ ಪೌರರನ್ನೂ ಅಂತಃಪುರ ಜನರನ್ನೂ ರಾಮಾಜ್ಞೆಯಂತೆ ಹಿಂತಿರುಗಲು ಹೇಳಿ, ಮುಂದೆ ಓಡುತ್ತಿದ್ದ ಕುದುರೆಗಳನ್ನೇ ಇನ್ನೂ ಶೀಘ್ರವಾಗಿ ಓಡಿಸಿದ.

ನ್ಯವರ್ತತ ಜನೋ ರಾಜ್ಞೋ ರಾಮಂ ಕೃತ್ವಾ ಪ್ರದಕ್ಷಿಣಮ್ ।
ಮನಸಾಪ್ಯಶ್ರುವೇಗೈಶ್ಚ ನ ನ್ಯವರ್ತತ ಮಾನುಷಮ್ ॥೪೯॥

ರಾಜನ ಅಂತಃಪುರದ ಜನರು ರಾಮನಿಗೆ ಮನಸ್ಸಿನಲ್ಲಿಯೇ ಪ್ರದಕ್ಷಿಣೆ ಮಾಡಿ ಹಿಂದೆ ಹೋದರು. ಆದರೆ ಅವರು ದೇಹಮಾತ್ರದಿಂದ ಹಿಂದೆ ಹೋದರು, ಹೊರತು, ಮನಸಿನಿಂದಲ್ಲ. ಮತ್ತು ವೇಗವಾಗಿ ಕಣ್ಣೀರು ಸುರಿಸುವ ಕಾರ್ಯ ದಿಂದ 'ಮಾನುಷ'ವು, ಜನಸಮೂಹವು ನಿವೃತ್ತವಾಗಲಿಲ್ಲ. ಜನರ ಮನಸ್ಸು ರಾಮನನ್ನು ಮರೆಯಲಿಲ್ಲ, ಅವರ ಕಣ್ಣೀರು ಬತ್ತಲಿಲ್ಲ.

ಯಮಿಚ್ಛೇತ್ ಪುನರಾಯಾಂತಂ ನೈನಂ ದೂರಮನುವ್ರಜೇತ್ ।
ಇತ್ಯಮಾತ್ಯಾ ಮಹಾರಾಜಮೂಚುರ್ದಶರಥಂ ವಚಃ ॥೫೦॥

ಪುನಃ ಹಿಂತಿರುಗಿ ಬರಬೇಕಾದ ವ್ಯಕ್ತಿಯನ್ನು ಬೀಳ್ಕೊಡುವಾಗ ಬಹಳ ದೂರದ-ವರೆಗೆ ಹಿಂಬಾಲಿಸಿ ಹೋಗಿ ಬೀಳ್ಕೊಡಬಾರದು ಎಂದು ಅಮಾತ್ಯರು ಮಹಾರಾಜ ದಶರಥನಿಗೆ ಹೇಳಿದರು.

ತೇಷಾಂ ವಚಃ ಸರ್ವಗುಣೋಪಪನ್ನಂ
ಪ್ರಸ್ವಿನ್ನಗಾತ್ರಃ ಪ್ರವಿಷಣ್ಣರೂಪಃ ।
ನಿಶಮ್ಯ ರಾಜಾ ಕೃಪಣಃ ಸಭಾರ್ಯೋ
ವ್ಯವಸ್ಥಿತಸ್ತಂ ಸುತಮೀಕ್ಷಮಾಣಃ ॥೫೧॥

ಅಮಾತ್ಯರು ಹೇಳಿದ ಈ ಸರ್ವಗುಣಯುಕ್ತವಾದ ವಚನವನ್ನು ಕೇಳಿದ ಬಳಿಕ ಮೈಬೆವರಿಕೊಡು ವಿಷಣ್ಣನಾಗಿದ್ದ ರಾಜಾ ದಶರಥನು ಭಾರ್ಯೆಯ-ರೊಂದಿಗೆ ಮಗನನ್ನು ನೋಡುನೋಡುತ್ತ ಅಲ್ಲಿಯೇ ನಿಂತುಬಿಟ್ಟ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ನಲವತ್ತನೇ ಸರ್ಗ ಮುಗಿಯಿತು.

ಏಕಚತ್ವಾರಿಂಶಃ ಸರ್ಗಃ

ಸರ್ಗ – 41

ಅಂತಃಪುರಸ್ತ್ರೀಯರ ವಿಲಾಪ. ದುಃಶಕುನಗಳು.

ತಸ್ಮಿಂಸ್ತು ಪುರುಷವ್ಯಾಘ್ರೇ ನಿರ್ಯಾತೇ ಕೃತಾಂಜಲೌ ।
ಆರ್ತಶಬ್ದೋಽಥ ಸಂಜಜ್ಞೇ ಸ್ತ್ರೀಣಾಮಂತಃಪುರೇ ಮಹಾನ್ ॥೧॥

ಪುರುಷೋತ್ತಮನಾದ ಶ್ರೀರಾಮನು ಕೈಮುಗಿದುಕೊಂಡು ನಗರದಿಂದ ಹೊರಟುಹೋದಾಗ ಸ್ತ್ರೀಯರ ಅಂತಃಪುರದಲ್ಲಿ ಮಹತ್ತರವಾದ ಆರ್ತನಾದ ಉಂಟಾಯಿತು.

ಅನಾಥಸ್ಯ ಜನಸ್ಯಾಸ್ಯ ದುರ್ಬಲಸ್ಯ ತಪಸ್ವಿನಃ ।
ಯೋ ಗತಿಃ ಶರಣಂ ಚಾಸೀತ್ ಸ ನಾಥಃ ಕ್ವ ನು ಗಚ್ಛತಿ ॥೨॥

ಅನಾಥರಾದ ದುರ್ಬಲರಾದ ತಪಸ್ವಿಗಳಾದ ಜನರಿಗೆ ರಾಮನೆ ಗತಿಯಾಗುತ್ತಿದ್ದ ರಕ್ಷಕನಾಗುತ್ತಿದ್ದ. ಅಂಥ ನಾಥನಾದ ರಾಮ ಇನ್ನು ಕಾಡಿನಲ್ಲಿ ಎಲ್ಲಿಗೆ ಹೋಗುತ್ತಾನೆ?

ನ ಕ್ರುಧ್ಯತ್ಯಭಿಶಪ್ತೋಽಪಿ ಕ್ರೋಧನೀಯಾನಿ ವರ್ಜಯನ್ ।
ಕ್ರುದ್ಧಾನ್ ಪ್ರಸಾದಯನ್ ಸರ್ವಾನ್ ಸಮದುಃಖಿಃ ಕ್ವ ಗಚ್ಛತಿ ॥೩॥

ನಾವೇನಾದರೂ ಬೈದರೆ ಕೋಪಿಸಿಕೊಳ್ಳುತ್ತಿರಲಿಲ್ಲ. ಕೋಪ ಬರುವ ಸನ್ನಿವೇಶ-ವನ್ನೇ ಬಾರದಂತೆ ಮಾಡಿಕೊಳ್ಳುತ್ತಿದ್ದ. ನಾವು ಕೋಪಿಸಿಕೊಂಡರೆ ಎಲ್ಲರನ್ನೂ ಸಮಾಧಾನ ಪಡಿಸುತ್ತಿದ್ದ. ಸುಖದುಃಖಗಳನ್ನು ಸಮಾನವಾಗಿ ಕಾಣುತ್ತಿದ್ದ. ಅವನು ಕಾಡಿನಲ್ಲಿ ಎಲ್ಲಿಗೆ ಹೋಗುತ್ತಾನೆ?

ಕೌಸಲ್ಯಾಯಾಂ ಮಹಾತೇಜಾ ಯಥಾ ಮಾತರಿ ವರ್ತತೇ ।
ತಥಾ ಯೋ ವರ್ತತೇಽಸ್ಮಾಸು ಮಹಾತ್ಮಾ ಕ್ವ ನು ಗಚ್ಛತಿ ॥೪॥

ಮಹಾತೇಜಸ್ವಿ ರಾಮ ಮಾತೆ ಕೌಸಲ್ಯೆಯ ಬಳಿ ಹೇಗೆ ವರ್ತಿಸುತ್ತಿದ್ದನೋ ಹಾಗೇ ನಮ್ಮ ಬಳಿಯೂ ವರ್ತಿಸುತ್ತಿದ್ದ, ಮಹಾತ್ಮ. ಎಲ್ಲಿಗೆ ಹೋಗುವನೊ!

ಕೈಕೇಯ್ಯಾ ಕ್ಲಿಶ್ಯಮಾನೇನ ರಾಜ್ಞಾ ಸಂಚೋದಿತೋ ವನಮ್ ।
ಪರಿತ್ರಾತಾಜನಸ್ಯಾಸ್ಯ ಜಗತಃ ಕ್ವ ನು ಗಚ್ಛತಿ ॥೫॥

ಕೈಕೇಯಿಯಿಂದ ವಂಚನೆಗಳೊಗಾದ ರಾಜನ ಮಾತುಗಳನ್ನು ಕೇಳಿ 'ಅಜನಸ್ಯ' ಜನನವಿಲ್ಲದ ಮುಕ್ತಜನಸಮೂಹಕ್ಕೂ 'ಜಗತಃ' ಅಮುಕ್ತಜಗತ್ತಿಗೂ 'ಪರಿತ್ರಾತಾ' ರಕ್ಷಕನಾದ ಶ್ರೀರಾಮ ಕಾಡಿಗೆ ಹೋಗಿ ಅಲ್ಲಿ ಎಲ್ಲಿಗೆ ಹೋಗುವನು?

ಅಹೋ ನಿಶ್ಚೇತನೋ ರಾಜಾ ಜೀವಲೋಕಸ್ಯ ಸಂಪ್ರಿಯಮ್ ।
ಧರ್ಮ್ಯಂ ಸತ್ಯವ್ರತಂ ರಾಮಂ ವನವಾಸೇ ಪ್ರವತ್ಸ್ಯತಿ ॥೬॥

ಜೀವಲೋಕಕ್ಕೆಲ್ಲ ಅತಿಪ್ರಿಯನಾದ ಧರ್ಮನಿಷ್ಠ ಸತ್ಯನಿಷ್ಠನಾದ ರಾಮನನ್ನು ಬುದ್ಧಿಹೀನನಾದ ರಾಜ, ಅಯ್ಯೋ, ಕಾಡಿಗೆ ಕಳಿಸಿದ್ದಾನೆ.

ಇತಿ ಸರ್ವಾ ಮಹಿಷ್ಯಸ್ತಾ ವಿವತ್ಸಾ ಇವ ಧೇನವಃ ।
ರುರುದುಶ್ಚೈವ ದುಃಖಾರ್ತಾಃ ಸಸ್ವರಂ ಚ ವಿಚುಕ್ರುಶುಃ ॥೭॥

ಹೀಗೆ ಎಲ್ಲ ಮಹಿಷಿಯರೂ ಕರುವನ್ನು ಕಳೆದುಕೊಂಡ ಹಸುಗಳಂತೆ ದುಃಖಾರ್ತ–ರಾಗಿ ಕಣ್ಣೀರಿಟ್ಟರು. ಗಟ್ಟಿಯಾಗಿ ಕೂಗಿಕೊಂಡರು.

20ನೇ ಸರ್ಗದಲ್ಲಿಯೂ ಇವೇ ಶ್ಲೋಕಗಳು ಸ್ವಲ್ಪ ವ್ಯತ್ಯಾಸವಾಗಿ ಬಂದಿವೆ. ಆದರೂ ಅವನ್ನು ಪ್ರಕ್ಷಿಪ್ತವೆನ್ನಲಾಗದು. ಎಲ್ಲ ವ್ಯಾಖ್ಯಾನಕಾರರು ಕೂಡ ಇವುಗಳಿಗೆ ವ್ಯಾಖ್ಯಾನ ಮಾಡಿದ್ದಾರೆ. 5ನೇ ಶ್ಲೋಕಕ್ಕೆ ಶ್ರೀಸತ್ಯಧರ್ಮತೀರ್ಥರ ವ್ಯಾಖ್ಯಾನವೂ ಇದೆ.

ಸ ತಮಂತಃಪುರೇ ಘೋರಮಾರ್ತಶಬ್ದಂ ಮಹೀಪತಿಃ ।
ಪುತ್ರಶೋಕಾಭಿಸಂತಪ್ತಃ ಶ್ರುತ್ವಾ ಚಾಸೀತ್ ಸುದುಃಖಿತಃ ॥೮॥

ಅಂತಃಪುರದಲ್ಲಿ ಉಂಟಾದ ಘೋರ ಆರ್ತಧ್ವನಿಯನ್ನು ಕೇಳಿದ ಮೇಲಂತೂ ದಶರಥನು ಪುತ್ರಶೋಕದಿಂದ ಬಹಳ ಸಂತಾಪಗೊಂಡು ದುಃಖಿತನಾದ.

ನಾಗ್ನಿಹೋತ್ರ್ಯಾಣ್ಯಹೂಯಂತ ನಾಪಚನ್ ಗೃಹಮೇಧಿನಃ ।
ಅಕುರ್ವನ್ನ ಪ್ರಜಾಃ ಕಾರ್ಯಂ ಸೂರ್ಯಶ್ಚಾಂತರಧೀಯತ ॥೯॥

ಅರಮನೆಯಲ್ಲಿ ಅಗ್ನಿಹೋತ್ರಿಗಳು ಅಗ್ನಿಹೋತ್ರ ಮಾಡಲಿಲ್ಲ. ಗೃಹಸ್ಥರು ಪಾಕಯಜ್ಞಗಳನ್ನು ಮಾಡಲಿಲ್ಲ. ಪ್ರಜೆಗಳೂ ರಾಮನನ್ನು ಅಗಲಿದ ದುಃಖದಿಂದ ಜಡರಾಗಿ ಕರ್ತವ್ಯಕರ್ಮಗಳನ್ನು ಮಾಡಲಿಲ್ಲ. ಸೂರ್ಯನೂ ಅಸ್ತಮಯ ಸಮಯಕ್ಕೆ ಮುಂಚಿತವಾಗಿಯೇ ಅದೃಶ್ಯನಾದ.

ವ್ಯಸೃಜನ್ ಕಬಲಾನ್ನಾಗಾ ಗಾವೋ ವತ್ಸಾನ್ನ ಪಾಯಯನ್ ।
ಪುತ್ರಂ ಪ್ರಥಮಜಂ ಲಬ್ಧ್ವಾ ಜನನೀ ನಾಭ್ಯನಂದತ ॥೧೦॥

ಆನೆಗಳೂ ಕೂಡ ಮುಂದೆ ಇರಿಸಿದ ಆಹಾರವನ್ನು ತ್ಯಜಿಸಿದುವು. ಹಸುಗಳು ಕರುಗಳಿಗೆ ಹಾಲುಣಿಸಲಿಲ್ಲ. ಸ್ತ್ರೀಯರು ಚೊಚ್ಚಲ ಗಂಡುಮಗುವನ್ನು ಪಡೆದರೂ ಸಂತೋಷಪಡಲಿಲ್ಲ.

ತ್ರಿಶಂಕುರ್ಲೋಹಿತಾಂಗಶ್ಚ ಬೃಹಸ್ಪತಿಬುಧಾವಪಿ ।
ದಾರುಣಾಃ ಸೋಮಮಭ್ಯೇತ್ಯ ಗ್ರಹಾಃ ಸರ್ವೇ ವ್ಯವಸ್ಥಿತಾಃ ॥೧೧॥

'ತ್ರಿಶಂಕು' ಅಂದರೆ ಶನಿ ಕುಜ ಬೃಹಸ್ಪತಿ ಬುಧಗ್ರಹಗಳು ಎಲ್ಲರೂ ದಾರುಣ-ರಾಗಿ ಚಂದ್ರನ ಸಮೀಪದಲ್ಲಿದ್ದರು.

ಬೃಹಸ್ಪತಿ ಬುಧರು 'ದಾರುಣ'ರಾಗುವುದು ದಾರುಣಗ್ರಹ ಸಮೀಪ ವಿರುವುದರಿಂದ. ಬುಧನು ಸೂರ್ಯಸಮೀಪದಲ್ಲಿದ್ದರೂ ಅವನ ದೃಷ್ಟಿ ಚಂದ್ರನ ಮೇಲಿರುವ ಕಾರಣದಿಂದ 'ಚಂದ್ರಸಮೀಪಸ್ಥ'ನೆನ್ನಲಾಗಿದೆ.

ತ್ರಿಶಂಕು ಗ್ರಹವಲ್ಲ. ಅವನಿಗೆ ಸೋಮನ ಪ್ರಾಪ್ತಿಯೂ ಇಲ್ಲ. ಅದರಿಂದ ಇಲ್ಲಿ 'ತ್ರಿಶಂಕು' ಎಂದರೆ ಶನಿ ಎಂದಿಟ್ಟುಕೊಳ್ಳಬೇಕು. ಶನಿಯನ್ನು 'ತ್ರಿಶಂಕು' ಎಂದು ಕರೆದುದು ಅವನು 'ತ್ರಿ' ಅಂದರೆ ದ್ವಾದಶ ಅಷ್ಟಮ ಮತ್ತು ಜನ್ಮ ಸ್ಥಾನಗಳಲ್ಲಿದ್ದು 'ಶಂಕು'ವಾಗಿ ಈಟಿಯಂತೆ ಕ್ರೂರನಾಗಿರುವವನು 'ತ್ರಿ-ಶಂಕು' ಎನಿಸುತ್ತಾನೆ ಎಂಬ ಅಭಿಪ್ರಾಯದಿಂದ. ಯದ್ಯಪಿ

ದ್ವಾದಶಾಷ್ಟಮ ಜನ್ಮಸ್ಥಾಃ ಶನ್ಯರ್ಕಾಂಗಾರಕಾ ಗುರುಃ ।

ಎಂಬಂತೆ ಅರ್ಕ ಅಂಗಾರಕ ಗುರುಗಳೂ ಕೂಡ ದ್ವಾದಶ ಅಷ್ಟಮ ಜನ್ಮಸ್ಥಾನ ಗಳಲ್ಲಿರುತ್ತಾರೆ. ಆದರೂ 'ಶನ್ಯರ್ಕಾಂಗಾರಕಾಃ' ಎಂದು ಮೊದಲಿಗೆ ಶನಿಯನ್ನು ನಿರ್ದೇಶಿಸುವುದರಿಂದ ಶನಿಯನ್ನು ವಿಶೇಷವಾಗಿ 'ತ್ರಿಶಂಕು' ನಾಮದಿಂದ ರಾಮಾಯಣ ಕರೆದಿದೆ ಎಂದು ಶ್ರೀಸತ್ಯಧರ್ಮತೀರ್ಥರ ವ್ಯಾಖ್ಯಾನದಲ್ಲಿದೆ.

ನಕ್ಷತ್ರಾಣಿ ಗತಾರ್ಚೀಂಷಿ ಗ್ರಹಾಶ್ಚ ಗತತೇಜಸಃ ।
ವಿಶಾಖಾಸ್ತು ಸಧೂಮಾಶ್ಚ ನಭಸಿ ಪ್ರಚಕಾಶಿರೇ ॥೧೨॥

ನಕ್ಷತ್ರಗಳು ತಮ್ಮ ಸ್ವಾಭಾವಿಕ ಕಾಂತಿಯಿಂದ ಮಿನುಗಲಿಲ್ಲ. ಗ್ರಹಗಳೂ ತೇಜೋಹೀನವಾದುವು. ಅವು ವಿಮಾರ್ಗದಲ್ಲಿದ್ದು ಹೊಗೆಯಿಂದ ಕೂಡಿ ಮಲಿನವಾಗಿ ಆಕಾಶದಲ್ಲಿ ಕಂಡುಬಂದುವು.

ಕಾಲಿಕಾನಿಲವೇಗೇನ ಮಹೋದಧಿರಿವೋತ್ಥಿತಃ ।
ರಾಮೇ ವನಂ ಪ್ರವ್ರಜಿತೇ ನಗರಂ ಪ್ರಚಚಾಲ ತತ್ ॥೧೩॥

ಮೇಘಯುಕ್ತವಾದ ಬಿರುಗಾಳಿಯ ವೇಗದಿಂದ ಕ್ಷೋಭೆಗೊಳ್ಳುವ ಮಹಾ ಸಮುದ್ರದಂತೆ ಶ್ರೀರಾಮ ಕಾಡಿಗೆ ಹೋದಾಗ ಅಯೋಧ್ಯೆಯೆ ಎದ್ದು ಚಲಿಸಿತು.

ದಿಶಃ ಪರ್ಯಾಕುಲಾಃ ಸರ್ವಾಸ್ತಿಮಿರೇಣೇವ ಸಂವೃತಾಃ ।
ನ ಗ್ರಹೋ ನಾಪಿ ನಕ್ಷತ್ರಂ ಪ್ರಚಕಾಶೇ ನ ಕಿಂಚನ ॥೧೪॥

ಎಲ್ಲ ದಿಕ್ಕುಗಳೂ ಕತ್ತಲಿನಿಂದ ಆವೃತವಾದುವು. ಗ್ರಹಗಳೂ ಪ್ರಕಾಶಿಸಲಿಲ್ಲ. ನಕ್ಷತ್ರಗಳೂ ಪ್ರಕಾಶಿಸಲಿಲ್ಲ, ಏನೂ ಪ್ರಕಾಶಿಸಲಿಲ್ಲ.

ಅಕಸ್ಮಾನ್ನಾಗರಃ ಸರ್ವೋ ಜನೋ ದೈನ್ಯಮುಪಾಗಮತ್ ।
ಆಹಾರೇ ವಾ ವಿಹಾರೇ ವಾ ನ ಕಶ್ಚಿದಕರೋನ್ಮನಃ ॥೧೫॥

ನಾಗರಿಕರೆಲ್ಲರೂ ಏನೂ ಕಾರಣವಿಲ್ಲದೇ ಖಿನ್ನರಾದರು. ಆಹಾರದಲ್ಲಿ ಆಗಲಿ ವಿಹಾರದಲ್ಲಿ ಆಗಲಿ ಯಾರೂ ಆಸಕ್ತಿ ತೋರಲಿಲ್ಲ.

ಶೋಕಪರ್ಯಾಯಸಂತಪ್ತಃ ಸತತಂ ದೀರ್ಘಮುಚ್ಛ್ವಸನ್ ।
ಅಯೋಧ್ಯಾಯಾಂ ಜನಃ ಸರ್ವಶ್ಚಕ್ರೋಶ ಜಗತೀಪತಿಮ್ ॥೧೬॥

ಶೋಕ ಪರಂಪರೆಯಿಂದ ಅಯೋಧ್ಯೆಯಲ್ಲಿ ಜನರೂ ಬೆಂದು ಸತತವಾಗಿ ದೀರ್ಘವಾಗಿ ನಿಟ್ಟುಸಿರಿಡುತ್ತ ರಾಜನನ್ನು ನಿಂದಿಸಿದರು.

ಬಾಷ್ಪ ಪರ್ಯಾಕುಲಮುಖೋ ರಾಜಮಾರ್ಗಗತೋ ಜನಃ ।
ನ ಹೃಷ್ಟೋ ಲಕ್ಷ್ಯತೇ ಕಶ್ಚಿತ್ ಸರ್ವಃ ಶೋಕಪರಾಯಣಃ ॥೧೭॥

ರಾಜಮಾರ್ಗದಲ್ಲಿ ಸಂಚರಿಸುವ ಜನರು ಯಾರೂ ಹೃಷ್ಟರಾಗಿ ಕಾಣಿಸಿಕೊಳ್ಳಲಿಲ್ಲ. ಎಲ್ಲರೂ ಮುಖದಲ್ಲಿ ಬಹಳ ವ್ಯಾಕುಲರಾಗಿಯೇ ಕಾಣಿಸಿಕೊಂಡರು. ಎಲ್ಲರೂ ಶೋಕಪರಾಯಣರಾಗಿದ್ದರು.

ನ ವಾತಿ ಪವನಃ ಶೀತೋ ನ ಶಶೀ ಸೌಮ್ಯದರ್ಶನಃ ।
ನ ಸೂರ್ಯಸ್ತಪತೇ ಲೋಕಂ ಸರ್ವಂ ಪರ್ಯಾಕುಲಂ ಜಗತ್ ॥೧೮॥

ಗಾಳಿ ಶೀತಲವಾಗಿ ಬೀಸಲಿಲ್ಲ. ಚಂದ್ರ ಸೌಮ್ಯನಾಗಿ ಕಾಣಿಸಿಕೊಳ್ಳಲಿಲ್ಲ. ಸೂರ್ಯ ಲೋಕಕ್ಕೆ ಶಾಖ ಕೊಡಲಿಲ್ಲ. ಎಲ್ಲ ಪ್ರಪಂಚ ಅಸ್ತವ್ಯಸ್ತವಾಯಿತು.

ಅನರ್ಥಿನಃ ಸುತಾಃ ಸ್ತ್ರೀಣಾಂ ಭರ್ತಾರೋ ಭ್ರಾತರಸ್ತಥಾ ।
ಸರ್ವೇ ಸರ್ವಂ ಪರಿತ್ಯಜ್ಯ ರಾಮಮೇವಾನ್ವಚಿಂತಯನ್ ॥೧೯॥

ಸ್ತ್ರೀಯರ ಅಪೇಕ್ಷೆ ಅವರ ಮಕ್ಕಳಿಗೂ ಇಲ್ಲ, ಗಂಡಂದಿರಿಗೂ ಇಲ್ಲ. ಸೋದರರಿಗೂ ಸೋದರರ ಅಪೇಕ್ಷೆ ಇಲ್ಲ. ಎಲ್ಲರೂ ಎಲ್ಲರನ್ನೂ ಬಿಟ್ಟು ರಾಮನನ್ನೇ ಚಿಂತಿಸಿದರು.

'ಕೌಸಲ್ಯೆ ಮಗನನ್ನು ಕಾಡಿಗೆ ಅಟ್ಟಿದಳು ಇಂಥ ಸ್ತ್ರೀಯರು ತಾಯಂದಿರಾಗಿ ನಮಗೆ ಬೇಡ' ಎಂದು ಮಕ್ಕಳು ತ್ಯಜಿಸಿದರು. 'ಕೈಕೇಯಿ ದಶರಥನಿಗೆ ವಂಚನೆ ಮಾಡಿದಳೆ'ಂದು ಗಂಡಂದಿರು ಹೆಂಡತಿಯರನ್ನು ಬಿಟ್ಟರು. 'ಸೋದರ ಭರತ ಸೋದರನಾದ ರಾಮನ ರಾಜ್ಯವನ್ನು ಅಪಹರಿಸಿದನೆಂ'ದು ಸೋದರರನ್ನು ಸೋದರರು ಬಿಟ್ಟರು. ಯಾರೂ ಯಾರಿಗೂ ಬಂಧುಗಳಲ್ಲ. ರಾಮನೆ ಎಲ್ಲರಿಗೆ ಬಂಧು ಎಂದು ಎಲ್ಲರೂ ರಾಮನನ್ನು ಚಿಂತಿಸಿದರು.

ಯೇ ತು ರಾಮಸ್ಯ ಸುಹೃದಃ ಸರ್ವೇ ತೇ ಮೂಢಚೇತಸಃ ।
ಶೋಕಭಾರೇಣ ಚಾಕ್ರಾಂತಾಃ ಶಯನಂ ನ ಜಹುಸ್ತದಾ ॥೨೦॥

ರಾಮನ ಬಂಧುಗಳೆಲ್ಲರೂ ರಾಮನನ್ನು ಕಾಣದೆ ಬುದ್ಧಿವಿಕಲರಾದರು. ಬೆಟ್ಟದಷ್ಟು ಭಾರದ ಶೋಕವನ್ನು ಎದೆಯಲ್ಲಿ ತುಂಬಿಕೊಂಡು ಮಲಗಿದವರು ಹಾಸಿಗೆ ಬಿಟ್ಟು ಏಳಲಿಲ್ಲ. ಬೆಟ್ಟವನ್ನು ಹೊತ್ತವರು ಮೇಲೆ ಏಳಲಾರರು ತಾನೆ?

ತತಸ್ತ್ವಯೋಧ್ಯಾ ರಹಿತಾ ಮಹಾತ್ಮನಾ
ಪುರಂದರೇಣೇವ ಮಹೀ ಸಪರ್ವತಾ ।
ಚಚಾಲ ಘೋರಂ ಭಯಶೋಕಪೀಡಿತಾ
ಸನಾಗಯೋಧಾಶ್ವಗಣಾ ನನಾದ ಚ ॥೨೧॥

ಮಳೆ ಉಂಟುಮಾಡುವ ಇಂದ್ರನು ಇಲ್ಲದಿದ್ದರೆ ಬೆಟ್ಟದಿಂದ ಸಹಿತವಾದ ಭೂಮಿ ಭಯದಿಂದ ಕಂಪಿಸುವಂತೆ, ರಾಮನಿಲ್ಲದೆ ಚತುರಂಗ ಬಲಯುಕ್ತವಾದ ಅಯೋಧ್ಯೆ ಭಯಶೋಕಪೀಡಿತವಾಗಿ ಭಯಂಕರವಾಗಿ ಕಂಪಿಸಿತು ಧ್ವನಿಯನ್ನು ಮಾಡಿತು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ನಲವತ್ತೊಂದನೇ ಸರ್ಗ ಮುಗಿಯಿತು.

❖

ದ್ವಿಚತ್ವಾರಿಂಶಃ ಸರ್ಗಃ

ಸರ್ಗ – 42

ಶ್ರೀರಾಮನು ವನಕ್ಕೆ ಹೋದಮೇಲೆ ದಶರಥನ ವಿಲಾಪ

ಯಾವತ್ತು ನಿರ್ಯತಸ್ತಸ್ಯ ರಜೋರೂಪಮದೃಶ್ಯತ ।
ನೈವೇಕ್ಷ್ವಾಕುವರಸ್ತಾವತ್ ಸಂಜಹಾರಾತ್ಮಚಕ್ಷುಷೀ ॥೧॥

ಶ್ರೀರಾಮನು ಕಾಡಿಗೆ ಹೊರಟುಹೋಗುವಾಗ ರಥ ಚಲನೆಯಿಂದ ಎದ್ದ ದೂಳು ಕಣ್ಣಿಗೆ ಕಾಣುವವರೆಗೂ ದಶರಥ ತನ್ನ ದೃಷ್ಟಿಯನ್ನು ಹಿಂದಕ್ಕೆ ತೆಗೆದುಕೊಳ್ಳಲಿಲ್ಲ.

ಯಾವದ್ರಾಜಾ ಪ್ರಿಯಂ ಪುತ್ರಂ ಪಶ್ಯತ್ಯತ್ಯಂತಧಾರ್ಮಿಕಮ್ ।
ತಾವದ್ವ್ಯವರ್ಧತೇವಾಸ್ಯ ಧರಣ್ಯಾಂ ಪುತ್ರದರ್ಶನೇ ॥೨॥

ಪರಮಧಾರ್ಮಿಕನಾದ ಪ್ರಿಯಪುತ್ರ ಕಾಣುವವರೆಗೂ ರಾಜನ ಶರೀರ ಮಗನ ದರ್ಶನಕ್ಕಾಗಿ ಮೇಲೆ ಮೇಲೆ ಏಳುತ್ತಿದ್ದಂತೇ ಇತ್ತು.

ನ ಪಶ್ಯತಿ ರಜೋಽಪ್ಯಸ್ಯ ಯದಾ ರಾಮಸ್ಯ ಭೂಮಿಪಃ ।
ತದಾರ್ತಶ್ಚ ವಿಷಣ್ಣಶ್ಚ ಪಪಾತ ಧರಣೀತಲೇ ॥೩॥

ರಾಮನ ಆಗಮನದಿಂದ ಎದ್ದ ದೂಳು ಕೂಡ ದಶರಥನಿಗೆ ಕಾಣದಿದ್ದಾಗ ಅವನು ಆರ್ತನಾಗಿ ವಿಷಾದದಿಂದ ನೆಲದ ಮೇಲೆ ಕುಸಿದುಬಿದ್ದ.

ತಸ್ಯ ದಕ್ಷಿಣಮನ್ವಾಗಾತ್ ಕೌಸಲ್ಯಾ ಬಾಹುಮಂಗನಾ ।
ವಾಮಂ ಚಾಸ್ಯಾನ್ವಗಾತ್ ಪಾರ್ಶ್ವಂ ಕೈಕೇಯೀ ಭರತಪ್ರಿಯಾ ॥೪॥

ರಾಜನ ಬಲತೋಳನ್ನು ಕೌಸಲ್ಯೆ ಹಿಡಿದು ನಡೆದಳು. ಭರತನಿಗೆ ಪ್ರಿಯಳಾದ ಕೈಕೇಯಿ ರಾಜನ ಎಡತೋಳನ್ನು ಹಿಡಿದು ನಡೆದಳು.

ತಾಂ ನಯೇನ ಚ ಸಂಪನ್ನೋ ಧರ್ಮೇಣ ವಿನಯೇನ ಚ ।
ಉವಾಚ ರಾಜಾ ಕೈಕೇಯೀಂ ಸಮೀಕ್ಷ್ಯ ವ್ಯಥಿತೇಂದ್ರಿಯಃ ॥೫॥

ನಯ ವಿನಯ ಧರ್ಮ ಸಂಪನ್ನನಾದ ರಾಜ ಕೈಕೇಯಿಯನ್ನು ಕಂಡಾಗ ಅವನಿಗೆ ಕಣ್ಣು ಬೇನೆ ಬಂದಂತಾಯಿತು. ಅವಳಿಗೆ ಹೇಳಿದ.

ಕೈಕೇಯಿ ಮಾ ಮಮಾಂಗಾನಿ ಸ್ಪಾಕ್ಷೀಸ್ತ್ವಂ ದುಷ್ಟಚಾರಿಣೀ ।
ನ ಹಿ ತ್ವಾಂ ದ್ರಷ್ಟುಮಿಚ್ಛಾಮಿ ನ ಭಾರ್ಯಾ ನ ಚ ಬಾಂಧವೀ ॥೬॥

ದುಷ್ಟಕರ್ಮ ಮಾಡುವವಳೆ, ಕೈಕೇಯಿ, ನೀನು ನನ್ನ ಮೈ ಮುಟ್ಟದಿರು. ನೀನು ನನಗೆ ಭಾರ್ಯೆಯೂ ಅಲ್ಲ, ಬಂಧುವೂ ಅಲ್ಲ. ನಿನ್ನನ್ನು ನೋಡಲೂ ನಾನು ಇಚ್ಛಿಸಲಾರೆ.

ಯೇ ಚ ತ್ವಾಮನುಜೀವಂತಿ ನಾಹಂ ತೇಷಾಂ ನ ತೇ ಮಮ ।
ಕೇವಲಾರ್ಥಪರಾಂ ಹಿ ತ್ವಾಂ ತ್ಯಕ್ತಧರ್ಮಾಂ ತ್ಯಜಾಮ್ಯಹಮ್ ॥೭॥

ನಿನ್ನನ್ನಾಶ್ರಯಿಸಿದವರಿಗೂ ಕೂಡ ನಾನು ಇನ್ನು ಸಂಬಂಧಿಯಲ್ಲ. ನನಗೆ ಅವರೂ ಸಂಬಂಧಿಗಳಲ್ಲ. ಕೇವಲ ಅರ್ಥಪರಳಾಗಿ ಧರ್ಮವನ್ನು ತ್ಯಜಿಸಿರುವ ನಿನ್ನನ್ನು ನಾನು ತ್ಯಜಿಸುತ್ತೇನೆ.

ಅಗೃಹ್ಣಾಂ ಯಚ್ಚ ತೇ ಪಾಣಿಮಗ್ನಿಂ ಪರ್ಯಣಯಂ ಚ ಯತ್ ।
ಅನುಜಾನಾಮಿ ತತ್ಸರ್ವಮಸ್ಮಿನ್ ಲೋಕೇ ಪರತ್ರ ಚ ॥೮॥

ನಾನು ನಿನ್ನ ಪಾಣಿಗ್ರಹಣ ಮಾಡಿದ್ದನ್ನು ಅಗ್ನಿಪ್ರದಕ್ಷಿಣೆ ಮಾಡಿಸಿದ್ದನ್ನೂ ಎಲ್ಲವನ್ನೂ ಈ ಲೋಕದಲ್ಲಿ ಮಾತ್ರವಲ್ಲದೆ ಪರಲೋಕದಲ್ಲಿಯೂ ತ್ಯಜಿಸುತ್ತೇನೆ.

ಭರತಶ್ಚೇತ್ ಪ್ರತೀತಃ ಸ್ಯಾದ್ರಾಜ್ಯಂ ಪ್ರಾಪ್ಯೇದಮವ್ಯಯಮ್ ।
ಯನ್ಮೇ ಸ ದದ್ಯಾತ್ ಪಿತ್ರರ್ಥಂ ಮಾಂ ಮಾ ತದ್ದತ್ತಮಾಗಮತ್ ॥೯॥

ಭರತನು ನಾಶರಹಿತವಾದ ಈ ರಾಜ್ಯವನ್ನು ಪಡೆದು ಸಂತುಷ್ಟನಾಗುವ ಪಕ್ಷದಲ್ಲಿ ಅವನು ನನ್ನ ಪ್ರೀತಿಗಾಗಿ ಪಿಂಡತರ್ಪಣ ಕೊಟ್ಟರೆ ಅವನು ಕೊಟ್ಟಿದ್ದು ಕೂಡ ಯಾವುದೂ ನನ್ನನ್ನು ಸೇರದಿರಲಿ.

ಅಥ ರೇಣುಸಮುದ್ಧ್ವಸ್ತಂ ತಮುತ್ಥಾಪ್ಯ ನರಾಧಿಪಮ್ ।
ನ್ಯವರ್ತತ ತದಾ ದೇವೀ ಕೌಸಲ್ಯಾ ಶೋಕಕರ್ಶಿತಾ ॥೧೦॥

ಬಳಿಕ ಬಿದ್ದು ದೂಳಿನಿಂದ ಆವೃತನಾಗಿದ್ದ ರಾಜನನ್ನು ಶೋಕದಿಂದ ಸೊರಗಿದ ಕೌಸಲ್ಯೆಯೇ ಹಿಡಿದೆತ್ತಿ ಅವನೊಂದಿಗೇ ಅಂತಃಪುರದ ಕಡೆಗೆ ಹೋದಳು.

ಹತ್ವೇವ ಬ್ರಾಹ್ಮಣಂ ಕಾಮಾತ್ ಸ್ಪೃಷ್ಟ್ವಾಗ್ನಿಮಿವ ಪಾಣಿನಾ ।
ಅನ್ವತಪ್ಯತ ಧರ್ಮಾತ್ಮಾ ಪುತ್ರಂ ಸಂಚಿಂತ್ಯ ತಾಪಸಮ್ ॥೧೧॥

ಸ್ವೇಚ್ಛೆಯಿಂದಲೇ ಬ್ರಹ್ಮಹತ್ಯೆ ಮಾಡಿದಂತೆ, ತಿಳಿದು ಬೆಂಕಿಯನ್ನು ಕೈಯಿಂದ ಮುಟ್ಟಿದಂತೆ, ಪುತ್ರರಾಮನನ್ನು ತಾಪಸನಂತೆ ತಾನೇ ಮಾಡಿದ್ದಕ್ಕೆ ಧರ್ಮಾತ್ಮನಾದ ದಶರಥ ಅದನ್ನು ಯೋಚಿಸಿದಷ್ಟೂ ಪರಿತಪಸಿದ.

ನಿವೃತ್ತೈ ರ್ವ ನಿವೃತ್ತೈ ರ್ವ ಸೀದತೋ ರಥವರ್ತ್ಮಸು ।
ರಾಜ್ಞೋ ನಾತಿಬಭೌ ರೂಪಂ ಗ್ರಸ್ತಸ್ಯಾಂಶುಮತೋ ಯಥಾ ॥೧೨॥

ಅಂತಃಪುರಕ್ಕೆ ಹೋಗುವಾಗ ರಥಮಾರ್ಗದ ಕಡೆಗೆ ತಿರುತಿರುಗಿ ನೋಡುತ್ತಾ ಸಂಕಟಪಟ್ಟ ರಾಜನ ಮುಖ ರಾಹುಗ್ರಸ್ತನಾದ ಸೂರ್ಯನಂತೆ ನಿಸ್ತೇಜವಾಯಿತು.

ವಿಲಲಾಪ ಚ ದುಃಖಾರ್ತಃ ಪ್ರಿಯಂ ಪುತ್ರಮನುಸ್ಮರನ್ ।
ನಗರಾಂತಮನುಪ್ರಾಪ್ತಂ ಬುದ್ಧ್ವಾ ಪುತ್ರಮಥಾಬ್ರವೀತ್ ॥೧೩॥

ಪ್ರಿಯಪುತ್ರನನ್ನು ಮತ್ತೂ ಮತ್ತೂ ನೆನೆಯುತ್ತ ದುಃಖಿತನಾಗಿ ರಾಜ ಗೋಳಾಡಿದ. ಪುತ್ರನು ನಗರದ ಎಲ್ಲೆಯನ್ನು ತಲುಪಿರಬಹುದೆಂದು ಭಾವಿಸಿ ನುಡಿದ.

ವಾಹನಾನಾಂ ಚ ಮುಖ್ಯಾನಾಂ ವಹತಾಂ ತಂ ಮಮಾತ್ಮಜಮ್ ।
ಪದಾನಿ ಪಥಿ ದೃಶ್ಯಂತೇ ಸ ಮಹಾತ್ಮಾ ನ ದೃಶ್ಯತೇ ॥೧೪॥

ನನ್ನ ಮಗನನ್ನು ಕೊಂಡೊಯ್ದ ಉತ್ತಮ ಅಶ್ವಗಳ ಹೆಜ್ಜೆ ಗುರುತುಗಳು ಮಾತ್ರ ದಾರಿಯಲ್ಲಿ ಕಾಣುತ್ತವೆ. ಮಹಾತ್ಮನಾದ ಆ ನನ್ನ ಮಗನು ಕಾಣುವುದಿಲ್ಲ.

ಯಃ ಸುಖೇಷ್ವುಪಧಾನೇಷು ಶೇತೇ ಚಂದನರೂಷಿತಃ ।
ವೀಜ್ಯಮಾನೋ ಮಹಾರ್ಹಾಭಿಃ ಸ್ತ್ರೀಭಿರ್ಮಮ ಸುತೋತ್ತಮಃ ॥೧೫॥

ನನ್ನ ಮಗನು ಚಂದನ ಲಿಪ್ತನಾಗಿ ಸುಖಕರವಾದ ಒರಗು ದಿಂಬಿಗೆ ಒರಗಿ, ಅಮೂಲ್ಯ ಆಭರಣ ಧರಿಸಿದ ಸ್ತ್ರೀಯರಿಂದ ಬೀಸಣಿಗೆಯಿಂದ ಬೀಸಿಕೊಳ್ಳು-ತ್ತಿದ್ದವನು.

ಸ ನೂನಂ ಕ್ವಚಿದೇವಾದ್ಯ ವೃಕ್ಷಮೂಲಮುಪಾಶ್ರಿತಃ ।
ಕಾಷ್ಠಂ ವಾ ಯದಿ ವಾಶ್ಮಾನಮುಪಧಾಯ ಶಯಿಷ್ಯತೇ ॥೧೬॥

ಅವನು ಈಗ ಎಲ್ಲಿಯೋ ಒಂದು ಮರದ ಬುಡದಲ್ಲಿ ಕುಳಿತು ಕಟ್ಟಿಗೆಯನ್ನೋ ಕಲ್ಲನ್ನೋ ಒರಗುದಿಂಬು ಮಾಡಿಕೊಂಡು ಒರಗುತ್ತಾನೆ.

ಉತ್ಥಾಸ್ಯತಿ ಚ ಮೇದಿನ್ಯಾಃ ಕೃಪಣಃ ಪಾಂಸುಗುಂಠಿತಃ ।
ವಿನಿಶ್ವಸನ್ ಪ್ರಸ್ರವಣಾತ್ ಕರೇಣೂನಾಮಿವರ್ಷಭಃ ॥೧೭॥

ದೂಳಿನಿಂದ ಆವೃತನಾಗಿದ್ದು ದೀನನಾಗಿ ನಿಟ್ಟುಸಿರುಬಿಡುತ್ತ ಪ್ರವಾಹದಿಂದ ಮದ್ದಾನೆ ಏಳುವಂತೆ, ನೆಲದಿಂದ ಮೇಲೇಳುತ್ತಾನೆ ನನ್ನ ಮಗ.

ದ್ರಕ್ಷ್ಯಂತಿ ನೂನಂ ಪುರುಷಾ ದೀರ್ಘಬಾಹುಂ ವನೇಚರಾಃ ।
ರಾಮಮುತ್ಥಾಯ ಗಚ್ಛಂತಂ ಲೋಕನಾಥಮನಾಥವತ್ ॥೧೮॥

ವನಚಾರಿಗಳಾದ ಮಾನವರು ದೀರ್ಘಬಾಹುವಾದ ಲೋಕನಾಥನಾದ ರಾಮನು ಅನಾಥನಂತೆ ಎದ್ದು ಸಂಚರಿಸುವುದನ್ನು ನಿಶ್ಚಯವಾಗಿ ನೋಡುತ್ತಾರೆ.

ಸಾ ನೂನಂ ಜನಕಸ್ಯೇಷ್ಟಾ ಸುತಾ ಸುಖಸದೋಚಿತಾ ।
ಕಂಟಕಾಕ್ರಮಣಕ್ಲಾಂತಾ ವನಮದ್ಯ ಗಮಿಷ್ಯತಿ ॥೧೯॥

ಜನಕರಾಜನ ಪ್ರಿಯಕುಮಾರಿಯಾದ ಸುಖಕ್ಕೇ ಸದಾ ತಕ್ಕವಳಾದ ಆ ಸೀತೆ ಈಗ ಮುಳ್ಳುಗಿಡಗಳ ಮೇಲೆ ಹೆಜ್ಜೆ ಇಟ್ಟು ಬಾಧೆಪಡುತ್ತ ಕಾಡಿನಲ್ಲಿ ಸಂಚರಿಸುತ್ತಾಳೆ.

ಅನಭಿಜ್ಞಾ ವನಾನಾಂ ಸಾ ನೂನಂ ಭಯಮುಪೈಷ್ಯತಿ ।
ಶ್ವಾಪದಾನರ್ದಿತಂ ಶ್ರುತ್ವಾ ಗಂಭೀರಂ ರೋಮಹರ್ಷಣಮ್ ॥೨೦॥

ಕಾಡನ್ನೇ ಕಂಡರಿಯದವಳು ಸೀತೆ ಕ್ರೂರಮೃಗಗಳ ಗಂಭೀರ ರೋಮಾಂಚಕರವಾದ ಗರ್ಜನೆಯನ್ನು ಕೇಳಿ ನಿಶ್ಚಯವಾಗಿ ಭಯಪಡುತ್ತಾಳೆ.

ಸಕಾಮಾ ಭವ ಕೈಕೇಯಿ ವಿಧವಾ ರಾಜ್ಯಮಾವಸ ।
ನ ಹಿ ತಂ ಪುರುಷವ್ಯಾಘ್ರಂ ವಿನಾ ಜೇವಿತುಮುತ್ಸಹೇ ॥೨೧॥

ಕೈಕೇಯಿ! ನಿನ್ನ ಆಸೆಯನ್ನು ತೀರಿಸಿಕೊಳ್ಳು. ವಿಧವೆಯಾಗಿ ರಾಜ್ಯವನ್ನು ಆಳು. ಏಕೆಂದರೆ ಪುರುಷೋತ್ತಮನಾದ ರಾಮನಿಲ್ಲದೆ ನಾನು ಬದುಕಿರಲಾರೆ.

ಇತ್ಯೇವಂ ವಿಲಪನ್ ರಾಜಾ ಜನೌಘೇನಾಭಿಸಂವೃತಃ ।
ಅಪಸ್ನಾತ ಇವಾರಿಷ್ಟಂ ಪ್ರವಿವೇಶ ಗೃಹೋತ್ತಮಮ್ ॥೨೨॥

ಹೀಗೆ ವಿಲಾಪಗೈಯುತ್ತ ಜನಸಮೂಹ ಪರಿವೃತನಾಗಿ 'ಅಪಸ್ನಾತ ಇವ' ಮರಣವಾರ್ತೆ ಕೇಳಿ ಸ್ನಾನ ಮಾಡಿದವನಂತೆ, ದುಃಖಮಯವಾದ ಉತ್ತಮವಾದ ಅರಮನೆಯನ್ನು ದಶರಥ ಪ್ರವೇಶಿಸಿದ.

ಶ್ರೀರಾಮನನ್ನು ನೋಡಿ ಹಿಂತಿರುಗಿ ಬಂದ ದಶರಥನಿಗೆ ಮೃತಸ್ನಾನ ದೃಷ್ಟಾಂತ ಕೊಡುವುದು ಅಮಂಗಳಕರ, ಅನುಚಿತ ಎಂದು ತಿಳಿಯಬಾರದು. ಅವನ ಪಾಲಿಗೆ ಇನ್ನು ರಾಮನಿಲ್ಲ. ಇದ್ದೂ ಇಲ್ಲದಂತೆಯೆ. ಆದರಿಂದ ಮೃತಸ್ನಾನ ಸಾದೃಶ್ಯವನ್ನು ಕವಿ ಹೇಳಿದ್ದಾನೆ.

ಶೂನ್ಯಚತ್ವರವೇಶ್ಮಾಂತಾಂ ಸಂವೃತಾಪಣವೇದಿಕಾಮ್ ।
ಕ್ಲಾಂತದುರ್ಬಲದುಃಖಾರ್ತಾಂ ನಾತ್ಯಾಕೀರ್ಣಮಹಾಪಥಾಮ್ ॥೨೩॥

ಅಯೋಧ್ಯೆಯಲ್ಲಿ ಚೌಕಗಳು ಮನೆಗಳ ಪ್ರದೇಶಗಳು ಜನ ಶೂನ್ಯವಾದುವು. ಮಾರುಕಟ್ಟೆಯ ವೇದಿಕೆಗಳಲ್ಲಿಯೂ ಯಾವುದೇ ಚಟುವಟಿಕೆಗಳಿಲ್ಲವಾದುವು. ಕೇವಲ ಬೇನೆಗಳಿಂದ ಕೂಡಿದ, ದುರ್ಬಲರಾದ, ದುಃಖಾರ್ತರಾದ ಜನರೇ ಎಲ್ಲೆಲ್ಲೂ ಕಂಡುಬಂದರು. ಸಶಕ್ತರೆಲ್ಲರೂ ರಾಮನ ಹಿಂದೆಯೇ ಹೋಗಿದ್ದರು. ಆದರಿಂದ ರಾಜಮಾರ್ಗದಲ್ಲಿ ಜನ ಸಂಚಾರ ಹೆಚ್ಚು ಇಲ್ಲದಂತಾಯಿತು.

ತಾಮವೇಕ್ಷ್ಯ ಪುರೀಂ ಸರ್ವಾಂ ರಾಮಮೇವಾನುಚಿಂತಯನ್ ।
ವಿಲಪನ್ ಪ್ರಾವಿಶದ್ರಾಜಾ ಗೃಹಂ ಸೂರ್ಯ ಇವಾಂಬುದಮ್ ॥೨೪॥

ಇಡಿ ಅಯೋಧ್ಯೆ ಈ ಸ್ಥಿತಿಯಲ್ಲಿರುವುದನ್ನು ಕಂಡು ರಾಮನನ್ನೇ ಚಿಂತಿಸುತ್ತ ಗೋಳಿಡುತ್ತ, ಮೋಡದೊಳಗೆ ಸೂರ್ಯ ಪ್ರವೇಶಿಸುವಂತೆ, ಅರಮನೆಯೊಳಗೆ ರಾಜ ಪ್ರವೇಶಿಸಿದ.

'ಮುಮುಕ್ಷುಣಾ ದಶರಥವತ್ ನ ವರ್ತಿತವ್ಯಂ' ಮುಮುಕ್ಷುವು ದಶರಥ ನಂತೆ ನಡೆದುಕೊಳ್ಳಬಾರದು. ರಾಮಾಭಿಷೇಕ ಪರಮಧರ್ಮ. ಹೆಂಡತಿಗೆ ಕೊಟ್ಟ ಮಾತನ್ನುಳಿಸುವುದು ಕ್ಷುದ್ರಧರ್ಮ. ದಶರಥ ಪರಮಧರ್ಮವನ್ನು ಬಿಟ್ಟುಕೊಟ್ಟು ಕ್ಷುದ್ರಧರ್ಮವನ್ನು ನಡೆಸಿದ್ದಾನೆ ಎಂದು ಗೋವಿಂದರಾಜೀಯದಲ್ಲಿ ಹೇಳಿದ್ದು ಯುಕ್ತವಲ್ಲ.

ರಾಜನು ತಾನು ಸಮರ್ಥವಾಗಿ ರಾಜ್ಯಭಾರವನ್ನು ಮಾಡುತ್ತಿರುವಾಗ ರಾಜ್ಯವನ್ನು ಮಗನಿಗೆ ಕೊಡುವುದಾಗಲಿ, ಮಗನು ಅದನ್ನು ಸ್ವೀಕರಿಸುವಾದಗಲಿ ಕ್ಷತ್ರಿಯನಿಗೆ ಅಧರ್ಮವೆನಿಸುತ್ತದೆ. ಆದಕ್ಕೆ ಅಭಿಷೇಕ ಧರ್ಮವೇ ಅಲ್ಲ. ಕ್ಷತ್ರಿಯ ದಾನ ಮಾಡಬೇಕು ಹೊರತು ಪ್ರತಿಗ್ರಹ ಮಾಡಬಾರದು. ಮತ್ತು ಪಿತೃಭೋಗ್ಯ-ವಾದ ಭೂಮಿ ಪುತ್ರನಿಗೆ ಮಾತೃಸಮಾನವಾದ್ದರಿಂದ ಪಿತ ಬದುಕಿದ್ದು ಭೋಗಿಸು-ತ್ತಿರುವ ಭೂಮಿ ರಾಮನಿಗೆ ಅಗ್ರಾಹ್ಯವೂ ಹೌದು. 'ನನ್ನನ್ನೂ ನಿಗ್ರಹಿಸಿ ರಾಜ್ಯವನ್ನು

ನೀನೆ ಆಳು' ಎಂದು ದಶರಥನು ಹೇಳುವುದು ಧರ್ಮವಲ್ಲ. ಆದ್ದರಿಂದ ಪಿತನ ಆ ಆಜ್ಞೆಯನ್ನು ಮಾತ್ರ ಉಪೇಕ್ಷಿಸಿದ್ದಾನೆ ರಾಮ. ಆದರೂ ದಶರಥ 'ಯುವರಾಜ' ಪದವಿನೆಪದಿಂದ ರಾಜ್ಯ ಕೊಡಲು ಬಯಸಿದ್ದ. ದೈವಸಂಕಲ್ಪದಿಂದ ಅದು ನೆರವೇರಲಿಲ್ಲ. ಅದು ಧರ್ಮವಾದರೂ ವಿಘ್ನದಿಂದ ನಿಂತುಹೋಯಿತು.

'ಪ್ರಾರಂಭಮಾತ್ರಂ ಇಚ್ಛಾ ವಾ ವಿಷ್ಣುಧರ್ಮೇ ನ ನಿಷ್ಫಲಾ'

ವೈಷ್ಣವಧರ್ಮ ಮಾಡಲು ಇಚ್ಛೆ ಮಾಡಿದರೂ ಅದು ನಿಷ್ಫಲವಾಗದು. ಅದರಿಂದ ದಶರಥ ಸ್ವರ್ಗಕ್ಕೆ ಹೋಗಿ ಅಲ್ಲಿಂದ ಶ್ರೀರಾಮನ ವನವಿಹಾರವನ್ನೂ ಕಂಡ. ರಾವಣ ವಧವನ್ನೂ ಕಂಡು ಕೆಳಗಿಳಿದು ಶ್ರೀರಾಮನನ್ನು ಅಭಿನಂದಿಸಿ 'ಮಹಾರಾಜನಾಗಿಯೇ ಅಭಿಷೇಕ ಮಾಡಿಸಿಕೊಳ್ಳು' ಎಂದ. ಧನ್ಯನಾದ.

ಮೋಕ್ಷಕ್ಕೇ ಭಾಗಿಯಾದ. 'ತಾರಿತೋऽಹಂ ತ್ವಯಾ ಪುತ್ರ' 'ಮಗು, ನೀನು ನನ್ನನ್ನು ಭವಸಾಗರದಿಂದ ದಾಟಿಸಿಬಿಟ್ಟೆ (ಯುದ್ಧಕಾಂಡ 119.17) ಎಂದ. ಸಂ.ರಾಮಾಯಣದಲ್ಲಿಯೂ ಕೂಡ 'ತ್ವಯಾ ಭವಾಬ್ಧಿ ಮತರಂ' ನಿನ್ನಿಂದ ನಾನು ಭವಾಬ್ಧಿಯನ್ನು ದಾಟಿದೆ (ಯುದ್ಧಕಾಂಡ 15.4) ಎಂದೇ ಹೇಳಿದೆ. ಅದರಿಂದ ಮುಮುಕ್ಷು ದಶರಥನಂತೆ ಭಗವದನುಗ್ರಹ ಪಾತ್ರನಾಗಬೇಕು.

ಮಹಾಹ್ರದಮಿವಾಕ್ಷೋಭ್ಯಂ ಸುಪರ್ಣೇನ ಹೃತೋರಗಮ್ ।
ರಾಮೇಣ ರಹಿತಂ ವೇಶ್ಮ ವೈದೇಹ್ಯಾ ಲಕ್ಷ್ಮಣೇನ ಚ ॥೨೫॥

ಗರುಡನು ಹಾವನ್ನು ಎತ್ತಿಕೊಂಡು ಹೋದಬಳಿಕ ಶಾಂತವಾಗಿರುವ ಕೊಳ ದಂತಿತ್ತು, ರಾಮಸೀತಾಲಕ್ಷ್ಮಣರಿಲ್ಲದ ಅರಮನೆ. ಅದನ್ನು ರಾಜ ಪ್ರವೇಶಿಸಿದ.

ಅಥ ಗದ್ಗದಶಬ್ದಸ್ತು ವಿಲಪನ್ ಮನುಜಾಧಿಪಃ ।
ಉವಾಚ ಮೃದು ಮಂದಾರ್ತಂ ವಚನಂ ದೀನಮಸ್ವರಮ್ ॥೨೬॥

ಬಳಿಕ ಗದ್ಗದ ಶಬ್ದದಿಂದ ಅಳುತ್ತ ರಾಜ ಮೃದುವಾದ ದೀನವಾದ ಸಣ್ಣ ಸ್ವರದಿಂದ ಮೆಲ್ಲನೆ ದುಃಖದಿಂದ ನುಡಿದ.

ಕೌಸಲ್ಯಾಯಾ ಗೃಹಂ ಶೀಘ್ರಂ ರಾಮಮಾತುರ್ನಯಂತು ಮಾಮ್ ।
ನ ಹ್ಯನ್ಯತ್ರ ಮಮಾಶ್ವಾಸೋ ಹೃದಯಸ್ಯ ಭವಿಷ್ಯತಿ ॥೨೭॥

ರಾಮಮಾತೆ ಕೌಸಲ್ಯೆಯ ಅಂತಃಪುರಕ್ಕೆ ಬೇಗನೆ ನನ್ನನ್ನು ಕರೆದೊಯ್ಯಿರಿ. ಬೇರೆ ಎಲ್ಲಿಯೂ ನನ್ನ ಹೃದಯಕ್ಕೆ ಸಮಾಧಾನ ಸಿಗಲಾರದು.

ಇತಿ ಬ್ರುವಂತಂ ರಾಜಾನಮನಯನ್ ದ್ವಾರದರ್ಶಿನಃ ।
ಕೌಸಲ್ಯಾಯಾ ಗೃಹಂ ತತ್ರ ನ್ಯವೇಶ್ಯತ ವಿನೀತವತ್ ॥೨೮॥

ಹೀಗೆ ರಾಜ ಹೇಳಿದಾಗ ದ್ವಾರದರ್ಶಿಗಳು ವಿನೀತರಾಗಿ ಅವನನ್ನು ಕೌಸಲ್ಯೆಯ ಅಂತಃಪುರಕ್ಕೆ ಕರೆದೊಯ್ದರು.

ತತಸ್ತತ್ರ ಪ್ರವಿಷ್ಟಸ್ಯ ಕೌಸಲ್ಯಾಯಾ ನಿವೇಶನಮ್ ।
ಅಧಿರುಹ್ಯಾಪಿ ಶಯನಂ ಬಭೂವ ಲುಲಿತಂ ಮನಃ ॥೨೯॥

ಕೌಸಲ್ಯೆಯ ಅಂತಃಪುರವನ್ನು ಪ್ರವೇಶಿಸಿ ಅಲ್ಲಿ ರಾಜನು ಮಂಚವನ್ನು ಏರಿದರೂ ಅವನ ಮನಸ್ಸು ಅಸ್ವಸ್ಥವಾಗಿಯೇ ಇತ್ತು.

ಪುತ್ರದ್ವಯವಿಹೀನಂ ಚ ಸ್ನುಷಯಾಪಿ ವಿವರ್ಜಿತಮ್ ।
ಅಪಶ್ಯದ್ಭವನಂ ರಾಜಾ ನಷ್ಟಚಂದ್ರಮಿವಾಂಬರಮ್ ॥೩೦॥

ಇಬ್ಬರು ಮಕ್ಕಳು ಇಲ್ಲದ ಸೊಸೆಯೂ ಇಲ್ಲದ ಅರಮನೆ ರಾಜನಿಗೆ ಚಂದ್ರನಿಲ್ಲದ ಆಕಾಶದಂತೆ ತೋರಿತು.

ತಚ್ಚ ದೃಷ್ಟ್ವಾ ಮಹಾರಾಜೋ ಭುಜಮುದ್ಯಮ್ಯ ವೀರ್ಯವಾನ್ ।
ಉಚ್ಚೈಃ ಸ್ವರೇಣ ಚುಕ್ರೋಶ ಹಾ ರಾಘವ ಜಹಾಸಿ ನೌ ॥೩೧॥

ಮಕ್ಕಳಿಲ್ಲದ ಸೊಸೆಯೂ ಇಲ್ಲದ ಅರಮನೆಯನ್ನು ಕಂಡು ವೀರ್ಯಶಾಲಿಯಾದ ಮಹಾರಾಜನು ತೋಳನ್ನೆತ್ತಿ ಹಾ ರಾಮ! ನಮ್ಮನ್ನು ಬಿಟ್ಟು ಹೊರಟು ಹೋಗುತ್ತಿರುವೆಯ? ಎಂದು ಉಚ್ಚಧ್ವನಿಯಿಂದ ಕೂಗಿಕೊಂಡ.

ಸುಖಿತಾ ಬತ ತಂ ಕಾಲಂ ಜೀವಿಷ್ಯಂತಿ ನರೋತ್ತಮಾಃ ।
ಪರಿಷ್ವಜಂತೋ ಯೇ ರಾಮಂ ದ್ರಕ್ಷ್ಯಂತಿ ಪುನರಾಗತಮ್ ॥೩೨॥

'ರಾಮನು ಬರುವ ಕಾಲದವರೆಗೂ ಜೀವಿಸುವ ಪುರುಷೋತ್ತಮರೇ ಸುಖಿಗಳು. ಏಕೆಂದರೆ ರಾಮನು ಪುನಃ ಬಂದಾಗ ಅವರು ಅವನನ್ನು ಆಲಿಂಗಿಸಿ ಕೊಂಡು ನೋಡುತ್ತಾರೆ' ಎಂದು.

ಅಥ ರಾತ್ರ್ಯಾಂ ಪ್ರಪನ್ನಾಯಾಂ ಕಾಲರಾತ್ರ್ಯಾಮಿವಾತ್ಮನಃ ।
ಅರ್ಧರಾತ್ರೇ ದಶರಥಃ ಕೌಸಲ್ಯಾಮಿದಮಬ್ರವೀತ್ ॥೩೩॥

ಬಳಿಕ ತನಗೆ ಪ್ರಳಯಕಾಲದ ರಾತ್ರಿಗೆ ಸಮಾನವಾಗುವ ರಾತ್ರಿ ಬಂದಾಗ ಅರ್ಧರಾತ್ರಿಯಲ್ಲಿ ದಶರಥ ಕೌಸಲ್ಯೆಗೆ ಹೇಳಿದ.

ರಾಮಂ ಮೇಽನುಗತಾ ದೃಷ್ಟಿರದ್ಯಾಪಿ ನ ನಿವರ್ತತೇ ।
ನ ತ್ವಾ ಪಶ್ಯಾಮಿ ಕೌಸಲ್ಯೇ ಸಾಧು ಮಾಂ ಪಾಣಿನಾ ಸ್ಪೃಶ ॥೩೪॥

ಕೌಸಲ್ಯೇ! ನನ್ನ ದೃಷ್ಟಿಶಕ್ತಿ, ರಾಮನು ಹೋಗುವಾಗ ಅವನ ಹಿಂದೆಯೇ ಹೊರಟು ಹೋಗಿದೆ. ಅದರಿಂದ ನಾನು ನಿನ್ನನ್ನು ಕಾಣಲಾರೆ. ನೀನೇ ನಿನ್ನ ಕೈಯಿಂದ ನನ್ನನ್ನು ಚೆನ್ನಾಗಿ ಸ್ಪರ್ಶಿಸು.

ತಂ ರಾಮಮೇವಾನುವಿಚಿಂತಯಂತಂ
ಸಮೀಕ್ಷ್ಯ ದೇವೀ ಶಯನೇ ನರೇಂದ್ರಮ್ ।
ಉಪೋಪವಿಶ್ಯಾಧಿಕಮಾರ್ತರೂಪಾ
ವಿನಿಶ್ವಸಂತೀ ವಿಲಲಾಪ ಕೃಚ್ಛ್ರಮ್ ॥೩೫॥

ಹೀಗೆ ರಾಮನನ್ನೇ ಚಿಂತಿಸುತ್ತಿದ್ದ ರಾಜನನ್ನು ನೋಡಿ ಅಧಿಕವಾಗಿ ದುಃಖಿಸುತ್ತಿದ್ದ ದೇವಿ ಮಂಚದಲ್ಲಿ ಅವನ ಬಳಿ ಕುಳಿತು ನಿಟ್ಟುಸಿರಿಡುತ್ತ ದುಃಖದಿಂದ ವಿಲಾಪಗೈದಳು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ನಲವತ್ತೆರಡನೇ ಸರ್ಗ ಮುಗಿಯಿತು.

❖

ತ್ರಿಚತ್ವಾರಿಂಶಃ ಸರ್ಗಃ

ಸರ್ಗ – 43

ಕೌಸಲ್ಯೆ ದಶರಥನೊಡನೆ ತನ್ನ ದುಃಖವನ್ನು ತೋಡಿಕೊಳ್ಳುವುದು.

ತತಃ ಸಮೀಕ್ಷ್ಯ ಶಯನೇ ಸನ್ನಂ ಶೋಕೇನ ಪಾರ್ಥಿವಮ್ ।
ಕೌಸಲ್ಯಾ ಪುತ್ರಶೋಕಾರ್ತಾ ತಮುವಾಚ ಮಹೀಪತಿಮ್ ॥೧॥

ಶೋಕದಿಂದ ಮಂಚದಲ್ಲಿ ಕುಸಿದು ಬಿದ್ದ ರಾಜನನ್ನು ಕಂಡು ಪುತ್ರಶೋಕಾರ್ತಳಾದ ಕೌಸಲ್ಯೆ ನುಡಿದಳು.

ರಾಘವೇ ನರಶಾರ್ದೂಲೇ ವಿಷಂ ಮುಕ್ತ್ವಾ ವಿಜಿಹ್ಮಗಾ ।
ವಿಚರಿಷ್ಯತಿ ಕೈಕೇಯೀ ನಿರ್ಮುಕ್ತೇವ ಹಿ ಪನ್ನಗೀ ॥೨॥

ಹೆಣ್ಣು ಹಾವಿನಂಥ ವಕ್ರಗತಿಯುಳ್ಳ ಕೈಕೇಯಿ ಪುರುಷೋತ್ತಮನಾದ ರಾಮನಲ್ಲಿ ವಿಷವನ್ನು ಪ್ರಯೋಗಿಸಿ ಇನ್ನುಮುಂದೆ ಪೊರೆಬಿಟ್ಟ ಹಾವಿನಂತೆ ಓಡಾಡುವಳು.

ವಿವಾಸ್ಯ ರಾಮಂ ಸುಭಗಾ ಲಬ್ಧಕಾಮಾ ಸಮಾಹಿತಾ ।
ತ್ರಾಸಯಿಷ್ಯತಿ ಮಾಂ ಭೂಯೋ ದುಷ್ಟಾಹಿರಿವ ವೇಶ್ಮನಿ ॥೩॥

ಅದೃಷ್ಟವಂತಳಾದ ಕೈಕೇಯಿ ಏಕಾಗ್ರಚಿತ್ತದಿಂದ ರಾಮನನ್ನು ಕಾಡಿಗೆ ಅಟ್ಟಿ ತನ್ನಿಷ್ಟವನ್ನು ಪಡೆದುಕೊಂಡಿದ್ದಾಳೆ. ಮನೆಯಲ್ಲಿ ಸೇರಿಕೊಂಡ ದುಷ್ಟ ಸರ್ಪದಂತೆ ಅವಳು ನನ್ನನ್ನು ಇನ್ನು ಮುಂದೆ ಇನ್ನೂ ಹೆಚ್ಚು ಭಯಪಡಿಸಲಿದ್ದಾಳೆ.

ಅಥಾಸ್ಮಿನ್ನಗರೇ ರಾಮಶ್ಚರನ್ ಭೈಕ್ಷಂ ಗೃಹೇ ವಸೇತ್ ।
ಕಾಮಕಾರೋ ವರಂ ದಾತುಮಪಿ ದಾಸಂ ಮಮಾತ್ಮಜಮ್ ॥೪॥

ರಾಮನನ್ನು ಕಾಡಿಗೆ ಏಕೆ ಅಟ್ಟಬೇಕಿತ್ತು? ಭರತನಿಗೇ ರಾಜ್ಯ ಕೊಡುವುದು ಅವಶ್ಯಕವಿರುತ್ತಿದ್ದರೆ ಹಾಗೇ ಕೊಟ್ಟು ನನ್ನ ಮಗನನ್ನು ಅವನಿಗೆ ಸೇವಕನಾಗಿ ಕೊಟ್ಟುಬಿಟ್ಟಿದ್ದರೂ ಅದು ನನಗೆ ಇಷ್ಟವಾಗುತ್ತಿತ್ತು. ವನವಾಸಕ್ಕಿಂತ ಅದು ಮೇಲು. ರಾಜ್ಯವಿಲ್ಲದಿದ್ದರೂ ರಾಮ ಈ ನಗರದಲ್ಲಿ ಭಿಕ್ಷೆ ಎತ್ತುತ್ತ ಮನೆಯಲ್ಲಿರುತ್ತಿದ್ದ.

ಪಾತಯಿತ್ವಾ ತು ಕೈಕೇಯ್ಯಾ ರಾಮಂ ಸ್ಥಾನಾದ್ಯಥೇಷ್ಟತಃ ।
ಪ್ರವಿದ್ಧೋ ರಕ್ಷಸಾಂ ಭಾಗಃ ಪರ್ವಣೀವಾಹಿತಾಗ್ನಿನಾ ॥೫॥

ಆಹಿತಾಗ್ನಿಯು ಪರ್ವಕಾಲದಲ್ಲಿ ದೇವತೆಗಳಿಗೆ ಕೊಡಬೇಕಾದ ಆಹುತಿಯನ್ನು ರಾಕ್ಷಸರಿಗೆ ಕೊಡುವಂತೆ, ಕೈಕೇಯಿ ಮನಬಂದಂತೆ ರಾಮನನ್ನು ಸ್ಥಾನದಿಂದ ಭ್ರಷ್ಟನನ್ನಾಗಿಸಿ ಅಟ್ಟಿ ಕಾಡಿನಲ್ಲಿ ರಾಕ್ಷಸರ ಬಾಯಿಗೆ ಆಹುತಿಯಾಗಿ ಹಾಕಿದ್ದಾಳೆ.

ಗಜರಾಜಗತಿರ್ವೀರೋ ಮಹಾಬಾಹುರ್ಧನುರ್ಧರಃ ।
ವನಮಾವಿಶತೇ ನೂನಂ ಸಭಾರ್ಯಃ ಸಹಲಕ್ಷ್ಮಣಃ ॥೬॥

ಪುರುಷೋತ್ತಮನಾದ, ಮದ್ದಾನೆಯಂತೆ ಹೆಜ್ಜೆ ಇಡುವ ವೀರ ಮಹಾಬಾಹು ಧನುರ್ಧಾರಿಯಾದ ರಾಮನು ಸೀತೆಯೊಂದಿಗೆ ಲಕ್ಷ್ಮಣನೊಂದಿಗೆ ಈಗ ನಿಶ್ಚಯವಾಗಿ ಕಾಡಿನಲ್ಲಿ ವಾಸ ಮಾಡುತ್ತಾನೆ.

ವನೇ ತ್ವದೃಷ್ಟದುಃಖಾನಾಂ ಕೈಕೇಯ್ಯನುಮತೇ ತ್ವಯಾ ।
ತ್ಯಕ್ತಾನಾಂ ವನವಾಸಾಯ ಕಾ ನ್ವವಸ್ಥಾ ಭವಿಷ್ಯತಿ ॥೭॥

ಕಾಡಿನಲ್ಲಿ ಇಂಥ ದುಃಖವಿದೆ ಎಂಬುದನ್ನು ಕಂಡರಿಯದ ಮಕ್ಕಳನ್ನು ನೀನು ಕೈಕೇಯಿಯ ಇಷ್ಟದಂತೆ ವನವಾಸಕ್ಕೆ ಕಳಿಸಿಬಿಟ್ಟೆ. ಅಲ್ಲಿ ಅವರ ಅವಸ್ಥೆ ಏನಾದೀತು?

ತೇ ರತ್ನಹೀನಾಸ್ತರುಣಾಃ ಫಲಕಾಲೇ ವಿವಾಸಿತಾಃ ।
ಕಥಂ ವತ್ಸ್ಯಂತಿ ಕೃಪಣಾಃ ಫಲಮೂಲೈಃ ಕೃತಾಶನಾಃ ॥೮॥

ಇನ್ನೂ ಎಳೆ ವಯಸಿನವರು. ಶ್ರೇಷ್ಠ ವಸ್ತುಗಳಿಲ್ಲದವರು. ಯೌವನದ ಫಲ ಉಣಬೇಕಾಗಿದ್ದ ಕಾಲದಲ್ಲಿ ಕಾಡುಪಾಲಾದರು. ದುಃಖಿತರಾಗಿ ಫಲಮೂಲ-ಗಳನ್ನುಂಡು ಹೇಗೆ ಜೀವಿಸುವರು?

ಅಪೀದಾನೀಂ ಸ ಕಾಲಃ ಸ್ಯಾನ್ಮಮ ಶೋಕಕ್ಷಯಃ ಶಿವಃ ।
ಸಭಾರ್ಯಂ ಯತ್ ಸಹ ಭ್ರಾತ್ರಾ ಪಶ್ಯೇಯಮಿಹ ರಾಘವಮ್ ॥೯॥

ಸೀತೆಯೊಂದಿಗೆ ಮತ್ತು ಲಕ್ಷ್ಮಣನೊಂದಿಗೆ ರಾಮನನ್ನು ಇಲ್ಲಿ ನಾನು ನೋಡ-ಬಹುದಾದ ಆ ಕಾಲ ಈಗ ಬಂದೀತೆ? ಸುಖಕಾರಿಯಾದ ಶೋಕದ ಅಂತ್ಯ ಈಗಲೇ ನನಗೆ ದೊರಕೀತೆ?

ಸುಪ್ತೌ ವ್ವೋಪಸ್ಥಿತೌ ವೀರೌ ಕದಾಯೋಧ್ಯಾಂ ಗಮಿಷ್ಯತಃ ॥೧೦॥

ಮಲಗಿ ಎದ್ದು ಬಂದಂತೆ ಆ ವೀರರು ಎಂದು ಅಯೋಧ್ಯೆಗೆ ಹಿಂತಿರುಗಿ ಬಂದು ಸೇರುವರು?

ಯಶಸ್ವಿನೀ ಹೃಷ್ಟಜನಾ ಸೂಚ್ಛ್ರಿತಧ್ವಜಮಾಲಿನೀ ।
ಕದಾ ಪ್ರೇಕ್ಷ್ಯ ನರವ್ಯಾಘ್ರಾವರಣ್ಯಾತ್ ಪುನರಾಗತೌ ।
ನಂದಿಷ್ಯತಿ ಪುರೀ ಹೃಷ್ಟಾ ಸಮುದ್ರ ಇವ ಪರ್ವಣಿ ॥೧೧॥

ಪುರುಷೋತ್ತಮರು ಅರಣ್ಯದಿಂದ ಹಿಂತಿರುಗಿ ಪುನಃ ಬಂದಾಗ ಇಡೀ ಅಯೋಧ್ಯೆಯ ಜನರು, ಅವರನ್ನು ನೋಡಿ ಹರ್ಷದಿಂದ ಧ್ವಜಪತಾಕೆಗಳ ಸಮೂಹಗಳನ್ನೆತ್ತಿ ಹಿಡಿದು ಪರ್ವಕಾಲದಲ್ಲಿ ಸಮುದ್ರಉಕ್ಕುವಂತೆ ಉಕ್ಕುವ ಆನಂದದಿಂದ ಅವರನ್ನು ಅಭಿನಂದಿಸುವಲ್ಲಿ ಎಂದು ಯಶಸ್ವಿಗಳಾದಾರು?

ಕದಾಯೋಧ್ಯಾಂ ಮಹಾಬಾಹುಃ ಪುರೀಂ ವೀರಃ ಪ್ರವೇಕ್ಷ್ಯತಿ ।
ಪುರಸ್ಕೃತ್ಯ ರಥೇ ಸೀತಾಂ ವೃಷಭೋ ಗೋವಧೂಮಿವ ॥೧೨॥

ಎತ್ತು ಹಸುಗಳನ್ನು ಮುಂದೆ ಮಾಡಿಕೊಂಡು ಬರುವಂತೆ ರಥದಲ್ಲಿ ಸೀತೆಯನ್ನು ಮುಂದೆ ಇರಿಸಿಕೊಂಡು ವೀರ ಮಹಾಬಾಹು ರಾಮ ಎಂದು ಅಯೋಧ್ಯೆಯನ್ನು ಪ್ರವೇಶಿಸುವನು?

ಕದಾ ಪ್ರಾಣಿಸಹಸ್ರಾಣಿ ರಾಜಮಾರ್ಗೇ ಮಮಾತ್ಮಜೌ ।
ಲಾಜೈರವಕಿರಿಷ್ಯಂತಿ ಪ್ರವಿಶಂತಾವರಿಂದಮೌ ॥೧೩॥

ಅಯೋಧ್ಯೆಯನ್ನು ಪ್ರವೇಶಿಸುವ ಶತ್ರುನಾಶಕರಾದ ನನ್ನ ಮಕ್ಕಳ ಮೇಲೆ ಎಂದು ರಾಜಮಾರ್ಗದಲ್ಲಿ ಸಾವಿರಸಾವಿರ ಜನರು ಸೇರಿ ಅರಳನ್ನು ಚೆಲ್ಲುವರು?

ಪ್ರವಿಶಂತೌ ಕದಾಯೋಧ್ಯಾಂ ದ್ರಕ್ಷ್ಯಾಮಿ ಶುಭಕುಂಡಲೌ ।
ಉದಗ್ರಾಯುಧನಿಸ್ತ್ರಿಂಶೌ ಸಶೃಂಗಾವಿವ ಪರ್ವತೌ ॥೧೪॥

ಶ್ರೇಷ್ಠವಾದ ಬಿಲ್ಲು ಖಡ್ಗಗಳನ್ನು ಧರಿಸಿ ಶಿಖರಯುಕ್ತವಾದ ಬೆಟ್ಟಗಳಂತೆ ಶೋಭಿಸುತ್ತ , ಶುಭ ಕುಂಡಲಧಾರಿಗಳಾಗಿ ರಾಮಲಕ್ಷ್ಮಣರು ಅಯೋಧ್ಯೆಯೊಳಗೆ ಪ್ರವೇಶಿಸುವುದನ್ನು ನಾನೆಂದು ಕಂಡೇನು?

ಕದಾ ಸುಮನಸಃ ಕನ್ಯಾ ದ್ವಿಜಾತೀನಾಂ ಫಲಾನಿ ಚ ।
ಪ್ರದಿಶಂತ್ಯಃ ಪುರೀಂ ಹೃಷ್ಟಾಃ ಕರಿಷ್ಯಂತಿ ಪ್ರದಕ್ಷಿಣಮ್ ॥೧೫॥

ರಾಮ ಬಂದನೆಂದು, ದ್ವಿಜರಿಗೆ ಹೂ ಹಣ್ಣುಗಳನ್ನು ನೀಡುತ್ತ ಹರ್ಷದಿಂದ ಎಂದು ಕನ್ಯೆಯರು ನಗರ ಪ್ರದಕ್ಷಿಣೆ ಮಾಡುವರು?

ಕದಾ ಪರಿಣತೋ ಬುದ್ಧ್ಯಾ ವಯಸಾ ಚಾಮರಪ್ರಭಃ ।
ಅಭ್ಯುಪೈಷ್ಯತಿ ಧರ್ಮಜ್ಞಸ್ತ್ರಿವರ್ಷ ಇವ ಲಾಲಯನ್ ॥೧೬॥

ಬುದ್ಧಿಯಲ್ಲಿಯೂ ವಯಸ್ಸಿನಲ್ಲಿಯೂ ಪ್ರೌಢನಾಗಿ ದೇವನಂತೆ ಹೊಳೆಯುತ್ತ ಧರ್ಮಜ್ಞನಾದ ರಾಮನು ಮೂರು ವರ್ಷದ ಶಿಶುವಿನಂತೆ ತಾಯಿಗೆ ಮುದ ನೀಡುತ್ತ ಎಂದು ಬರುವನೋ?

ನಿಸ್ಸಂಶಯಂ ಮಯಾ ಮನ್ಯೇ ಪುರಾ ವೀರ ಕದರ್ಯಯಾ ।
ಪಾತುಕಾಮೇಷು ವತ್ಸೇಷು ಮಾತೃಣಾಂ ಶಾತಿತಾಃ ಸ್ತನಾಃ ॥೧೭॥

ವೀರನೆ, ನಾನು ಹಿಂದಿನ ಜನ್ಮದಲ್ಲಿ ಕ್ಷುದ್ರ ಹೆಂಗಸಾಗಿ, ಕರುಗಳು ತಾಯಿಯ ಹಾಲುಣಲು ಬಂದಾಗ ತಾಯಂದಿರ ಕೆಚ್ಚಲುಗಳನ್ನು ಕತ್ತರಿಸಿರುತ್ತೇನೆ. ಇದರಲ್ಲಿ ಸಂಶಯವಿಲ್ಲವೆಂದು ಭಾವಿಸುತ್ತೇನೆ.

ಸಾಹಂ ಗೌರಿವ ಸಿಂಹೇನ ವಿವತ್ಸಾ ವತ್ಸಲಾ ಕೃತಾ ।
ಕೈಕೇಯ್ಯಾ ಪುರುಷವ್ಯಾಘ್ರ ಬಾಲವತ್ಸೇವ ಗೌರ್ಬಲಾತ್ ॥೧೮॥

ವೀರನೆ, ಸಿಂಹವು ಹಸುವಿನೊಡನಿರುವ ಕರುವನ್ನು ತಿಂದು ವತ್ಸಲೆಯಾದ ಹಸುವಿಗೆ ಕರುವಿಲ್ಲದಂತೆ ಮಾಡುವ ಹಾಗೆ, ನೀನೂ ನನಗೆ ನನ್ನ ರಾಮನಿಲ್ಲದಂತೆ ಮಾಡಿರುವೆ. ಕೈಕೇಯಿಯೂ ಹಾಲಿನಾಸೆಯಿಂದ ಕರುವನ್ನು ಹಸುವಿನಿಂದ ಬಲಾತ್ಕಾರವಾಗಿ ಬೇರ್ಪಡಿಸುವಂತೆ ರಾಮನನ್ನು ನನ್ನಿಂದ ಬೇರ್ಪಡಿಸಿದಳು.

ನ ಹಿ ತಾವದ್ಗುಣೈರ್ಜುಷ್ಟಂ ಸರ್ವಶಾಸ್ತ್ರವಿಶಾರದಮ್ ।
ಏಕಪುತ್ರಾ ವಿನಾ ಪುತ್ರಮಹಂ ಜೀವಿತುಮುತ್ಸಹೇ ॥೧೯॥

ಅಷ್ಟು ಗುಣಗಳಿಂದ ಪೂರ್ಣನಾದ ಸರ್ವಶಾಸ್ತ್ರವಿಶಾರದನಾದ ನನ್ನ ಪುತ್ರನಿಲ್ಲದೆ ಏಕಮಾತ್ರ ಪುತ್ರಳಾದ ನಾನು ಜೀವಿಸಲಾರೆ.

ನ ಹಿ ಮೇ ಜೀವಿತೇ ಕಿಂಚಿತ್ ಸಾಮರ್ಥ್ಯಮಿಹ ಕಲ್ಪ್ಯತೇ ।
ಅಪಶ್ಯಂತ್ಯಾಃ ಪ್ರಿಯಂ ಪುತ್ರಂ ಮಹಾಬಾಹುಂ ಮಹಾಬಲಮ್ ॥೨೦॥

ಮಹಾಬಾಹು ಮಹಾಬಲನಾದ ಪ್ರಿಯಪುತ್ರನನ್ನು ಕಾಣದೆ ಬದುಕಿರುವ ಸಾಮರ್ಥ್ಯ ನನಗೆ ಒಂದಿಷ್ಟೂ ಇಲ್ಲ.

ಅಯಂ ಹಿ ಮಾಂ ದೀಪಯತೇ ಸಮುತ್ಥಿತ-
ಸ್ತನೂಜಶೋಕಪ್ರಭವೋ ಹುತಾಶನಃ ।

ಮಹೀಮಿಮಾಂ ರಶ್ಮಿಭಿರುದ್ಧತಪ್ರಭೋ
ಯಥಾ ನಿಧಾಘೇ ಭಗವಾನ್ ದಿವಾಕರಃ ॥೨೧॥

ಬೇಸಗೆಯಲ್ಲಿ ಭಗವಾನ್ ಸೂರ್ಯನು ಅತಿತೀಕ್ಷ್ಣವಾದ ಕಿರಣಗಳನ್ನು ಬೀರಿ ಈ ಭೂಮಿಯನ್ನು ಸುಡುವಂತೆ ಪುತ್ರಶೋಕದಿಂದ ಉಂಟಾಗಿರುವ ಅಗ್ನಿ ಧಗಧಗಿಸಿ ನನ್ನನ್ನು ಸುಡುತ್ತಿದೆ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ನಲವತ್ತಮೂರನೇ ಸರ್ಗ ಮುಗಿಯಿತು.

❖

ಚತುಶ್ಚತ್ವಾರಿಂಶಃ ಸರ್ಗಃ

ಸರ್ಗ – 44

ಸುಮಿತ್ರೆ ಕೌಸಲ್ಯೆಗೆ ಸಮಾಧಾನ ಹೇಳುವುದು.

ವಿಲಪಂತೀಂ ತಥಾ ತಾಂ ತು ಕೌಸಲ್ಯಾಂ ಪ್ರಮದೋತ್ತಮಾಮ್ ।
ಇದಂ ಧರ್ಮೇ ಸ್ಥಿತಾ ಧರ್ಮ್ಯಂ ಸುಮಿತ್ರಾ ವಾಕ್ಯಮಬ್ರವೀತ್ ॥೧॥

ಉತ್ತಮನಾರಿಯಾದ ಕೌಸಲ್ಯೆ ಹೀಗೆ ಗೋಳಿಡುವಾಗ ಧರ್ಮನಿಷ್ಠಳಾದ ಸುಮಿತ್ರೆ ಧರ್ಮಸಂಮತವಾಗಿ ಹೀಗೆ ನುಡಿದಳು.

ತವಾರ್ಯೇ ಸದ್ಗುಣೈರ್ಯುಕ್ತಃ ಪುತ್ರಃ ಸ ಪುರುಷೋತ್ತಮಃ ।
ಕಿಂ ತೇ ವಿಲಪಿತೇನೈವಂ ಕೃಪಣಂ ರುದಿತೇನ ವಾ ॥೨॥

ಆರ್ಯೇ, ಪುತ್ರನಾದ ಆ ಪುರುಷೋತ್ತಮ ರಾಮನು ಸ್ವತಃ ಆನಂದಾದಿ ಸದ್ಗುಣಯುಕ್ತನಾಗಿರುವನು. ಹೀಗೆ ಗೋಳಿಟ್ಟರೇನು ಫಲ? ದೈನ್ಯದಿಂದ ಅತ್ತರೇನು ಫಲ?

ಯಸ್ತವಾರ್ಯೇ ಗತಃ ಪುತ್ರಸ್ಯಕ್ತ್ವಾ ರಾಜ್ಯಂ ಮಹಾಬಲಃ ।
ಸಾಧು ಕುರ್ವನ್ಮಹಾತ್ಮಾನಂ ಪಿತರಂ ಸತ್ಯವಾದಿನಮ್ ॥೩॥

ಶಿಷ್ಟೈರಾಚರಿತೇ ಸಮ್ಯಕ್ ಶಶ್ವತ್ ಪ್ರೇತ್ಯಫಲೋದಯೇ ।
ರಾಮೋ ಧರ್ಮೇ ಸ್ಥಿತಃ ಶ್ರೇಷ್ಠೋ ನ ಸ ಶೋಚ್ಯಃ ಕದಾಚನ ॥೪॥

ಮಹಾತ್ಮನಾದ ತಂದೆಯನ್ನು ಚೆನ್ನಾಗಿ ಸತ್ಯವಾದಿಯನ್ನಾಗಿ ಮಾಡಲು ರಾಜ್ಯವನ್ನು ತೊರೆದು ಹೋಗಿರುವ ಮಹಾಬಲನಾದ ಶ್ರೇಷ್ಠನಾದ ನಿನ್ನ ಪುತ್ರ ರಾಮನು ಶಿಷ್ಟರು ಆಚರಿಸುವ, ನಿತ್ಯವಾದ ಆಮುಷ್ಮಿಕ ಫಲಕ್ಕೆ ಸಾಧನವಾದ ಧರ್ಮದಲ್ಲಿ ಸ್ಥಿರವಾಗಿ ನಿಂತವನು. ಅವನ ವಿಷಯದಲ್ಲಿ ಎಂದಿಗೂ ಶೋಕಿಸಬಾರದು.

ವರ್ತತೇ ಚೋತ್ತಮಾಂ ವೃತ್ತಿಂ ಲಕ್ಷ್ಮಣೋऽಸ್ಮಿನ್ ಸದಾನಘಃ ।
ದಯಾವಾನ್ ಸರ್ವಭೂತೇಷು ಲಾಭಸ್ತಸ್ಯ ಮಹಾತ್ಮನಃ ॥೫॥

ಎಲ್ಲ ಪ್ರಾಣಿಗಳಲ್ಲಿಯೂ ದಯಾಳುವಾಗಿರುವ ನಿಷ್ಪಾಪನಾದ ಲಕ್ಷ್ಮಣನು ರಾಮನ ವಿಷಯದಲ್ಲಿ ಉತ್ತಮವಾದ ವರ್ತನೆಯನ್ನೇ ಸೇವೆಯನ್ನೇ ಮಾಡುತ್ತಾನೆ. ಇದರಿಂದ ಮಹಾತ್ಮನಾದ ರಾಮನಿಗೆ ಸುಖವೇ ಹೊರತು ದುಃಖವಿಲ್ಲ.

ಅರಣ್ಯವಾಸೇ ಯುದ್ದುಃಖಂ ಜಾನತೀ ವೈ ಸುಖೋಚಿತಾ ।
ಅನುಗಚ್ಛತಿ ವೈದೇಹೀ ಧರ್ಮಾತ್ಮಾನಂ ತವಾತ್ಮಜಮ್ ॥೬॥

ಸುಖಪಡಲು ಯೋಗ್ಯಳಾದ, ವನವಾಸದಲ್ಲಿರುವ ದುಃಖವನ್ನು ಬಲ್ಲ ಸೀತೆಯು ಸೇವೆ ಮಾಡುವುದಕ್ಕಾಗಿ ಧರ್ಮಾತ್ಮನಾದ ನಿನ್ನ ಮಗನನ್ನು ಹಿಂಬಾಲಿಸಿ ಹೋಗುತ್ತಿದ್ದಾಳೆ. ಅದರಿಂದಲೂ ರಾಮನಿಗೆ ಸುಖವೇ, ದುಃಖವಿಲ್ಲ.

ಕೀರ್ತಿಭೂತಾಂ ಪತಾಕಾಂ ಯೋ ಲೋಕೇ ಭ್ರಾಮಯತಿ ಪ್ರಭುಃ ।
ದಮಸತ್ಯವ್ರತಧನಃ ಕಿಂ ನ ಪ್ರಾಪ್ತಸ್ತವಾತ್ಮಜಃ ॥೭॥

ದಮ ಸತ್ಯವ್ರತನಿಷ್ಠನಾದ ಪ್ರಭು ರಾಮನು ಕೀರ್ತಿಪತಾಕೆಯನ್ನು ಲೋಕದಲ್ಲಿ ಎಲ್ಲೆಡೆ ಹಾರಿಸುತ್ತಿದ್ದಾನೆ ಎಂದಮೇಲೆ ಅವನಿಗೆ ಏನು ಸುಖ ಕಡಿಮೆಯಾಗಿರುತ್ತದೆ.

ಪುಣ್ಯಕರ್ಮಿಗಳಿಗೆ ಎಷ್ಟುಕಾಲ ಕೀರ್ತಿ ಲೋಕದಲ್ಲಿ ಹರಡಿರುತ್ತದೋ ಅಷ್ಟುಕಾಲ ಸ್ವರ್ಗಸುಖ. ಅದರಿಂದ ರಾಮ ಕೀರ್ತಿಶಾಲಿಯಾದ್ದರಿಂದ ಎಲ್ಲ ಸುಖ ಅನಾಯಾಸವಾಗಿ ಬರುತ್ತದೆ.

ವ್ಯಕ್ತಂ ರಾಮಸ್ಯ ವಿಜ್ಞಾಯ ಶೌಚಂ ಮಾಹಾತ್ಮ್ಯಮುತ್ತಮಮ್ ।
ನ ಗಾತ್ರಮಂಶುಭಿಃ ಸೂರ್ಯಃ ಸಂತಾಪಯಿತುಮರ್ಹತಿ ॥೮॥

ರಾಮನಲ್ಲಿ ಶೌಚವೂ ಉತ್ತಮವಾದ ಮಾಹಾತ್ಮ್ಯವೂ ಇರುವುದರಿಂದ ಸೂರ್ಯನು ಕಿರಣಗಳಿಂದ ಅವನಿಗೆ ತಾಪ ಉಂಟುಮಾಡುವುದಿಲ್ಲ.

ಅಶುಚಿಯಾಗಿದ್ದು ದುರ್ಬಲನಾದ ವ್ಯಕ್ತಿಗೆ ಎಲ್ಲ ತಾಪತ್ರಯಗಳು ಬರುತ್ತವೆ. 'ಪವಿತ್ರಾಣಾಂ ಪವಿತ್ರಂ' ಎಂಬಂತೆ ಅತ್ಯಂತ ಶುಚಿ ಹಾಗೂ ''ಭೀಷಾಸ್ಮಾದ್ ವಾತಃ ಪವತೇ' ಎಂಬಂತೆ ಮೂಲೋಕವನ್ನು ಆಳುವ ಮಹಾಮಾಹಾತ್ಮ್ಯಗಳುಳ್ಳ ರಾಮನಿಗೆ ಒಬ್ಬ ಸೂರ್ಯನು ಕಿರಣಗಳಿಂದ ತಾಪ ನೀಡಬಲ್ಲನೆ?

ಶಿವಃ ಸರ್ವೇಷು ಕಾಲೇಷು ಕಾನನೇಭ್ಯೋ ವಿನಿಃಸೃತಃ ।
ರಾಘವಂ ಯುಕ್ತಶೀತೋಷ್ಣಃ ಸೇವಿಷ್ಯತಿ ಸುಖೋऽನಿಲಃ ॥೯॥

ಕಾಡಿನ ಮರಗಳಿಂದ ಬೀಸಿ ಬರುವ ಸುಖಕರನಾದ ವಾಯು ಸಮಶೀತೋಷ್ಣನಾಗಿ, ಮಂಗಳಕರನಾಗಿ ರಾಮನನ್ನು ಎಲ್ಲ ಕಾಲಗಳಲ್ಲಿ ಸೇವಿಸುತ್ತಾನೆ. ಅವನಿಗೆಲ್ಲಿಯ ದುಃಖ?

ಶಯಾನಮನಘಂ ರಾತ್ರೌ ಪಿತೇವಾಭಿಪರಿಷ್ವಜನ್ ।
ರಶ್ಮಿಭಿಃ ಸಂಸ್ಪೃಶನ್ ಶೀತೈಶ್ಚಂದ್ರಮಾ ಹ್ಲಾದಯಿಷ್ಯತಿ ॥೧೦॥

ರಾತ್ರಿಯಲ್ಲಿ ಪಾಪರಹಿತನಾದ ರಾಮ ಮಲಗಿರುವಾಗ ಚಂದ್ರನು ತಂಪಾದ ತನ್ನ ಬೆಳದಿಂಗಳಿಂದ ಚೆನ್ನಾಗಿ ಸ್ಪರ್ಶಿಸುತ್ತ ತಂದೆಯಂತೆ ಆಲಿಂಗಿಸುತ್ತ ಅವನಿಗೆ ಆಹ್ಲಾದವನ್ನೇ ಉಂಟುಮಾಡುತ್ತಾನೆ.

ದದೌ ಚಾಸ್ತ್ರಾಣಿ ದಿವ್ಯಾನಿ ಯಸ್ಮೈ ಬ್ರಹ್ಮಾ ಮಹೌಜಸೇ ।
ದಾನವೇಂದ್ರಂ ಹತಂ ದೃಷ್ಟ್ವಾ ತಿಮಿಧ್ವಜಸುತಂ ರಣೇ ॥೧೧॥

ಮಹಾಪರಾಕ್ರಮಿಯಾದ ರಾಮನಿಗೆ, ಅವನ ಅನುಗ್ರಹವನ್ನು ಬಯಸಿದ್ದ 'ಬ್ರಹ್ಮ' ತಪಸ್ಸಿನಿಂದ ಬ್ರಾಹ್ಮಣನಾದ, ಕ್ಷತ್ರಿಯನಾಗಿ ಹುಟ್ಟಿಯೂ ಬ್ರಾಹ್ಮಣ್ಯವನ್ನು ಸಂಪಾದಿಸಿದ, ವಿಶ್ವಾಮಿತ್ರನು 'ತಿಮಿಧ್ವಜಸುತಂ' ಮತ್ಸ್ಯಧ್ವಜರಾದ ಸುಂದೋಪ-ಸುಂದರ ಮಗನಾದ 'ದಾನವೇಂದ್ರ' ಮಹಾದಾನವನಾದ ಸುಬಾಹುವನ್ನು 'ಹತ'ನಾಗುವನೆಂದು, ಶ್ರೀರಾಮನು ಅವನನ್ನು ನಿಶ್ಚಿತವಾಗಿ ಕೊಲ್ಲುವನೆಂದು, 'ದೃಷ್ಟ್ವಾ' ತಿಳಿದು, ಮೊದಲೇ ಯೋಗಬಲದಿಂದ ತಿಳಿದು, ದಿವ್ಯಾಸ್ತ್ರಗಳನ್ನು ಮೊದಲಿಗೇ ಉಪದೇಶ ಮಾಡಿದ್ದಾನೆ.

ಮಾರೀಚಶ್ಚ ಸುಬಾಹುಶ್ಚ ಯಜ್ಞವಿಘ್ನಂ ಕರಿಷ್ಯತಃ (ಬಾ.19.5)
ಅಥ ಕಾಲೋಪಮೌ ಯುದ್ಧೇ ಸುತೌ ಸುಂದೋಪಸುಂದಯೋಃ...
ಮಾರೀಚಶ್ಚ ಸುಬಾಹುಶ್ಚ ವೀರ್ಯವಂತೌ ಸುಶಿಕ್ಷಿತೌ । (ಬಾಲ.20.25)

ಎಂದು ವಿಶ್ವಾಮಿತ್ರರು ದಶರಥನಿಗೆ ಸುಬಾಹುವಿನ ಪರಿಚಯವನ್ನು ಹೇಳಿದ್ದಾರೆ. ಅವರೇ 'ಸುಬಾಹು ರಾಮನಿಂದ ಹತನಾಗುವುದು ನಿಶ್ಚಯ' ಎಂದಿದ್ದಾರೆ—

ಅಹಂ ತೇ ಪ್ರತಿಜಾನಾಮಿ ಹತೌ ತೌ ವಿದ್ಧಿ ರಾಕ್ಷಸೌ (ಬಾಲ.19.14)
ರಾಮನಿಂದ ಸುಬಾಹು ಹೀಗೆ 'ಹತ'ನಾದ್ದರಿಂದಲೇ ವಿಶ್ವಾಮಿತ್ರರು ಮಂತ್ರೋಪ-ದೇಶವನ್ನು ಮೊದಲೇ ರಾಮನ ವಿಶೇಷ ಅನುಗ್ರಹಕ್ಕಾಗಿ ರಾಮನಿಗೆ ನೀಡುತ್ತಾರೆ ಎಂದು ಶ್ರೀಸತ್ಯಧರ್ಮತೀರ್ಥರ ವ್ಯಾಖ್ಯಾನವಿದೆ. ಅದರಿಂದ, ಸುಬಾಹುವಧವನ್ನು ಮಾಡಿದ ಬಳಿಕ ವಿಶ್ವಾಮಿತ್ರರು ರಾಮನಿಗೆ ಅಸ್ತ್ರೋಪದೇಶ ಮಾಡಿದ್ದಲ್ಲ. ಮತ್ತು 'ಸುಬಾಹು' ಇಲ್ಲಿ ಶಂಬರಾಸುರನ ಪುತ್ರನೂ ಅಲ್ಲ.

ಸ ಶೂರಃ ಪುರುಷವ್ಯಾಘ್ರಃ ಸ್ವಬಾಹುಬಲಮಾಶ್ರಿತಃ ।
ಅಸಂತ್ರಸ್ತೋಽಪ್ಯರಣ್ಯಸ್ಥೋ ವೇಶ್ಮನೀವ ನಿವತ್ಸ್ಯತಿ ॥೧೨॥

ಅಂಥ ರಾಮನು ಪುರುಷೋತ್ತಮ, ತನ್ನ ಬಾಹು ಬಲವನ್ನೇ ಆಶ್ರಯಿಸಿರುವವನು, ಭಯಭೀತನಾಗದವನು, ಅರಣ್ಯದಲ್ಲಿದ್ದರೂ ಸ್ವಂತ ಮನೆಯಲ್ಲಿರುವವನಂತೇ ಅಲ್ಲಿ ವಾಸಮಾಡುತ್ತಾನೆ.

ಯಸ್ಯೇಷುಪಥಮಾಸಾದ್ಯ ವಿನಾಶಂ ಯಾಂತಿ ಶತ್ರವಃ ।
ಕಥಂ ನ ಪೃಥಿವೀ ತಸ್ಯ ಶಾಸನೇ ಸ್ಥಾತುಮರ್ಹತಿ ॥೧೩॥

ಯಾರ ಬಾಣದ ಇದಿರಾಗಿ ಬಂದು ಶತ್ರುಗಳು ಎಲ್ಲರೂ ನಾಶ ಹೊಂದುವರೋ ಆ ರಾಮನ ಅಧೀನತೆಗೆ ಈ ಭೂಮಿ ಹೇಗೆ ಒಳಪಡದೇ ಇದ್ದೀತು?

ಯಾ ಶ್ರೀಃ ಶೌರ್ಯಂ ಚ ರಾಮಸ್ಯ ಯಾ ಚ ಕಲ್ಯಾಣಸತ್ತ್ವತಾ ।
ನಿವೃತ್ತಾರಣ್ಯವಾಸಃ ಸ ಕ್ಷಿಪ್ರಂ ರಾಜ್ಯಮವಾಪ್ಸ್ಯತಿ ॥೧೪॥

ಶರೀರಕಾಂತಿ, ಶೌರ್ಯ, ಮಂಗಳಕರವಾದ ಬಲ ಇವು ರಾಮನಲ್ಲಿರುವುದರಿಂದ ರಾಮನು ಅರಣ್ಯವಾಸದಿಂದ ಹಿಂತಿರುಗಿ ಬಂದು ಬೇಗನೆ ರಾಜ್ಯವನ್ನು ಹೊಂದುವನು.

ಸೂರ್ಯಸ್ಯಾಪಿ ಭವೇತ್ಸೂರ್ಯೋ ಹ್ಯಗ್ನೇರಗ್ನಿಃ ಪ್ರಭೋಃ ಪ್ರಭುಃ ।
ಶ್ರಿಯಃ ಶ್ರೀಶ್ಚ ಭವೇದಗ್ರ್ಯಾ ಕೀರ್ತ್ಯಾಃ ಕೀರ್ತಿಃ ಕ್ಷಮಾಕ್ಷಮಾ ॥೧೫॥

ದೈವತಂ ದೈವತಾನಾಂ ಚ ಭೂತಾನಾಂ ಭೂತಸತ್ತಮಃ ।
ತಸ್ಯ ಕೇ ಹ್ಯಗುಣಾ ದೇವಿ ವನೇ ವಾಪ್ಯಥ ವಾ ಪುರೇ ॥೧೬॥

ದೇವಿ, ರಾಮನೆಂದರೆ ಸೂರ್ಯನಿಗೆ ಸೂರ್ಯ. ಅಗ್ನಿಗೆ ಅಗ್ನಿ, ಪ್ರಭುವಿಗೆ ಪ್ರಭು, ಕಾಂತಿಗೆ ಕಾಂತಿ, ಕೀರ್ತಿಗೆ ಕೀರ್ತಿ, ಕ್ಷಮೆಗೆ ಕ್ಷಮೆ, ದೇವತೆಗಳಿಗೆ ದೇವತೆ, ಪ್ರಾಣಿಗಳಿಗೆ ಪ್ರಾಣಿಶ್ರೇಷ್ಠನೆನಿಸುವವನು. ಅವನು ಕಾಡಿನಲ್ಲಿರಲಿ, ಪಟ್ಟಣದಲ್ಲಿರಲಿ, ದುಃಖಭಯಾದಿ ದೋಷ ಅವನಿಗೇನು ಬಂದೀತು?

ಪೃಥಿವ್ಯಾ ಸಹ ವೈದೇಹ್ಯಾ ಶ್ರಿಯಾ ಚ ಪುರುಷರ್ಷಭಃ ।
ಕ್ಷಿಪ್ರಂ ತಿಸೃಭಿರೇತಾಭಿಃ ಸಹ ರಾಮೋಽಭಿಷೇಕ್ಷ್ಯತೇ ॥೧೭॥

ಪುರುಷೋತ್ತಮನಾದ ರಾಮ ಭೂದೇವಿ ಸೀತಾದೇವಿ ಶ್ರೀದೇವಿ ಈ ಮೂವರೊಂದಿಗೆ ಬೇಗನೆ ಪಟ್ಟಾಭಿಷಿಕ್ತನಾಗುತ್ತಾನೆ.

ದುಃಖಜಂ ವಿಸೃಜಂತ್ಯಸ್ರಂ ನಿಷ್ಕ್ರಾಮಂತಮುದೀಕ್ಷ್ಯ ಯಮ್ ।
ಅಯೋಧ್ಯಾಯಾಂ ಜನಾಃ ಸರ್ವೇ ಶೋಕವೇಗಸಮಾಹತಾಃ ॥೧೮॥

ರಾಮ ಅಯೋಧ್ಯೆಯಿಂದ ಹೊರಟು ಹೋಗುವುದನ್ನು ಕಂಡು ಅಯೋಧ್ಯೆಯಲ್ಲಿ ಜನರೆಲ್ಲರೂ ಶೋಕಾವೇಗದಿಂದ ಆರ್ತರಾಗಿ ದುಃಖದಿಂದ ಉಂಟಾಗುವ ಕಣ್ಣೀರನ್ನು ಸುರಿಸುತ್ತಾರೆ. ಇಂಥ ಪ್ರಜಾನುರಾಗಉಳ್ಳ ರಾಮನು ರಾಜನಾಗದಿರುವನೆ?

ಕುಶಚೀರಧರಂ ವೀರಂ ಗಚ್ಛಂತಮಪರಾಜಿತಮ್ ।
ಸೀತೇವಾನುಗತಾ ಲಕ್ಷ್ಮೀಸ್ತಸ್ಯ ಕಿಂ ನಾಮ ದುರ್ಲಭಮ್ ॥೧೯॥

ಸೋಲನ್ನು ಕಂಡರಿಯದ ವೀರರಾಮ ಕಾಡಿಗೆ ಹೋಗುವಾಗ ಸೀತೆಯಂತೆ ಅಯೋಧ್ಯೆಯ ಭಾಗ್ಯಲಕ್ಷ್ಮಿಯೇ ಅವನನ್ನು ಹಿಂಬಾಲಿಸಿ ಹೋಯಿತು. ಅಯೋಧ್ಯೆ ನಿಸ್ತೇಜವಾಯಿತು ಅಂಥ ರಾಮನಿಗೆ ದುರ್ಲಭವೇನಿದ್ದಿತು?

ಧನುರ್ಗ್ರಹವರೋ ಯಸ್ಯ ಬಾಣಖಡ್ಗಾಸ್ತ್ರಭೃತ್ ಸ್ವಯಮ್ ।
ಲಕ್ಷ್ಮಣೋ ವ್ರಜತಿ ಹ್ಯಗ್ರೇ ತಸ್ಯ ಕಿಂ ನಾಮ ದುರ್ಲಭಮ್ ॥೨೦॥

ಧನುರ್ಧಾರಿಗಳಲ್ಲಿ ಶ್ರೇಷ್ಠನಾದ ಲಕ್ಷ್ಮಣನು ಬಾಣಖಡ್ಗ ಮುಂತಾದ ಶಸ್ತ್ರಾಸ್ತ್ರಗಳನ್ನು ಧರಿಸಿ ರಾಮನ ಮುಂದೆ ನಡೆಯುತ್ತಾನೆ. ಅಂಥ ರಾಮನಿಗೆ ದುರ್ಲಭವೇನಿದ್ದೀತು?

ನಿವೃತ್ತವನವಾಸಂ ತಂ ದ್ರಷ್ಟಾಸಿ ಪುನರಾಗತಮ್ ।
ಜಹಿ ಶೋಕಂ ಚ ಮೋಹಂ ಚ ದೇವಿ ಸತ್ಯಂ ಬ್ರವೀಮಿ ತೇ ॥೨೧॥

ದೇವಿ, ರಾಮನು ವನವಾಸವನ್ನು ಮುಗಿಸಿ ಪುನಃ ಆಗಮಿಸುವುದನ್ನು ನೀನು ನೋಡುವೆ. ಶೋಕವನ್ನೂ ಮೋಹವನ್ನೂ ಬಿಟ್ಟುಬಿಡು. ಇದನ್ನು ನಾನು ನಿಜವಾಗಿ ಹೇಳುತ್ತಿದ್ದೇನೆ.

ಶಿರಸಾ ಚರಣಾವೇತೌ ವಂದಮಾನಮನಿಂದಿತೇ ।
ಪುನರ್ದ್ರಕ್ಷ್ಯಸಿ ಕಲ್ಯಾಣಿ ಪುತ್ರಂ ಚಂದ್ರಮಿವೋದಿತಮ್ ॥೨೨॥

ದೋಷರಹಿತಳೆ, ಮಂಗಳೆ, ಉದಿಸಿದ ಚಂದ್ರನಂತೆ ಬೆಳಗುತ್ತ ನಿನ್ನ ಮಗ ನಿನ್ನ ಈ ಪಾದಗಳನ್ನು ತಲೆಬಾಗಿ ವಂದಿಸುವುದನ್ನು ನೀನು ಪುನಃ ನೋಡುವೆ.

ಪುನಃ ಪ್ರವಿಷ್ಟಂ ದೃಷ್ಟ್ವಾ ತಮಭಿಷಿಕ್ತಂ ಮಹಾಶ್ರಿಯಮ್ ।
ತಮುತ್ಸ್ರಕ್ಷ್ಯಸಿ ನೇತ್ರಾಭ್ಯಾಂ ಕ್ಷಿಪ್ರಮಾನಂದಜಂ ಪಯಃ ॥೨೩॥

ಪುನಃ ಅಯೋಧ್ಯೆಯನ್ನು ಪ್ರವೇಶಿಸಿ ಪಟ್ಟಾಭಿಷಿಕ್ತನಾಗಿ ಮಹಾ ಐಶ್ವರ್ಯದಿಂದ ಮೆರೆವ ಮಗನನ್ನು ಕಂಡು ಎರಡು ಕಣ್ಣುಗಳಿಂದ ಬೇಗನೆ ಆನಂದಬಾಷ್ಪವನ್ನು ಸುರಿಸುವಿ.

ಮಾ ಶೋಕೋ ದೇವಿ ದುಃಖಂ ವಾ ನ ರಾಮೇ ದೃಶ್ಯತೇऽಶಿವಮ್ ।
ಕ್ಷಿಪ್ರಂ ದ್ರಕ್ಷ್ಯಸಿ ಪುತ್ರಂ ತ್ವಂ ಸಸೀತಂ ಸಹಲಕ್ಷ್ಮಣಮ್ ॥೨೪॥

ದೇವಿ, ಶೋಕವಾಗಲಿ, ದುಃಖವಾಗಲಿ, ನಿನಗೆ ಬೇಡ. ರಾಮನಲ್ಲಿ ಅಮಂಗಳ-ಕರವಾದ ಲಕ್ಷಣವೇನೂ ಕಾಣುವುದಿಲ್ಲ. ಸೀತಾಲಕ್ಷ್ಮಣಸಹಿತನಾದ ಪುತ್ರ ರಾಮನನ್ನು ನೀನು ಬೇಗನೆ ನೋಡುವೆ.

ತ್ವಯಾಶೇಷೋ ಜನಶ್ಚಾಯಂ ಸಮಾಶ್ವಾಸ್ಯೋ ಯದಾನಘೇ ।
ಕಿಮಿದಾನೀಮಿದಂ ದೇವಿ ಕರೋಷಿ ಹೃದಿ ವಿಕ್ಲವಮ್ ॥೨೫॥

ನಿರ್ದೋಷಳಾದ ದೇವಿಯೆ, ದುಃಖಿತರಾಗಿರುವ ಈ ಎಲ್ಲ ಪರಿವಾರದ ಜನರನ್ನೂ ನೀನೇ ಸಂತೈಸಬೇಕಾಗಿರುವಾಗ ಇದೇನು ಈಗ ಹೃದಯದಲ್ಲಿ ಕ್ಷೋಭೆಗೊಳ್ಳುತ್ತಿರುವೆ?

ನಾರ್ಹಾ ತ್ವಂ ಶೋಚಿತುಂ ದೇವಿ ಯಸ್ಯಾಸ್ತೇ ರಾಘವಃ ಸುತಃ ।
ನ ಹಿ ರಾಮಾತ್ಪರೋ ಲೋಕೇ ವಿದ್ಯತೇ ಸತ್ಪಥೇ ಸ್ಥಿತಃ ॥೨೬॥

ರಾಮನು ನಿನ್ನ ಮಗನಾಗಿರುವನೆಂದಮೇಲೆ, ದೇವಿ, ನೀನು ಶೋಕಿಸಬಾರದು. ರಾಮನಿಗಿಂತ ಹೆಚ್ಚು ಸನ್ಮಾರ್ಗನಿಷ್ಠನು ಲೋಕದಲ್ಲಿಯೇ ಇಲ್ಲ.

ಅಭಿವಾದಯಮಾನಂ ತಂ ದೃಷ್ಟ್ವಾ ಸಸುಹೃದಂ ಸುತಮ್ ।
ಮುದಾಶ್ರು ಮೋಕ್ಷ್ಯಸೇ ಕ್ಷಿಪ್ರಂ ಮೇಘಲೇಖೇವ ವಾರ್ಷಿಕೀ ॥೨೭॥

ಬಂಧುಮಿತ್ರಸಮೇತನಾಗಿ ಮಗನು ಬಂದು ನಿನಗೆ ಅಭಿವಾದನ ಮಾಡುವು-ದನ್ನು ಕಂಡು ನೀನು ವರ್ಷಕಾಲದ ಮೇಘವು ಮಳೆ ಸುರಿಸುವಂತೆ ಬೇಗನೆ ಆನಂದಬಾಷ್ಪವನ್ನು ಸುರಿಸುವೆ.

ಪುತ್ರಸ್ತೇ ವರದಃ ಕ್ಷಿಪ್ರಮಯೋಧ್ಯಾಂ ಪುನರಾಗತಃ ।
ಪಾಣಿಭ್ಯಾಂ ಮೃದುಪೀನಾಭ್ಯಾಂ ಚರಣೌ ಪೀಡಯಿಷ್ಯತಿ ॥೨೮॥

ವರದಾಯಕನಾದ ನಿನ್ನ ಮಗನು ಬೇಗನೆ ಅಯೋಧ್ಯೆಗೆ ಹಿಂತಿರುಗಿ ಬಂದು ಕೋಮಲವಾದ ಪುಷ್ಟವಾದ ಕೈಗಳಿಂದ ನಿನ್ನ ಪಾದಗಳನ್ನು ಒತ್ತುತ್ತಾನೆ ಅಭಿವಾದನ ಮಾಡುತ್ತಾನೆ.

ಅಭಿವಾದ್ಯ ನಮಸ್ಯಂತಂ ಶೂರಂ ಸಸುಹೃದಂ ಸುತಮ್ ।
ಮುದಾಸ್ರೈಃ ಪ್ರೋಕ್ಷ್ಯಸಿ ಪುನರ್ಮೇಘರಾಜಿರಿವಾಚಲಮ್ ॥೨೯॥

ಬಂಧುಮಿತ್ರರೊಂದಿಗೆ ಬಂದು ಅಭಿವಾದನ ಮಾಡಿ ನಮಿಸುವ ಶೂರನಾದ ನಿನ್ನ ಮಗನನ್ನು, ಮೇಘಸಮೂಹವು ಬೆಟ್ಟವನ್ನು ಮಳೆಯಿಂದ ತೋಯಿಸುವಂತೆ ಆನಂದಬಾಷ್ಪದಿಂದ ಪುನಃ ನೀನು ತೋಯಿಸುವೆ.

ಆಶ್ವಾಸಯಂತೀ ವಿವಿಧೈಶ್ಚ ವಾಕ್ಯೈ-
ರ್ವಾಕ್ಯೋಪಚಾರೇ ಕುಶಲಾನವದ್ಯಾ ।
ರಾಮಸ್ಯ ತಾಂ ಮಾತರಮೇವಮುಕ್ತ್ವಾ
ದೇವೀ ಸುಮಿತ್ರಾ ವಿರರಾಮ ರಾಮಾ ॥೩೦॥

ಮಾತಿನಿಂದ ಸಂತೈಸುವುದರಲ್ಲಿ ಕುಶಲಳಾದ ನಿರ್ದೋಷಳಾದ ಸುಂದರಿ ದೇವಿ ಸುಮಿತ್ರೆ ನಾನಾ ಬಗೆಯ ಮಾತುಗಳಿಂದ ರಾಮನ ಮಾತೆಯನ್ನು ಸಂತೈಸುತ್ತ ಹೀಗೆ ನುಡಿದು ಸುಮ್ಮನಾದಳು.

ನಿಶಮ್ಯ ತಲ್ಲಕ್ಷ್ಮಣಮಾತೃವಾಕ್ಯಂ
ರಾಮಸ್ಯ ಮಾತುರ್ನರದೇವಪತ್ನ್ಯಾಃ ।
ಸದ್ಯಃ ಶರೀರೇ ವಿನನಾಶ ಶೋಕಃ
ಶರದ್ಗತೋ ಮೇಘ ಇವಾಲ್ಪತೋಯಃ ॥೩೧॥

ಲಕ್ಷ್ಮಣನ ಮಾತೆ ಆಡಿದ್ದನ್ನು ಕೇಳಿ ದಶರಥಪತ್ನಿಯಾದ ರಾಮಮಾತೆಯ ಶೋಕ ಶರೀರದಲ್ಲಿ, ಶರತ್ಕಾಲದಲ್ಲಿ ಅಲ್ಪಜಲಉಳ್ಳ ಮೋಡದಂತೆ ಒಡನೆ ಅದೃಶ್ಯವಾಯಿತು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ನಲವತ್ತನಾಲ್ಕನೇ ಸರ್ಗ ಮುಗಿಯಿತು.

ಪಂಚಚತ್ವಾರಿಂಶಃ ಸರ್ಗಃ

ಸರ್ಗ – 45

ಪೌರರು ಶ್ರೀರಾಮನನ್ನು ಹಿಂದಿರುಗಲು ಪ್ರಾರ್ಥಿಸುವುದು. ಶ್ರೀರಾಮನು ಅವರಿಗೆ ಸಮಧಾನ ಹೇಳುವುದು.

ಅನುರಕ್ತಾ ಮಹಾತ್ಮಾನಂ ರಾಮಂ ಸತ್ಯಪರಾಕ್ರಮಮ್ ।
ಅನುಜಗ್ಮುಃ ಪ್ರಯಾಂತಂ ತಂ ವನವಾಸಾಯ ಮಾನವಾಃ ॥೧॥

ಸತ್ಯಪರಾಕ್ರಮನಾದ ಮಹಾತ್ಮರಾಮನು ವನವಾಸಕ್ಕೆ ಹೊರಟಾಗ ಅವನಲ್ಲಿ ಅನುರಕ್ತರಾದ ಜನರು ಹಿಂಬಾಲಿಸಿದರು.

ನಿವರ್ತಿತೇऽಪಿ ಚ ಬಲಾತ್ ಸುಹೃದ್ಭರ್ಮೀಣ ರಾಜನಿ ।
ನೈವ ತೇ ಸಂನ್ಯವರ್ತಂತ ರಾಮಸ್ಯಾನುಗತಾ ರಥಮ್ ॥೨॥

'ಪುನಃ ಹಿಂತಿರುಗಿ ಬರಬೇಕಾದವರನ್ನು ಬೀಳ್ಕೊಡುವಾಗ ಬಲು ದೂರದವರೆಗೆ ಹಿಂಬಾಲಿಸಬಾರದು' ಎಂದು ಬಲಾತ್ಕಾರವಾಗಿ ರಾಜನನ್ನೂ ಬಂಧುವರ್ಗದವರನ್ನೂ ಮಂತ್ರಿಗಳು ತಡೆದು ಹಿಂತಿರುಗಿಸಿದರೂ ಪುರಜನರು ರಾಮನ ರಥವನ್ನು ಹಿಂಬಾಲಿಸಿಯೇ ಹೋದರು, ಸರ್ವಥಾ ಹಿಂತಿರುಗಲೇ ಇಲ್ಲ.

ಅಯೋಧ್ಯಾನಿಲಯಾನಾಂ ಹಿ ಪುರುಷಾಣಾಂ ಮಹಾಯಶಾಃ ।
ಬಭೂವ ಗುಣಸಂಪನ್ನಃ ಪೂರ್ಣಚಂದ್ರ ಇವ ಪ್ರಿಯಃ ॥೩॥

ಅಯೋಧ್ಯಾವಾಸಿಗಳಾದ ಜನರಿಗೆ ಮಹಾಯಶಸ್ವಿಯಾದ ಗುಣಸಂಪನ್ನನಾದ ಶ್ರೀರಾಮ ಪೂರ್ಣಚಂದ್ರನಂತೆ ಪ್ರಿಯನಾಗಿದ್ದ.

ಸ ಯಾಚ್ಯಮಾನಃ ಕಾಕುತ್ಸ್ಥಃ ಸ್ವಾಭಿಃ ಪ್ರಕೃತಿಭಿಸ್ತದಾ ।
ಕುರ್ವಾಣಃ ಪಿತರಂ ಸತ್ಯಂ ವನಮೇವಾನ್ವಪದ್ಯತ ॥೪॥

ತನ್ನ ಪ್ರಜೆಗಳು ಎಷ್ಟು ಬೇಡಿದರೂ ಶ್ರೀರಾಮ ಪಿತನನ್ನು ಸತ್ಯನಿಷ್ಠನನ್ನಾಗಿ ಮಾಡುವುದಕ್ಕಾಗಿ ಕಾಡಿಗೇ ನಡೆದ.

ಅವೇಕ್ಷಮಾಣಃ ಸಸ್ನೇಹಂ ಚಕ್ಷುಷಾ ಪ್ರಪಿಬನ್ನಿವ ।
ಉವಾಚ ರಾಮಃ ಸ್ನೇಹೇನ ತಾಃ ಪ್ರಜಾಃ ಸ್ವಾಃ ಪ್ರಜಾ ಇವ ॥೫॥

ತನ್ನನ್ನು ಹಿಂಬಾಲಿಸಿ ಬರುತ್ತಿದ್ದ ಪ್ರಜೆಗಳನ್ನು ಸ್ವಂತಮಕ್ಕಳಂತೆ ಪ್ರೀತಿಯಿಂದ ಕಣ್ಣನೋಟದಿಂದ ಕುಡಿದುಬಿಡುವಂತೆ ನೋಡುತ್ತ ಶ್ರೀರಾಮ ಪ್ರೀತಿಯಿಂದ ನುಡಿದ.

ಯಾ ಪ್ರೀತಿರ್ಬಹುಮಾನಶ್ಚ ಮಯ್ಯಯೋಧ್ಯಾನಿವಾಸಿನಾಮ್ ।
ಮತ್ಪ್ರಿಯಾರ್ಥಂ ವಿಶೇಷೇಣ ಭರತೇ ಸಾ ವಿಧೀಯತಾಮ್ ॥೬॥

ಅಯೋಧ್ಯಾ ವಾಸಿಗಳಾದ ನಿಮಗೆ ನನ್ನಲ್ಲಿ ಏನು ಪ್ರೀತಿ ಗೌರವ ಭಾವನೆ ಇರುವುದೋ ಅದನ್ನು ವಿಶೇಷವಾಗಿ ನನ್ನ ಸಂತೋಷಕ್ಕಾಗಿ ಭರತನಲ್ಲಿ ಮಾಡಿರಿ.

ಸ ಹಿ ಕಲ್ಯಾಣಚಾರಿತ್ರಃ ಕೈಕೇಯ್ಯಾನಂದವರ್ಧನಃ ।
ಕರಿಷ್ಯತಿ ಯಥಾವದ್ವಃ ಪ್ರಿಯಾಣಿ ಚ ಹಿತಾನಿ ಚ ॥೭॥

ಭರತನು ಕೈಕೇಯಿಯ ಆನಂದವನ್ನು ವರ್ಧಿಸುವವನು ಮಂಗಳಕರವಾದ ಚಾರಿತ್ರ್ಯಉಳ್ಳವನು. ನಿಮ್ಮ ಇಷ್ಟವನ್ನೂ ಹಿತವನ್ನೂ ಯಥಾವತ್ತಾಗಿ ಮಾಡುವನು.

ಜ್ಞಾನವೃದ್ಧೋ ವಯೋಬಾಲೋ ಮೃದುವೀರ್ಯಗುಣಾನ್ವಿತಃ ।
ಅನುರೂಪಃ ಸ ವೋ ಭರ್ತಾ ಭವಿಷ್ಯತಿ ಭಯಾಪಹಃ ॥೮॥

ಭರತನು ವಯಸ್ಸಿನಲ್ಲಿ ನಿಮಗಿಂತ ಚಿಕ್ಕವನಾದರೂ ಜ್ಞಾನದಲ್ಲಿ ಹಿರಿಯ-ನಾಗಿದ್ದಾನೆ. ಮೃದುಹೃದಯಿ ವೀರ್ಯಗುಣ ಉಳ್ಳವನು. ನಿಮ್ಮ ಭಯವನ್ನು ದೂರ ಮಾಡುತ್ತಾ ನಿಮಗೆ ಅನುರೂಪನಾದ ರಾಜನಾಗುವನು.

ಸ ಹಿ ರಾಜಗುಣೈರ್ಯುಕ್ತೋ ಯುವರಾಜಃ ಸಮೀಕ್ಷಿತಃ ।
ಅಪಿ ಚಾಪಿ ಮಯಾ ಶಿಷ್ಟೈಃ ಕಾರ್ಯಂ ವೋ ಭರ್ತೃಶಾಸನಮ್ ॥೯॥

ರಾಜನಲ್ಲಿರಬೇಕಾದ ಗುಣಉಳ್ಳ ಅವನನ್ನು ರಾಜನು ಯುವರಾಜನನ್ನಾಗಿ ಮಾಡಿದ್ದಾನೆ. ನಾನೂ ನೀವು ಎಲ್ಲರೂ ರಾಜಾಜ್ಞೆಯನ್ನು ಪಾಲಿಸಬೇಕು.

ನ ಸಂತಪ್ಯೇದ್ಯಥಾ ಚಾಸೌ ವನವಾಸಂ ಗತೇ ಮಯಿ ।
ಮಹಾರಾಜಸ್ತಥಾ ಕಾರ್ಯೋ ಮಮ ಪ್ರಿಯಚಿಕೀರ್ಷಯಾ ॥೧೦॥

ಮತ್ತು ನಾನು ವನವಾಸಕ್ಕೆ ಹೋಗಿರುವಾಗ ಮಹಾರಾಜ ದುಃಖಪಡದಂತೆ ನನಗೆ ಸಂತೋಷ ಉಂಟುಮಾಡುವುದಕ್ಕಾಗಿ ನೀವು ಪ್ರಯತ್ನಿಸಬೇಕು.

ಯಥಾ ಯಥಾ ದಾಶರಥಿರ್ಧರ್ಮಮೇವಾಸ್ಥಿತೋಽಭವತ್ ।
ತಥಾ ತಥಾ ಪ್ರಕೃತಯೋ ರಾಮಂ ಪತಿಮಕಾಮಯನ್ ॥೧೧॥

ಹೀಗೇ ರಾಮನು ಪಿತೃವಾಕ್ಯ ಪರಿಪಾಲನ ಧರ್ಮದಲ್ಲಿಯೇ ಎಷ್ಟೆಷ್ಟು ಆಸಕ್ತ-ನಾದನೋ ಅಷ್ಟಷ್ಟೂ ಪ್ರಜೆಗಳು ಕೂಡ ರಾಮನೇ ತಮಗೆ ರಾಜನಾಗಬೇಕೆಂದು ಹಂಬಲಿಸಿದರು. ಹಿಂತಿರುಗಲು ನಿರಾಕರಿಸಿದರು.

ಬಾಷ್ಪೇಣ ಪಿಹಿತಂ ದೀನಂ ರಾಮಃ ಸೌಮಿತ್ರಿಣಾ ಸಹ ।
ಚಕರ್ಷೇವ ಗುಣೈರ್ಬದ್ಧಂ ಜನಂ ಪುರನಿವಾಸಿನಮ್ ॥೧೨॥

ರಾಮನೂ ಲಕ್ಷ್ಮಣನೂ ತಮ್ಮ ಗುಣಗಳೆಂಬ ಪಾಶಗಳಿಂದ ಅಯೋಧ್ಯಾವಾಸಿ-ಯಾದ ಪುರಜನರನ್ನು ಬಂಧಿಸಿ ಅವರು ದೀನರಾಗಿ ಕಣ್ಣೀರಿಂದ ಆವೃತರಾಗುವಂತೆ ಸೆಳೆಯುತ್ತಿರುವರೋ ಎಂಬಂತೆ ಕಂಡುಬಂದಿತು.

ತೇ ದ್ವಿಜಾಸ್ತ್ರಿವಿಧಂ ವೃದ್ಧಾ ಜ್ಞಾನೇನ ವಯಸೌಜಸಾ ।
ವಯಃಪ್ರಕಂಪಶಿರಸೋ ದೂರಾದೂಚುರಿದಂ ವಚಃ ॥೧೩॥

ಜ್ಞಾನದಿಂದ ವಯಸ್ಸಿನಿಂದ ಮತ್ತು ವರ್ಚಸ್ಸಿನಿಂದ ಮೂರು ಬಗೆಯಿಂದ ಹಿರಿಯರಾದ ದ್ವಿಜರು ವಯೋಧರ್ಮದಿಂದ ತಲೆ ಕಂಪಿಸುತ್ತಿದ್ದಂತೇ ರಾಮನಿಗೆ ದೂರದಲ್ಲಿ ನಿಂತು ಕುದುರೆಗಳಿಗೆ ನುಡಿದರು.

ವಹಂತೋ ಜವನಾ ರಾಮಂ ಭೋ ಭೋ ಜಾತ್ಯಾಸ್ತುರಂಗಮಾಃ ।
ನಿವರ್ತಧ್ವಂ ನ ಗಂತವ್ಯಂ ಹಿತಾ ಭವತ ಭರ್ತರಿ ॥೧೪॥

'ರಾಮನನ್ನು ಹೊತ್ತು ವೇಗವಾಗಿ ಓಡುವ ಒಳ್ಳೆಯ ಜಾತಿಯ ಕುದುರೆಗಳೆ, ಹಿಂತಿರುಗಿ ಬನ್ನಿರಿ. ಮುಂದೆ ಹೋಗಬೇಡಿರಿ. ಪ್ರಭುವಾದ ರಾಮನಿಗೆ ಹಿತವಾಗು-ವಂತೇ ವರ್ತಿಸಿರಿ'.

ಕರ್ಣವಂತಿ ಹಿ ಭೂತಾನಿ ವಿಶೇಷೇಣ ತುರಂಗಮಾಃ ।
ಯೂಯಂ ತಸ್ಮಾನ್ನಿವರ್ತಧ್ವಂ ಯಾಚನಾಂ ಪ್ರತಿವೇದಿತಾಃ ॥೧೫॥

ಎಲ್ಲ ಪ್ರಾಣಿಗಳಿಗೆ ಕಿವಿಗಳಿವೆ. ಕೇಳುವ ಶಕ್ತಿ ಇದೆ. ವಿಶೇಷವಾಗಿ ನಿಮಗೆ ಕುದುರೆಗಳಿಗೆ ಒಳ್ಳೆಯ ಕಿವಿಗಳಿವೆ. ಅದರಿಂದ ನಮ್ಮ ಯಾಚನೆಯನ್ನು ಆಲಿಸಿ ಕೇಳಿ, ನೀವು ಹಿಂತಿರುಗಿ ಬನ್ನಿ.

ಧರ್ಮತಃ ಸ ವಿಶುದ್ಧಾತ್ಮಾ ವೀರಃ ಶುಭದೃಢವ್ರತಃ ।
ಉಪವಾಹ್ಯಸ್ತು ವೋ ಭರ್ತಾ ನಾಪವಾಹ್ಯಃ ಪುರಾದ್ವನಮ್ ॥೧೬॥

ಧರ್ಮದೃಷ್ಟಿಯಿಂದಲೂ ನೀವು ರಾಮನನ್ನು ಕಾಡಿಗೆ ಒಯ್ಯಬಾರದು. ಅವನು ವಿಶುದ್ಧ ಮನಸಿನವನು. ವೀರ ಶುಭಕಾರಿ. ದೃಢವಾದ ವ್ರತನಿಷ್ಠೆ ಉಳ್ಳವನು. ಅಂಥ ನಿಮ್ಮ ಸ್ವಾಮಿಯನ್ನು ನೀವು ಪಟ್ಟಣಕ್ಕೆ ಹೊತ್ತು ತರಬೇಕು ಹೊರತು ಪಟ್ಟಣದಿಂದ ಕಾಡಿಗೆ ಹೊತ್ತು ಒಯ್ಯಬಾರದು ಎಂದು.

ಏವಮಾರ್ತಪ್ರಲಾಪಾಂಸ್ತಾನ್ ವೃದ್ಧಾನ್ ಪ್ರಲಪತೋ ದ್ವಿಜಾನ್ ।
ಅವೇಕ್ಷ್ಯ ಸಹಸಾ ರಾಮೋ ರಥಾದವತತಾರ ಹ ॥೧೭॥

ಹೀಗೆ ವೃದ್ಧರಾದ ದ್ವಿಜರು ಆರ್ತಪ್ರಲಾಪ ಮಾಡುತ್ತಿರುವುದನ್ನು ಕಂಡು ಶ್ರೀರಾಮ ರಥದಿಂದ ಬೇಗನೆ ಕೆಳಗೆ ಇಳಿದ.

ಪದ್ಭ್ಯಾಮೇವ ಜಗಾಮಾಥ ಸಸೀತಃ ಸಹಲಕ್ಷ್ಮಣಃ ।
ಸಂನಿಕೃಷ್ಟಪದನ್ಯಾಸೋ ರಾಮೋ ವನಪರಾಯಣಃ ॥೧೮॥

ಆದರೂ ವನವಾಸದಲ್ಲಿಯೇ ನಿಷ್ಠೆ ಉಳ್ಳವನಾಗಿ ಸೀತಾಲಕ್ಷ್ಮಣರೊಂದಿಗೆ ಕಾಲ್ನಡಿಗೆಯಿಂದಲೇ ಹತ್ತಿರ ಹತ್ತಿರ ಹೆಜ್ಜೆ ಇಡುತ್ತ ಕಾಡಿನ ಕಡೆಗೇ ನಡೆದ.

ದ್ವಿಜಾತೀಂಸ್ತು ಪದಾತೀಂಸ್ತಾನ್ ರಾಮಶ್ಚಾರಿತ್ರವತ್ಸಲಃ ।
ನ ಶಶಾಕ ಘೃಣಾಚಕ್ಷುಃ ಪರಿಮೋಕ್ತುಂ ರಥೇನ ಸಃ ॥೧೯॥

ಸಚ್ಚಾರಿತ್ರಪ್ರಿಯನಾದ ದಯಾರ್ದ್ರದೃಷ್ಟಿ ಉಳ್ಳ ರಾಮನಿಗೆ, ತಾನು ರಥದಲ್ಲಿ ಕುಳಿತು, ಕಾಲ್ನಡಿಗೆಯಲ್ಲಿ ಬರುತ್ತಿದ್ದ ದ್ವಿಜರನ್ನು ಬಿಟ್ಟುಹೋಗಲು ಮನಸ್ಸಾಗಲಿಲ್ಲ.

ಗಚ್ಛಂತಮೇವ ತಂ ದೃಷ್ಟ್ವಾ ರಾಮಂ ಸಂಭ್ರಾಂತಚೇತಸಃ ।
ಊಚುಃ ಪರಮಸಂತಪ್ತಾ ರಾಮಂ ವಾಕ್ಯಮಿದಂ ದ್ವಿಜಾಃ ॥೨೦॥

ರಥದಿಂದಿಳಿದರೂ ಕಾಡಿನ ಕಡೆಗೇ ರಾಮ ನಡೆಯುವುದನ್ನು ಕಂಡು ಏನು ಮಾಡಬೇಕೆಂದು ತಿಳಿಯದೆ ಬಹಳ ಸಂತಾಪಗೊಂಡು ದ್ವಿಜರು ಹೇಳಿದರು.

ಬ್ರಾಹ್ಮಣ್ಯಂ ಕೃತ್ಸ್ನಮೇತತ್ತ್ವಂ ಬ್ರಹ್ಮಣ್ಯಮನುಗಚ್ಛತಿ ।
ದ್ವಿಜಸ್ಕಂಧಾಧಿರೂಢಾಸ್ತ್ವಮಗ್ನಯೋಽಪ್ಯನುಯಾಂತ್ಯಮೀ ॥೨೧॥

ಈ ಇಡೀ ಬ್ರಾಹ್ಮಣಸಮೂಹವೂ ಬ್ರಾಹ್ಮಣ ಹಿತನಾದ ನಿನ್ನನ್ನೆ ಹಿಂಬಾಲಿಸಿ ಬರುತ್ತಿದೆ. ದ್ವಿಜರ ಹೆಗಲಮೇಲೇರಿ ಅರಣಿಕಾಷ್ಠದಲ್ಲಿ ಆರೋಪಿತರಾದ ಅಗ್ನಿಗಳೂ ನಿನ್ನ ಹಿಂದೆ ಬರುತ್ತಿದ್ದಾರೆ.

ವಾಜಪೇಯಸಮುತ್ಥಾನಿ ಛತ್ರಾಣ್ಯೇತಾನಿ ಪಶ್ಯ ನಃ ।
ಪೃಷ್ಠತೋಽನುಪ್ರಯಾತಾನಿ ಮೇಘಾನಿವ ಜಲಾತ್ಯಯೇ ॥೨೨॥

ವಾಜಪೇಯ ಯಾಗದಿಂದ ಲಬ್ಧವಾದ, ಶರತ್ಕಾಲದ ಮೋಡಗಳಂತೆ ಬಿಳಿಯಾದ, ನಮ್ಮ ಛತ್ರಗಳೂ ನಿನ್ನನ್ನು ಹಿಂಬಾಲಿಸಿ ಬರುತ್ತಿರುವುದನ್ನೂ ನೋಡು.

ಅನವಾಪ್ತಾಭಿಷೇಕಸ್ಯ ರಶ್ಮಿಸಂತಾಪಿತಸ್ಯ ತೇ ।
ಏಭಿಶ್ಛಾಯಾಂ ಕರಿಷ್ಯಾಮಃ ಸ್ವೈಶ್ಛತ್ರೈರ್ವಾಜಪೇಯಿಕೈಃ ॥೨೩॥

ಪಟ್ಟಾಭಿಷೇಕವಾಗಿಲ್ಲದ್ದರಿಂದ ಶ್ವೇತಚ್ಛತ್ರವಿಲ್ಲದೆ ಬಿಸಿಲಿನ ತಾಪಕ್ಕೆ ಸಿಲುಕಿರುವ ನಿನಗೆ ನಾವು ವಾಜಪೇಯದಿಂದ ಲಬ್ಧವಾದ ಈ ಛತ್ರಗಳಿಂದ ನೆರಳನ್ನು ಉಂಟು ಮಾಡುತ್ತೇವೆ.

ಯಾ ಹಿ ನಃ ಸತತಂ ಬುದ್ಧಿರ್ವೇದಮಂತ್ರಾನುಸಾರಿಣೀ ।
ತ್ವತ್ಕೃತೇ ಸಾ ಕೃತಾ ವತ್ಸ ವನವಾಸಾನುಸಾರಿಣೀ ॥೨೪॥

ಮಗು, ಇಷ್ಟರವರೆಗೆ ನಮ್ಮ ಆಸಕ್ತಿ ಎಲ್ಲವೂ ವೇದಮಂತ್ರಗಳ ವಿಷಯದಲ್ಲೇ ಇದ್ದಿತು. ಇನ್ನುಮುಂದೆ ಆ ಆಸಕ್ತಿಯನ್ನು ನಿನ್ನ ಸಲುವಾಗಿ ವನವಾಸ ವಿಷಯ-ದಲ್ಲಿಯೇ ಮಾಡುತ್ತೇವೆ.

ಹೃದಯೇಷ್ವೇವ ತಿಷ್ಠಂತಿ ವೇದಾ ಯೇ ನಃ ಪರಂ ಧನಮ್ ।
ವತ್ಸ್ಯಂತ್ಯಪಿ ಗೃಹೇಷ್ವೇವ ದಾರಾಶ್ಚಾರಿತ್ರರಕ್ಷಿತಾಃ ॥೨೫॥

ನಾವು ನಿನ್ನನ್ನು ಹಿಂಬಾಲಿಸುವುಕ್ಕೆ ಏನೂ ಬಾಧಕವಿಲ್ಲ. ನಮ್ಮ ವೇದಮಂತ್ರ ರೂಪವಾದ ದೊಡ್ಡ ಸಂಪತ್ತು ನಮ್ಮ ಹೃದಯಗಳಲ್ಲಿ ಸುರಕ್ಷಿತವಾಗಿರುತ್ತವೆ. ನಮ್ಮ ಭಾರ್ಯೆಯರೂ ಕೂಡ ತಮ್ಮ ಚಾರಿತ್ರ್ಯದಿಂದಲೇ ರಕ್ಷಿತರಾಗಿ ಮನೆಗಳಲ್ಲಿ ವಾಸಮಾಡುತ್ತಾರೆ.

ನ ಪುನರ್ನಿಶ್ಚಯಃ ಕಾರ್ಯಸ್ತ್ವದ್ಗತೌ ಸುಕೃತಾ ಮತಿಃ ।
ತ್ವಯಿ ಧರ್ಮವ್ಯಪೇಕ್ಷೇ ತು ಕಿಂ ಸ್ಯಾದ್ಧರ್ಮಪಥೇ ಸ್ಥಿತಂ ॥೨೬॥

ನಾವು ನಿನ್ನನ್ನು ಹಿಂಬಾಲಿಸುವುದಕ್ಕೆ ಪುನಃ ಬೇರೆ ನಿಶ್ಚಯ ಮಾಡಬೇಕಿಲ್ಲ. ಈಗಾಗಲೇ ದೃಢವಾದ ನಿರ್ಧಾರ ಮಾಡಿಬಿಟ್ಟಿದ್ದೇವೆ. ಆದರೆ, ನೀನು ಬ್ರಾಹ್ಮಣರ ಮಾತಿನಂತೆ ನಡೆಯುವ ಧರ್ಮಮಾರ್ಗವನ್ನು ಬಿಟ್ಟರೆ, ಧರ್ಮಮಾರ್ಗದಲ್ಲಿ ಯಾರಿರ ಬಲ್ಲರು?

ಯಾಚಿತೋ ನೋ ನಿವರ್ತಸ್ವ ಹಂಸಶುಕ್ಲಶಿರೋರುಹೈಃ
ಶಿರೋಭಿರ್ನಿಭೃತಾಚಾರ ಮಹೀಪತನಪಾಂಸುಲೈಃ ॥೨೭॥

ನಿಶ್ಚಲ ಧರ್ಮಾನುಷ್ಠಾನ ನಿಷ್ಠನೆ, ಹಂಸದಂತೆ ಬಿಳಿಯಾದ ನರೆಕೂದಲಿನವರು ನಾವು ನಿನಗೆ ತಲೆಗಳಿಂದ ನೆಲಮುಟ್ಟಿ ದೂಳು ಮಾಡಿಕೊಂಡು ಕೇಳಿಕೊಳ್ಳುತ್ತೇವೆ, ಅಯೋಧ್ಯೆಗೆ ಹಿಂತಿರುಗು.

ಬ್ರಾಹ್ಮಣರು ಪಟ್ಟಾಭಿಷಿಕ್ತನಾಗದಿದ್ದ ಕ್ಷತ್ರಿಯನಿಗೆ ಶಿರಸಾ ನಮಸ್ಕಾರ ಮಾಡುವುದು ಧರ್ಮವೆ? ಎಂದರೆ, ಇಲ್ಲಿ ಕ್ಷತ್ರಿಯನಾಗಿ ರಾಮಾವತಾರ ಮಾಡಿದವನು, ಭಗವಂತ. ಜ್ಞಾನಿಗಳಾದ ಬ್ರಾಹ್ಮಣರು ಇದನ್ನು ತಿಳಿದವರಾದ್ದರಿಂದ ನಮಸ್ಕಾರ ಮಾಡಿದ್ದಾರೆ. ಅಥವಾ ಇದು ಆಶೀರ್ವಾದಾಪೇಕ್ಷೆಯಿಂದ ಮಾಡಿದ ನಮಸ್ಕಾರವಲ್ಲ. ರಾಮನನ್ನು ಹಿಂದಿರುಗಿಸಲು ಅನುನಯಕ್ಕಾಗಿ ಮಾಡಿದ ನಮಸ್ಕಾರ. ದಶರಥನು ಕೈಕೇಯಿಗೆ ನಮಸ್ಕಾರ ಮಾಡಿದಂತೇ ಇದು.

ಬಹೂನಾಂ ವಿತತಾ ಯಜ್ಞಾ ದ್ವಿಜಾನಾಂ ಯ ಇಹಾಗತಾಃ ।
ತೇಷಾಂ ಸಮಾಪ್ತಿರಾಯತ್ತಾ ತವ ವತ್ಸ ನಿವರ್ತನೇ ॥೨೮॥

ಮಗು, ಇಲ್ಲಿಗೆ ಬಂದಿರುವ ಅನೇಕ ಬ್ರಾಹ್ಮಣರು ಯಜ್ಞಗಳನ್ನು ಆರಂಭಿಸಿರುತ್ತಾರೆ. ಅವುಗಳ ನಿರ್ವಿಘ್ನ ಸಮಾಪ್ತಿಯು ವಿಘ್ನನಾಶಕನಾದ ನೀನು ಹಿಂತಿರುಗುವುದನ್ನು ಅವಲಂಬಿಸಿದೆ.

ಭಕ್ತಿಮಂತಿ ಹಿ ಭೂತಾನಿ ಜಂಗಮಾಜಂಗಮಾನಿ ಚ ।
ಯಾಚಮಾನೇಷು ತೇಷು ತ್ವಂ ಭಕ್ತಿಂ ಭಕ್ತೇಷು ದರ್ಶಯ ॥೨೯॥

ಸ್ಥಾವರ ಜಂಗಮ ಜೀವಿಗಳೆಲ್ಲರೂ ನಿನ್ನಲ್ಲಿ ಭಕ್ತಿ ಮಾಡುತ್ತಿದ್ದಾರೆ. ಭಕ್ತರಾದ ಅವರೆಲ್ಲರೂ ಯಾಚನೆ ಮಾಡುತ್ತಿರುವಾಗ ನೀನು ಅವರಲ್ಲಿ ಪ್ರೀತಿ ತೋರಬೇಕು ತಾನೆ?

ಅನುಗಂತುಮಶಕ್ತಾಸ್ತಾ ್ವಂ ಮೂಲೈರುದ್ಧತವೇಗಿನಃ ।
ಉನ್ನತಾ ವಾಯುವೇಗೇನ ಏಕ್ರೋಶಂತೀವ ಪಾದಪಾಃ ॥೩೦॥

ವೃಕ್ಷಗಳು ಸ್ಥಾವರವಾದ್ದರಿಂದ ಬೇರುಗಳಿಂದಾಗಿ ವೇಗ ನಷ್ಟವಾಗಿರುವ ಪ್ರಯುಕ್ತ ನಿನ್ನನ್ನು ಹಿಂಬಾಲಿಸಿ ಬರಲು ಅಶಕ್ತವಾಗಿವೆ. ಆದರೂ ಉನ್ನತವಾದ ವೃಕ್ಷಗಳು ವಾಯುವೇಗದಿಂದ ಶಬ್ದಮಾಡುತ್ತ ನಿನ್ನನ್ನು ಕೂಗಿ ಕರೆಯುವಂತೆ ಕಾಣುತ್ತಿವೆ.

ನಿಶ್ಚೇಷ್ಟಾಹಾರಸಂಚಾರಾ ವೃಕ್ಷೈಕಸ್ಥಾನವಿಷ್ಠಿತಾಃ ।
ಪಕ್ಷಿಣೋಽಪಿ ಪ್ರಯಾಚಂತೇ ಸರ್ವಭೂತಾನುಕಂಪಿನಮ್ ॥೩೧॥

ಪಕ್ಷಿಗಳೂ ಕೂಡ ಹಾರಾಟ ನಡೆಸದೆ ಆಹಾರಕ್ಕಾಗಿಯೂ ಸಂಚರಿಸದೆ ಕೇವಲ ವೃಕ್ಷಸ್ಥಾನದಲ್ಲಿ ಕುಳಿತು ಸರ್ವಪ್ರಾಣಿಗಳಲ್ಲಿ ಅನುಕಂಪೆ ತೋರುವ ನಿನ್ನನ್ನೇ ಹಿಂತಿರುಗಿ ಬಾ ಎಂದು ಯಾಚನೆ ಮಾಡುತ್ತಿವೆ.

ಏವಂ ಏಕ್ರೋಶತಾಂ ತೇಷಾಂ ದ್ವಿಜಾತೀನಾಂ ನಿವರ್ತನೇ ।
ದದೃಶೇ ತಮಸಾ ತತ್ರ ವಾರಯಂತೀವ ರಾಘವಮ್ ॥೩೨॥

ಹೀಗೆ ರಾಮನನ್ನು ಹಿಂತಿರುಗಿ ಬಾ ಎಂದು ಬ್ರಾಹ್ಮಣರು ಕೂಗಿ ಕರೆಯುವಾಗ ಇದಿರಿಗೆ ತಮಸಾನದಿ ಬಂದು ರಾಮನನ್ನು ತಡೆಯುವಂತೆ ಕಂಡಿತು.

ತತಃ ಸುಮಂತ್ರೋಽಪಿ ರಥಾದ್ವಿಮುಚ್ಯ
ಶ್ರಾಂತಾನ್ ಹಯಾನ್ ಸಂಪರಿವರ್ತ್ಯ ಶೀಘ್ರಮ್ ।
ಪೀತೋದಕಾಂಸ್ತೋಯಪರಿಪ್ಲುತಾಂಗಾನ್
ಅಚಾರಯದ್ವೈ ತಮಸಾವಿದೂರೇ ॥೩೩॥

ಆಗ ಸುಮಂತ್ರನೂ ಆಯಾಸಗೊಂಡಿದ್ದ ಕುದುರೆಗಳನ್ನು ಬೇಗನೆ ರಥದಿಂದ ಬಿಚ್ಚಿ ನೆಲದಮೇಲೆ ಹೊರಳಾಡಿಸಿ ನೀರು ಕುಡಿಸಿ ಮೈತೊಳೆದು ನದೀತೀರದಲ್ಲಿ ಹುಲ್ಲು ಮೇಯಲು ಬಿಟ್ಟನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ನಲವತ್ತೈದನೇ ಸರ್ಗ ಮುಗಿಯಿತು.

❖

ಷಟ್‌ಚತ್ವಾರಿಂಶಃ ಸರ್ಗಃ

ಸರ್ಗ – 46

ಶ್ರೀರಾಮನು ತಮಸಾ ನದೀತೀರದಲ್ಲಿ ರಾತ್ರಿ ವಿಶ್ರಮಿಸಿ ಬೆಳಗಾಗುವುದರೊಳಗೆ ಪೌರರಿಗೆ ಗೊತ್ತಾಗದಂತೆ ಮುಂದಕ್ಕೆ ಪ್ರಯಾಣ ಮಾಡುವುದು.

ತತಸ್ತು ತಮಸಾತೀರಂ ರಮ್ಯಮಾಶ್ರಿತ್ಯ ರಾಘವಃ ।
ಸೀತಾಮುದ್ವೀಕ್ಷ್ಯ ಸೌಮಿತ್ರಿಮಿದಂ ವಚನಮಬ್ರವೀತ್ ॥೧॥

ಶ್ರೀರಾಮನು ರಮ್ಯವಾದ ತಮಸಾನದೀ ತೀರದಲ್ಲಿ ಕುಳಿತು ಸೀತೆಯನ್ನೊಮ್ಮೆ ನೋಡಿ ಲಕ್ಷ್ಮಣನಿಗೆ ಹೇಳಿದ.

ಇಯಮದ್ಯ ನಿಶಾ ಪೂರ್ವಾ ಸೌಮಿತ್ರೇ ಪ್ರಹಿತಾ ವನಮ್ ।
ವನವಾಸಸ್ಯ ಭದ್ರಂ ತೇ ಸ ನೋತ್ಕಂಠಿತುಮರ್ಹಸಿ ॥೨॥

ಲಕ್ಷ್ಮಣ, ನಮ್ಮ ವನವಾಸದ ರಾತ್ರಿಗಳ ಪೈಕಿ ಇದು ಈಗ ವನವಾಸದ ಮೊದಲನೆ ರಾತ್ರಿ. ನಿನಗೆ ಶುಭವಾಗಲಿ ವನವಾಸದಲ್ಲಿ ಸೀತೆಯ ರಕ್ಷಣೆ ಹೇಗಾಗುವುದೋ ಎಂದು ಉದ್ವೇಗಪಡಬೇಡ.

ಪಶ್ಯ ಶೂನ್ಯಾನ್ಯರಣ್ಯಾನಿ ರುದಂತೀವ ಸಮಂತತಃ ।
ಯಥಾನಿಲಯಮಾಯದ್ಭಿರ್ನಿಲೀನಾನಿ ಮೃಗದ್ವಿಜೈಃ ॥೩॥

ನೋಡು ಅರಣ್ಯಗಳು ಸುತ್ತಲೂ ಏನೂ ಸಡಗರವಿಲ್ಲದೆ ಅಳುತ್ತಿರುವಂತೆ ಕಾಣುತ್ತಿವೆ. ಏಕೆಂದರೆ ಮೃಗಪಕ್ಷಿಗಳು ಎಲ್ಲೆಡೆ ತಮ್ಮ ತಮ್ಮ ಗುಹೆಗಳನ್ನು ಗೂಡುಗಳನ್ನು ಸೇರಿಬಿಟ್ಟಿವೆ.

ಅದ್ಯಾಯೋಧ್ಯಾ ತು ನಗರೀ ರಾಜಧಾನೀ ಪಿತುರ್ಮಮ ।
ಸಸ್ತ್ರೀಪುಂಸಾ ಗತಾನಸ್ಮಾನ್ ಶೋಚಿಷ್ಯತಿ ನ ಸಂಶಯಃ ॥೪॥

ಇಂದು ನನ್ನ ತಂದೆಯ ರಾಜಧಾನಿಯಾದ, ಸ್ತ್ರೀಪುರುಷರಿಂದ ತುಂಬಿದ ಇಡೀ ಅಯೋಧ್ಯೆ ಕಾಡಿಗೆ ಹೋಗುತ್ತಿರುವ ನಮ್ಮ ಸಲುವಾಗಿ ಶೋಕಿಸುತ್ತದೆ. ಇದರಲ್ಲಿ ಸಂಶಯವಿಲ್ಲ.

ಅನುರಕ್ತಾ ಹಿ ಮನುಜಾ ರಾಜಾನಂ ಬಹುಭಿರ್ಗುಣೈಃ ।
ತ್ವಾಂ ಚ ಮಾಂ ಚ ನರವ್ಯಾಘ್ರ ಶತ್ರುಘ್ನಭರತೌ ತಥಾ ॥೫॥

ಅಯೋಧ್ಯೆಯ ಪ್ರಜೆಗಳು ಬಹುಗುಣಗಳಿಂದ ಸಂಪನ್ನನಾದ ರಾಜನನ್ನೂ ನಿನ್ನನ್ನೂ ನನ್ನನ್ನೂ ಶತ್ರುಘ್ನ ಭರತರನ್ನೂ ಪ್ರೀತಿಸುತ್ತಾರೆ, ಪುರುಷೋತ್ತಮ.

ಪಿತರಂ ಚಾನುಶೋಚಾಮಿ ಮಾತರಂ ಚ ಯಶಸ್ವಿನೀಮ್ ।
ಅಪಿ ವಾಂಧೌ ಭವೇತಾಂ ತು ರುದಂತೌ ತಾವಭೀಕ್ಷ್ಣಶಃ ॥೬॥

ತಂದೆಯನ್ನು ಯಶಸ್ವಿನಿಯಾದ ತಾಯಿಯನ್ನು ಕುರಿತು ನಾನು ಶೋಕಿಸುತ್ತೇನೆ. ಅವರು ಮತ್ತೂ ಮತ್ತೂ ಅಳುತ್ತ ಅಂಧರಾಗುವರೇನೋ!

ಭರತಃ ಖಲು ಧರ್ಮಾತ್ಮಾ ಪಿತರಂ ಮಾತರಂ ಚ ಮೇ ।
ಧರ್ಮಾರ್ಥಕಾಮಸಹಿತೈರ್ವಾಕ್ಯೈ ರಾಶ್ವಾಸಯಿಷ್ಯತಿ ॥೭॥

ಭರತನು ಧರ್ಮಾತ್ಮನಾದ್ದರಿಂದ ತಂದೆಯನ್ನೂ ತಾಯಿಯನ್ನೂ ಧರ್ಮ ಅರ್ಥ ಕಾಮ ಸಹಿತವಾದ ಮಾತುಗಳಿಂದ ಸಂತೈಸುತ್ತಾನೆ.

ಭರತಸ್ಯಾನೃಶಂಸತ್ವಂ ವಿಚಿಂತ್ಯಾಹಂ ಪುನಃ ಪುನಃ ।
ನಾನುಶೋಚಾಮಿ ಪಿತರಂ ಮಾತರಂ ಚಾಪಿ ಲಕ್ಷ್ಮಣ ॥೮॥

ಭರತನ ದಯಾಪರತೆಯನ್ನು ಪುನಃ ಪುನಃ ಸ್ಮರಿಸಿ, ಲಕ್ಷ್ಮಣ, ನಾನು ತಂದೆ-ಯನ್ನು ತಾಯಿಯನ್ನು ಕುರಿತು ಶೋಕಿಸುವುದಿಲ್ಲ.

ತ್ವಯಾ ಕಾರ್ಯಂ ನರವ್ಯಾಘ್ರ ಮಾಮನುವ್ರಜತಾ ಕೃತಮ್ ।
ಅನ್ವೇಷ್ಟವ್ಯಾ ಹಿ ವೈದೇಹ್ಯಾ ರಕ್ಷಣಾರ್ಥೇ ಸಹಾಯತಾ ॥೯॥

ಪುರುಷೋತ್ತಮ, ನೀನು ನನ್ನೊಡನೆ ಬಂದು ಒಂದು ಮುಖ್ಯ ಕಾರ್ಯವನ್ನು ಮಾಡಿಕೊಟ್ಟಿರುವೆ. ಸೀತೆಯ ರಕ್ಷಣೆಗಾಗಿ ಒಬ್ಬನ ಸಹಾಯವನ್ನು ನಾನು ಅನ್ವೇಷಿಸ ಬೇಕಾಗಿತ್ತು.

ಅದ್ಭಿರೇವ ತು ಸೌಮಿತ್ರೇ ವರ್ತ್ಸ್ಯಾಮ್ಯದ್ಯ ನಿಶಾಮಿಮಾಮ್ ।
ಏತದ್ಧಿ ರೋಚತೇ ಮಹ್ಯಂ ವನ್ಯೇಽಪಿ ವಿವಿಧೇ ಸತಿ ॥೧೦॥

ಲಕ್ಷ್ಮಣ, ನಾನು ಇಂದು ನೀರನ್ನು ಮಾತ್ರ ಕುಡಿದು ಈ ರಾತ್ರಿಯನ್ನು ಕಳೆಯುವೆನು. ಕಾಡಿನ ನಾನಾ ಬಗೆಯ ಪದಾರ್ಥಗಳು ಇಲ್ಲಿ ಲಭ್ಯವಿದ್ದರೂ ನನಗೆ ತೀರ್ಥೋಪವಾಸ ಮಾಡುವುದೇ ಉಚಿತವಾಗಿ ತೋರುತ್ತದೆ.

ದಶರಥನು ಇನ್ನು ಅಲ್ಪಕಾಲ ಜೀವಿಸುವುದರಿಂದ ಅವನ ಉದ್ದೇಶವಾಗಿ ಶ್ರೀರಾಮ ತೀರ್ಥೋಪವಾಸ ಮಾಡುತ್ತಿದ್ದಾನೆ, ಎಂದು ಧ್ವನಿತವಾಗುತ್ತದೆ.

ಏವಮುಕ್ತ್ವಾ ತು ಸೌಮಿತ್ರಿಂ ಸುಮಂತ್ರಮಪಿ ರಾಘವಃ ।
ಅಪ್ರಮತ್ತಸ್ತ್ವಮಶ್ವೇಷು ಭವ ಸೌಮ್ಯೇತ್ಯುವಾಚ ಹ ॥೧೧॥

ಲಕ್ಷ್ಮಣನಿಗೆ ಹೀಗೆ ಹೇಳಿ ಶ್ರೀರಾಮ ಸುಮಂತ್ರನಿಗೂ ಹೇಳಿದ. ಸೌಮ್ಯನೆ, ಕುದುರೆಗಳ ವಿಷಯದಲ್ಲಿ ನೀನು ಜಾಗರೂಕತೆಯಿಂದಿರು ಎಂದು.

ಸೋಽಶ್ವಾನ್ ಸುಮಂತ್ರಃ ಸಂಯಮ್ಯ ಸೂರ್ಯೇಽಸ್ತಂ ಸಮುಪಾಗತೇ ।
ಪ್ರಭೂತಯವಸಾನ್ ಕೃತ್ವಾ ಬಭೂವ ಪ್ರತ್ಯನಂತರಃ ॥೧೨॥

ಸುಮಂತ್ರನು ಕುದುರೆಗಳನ್ನು ಕಟ್ಟಿ ಅವುಗಳ ಮುಂದೆ ಯಥೇಚ್ಛವಾಗಿ ಹುಲ್ಲು-ಹಾಕಿ ರಾಮನ ಬಳಿಗೆ ಬಂದ.

ಉಪಾಸ್ಯ ತು ಶಿವಾಂ ಸಂಧ್ಯಾಂ ದೃಷ್ಟ್ವಾ ರಾತ್ರಿಮುಪಸ್ಥಿತಾಮ್ ।
ರಾಮಸ್ಯ ಶಯನಂ ಚಕ್ರೇ ಸೂತಃ ಸೌಮಿತ್ರಿಣಾ ಸಹ ॥೧೩॥

ಮಂಗಳಕರವಾದ ಸಂಧ್ಯೋಪಾಸನೆಯನ್ನು ಮಾಡಿ ಕುಳಿತ ರಾಮನಿಗೆ ರಾತ್ರಿ ಸಮೀಪಿಸಿದ್ದನ್ನು ಕಂಡು ಮಲಗಲು ಸ್ಥಳವನ್ನು ಲಕ್ಷ್ಮಣ ಸುಮಂತ್ರರು ಶುದ್ಧಿ-ಗೊಳಿಸಿದರು.

ತಾಂ ಶಯ್ಯಾಂ ತಮಸಾತೀರೇ ವೀಕ್ಷ್ಯ ವೃಕ್ಷದಲೈಃ ಕೃತಾಮ್ ।
ರಾಮಃ ಸೌಮಿತ್ರಿಣಾ ಸಾರ್ಧಂ ಸಭಾರ್ಯಃ ಸಂವಿವೇಶ ಹ ॥೧೪॥

ಲಕ್ಷ್ಮಣ ಮತ್ತು ಸಮಂತ್ರರಿಂದ ತಮಸಾನದೀತೀರದಲ್ಲಿ ಮರದ ಚಿಗುರೆಲೆ ಗಳಿಂದ ನಿರ್ಮಿತವಾದ ಹಾಸಿಗೆಯನ್ನು ಕಂಡು ರಾಮನು ಸೀತಾಸಮೇತನಾಗಿ ಮಲಗಿದ.

ಸಭಾರ್ಯಂ ಸಂಪ್ರಸುಪ್ತಂ ತಂ ಭ್ರಾತರಂ ವೀಕ್ಷ್ಯ ಲಕ್ಷ್ಮಣಃ ।
ಕಥಯಾಮಾಸ ಸೂತಾಯ ರಾಮಸ್ಯ ವಿವಿಧಾನ್ ಗುಣಾನ್ ॥೧೫॥

ಸೀತಾಸಮೇತನಾದ ರಾಮನು ಬಳಲಿಕೆಯಿಂದ ಚೆನ್ನಾಗಿ ನಿದ್ರಿಸುತ್ತಿರುವುದನ್ನು ಕಂಡು ಲಕ್ಷ್ಮಣನು ಸುಮಂತ್ರನಿಗೆ ರಾಮನ ನಾನಾ ಗುಣಗಳನ್ನು ಬಣ್ಣಿಸಿದ.

ಜಾಗ್ರತೋ ಹ್ಯೇವ ತಾಂ ರಾತ್ರೀಂ ಸೌಮಿತ್ರೇರುದಿತೋ ರವಿಃ ।
ಸೂತಸ್ಯ ತಮಸಾತೀರೇ ರಾಮಸ್ಯ ಬ್ರುವತೋ ಗುಣಾನ್ ॥೧೬॥

ತಮಸಾನದೀತೀರದಲ್ಲಿ ರಾತ್ರಿ ಇಡೀ ಲಕ್ಷ್ಮಣನು ಸುಮಂತ್ರನಿಗೆ ರಾಮನ ಗುಣಗಳನ್ನು ಹೇಳುತ್ತಿದ್ದಂತೆ ಅರುಣೋದಯ ಕಾಲ ಬಂದಿತು.

ಗೋಕುಲಾಕುಲತೀರಾಯಾಸ್ತಮಸಾಯಾ ವಿದೂರತಃ ।
ಅವಸತ್ತತ್ರ ತಾಂ ರಾತ್ರಿಂ ರಾಮಃ ಪ್ರಕೃತಿಭಿಃ ಸಹ ॥೧೭॥

ಗೋಸಮೂಹದಿಂದ ತುಂಬಿದ ತಮಸಾತೀರಕ್ಕಿಂತ ಸ್ವಲ್ಪ ದೂರದಲ್ಲಿ ಶ್ರೀರಾಮನು ಪ್ರಜೆಗಳೊಂದಿಗೆ ಆ ರಾತ್ರಿ ಪೂರ್ತಿ ವಾಸ ಮಾಡಿದ.

ಉತ್ಥಾಯ ತು ಮಹಾತೇಜಾಃ ಪ್ರಕೃತೀಸ್ತಾ ನಿಶಾಮ್ಯ ಚ ।
ಅಬ್ರವೀದ್ಭ್ರಾತರಂ ರಾಮೋ ಲಕ್ಷ್ಮಣಂ ಪುಣ್ಯಲಕ್ಷಣಮ್ ॥೧೮॥

ಅರ್ಧರಾತ್ರಿಯಲ್ಲಿ ಮಹಾತೇಜಸ್ವಿಯಾದ ರಾಮನು ಎದ್ದು ಆ ಪ್ರಜೆಗಳನ್ನು ಕಂಡು ಪುಣ್ಯಕರ ಲಕ್ಷಣಉಳ್ಳ ತಮ್ಮನಾದ ಲಕ್ಷ್ಮಣನಿಗೆ ನುಡಿದ.

ಅಸ್ಮದ್ವ್ಯಪೇಕ್ಷಾನ್ ಸೌಮಿತ್ರೇ ನಿರ್ವ್ಯಪೇಕ್ಷಾನ್ ಗೃಹೇಷ್ವಪಿ ।
ವೃಕ್ಷಮೂಲೇಷು ಸಂಸುಪ್ತಾನ್ ಪಶ್ಯ ಲಕ್ಷ್ಮಣ ಸಾಂಪ್ರತಮ್ ॥೧೯॥

ಲಕ್ಷ್ಮಣ, ತಮ್ಮ ಮನೆಗಳಲ್ಲಿಯೂ ಅನಾಸ್ಥೆಯಿಂದಿದ್ದು ಈಗ ನಮ್ಮನ್ನೇ ಅಪೇಕ್ಷಿಸಿ ಮರದ ಬುಡಗಳಲ್ಲಿ ಸುಖವಾಗಿ ಮಲಗಿದ ಪ್ರಜೆಗಳನ್ನು ನೋಡು.

ಯಥೈತೇ ನಿಯಮಂ ಪೌರಾಃ ಕುರ್ವಂತ್ಯಸ್ಮನ್ನಿವರ್ತನೇ ।
ಅಪಿ ಪ್ರಾಣಾನಸಿಷ್ಯಂತಿ ನ ತು ತ್ಯಕ್ಷ್ಯಂತಿ ನಿಶ್ಚಯಮ್ ॥೨೦॥

ಈ ಪೌರರು ನಮ್ಮನ್ನು ಅಯೋಧ್ಯೆಗೆ ಹಿಂತಿರುಗಿಸಲು ಪ್ರಯತ್ನ ಮಾಡುವುದನ್ನು ನೋಡದಿರೆ ಇವರು ಪ್ರಾಣಗಳನ್ನು ಬಿಡುವರು ಹೊರತು ತಮ್ಮ ನಿರ್ಧಾರವನ್ನು ಬಿಡಲಾರರೆಂದು ಕಾಣುತ್ತದೆ.

ಯಾವದೇವ ತು ಸಂಸುಪ್ತಾಸ್ತಾವದೇವ ವಯಂ ಲಘು ।
ರಥಮಾರುಹ್ಯ ಗಚ್ಛಾಮಃ ಪಂಥಾನಮಕುತೋಭಯಮ್ ॥೨೧॥

ಇವರು ಈಗ ಮಲಗಿರುವ ಕಾಲದಲ್ಲಿಯೇ ನಾವು ಬೇಗನೆ ರಥವನ್ನೇರಿ ನಿರಪಾಯವಾದ ಮಾರ್ಗದಲ್ಲಿ ಹೋಗೋಣ.

ಅತೋ ಭೂಯೋಽಪಿ ನೇದಾನೀಮಿಕ್ಷ್ವಾಕುಪುರವಾಸಿನಃ ।
ಸ್ವಪೇಯುರನುರಕ್ತಾ ಮಾಂ ವೃಕ್ಷಮೂಲಾನಿ ಸಂಶ್ರಿತಾಃ ॥೨೨॥

ನನ್ನಲ್ಲಿಯೇ ಅನುರಕ್ತರಾಗಿರುವ ಈ ಅಯೋಧ್ಯಾ ನಿವಾಸಿಗಳು ಈಗ ಮರದ ಬುಡದಲ್ಲಿ ಮಲಗಿರುವಂತೆ ಮುಂದೆಯೂ ಹೀಗೆ ಮಲಗುವಂತಾಗಬಾರದು. ಅವರು ತಮ್ಮ ಮನೆಗಳಿಗೆ ಹಿಂತಿರುಗಬೇಕು.

ಪೌರಾ ಹ್ಯಾತ್ಮಕೃತಾದ್ದುಃಖಾದ್ವಿಪ್ರಮೋಕ್ಷ್ಯಾ ನೃಪಾತ್ಮಜೈಃ ।
ನ ತು ಖಿಲ್ವಾತ್ಮನಾ ಯೋಜ್ಯಾ ದುಃಖೇನ ಪುರವಾಸಿನಃ ॥೨೩॥

ಪೌರರನ್ನು ಅವರು ತಾವಾಗಿಯೇ ಉಂಟುಮಾಡಿಕೊಂಡ ಅನಿಷ್ಟಗಳಿಂದ ರಾಜಕುಮಾರರು ಪಾರುಮಾಡಬೇಕು ಹೊರತು ರಾಜಕುಮಾರರು ತಾವು ಮಾಡಿಕೊಂಡ ಅನಿಷ್ಟಗಳನ್ನು ಪೌರರಿಗೆ ಹಂಚಬಾರದು. ರಾಜಕುಮಾರರು ಅವನ್ನು ತಾವೇ ಅನುಭವಿಸಬೇಕು.

ಅಬ್ರವೀಲ್ಲಕ್ಷ್ಮಣೋ ರಾಮಂ ಸಾಕ್ಷಾದ್ಧರ್ಮಮಿವ ಸ್ಥಿತಮ್ ।
ರೋಚತೇ ಮೇ ತಥಾ ಪ್ರಾಜ್ಞ ಕ್ಷಿಪ್ರಮಾರುಹ್ಯತಾಮಿತಿ ॥೨೪॥

ಸಾಕ್ಷಾತ್ ಧರ್ಮವೇ ಸಾಕಾರವಾಗಿ ನಿಂತಂತಿದ್ದ ರಾಮನಿಗೆ ಲಕ್ಷ್ಮಣ ನುಡಿದ. 'ಪ್ರಾಜ್ಞನೆ, ನನಗೂ ಅದೇ ಸರಿ ಎನಿಸುತ್ತದೆ. ಬೇಗನೆ ರಥವನ್ನೇರು'.

ಅಥ ರಾಮೋಽಬ್ರವೀತ್ ಶ್ರೀಮಾನ್ ಸುಮಂತ್ರಂ ಯುಜ್ಯತಾಂ ರಥಃ।
ಗಮಿಷ್ಯಾಮಿ ತತೋಽರಣ್ಯಂ ಗಚ್ಛ ಶೀಘ್ರಮಿತಃ ಪ್ರಭೋ ॥೨೫॥

ಶ್ರೀರಾಮ ಸುಮಂತ್ರನಿಗೆ ನುಡಿದ, 'ಸಮರ್ಥನಾಗಿರುವ ಸೂತನೆ, ಕುದುರೆ-ಗಳನ್ನು ಬೇಗನೆ ರಥಕ್ಕೆ ಹೂಡು. ನಾನು ಬೇಗನೆ ಕಾಡಿಗೆ ಹೋಗುತ್ತಿದ್ದೇನೆ. ಬೇಗನೆ ಇಲ್ಲಿಂದ ಹೊರಡು.'

ಸೂತಸ್ತತಃ ಸಂತ್ವರಿತಃ ಸ್ಯಂದನಂ ತೈರ್ಹಯೋತ್ತಮೈಃ ।
ಯೋಜಯಿತ್ವಾಥ ರಾಮಾಯ ಪ್ರಾಂಜಲಿಃ ಪ್ರತ್ಯವೇದಯತ್ ॥೨೬॥

ಸುಮಂತ್ರನು ಬಲು ತ್ವರೆಯಿಂದ ರಥಕ್ಕೆ ಶ್ರೇಷ್ಠವಾದ ಕುದುರೆಗಳನ್ನು ಕಟ್ಟಿ ರಾಮನಿಗೆ ಕೈಮುಗಿದು ಹೇಳಿದ.

ಅಯಂ ಯುಕ್ತೋ ಮಹಾಬಾಹೋ ರಥಸ್ತೇ ರಥಿನಾಂ ವರ ।
ತ್ವರಯಾರೋಹ ಭದ್ರಂ ತೇ ಸಸೀತಃ ಸಹಲಕ್ಷ್ಮಣಃ ॥೨೭॥

ರಥಿಕಶ್ರೇಷ್ಠನೆ, ಮಹಾಬಾಹುವೆ, ನಿನಗೆ ಶುಭವಾಗಲಿ. ನಿನ್ನ ರಥವಿದು ಸಜ್ಜಾಗಿ ನಿಂತಿದೆ. ಬೇಗನೆ ಸೀತಾಲಕ್ಷ್ಮಣ ಸಹಿತನಾಗಿ ಏರು.

ತಂ ಸ್ಯಂದನಮಧಿಷ್ಠಾಯ ರಾಘವಃ ಸಪರಿಚ್ಛದಃ ।
ಶೀಘ್ರಗಾಮಾಕುಲಾವರ್ತಾಂ ತಮಸಾಮತರನ್ನದೀಮ್ ॥೨೮॥

ಶ್ರೀರಾಮನು ಸೀತಾಲಕ್ಷ್ಮಣ ಸಮೇತನಾಗಿ ರಥದಲ್ಲಿ ಕುಳಿತು ವೇಗವಾಗಿ ಹರಿವ, ಸುಳಿಗಳಿಂದ ಕೂಡಿದ ತಮಸಾನದಿಯನ್ನು ದಾಟಿದ.

ಸ ಸಂತೀರ್ಯ ಮಹಾಬಾಹುಃ ಶ್ರೀಮಾನ್ ಶಿವಮಂಕಟಕಮ್ ।
ಪ್ರಾಪದ್ಯತ ಮಹಾಮಾರ್ಗಮಭಯಂ ಭಯದರ್ಶಿನಾಮ್ ॥೨೯॥

ಮಹಾಬಾಹು ಶ್ರೀರಾಮನು ತಮಸಾನದಿಯ ಮಧ್ಯದಲ್ಲಿ ರಥದಿಂದಿಳಿದು ಮುಳ್ಳುಗಳಿಲ್ಲದ, ಭಯಪಡುವವರಿಗೆ ಅಭಯ ನೀಡುವ ಮಂಗಳಕರವಾದ ಹೆದ್ದಾರಿಯನ್ನು ಹೋಗಿ ಸೇರಿದ.

ಮೋಹನಾರ್ಥಂ ತು ಪೌರಾಣಾಂ ಸೂತಂ ರಾಮೋಽಬ್ರವೀದ್ವಚಃ ।
ಉದಙ್ಮುಖಃ ಪ್ರಯಾಹಿ ತ್ವಂ ರಥಮಾಸ್ಥಾಯ ಸಾರಥೇ ॥೩೦॥

ಪೌರರಿಗೆ ಭ್ರಾಂತಿ ಉಂಟುಮಾಡುವುದಕ್ಕಾಗಿ ಶ್ರೀರಾಮ ಸುಮಂತ್ರನಿಗೆ ಹೇಳಿದ 'ಸಾರಥಿಯೆ, ನೀನು ರಥದಲ್ಲಿ ಕುಳಿತು ಉತ್ತರಾಭಿಮುಖವಾಗಿ ಅಯೋಧ್ಯೆಯ ಕಡೆಗೆ ಸ್ವಲ್ಪದೂರ ಹೋಗು.

ಮುಹೂರ್ತಂ ತ್ವರಿತಂ ಗತ್ವಾ ನಿವರ್ತಯ ರಥಂ ಪುನಃ ।
ಯಥಾ ನ ವಿದ್ಯುಃ ಪೌರಾ ಮಾಂ ತಥಾ ಕುರು ಸಮಾಹಿತಃ ॥೩೧॥

'ಮುಹೂರ್ತಕಾಲ ಉತ್ತರಾಭಿಮುಖವಾಗಿ ಶೀಘ್ರವಾಗಿ ಹೋಗಿ ಪುನಃ ರಥವನ್ನು ಹಿಂತಿರುಗಿಸು. ಪೌರರು ನಾನು ಯಾವ ಕಡೆಗೆ ಹೋದೆನೆಂದು ತಿಳಿಯಲು ಸಾಧ್ಯವಾಗದಂತೆ ಬೇರೆ ದಾರಿಯಿಂದ ಜಾಗರೂಕತೆಯಿಂದ ನಡೆಸಿಕೊಂಡು ಹೆದ್ದಾರಿಗೆ ಬಾ.'

ರಾಮಸ್ಯ ವಚನಂ ಶ್ರುತ್ವಾ ತಥಾ ಚಕ್ರೇ ಸ ಸಾರಥಿಃ ।
ಪ್ರತ್ಯಾಗಮ್ಯ ಚ ರಾಮಸ್ಯ ಸ್ಯಂದನಂ ಪ್ರತ್ಯವೇದಯತ್ ॥೩೨॥

ರಾಮನ ಮಾತನ್ನು ಕೇಳಿ ಸಾರಥಿ ಹಾಗೇ ಮಾಡಿದ. ಹಿಂತಿರುಗಿ ಹೆದ್ದಾರಿಗೆ ಬಂದು ರಾಮನಿಗೆ ಬಿನ್ನವಿಸಿದ.

ತೌ ಸಂಪ್ರಯುಕ್ತಂ ತು ರಥಂ ಸಮಾಸ್ಥಿತೌ
ತದಾ ಸಸೀತೌ ರಘುವಂಶವರ್ಧನೌ ।
ಪ್ರಚೋದಯಾಮಾಸ ತತಸ್ತುರಂಗಮಾನ್
ಸ ಸಾರಥೀರ್ಯೇನ ಪಥಾ ತಪೋವನಮ್ ॥೩೩॥

ರಘುವಂಶ ವರ್ಧನರಾದ ರಾಮಲಕ್ಷ್ಮಣರು ಸೀತಾಸಮೇತರಾಗಿ ಸಜ್ಜಾಗಿರುವ ರಥವನ್ನೇರಿ ಕುಳಿತರು. ಸಾರಥಿ ಸುಮಂತ್ರನು ತಪೋವನದ ಕಡೆಗೆ ದಕ್ಷಿಣಾಭಿ-ಮುಖವಾಗಿ ಕುದುರೆಗಳನ್ನು ನಡೆಸಿದನು.

ತತಃ ಸಮಾಸ್ಥಾಯ ರಥಂ ಮಹಾರಥಃ
ಸಸಾರಥಿರ್ದಾಶರಥಿರ್ವನಂ ಯಯೌ ।
ಉದಙ್ಮುಖಂ ತಂ ತು ರಥಂ ಚಕಾರ ಸ
ಪ್ರಯಾಣಮಾಂಗಲ್ಯನಿಮಿತ್ತದರ್ಶನಾತ್ ॥೩೪॥

ಮಹಾರಥನಾದ ರಾಮನು ರಥದಲ್ಲಿ ಕುಳಿತು ಸಾರಥಿಯೊಂದಿಗೆ ವನಕ್ಕೆ ಹೊರಟ. ಅದಕ್ಕೆ ಮೊದಲು, ಪ್ರಯಾಣದ ಮಂಗಳಕರ ಶಕುನ ದರ್ಶನದ ಉದ್ದೇಶದಿಂದ ರಥವನ್ನು ಉತ್ತರಾಭಿಮುಖ ಮಾಡಿ ಬಳಿಕ ಅದನ್ನೇರಿ, ದಕ್ಷಿಣಾಭಿಮುಖವಾಗಿ ಪ್ರಯಾಣ ಮಾಡಿದ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ನಲವತ್ತಾರನೇ ಸರ್ಗ ಮುಗಿಯಿತು.

❖

ಸಪ್ತಚತ್ವಾರಿಂಶಃ ಸರ್ಗಃ

ಸರ್ಗ – 47

ಪೌರರು ದುಃಖಿಸುತ್ತ ಅಯೋಧ್ಯೆಗೆ ಹಿಂತಿರುಗುವುದು.

ಪ್ರಭಾತಾಯಾಂ ತು ಶರ್ವರ್ಯಾಂ ಪೌರಾಸ್ತೇ ರಾಘವಂ ವಿನಾ ।
ಶೋಕೋಪಹತನಿಶ್ಚೇಷ್ಟಾ ಬಭೂವುರ್ಹತಚೇತಸಃ ॥೧॥

ರಾತ್ರಿಯು ಬೆಳಗಾದಾಗ ಆ ಪೌರರು ರಾಮನಿಲ್ಲದೆ ಶೋಕಪೀಡಿತರಾಗಿ ನಿಶ್ಚೇಷ್ಟರಾಗಿ ಬುದ್ಧಿಗೆ ಏನೂ ತೋಚದಂತಾದರು.

ಶೋಕಜಾಶ್ರುಪರಿದ್ಯೂನಾ ವೀಕ್ಷಮಾಣಾಃ ಸಮಂತತಃ ।
ಆಲೋಕಮಪಿ ರಾಮಸ್ಯ ನ ಪಶ್ಯಂತಿ ಸ್ಮ ದುಃಖಿತಾಃ ॥೨॥

ಶೋಕದ ಕಂಬನಿಯಿಂದ ಮೈತೋಯಿಸಿಕೊಂಡು ದುಃಖಿತರಾಗಿ ಸುತ್ತಲೂ ನೋಡಿದಾಗ ರಾಮನಿಗೆ ಸಂಬಂಧಿಸಿದಂತೆ ಒಂದು ಕುರುಹನ್ನೂ ಕಾಣದೆ ಹೋದರು.

ತೇ ವಿಷಾದಾರ್ತವದನಾ ರಹಿತಾಸ್ತೇನ ಧೀಮತಾ ।
ಕೃಪಣಾಃ ಕರುಣಾ ವಾಚೋ ವದಂತಿ ಸ್ಮ ಮನಸ್ವಿನಃ ॥೩॥

ಧೀಮಂತನಾದ ರಾಮನಿಲ್ಲದೆ ಒಳ್ಳೆಯ ಮನಸ್ಸಿನ ಆ ಪೌರರು ಶೋಕಾರ್ತವಾದ ಮುಖದಿಂದ ಕಷ್ಟದಿಂದ ಕರುಣಾಜನಕವಾದ ಮಾತುಗಳನ್ನಾಡಿದರು.

ಧಿಗಸ್ತು ಖಲು ನಿದ್ರಾಂ ತಾಂ ಯಯಾಪಹೃತಚೇತಸಃ ।
ನಾದ್ಯ ಪಶ್ಯಾಮಹೇ ರಾಮಂ ಪೃಥೂರಸ್ಕಂ ಮಹಾಭುಜಮ್ ॥೪॥

ನಮ್ಮ ನಿದ್ದೆಗೆ ಧಿಕ್ಕಾರವಿರಲಿ. ಅದರಿಂದಲೇ ನಮಗೆ ಬುದ್ಧಿ ಇಲ್ಲದಂತಾಯಿತು. ಅಗಲವಾದ ಎದೆಯುಳ್ಳ ಮಹಾಬಾಹುವಾದ ರಾಮನನ್ನು ನಾವು ಇಂದು ಕಾಣದಂತಾಯಿತು!

ಕಥಂ ನಾಮ ಮಹಾಬಾಹುಃ ಸ ತಥಾವಿತಥಕ್ರಿಯಃ ।
ಭಕ್ತಂ ಜನಂ ಪರಿತ್ಯಜ್ಯ ಪ್ರವಾಸಂ ರಾಘವೋ ಗತಃ ॥೫॥

ಮಹಾಬಾಹು, ವಿಫಲವಾಗದ ಕಾರ್ಯಗಳನ್ನೆ ಮಾಡುವವನು, ರಾಮ. ಭಕ್ತಜನರನ್ನು ಪರಿತ್ಯಜಿಸಿ ಹೇಗೆ ಹೊರಟುಹೋದ?

ಯೋ ನಃ ಸದಾ ಪಾಲಯತಿ ಪಿತಾ ಪುತ್ರಾನಿವೌರಸಾನ್ ।
ಕಥಂ ರಘೂಣಾಂ ಸ ಶ್ರೇಷ್ಠಸ್ಯ ಕ್ತ್ವಾ ನೋ ವಿಪಿನಂ ಗತಃ ॥೬॥

ತಂದೆ ತನ್ನ ಔರಸಪುತ್ರರನ್ನು ಕಾಪಾಡುವಂತೆ ರಾಮ ನಮ್ಮನ್ನು ಸದಾ ಪಾಲಿಸುತ್ತಾನೆ. ಅಂಥ ರಘುಕುಲ ಶ್ರೇಷ್ಠನಾದ ರಾಮ ನಮ್ಮನ್ನು ಬಿಟ್ಟು ಹೇಗೆ ಕಾಡಿಗೆ ನಡೆದ?

ಇಹೈವ ನಿಧನಂ ಯಾಮೋ ಮಹಾಪ್ರಸ್ಥಾನಮೇವ ವಾ ।
ರಾಮೇಣ ರಹಿತಾನಾಂ ಹಿ ಕಿಮರ್ಥಂ ಜೀವಿತಂ ಹಿತಮ್ ॥೭॥

ನಾವು ಇಲ್ಲಿಯೆ ಉಪವಾಸವಿದ್ದು ಸಾಯುತ್ತೇವೆ ಅಥವಾ ದೇಹಪಾತವಾಗುವವರೆಗೂ ನಿಲ್ಲದೆ ಉತ್ತರದಿಕ್ಕಿಗೆ ನಡೆದು ಹೋಗೋಣ. ರಾಮನಿಲ್ಲದೆ ಬದುಕುವುದು ಯಾವ ಪ್ರಯೋಜನಕ್ಕೆ ಅನುಕೂಲವಾದೀತು?

ಸಂತಿ ಶುಷ್ಕಾಣಿ ಕಾಷ್ಠಾನಿ ಪ್ರಭೂತಾನಿ ಮಹಾಂತಿ ಚ ।
ತೈಃ ಪ್ರಜ್ವಾಲ್ಯ ಚಿತಾಂ ಸರ್ವೇ ಪ್ರವಿಶಾಮೋऽಥ ಪಾವಕಮ್ ॥೮॥

ಇಲ್ಲಿ ಒಣಗಿದ ದೊಡ್ಡ ಕಟ್ಟಿಗೆಗಳು ಬಹಳ ಇವೆ. ಅವುಗಳಿಂದ ಚಿತೆಯನ್ನು ಉರಿಸಿ ಎಲ್ಲರೂ ಅಗ್ನಿಪ್ರವೇಶ ಮಾಡೋಣ.

ಕಿಂ ವಕ್ಷ್ಯಾಮೋ ಮಹಾಬಾಹುರನಸೂಯಃ ಪ್ರಿಯಂವದಃ ।
ನೀತಃ ಸ ರಾಘವೋऽಸ್ಮಾಭಿರಿತಿ ವಕ್ತುಂ ಕಥಂ ಕ್ಷಮಮ್ ॥೯॥

ಇನ್ನು ಜನರಿಗೆ ನಾವೇನು ಹೇಳಲಿ? ಮಹಾಬಾಹು, ಕೋಪ ಮಾಡದವನು, ಪ್ರಿಯವಾದ ಮಾತನ್ನೇ ಆಡುವವನು. ಇಂಥ ರಾಮನನ್ನು ನಾವು ಕಾಡಿಗೆ ಕಳಿಸಿದೆವು ಎಂದು ಹೇಳಲು ನಮಗೆ ಹೇಗೆ ಸಾಧ್ಯವಾಗುವುದು?

ಸಾ ನೂನಂ ನಗರೀ ದೀನಾ ದೃಷ್ಟ್ವಾಸ್ಮಾನ್ ರಾಘವಂ ವಿನಾ ।
ಭವಿಷ್ಯತಿ ನಿರಾನಂದಾ ಸಸ್ತ್ರೀಬಾಲವಯೋऽಧಿಕಾ ॥೧೦॥

ರಾಮನನ್ನು ಬಿಟ್ಟುಬಂದ ನಮ್ಮನ್ನು ನೋಡಿ ಸ್ತ್ರೀಬಾಲವೃದ್ಧರಿಂದ ಕೂಡಿದ ಅಯೋಧ್ಯಾನಗರಕ್ಕೆ ನೆಮ್ಮದಿಯೆ ಇಲ್ಲವಾಗುವುದು.

ನಿರ್ಯಾತಾಸ್ತೇನ ವೀರೇಣ ಸಹ ನಿತ್ಯಂ ಜಿತಾತ್ಮನಾ ।
ರಹಿತಾಸ್ತೇನ ಚ ಪುನಃ ಕಥಂ ಪಶ್ಯಾಮ ತಾಂ ಪುರೀಮ್ ॥೧೧॥

ಸದಾ ಜಿತೇಂದ್ರಿಯನಾದ ವೀರರಾಮನೊಂದಿಗೆ ಅಯೋಧ್ಯೆಯಿಂದ ಹೊರಟಿದ್ದೆವು. ಈಗ ಅವನನ್ನು ಬಿಟ್ಟು ಪುನಃ ಆ ನಗರವನ್ನು ನಾವು ಹೇಗೆ ನೋಡಲಿ?

ಇತೀವ ಬಹುಧಾ ವಾಚೋ ಬಾಹುಮುದ್ಯಮ್ಯ ತೇ ಜನಾಃ ।
ವಿಲಪಂತಿ ಸ್ಮ ದುಃಖಾರ್ತಾ ವಿವತ್ಸಾ ಇವ ಧೇನವಃ ॥೧೨॥

ಹೀಗೆ ಕೈಯೆತ್ತಿ ಆ ಜನರು ನಾನಾ ಬಗೆಯಾಗಿ ಕರುಗಳಿಲ್ಲದ ಹಸುಗಳಂತೆ ದುಃಖಿತರಾಗಿ ವಿಲಾಪದ ಮಾತುಗಳನ್ನು ಆಡಿದರು.

ತತೋ ಮಾರ್ಗಾನುಸಾರೇಣ ಗತ್ವಾ ಕಿಂಚಿತ್ ಕ್ಷಣಂ ಪುನಃ ।
ಮಾರ್ಗನಾಶಾದ್ವಿಷಾದೇನ ಮಹತಾ ಸಮಭಿಪ್ಲುತಾಃ ॥೧೩॥

ಒಂದು ಮಾರ್ಗವನ್ನು ಹಿಡಿದು ಕ್ಷಣಕಾಲ ಸ್ವಲ್ಪ ನಡೆದರೂ ಮುಂದೆ ಆ ಮಾರ್ಗ ಕಾಣದಿದ್ದಾಗ ಇನ್ನೂ ಹೆಚ್ಚಿನ ವಿಷಾದಕ್ಕೊಳಗಾದರು.

ರಥಸ್ಯ ಮಾರ್ಗನಾಶೇನ ನ್ಯವರ್ತಂತ ಮನಸ್ವಿನಃ ।
ಕಿಮಿದಂ ಕಿಂ ಕರಿಷ್ಯಾಮೋ ದೈವೇನೋಪಹತಾ ಇತಿ ॥೧೪॥

ಒಳ್ಳೆಯ ಮನಸ್ಸಿನ ಆ ಪೌರರು ತಾವು ಕಂಡು ಹಿಡಿದು ನಡೆದ ರಥದ ಮಾರ್ಗ ಮುಂದೆ ಕಾಣದಿದ್ದಾಗ ಹಿಂತಿರುಗಿದರು 'ಏನಿದು? ಈಗ ನಾವೇನು ಮಾಡೋಣ? ದೈವವೆ ನಮ್ಮನ್ನು ಪೀಡಿಸುತ್ತಿದೆ' ಎಂದರು.

ತತೋ ಯಥಾಗತೇನೈವ ಮಾರ್ಗೇಣ ಕ್ಲಾಂತಚೇತಸಃ ।
ಅಯೋಧ್ಯಾಮಗಮನ್ ಸರ್ವೇ ಪುರೀಂ ವ್ಯಥಿತಸಜ್ಜನಾಮ್ ॥೧೫॥

ಚೈತನ್ಯ ಉಡುಗಿದ ಆ ಪೌರರು ಎಲ್ಲರೂ ಬಂದ ದಾರಿಯಿಂದಲೇ, ವ್ಯಥೆ-ಗೊಂಡ ಸುಜನರಿಂದಲೆ ತುಂಬಿದ ಅಯೋಧ್ಯಾನಗರಕ್ಕೆ ಹಿಂತಿರುಗಿದರು.

ಆಲೋಕ್ಯ ನಗರೀಂ ತಾಂ ಚ ಕ್ಷಯವ್ಯಾಕುಲಮಾನಸಾಃ ।
ಅವರ್ತಯಂತ ತೇಕಶ್ರೂಣಿ ನಯನೈಃ ಶೋಕಪೀಡಿತೈಃ ॥೧೬॥

ತಮ್ಮ ಮನೆಯ ಬಗ್ಗೆಯೇ ಬೇಸರ ತುಂಬಿದ ಮನಸಿನಿಂದ ಹಿಂತಿರುಗಿ ಬಂದು ಆ ಪೌರರು ನಗರವನ್ನು ನೋಡಿ ಶೋಕಾರ್ತವಾದ ಕಣ್ಣುಗಳಿಂದ ಕಂಬನಿ ಸುರಿಸಿದರು.

ಏಷಾ ರಾಮೇಣ ನಗರೀ ರಹಿತಾ ನಾತಿಶೋಭತೇ ।
ಆಪಗಾ ಗರುಡೇನೇವ ಹ್ರದಾದುದ್ಧೃತಪನ್ನಗಾ ॥೧೭॥

ಗರುಡನು ಹಾವನ್ನೆತ್ತಿಕೊಂಡು ಹೋದರೆ ಮಡು, ಯಮುನೆಯ ಮಡುವಿನಂತೆ, ಶೋಭಿಸುತ್ತದೆ. ರಾಮನಿಲ್ಲದ್ದರಿಂದ ಹಾಗೆ ಚೆನ್ನಾಗಿ ಅಯೋಧ್ಯೆ ಶೋಭಿಸುತ್ತಿಲ್ಲ.

ಇದು ವ್ಯತಿರೇಕ ದೃಷ್ಟಾಂತ.

ಅನ್ವಯದೃಷ್ಟಾಂತವೆಂದಿಟ್ಟುಕೊಳ್ಳುವುದಾದರೆ ಹೀಗೆ ಹೇಳಬೇಕು—
ಮಡು ಎಂದರೆ ಅದರಲ್ಲಿ ಹಾವಿರಬೇಕು. ಹಾವುಗಳಿದ್ದರೇ ಮಡುವಿಗೆ ಶೋಭೆ. ಹಾವುಗಳನ್ನೆಲ್ಲ ಗರುಡನೆತ್ತಿಕೊಂಡು ಹೋದರೆ ಮಡು ಶೋಭಿಸುವುದಿಲ್ಲ. ಹಾಗೇ ರಾಮನಿಲ್ಲದ್ದರಿಂದ ಅಯೋಧ್ಯೆ ಶೋಭಿಸುವುದಿಲ್ಲ. ಶ್ರೀಸತ್ಯಧರ್ಮತೀರ್ಥರು ಇಲ್ಲಿ ಎರಡೂ ದೃಷ್ಟಾಂತಗಳಿರಬಹುದೆಂದಿದ್ದಾರೆ.

ಚಂದ್ರಹೀನಮಿವಾಕಾಶಂ ತೋಯಹೀನಮಿವಾರ್ಣವಮ್ ।
ಅಪಶ್ಯನ್ನಿಹತಾನಂದಂ ನಗರಂ ತೇ ವಿಚೇತಸಃ ॥೧೮॥

ಚಂದ್ರನಿಲ್ಲದ ಆಕಾಶದಂತೆ ನೀರಿಲ್ಲದ ಸಮುದ್ರದಂತೆ ರಾಮನಿಲ್ಲದ್ದರಿಂದ ಸಂತೋಷವೇನೂ ಇಲ್ಲದಂತಾಗಿರುವ ಅಯೋಧ್ಯೆಯನ್ನು ನಿರುತ್ಸಾಹಿಗಳಾದ ಪೌರರು ಕಂಡರು.

ಇಲ್ಲಿ ಚಂದ್ರನಿಲ್ಲದ ಆಕಾಶದಂತೆ ಎಂದು 'ನೀರಿಲ್ಲದ ಸಮುದ್ರದಂತೆ' ಎಂದು ಅಭೂತೋಪಮೆಗಳು.

ತೇ ತಾನಿ ವೇಶ್ಮಾನಿ ಮಹಾಧನಾನಿ
ದುಃಖೇನ ದುಃಖೋಪಹತಾ ವಿಶಂತಃ ।
ನೈವ ಪ್ರಜಜ್ಞುಃ ಸ್ವಜನಂ ಪರಂ ವಾ
ನಿರೀಕ್ಷಮಾಣಾಃ ಪ್ರವಿನಷ್ಟಹರ್ಷಾಃ ॥೧೯॥

ದುಃಖದಿಂದ ನೊಂದ, ನಿರುತ್ಸಾಹಗೊಂಡ ಆ ಪೌರರು ಮಹಾಸಂಪದ್ಭರಿತವಾದ ತಮ್ಮ ಮನೆಗಳನ್ನು ಪ್ರವೇಶಿಸಿ ನೋಡಿದರೆ ಅಲ್ಲಿರುವವರು ತಮ್ಮವರೆ ಪರಕೀಯರೆ ಎನ್ನುವುದನ್ನೂ ತಿಳಿಯಲು ಶಕ್ತರಾಗದೆ ಹೋದರು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ನಲವತ್ತೇಳನೇ ಸರ್ಗ ಮುಗಿಯಿತು.

ಅಷ್ಟಚತ್ವಾರಿಂಶಃ ಸರ್ಗಃ

ಸರ್ಗ – 48

ಪೌರಾಂಗನೆಯರ ವಿಲಾಪ

ತೇಷಾಮೇವಂ ವಿಷಣ್ಣಾನಾಂ ಪೀಡಿತಾನಾಮತೀವ ಚ ।
ಬಾಷ್ಪವಿಪ್ಲುತನೇತ್ರಾಣಾಂ ಸಶೋಕಾನಾಂ ಮುಮೂರ್ಷಯಾ ॥೧॥

ಅನುಗಮ್ಯ ನಿವೃತ್ತಾನಾಂ ರಾಮಂ ನಗರವಾಸಿನಾಮ್ ।
ಉದ್ಗತಾನೀವ ಸತ್ತ್ವಾನಿ ಬಭೂವುರಮನಸ್ವಿನಾಮ್ ॥೨॥

ಆ ಪೌರರು ವಿಷಣ್ಣರು, ಅತ್ಯಂತ ಪೀಡಿತರು. ಕಣ್ಣೀರಿಂದ ಅವರ ಕಣ್ಣುಗಳು ತುಂಬಿದ್ದವು. ಶೋಕದಿಂದ ಅವರು ಮರಣವನ್ನೇ ಬಯಸುವಂತಾಯಿತು. ಹೀಗೆ ರಾಮನನ್ನು ಹಿಂಬಾಲಿಸಿ ಹೋಗಿ ಹಿಂತಿರುಗಿ ಬಂದ ನಗರವಾಸಿಗಳು ಮನಸಿನ ಸ್ವಾಸ್ಥ್ಯವನ್ನು ಕಳೆದುಕೊಂಡು ನಿರ್ಜೀವರಂತಾದರು.

ಸ್ವಂ ಸ್ವಂ ನಿಲಯಮಾಗಮ್ಯ ಪುತ್ರದಾರೈಃ ಸಮಾವೃತಾಃ ।
ಅಶ್ರೂಣಿ ಮುಮುಚುಃ ಸರ್ವೇ ಬಾಷ್ಪೇಣ ಪಿಹಿತಾನನಾಃ ॥೩॥

ತಮ್ಮ ತಮ್ಮ ಮನೆಗಳಿಗೆ ಬಂದು ಪೌರರು ಹೆಂಡತಿ ಮಕ್ಕಳೊಡನೆ ಎಲ್ಲರೂ ಕಂಬನಿ ಸುರಿಸಿದರು. ಅವರ ಮುಖ ಕಣ್ಣೀರಿನಿಂದಲೆ ಆವೃತವಾಯಿತು.

ನ ಚಾಹೃಷ್ಯನ್ನ ಚಾಮೋದನ್ ವಣಿಜೋ ನ ಪ್ರಸಾರಯನ್ ।
ನ ಚಾಶೋಭಂತ ಪಣ್ಯಾನಿ ನಾಪಚನ್ ಗೃಹಮೇಧಿನಃ ॥೪॥

ಪೌರರು ಉತ್ಸಾಹ ಪಡಲಿಲ್ಲ. ಸಂತೋಷಪಡಲಿಲ್ಲ. ವರ್ತಕರು ವ್ಯಾಪಾರದ ಸರಕುಗಳನ್ನು ಹರಡಲಿಲ್ಲ. ಹರಡಿದ ಸರಕುಗಳೂ ಗ್ರಾಹಕರನ್ನು ಆಕರ್ಷಿಸುವಂತೆ ಶೋಭಿಸಲಿಲ್ಲ. ಗೃಹಸ್ಥರು ಅನ್ನಪಾಕ ಮಾಡಲಿಲ್ಲ.

ನಷ್ಟಂ ದೃಷ್ಟ್ವಾ ನಾಭ್ಯನಂದನ್ ವಿಪುಲಂ ವಾ ಧನಾಗಮಮ್ ।
ಪುತ್ರಂ ಪ್ರಥಮಜಂ ಲಬ್ಧ್ವಾ ಜನನೀ ನಾಭ್ಯನಂದತ ॥೫॥

ಕಳೆದುಹೋದ ಸಂಪತ್ತು ದೊರೆತರೂ ಬಹಳ ಸಂಪತ್ತು ಬಂದರೂ ಪೌರರು ಅದಕ್ಕೆ ಸಂತೋಷಪಡಲಿಲ್ಲ. ಚೊಚ್ಚಲ ಗಂಡುಮಗುವನ್ನು ಹಡೆದರೂ ತಾಯಿ ಸಂತಸಪಡಲಿಲ್ಲ.

ಗೃಹೇ ಗೃಹೇ ರುದಂತ್ಯಶ್ಚ ಭರ್ತಾರಂ ಗೃಹಮಾಗತಮ್ ।
ವ್ಯಗರ್ಹಯಂತ ದುಃಖಾರ್ತಾ ವಾಗ್ಭಿಸ್ತೋತ್ರೈರಿವ ದ್ವಿಪಾನ್ ॥೬॥

ಮನೆಮನೆಗಳಲ್ಲಿ ಹೆಂಗಸರು ಕಣ್ಣೀರಿಟ್ಟರು. ದುಃಖಾರ್ತರಾಗಿ ರಾಮನನ್ನು ಕರೆತರದೆ ಮನೆಗೆ ಬಂದ ಗಂಡಂದಿರನ್ನು, ಆನೆಯನ್ನು ಅಂಕುಶದಿಂದ ತಿವಿಯುವಂತೆ, ಮಾತುಗಳಿಂದ ಬಯ್ದರು.

ಕಿಂ ನು ತೇಷಾಂ ಗೃಹೈಃ ಕಾರ್ಯಂ ಕಿಂ ದಾರೈಃ ಕಿಂ ಧನೇನ ವಾ ।
ಪುತ್ರೈರ್ವಾ ಕಿಂ ಸುಖೈರ್ವಾಪಿ ಯೇ ನ ಪಶ್ಯಂತಿ ರಾಘವಮ್ ॥೭॥

ಹೆಂಗಸರು ಗಂಡಂದಿರಿಗೆ ಹೇಳಿದರು— 'ಯಾರು ರಾಮನನ್ನು ನೋಡಲಿಲ್ಲವೋ ಅವರಿಗೆ ಮನೆಗಳಿಂದ ಏನು ಪ್ರಯೋಜನ. ಮಡದಿಯರಿಂದೇನು ಪ್ರಯೋಜನ. ಹಣದಿಂದ ಏನು ಪ್ರಯೋಜನ? ಮಕ್ಕಳಿಂದೇನು ಪ್ರಯೋಜನ? ಸುಖಭೋಗಗಳಿಂದೇನು ಪ್ರಯೋಜನ?' ಎಂದು.

ಏಕಃ ಸತ್ಪುರುಷೋ ಲೋಕೇ ಲಕ್ಷ್ಮಣಃ ಸಹ ಸೀತಯಾ ।
ಯೋಽನುಗಚ್ಛತಿ ಕಾಕುತ್ಸ್ಥಂ ರಾಮಂ ಪರಿಚರನ್ ವನೇ ॥೮॥

'ಲೋಕದಲ್ಲಿ ಸತ್ಪುರುಷನೆಂದರೆ ಲಕ್ಷ್ಮಣನೊಬ್ಬನೆ. ಸೀತಾ ಸಮೇತನಾದ ರಾಮನನ್ನು ಅರಣ್ಯದಲ್ಲಿ ಸೇವೆಮಾಡುತ್ತ ಹಿಂಬಾಲಿಸಿ ಹೋಗುತ್ತಾನೆ.'

ಆಪಗಾಃ ಕೃತಪುಣ್ಯಾಸ್ತಾಃ ಪದ್ಮಿನ್ಯಶ್ಚ ಸರಾಂಸಿ ಚ ।
ಏಷು ಸ್ನಾಸ್ಯತಿ ಕಾಕುತ್ಸ್ಥೋ ವಿಗಾಹ್ಯ ಸಲಿಲಂ ಶುಚಿ ॥೯॥

'ಸರ್ಪಗಳುಳ್ಳ ನದಿಗಳು ಮತ್ತು ಸರೋವರಗಳು ಪುಣ್ಯ ಮಾಡಿರುತ್ತವೆ. ಏಕೆಂದರೆ ಅವುಗಳಲ್ಲಿ ರಾಮನು ಶುಚಿಯಾದ ಜಲದಲ್ಲಿ ಮುಳುಗಿ ಸ್ನಾನ ಮಾಡುತ್ತಾನೆ. ನೀವೇನು ಪುಣ್ಯ ಮಾಡಿರುವಿರಿ?' ಎಂದು.

'ಪದ್ಮಿನ್ಯಃ' ಎಂದು ಸ್ತ್ರೀಲಿಂಗ ಶಬ್ದವಾದ್ದರಿಂದ ನದಿಗಳಿಗೆ ವಿಶೇಷಣ. ನದಿಗಳಲ್ಲಿ ಎಲ್ಲಕಡೆ ಪದ್ಮಗಳಿಲ್ಲ. 'ಸರಾಂಸಿ ಚ' ಎಂದು ಹೇಳಿದ ಸರೋವರಗಳಲ್ಲಿಯೇ ಹೆಚ್ಚಾಗಿ ಕಮಲಗಳಿರುತ್ತವೆ. ಅದರಿಂದ 'ಪದ್ಮ' ಎಂದರೆ ಇಲ್ಲಿ ಸರ್ಪ. 'ಪದ್ಮಂ ಸ್ಯಾತ್ ಪನ್ನಗೇ' ಎಂದು ವಿಶ್ವಕೋಶವಿದೆ ಎಂದು ಸತ್ಯಧರ್ಮೀಯದಲ್ಲಿದೆ.

ಶೋಭಯಿಷ್ಯಂತಿ ಕಾಕುತ್ಸ್ಥಮಟವ್ಯೋ ರಮ್ಯಕಾನನಾಃ ।
ಆಪಗಾಶ್ಚ ಮಹಾನೂಪಾಃ ಸಾನುಮಂತಶ್ಚ ಪರ್ವತಾಃ ॥೧೦॥

ರಮ್ಯವಾದ ಮರಗಿಡ ಸಮೂಹವುಳ್ಳ ಅರಣ್ಯಗಳೂ ನದಿಗಳೂ ಬಹಳ ನೀರಿರುವ ಪ್ರದೇಶಗಳೂ ತಪ್ಪಲುಗಳಿಂದ ಕೂಡಿದ ಬೆಟ್ಟಗಳೂ ರಾಮನಿಗೆ ಅಲಂಕಾರವಾಗುತ್ತವೆ.

ಕಾನನಂ ವಾಪಿ ಶೈಲಂ ವಾ ಯಂ ರಾಮೋಽಭಿಗಮಿಷ್ಯತಿ ।
ಪ್ರಿಯಾತಿಥಿಮಿವ ಪ್ರಾಪ್ತಂ ನೈನಂ ಶಕ್ಷ್ಯಂತ್ಯನರ್ಚಿತುಮ್ ॥೧೧॥

ಅರಣ್ಯವಿರಲಿ ಬೆಟ್ಟವಿರಲಿ ರಾಮನು ಎಲ್ಲಿಗೆ ಹೋಗುವನೋ ಆ ಪ್ರದೇಶಗಳು ಪ್ರಿಯ ಅತಿಥಿಯಂತೆ ತಮ್ಮಲ್ಲಿಗೆ ಬರುವ ರಾಮನನ್ನು ಸತ್ಕರಿಸದಿರಲಾರವು.

ವಿಚಿತ್ರಕುಸುಮಾಪೀಡಾ ಬಹುಮಂಜರಿಧಾರಿಣಃ ।
ರಾಘವಂ ದರ್ಶಯಿಷ್ಯಂತಿ ನಗಾ ಭ್ರಮರಶಾಲಿನಃ ॥೧೨॥

ವಿಚಿತ್ರ ಪುಷ್ಪಗಳನ್ನು ಮುಡಿದು, ಬಹು ಪುಷ್ಪಗುಚ್ಛಗಳನ್ನು ಹಿಡಿದು, ದುಂಬಿಗಳಿಂದ ಕೂಡಿದ ವೃಕ್ಷಗಳು ರಾಮನಿಗೆ ತಮ್ಮ ಸೊಬಗನ್ನು ತೋರುತ್ತವೆ.

ಅಕಾಲೇ ಚಾಪಿ ಮುಖ್ಯಾನಿ ಪುಷ್ಪಾಣಿ ಚ ಫಲಾನಿ ಚ ।
ದರ್ಶಯಿಷ್ಯಂತ್ಯನುಕ್ರೋಶಾದ್ಗಿರಯೋ ರಾಮಮಾಗತಮ್ ॥೧೩॥

ಪರ್ವತಗಳು ರಾಮ ಬಂದಾಗ ಆದರದಿಂದ ಅಕಾಲದಲ್ಲಿಯೂ ಕೂಡ ಶ್ರೇಷ್ಠವಾದ ಹೂಹಣ್ಣುಗಳನ್ನು ತೋರಿಸುತ್ತವೆ.

ಪ್ರಸ್ರವಿಷ್ಯಂತಿ ತೋಯಾನಿ ವಿಮಲಾನಿ ಮಹೀಧರಾಃ ।
ವಿದರ್ಶಯಂತೋ ವಿವಿಧಾನ್ ಭೂಯಶ್ಚಿತ್ರಾಂಶ್ಚ ನಿರ್ಝರಾನ್ ॥೧೪॥

ಬೆಟ್ಟಗಳು ಸುಂದರವಾದ ನಾನಾ ಬಗೆಯ ಜಲಪಾತಗಳನ್ನು ಶ್ರೀರಾಮನಿಗೆ ತೋರಿಸುತ್ತ ಸ್ವಚ್ಛ ನೀರನ್ನು ನೀಡುತ್ತವೆ.

ಪಾದಪಾಃ ಪರ್ವತಾಗ್ರೇಷು ರಮಯಿಷ್ಯಂತಿ ರಾಘವಮ್ ।
ಯತ್ರ ರಾಮೋ ಭಯಂ ನಾತ್ರ ನಾಸ್ತಿ ತತ್ರ ಪರಾಭವಃ ॥೧೫॥

ಬೆಟ್ಟದ ತುದಿಗಳಲ್ಲಿ ವೃಕ್ಷಗಳು ರಾಮನನ್ನು ಸಂತೋಷಪಡಿಸುತ್ತವೆ. ಆಲ್ಲಿಗೆ ನಾವು ಹೋಗೋಣ. ರಾಮನಿರುವಲ್ಲಿ ಭಯವಿಲ್ಲ ಪರಾಭವವೂ ಇಲ್ಲ.

ಸ ಹಿ ಶೂರೋ ಮಹಾಬಾಹುಃ ಪುತ್ರೋ ದಶರಥಸ್ಯ ಚ ।
ಪುರಾ ಭವತಿ ನೋ ದೂರಾದನುಗಚ್ಛಾಮ ರಾಘವಮ್ ॥೧೬॥

ದಶರಥನ ಪುತ್ರ ರಾಮನು ಮಹಾಬಾಹು, ಶೂರ. ಅವನು ನಮಗೆ ಸಮೀಪದಲ್ಲಿಯೇ ಇರುತ್ತಾನೆ, ಅವನನ್ನು ಹಿಂಬಾಲಿಸಿ ಹೋಗೋಣ.

ಪಾದಚ್ಛಾಯಾ ಸುಖಾ ಭರ್ತುಸ್ತಾದೃಶಸ್ಯ ಮಹಾತ್ಮನಃ ।
ಸ ಹಿ ನಾಥೋ ಜನಸ್ಯಾಸ್ಯ ಸ ಗತಿಃ ಸ ಪರಾಯಣಮ್ ॥೧೭॥

ಅಂಥ ಮಹಾತ್ಮನ ಪಾದದ ನೆರಳು ನಮಗೆ ಸುಖಕರವಾಗುತ್ತದೆ. ನಮಗೆ ಅವನೆ ರಕ್ಷಕ. ಅವನೆ ಗತಿ, ಅವನೇ ಮುಖ್ಯ ಆಶ್ರಯ.

ವಯಂ ಪರಿಚರಿಷ್ಯಾಮಃ ಸೀತಾಂ ಯೂಯಂ ತು ರಾಘವಮ್ ।
ಇತಿ ಪೌರಸ್ತ್ರಿಯೋ ಭರ್ತೄನ್ ದುಃಖಾರ್ತಾಸ್ತತ್ತದಬ್ರುವನ್ ॥೧೮॥

ನಾವು ಸೀತೆಯ ಸೇವೆ ಮಾಡುವೆವು. ನೀವು ರಾಮನ ಸೇವೆ ಮಾಡಿರಿ. ಹೀಗೆ ಪೌರಾಂಗನೆಯರು ದುಃಖಾರ್ತರಾಗಿ ಗಂಡಂದಿರಿಗೆ ಹೇಳಿದರು.

ಯುಷ್ಮಾಕಂ ರಾಘವೋಽರಣ್ಯೇ ಯೋಗಕ್ಷೇಮಂ ವಿಧಾಸ್ಯತಿ ।
ಸೀತಾ ನಾರೀಜನಸ್ಯಾಸ್ಯ ಯೋಗಕ್ಷೇಮಂ ಕರಿಷ್ಯತಿ ॥೧೯॥

ನಿಮ್ಮ ಯೋಗಕ್ಷೇಮವನ್ನು ಅರಣ್ಯದಲ್ಲಿ ರಾಮನು ಮಾಡುತ್ತಾನೆ. ನಮ್ಮ ಯೋಗಕ್ಷೇಮವನ್ನು ಸೀತೆ ನೋಡಿಕೊಳ್ಳುತ್ತಾಳೆ.

ಕೋ ನ್ವನೇನಾಪ್ರತೀತೇನ ಸೋತ್ಕಂಠಿತಜನೇನ ಚ ।
ಸಂಪ್ರೀಯೇತಾಮನೋಜ್ಞೇನ ವಾಸೇನ ಹೃತಚೇತಸಾ ॥೨೦॥

ವಾಸಕ್ಕೆ ಯೋಗ್ಯವಲ್ಲದ, ಉದ್ವಿಗ್ನರಾದ ಜನರಿಂದಲೇ ತುಂಬಿರುವ, ಮನಸಿಗೆ ಸೊಗಸಲಾರದ, ಮನಸಿನ ಸ್ವಾಸ್ಥ್ಯವನ್ನು ಕೆಡಿಸುವ, ರಾಮನಿಲ್ಲದ ಈ ನಗರವಾಸ ಯಾರಿಗೆ ಮುದ ನೀಡುವುದು?

ಕೈಕೇಯ್ಯಾ ಯದಿ ಚೇದ್ರಾಜ್ಯಂ ಸ್ಯಾದಧರ್ಮ್ಯಮನಾಥವತ್ ।
ನ ಹಿ ನೋ ಜೀವಿತೇನಾರ್ಥಃ ಕುತಃ ಪುತ್ರೈಃ ಕುತೋ ಧನೈಃ ॥೨೧॥

ಕೈಕೇಯಿಗೇ ರಾಜ್ಯವೆಂದಾದರೆ ಅದು ಧರ್ಮಾತೀತವಾಗುತ್ತದೆ. ಅನಾಥ-

ವಾಗುತ್ತದೆ. ನಮಗೆ ನಮ್ಮ ಜೀವನದಿಂದಲೇ ಪ್ರಯೋಜನವಿಲ್ಲದಂತಾಗುತ್ತದೆ. ಇನ್ನು ಮಕ್ಕಳಿಂದೇನು ಧನಸಂಪತ್ತಿನಿಂದೇನು?

ಯಯಾ ಪುತ್ರಶ್ಚ ಭರ್ತಾ ಚ ತ್ಯಕ್ತಾವೈಶ್ವರ್ಯಕಾರಣಾತ್ ।
ಕಂ ಸಾ ಪರಿಹರೇದನ್ಯಂ ಕೈಕೇಯೀ ಕುಲಪಾಂಸನೀ ॥೨೨॥

ಕೇವಲ ಐಶ್ವರ್ಯಕ್ಕಾಗಿ ಮಗನನ್ನೂ ಗಂಡನನ್ನೂ ತ್ಯಜಿಸಿದ ಆ ಕೈಕೇಯಿ ಬೇರೆ ಯಾರನ್ನು ತ್ಯಜಿಸದೆ ಬಿಡುತ್ತಾಳೆ? ಕುಲವನ್ನೇ ಕಳಂಕಿತವಾಗಿ ಮಾಡುವವಳು.

ಕೈಕೇಯ್ಯಾ ನ ವಯಂ ರಾಜ್ಯೇ ಭೃತಕಾ ನಿವಸೇಮ ಹಿ ।
ಜೀವಂತ್ಯಾ ಜಾತು ಜೀವಂತ್ಯಃ ಪುತ್ರೈರಪಿ ಶಪಾಮಹೇ ॥೨೩॥

ಕೈಕೇಯಿ ಬದುಕಿರುವಾಗ ಅವಳ ರಾಜ್ಯದಲ್ಲಿ ಕೂಲಿಯಾಳುಗಳಾಗಿ ಬದುಕಿ ನಾವು ವಾಸಮಾಡಲಾರೆವು. ಮಕ್ಕಳ ಮೇಲೆ ಆಣೆ ಮಾಡಿ ನಾವು ಹೇಳುತ್ತೇವೆ.

ಯಾ ಪುತ್ರಂ ಪಾರ್ಥಿವೇಂದ್ರಸ್ಯ ಪ್ರವಾಸಯತಿ ನಿರ್ಘೃಣಾ ।
ಕಸ್ತಾಂ ಪ್ರಾಪ್ಯ ಸುಖಂ ಜೀವೇದಧರ್ಮ್ಯಾಂ ದುಷ್ಟಚಾರಿಣೀಮ್ ॥೨೪॥

ಮಹಾರಾಜನ ಪುತ್ರನನ್ನು ನಿರ್ದಯತೆಯಿಂದ ಕಾಡಿಗೆ ಅಟ್ಟುವ ದುರ್ನಡತೆ-ಯವಳಾದ ಆ ಪಾಪಿ ಕೈಕೇಯಿಯ ಆಶ್ರಯದಲ್ಲಿ ಯಾರು ಸುಖವಾಗಿ ಬದುಕಿಯಾನು?

ಉಪದ್ರುತಮಿದಂ ಸರ್ವಮನಾಲಂಬಮನಾಯಕಮ್ ।
ಕೈಕೇಯ್ಯಾ ಹಿ ಕೃತೇ ಸರ್ವಂ ವಿನಾಶಮುಪಯಾಸ್ಯತಿ ॥೨೫॥

ಈ ರಾಜ್ಯ ಉಪದ್ರವಕ್ಕೀಡಾಗುತ್ತದೆ, ನಿರಾಶ್ರಿತ, ಅನಾಯಕವಾಗುತ್ತದೆ. ಕೈಕೇಯಿಯಿಂದಾಗಿ ಎಲ್ಲವೂ ನಾಶ ಹೊಂದುತ್ತದೆ.

ನ ಹಿ ಪ್ರವ್ರಜಿತೇ ರಾಮೇ ಜೀವಿಷ್ಯತಿ ಮಹೀಪತಿಃ ।
ಮೃತೇ ದಶರಥೇ ವ್ಯಕ್ತಂ ವಿಲಾಪಸ್ತದನಂತರಮ್ ॥೨೬॥

ರಾಮ ಹೊರಟುಹೋದರೆ ದಶರಥ ಜೀವಿಸಲಾರ. ಅವನು ಮೃತನಾದಾಗ ರಾಜ್ಯದ ನಾಶ ನಿಶ್ಚಿತ.

ತೇ ವಿಷಂ ಪಿಬತಾಲೋಡ್ಯ ಕ್ಷೀಣಪುಣ್ಯಾಃ ಸುದುರ್ಗತಾಃ ।
ರಾಘವಂ ವಾನುಗಚ್ಛಧ್ವಮಶ್ರುತಿಂ ವಾಪಿ ಗಚ್ಛತ ॥೨೭॥

ಪುಣ್ಯಹೀನರು ದುರ್ಗತಿಗೆ ಈಡಾಗುವವರು ನೀವು 'ಆಲೋಡ್ಯ' ಚೆನ್ನಾಗಿ ಆಲೋಚಿಸಿ ರಾಮನನ್ನು ಹಿಂಬಾಲಿಸಿ ಹೊರಟುಹೋಗಿರಿ. 'ಅಶ್ರುತಿಂ' ಕೈಕೇಯಿಯ ಹೆಸರು ಕೂಡ ಕೇಳಿಬಾರದ ದೇಶಕ್ಕಾದರೂ ನಡೆಯಿರಿ. ಎರಡೂ ಶಕ್ಯವಿಲ್ಲದಿದ್ದರೆ ವಿಷಪಾನ ಮಾಡಿರಿ.

ಮಿಥ್ಯಾ ಪ್ರವ್ರಾಜಿತೋ ರಾಮಃ ಸಸೀತಃ ಸಹಲಕ್ಷ್ಮಣಃ ।
ಭರತೇ ಸಂನಿಸೃಷ್ಟಾಃ ಸ್ಮಃ ಸೌನಿಕೇ ಪಶವೋ ಯಥಾ ॥೨೮॥

ವಂಚನೆಯಿಂದ ರಾಮನನ್ನು ಸೀತಾ ಲಕ್ಷ್ಮಣ ಸಮೇತ ಕಾಡಿಗೆ ಅಟ್ಟಿದ್ದರಿಂದ ಪಶುಗಳನ್ನು ಕಟುಕನ ಕೈಗೆ ಒಪ್ಪಿಸಿದಂತೆ ನಮ್ಮನ್ನು ಆ ಕೈಕೇಯಿಯ ವಶದಲ್ಲಿರುವ ಭರತನಿಗೆ ಒಪ್ಪಿಸಿದಂತಾಯಿತು.

ಪೂರ್ಣಚಂದ್ರಾನನಃ ಶ್ಯಾಮೋ ಗೂಢಜತ್ರುರರಿಂದಮಃ ।
ಆಜಾನುಬಾಹುಃ ಪದ್ಮಾಕ್ಷೋ ರಾಮೋ ಲಕ್ಷ್ಮಣಪೂರ್ವಜಃ ॥೨೯॥

ಲಕ್ಷ್ಮಣನಣ್ಣ ರಾಮ ಪೂರ್ಣಚಂದ್ರನಂಥ ಮುಖದವನು. ಶ್ಯಾಮಲ ವರ್ಣ-ದವನು. ಹುದುಗಿದ ಕೊರಳೆಲುಬಿನವನು. ಶತ್ರು ನಾಶಕನು. ಆಜಾನುಬಾಹು ಕಮಲಾಕ್ಷ.

ಪೂರ್ವಾಭಿಭಾಷೀ ಮಧುರಃ ಸತ್ಯವಾದೀ ಮಹಾಬಲಃ ।
ಸೌಮ್ಯಶ್ಚ ಸರ್ವಲೋಕಸ್ಯ ಚಂದ್ರವತ್ ಪ್ರಿಯದರ್ಶನಃ ॥೩೦॥

ಬೇರೆಯವರು ತನ್ನನ್ನು ಮೊದಲು ಮಾತನಾಡಿಸಬೇಕೆಂಬ ಬಿಗುಮಾನವಿಲ್ಲದೆ ತಾನೇ ಮೊದಲಿಗೆ ಮಾತನಾಡುವವನು. ಸವಿಮಾತಾಡುವವನು ಸತ್ಯವಾದಿ, ಮಹಾಬಲಿ. ಸೌಮ್ಯಸ್ವಭಾವದವನು. ಎಲ್ಲರಿಗೂ ಚಂದ್ರನಂತೆ ಪ್ರಿಯನಾಗಿ ಕಾಣುವವನು.

ನೂನಂ ಪುರುಷಶಾರ್ದೂಲೋ ಮತ್ತಮಾತಂಗವಿಕ್ರಮಃ ।
ಶೋಭಯಿಷ್ಯತ್ಯರಣ್ಯಾನಿ ವಿಚರನ್ ಸ ಮಹಾರಥಃ ॥೩೧॥

ಮದಿಸಿದ ಆನೆಯಂತೆ ಹೆಜ್ಜೆ ಇಡುವ ಮಹಾರಥನಾದ ಪುರುಷೋತ್ತಮ ರಾಮ ಅರಣ್ಯದಲ್ಲಿ ಸಂಚಾರ ಮಾಡುವುದರಿಂದ ಅರಣ್ಯಕ್ಕೆ ಶೋಭೆ ತಂದು ಕೊಡುತ್ತಾನೆ.

ತಾಸ್ತಥಾ ವಿಲಪಂತ್ಯಸ್ತು ನಗರೇ ನಾಗರಸ್ತ್ರಿಯಃ ।
ಚುಕ್ರುಶುರ್ದುಃಖಸಂತಪ್ತಾ ಮೃತ್ಯೋರಿವ ಭಯಾಗಮೇ ॥೩೨॥

ನಗರದಲ್ಲಿ ಪೌರಾಂಗನೆಯರು ದುಃಖದಿಂದ ಬೆಂದು ಗೋಳಿಡುತ್ತಾ ಮರಣ ಭಯವೇ ಬಂದಿತೆಂಬಂತೆ ಕೂಗಿಕೊಂಡರು.

ಇತ್ಯೇವಂ ವಿಲಪಂತೀನಾಂ ಸ್ತ್ರೀಣಾಂ ವೇಶ್ಮಸು ರಾಘವಮ್ ।
ಜಗಾಮಾಸ್ತಂ ದಿನಕರೋ ರಜನೀ ಚಾಭ್ಯವರ್ತತ ॥೩೩॥

ರಾಮನ ವಿಷಯವಾಗಿ ಮನೆಗಳಲ್ಲಿ ಸ್ತ್ರೀಯರು ಗೋಳಿಡುವುದನ್ನು ಕಂಡು ಸಹಿಸಲಾರದೆ ಸೂರ್ಯನೂ ಬೇಗನೆ ಅಸ್ತಂಗತನಾದ. ರಾತ್ರಿಯಾಯಿತು.

ನಷ್ಟಜ್ವಲನಸಂತಾಪಾ ಪ್ರಶಾಂತಾಧ್ಯಾಯಸತ್ಕಥಾ ।
ತಿಮಿರೇಣಾಭಿಲಿಪ್ತೇವ ಸಾ ತದಾ ನಗರೀ ಬಭೌ ॥೩೪॥

ಆಗ ಔಪಾಸನಾಗ್ನಿ ಉಳಿಯಲಿಲ್ಲ. ವೇದಪುರಾಣಕಥಾ ಪಠನಗಳ ಸದ್ದು ಕೇಳಿಸಲಿಲ್ಲ. ಕತ್ತಲಿನ ಕೆಸರನ್ನು ನಗರಕ್ಕೆ ಬಳಿದಂತೆ ಕಾಣಿಸಿತು.

ಉಪಶಾಂತವಣಿಕ್ಪಣ್ಯಾ ನಷ್ಟಹರ್ಷಾ ನಿರಾಶ್ರಯಾ ।
ಅಯೋಧ್ಯಾನಗರೀ ಚಾಸೀನ್ನಷ್ಟತಾರಮಿವಾಂಬರಮ್ ॥೩೫॥

ವರ್ತಕರ ವ್ಯಾಪಾರದ ಸರಕುಗಳ ಸಡಗರವಿಲ್ಲದಾಯಿತು. ಎಲ್ಲೆಲ್ಲೂ ನಿರುತ್ಸಾಹ ಕಂಡು ಬಂದಿತು. ಆಶ್ರಯವಿಲ್ಲದೆ ಅಯೋಧ್ಯಾನಗರ, ನಕ್ಷತ್ರಗಳು ಕಾಣದ ಆಗಸದಂತಾಯಿತು.

ತಥಾ ಸ್ತ್ರಿಯೋ ರಾಮನಿಮಿತ್ತಮಾತುರಾ
ಯಥಾ ಸುತೇ ಭ್ರಾತರಿ ವಾ ವಿವಾಸಿತೇ ।
ವಿಲಪ್ಯ ದೀನಾ ರುರುದುರ್ವಿಚೇತಸಃ
ಸುತೈರ್ಹಿ ತಾಸಾಮಧಿಕೋ ಹಿ ಸೋಽಭವತ್ ॥೩೬॥

ಸ್ವಂತ ಮಗನಾಗಲಿ ಸೋದರನಾಗಲಿ ಹೊರಟು ಹೋದಂತೆ, ರಾಮನ ನಿಮಿತ್ತವಾಗಿ ಸ್ತ್ರೀಯರು ದುಃಖಿಸುತ್ತ ದೈನ್ಯದಿಂದ ಗೋಳಿಟ್ಟು, ಬುದ್ಧಿಗೆ ಏನೂ ತೋಚದಂತಾಗಿ ಕಂಬನಿ ಸುರಿಸಿದರು. ರಾಮನು ಅವರಿಗೆ ಸ್ವಂತ ಮಕ್ಕಳಿಗಿಂತ ಹೆಚ್ಚೇ ಆಗಿದ್ದ.

ಪ್ರಶಾಂತಗೀತೋತ್ಸವನೃತ್ತವಾದನಾ
ವ್ಯಪಾಸ್ತಹರ್ಷಾ ಪಿಹಿತಾಪಣೋದಯಾ ।

ತದಾ ಹ್ಯಯೋಧ್ಯಾ ನಗರೀ ಬಭೂವ ಸಾ
ಮಹಾರ್ಣವಃ ಸಂಕ್ಷಪಿತೋದಕೋ ಯಥಾ ॥೩೭॥

ಸಂಗೀತೋತ್ಸವ ನಾಟ್ಯ ವಾದ್ಯಗಳ ಸದ್ದೇ ಕೇಳಿಸಲಿಲ್ಲ. ಉತ್ಸಾಹ ಉಡುಗಿಯೇ ಹೋಗಿದೆ. ಅಂಗಡಿ ಮುಂಗಟ್ಟು ಮುಚ್ಚಿವೆ. ನೀರೊಣಗಿದ ಮಹಾಸಮುದ್ರ ದಂತಾಯಿತು ಅಯೋಧ್ಯಾನಗರ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ನಲವತ್ತೆಂಟನೇ ಸರ್ಗ ಮುಗಿಯಿತು.

❖

ಏಕೋನಪಂಚಾಶಃ ಸರ್ಗಃ

ಸರ್ಗ – 49

ಶ್ರೀರಾಮ ತ್ವರೆಯಿಂದ ಪ್ರಯಾಣ ಮಾಡುವುದು. ಗ್ರಾಮವಾಸಿಗಳ ಶೋಕ.

ರಾಮೋಽಪಿ ರಾತ್ರಿಶೇಷೇಣ ತೇನೈವ ಮಹದಂತರಮ್ ।
ಜಗಾಮ ಪುರುಷವ್ಯಾಘ್ರಃ ಪಿತುರಾಜ್ಞಾಮನುಸ್ಮರನ್ ॥೧॥

ಮುಂಜಾವಿನಲ್ಲಿಯೇ, ಪುರುಷೋತ್ತಮ ಶ್ರೀರಾಮ, ತಂದೆಯ ಆಜ್ಞೆಯನ್ನು ಚಿಂತಿಸುತ್ತ ಬಲುದೂರ ಪ್ರಯಾಣ ಮಾಡಿದ.

ತಥೈವ ಗಚ್ಛತಸ್ತಸ್ಯ ವ್ಯಪಾಯಾದ್ರಜನೀ ಶಿವಾ ।
ಉಪಾಸ್ಯ ಸ ಶಿವಾಂ ಸಂಧ್ಯಾಂ ವಿಷಯಾಂತಂ ವ್ಯಗಾಹತ ॥೨॥

ಹಾಗೆ ಬಲು ದೂರ ಪ್ರಯಾಣ ಮಾಡಿದಾಗ ಮಂಗಳಕರವಾದ ರಾತ್ರಿ ಕಳೆಯಿತು. ಮಂಗಳಕರವಾದ ಪ್ರಾತಃಸಂಧ್ಯೆಯನ್ನು ಉಪಾಸನೆ ಮಾಡಿ ಕೋಸಲದೇಶದ ಎಲ್ಲೆಗೆ ತಲುಪಿದ.

ಗ್ರಾಮಾನ್ ವಿಕೃಷ್ಟಸೀಮಾಂತಾನ್ ಪುಷ್ಪಿತಾನಿ ವನಾನಿ ಚ ।
ಪಶ್ಯನ್ನತಿಯಯೌ ಶೀಘ್ರಂ ಶರೈರಿವ ಹಯೋತ್ತಮೈಃ ॥೩॥

ಶರವೇಗದಲ್ಲಿ ಚಲಿಸುವ ಉತ್ತಮ ಕುದುರೆಗಳಿಂದ ಪ್ರಯಾಣ ಮಾಡುತ್ತಿದ್ದರೂ, ದೇಶದ ಎಲ್ಲೆಯ ಪ್ರದೇಶವು ಒಳ್ಳೆಯ ಕೃಷಿಯಿಂದ ಶೋಭಿಸುವುದನ್ನೂ ಅರಣ್ಯಗಳು ಹೂಬಿಟ್ಟಿರುವುದನ್ನೂ ನೋಡುತ್ತಲೇ ಅವುಗಳನ್ನು ದಾಟಿ ಮುಂದುವರಿದ, ಶ್ರೀರಾಮ.

ಶೃಣ್ವನ್ ವಾಚೋ ಮನುಷ್ಯಾಣಾಂ ಗ್ರಾಮಸಂವಾಸವಾಸಿನಾಮ್ ।
ರಾಜಾನಂ ಧಿಗ್‌ದಶರಥಂ ಕಾಮಸ್ಯ ವಶಮಾಸ್ಥಿತಮ್ ॥೪॥

ದೊಡ್ಡಸಣ್ಣ ಹಳ್ಳಿ 'ಗ್ರಾಮ–ಸಂವಾಸ'ಗಳಲ್ಲಿ ವಾಸಿಸುವ ಜನರ ಮಾತುಗಳನ್ನು ಆಲಿಸುತ್ತಲೆ ಮುಂದುವರಿದ, ಶ್ರೀರಾಮ—'ಪತ್ನಿಯ ಮೇಲಿನ ಮಮತೆಗೆ ವಶನಾದ ರಾಜಾ ದಶರಥನಿಗೆ ಧಿಕ್ಕಾರ.'

ಹಾ ನೃಶಂಸಾದ್ಯ ಕೈಕೇಯೀ ಪಾಪಾ ಪಾಪಾನುಬಂಧಿನೀ ।
ತೀಕ್ಷ್ಣಾ ಸಂಭಿನ್ನಮರ್ಯಾದಾ ತೀಕ್ಷ್ಣಕರ್ಮಣಿ ವರ್ತತೇ ॥೫॥

ಪಾಪದಿಂದ ಜನಿಸಿ ಪಾಪಕರ್ಮನಿರತಳಾದ ಕ್ರೂರಿಯಾದ ನಿರ್ದಯಳಾದ ಕೈಕೇಯಿ ಧರ್ಮನಿಯಮವನ್ನು ಅತಿಕ್ರಮಿಸಿ ಕ್ರೂರಕರ್ಮವನ್ನು ಮಾಡುತ್ತಿದ್ದಾಳೆ.

ಯಾ ಪುತ್ರಮೀದೃಶಂ ರಾಜ್ಞಃ ಪ್ರವಾಸಯತಿ ಧಾರ್ಮಿಕಮ್ ।
ವನವಾಸೇ ಮಹಾಪ್ರಾಜ್ಞಂ ಸಾನುಕ್ರೋಶಂ ಜಿತೇಂದ್ರಿಯಮ್ ॥೬॥

ಧಾರ್ಮಿಕ, ಮಹಾರಾಜ, ದಯಾಳು, ಜಿತೇಂದ್ರಿಯನಾದ ರಾಮನಂಥ ರಾಜಕುಮಾರನನ್ನು ವನವಾಸಕ್ಕೆ ಅಟ್ಟುತ್ತಾಳೆ, ಕೈಕೇಯಿ.

ಕಥಂ ನಾಮ ಮಹಾಭಾಗಾ ಸೀತಾ ಜನಕನಂದಿನೀ ।
ಸದಾ ಸುಖೇಷ್ವಭಿರತಾ ದುಃಖಾನ್ಯನುಭವಿಷ್ಯತಿ ॥೭॥

ಮಹಾಭಾಗ್ಯವತಿ, ಜನಕರಾಜ ಕುಮಾರಿ ಸೀತೆ ಸದಾ ಸುಖವನ್ನೇ ಸವಿಯುತ್ತಿದ್ದವಳು, ಅವಳು ಹೇಗೆ ತಾನೆ ವನವಾಸ ದುಃಖವನ್ನು ಅನುಭವಿಸುವಳು?

ಅಹೋ ದಶರಥೋ ರಾಜಾ ನಿಃಸ್ನೇಹಃ ಸ್ವಸುತಂ ಪ್ರಿಯಮ್ ।
ಪ್ರಜಾನಾಮನಘಂ ರಾಮಂ ಪರಿತ್ಯಕ್ತುಮಿಹೇಚ್ಛತಿ ॥೮॥

ಅಯ್ಯೋ ರಾಜಾ ದಶರಥನು ಸ್ನೇಹವನ್ನರಿಯದವನು, ಪ್ರಜೆಗಳಿಗೆ ಪ್ರಿಯನಾದ ನಿಷ್ಪಾಪನಾದ ತನ್ನ ಮಗನೇ ಆದ ರಾಮನನ್ನು ಪರಿತ್ಯಾಗ ಮಾಡಲು ಈಗ ಇಚ್ಛಿಸುತ್ತಾನೆ!

ಏತಾ ವಾಚೋ ಮನುಷ್ಯಾಣಾಂ ಗ್ರಾಮಸಂವಾಸವಾಸಿನಾಮ್ ।
ಶೃಣ್ವನ್ನತಿಯಯೌ ವೀರಃ ಕೋಸಲಾನ್ ಕೋಸಲೇಶ್ವರಃ ॥೯॥

ದೊಡ್ಡ ಸಣ್ಣ ಹಳ್ಳಿಗಳ ಜನರಾಡುವ ಇಂಥ ಮಾತುಗಳನ್ನು ಆಲಿಸುತ್ತ ಕೋಸಲಾಧಿಪತಿ ವೀರ ರಾಮನು ಕೋಸಲ ದೇಶವನ್ನು ದಾಟಿ ಮುಂದುವರಿದ.

ತತೋ ವೇದಶ್ರುತಿಂ ನಾಮ ಶಿವವಾರಿವಹಾಂ ನದೀಮ್ ।
ಉತ್ತೀರ್ಯಾಭಿಮುಖಃ ಪ್ರಾಯಾದಗಸ್ತ್ಯಾಧ್ಯುಷಿತಾಂ ದಿಶಮ್ ॥೧೦॥

ಒಳ್ಳೆಯ ನೀರಿನ ಪ್ರವಾಹಉಳ್ಳ ವೇದಶ್ರುತಿ ಎಂಬ ನದಿಯನ್ನು ದಾಟಿ ಅಗಸ್ತ್ಯಮುನಿ ನೆಲೆಸಿದ ದಕ್ಷಿಣ ದಿಕ್ಕಿನ ಕಡೆಗೆ ಶ್ರೀರಾಮ ಪ್ರಯಾಣ ಮಾಡಿದ.

ಸಂ.ರಾ.ಪ್ರಕಾರ 'ವೇದ ಸ್ಮೃತಿ' ಎಂದು ಈ ನದಿಗೆ ಹೆಸರು.

ಗತ್ವಾ ತು ಸುಚಿರಂ ಕಾಲಂ ತತಃ ಶೀತವಹಾಂ ನದೀಮ್ ।
ಗೋಮತೀಂ ಗೋಯುತಾನೂಪಾಮತರತ್ ಸಾಗರಂಗಮಾಮ್ ॥೧೧॥

ಬಹುಕಾಲ ಪ್ರಯಾಣ ಮಾಡಿ ಬಳಿಕ ಗೋವುಗಳಿಂದ ಕೂಡಿದ, ನೀರುಳ್ಳ ಪ್ರದೇಶದಲ್ಲಿ ಹರಿದು ಸಾಗರವನ್ನು ಸೇರುವ, ಶೀತಲ ಪ್ರವಾಹಉಳ್ಳ ಗೋಮತೀ ನದಿಯನ್ನೂ ದಾಟಿದ, ಶ್ರೀರಾಮ.

ಗೋಮತೀಂ ಚಾಪ್ಯತಿಕ್ರಮ್ಯ ರಾಘವಃ ಶೀಘ್ರಗೈರ್ಹಯೈಃ ।
ಮಯೂರಹಂಸಾಭಿರುತಾಂ ತತಾರ ಸ್ಯಂದಿಕಾಂ ನದೀಮ್ ॥೧೨॥

ಶ್ರೀರಾಮ ಶೀಘ್ರಗಾಮಿಯಾದ ಕುದುರೆಗಳಿಂದ ಗೋಮತೀನದಿಯನ್ನು ದಾಟಿ ನವಿಲು ಹಂಸಗಳ ಧ್ವನಿಯಿಂದ ತುಂಬಿದ ಸ್ಯಂದಿಕಾನದಿಯನ್ನು ದಾಟಿದ.

ಸ ಮಹೀಂ ಮನುನಾ ರಾಜ್ಞಾ ದತ್ತಾಮಿಕ್ಷ್ವಾಕವೇ ಪುರಾ ।
ಸ್ಫೀತಾಂ ರಾಷ್ಟ್ರಾವೃತಾಂ ರಾಮೋ ವೈದೇಹೀಮನ್ವದರ್ಶಯತ್ ॥೧೩॥

ಹಿಂದೆ ರಾಜಾ ಮನುವು ಇಕ್ಷ್ವಾಕುವಿಗೆ ಕೊಟ್ಟಿದ್ದ, ಸಾಮಂತ ರಾಜ್ಯಗಳಿಂದ ಆವೃತವಾದ, ಸಮೃದ್ಧವಾದ ಭೂಮಿಯನ್ನು ಶ್ರೀರಾಮ ಸೀತೆಗೆ ತೋರಿಸಿದ.

'ರಾಷ್ಟ್ರಾವೃತ' ರಾಷ್ಟ್ರಗಳಿಂದ, ಅಂದರೆ ಸಾಮಂತರಾಜರು ಆಳುವ ಖಂಡದೇಶ-ಗಳಿಂದ ತುಂಬಿದ ಅಖಂಡಭೂಮಿಯನ್ನು ಮನು ಇಕ್ಷ್ವಾಕುವಿಗೆ ಕೊಟ್ಟಿದ್ದ. ಅದರಿಂದ ಇಕ್ಷ್ವಾಕು ವಂಶದವರೆಲ್ಲರೂ ಸಾರ್ವಭೌಮರೆ. ಅವರು ನೇರವಾಗಿ ಆಳುತ್ತಿದ್ದುದು ಉತ್ತರ ಕೋಸಲದೇಶವನ್ನೇ. ಉಳಿದ ಖಂಡದೇಶದ ಅಧಿಪತಿಗಳು ಇವರಿಗೆ ಕಪ್ಪ ಕೊಡುತ್ತಿದ್ದರು.

ಸೂತ ಇತ್ಯೇವ ಚಾಭಾಷ್ಯ ಸಾರಥಿಂ ತಮಭೀಕ್ಷ್ಣಶಃ ।
ಮತ್ತಹಂಸಸ್ವರಃ ಶ್ರೀಮಾನುವಾಚ ಪುರುಷರ್ಷಭಃ ॥೧೪॥

'ಸೂತ!!' ಎಂದು ಪ್ಲುತಸ್ವರದಿಂದ ಸುಮಂತ್ರನನ್ನು ಬಾರಿಬಾರಿಗೂ ಸಂಬೋಧಿಸಿ ಮದಿಸಿದ ಹಂಸದಂತೆ ಧ್ವನಿಉಳ್ಳ ಪುರುಷೋತ್ತಮನಾದ ಶ್ರೀರಾಮ ನುಡಿದ.

ಕದಾಹಂ ಪುನರಾಗಮ್ಯ ಸರಯ್ವಾಃ ಪುಷ್ಪಿತೇ ವನೇ ।
ಮೃಗಯಾಂ ಪರ್ಯಟಿಷ್ಯಾಮಿ ಮಾತ್ರಾ ಪಿತ್ರಾ ಚ ಸಂಗತಃ ॥೧೫॥

ನಾನೆಂದು ಹಿಂತಿರುಗಿ ಬಂದು ಸರಯೂ ತೀರದ ಪುಷ್ಪಭರಿತವಾದ ಕಾಡಿನಲ್ಲಿ ತಂದೆತಾಯಿಗಳೊಂದಿಗೆ ಸೇರಿ ಬೇಟೆಯಾಡುತ್ತ ಸಂಚರಿಸುವೆನೊ?

ನಾತ್ಯರ್ಥಮಭಿಕಾಂಕ್ಷಾಮಿ ಮೃಗಯಾಂ ಸರಯೂವನೇ ।
ರತಿರ್ಹ್ಯೇಷಾತುಲಾ ಲೋಕೇ ರಾಜರ್ಷಿಗಣಸಂಮತಾ ॥೧೬॥

ಸರಯೂವನದಲ್ಲಿ ಬೇಟೆಯಾಡುವುದನ್ನು ಅತಿಯಾಗಿ ನಾನು ಬಯಸುವು-ದಿಲ್ಲ. ಅದು ಲೋಕದಲ್ಲಿ ರಾಜರ್ಷಿಸಮೂಹಕ್ಕೆ ಸಂಮತವಾದ ಅನುಪಮವಾದ ಒಂದು ವಿನೋದ ಮಾತ್ರ.

ವೇಗವಾಗಿ ಓಡುವ ದುಷ್ಟಮೃಗಕ್ಕೆ ಗುರಿಇಟ್ಟು ಬಾಣವನ್ನೆಸೆಯುವುದು ರಾಜರ್ಷಿಗಳೆಲ್ಲರಿಗೂ ವಿನೋದವಾಗಿತ್ತು. ಯುದ್ಧಾಭ್ಯಾಸವಾಗಿತ್ತು . ಅದರಲ್ಲಿ ಮೃಗ ಹಿಂಸೆ ಬಹು ಅಲ್ಪವಾಗಿತ್ತು.

ರಾಜರ್ಷೀಣಾಂ ಹಿ ಲೋಕೇಸ್ಮಿನ್ ರತ್ಯರ್ಥಂ ಮೃಗಯಾ ವನೇ ।
ಕಾಲೇ ವೃತಾಂ ತಾಂ ಮನುಜೈರ್ಧನ್ವಿನಾಮಭಿಕಾಂಕ್ಷಿತಾಮ್ ॥೧೭॥

ರಾಜರ್ಷಿಗಳಿಗೆ ಈ ಲೋಕದಲ್ಲಿ ಅರಣ್ಯದಲ್ಲಿ ಬೇಟೆಯಾಡುವುದು ಒಂದು ವಿನೋದ ಮಾತ್ರವಾಗಿತ್ತು. ಅದು ಚಟವಾಗಿರಲಿಲ್ಲ. ಯೋಗ್ಯಕಾಲದಲ್ಲಿ ಅಂದರೆ, ಹಿಂಸ್ರಮೃಗಗಳು ಅತಿಯಾಗಿದ್ದ ಕಾಲದಲ್ಲಿ ಮಾತ್ರ ಮಾನವರು ಬೇಟೆಯನ್ನು ಕೈಗೊಳ್ಳುತ್ತಿದ್ದರು. ಆಗ ಬಿಲ್ಗಾರರಿಗೆ ಅದು ಇಷ್ಟವಾಗಿತ್ತು. ಅದನ್ನು ನಾನು ಅತಿಯಾಗಿ ಬಯಸುವುದಿಲ್ಲ.

ಸ ತಮಧ್ವಾನಮೈಕ್ಷ್ವಾಕಃ ಸೂತಂ ಮಧುರಯಾ ಗಿರಾ ।
ತಂ ತಮರ್ಥಮಭಿಪ್ರೇತ್ಯ ಯಯೌ ವಾಕ್ಯಮುದೀರಯನ್ ॥೧೮॥

ಶ್ರೀರಾಮನು ದಾರಿಯುದ್ದಕ್ಕೂ ಆಯಾ ವಿಷಯಗಳನ್ನು ಕುರಿತು ಸೂತನಿಗೆ ಮಧುರ ನುಡಿಯಿಂದ ನುಡಿಯುತ್ತ ಪ್ರಯಾಣ ಮಾಡಿದ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ನಲವತ್ತೊಂಭತ್ತನೇ ಸರ್ಗ ಮುಗಿಯಿತು.

❖

ಪಂಚಾಶಃ ಸರ್ಗಃ

ಸರ್ಗ – 50

ಗಂಗಾತೀರವನ್ನು ಸೇರುವುದು. ಗಂಗಾನದೀವರ್ಣನೆ. ಗುಹ ಸಮಾಗಮ.

ವಿಶಾಲಾನ್ ಕೋಸಲಾನ್ ರಮ್ಯಾನ್ ಯಾತ್ವಾ ಲಕ್ಷ್ಮಣಪೂರ್ವಜಃ ।
ಅಯೋಧ್ಯಾಭಿಮುಖೋ ಧೀಮಾನ್ ಪ್ರಾಂಜಲಿರ್ವಾಕ್ಯಮಬ್ರವೀತ್ ॥

ಧೀಮಂತನಾದ ಶ್ರೀರಾಮನು ವಿಶಾಲವಾದ ರಮ್ಯವಾದ ದಕ್ಷಿಣಕೋಸಲ ದೇಶದ ಗಡಿಗೆ ಬಂದು ಅಯೋಧ್ಯೆಗೆ ಅಭಿಮುಖವಾಗಿ ಕೈಮುಗಿದು ನುಡಿದ.

ಆಪೃಚ್ಛೇ ತ್ವಾಂ ಪುರಿಶ್ರೇಷ್ಠೇ ಕಾಕುತ್ಸ್ಥಪರಿಪಾಲಿತೇ ।
ದೈವತಾನಿ ಚ ಯಾನಿ ತ್ವಾಂ ಪಾಲಯಂತ್ಯಾವಸಂತಿ ಚ ॥೨॥

ಕಾಕುತ್ಸ್ಥವಂಶದ ರಾಜರಿಂದ ಪಾಲಿತಳಾದ ಪುರ ಶ್ರೇಷ್ಠಳಾದ ಅಯೋಧ್ಯಾಧಿದೇವಿಯೆ, ನಾನು ಹೋಗಿಬರುವೆ, ಅನುಜ್ಞೆ ನೀಡು. ನಿನ್ನನ್ನು ಪಾಲಿಸುತ್ತ ವಾಸಮಾಡುವ ದೇವತೆಗಳಲ್ಲಿಯೂ ಅನುಜ್ಞೆಯನ್ನು ಬೇಡುತ್ತೇನೆ.

ನಿವೃತ್ತವನವಾಸಸ್ತ್ವಾಮನೃಣೋ ಜಗತೀಪತೇಃ ।
ಪುನರ್ದರ್ಕ್ಷ್ಯಾಮಿ ಮಾತ್ರಾ ಚ ಪಿತ್ರಾ ಚ ಸಹ ಸಂಗತಃ ॥೩॥

ವನವಾಸವನ್ನು ಮುಗಿಸಿ ರಾಜನ ಋಣದಿಂದ ಮುಕ್ತನಾಗಿ ತಂದೆ ತಾಯಿ-ಗಳೊಡನೆ ಕೂಡಿ ನಿನ್ನನ್ನು ಪುನಃ ಸಂದರ್ಶಿಸುತ್ತೇನೆ.

ತತೋ ರುಚಿರತಾಮ್ರಾಕ್ಷೋ ಭುಜಮುದ್ಯಮ್ಯ ದಕ್ಷಿಣಮ್ ।
ಅಶ್ರುಪೂರ್ಣಮುಖೋ ದೀನೋಽಬ್ರವೀಜ್ಜಾನಪದಂ ಜನಮ್ ॥೪॥

ಬಳಿಕ ತನ್ನನ್ನು ಕಾಣಲು ಬಂದ ದೇಶವಾಸಿ ಜನರಿಗೆ ಬಲಗೈ ಎತ್ತಿ ಹಿಡಿದು ಸುಂದರವಾದ ಕೆಂಪಾದ ಕಣ್ಣುಳ್ಳ ಶ್ರೀರಾಮನು ಕಂಬನಿ ತುಂಬಿದ ಮುಖದವನಾಗಿ ದೈನ್ಯದಿಂದ ನುಡಿದ.

ಅನುಕ್ರೋಶೋ ದಯಾ ಚೈವ ಯಥಾರ್ಹಂ ಮಯಿ ವಃ ಕೃತಃ ।
ಚಿರಂ ದುಃಖಸ್ಯ ಪಾಪೀಯೋ ಗಮ್ಯತಾಮರ್ಥಸಿದ್ಧಯೇ ॥೫॥

‘ನೀವು ನನ್ನ ವಿಷಯದಲ್ಲಿ ಆದರವನ್ನೂ ದಯೆಯನ್ನೂ ಯಥಾಯೋಗ್ಯವಾಗಿ

ತೋರಿರುವಿರಿ. ಹೆಚ್ಚು ಹೊತ್ತು ದುಃಖವನ್ನು ಅನುಭವಿಸುವುದು ಒಳ್ಳೆಯದಲ್ಲ. ಅದರಿಂದ ನೀವು ಹೊರಟು ಹೋಗಿರಿ. ನಾವೂ ಕೂಡ ನಮ್ಮ ಉದ್ದೇಶ ಸಾಧನೆಗಾಗಿ ಮುಂದೆ ಹೋಗುವೆವು'.

ತೇऽಭಿವಾದ್ಯ ಮಹಾತ್ಮಾನಂ ಕೃತ್ವಾ ಚಾಪಿ ಪ್ರದಕ್ಷಿಣಮ್ ।
ವಿಲಪಂತೋ ನರಾ ಘೋರಂ ವ್ಯತಿಷ್ಠಂತ ಕ್ವಚಿತ್ ಕ್ವಚಿತ್ ॥೬॥

ಮಹಾತ್ಮನಾದ ರಾಮನನ್ನು ಹಳ್ಳಿಗರು ಅಭಿವಾದನ ಮಾಡಿ ಪ್ರದಕ್ಷಿಣೆ ಬಂದು ಭಯಂಕರವಾಗಿ ಗೋಳಿಡುತ್ತ ರಾಮನನ್ನು ನೋಡುವುದಕ್ಕಾಗಿ ಅಲ್ಲಲ್ಲಿ ನಿಂತರು.

ತಥಾ ವಿಲಪತಾಂ ತೇಷಾಮತೃಪ್ತಾನಾಂ ಚ ರಾಘವಃ ।
ಅಚಕ್ಷುರ್ವಿಷಯಂ ಪ್ರಾಯಾದ್ಯಥಾರ್ಕಃ ಕ್ಷಣದಾಮುಖೇ ॥೭॥

ಹಾಗೆ ಗೋಳಿಡುತ್ತ ನಿಂತ ಹಳ್ಳಿಗರ ಅತೃಪ್ತವಾದ ಕಣ್ಣುಗಳಿಗೆ ಕಾಣದಂತೆ, ರಾತ್ರಿಯಾಗುತ್ತಿದ್ದಂತೆ ಸೂರ್ಯನು ಕಣ್ಮರೆಯಾಗುವಂತೆ, ಶ್ರೀರಾಮ ದೃಷ್ಟಿಪಥದಿಂದ ದೂರಕ್ಕೆ ಪ್ರಯಾಣ ಮಾಡಿದ.

ತತೋ ಧ್ಯಾನಧನೋಪೇತಾನ್ ದಾನಶೀಲಜನಾನ್ ಶುಭಾನ್ ।
ಅಕುತಶ್ಚಿದ್ಭಯಾನ್ ರಮ್ಯಾಂಶ್ಚೈತ್ಯಯೂಪಸಮಾವೃತಾನ್ ॥೮॥

ಉದ್ಯಾನಾಮ್ರವಣೋಪೇತಾನ್ ಸಂಪನ್ನಸಲಿಲಾಶಯಾನ್ ।
ತುಷ್ಟಪುಷ್ಟಜನಾಕೀರ್ಣಾನ್ ಗೋಪಗೋಕುಲಸೇವಿತಾನ್ ॥೯॥

ರಕ್ಷಣೀಯಾನ್ನರೇಂದ್ರಾಣಾಂ ಬ್ರಹ್ಮಘೋಷಾಭಿನಾದಿತಾನ್ ।
ರಥೇನ ಪುರುಷವ್ಯಾಘ್ರಃ ಕೋಸಲಾನತ್ಯವರ್ತತ ॥೧೦॥

ಧಾನ್ಯ ಧನ ಸಮೃದ್ಧವಾದ, ದಾನಶೀಲ ಜನರಿಂದ ತುಂಬಿದ, ಮಂಗಳಕರವಾದ, ಯಾವುದೇ ಭಯವಿಲ್ಲದ ರಮ್ಯವಾದ, ದೇವಾಲಯ ಯಜ್ಞ ಸ್ತಂಭಗಳುಳ್ಳ ಉದ್ಯಾನ ಮಾವಿನ ತೋಪುಗಳಿಂದ ಕೂಡಿದ, ಸಮೃದ್ಧ ಜಲಾಶಯಗಳುಳ್ಳ ತುಷ್ಟಪುಷ್ಟ ಜನರಿಂದ ತುಂಬಿದ, ಗೋವಳರಿಂದ ಗೋವುಗಳಿಂದ ತುಂಬಿದ, ಬೇರೆ ರಾಜರಿಗೆ ದೊಡ್ಡ ರಾಜ್ಯದಂತೆ ಕಷ್ಟದಿಂದ ರಕ್ಷಣೆ ಮಾಡಬೇಕಾಗುವಂಥ, ವೇದಘೋಷಗಳಿಂದ ತುಂಬಿದ ಕೋಸಲದ ಗ್ರಾಮ ಗಳನ್ನು ಪುರುಷೋತ್ತಮನಾದ ರಾಮನು ಒಂದೊಂದಾಗಿ ಎಲ್ಲವನ್ನು ದಾಟಿ ಮುಂದುವರಿದ.

ಮಧ್ಯೇನ ಮುದಿತಸ್ಫೀತಂ ರಮ್ಯೋದ್ಯಾನಸಮಾಕುಲಮ್ ।
ರಾಜ್ಯಂ ಭೋಗ್ಯಂ ನರೇಂದ್ರಾಣಾಂ ಯಯೌ ಧೃತಿಮತಾಂ ವರಃ ॥೧೧

ತ್ವರಿತಗತಿಯನ್ನು ಬಿಟ್ಟು ಮಧ್ಯಮಗತಿಯಿಂದ, ಬೇರೆ ರಾಜರು ಆಳುವ ಸುಖಸಮೃದ್ಧವಾದ ರಮ್ಯ ಉದ್ಯಾನಗಳಿಂದ ತುಂಬಿದ ದೇಶವನ್ನು ಧೀರ ಪುರುಷರಲ್ಲಿ ಶ್ರೇಷ್ಠನಾದ ಶ್ರೀರಾಮ ತಲುಪಿದ.

ಬೇರೆ ಸಾಮಂತ ರಾಜರಾಳುವ ದೇಶದಲ್ಲಿ ರಾಮನನ್ನು ಕಾಣಲು ಬರುವವರು ಅಷ್ಟಾಗಿ ಇಲ್ಲದಿರುವುದರಿಂದ ಮಧ್ಯಮಗತಿಯಿಂದಲೇ ದೇಶದ ಸುಖ ಸಮೃದ್ಧಿಯನ್ನು ನೋಡುತ್ತ ಮುಂದುವರಿಯುತ್ತಾನೆ.

ತತ್ರ ತ್ರಿಪಥಗಾಂ ದಿವ್ಯಾಂ ಶಿವತೋಯಾಮಶೈವಲಾಮ್ ।
ದದರ್ಶ ರಾಘವೋ ಗಂಗಾಂ ಪುಣ್ಯಾಮೃಷಿನಿಷೇವಿತಾಮ್ ॥೧೨॥

ಅಲ್ಲಿ ಶ್ರೀರಾಮನು ಶುಭಜಲಉಳ್ಳ ಪಾಚಿ ಇಲ್ಲದ ಋಷಿ ಸೇವಿತವಾದ ಪುಣ್ಯಕರವಾದ ಸ್ವರ್ಗಮರ್ತ್ಯ ಪಾತಾಳಗಳೆಂಬ ಮೂರು ದಾರಿಗಳಲ್ಲಿ ಹರಿಯುವ ದಿವ್ಯವಾದ ಗಂಗಾನದಿಯನ್ನು ಕಂಡನು.

ಆಶ್ರಮೈರವಿದೂರಸ್ಥೈಃ ಶ್ರೀಮದ್ಭಿಃ ಸಮಲಂಕೃತಾಮ್ ।
ಕಾಲೇಽಪ್ಸರೋಭಿರ್ಹೃಷ್ಟಾಭಿಃ ಸೇವಿತಾಂಭೋಹ್ರದಾಂ ಶಿವಾಮ್
॥೧೩॥

ಗಂಗಾನದಿಯ ತೀರದಲ್ಲಿ ಸ್ವಲ್ಪದೂರದಲ್ಲಿಯೇ ಸುಂದರವಾದ ಆಶ್ರಮಗಳಿದ್ದುವು. ವಿಹಾರ ಕಾಲದಲ್ಲಿ ಅಪ್ಸರೆಯರು ಆನಂದದಿಂದ ಸೇವಿಸುವ ಜಲಪೂರ್ಣವಾದ ಅನೇಕ ಮಡುಗಳು ಗಂಗಾನದಿಯಲ್ಲಿವೆ.

ದೇವದಾನವಗಂಧರ್ವೈಃ ಕಿಂನರೈರುಪಶೋಭಿತಾಮ್ ।
ನಾಗಗಂಧರ್ವಪತ್ನೀಭಿಃ ಸೇವಿತಾಂ ಸತತಂ ಶಿವಾಮ್ ॥೧೪॥

ದೇವ ದಾನವ ಗಂಧರ್ವ ಕಿನ್ನರರಿಂದ ಶೋಭಿಸುತ್ತದೆ, ಸತತವಾಗಿ ನಾಗ ಗಂಧರ್ವ ಸ್ತ್ರೀಯರಿಂದ ಸೇವಿತವಾಗಿದೆ. ಮಂಗಳಕರವಾದ ಗಂಗಾನದಿ.

ದೇವಾಕ್ರೀಡಶತಾಕೀರ್ಣಾಂ ದೇವೋದ್ಯಾನಶತಾಯುತಾಮ್ ।
ದೇವಾರ್ಥಮಾಕಾಶಗಮಾಂ ವಿಖ್ಯಾತಾಂ ದೇವಪದ್ಮಿನೀಮ್ ॥೧೫॥

ನದಿಯ ಇಕ್ಕೆಲಗಳಲ್ಲಿ ದೇವತೆಗಳ ನೂರಾರು ವಿಹಾರ ಶೈಲಗಳಿವೆ. ನೂರಾರು ಸಾವಿರಾರು ದೇವೋದ್ಯಾನಗಳಿವೆ. ದೇವತೆಗಳಿಗಾಗಿ ಆಕಾಶದಲ್ಲಿಯೂ ಈ ನದಿ ಹರಿಯುತ್ತದೆ ಎಂದು ಪ್ರಖ್ಯಾತವಾಗಿದೆ. ದೇವಭೋಗ್ಯ ಕಮಲಗಳಿಂದಲೂ ಯುಕ್ತವಾಗಿದೆ.

ಜಲಾಘಾತಾಟ್ಟಹಾಸೋಗ್ರಾಂ ಫೇನನಿರ್ಮಲಹಾಸಿನೀಮ್ ।
ಕ್ವಚಿದ್ವೇಣೀಕೃತಜಲಾಂ ಕ್ವಚಿದಾವರ್ತಶೋಭಿತಾಮ್ ॥೧೬॥

ಕೆಲವೆಡೆ ಬಂಡೆಗಲ್ಲಿಗೆ ನೀರಿನ ಹೊಡೆತವೆಂಬ ಅಟ್ಟಹಾಸದಿಂದ ಉಗ್ರವಾಗಿ ಕಾಣುತ್ತದೆ. ನೊರೆ ಎಂಬ ನಿರ್ಮಲಹಾಸದಿಂದ ಸುಂದರವಾಗಿಯೂ ಕಾಣುತ್ತದೆ. ಕೆಲವೆಡೆ ಎರಡು ಮೂರು ಪ್ರವಾಹಗಳು ಸೇರಿ ಸ್ತ್ರೀಯರ ಜಡೆಯಂತೆಯೂ ಕಾಣುತ್ತದೆ. ಕೆಲವೆಡೆ ಸುಳಿಗಳಿಂದಲೂ ಶೋಭಿಸುತ್ತದೆ, ಗಂಗಾನದಿ.

ಕ್ವಚಿತ್ ಸ್ತಿಮಿತಗಂಭೀರಾಂ ಕ್ವಚಿದ್ವೇಗಜಲಾಕುಲಾಮ್ ।
ಕ್ವಚಿದ್ಗಂಭೀರನಿರ್ಘೋಷಾಂ ಕ್ವಚಿದ್ಭೈರವನಿಸ್ವನಾಮ್ ॥೧೭॥

ಕೆಲವೆಡೆ ನಿಶ್ಚಲವಾಗಿ ಆಳವಾಗಿ ಇರುತ್ತದೆ. ಕೆಲವೆಡೆ ನೀರು ವೇಗವಾಗಿ ಹರಿಯುತ್ತದೆ. ಕೆಲವು ಕಡೆ ಭೇರಿಯಂತೆ ಮೃದಂಗದಂತೆ ಗಂಭೀರ ಧ್ವನಿ ಮಾಡುತ್ತದೆ. ಇನ್ನು ಕೆಲವೆಡೆ ಭಯಂಕರ ಸಿಡಿಲಿನಂಥ ಶಬ್ದವನ್ನೂ ಮಾಡುತ್ತದೆ, ಗಂಗಾನದಿ.

ದೇವಸಂಘಾಪ್ಲುತಜಲಾಂ ನಿರ್ಮಲೋತ್ಪಲಶೋಭಿತಾಮ್ ।
ಕ್ವಚಿದಾಭೋಗಪುಲಿನಾಂ ಕ್ವಚಿನ್ನಿರ್ಮಲವಾಲುಕಾಮ್ ॥೧೮॥

ಗಂಗಾಜಲದಲ್ಲಿ ದೇವತೆಗಳು ಮುಳುಗಿ ಸ್ನಾನ ಮಾಡುತ್ತಾರೆ. ನಿರ್ಮಲವಾದ ನೈದಿಲೆಗಳಿಂದ ನದಿ ತುಂಬಿಕೊಂಡಿದೆ. ಇಕ್ಕೆಲಗಳಲ್ಲಿ ಕೆಲವೆಡೆ ವಿಶಾಲವಾದ ಮರಳಿನ ದಂಡೆಗಳಿವೆ. ಕೆಲವೆಡೆ ನಿರ್ಮಲವಾದ ಉಸುಕಿನಿಂದ ತುಂಬಿದೆ.

ಹಂಸಸಾರಸಸಂಘುಷ್ಟಾಂ ಚಕ್ರವಾಕೋಪಕೂಜಿತಾಮ್ ।
ಸದಾ ಮತ್ತೈಶ್ಚ ವಿಹಗೈರಭಿಸಂನಾದಿತಾಂತರಾಮ್ ॥೧೯॥

ಹಂಸ ಸಾರಸ ಚಕ್ರವಾಕ ಪಕ್ಷಿಗಳ, ಇನ್ನೂ ಬೇರೆ ಸದಾ ಮದಿಸಿದ ಅನೇಕ ಪಕ್ಷಿಗಳ ಧ್ವನಿಯಿಂದ ಕೂಡಿದೆ, ಗಂಗಾನದಿ.

ಕ್ವಚಿತ್ತೀರರುಹೈರ್ವೃಕ್ಷೈರ್ಮಾಲಾಭಿರಿವ ಶೋಭಿತಾಮ್।
ಕ್ವಚಿತ್ಖಲ್ಲೋತ್ಪಲಚ್ಛನ್ನಾಂ ಕ್ವಚಿತ್ಪದ್ಮವನಾಕುಲಾಮ್ ॥೨೦॥

ಕೆಲವೆಡೆ ತೀರದಲ್ಲಿ ಬೆಳೆದ ವೃಕ್ಷಗಳು ನದಿಗೆ ಮಾಲೆಗಳಂತೆ ಶೋಭೆ ಉಂಟು-ಮಾಡುತ್ತವೆ. ಕೆಲವೆಡೆ ಅರಳಿದ ತಾವರೆಗಳಿಂದ ನದಿ ಮುಚ್ಚಿಹೋಗಿದೆ. ಕೆಲವೆಡೆ ತಾವರೆಕೊಳಗಳಿಂದ ಕೂಡಿದೆ, ಗಂಗಾನದಿ.

ಕ್ವಚಿತ್ಕುಮುದಷಂಡೈಶ್ಚ ಕುಡ್ಮಲೈರುಪಶೋಭಿತಾಮ್ ।
ನಾನಾಪುಷ್ಪರಜೋಧ್ವಸ್ತಾಂ ಸಮದಾಮಿವ ಚ ಕ್ವಚಿತ್ ॥೨೧॥

ಕೆಲವೆಡೆ ಕೆಂದಾವರೆ ಸಮೂಹಗಳಿಂದ ಹೂವಿನ ಮೊಗ್ಗುಗಳಿಂದ ಶೋಭಿಸುತ್ತದೆ. ನಾನಾ ಪುಷ್ಪಧೂಲಿಗಳಿಂದ ಯುಕ್ತವಾಗಿ ಮದಿಸಿದ ಹೆಣ್ಣಿನಂತೆ ಕಾಣುತ್ತದೆ.

ವ್ಯಪೇತಮಲಸಂಘಾತಾಂ ಮಣಿನಿರ್ಮಲದರ್ಶನಾಮ್।
ದಿಶಾಗಜೈರ್ವನಗಜೈರ್ಮತ್ತೈಶ್ಚ ವರವಾರಣೈಃ ॥೨೨॥

ದೇವರಾಜೋಪವಾಹ್ಯೈಶ್ಚ ಸಂನಾದಿತವನಾಂತರಾಮ್ ।
ಪ್ರಮದಾಮಿವ ಯತ್ನೇನ ಭೂಷಿತಾಂ ಭೂಷಣೋತ್ತಮೈಃ ॥೨೩॥

ವಿಷ್ಣುಪಾದಚ್ಯುತಾಂ ದಿವ್ಯಾಮಪಾಪಾಂ ಪಾಪನಾಶನೀಮ್ ।

ಪಾಪ ಸಮೂಹವನ್ನು ತೊಳೆಯುವಂಥ ಮುತ್ತಿನಂತೆ ನಿರ್ಮಲವಾಗಿ ಕಾಣು-ವಂಥ ನದಿ ಇದು. ಮದಿಸಿದ ದಿಗ್ಗಜ–ವನಗಜ–ರಾಜಗಜಗಳಿಂದ, ದೇವಶ್ರೇಷ್ಠರ ವಾಹನವಾದ ಗಜಗಳಿಂದ ತೀರದ ಕಾಡುಗಳು ಅನುರಣಿತವಾಗುತ್ತವೆ. ಫಲಪುಷ್ಪ ಚಿಗುರೆಲೆ ಲತಾಗುಲ್ಮಗಳಲ್ಲಿ ವಿಹರಿಸುವ ಪಕ್ಷಿಗಳಿಂದ ಕೂಡಿ, ಉತ್ತಮ ಆಭರಣ-ಗಳಿಂದ ಯತ್ನಪೂರ್ವಕವಾಗಿ ಅಲಂಕೃತಳಾದ ಸ್ತ್ರೀಯಂತೆ ಕಾಣುತ್ತದೆ, ವಿಷ್ಣುಪಾದ-ದಿಂದ ಹರಿದು ಬಂದ ದಿವ್ಯವಾದ ಪಾಪರಹಿತವಾದ ಪಾಪನಾಶಿಯಾದ ಗಂಗಾನದಿ.

ಹಿಮಾಲಯದ ಗಂಗೋತ್ರಿಯು ಗಂಗೆಯ ಉತ್ಪತ್ತಿ ಸ್ಥಾನವಲ್ಲ. ಅದು ಭೂಮಿಯಲ್ಲಿ ಗಂಗೆ ಪ್ರಾದುರ್ಭವಿಸುವ ಸ್ಥಳ ಮಾತ್ರವಾಗಿದೆ. ಉತ್ಪತ್ತಿ ಸ್ಥಾನವು ಹರಿಯ ಪಾದವೇ.

ಫಲೈಃ ಪುಷ್ಪೈಃ ಕಿಸಲಯೈರ್ವೃತಾಂ ಗುಲ್ಮೈರ್ದ್ವಿಜೈಸ್ತಥಾ ।
ಶಿಂಶುಮಾರೈಶ್ಚ ನಕ್ರೈಶ್ಚ ಭುಜಂಗೈಶ್ಚ ನಿಷೇವಿತಾಮ್ ॥೨೪॥

ತಾಂ ಶಂಕರಜಟಾಜೂಟಾದ್ಭ್ರಷ್ಟಾಂ ಸಾಗರತೇಜಸಾ ॥೨೫॥
ಸಮುದ್ರಮಹಿಷೀಂ ಗಂಗಾಂ ಸಾರಸಕ್ರೌಂಚನಾದಿತಾಮ್ ।
ಆಸಸಾದ ಮಹಾಬಾಹುಃ ಶೃಂಗಬೇರಪುರಂ ಪ್ರತಿ ॥೨೬॥

ಫಲ ಪುಷ್ಪ ಚಿಗುರುಗಳುಳ್ಳ ಪೊದೆಗಳಲ್ಲಿ ಹಾಡುವ ಹಕ್ಕಿಗಳಿಂದ ಕೂಡಿ ಶಿಂಶುಮಾರ ಎಂಬ ಒಂದು ಜಾತಿಯ ಮೊಸಳೆಗಳಿಂದ ಮತ್ತು ಬೇರೆ ಮೊಸಳೆ-ಗಳಿಂದಲೂ ಹಾವುಗಳಿಂದಲೂ ಕೂಡಿ 'ಸಾಗರ ತೇಜಸ್ಸಿ'ನಿಂದ, ಅಂದರೆ ಸಗರ ವಂಶದ ಭಗೀರಥನ ತಪಸ್ಸಿಗೆ ಒಲಿದು ಶಂಕರನ ಜಟಾಜೂಟದಿಂದ ಇಳಿದು ಹರಿದುಬಂದು, 'ಸಾರಸ' ಸರೋವರದಲ್ಲಿ ವಾಸಮಾಡುವ ನೀರು ಹಕ್ಕಿಗಳ 'ಕ್ರೌಂಚ' ನೀರು ಕೊಕ್ಕರೆಗಳ ಧ್ವನಿಗಳಿಂದ ಕೂಡಿ, ಸಮುದ್ರವನ್ನು ಸೇರುವ ಸಮುದ್ರರಾಜನ ಮಡದಿಯಾದ ಗಂಗಾನದಿಯನ್ನು ಶೃಂಗವೇರ ಪುರಸಮೀಪದಲ್ಲಿ ಮಹಾಬಾಹು ಶ್ರೀರಾಮ ನೋಡಿದನು.

ತಾಮೂರ್ಮಿಕಲಿಲಾವರ್ತಾಮನ್ವವೇಕ್ಷ್ಯ ಮಹಾರಥಃ ।
ಸುಮಂತ್ರಮಬ್ರವೀತ್ ಸೂತಮಿಹೈವಾದ್ಯ ವಸಾಮಹೇ ॥೨೭॥

ಅಲೆಗಳಿಂದಲೂ ಸುಳಿಗಳಿಂದಲೂ ತುಂಬಿದ ಆ ಗಂಗಾನದಿಯನ್ನು ಕಂಡ ಮಹಾರಥನಾದ ಶ್ರೀರಾಮನು ಸೂತನಾದ ಸುಮಂತ್ರನಿಗೆ ಹೇಳಿದ— 'ನಾವಿಲ್ಲಿಯೇ ಈಗ ತಂಗೋಣ' ಎಂದು.

ಅವಿದೂರಾದಯಂ ನದ್ಯಾ ಬಹುಪುಷ್ಪಪ್ರವಾಲವಾನ್ ।
ಸುಮಹಾನಿಂಗುದೀವೃಕ್ಷೋ ವಸಾಮೋಽತ್ರೈವ ಸಾರಥೇ ॥೨೮॥

'ಸಾರಥಿಯೆ, ನದಿಯ ಸಮೀಪದಲ್ಲಿ ಇದು ಬಹು ಪುಷ್ಪ ಚಿಗುರುಗಳಿಂದ ಕೂಡಿದ ಬಹಳ ದೊಡ್ಡದಾದ ಗಾರೇಗಿಡ. ಇಲ್ಲಿಯೇ ತಂಗೋಣ' ಎಂದು.

ದ್ರಕ್ಷ್ಯಾಮಃ ಸರಿತಾಂ ಶ್ರೇಷ್ಠಾಂ ಸಂಮಾನ್ಯ ಸಲಿಲಾಂ ಶಿವಾಮ್ ।
ದೇವದಾನವಗಂಧರ್ವಮೃಗಪನ್ನಗಪಕ್ಷಿಣಾಮ್ ॥೨೯॥

'ದೇವ ದಾನವ ಗಂಧರ್ವ ಮೃಗ ನಾಗ ಪಕ್ಷಿಗಳಿಗೆ ದೇವಪೂಜೆಗೆ ಯೋಗ್ಯವಾದ ನೀರುಳ್ಳ, ಮಂಗಳಕರವಾದ ನದಿಗಳಲ್ಲಿ ಶ್ರೇಷ್ಠವಾದ ಗಂಗಾನದಿಯನ್ನು ಇಲ್ಲಿಂದಲೇ ನಾವು ನೋಡಬಲ್ಲೆವು' ಎಂದು.

ಲಕ್ಷ್ಮಣಶ್ಚ ಸುಮಂತ್ರಶ್ಚ ಬಾಢಮಿತ್ಯೇವ ರಾಘವಮ್ ।
ಉಕ್ತ್ವಾ ತಮಿಂಗುದೀವೃಕ್ಷಂ ತದೋಪಯಯತುರ್ಹಯೈಃ ॥೩೦॥

ಲಕ್ಷ್ಮಣನೂ ಸಮಂತ್ರನೂ ಹಾಗೇ ಆಗಲೆಂದು ಹೇಳಿ ಕುದುರೆಗಳಿಂದಲೇ ಗಾರೇ ಗಿಡದತ್ತ ಹೋದರು.

ರಾಮೋಽಭಿಯಾಯ ತಂ ರಮ್ಯಂ ವೃಕ್ಷಮಿಕ್ಷ್ವಾಕುನಂದನಃ ।
ರಥಾದವಾತರತ್ತಸ್ಮಾತ್ ಸಭಾರ್ಯಃ ಸಹಲಕ್ಷ್ಮಣಃ ॥೩೧॥

ಇಕ್ಷ್ವಾಕು ನಂದನನಾದ ಶ್ರೀರಾಮ ರಮ್ಯವಾದ ಗಾರೆಗಿಡದತ್ತ ಹೋಗಿ ಭಾರ್ಯೆಯೊಂದಿಗೆ ಲಕ್ಷ್ಮಣನೊಂದಿಗೆ ಆ ರಥದಿಂದ ಇಳಿದ.

ಸುಮಂತ್ರೋಽಪ್ಯವತೀರ್ಯಾಥ ಮೋಚಯಿತ್ವಾ ಹಯೋತ್ತಮಾನ್ ।
ವೃಕ್ಷಮೂಲಗತಂ ರಾಮಮುಪತಸ್ಥೇ ಕೃತಾಂಜಲಿಃ ॥೩೨॥

ಸುಮಂತ್ರನೂ ರಥದಿಂದ ಇಳಿದು ಶ್ರೇಷ್ಠವಾದ ಕುದುರೆಗಳನ್ನು ಬಿಚ್ಚಿ, ಮರದ ಬುಡದಲ್ಲಿ ಕುಳಿತ ರಾಮನಿಗೆ ಕೈಮುಗಿದು ನಿಂತ.

ತತ್ರ ರಾಜಾ ಗುಹೋ ನಾಮ ರಾಮಸ್ಯಾತ್ಮಸಮಃ ಸಖಾ ।
ನಿಷಾದಜಾತ್ಯೋ ಬಲವಾನ್ ಸ್ಥಪತಿಶ್ಚೇತಿ ವಿಶ್ರುತಃ ॥೩೩॥

ಅಲ್ಲಿ ಶೃಂಗವೇರ ಪುರದಲ್ಲಿ ರಾಜನು ಗುಹನೆಂಬುವನು. ರಾಮನಿಗೆ ಪ್ರಾಣ-ಸಮನಾದ ಸ್ನೇಹಿತ. ನಿಷಾದ ಜಾತಿಯವನು ಚತುರಂಗ ಬಲಉಳ್ಳವನು. ರಾಜ ಎಂದು ಪ್ರಸಿದ್ಧನಾಗಿದ್ದ.

ಪಾಂಫ್ರ ಆಚಾರ್ಯರು ಹೇಳುತ್ತಾರೆ— 'ಈ ಗುಹನು ಆ ಗುಹನ, ಕುಮಾರಸ್ವಾಮಿಯ ಅವತಾರ' ಎಂದು. 'ಸಾಂಯಾತ್ರಿಕೋಽಯಂ ಗುಹಃ ಸ್ಕಂದಾವತಾರ ಏವ'

ಸ ಶ್ರುತ್ವಾ ಪುರುಷವ್ಯಾಘ್ರಂ ರಾಮಂ ವಿಷಯಮಾಗತಮ್ ।
ವೃದ್ಧೈಃ ಪರಿವೃತೋಽಮಾತ್ಯೈರ್ಜ್ಞಾತಿಭಿಶ್ಚಾಪ್ಯುಪಾಗತಃ ॥೩೪॥

ಅವನು ಪುರುಷೋತ್ತಮನಾದ ರಾಮ ತನ್ನ ದೇಶಕ್ಕೆ ಬಂದುದನ್ನು ಕೇಳಿದೊಡನೆ ವೃದ್ಧರಾದ ಮಂತ್ರಿಗಳಿಂದಲೂ ಬಂಧುಮಿತ್ರರಿಂದಲೂ ಪರಿವೃತನಾಗಿ ರಾಮನ ಬಳಿಗೆ ಬಂದ.

ತತೋ ನಿಷಾದಾಧಿಪತಿಂ ದೃಷ್ಟ್ವಾ ದೂರಾದುಪಸ್ಥಿತಮ್ ।
ಸಹ ಸೌಮಿತ್ರಿಣಾ ರಾಮಃ ಸಮಾಗಚ್ಛದ್ಗುಹೇನ ಸಃ ॥೩೫॥

ಬಂದು ದೂರದಲ್ಲಿ ನಿಂತ ಬೇಡರ ರಾಜನನ್ನು ನೋಡಿ ಶ್ರೀರಾಮ ಲಕ್ಷ್ಮಣ-ನೊಂದಿಗೆ ಬಂದು ಆಲಿಂಗಿಸಿದ.

ತಮಾರ್ತಃ ಸಂಪರಿಷ್ವಜ್ಯ ಗುಹೋ ರಾಘವಮಬ್ರವೀತ್ ।
ಯಥಾಯೋಧ್ಯಾ ತಥೇಯಂ ತೇ ರಾಮ ಕಿಂ ಕರವಾಣಿ ತೇ ॥೩೬॥

ಗುಹನು ರಾಮನ ಮುನಿವೇಷವನ್ನು ಕಂಡು ಶೋಕಾರ್ತನಾಗಿ ಆಲಿಂಗಿಸಿ ಅವನಿಗೆ ಹೇಳಿದ— 'ರಾಮ, ಅಯೋಧ್ಯೆ ಹೇಗೋ ಹಾಗೇ ನನ್ನ ರಾಜ್ಯವೂ ಕೂಡ ನಿನ್ನದೆ. ನಿನಗೆ ಏನು ಸೇವೆ ಮಾಡಲಿ?' ಎಂದು.

ಈದೃಶಂ ಹಿ ಮಹಾಬಾಹೋ ಕಃ ಪ್ರಾಪ್ಸ್ಯತ್ಯತಿಥಿಂ ಪ್ರಿಯಮ್ ।
ತತೋ ಗುಣವದನ್ನಾದ್ಯಮುಪಾದಾಯ ಪೃಥಗ್ವಿಧಮ್ ॥೩೭॥

ಅರ್ಘ್ಯಂ ಚೋಪಾನಯತ್ ಕ್ಷಿಪ್ರಂ ವಾಕ್ಯಂ ಚೇದಮುವಾಚ ಹ ।
ಸ್ವಾಗತಂ ತೇ ಮಹಾಬಾಹೋ ತವೇಯಮಖಿಲಾ ಮಹೀ ॥೩೮॥

'ಮಹಾಬಾಹೋ, ನಿನ್ನಂಥ ಪ್ರಿಯ ಅತಿಥಿಯನ್ನು ಯಾರು ತಾನೆ ಪಡೆಯ-ಬಲ್ಲ?' ಎಂದು ಹೇಳಿ ಗುಹನು ಬೇಗನೆ ನಾನಾ ಬಗೆಯ ಒಳ್ಳೆಯ ಅನ್ನಪಾನಾದಿ-ಗಳನ್ನು ತಂದು, ಅರ್ಘ್ಯವನ್ನಿತ್ತು ನುಡಿದ, ಮಹಾಬಾಹುವೆ, ನಿನಗೆ ಸ್ವಾಗತ. ಈ ಎಲ್ಲ ರಾಜ್ಯವೂ ನಿನ್ನದು' ಎಂದು.

ವಯಂ ಪ್ರೇಷ್ಯಾ ಭವಾನ್ ಭರ್ತಾ ಸಾಧು ರಾಜ್ಯಂ ಪ್ರಶಾಧಿ ನಃ ।
ಭಕ್ಷ್ಯಂ ಭೋಜ್ಯಂ ಚ ಪೇಯಂ ಚ ಲೇಹ್ಯಂ ಚೇದಮುಪಸ್ಥಿತಮ್
॥೩೯॥

ಶಯನಾನಿ ಚ ಮುಖ್ಯಾನಿ ವಾಜಿನಾಂ ಖಾದನಂ ಚ ತೇ ।
ಗುಹಮೇವಂ ಬ್ರುವಾಣಂ ತಂ ರಾಘವಃ ಪ್ರತ್ಯಭಾಷತ ॥೪೦॥

'ನಾವು ನಿನ್ನ ಸೇವಕರು. ನೀನು ಪ್ರಭು. ನಮ್ಮ ರಾಜ್ಯವನ್ನು ಚೆನ್ನಾಗಿ ನೀನೆ ಆಳು. ಭಕ್ಷ್ಯಭೋಜ್ಯ ಪೇಯ ಲೇಹ್ಯವೆಲ್ಲವೂ ಇಲ್ಲಿ ನಿನ್ನ ಮುಂದೆ ಇರಿಸಿದ್ದೇನೆ. ಮಲಗಲು ಶ್ರೇಷ್ಠವಾದ ಮಂಚಗಳೂ ಇಲ್ಲಿ ಇವೆ. ಕುದುರೆಗಳಿಗೆ ಬೇಕಾದ ಆಹಾರ

ಸಾಮಗ್ರಿಗಳೂ ಸಿದ್ಧವಾಗಿವೆ'— ಎಂದು ಗುಹನು ಹೀಗೆ ಹೇಳಿದಾಗ ಶ್ರೀರಾಮನುಡಿದ.

ಗುಹನು ಹೀನ ಜಾತಿಯವನು ಕುಲಗೋತ್ರವಿಲ್ಲದವನು ಅವನೊಂದಿಗೆ ಕ್ಷತ್ರಿಯನಾದ ಶ್ರೀರಾಮ ಸ್ನೇಹ ಮಾಡುವುದು ಹೇಗೆ? 'ಪರಮಾತ್ಮನಿಗೆ ಅದು ದೋಷವಲ್ಲ. ಭಕ್ತಿ ಇದ್ದಲ್ಲಿ ಭಗವಂತ ಬರುತ್ತಾನೆ' ಎನ್ನಬಾರದು. ಪರಮಾತ್ಮನು ಅವತಾರದಲ್ಲಿ—

'ಉತ್ಸೀದೇಯು ರಿಮೇ ಲೋಕಾಃ ನ ಕುರ್ಯಾಂ ಕರ್ಮ ಚೇದಹಂ'

ಎನ್ನುತ್ತ ಲೋಕಕ್ಕೆ ಧರ್ಮಶಿಕ್ಷಣ ನೀಡುವುದಕ್ಕಾಗಿ ಧರ್ಮಾಚರಣನಿಯಮವನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತಾನೆ.

ಈ ಪ್ರಶ್ನೆಗೆ ವ್ಯಾಖ್ಯಾನಕಾರರು ಹೀಗೆ ಸಮಾಧಾನ ನೀಡಿದ್ದಾರೆ—

ನಿಷಾದರು ಹೀನಜಾತಿಯವರಲ್ಲ. ಕ್ಷತ್ರಿಯರಲ್ಲಿಯೇ ಒಂದು ಒಳಪಂಗಡದವರು. ಭಗವದವತಾರಭೂತನಾದ ಪೃಥುಚಕ್ರವರ್ತಿಯ ತಂದೆಯಾದ ಕ್ಷತ್ರಿಯ ವೇನರಾಜನ ಶರೀರವನ್ನು ಮುನಿಗಳು ಮಥಿಸಿದಾಗ ಉದ್ಭವಿಸಿದ ಜಾತಿಯಾದ್ದರಿಂದ ನಿಷಾದರು ಕ್ಷತ್ರಿಯರೆ. ಅದರಿಂದಲೆ 'ನಿಷಾದ ಸ್ಥಪತಿಂಯಾಜಯೇತ್' ಎಂಬ ಶ್ರುತ್ಯನುಸಾರವಾಗಿ 'ನಿಷಾದಸ್ಥಪತಿ'ಗಳಿಗೆ ನಿಷಾದರಾಜರಿಗೆ ಯಾಗಾಧಿಕಾರವಿದೆ. ಮೀಮಾಂಸಕರು ನಿಷಾದಸ್ಥಪತ್ಯಧಿಕರಣ(6.8.3)ದಲ್ಲಿ ಇದನ್ನು ವಿಚಾರ ಮಾಡಿದ್ದಾರೆ. ಅದರಿಂದಲೇ 'ಹೀನ ಜಾತಿಯವರು ರಾಮನಿಗೆ ಅನ್ನಪಾನಾದಿಗಳನ್ನು ನೀಡುವುದು ಹೇಗೆ' ಎಂಬ ಪ್ರಶ್ನೆ ಉದ್ಭವಿಸುವುದಿಲ್ಲ.

ಧರ್ಮಶಾಸ್ತ್ರದಲ್ಲಿ 'ಹೀನಪ್ರೇಷ್ಯಂ ಹೀನಸಖ್ಯಂ ಹೀನಗೇಹ ನಿವೇಶನಂ' ಎನ್ನುವಾಗ ಹೀನಪ್ರಕರಣದಲ್ಲಿ ನಿಷಾದರನ್ನು ಪರಿಗಣನ ಮಾಡಿದ್ದು 'ನಿಷಾದ' ಎಂಬ ಒಂದು ವಿಲೋಮಜಾತಿಯನ್ನು ಹೊರತು 'ನಿಷಾದ' ಎಂಬ ಕ್ಷತ್ರಿಯ ಜಾತಿಯಲ್ಲಿ ಅಮುಖ್ಯವಾದ ಒಂದು ಒಳಪಂಗಡವನ್ನಲ್ಲ ಎಂದು ವಿರೋಧ ಪರಿಹಾರ ಮಾಡಿಕೊಳ್ಳಬೇಕು.

ವಿಲೋಮಜಾತಿಯ ವಿಷಯದಲ್ಲಿ 'ನಿಷಾದ' ಶಬ್ದವು ಗೌಣ. ಅಮುಖ್ಯ. ಕ್ಷತ್ರಿಯಜಾತಿಯಲ್ಲಿ ಮುಖ್ಯ. ಅದರಿಂದ ದಶರಥನ ಅಪೇಕ್ಷೆಯಂತೆ ನಿಷಾದರಾಜ ಗುಹನು ರಾಮನ ಮಿತ್ರನಾಗಿದ್ದ.

'ಹೀನ ಪ್ರೇಷ್ಯಂ ಹೀನ ಸಖ್ಯಂ' ಎಂದು ಹೀನ ಜಾತಿಯವರೊಡನೆ ಸಖ್ಯ ಮಾಡುವುದನ್ನು ಉಪಪಾತಕವೆಂದು ಪರಿಗಣಿಸಿದರೂ ಈ ಜಾತಿಯವರಲ್ಲಿರುವ

'ಆಟವಿಕ ಬಲ' ಕಾಡು ಜನರ ಬೇಡರ ಸೈನ್ಯವೂ ರಾಜರಿಗೆ ಬೇಕಾಗುವುದರಿಂದ ರಾಜರಿಗೆ ಇದು ಪಾತಕವಾಗುವುದಿಲ್ಲ.

ಅರ್ಚಿತಾಶ್ಚೈವ ಹೃಷ್ಟಾಶ್ಚ ಭವತಾ ಸರ್ವಥಾ ವಯಮ್ ।
ಪದ್ಭ್ಯಾಮಭಿಗಮಾಚ್ಚೈವ ಸ್ನೇಹಸಂದರ್ಶನೇನ ಚ ॥೪೧॥

'ಮಿತ್ರನೆ, ಬರಿಗಾಲಲ್ಲಿ ನಡೆದು ಬಂದು ನಮ್ಮನ್ನು ಇದಿರುಗೊಂಡೆ. ನನ್ನ ರಾಜ್ಯಕ್ಕೆ ನೀನೇ ಪ್ರಭು ಎನ್ನುತ್ತ ಪ್ರೀತಿಯನ್ನು ತೋರಿದೆ. ಅದರಿಂದ ನಿನ್ನ ಈ ಆರಾಧನೆಯಿಂದ ನಾವು ಸರ್ವಥಾ ಸಂತುಷ್ಟರಾಗಿದ್ದೇವೆ' ಎಂದು.

ಭುಜಾಭ್ಯಾಂ ಸಾಧುಪೀನಾಭ್ಯಾಂ ಪೀಡಯನ್ ವಾಕ್ಯಮಬ್ರವೀತ್ ।
ದಿಷ್ಟ್ಯಾ ತ್ವಾಂ ಗುಹ ಪಶ್ಯಾಮಿ ನೀರೋಗಂ ಸಹ ಬಾಂಧವೈಃ ।
ಅಪಿ ತೇ ಕುಶಲಂ ರಾಷ್ಟ್ರೇ ಮಿತ್ರೇಷು ಚ ಧನೇಷು ಚ ॥೪೨॥

ಶ್ರೀರಾಮ ಗುಹನನ್ನು ಬಲುಪುಷ್ಟವಾದ ತನ್ನ ತೋಳುಗಳಿಂದ ಬಿಗಿದಪ್ಪಿ ನುಡಿದ. 'ಗುಹನೆ, ನೀನು ಬಂಧುಸಮೇತ ಆರೋಗ್ಯದಿಂದಿರುವುದನ್ನು ಕಂಡು ನನಗೆ ಬಲು ಸಂತೋಷವಾಗಿದೆ. ನಿನ್ನ ರಾಜ್ಯ ಮಿತ್ರರು ಧನಸಂಪತ್ತುಗಳೆಲ್ಲವೂ ಕ್ಷೇಮದಿಂದಿವೆ ತಾನೆ?

ಯದೇತದ್ಭವತಾ ಕಿಂಚಿತ್ ಪ್ರೀತ್ಯಾ ಸಮುಪಕಲ್ಪಿತಮ್ ।
ಸರ್ವಂ ತದನುಜಾನಾಮಿ ನ ಹಿ ವರ್ತೇ ಪ್ರತಿಗ್ರಹೇ ॥೪೩॥

ನೀನು ಪ್ರೀತಿಯಿಂದ 'ಎಲ್ಲವೂ ನಿನ್ನದೆ' ಎನ್ನುವುದನ್ನು ಒಪ್ಪಿ ದೃಷ್ಟಿಯಿಂದಲೇ ಸ್ವೀಕರಿಸಿ ನಿನಗೇ ನೀಡುತ್ತೇನೆ. ಏನು ಒಂದಿಷ್ಟು ಭಕ್ಷ್ಯಭೋಜ್ಯಾದಿಗಳನ್ನು ಸಿದ್ಧಪಡಿಸಿದೆಯೋ ಅದನ್ನು ಮಾತ್ರ ನಾನು ಸ್ವೀಕರಿಸುವುದಿಲ್ಲ.

ಕುಶಚೀರಾಜಿನಧರಂ ಫಲಮೂಲಾಶಿನಂ ಚ ಮಾಮ್ ।
ವಿದ್ಧಿ ಪ್ರಣಿಹಿತಂ ಧರ್ಮೇ ತಾಪಸಂ ವನಗೋಚರಮ್ ॥೪೪॥

ಏಕೆಂದರೆ ನಾನೀಗ ವನವಾಸಿಯಾಗಿ ತಪಸ್ವಿಯಾಗಿ ತಂದೆಯ ವಚನವನ್ನು ಪಾಲಿಸುವ ಧರ್ಮದಲ್ಲಿ ನಿಷ್ಠನಾಗಿದ್ದೇನೆ. ಅದಕ್ಕೆ ದರ್ಭೆ ನಾರುಡೆ ಅಜಿನಧಾರಿ-ಯಾಗಿ ಕೇವಲ ಹಣ್ಣು ಗಡ್ಡೆಗಳನ್ನು ಉಣ್ಣುತ್ತಿದ್ದೇನೆ. ಸಿದ್ಧಪಡಿಸಿದ ಭಕ್ಷ್ಯಭೋಜ್ಯ ಗಳನ್ನು ಉಣ್ಣುವುದಿಲ್ಲ ಎಂದು ತಿಳಿ.

ಅಶ್ವಾನಾಂ ಖಾದನೇನಾಹಮರ್ಥೀ ನಾನ್ಯೇನ ಕೇನಚಿತ್ ।
ಏತಾವತಾತ್ರಭವತಾ ಭವಿಷ್ಯಾಮಿ ಸುಪೂಜಿತಃ ॥೪೫॥

ಕುದುರೆಗಳಿಗೆ ಹುಲ್ಲು ತಿನಿಸುವುದನ್ನು ಮಾತ್ರ ಅಪೇಕ್ಷಿಸುತ್ತೇನೆ. ಬೇರೆ ಏನನ್ನೂ ಅಲ್ಲ. ಇಷ್ಟರಿಂದಲೇ ನೀನು ನನ್ನನ್ನು ಸತ್ಕರಿಸಿದಂತಾಗುತ್ತದೆ.

ಏತೇ ಹಿ ದಯಿತಾ ರಾಜ್ಞಃ ಪಿತುರ್ದಶರಥಸ್ಯ ಮೇ ।
ಏತೈಃ ಸುವಿಹಿತೈರಶ್ವೈರ್ಭವಿಷ್ಯಾಮ್ಯಹಮರ್ಚಿತಃ ॥೪೬॥

ಈ ಕುದುರೆಗಳು ತಂದೆ ದಶರಥ ಮಹಾರಾಜನಿಗೆ ಪ್ರಿಯವಾಗಿವೆ. ಇವುಗಳಿಗೆ ಉಪಚಾರ ಮಾಡಿದರೆ ನನಗೇ ಉಪಚಾರ ಮಾಡಿದಂತಾಗುತ್ತದೆ.

ಅಶ್ವಾನಾಂ ಪ್ರತಿಪಾನಂ ಚ ಖಾದನಂ ಚೈವ ಸೋಽನ್ವಶಾತ್ ।
ಗುಹಸ್ತತ್ರೈವ ಪುರುಷಾಂಸ್ತ್ವರಿತಂ ದೀಯತಾಮಿತಿ ॥೪೭॥

ಗುಹನು ಆಗಲೆ ಸೇವಕರಿಗೆ ಆಜ್ಞೆ ಮಾಡಿದ. 'ಕುದುರೆಗಳಿಗೆ ಬೇಗನೆ ಹುಲ್ಲು ನೀರು ಉಣ್ಣಿಸಿರಿ ಮತ್ತು 'ಪ್ರತಿಪಾನ' ನೀಡಿರಿ, ಹಾಲು ಕುಡಿಸಿರಿ, 'ಖಾದನ'ವನ್ನು ಅಂದರೆ ಸಕ್ಕರೆ ತುಪ್ಪ ಬೆರೆಸಿದ ಕಜ್ಜಾಯವನ್ನು ತಿನ್ನಿಸಿರಿ' ಎಂದು.

ತತಶ್ಚೀರೋತ್ತರಾಸಂಗಃ ಸಂಧ್ಯಾಮನ್ವಾಸ್ಯ ಪಶ್ಚಿಮಾಮ್ ।
ಜಲಮೇವಾದದೇ ಭೋಜ್ಯಂ ಲಕ್ಷ್ಮಣೇನಾಹೃತಂ ಸ್ವಯಮ್ ॥೪೮॥

ಬಳಿಕ ಶ್ರೀರಾಮ ನಾರುಮಡಿಯನ್ನು ಉತ್ತರೀಯವಾಗಿ ಹೊದ್ದು ಸಾಯಂ ಸಂಧ್ಯೋಪಾಸನೆ ಮಾಡಿ ಸ್ವತಃ ಲಕ್ಷ್ಮಣನು ತಂದ ತೀರ್ಥಜಲವನ್ನೇ ಆಹಾರವಾಗಿ ಸೇವನೆ ಮಾಡಿದ.

ತಂದೆತಾಯಿಗಳಿದ್ದವರೂ ಸಾಕ್ಷಾದ್ ಗಂಗೆ ಸಿಕ್ಕಾಗ ತೀರ್ಥೋಪವಾಸ ಮಾಡಬೇಕು.

ತಸ್ಯ ಭೂಮೌ ಶಯಾನಸ್ಯ ಪಾದೌ ಪ್ರಕ್ಷಾಲ್ಯ ಲಕ್ಷ್ಮಣಃ ।
ಸಭಾರ್ಯಸ್ಯ ತತೋಽಭ್ಯೇತ್ಯ ತಸ್ಥೌ ವೃಕ್ಷಮುಪಾಶ್ರಿತಃ ॥೪೯॥

ನೆಲದಮೇಲೆ ಮಲಗುವುದಕ್ಕೆ ಮೊದಲು ಸೀತಾ ಸಮೇತ ಶ್ರೀರಾಮನ ಪಾದಗಳನ್ನು ಲಕ್ಷ್ಮಣನು ತೊಳೆದು, ಒಂದು ಮರದ ಬುಡಕ್ಕೆ ಹೋಗಿ ಕುಳಿತ.

ಗುಹೋಽಪಿ ಸಹ ಸೂತೇನ ಸೌಮಿತ್ರಿಮನುಭಾಷಯನ್ ।
ಅನ್ವಜಾಗ್ರತ್ತತೋ ರಾಮಮಪ್ರಮತ್ತೋ ಧನುರ್ಧರಃ ॥೫೦॥

ಗುಹನೂ ಕೂಡ ಎಚ್ಚರದಿಂದ ರಾಮನನ್ನು ಕಾಯುವುದಕ್ಕಾಗಿ ಧನುರ್ಧಾರಿಯಾಗಿ ಲಕ್ಷ್ಮಣನನ್ನು ರಾಮನ ಗುಣಗಳ ಬಗ್ಗೆ ಮಾತನಾಡಿಸುತ್ತ ಸುಮಂತ್ರನೊಂದಿಗೆ ಕುಳಿತ.

ತಥಾ ಶಯಾನಸ್ಯ ತತೋಽಸ್ಯ ಧೀಮತೋ
ಯಶಸ್ವಿನೋ ದಾಶರಥೇರ್ಮಹಾತ್ಮನಃ ।
ಅದೃಷ್ಟದುಃಖಸ್ಯ ಸುಖೋಚಿತಸ್ಯ ಸಾ
ತದಾ ವ್ಯತೀಯಾಯ ಚಿರೇಣ ಶರ್ವರೀ ॥೫೧॥

ದುಃಖವನ್ನು ಕಂಡರಿಯದಿದ್ದ ಸುಖಕ್ಕೇ ಅರ್ಹನಾದ ಯಶಸ್ವಿಯೂ ಮನಸ್ವಿಯೂ ಆದ ಮಹಾತ್ಮ ಶ್ರೀರಾಮನು ಮಲಗಿದ್ದಂತೆ ಆ ರಾತ್ರಿ ನಿಧಾನವಾಗಿ ಕಳೆಯಿತು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಐವತ್ತನೇ ಸರ್ಗ ಮುಗಿಯಿತು.

❖

ಏಕಪಂಚಾಶಃ ಸರ್ಗಃ

ಸರ್ಗ – 51

ಗುಹ ಮತ್ತು ಲಕ್ಷ್ಮಣರು ನಿದ್ರೆ ಮಾಡದೆ ಸಂಭಾಷಿಸುವುದು.

ತಂ ಜಾಗ್ರತಮದಂಭೇನ ಭ್ರಾತುರರ್ಥಾಯ ಲಕ್ಷ್ಮಣಮ್ ।
ಗುಹಃ ಸಂತಾಪಸಂತಪ್ತೋ ರಾಘವಂ ವಾಕ್ಯಮಬ್ರವೀತ್ ॥೧॥

ಅಣ್ಣನ ರಕ್ಷಣೆಗಾಗಿ ಸ್ವಾಭಾವಿಕ ಪ್ರೀತಿಯಿಂದ ತಮ್ಮ ಲಕ್ಷ್ಮಣನು ಮಲಗದೆಯೇ ಜಾಗರಣ ಮಾಡುವಾಗ, ಶ್ರೀರಾಮ ನೆಲದ ಮೇಲೆ ಮಲಗಿದ್ದನ್ನು ಕಂಡು ಸಂತಾಪದಿಂದ ಬೆಂದು, ಗುಹನು ಲಕ್ಷ್ಮಣನಿಗೆ ಹೇಳಿದ.

ಇಯಂ ತಾತ ಸುಖಾ ಶಯ್ಯಾ ತ್ವದರ್ಥಮುಪಕಲ್ಪಿತಾ ।
ಪ್ರತ್ಯಾಶ್ವಸಿಹಿ ಸಾಧ್ವಸ್ಯಾಂ ರಾಜಪುತ್ರ ಯಥಾಸುಖಮ್ ॥೨॥

ರಾಜಕುಮಾರ, ಸುಖಕರವಾದ ಈ ಹಾಸಿಗೆಯನ್ನು ನಿನಗಾಗಿ ಸಿದ್ಧಪಡಿಸಿದ್ದೇನೆ. ಇದರ ಮೇಲೆ ಸುಖವಾಗಿ ವಿಶ್ರಮಿಸಿಕೊಳ್ಳು.

ಉಚಿತೋಽಯಂ ಜನಃ ಸರ್ವಃ ಕ್ಲೇಶಾನಾಂ ತ್ವಂ ಸುಖೋಚಿತಃ ।
ಗುಪ್ತ್ಯರ್ಥಂ ಜಾಗರಿಷ್ಯಾಮಃ ಕಾಕುತ್ಸ್ಥಸ್ಯ ವಯಂ ನಿಶಾಮ್ ॥೩॥

ಈ ನನ್ನ ಪರಿವಾರಜನರು ಎಲ್ಲರೂ ಕ್ಲೇಶಕರವಾದ ಪಹರೆಯ ಕಾರ್ಯಕ್ಕೆ ತಕ್ಕವರಾಗಿರುವರು. ನೀನು ಸುಖಕ್ಕೆ ತಕ್ಕವನು. ಶ್ರೀರಾಮನ ರಕ್ಷಣೆಗಾಗಿ ನಾವು ರಾತ್ರಿ ಇಡೀ ಜಾಗರಣ ಮಾಡುವೆವು.

ನ ಹಿ ರಾಮಾತ್ಪ್ರಿಯತರೋ ಮಮಾಸ್ತಿ ಭುವಿ ಕಶ್ಚನ ।
ಬ್ರವೀಮ್ಯೇತದಹಂ ಸತ್ಯಂ ಸತ್ಯೇನೈವ ಚ ತೇ ಶಪೇ ॥೪॥

ನನಗೆ ಶ್ರೀರಾಮನಿಗಿಂತ ಹೆಚ್ಚು ಪ್ರಿಯನಾದವನು ಭೂಮಿಯಲ್ಲಿ ಯಾರೂ ಇಲ್ಲ. ಈ ಮಾತನ್ನು ಸತ್ಯವಾಗಿ ಹೇಳುತ್ತಿದ್ದೇನೆ. ನಿನಗೆ ಸತ್ಯದ ಮೇಲೆ ಆಣೆಯಿಟ್ಟು ಹೇಳುತ್ತೇನೆ.

ಅಸ್ಯ ಪ್ರಸಾದಾದಾಶಂಸೇ ಲೋಕೇಽಸ್ಮಿನ್ ಸುಮಹದ್ಯಶಃ ।
ಧರ್ಮಾವಾಪ್ತಿಂ ಚ ವಿಪುಲಾಮರ್ಥಕಾಮೌ ಚ ಪುಷ್ಕಲೌ ॥೫॥

ಈ ಲೋಕದಲ್ಲಿ ನನಗೆ ಮಹತ್ತರವಾದ ಯಶಸ್ಸನ್ನಾಗಲಿ ವಿಪುಲವಾದ ಪುಣ್ಯಲಾಭವನ್ನಾಗಲಿ ವಿಪುಲವಾದ ಅರ್ಥಕಾಮಗಳನ್ನಾಗಲಿ ಶ್ರೀರಾಮನ ಅನುಗ್ರಹದಿಂದಲೇ ನಾನು ನಿರೀಕ್ಷಿಸುತ್ತೇನೆ.

ಸೋಽಹಂ ಪ್ರಿಯಸಖಂ ರಾಮಂ ಶಯಾನಂ ಸಹ ಸೀತಯಾ ।
ರಕ್ಷಿಷ್ಯಾಮಿ ಧನುಷ್ಪಾಣಿಃ ಸರ್ವತೋ ಜ್ಞಾತಿಭಿಃ ಸಹ ॥೬॥

ಪ್ರಿಯಮಿತ್ರನಾದ ರಾಮ ಸೀತೆಯೊಡನೆ ಮಲಗಿರುವಾಗ ಅವನನ್ನು ನಾನು ಧನುರ್ಧಾರಿಯಾಗಿ ಬಂಧುಗಳೊಡನೆ ಎಲ್ಲ ಕಡೆಯಿಂದಲೂ ರಕ್ಷಿಸುವೆನು.

ನ ಹಿ ಮೇಽವಿದಿತಂ ಕಿಂಚಿದ್ವನೇಽಸ್ಮಿಂಶ್ಚರತಃ ಸದಾ ।
ಚತುರಂಗಂ ಹ್ಯಪಿ ಬಲಂ ಸುಮಹತ್ ಪ್ರಸಹೇಮಹಿ ॥೭॥

ಈ ಅರಣ್ಯದಲ್ಲಿ ಸದಾ ಸಂಚರಿಸುವ ನನಗೆ ಇಲ್ಲಿ ತಿಳಿಯದೆ ಇರುವುದು ಏನೂ ಇಲ್ಲ. ಮಹತ್ತರವಾದ ಚತುರಂಗ ಬಲವೇ ಬಂದರೂ ಕೂಡ ನಾವು ಅದನ್ನು ಇದಿರಿಸಬಲ್ಲೆವು'.

ಲಕ್ಷ್ಮಣಸ್ತಂ ತದೋವಾಚ ರಕ್ಷ್ಯಮಾಣಾಸ್ತ್ವಯಾನಘ ।
ನಾತ್ರ ಭೀತಾ ವಯಾಂ ಸರ್ವೇ ಧರ್ಮಮೇವಾನುಪಶ್ಯತಾ ॥೮॥

ಕಥಂ ದಾಶರಥೌ ಭೂಮೌ ಶಯಾನೇ ಸಹ ಸೀತಯಾ ।
ಶಕ್ಯಾ ನಿದ್ರಾ ಮಯಾ ಲಬ್ಧುಂ ಜೀವಿತಂ ವಾ ಸುಖಾನಿ ವಾ ॥೯॥

ಆಗ ಲಕ್ಷ್ಮಣನು ನುಡಿದ, 'ಪಾಪರಹಿತನೆ, ನೀನು ರಕ್ಷಿಸುತ್ತಿರುವಾಗ ನಾವೆಲ್ಲರೂ ಇಲ್ಲಿ ನಿರ್ಭೀತರೇ ಆಗಿರುತ್ತೇವೆ. ಆದರೆ ಧರ್ಮವನ್ನು ಬಲ್ಲ ನನಗೆ ರಾಮನು ಸೀತೆಯೊಂದಿಗೆ ನೆಲದ ಮೇಲೆ ಮಲಗಿದ್ದರೆ ನಿದ್ದೆ ಹೇಗೆ ಬಂದೀತು? ಬದುಕನ್ನಾಗಲಿ ಸುಖವನ್ನಾಗಲಿ ನಾನು ಹೇಗೆ ಪಡೆಯಬಲ್ಲೆ?

ಯೋ ನ ದೇವಾಸುರೈಃ ಸರ್ವೈಃ ಶಕ್ಯಃ ಪ್ರಸಹಿತುಂ ಯುಧಿ ।
ತಂ ಪಶ್ಯ ಸುಖಸಂವಿಷ್ಟಂ ತೃಣೇಷು ಸಹ ಸೀತಯಾ ॥೧೦॥

ದೇವತೆಗಳು ಅಸುರರು ಎಲ್ಲರೂ ಬಂದರೂ ರಾಮನನ್ನು ಯುದ್ಧದಲ್ಲಿ ಇದಿರಿಸಲು ಶಕ್ತರಾಗಲಾರರು. ಅವನನ್ನು ನೋಡು, ಸೀತೆಯೊಂದಿಗೆ ಹುಲ್ಲಿನ ಮೇಲೆ ಹಾಯಾಗಿ ಮಲಗಿದ್ದಾನೆ.

ಯೋ ಮಂತ್ರತಪಸಾ ಲಬ್ಧೋ ವಿವಿಧೈಶ್ಚ ಪರಿಶ್ರಮೈಃ ।
ಏಕೋ ದಶರಥಸ್ಯೇಷ್ಟಃ ಪುತ್ರಃ ಸದೃಶಲಕ್ಷಣಃ ॥೧೧॥

ಮಂತ್ರಜಪ ತಪೋಽನುಷ್ಠಾನ ನಾನಾ ಯಾಗಾದಿ ಪರಿಶ್ರಮಗಳಿಂದ ಲಬ್ಧನಾದ, ದಶರಥನಿಗೆ ಸದೃಶಲಕ್ಷಣಗಳಿಂದೊಪ್ಪುವ, ಮುಖ್ಯ ಇಷ್ಟನಾದ ಪುತ್ರನು ರಾಮ.

ಅಸ್ಮಿನ್ ಪ್ರವ್ರಾಜಿತೇ ರಾಜಾ ನ ಚಿರಂ ವರ್ತಯಿಷ್ಯತಿ ।
ವಿಧವಾ ಮೇದಿನೀ ನೂನಂ ಕ್ಷಿಪ್ರಮೇವ ಭವಿಷ್ಯತಿ ॥೧೨॥

ಅಂಥ ರಾಮನನ್ನು ಕಾಡಿಗೆ ಕಳಿಸಿದ ಮೇಲೆ ರಾಜ ಹೆಚ್ಚುದಿನ ಬದುಕಿರುವುದಿಲ್ಲ. ನಿಶ್ಚಯವಾಗಿ ರಾಜ್ಯವು ಬೇಗನೇ ಅನಾಥವಾಗುವುದು.

ವಿನದ್ಯ ಸುಮಹಾನಾದಂ ಶ್ರಮೇಣೋಪರತಾಃ ಸ್ತ್ರಿಯಃ ।
ನಿರ್ಘೋಷೋಪರತಂ ತಾತ ಮನ್ಯೇ ರಾಜನಿವೇಶನಮ್ ॥೧೩॥

ಅಂತಃಪುರದ ಸ್ತ್ರೀಯರು ದೊಡ್ಡ ಧ್ವನಿಯಿಂದ ಅತ್ತು ಆಯಾಸದಿಂದ ಸುಮ್ಮ-ನಾಗಿರುತ್ತಾರೆ. ಅರಮನೆಯಲ್ಲಿ ಈಗ ಏನೂ ಗದ್ದಲವಿರುವುದಿಲ್ಲ ಎಂದು ನಾನು ಭಾವಿಸುತ್ತೇನೆ.

ಕೌಸಲ್ಯಾ ಚೈವ ರಾಜಾ ಚ ತಥೈವ ಜನನೀ ಮಮ ।
ನಾಶಂಸೇ ಯದಿ ಜೀವಂತಿ ಸರ್ವೇ ತೇ ಶರ್ವರೀಮಿಮಾಮ್ ॥೧೪॥

ಕೌಸಲ್ಯೆಯೂ ರಾಜನೂ ನನ್ನ ಮಾತೆಯೂ ಇವರೆಲ್ಲರೂ ಈ ರಾತ್ರಿಯಲ್ಲಿ ಬದುಕಿರುತ್ತಾರೆ ಎಂದು ನಾನು ನಿರೀಕ್ಷಿಸುವುದಿಲ್ಲ.

ಜೀವೇದಪಿ ಹಿ ಮೇ ಮಾತಾ ಶತ್ರುಘ್ನಸ್ಯಾನ್ವವೇಕ್ಷಯಾ ।
ತದ್ದುಃಖಂ ಯತ್ತು ಕೌಸಲ್ಯಾ ವೀರಸೂರ್ವಿನಶಿಷ್ಯತಿ ॥೧೫॥

ಒಂದುವೇಳೆ ನನ್ನ ಮಾತೆ ಶತ್ರುಘ್ನನನ್ನು ನೋಡುತ್ತ ಬದುಕಿದರೂ ವೀರರಾಮನ ಮಾತೆ ಪ್ರಾಣತ್ಯಾಗವನ್ನೇ ಮಾಡುವಳು, ಅದೇ ದುಃಖ.

ಅನುರಕ್ತಜನಾಕೀರ್ಣಾ ಸುಖಾ ಲೋಕಪ್ರಿಯಾವಹಾ ।
ರಾಜವ್ಯಸನಸಂತಪ್ತಾ ಸಾ ಪುರೀ ವಿನಶಿಷ್ಯತಿ ॥೧೬॥

ರಾಮನಲ್ಲಿ ಅನುರಕ್ತರಾದ ಪ್ರಜೆಗಳಿಂದಲೇ ತುಂಬಿರುವ ಸುಖಕರವಾಗಿರುವ

ಲೋಕಕ್ಕೆ ಸಂತಸ ತರುವ ಅಯೋಧ್ಯೆ ರಾಜನ ಮರಣ ದುಃಖದಿಂದ ಬೆಂದು ನಶಿಸುವುದು.

ಕಥಂ ಪುತ್ರಂ ಮಹಾತ್ಮಾನಂ ಜ್ಯೇಷ್ಠಂ ಪ್ರಿಯಮಪಶ್ಯತಃ ।
ಶರೀರಂ ಧಾರಯಿಷ್ಯಂತಿ ಪ್ರಾಣಾ ರಾಜ್ಞೋ ಮಹಾತ್ಮನಃ ॥೧೭॥

ಮಹಾತ್ಮನಾದ ಪ್ರಿಯನಾದ ಜ್ಯೇಷ್ಠಪುತ್ರನನ್ನು ಕಾಣದ ಮಹಾತ್ಮನಾದ ರಾಜನ ಶರೀರವನ್ನು ಪ್ರಾಣಗಳು ಹೇಗೆ ಧರಿಸುತ್ತವೆ?

ವಿನಷ್ಟೇ ನೃಪತೌ ಪಶ್ಚಾತ್ ಕೌಸಲ್ಯಾ ವಿನಶಿಷ್ಯತಿ ।
ಅನಂತರಂ ಚ ಮಾತಾಪಿ ಮಮ ನಾಶಮುಪೈಷ್ಯತಿ ॥೧೮॥

ರಾಜನು ಮರಣ ಹೊಂದಿದರೆ ಬಳಿಕ ಕೌಸಲ್ಯೆಯೂ ಮರಣ ಹೊಂದುವಳು. ಅನಂತರ ನನ್ನ ಮಾತೆಯೂ ಮರಣ ಹೊಂದುವಳು.

ಅತಿಕ್ರಾಂತಮತಿಕ್ರಾಂತಮನವಾಪ್ಯ ಮನೋರಥಮ್ ।
ರಾಮೇ ರಾಜ್ಯಮನಿಕ್ಷಿಪ್ಯ ಪಿತಾ ಮೇ ವಿನಶಿಷ್ಯತಿ ॥೧೯॥

'ಹೋಯಿತು, ಎಲ್ಲವೂ ಹೋಯಿತೆಂ'ದು ರಾಮನಿಗೆ ಅಭಿಷೇಕ ಮಾಡುವ ಮನೋರಥವನ್ನು ಈಡೇರಿಸಿಕೊಳ್ಳಲಾಗದೆ ನನ್ನ ತಂದೆ ದುಃಖಿಸುತ್ತ ರಾಜ್ಯದಲ್ಲಿ ರಾಮನನ್ನು ಕೂಡಿಸದೆಯೇ ಮರಣ ಹೊಂದುವನು.

ಸಿದ್ಧಾರ್ಥಾಃ ಪಿತರಂ ವೃತ್ತಂ ತಸ್ಮಿನ್ ಕಾಲೇಽಪ್ಯುಪಸ್ಥಿತೇ ।
ಪ್ರೇತಕಾರ್ಯೇಷು ಸರ್ವೇಷು ಸಂಸ್ಕರಿಷ್ಯಂತಿ ಭೂಮಿಪಮ್ ॥೨೦॥

ಇದರಿಂದ ಅಭೀಷ್ಟಸಿದ್ಧಿಯನ್ನು ಪಡೆದವರು ಭರತ ಮುಂತಾದವರು ಆ ಕಾಲದಲ್ಲಿ ಎಲ್ಲ ಉತ್ತರ ಕ್ರಿಯೆಗಳಲ್ಲಿ ಪಾಲ್ಗೊಂಡು ಮೃತನಾದ ತಂದೆಯಾದ ರಾಜನಿಗೆ ಸಂಸ್ಕಾರ ಮಾಡುವರು. ನಮಗೆ ಆ ಅವಕಾಶವೂ ಲಭ್ಯವಾಗುವುದಿಲ್ಲ.

ರಮ್ಯಚತ್ವರಸಂಸ್ಥಾನಾಂ ಸುವಿಭಕ್ತಮಹಾಪಥಾಮ್ ।
ಹರ್ಮ್ಯಪ್ರಾಸಾದಸಂಪನ್ನಾಂ ಗಣಿಕಾವರಶೋಭಿತಾಮ್ ॥೨೧॥

ರಥಾಶ್ವಗಜಸಂಬಾಧಾಂ ತೂರ್ಯನಾದವಿನಾದಿತಾಮ್ ।
ಸರ್ವಕಲ್ಯಾಣಸಂಪೂರ್ಣಾಂ ಹೃಷ್ಟಪುಷ್ಟಜನಾಕುಲಾಮ್ ॥೨೨॥

ಆರಾಮೋದ್ಯಾನಸಂಪನ್ನಾಂ ಸಮಾಜೋತ್ಸವಶಾಲಿನೀಮ್ ।
ಸುಖಿತಾ ವಿಚರಿಷ್ಯಂತಿ ರಾಜಧಾನೀಂ ಪಿತುರ್ಮಮ ॥೨೩॥

ಅಪಿ ಜೀವೇದ್ದಶರಥೋ ವನವಾಸಾತ್ ಪುನರ್ವಯಮ್ ।
ಪ್ರತ್ಯಾಗಮ್ಯ ಮಹಾಭಾಗಮಪಿ ಪಶ್ಯೇಮ ಸುವ್ರತಮ್ ॥೨೪॥

ಒಂದುವೇಳೆ ದಶರಥನು ಬದುಕ್ಕಿದ್ದರೆ, ಇನ್ನೂ ರಮ್ಯವಾದ ಚೌಕಗಳು, ಸಮವಾದ ರಾಜ ಮಾರ್ಗಗಳು, ಮಾಳಿಗೆ ಉಪ್ಪರಿಗೆ ಮನೆಗಳು, ಉತ್ತಮ ವೇಶ್ಯೆಯರು, ರಥ ಕುದುರೆ ಆನೆಗಳ ಸಮೂಹಗಳು, ಮಂಗಳವಾದ್ಯ ಘೋಷಗಳು, ಎಲ್ಲ ಮಂಗಳ ಕಾರ್ಯಗಳು, ಸಂತುಷ್ಟ ಸಮೃದ್ಧ ಜನರು, ಉದ್ಯಾನ ಉಪವನಗಳು, ಸಮಾಜೋತ್ಸಗಳು ಇವುಗಳಿಂದ ಕೂಡಿದ ನನ್ನ ತಂದೆಯ ರಾಜಧಾನಿಯಾದ ಅಯೋಧ್ಯೆಯಲ್ಲಿ ಪ್ರಜೆಗಳು ಸುಖವಾಗಿ ಸಂಚರಿಸುತ್ತಾರೆ. ನಾವೂ ವನವಾಸದಿಂದ ಪುನಃ ಹಿಂತಿರುಗಿ ಬಂದು ಮಹಾಭಾಗ್ಯಶಾಲಿಯಾದ ವ್ರತನಿಷ್ಠನಾದ ತಂದೆಯನ್ನು ನೋಡಬಲ್ಲೆವೆ?

ಅಪಿ ಸತ್ಯಪ್ರತಿಜ್ಞೇನ ಸಾರ್ಧಂ ಕುಶಲಿನಾ ವಯಮ್ ।
ನಿವೃತ್ತೇ ವನವಾಸೇಽಸ್ಮಿನ್ನಯೋಧ್ಯಾಂ ಪ್ರವಿಶೇಮಹಿ ॥೨೫॥

ಈ ವನವಾಸ ತೀರಿದಾಗ ಸತ್ಯಪ್ರಜ್ಞನಾದ ಕುಶಲಿಯಾದ ರಾಮನೊಂದಿಗೆ ಅಯೋಧ್ಯೆಯನ್ನು ನಾವು ಪ್ರವೇಶಿಸುವೆವೆ?

ಪರಿದೇವಯಮಾನಸ್ಯ ದುಃಖಾರ್ತಸ್ಯ ಮಹಾತ್ಮನಃ ।
ತಿಷ್ಠತೋ ರಾಜಪುತ್ರಸ್ಯ ಶರ್ವರೀ ಸಾತ್ಯವರ್ತತ ॥೨೬॥

ಹೀಗೆ ದುಃಖಾರ್ತನಾದ ಮಹಾತ್ಮ ರಾಜಕುಮಾರ ಲಕ್ಷ್ಮಣನು ವಿಲಾಪ ಮಾಡುತ್ತಿದ್ದಂತೆಯೇ ಆ ರಾತ್ರಿ ಕಳೆಯಿತು.

ತಥಾ ಹಿ ಸತ್ಯಂ ಬ್ರುವತಿ ಪ್ರಜಾಹಿತೇ
ನರೇಂದ್ರಪುತ್ರೇ ಗುರುಸೌಹೃದಾದ್ಗುಹಃ ।
ಮುಮೋಚ ಬಾಷ್ಪಂ ವ್ಯಸನಾಭಿಪೀಡಿತೋ
ಜ್ವರಾತುರೋ ನಾಗ ಇವ ವ್ಯಥಾತುರಃ ॥೨೭॥

ಪ್ರಜಾಹಿತಕಾರಿ ರಾಜಕುಮಾರ ಲಕ್ಷ್ಮಣನು ಹೀಗೆ ಸತ್ಯವಾಗಿ ನುಡಿಯು ವಾಗ, ಅಪಾರ ಪ್ರೀತಿಯಿಂದ ವ್ಯಸನಪೀಡಿತನಾದ ಗುಹನು ಜ್ವರಾತುರವಾಗಿ ನೋಯು-ತ್ತಿರುವ ಆನೆಯಂತೆ ಕಣ್ಣೀರು ಸುರಿಸಿದ.

ರಾಮನಿಗೆ ಲಕ್ಷ್ಮಣನಿಂದ ಅಪಾಯವಾದೀತೆಂದು ಗುಹ, ಗುಹನಿಂದ ಅಪಾಯವಾದೀತೆಂದು ಲಕ್ಷ್ಮಣ ಅನುಮಾನಪಟ್ಟಿದ್ದರಿಂದ ಇಬ್ಬರೂ ಜಾಗರಣ ಮಾಡಿದರೆ ಅಚ್ಚರಿ ಏನಿಲ್ಲ. ಇದು ರಾಮನ ಮೇಲಿನ ಪ್ರೀತಿ ಕಾಳಜಿಗಳ ಪ್ರಭಾವ. ಇಲ್ಲಿ 'ತಂ ಜಾಗ್ರತಮದಂಭೇನ' ಎಂದು ಮೊದಲಿಗೆ, 'ತಥಾ ಹಿ ಸತ್ಯಂ ಬ್ರುವತಿ' ಎಂದು ಕೊನೆಯಲ್ಲಿ ಹೇಳಿ, 'ರಾಮ ಮಲಗಿರುವಾಗ ಲಕ್ಷ್ಮಣ ಅವನಿಗೇನೂ ಅಪಾಯ ಮಾಡುವುದಿಲ್ಲ'ವೆಂದು ಗುಹನು ನೆಮ್ಮದಿ ಹೊಂದಿದನೆಂದು ಕವಿ ಸೂಚಿಸುತ್ತಿದ್ದಾನೆ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಐವತ್ತೊಂದನೇ ಸರ್ಗ ಮುಗಿಯಿತು.

❖

ದ್ವಿಪಂಚಾಶಃ ಸರ್ಗಃ

ಸರ್ಗ – 52

ಶ್ರೀರಾಮನು ಸೀತಾಲಕ್ಷ್ಮಣರೊಡನೆ ಗಂಗಾನದಿಯನ್ನು ದಾಟುವುದು.

ಪ್ರಭಾತಾಯಾಂ ತು ಶರ್ವರ್ಯಾಂ ಪೃಥುವಕ್ಷಾ ಮಹಾಯಶಾಃ ।
ಉವಾಚ ರಾಮಃ ಸೌಮಿತ್ರಿಂ ಲಕ್ಷ್ಮಣಂ ಶುಭಲಕ್ಷಣಮ್ ॥೧॥

ರಾತ್ರಿ ಬೆಳಗಾದಾಗ ವಿಶಾಲವಾದ ಎದೆಯುಳ್ಳ ಮಹಾಯಶಸ್ವಿಯಾದ ಶ್ರೀರಾಮನು ಶುಭಲಕ್ಷಣಉಳ್ಳ ಸೌಮಿತ್ರಿಲಕ್ಷ್ಮಣನಿಗೆ ನುಡಿದ.

ಭಾಸ್ಕರೋದಯಕಾಲೋಽಸೌ ಗತಾ ಭಗವತೀ ನಿಶಾ ।
ಅಸೌ ಸುಕೃಷ್ಣೋ ವಿಹಗಃ ಕೋಕಿಲಸ್ತಾತ ಕೂಜತಿ ॥೨॥

ಇದು ಸೂರ್ಯೋದಯ ಕಾಲ. ಪೂಜ್ಯವಾದ ರಾತ್ರಿ ಕಳೆದಿದೆ. ಕಾಗೆ ಕೂಗುತ್ತಿದೆ.

ಕಾಗೆಯನ್ನು 'ಕಾಕ' ಎನ್ನದೆ 'ಸುಕೃಷ್ಣಃ ವಿಹಗಃ ಕೋಕಿಲಃ' 'ಬಹಳ ಕಪ್ಪಾಗಿದೆ, ಕೋಗಿಲೆಯಿಂದ ರಕ್ಷಿತವಾಗಿದೆ, ಅಂಥ ಹಕ್ಕಿ' ಎಂದಿದೆ. ಏಕೆಂದರೆ, ಪ್ರಾತಃ-ಕಾಲದಲ್ಲಿ ಕಾಗೆ ನಿಂದ್ಯವಾದ್ದರಿಂದ ಅದರ 'ಕಾಕ' ಎಂಬ ಹೆಸರು ಹಿಡಿದು ಹೇಳಿಲ್ಲ. ಮತ್ತು ಮುಂದೆ ಕಾಗೆ ಸೀತೆಯಲ್ಲಿ ಅಪರಾಧ ಮಾಡುವುದರಿಂದಲೂ ನೇರವಾಗಿ ಹೆಸರು ಹೇಳಿಲ್ಲ ಎಂದು ಶ್ರೀಸತ್ಯಧರ್ಮರು ಹೇಳುತ್ತಾರೆ.

ಬರ್ಹಿಣಾನಾಂ ಚ ನಿರ್ಘೋಷಃ ಶ್ರೂಯತೇ ನದತಾಂ ವನೇ ।
ತರಾಮ ಜಾಹ್ನವೀಂ ಸೌಮ್ಯ ಶೀಘ್ರಗಾಂ ಸಾಗರಂಗಮಾಮ್ ॥೩॥

ಅರಣ್ಯದಲ್ಲಿ ಕೂಗುವ ನವಿಲುಗಳ ಧ್ವನಿಯೂ ಕೇಳಿಬರುತ್ತಿದೆ. ಸೌಮ್ಯನೆ, ವೇಗದಿಂದ ಹರಿದು ಸಾಗರಗಾಮಿಯಾಗುವ ಜಾಹ್ನವಿಯನ್ನು ದಾಟೋಣ.

ವಿಜ್ಞಾಯ ರಾಮಸ್ಯ ವಚಃ ಸೌಮಿತ್ರಿರ್ಮಿತ್ರನಂದನಃ ।
ಗುಹಮಾಮಂತ್ರ್ಯ ಸೂತಂ ಚ ಸೋಽತಿಷ್ಠದ್ಭ್ರಾತುರಗ್ರತಃ ॥೪॥

ರಾಮನ ಮಾತನ್ನು ಕೇಳಿ ಮಿತ್ರನಂದನನಾದ ಲಕ್ಷ್ಮಣನು ಗುಹನನ್ನೂ ಸುಮಂತ್ರನನ್ನೂ ಬರಲು ಹೇಳಿ ರಾಮನ ಬಳಿ ಬಂದು ನಿಂತ.

ಸ ತು ರಾಮಸ್ಯ ವಚನಂ ನಿಶಮ್ಯ ಪ್ರತಿಗೃಹ್ಯ ಚ ।
ಸ್ಥಪತಿಸ್ತೂರ್ಣಮಾಹೂಯ ಸಚಿವಾನಿದಮಬ್ರವೀತ್ ॥೫॥

'ನಿಷಾದಸ್ಥಪತಿ' ಬೇಡರ ರಾಜನಾದ ಗುಹನು ರಾಮನ ಮಾತನ್ನು ಕೇಳಿ ಅಂಗೀಕರಿಸಿ 'ಸಚಿವಾನ್' ಅನೇಕ ಸಚಿವರ ಕಾರ್ಯವನ್ನು ತಾನೊಬ್ಬನೇ ಮಾಡಬಲ್ಲ ಸಮರ್ಥನಾದ ಒಬ್ಬ ಮಂತ್ರಿಯನ್ನು ಬೇಗನೆ ಕರೆದು ಹೇಳಿದ. ಮುಂದೆ ಸಮರ್ಥ-ನಾದ ಒಬ್ಬನೇ ಮಂತ್ರಿಗೆ ಗುಹನು ಆದೇಶ ನೀಡುತ್ತಾನೆ.

ಅಸ್ಯ ವಾಹನಸಂಯುಕ್ತಾಂ ಕರ್ಣಗ್ರಾಹವತೀಂ ಶುಭಾಮ್ ।
ಸುಪ್ರತಾರಾಂ ದೃಢಾಂ ತೀರ್ಥೇ ಶೀಘ್ರಂ ನಾವಮುಪಾಹರ ॥೬॥

ರಾಮನ ರಥವನ್ನು ಹೊತ್ತು ಚೆನ್ನಾಗಿ ನದಿಯನ್ನು ದಾಟಬಲ್ಲ ಮಂಗಳಕರವಾದ ದೃಢವಾದ ಚುಕ್ಕಾಣಿ ಹಿಡಿಯುವ ನಾವಿಕರುಳ್ಳ ನೌಕೆಯನ್ನು ಬೇಗನೆ ತರಿಸು.

ತಂ ನಿಶಮ್ಯ ಗುಹಾದೇಶಂ ಗುಹಾಮಾತ್ಯೋ ಗತೋ ಮಹಾನ್ ।
ಉಪೋಹ್ಯ ರುಚಿರಾಂ ನಾವಂ ಗುಹಾಯ ಪ್ರತ್ಯವೇದಯತ್ ॥೭॥

ಗುಹರಾಜನ ಆದೇಶವನ್ನು ಕೇಳಿ ಗುಹನ ಮಹಾಮಂತ್ರಿಯು ಹೋಗಿ ಸುಂದರವಾದ ನೌಕೆಯನ್ನು ತರಿಸಿ ಗುಹನಿಗೆ ಅದನ್ನು ನಿವೇದಿಸಿದ.

ತತಃ ಸ ಪ್ರಾಂಜಲೀರ್ಭೂತ್ವಾ ಗುಹೋ ರಾಘವಮಬ್ರವೀತ್ ।
ಉಪಸ್ಥಿತೇಯಂ ನೌರ್ದೇವ ಭೂಯಃ ಕಿಂ ಕರವಾಣಿ ತೇ ॥೮॥

ಬಳಿಕ ಗುಹನು ಕೈಮುಗಿದು ರಾಮನಿಗೆ ಹೇಳಿದ— 'ದೇವ, ನೌಕೆ ಬಂದು ನಿಂತಿದೆ. ಇನ್ನೇನು ಸೇವೆಯನ್ನು ನಾನು ನಿನಗೆ ಮಾಡಲಿ?' ಎಂದು.

ತವಾಮರಸುತಪ್ರಖ್ಯ ತರ್ತುಂ ಸಾಗರಾಗಾಂ ನದೀಮ್ ।
ನೌರಿಯಂ ಪುರುಷವ್ಯಾಘ್ರ ತಾಂ ತ್ವಮಾರೋಹ ಸುವ್ರತ ॥೯॥

ದೇವಪುತ್ರಸದೃಶನೇ, ನಿನಗೆ ಸಾಗರಗಾಮಿನಿಯಾದ ಗಂಗೆಯನ್ನು ದಾಟಲು ನೌಕೆ ಸಿದ್ಧವಾಗಿ ನಿಂತಿದೆ. ಪುರುಷೋತ್ತಮನೆ, ಒಳ್ಳೆಯ ವ್ರತನಿಷ್ಠನೆ, ಬೇಗನೆ ನೌಕೆಯನ್ನು ಏರು.

ಅಥೋವಾಚ ಮಹಾತೇಜಾ ರಾಮೋ ಗುಹಮಿದಂ ವಚಃ ।
ಕೃತಕಾಮೋಽಸ್ಮಿ ಭವತಾ ಶೀಘ್ರಮಾರೋಪ್ಯತಾಮಿತಿ ॥೧೦॥

ಆಗ ಮಹಾತೇಜಸ್ವಿಯಾದ ರಾಮನು ಗುಹನಿಗೆ ಹೇಳಿದ— 'ನೀನು ನನ್ನ

ಇಚ್ಛೆಯನ್ನು ಪೂರೈಸಿರುವೆ. ಬೇಗನೆ ನನ್ನ ಗುದ್ದಲಿ ಮಂಕರಿಗಳನ್ನೂ ಸೀತೆಯ ವಸ್ತ್ರಾಭರಣಾದಿಗಳನ್ನೂ ನೌಕೆಯಲ್ಲಿರಿಸು.'

ತತಃ ಕಲಾಪಾನ್ ಸಂನಹ್ಯ ಖಡ್ಗೌ ಬದ್ಧ್ವಾ ಚ ಧನ್ವಿನೌ ।
ಜಗ್ಮತುರ್ಯೇನ ತೌ ಗಂಗಾಂ ಸೀತಯಾ ಸಹ ರಾಘವೌ ॥೧೧॥

ಬಳಿಕ ರಾಮಲಕ್ಷ್ಮಣರು ಕವಚವನ್ನು ತೊಟ್ಟು ಬತ್ತಳಿಕೆಗಳನ್ನೂ ಖಡ್ಗಗಳನ್ನೂ ಕಟ್ಟಿಕೊಂಡು ಧನುರ್ಧರರಾಗಿ ಸೀತೆಯೊಂದಿಗೆ ನಡೆಯುತ್ತ ಗಂಗೆಯನ್ನು ದಾಟಲು ಹೋಗುವ ಮಾರ್ಗದಲ್ಲಿ ಹೋದರು.

ರಾಮಮೇವಂ ತು ಧರ್ಮಜ್ಞಮುಪಗಮ್ಯ ವಿನೀತವತ್ ।
ಕಿಮಹಂ ಕರವಾಣೇತಿ ಸೂತಃ ಪ್ರಾಂಜಲಿರಬ್ರವೀತ್ ॥೧೨॥

ಸಾರಥಿಯಾದ ಸುಮಂತ್ರನು ವಿನಯದಿಂದ ಧರ್ಮಜ್ಞನಾದ ರಾಮನ ಬಳಿ ನಿಂತು, ಕೈಮುಗಿದು ನಾನು ನಿನಗೆ ಏನು ಸೇವೆ ಮಾಡಲಿ ಎಂದು ಕೇಳಿದ.

ತತೋಬ್ರವೀದ್ದಾಶರಥಿಃ ಸುಮಂತ್ರಂ
ಸ್ಪೃಶನ್ ಕರೇಣೋತ್ತಮದಕ್ಷಿಣೇನ ।
ಸುಮಂತ್ರ ಶೀಘ್ರಂ ಪುನರೇವ ಯಾಹಿ
ರಾಜ್ಞಃ ಸಕಾಶೇ ಭವ ಚಾಪ್ರಮತ್ತಃ ॥೧೩॥

ಆಗ ಶ್ರೀರಾಮನು ಸುಮಂತ್ರನನ್ನು ಉತ್ತಮವಾದ ಬಲಗೈಯಿಂದ ಸ್ಪರ್ಶಿಸಿ ನುಡಿದ, 'ಸುಮಂತ್ರ! ಬೇಗನೆ ರಾಜನ ಬಳಿಗೆ ಹೋಗು. ಅದಕ್ಕೆ ನನ್ನ ವಿಯೋಗ ದುಃಖದಿಂದ ಮೈಮರೆಯದೆ ಎಚ್ಚರದಿಂದಿರು.'

ನಿವರ್ತಸ್ವೇತ್ಯುವಾಚೈನಮೇತಾವದ್ಧಿ ಕೃತಂ ಮಮ ।
ರಥಂ ವಿಹಾಯ ಪದ್ಭ್ಯಾಂ ತು ಗಮಿಷ್ಯಾಮೋ ಮಹಾವನಮ್ ॥೧೪॥

'ಹಿಂತಿರುಗಿ ಹೋಗು, ಇಷ್ಟುದೂರ ರಾಜಾಜ್ಞೆಯಂತೆ ರಥದಿಂದ ಪ್ರಯಾಣ ಮಾಡುವುದೇ ನನಗೆ ಬೇಕಾಗಿತ್ತು. ಮುಂದೆ ರಥವನ್ನು ಬಿಟ್ಟು ಕಾಲ್ನಡೆಯಿಂದಲೇ ಮಹಾಅರಣ್ಯದಲ್ಲಿ ಸಂಚರಿಸುವೆವು' ಎಂದು ಶ್ರೀರಾಮ ನುಡಿದ.

ಆತ್ಮಾನಂ ತ್ವಭ್ಯನುಜ್ಞಾತಮವೇಕ್ಷ್ಯಾರ್ತಃ ಸ ಸಾರಥಿಃ ।
ಸುಮಂತ್ರಃ ಪುರುಷವ್ಯಾಘ್ರಮೈಕ್ಷ್ವಾಕಮಿದಮಬ್ರವೀತ್ ॥೧೫॥

ತನ್ನನ್ನು ಹಿಂತಿರುಗಲು ಆಜ್ಞೆ ಮಾಡಿದ್ದಾನೆ ರಾಮ ಎಂದು ತಿಳಿದು ಸಾರಥಿ ಸುಮಂತ್ರನು ಆರ್ತನಾಗಿ ರಾಮನಿಗೆ ಹೇಳಿದ.

ನಾತಿಕ್ರಾಂತಮಿದಂ ಲೋಕೇ ಪುರುಷೇಣೇಹ ಕೇನಚಿತ್ ।
ತವ ಸಭ್ರಾತೃಭಾರ್ಯಸ್ಯ ವಾಸಃ ಪ್ರಾಕೃತವದ್ವನೇ ॥೧೬॥

ನೀನು ಸೋದರನೊಂದಿಗೆ ಭಾರ್ಯೆಯೊಂದಿಗೆ ಅಲ್ಪನಾದ ಮಾನವನಂತೆ ವನದಲ್ಲಿ ವಾಸಮಾಡುವುದನ್ನು ಲೋಕದಲ್ಲಿ 'ನ ಅತಿಕ್ರಾಂತಂ' ಯಾವ ಮಾನವನೂ ಒಪ್ಪುವುದಿಲ್ಲ ಎಂದಮೇಲೆ ನಾನು ಸರ್ವಥಾ ಒಪ್ಪುವುದಿಲ್ಲವೆಂದು ಬೇರೇನು ಹೇಳಬೇಕು.

ನ ಮನ್ಯೇ ಬ್ರಹ್ಮಚರ್ಯೇಽಸ್ತಿ ಸ್ವಧೀತೇ ವಾ ಫಲೋದಯಃ ।
ಮಾರ್ದವಾರ್ಜವಯೋರ್ವಾಪಿ ತ್ವಾಂ ಚೇದ್ವ್ಯಸನಮಾಗತಮ್ ॥೧೭॥

ನಿನಗೇ ಕಷ್ಟ ಬರುತ್ತದೆ ಎಂದರೆ, ಬ್ರಹ್ಮಚರ್ಯ ಅಧ್ಯಯನ ಮೃದುಸ್ವಭಾವ ಋಜುಸ್ವಭಾವಗಳಿಗೆ ಸುಖಫಲವಿದೆ ಎಂದು ನಾನು ಒಪ್ಪಲಾರೆ.

ಸಹ ರಾಘವ ವೈದೇಹ್ಯಾ ಭ್ರಾತ್ರಾ ಚೈವ ವನೇ ವಸನ್ ।
ತ್ವಂ ಗತಿಂ ಪ್ರಾಪ್ಸ್ಯಸೇ ವೀರ ತ್ರೀನ್ ಲೋಕಾಂಸ್ತು ಜಯನ್ನಿವ ॥೧೮॥

ರಾಮ, ನಿನಗಾದರೋ ಜೊತೆಗೆ ಪ್ರಾಣಪ್ರಿಯೆಯಾದ ಸೀತೆ ಇದ್ದಾಳೆ, ಪ್ರಾಣ ಪ್ರಿಯನಾದ ಲಕ್ಷ್ಮಣನಿದ್ದಾನೆ. ಪಿತೃವಾಕ್ಯಪಾಲನದಿಂದ ನೀನು ಮೂಲೋಕ ಜಯವನ್ನು ಅವಶ್ಯ ಸಂಪಾದಿಸಿಯೇ ಬ್ರಹ್ಮಲೋಕವನ್ನು ಹೊಂದುವೆ. ಇವ ಶಬ್ದ ಏವಕಾರಾರ್ಥಕ.

ವಯಂ ಖಲು ಹತಾ ನಾಮ ಯತ್ತ್ವಯಾಪ್ಯುಪವಂಚಿತಾಃ ।
ಕೈಕೇಯ್ಯಾ ವಶಮೇಷ್ಯಾಮಃ ಪಾಪಾಯಾ ದುಃಖಭಾಗಿನಃ ॥೧೯॥

ನಾವು ಮಾತ್ರ, ರಾಮ, ಸೋತೇ ಹೋದೆವು. ನಿನ್ನ ಸಾಮಿಪ್ಯದಿಂದಲೂ ವಂಚಿತರಾಗಿ, ಪಾಪಿಷ್ಠೆಯಾದ ಕೈಕೇಯಿಯ ವಶದಲ್ಲಿದ್ದು, ಕೇವಲ ದುಃಖ ಭಾಗಿಗಳಾಗುವೆವು.

ಇತಿ ಬ್ರುವನ್ನಾತ್ಮಸಮಃ ಸುಮಂತ್ರಃ ಸಾರಥಿಸ್ತದಾ ।
ದೃಷ್ಟ್ವಾ ದೂರಗತಂ ರಾಮಂ ದುಃಖಾರ್ತೋ ರುರುದೇ ಚಿರಮ್ ॥೨೦॥

ಪ್ರಾಣಸಮನಾದ ಸಾರಥಿ ಸುಮಂತ್ರನು ಹೀಗೆ ಹೇಳುತ್ತ ರಾಮನು ಇನ್ನು ಬಲು ದೂರದಲ್ಲಿರುತ್ತಾನೆ ಎಂದು ದುಃಖಾರ್ತನಾಗಿ ಬಹಳ ಹೊತ್ತು ರೋದಿಸಿದ.

ತತಸ್ತು ವಿಗತೇ ಬಾಷ್ಪೇ ಸೂತಂ ಸ್ಪ್ರಷ್ಟೋದಕಂ ಶುಚಿಮ್ ।
ರಾಮಸ್ತು ಮಧುರಂ ವಾಕ್ಯಂ ಪುನಃ ಪುನರುವಾಚ ತಮ್ ॥೨೧॥

ಕಣ್ಣೀರು ಸುರಿಯುವಾಗ ಅಶುಚಿತ್ವ ಉಂಟಾಗುವುದರಿಂದ, ಅದು ನಿಂತಾಗ ಆಚಮನಮಾಡಿ ಶುದ್ಧನಾದ ಸುಮಂತ್ರನನ್ನು ರಾಮ ಮಧುರವಾದ ಮಾತಿನಿಂದ ಪುನಃಪುನಃ ಸಂತೈಸಿದ.

ಇಕ್ಷ್ವಾಕೂಣಾಂ ತ್ವಯಾ ತುಲ್ಯಂ ಸುಹೃದಂ ನೋಪಲಕ್ಷಯೇ ।
ಯಥಾ ದಶರಥೋ ರಾಜಾ ಮಾಂ ನ ಶೋಚೇತ್ತಥಾ ಕುರು ॥೨೨॥

ಇಕ್ಷ್ವಾಕು ವಂಶದವರಿಗೆ ನಿನ್ನಂಥ ಸ್ನೇಹಿತರನ್ನು ನಾನು ಕಂಡಿಲ್ಲ. ಅದರಿಂದ ರಾಜಾ ದಶರಥನು ನನ್ನ ವಿಷಯದಲ್ಲಿ ಶೋಕಿಸದಂತೆ ನೋಡಿಕೊಳ್ಳು.

ಶೋಕೋಪಹತಚೇತಾಶ್ಚ ವೃದ್ಧಶ್ಚ ಜಗತೀಪತಿಃ ।
ಕಾಮಭಾರಾವಸನ್ನಶ್ಚ ತಸ್ಮಾದೇತದ್ಬ್ರವೀಮಿ ತೇ ॥೨೩॥

ರಾಜನು ವೃದ್ಧ, ಶೋಕದಿಂದ ಅವನ ಹೃದಯ ಬೇಯುತ್ತಿದೆ. ನನ್ನ ಅಭಿಷೇಕ ದಾಸೆಯ ಭಾರದಿಂದ ಕುಗ್ಗಿ ಹೋಗಿದ್ದಾನೆ. ಅದರಿಂದ ನಾನು ಇದನ್ನು ನಿನಗೆ ಹೇಳುತ್ತಿದ್ದೇನೆ.

ಯದ್ಯದಾಜ್ಞಾಪಯೇತ್ಕಿಂಚಿತ್ ಸ ಮಹಾತ್ಮಾ ಮಹೀಪತಿಃ ।
ಕೈಕೇಯ್ಯಾಃ ಪ್ರಿಯಕಾಮಾರ್ಥಂ ಕಾರ್ಯಂ ತದವಿಶಂಕಯಾ ॥೨೪॥

ಕೈಕೇಯಿಗೆ ಪ್ರಿಯ ಉಂಟುಮಾಡುವುದಕ್ಕಾಗಿ ಆ ಮಹಾತ್ಮ ರಾಜ ಏನೇ ಆಜ್ಞಾಪಿಸಿದರೂ ಅದನ್ನು ಅನಾದರ ಮಾಡದೆ ನಡೆಸಿಕೊಡಬೇಕು.

ಏತದರ್ಥಂ ಹಿ ರಾಜ್ಯಾನಿ ಪ್ರಶಾಸತಿ ನರಾಧಿಪಾಃ ।
ಯದೇಷಾಂ ಸರ್ವಕೃತ್ಯೇಷು ಮನೋ ನ ಪ್ರತಿಹನ್ಯತೇ ॥೨೫॥

ಏಕೆಂದರೆ ರಾಜರು ರಾಜ್ಯವನ್ನಾಳುವುದು ಯಾವ ಕಾರ್ಯಗಳಲ್ಲಿಯೂ ತಮ್ಮ ಇಚ್ಛೆಗೆ ಅಡ್ಡಿ ಬರಬಾರದೆಂದು ತಾನೆ?

ಯದ್ಯಥಾ ಸ ಮಹಾರಾಜೋ ನಾಲೀಕಮಧಿಗಚ್ಛತಿ ।
ನ ಚ ತಾಮ್ಯತಿ ದುಃಖೇನ ಸುಮಂತ್ರ ಕುರು ತತ್ತಥಾ ॥೨೬॥

ಮಹಾರಾಜನು ಅನಿಷ್ಟಭಾಜನನಾಗದಂತೆ ಶೋಕಭಾರದಿಂದ ಕುಸಿಯದಂತೆ ನೋಡಿಕೊಳ್ಳು, ಸುಮಂತ್ರ!

ಅದೃಷ್ಟದುಃಖಂ ರಾಜಾನಂ ವೃದ್ಧಮಾರ್ಯಂ ಜಿತೇಂದ್ರಿಯಮ್।
ಬ್ರೂಯಾಸ್ತ್ವಮಭಿವಾದ್ಯೈವ ಮಮ ಹೇತೋರಿದಂ ವಚಃ ॥೨೭॥

ರಾಜನು ದುಃಖವನ್ನು ಕಂಡವನಲ್ಲ. ವೃದ್ಧ, ಸತ್ಪುರುಷ, ಜಿತೇಂದ್ರಿಯ ಅವನಿಗೆ ಅಭಿವಾದನ ಮಾಡಿಯೇ ನನಗಾಗಿ ನನ್ನ ಪರವಾಗಿ ಈ ಮಾತನ್ನು ಹೇಳು.

ನೈವಾಹಮನುಶೋಚಾಮಿ ಲಕ್ಷ್ಮಣೋ ನ ಚ ಮೈಥಿಲೀ ।
ಅಯೋಧ್ಯಾಯಾಶ್ಚ್ಯುತಾಶ್ಚೇತಿ ವನೇ ವತ್ಸ್ಯಾಮಹೇತಿ ವಾ ॥೨೮॥

'ನಮಗೆ ಅಯೋಧ್ಯಾವಾಸ ತಪ್ಪಿತೆಂದಾಗಲಿ ವನವಾಸ ಪ್ರಾಪ್ತವಾಯಿತೆಂದಾಗಲಿ ನಾನು ದುಃಖಿಸುವುದಿಲ್ಲ. ಲಕ್ಷ್ಮಣ ದುಃಖಿಸುವುದಿಲ್ಲ. ಸೀತೆಯೂ ದುಃಖಿಸುವುದಿಲ್ಲ.

ಚತುರ್ದಶಸು ವರ್ಷೇಷು ನಿವೃತ್ತೇಷು ಪುನಃ ಪುನಃ ।
ಲಕ್ಷ್ಮಣಂ ಮಾಂ ಚ ಸೀತಾಂ ಚ ದ್ರಕ್ಷ್ಯಸಿ ಕ್ಷಿಪ್ರಮಾಗತಾನ್ ॥೨೯॥

'ನಾವು ಹದಿನಾಲ್ಕು ವರ್ಷಗಳು ಕಳೆದಾಗ ಬೇಗನೆ ಹಿಂತಿರುಗಿ ಬರುತ್ತೇವೆ. ಆಗ ಲಕ್ಷ್ಮಣನನ್ನೂ ನನ್ನನ್ನೂ ಸೀತೆಯನ್ನೂ ನೀನು ಪುನಃಪುನಃ ನೋಡುವಿ' ಎಂದು.

ಏವಮುಕ್ತ್ವಾ ತು ರಾಜಾನಂ ಮಾತರಂ ಚ ಸುಮಂತ್ರ ಮೇ ।
ಅನ್ಯಾಶ್ಚ ದೇವೀಃ ಸಹಿತಾಃ ಕೈಕೇಯೀಂ ಚ ಪುನಃ ಪುನಃ ॥೩೦॥

ಆರೋಗ್ಯಂ ಬ್ರೂಹಿ ಕೌಸಲ್ಯಾಮಥ ಪಾದಾಭಿವಂದನಮ್ ।
ಸೀತಾಯಾ ಮಮ ಚಾರ್ಯಸ್ಯ ವಚನಾಲ್ಲಕ್ಷ್ಮಣಸ್ಯ ಚ ॥೩೧॥

ಸುಮಂತ್ರ, ರಾಜನಿಗೂ ಮಾತೆ ಕೌಸಲ್ಯೆಗೂ ಹೀಗೆ ಹೇಳಿ, ಅವಳ ಜೊತೆಗಿರುವ ಬೇರೆ ಮಾತೆಯರಿಗೂ ಕೈಕೇಯಿಗೂ ನಾವು ಆರೋಗ್ಯವಾಗಿರುವೆವೆಂದೂ ಹೇಳು. ಮತ್ತು ಕೌಸಲ್ಯೆಗೆ ಸೀತೆಯ ನನ್ನ ಮತ್ತು ಆರ್ಯನಾದ ಲಕ್ಷ್ಮಣನ ಪಾದಾಭಿ-ವಂದನವನ್ನು ಹೇಳು.

ತಂದೆಗೆ ಸಮಾನನಾದ ಅಣ್ಣನ ಸೇವೆ ಮಾಡುತ್ತಿರುವುದರಿಂದ ಕಿರಿಯನಾದ ಲಕ್ಷ್ಮಣನನ್ನು 'ಆರ್ಯ' ಎನ್ನುತ್ತಾನೆ, ಅಣ್ಣ ಶ್ರೀರಾಮ. ತಾಯಿಯಾದ ಕೌಸಲ್ಯೆಗೆ ಮಾತ್ರ ಪಾದಾಭಿವಂದನೆ ಹೇಳುತ್ತಾನೆ. ಮಲತಾಯಂದಿರಿಗೆ ಪಾದಾಭಿವಂದನೆ ನಿಷಿದ್ಧ ಎಂದು ಅಭಿಪ್ರಾಯ.

ಬ್ರೂಯಾಶ್ಚ ಹಿ ಮಹಾರಾಜಂ ಭರತಂ ಕ್ಷಿಪ್ರಮಾನಯ ।
ಆಗತಶ್ಚಾಪಿ ಭರತಃ ಸ್ಥಾಪ್ಯೋ ನೃಪಮತೇ ಪದೇ ॥೩೨॥

ಮಹಾರಾಜನಿಗೆ ಈ ಮಾತನ್ನು ಕೂಡ ಹೇಳು— 'ಭರತನನ್ನು ಬೇಗ ಕರೆಸಿ-ಕೊಳ್ಳು' ಎಂದು. ಮಹಾರಾಜ ಬಯಸಿದಂತೆ ಭರತನು ಬಂದು ಯುವರಾಜ ಪದವಿಯಲ್ಲಿ ಅಭಿಷಿಕ್ತನಾಗಬೇಕು.

ಭರತಂ ಚ ಪರಿಷ್ವಜ್ಯ ಯೌವರಾಜ್ಯೇऽಭಿಷಿಚ್ಯ ಚ ।
ಆತ್ಮಸಂತಾಪಜಂ ದುಃಖಂ ನ ತ್ವಾಮಭಿಭವಿಷ್ಯತಿ ॥೩೩॥

ಸುಮಂತ್ರ, ನೀನು ಭರತನನ್ನು ಆಲಿಂಗಿಸಿ ಅವನನ್ನು ಯುವರಾಜಪದವಿ ಯಲ್ಲಿ ಅಭಿಷಿಕ್ತನಾಗುವಂತೆ ಮಾಡಿದರೆ ನಮ್ಮ ವಿಯೋಗದಿಂದಾಗುವ ದುಃಖವು ನಿನ್ನನ್ನು ಆಯಾಸಗೊಳಿಸಲಾರದು.

ಭರತಶ್ಚಾಪಿ ವಕ್ತವ್ಯೋ ಯಥಾ ರಾಜನಿ ವರ್ತಸೇ ।
ತಥಾ ಮಾತೃಷು ವರ್ತೇಥಾಃ ಸರ್ವಾಸ್ವೇವಾವಿಶೇಷತಃ ॥೩೪॥

ಭರತನಿಗೂ ಹೇಳು, ರಾಜನಲ್ಲಿ ಹೇಗೆ ನಡೆದುಕೊಳ್ಳುವೆಯೋ ಹಾಗೇ ಎಲ್ಲ ಮಾತೆಯರಲ್ಲಿಯೂ ಪಕ್ಷಪಾತವಿಲ್ಲದೆ ಒಂದೇರೀತಿ ನಡೆದುಕೊಳ್ಳು ಎಂದು.

ಯಥಾ ಚ ತವ ಕೈಕೇಯೀ ಸುಮಿತ್ರಾ ಚ ವಿಶೇಷತಃ ।
ತಥೈವ ದೇವೀ ಕೌಸಲ್ಯಾ ಮಮ ಮಾತಾ ವಿಶೇಷತಃ ॥೩೫॥

ನಿನಗೆ ಸುಮಿತ್ರೆಯಲ್ಲಿ ಹೇಗೆ ಕೈಕೇಯಿಗಿಂತ ಕಡಿಮೆಯಲ್ಲದ ವಿಶೇಷ ಆದರ-ವಿರುವುದೋ ಹಾಗೇ ಕೌಸಲ್ಯೆಯಲ್ಲಿಯೂ ಕೈಕೇಯಿಗಿಂತ ಕಡಿಮೆಯಲ್ಲದ ವಿಶೇಷ ಆದರವಿರಬೇಕು.

ತಾತಸ್ಯ ಪ್ರಿಯಕಾಮೇನ ಯೌವರಾಜ್ಯಮವೇಕ್ಷತಾ ।
ಲೋಕಯೋರುಭಯೋಃ ಶಕ್ಯಂ ನಿತ್ಯದಾ ಸುಖಮೇಧಿತುಮ್ ॥೩೬॥

ತಂದೆಗೆ ಪ್ರಿಯ ಉಂಟುಮಾಡುವುದಕ್ಕಾಗಿ ಯುವರಾಜಪದವಿಯನ್ನು ಸ್ವೀಕರಿಸಿದರೆ ಇಹಪರ ಎಂದು ಎರಡೂ ಲೋಕಗಳಲ್ಲಿ ಸದಾ ಸುಖ ವೃದ್ಧಿ ಮಾಡಿಕೊಳ್ಳಲು ಶಕ್ಯವಿದೆ. ಹಾಗೆ ಸುಖವೃದ್ಧಿಯಾಗುವಂತೆ ನಡೆದುಕೊಳ್ಳು.

ನಿವರ್ತ್ಯಮಾನೋ ರಾಮೇಣ ಸುಮಂತ್ರಃ ಶೋಕಕರ್ಶಿತಃ ।
ತತ್ಸರ್ವಂ ವಚನಂ ಶ್ರುತ್ವಾ ಸ್ನೇಹಾತ್ ಕಾಕುತ್ಸ್ಥಮಬ್ರವೀತ್ ॥೩೭॥

ರಾಮನು ಸುಮಂತ್ರನನ್ನು ಅಯೋಧ್ಯೆಗೆ ಹಿಂತಿರುಗಿ ಕಳಿಸುತ್ತಿರುವುದರಿಂದ ಶೋಕದಿಂದ ಸೊರಗಿದ ಸುಮಂತ್ರ ರಾಮನ ಆ ಎಲ್ಲ ಮಾತುಗಳನ್ನು ಕೇಳಿ ಸ್ನೇಹದಿಂದ ಅವನಿಗೆ ಹೇಳಿದ.

ಯದಹಂ ನೋಪಚಾರೇಣ ಬ್ರೂಯಾಂ ಸ್ನೇಹಾದವಿಕ್ಲವಮ್।
ಭಕ್ತಿಮಾನಿತಿ ತತ್ತಾವದ್ವಾಕ್ಯಂ ತ್ವಂ ಕ್ಷಂತುಮರ್ಹಸಿ ॥೩೮॥

ನಾನು ಸೇವಕನಾಗಿ ಉಪಚಾರಪೂರ್ವಕವಾಗಿ ಹೇಳುತ್ತಿಲ್ಲ. ಸ್ನೇಹದಿಂದ ಧಾಷ್ಟ್ರ್ಯದಿಂದಲೇ ಹೇಳುತ್ತಿದ್ದೇನೆ. ನಾನು ಭಕ್ತಿಉಳ್ಳವನಾಗಿರುವುದರಿಂದ ನನ್ನ ಆ ಮಾತನ್ನು ನೀನು ಸಹಿಸಿಕೊಳ್ಳಬೇಕು.

ಕಥಂ ಹಿ ತ್ವದ್ವಿಹೀನೋಽಹಂ ಪ್ರತಿಯಾಸ್ಯಾಮಿ ತಾಂ ಪುರೀಮ್ ।
ತವ ತಾವದ್ವಿಯೋಗೇನ ಪುತ್ರಶೋಕಾಕುಲಾಮಿವ ॥೩೯॥

ನಿನ್ನ ವಿಯೋಗದಿಂದ ಪುತ್ರಶೋಕಾರ್ತವಾದಂತಿರುವ ಆ ಅಯೋಧ್ಯಾನಗರಕ್ಕೆ ನಿನ್ನನ್ನು ಬಿಟ್ಟು ನಾನು ಹೇಗೆ ಹಿಂತಿರುಗಲಿ?

ಸರಾಮಮಪಿ ತಾವನ್ಮೇ ರಥಂ ದೃಷ್ಟ್ವಾ ತದಾ ಜನಃ ।
ವಿನಾ ರಾಮಂ ರಥಂ ದೃಷ್ಟ್ವಾ ವಿದೀರ್ಯೇತಾಪಿ ಸಾ ಪುರೀ ॥೪೦॥

ನನ್ನ ರಥವನ್ನು ದೂರದಿಂದ ಕಂಡಾಗ ಅದರಲ್ಲಿ ರಾಮನಿರುತ್ತಾನೆ ಎಂದು ವಿಶ್ವಾಸದಿಂದ ದೂರದಿಂದ ಅದನ್ನು ಸ್ವಾಗತಿಸುವ ಜನರು, ಹತ್ತಿರ ಬಂದಾಗ ರಾಮನಿಲ್ಲವೆಂದು ತಿಳಿದರೆ ಅಯೋಧ್ಯಾನಗರವೇ ಒಡೆದು ಸೀಳಾಗುವುದು.

ದೈನ್ಯಂ ಹಿ ನಗರೀ ಗಚ್ಛೇದ್ದೃಷ್ಟ್ವಾ ಶೂನ್ಯಮಿಮಂ ರಥಮ್ ।
ಸೂತಾವಶೇಷಂ ಸ್ವಂ ಸೈನ್ಯಂ ಹತವೀರಮಿವಾಹವೇ ॥೪೧॥

ನೀನಿಲ್ಲದೆ ಶೂನ್ಯವಾಗಿರುವ ಈ ರಥವನ್ನು ಕಂಡು, ಅಯೋಧ್ಯೆ ಇಡೀ ರಥಿಕ

ವೀರರು ಮಡಿದ ಬಳಿಕ ಸಾರಥಿಗಳು ಮಾತ್ರ ಉಳಿದಿರುವ ಸೈನ್ಯವನ್ನು ಕಂಡಂತೆ ದೀನಸ್ಥಿತಿಯನ್ನು ಹೊಂದುವುದು.

ದೂರೇಽಪಿ ನಿವಸಂತಂ ತ್ವಾಂ ಮಾನಸೇನಾಗ್ರತಃ ಸ್ಥಿತಮ್ ।
ಚಿಂತಯಂತ್ಯೋಽದ್ಯ ನೂನಂ ತ್ವಾಂ ನಿರಾಹಾರಾಃ ಕೃತಾಃ ಪ್ರಜಾಃ ॥೪೨॥

ಇಷ್ಟರವರೆಗೆ ನೀನು ದೂರದ ಕಾಡಿನಲ್ಲಿದ್ದರೂ ಅಯೋಧ್ಯೆಯ ಪ್ರಜೆಗಳು ಮನಸಿನಲ್ಲಿ ನೀನು ಅವಶ್ಯ ರಥದಿಂದ ಹಿಂತಿರುಗಿ ಬರುವೆ ಎಂದೇ ನಿರೀಕ್ಷಿಸು-ತ್ತಿರುತ್ತಾರೆ. ಈಗ ನೀನಿಲ್ಲದ ರಥವನ್ನು ಕಂಡರೆ ಜನರು ಅನ್ನ ನೀರು ಬಿಟ್ಟು ಪ್ರಾಣತ್ಯಾಗ ಸಂಕಲ್ಪ ಮಾಡುತ್ತಾರೆ.

ದೃಷ್ಟಂ ತದ್ಧಿ ತ್ವಯಾ ರಾಮ ಯಾದೃಶಂ ತ್ವತ್ಪ್ರವಾಸನೇ ।
ಪ್ರಜಾನಾಂ ಸಂಕುಲಂ ವೃತ್ತಂ ತಚ್ಚೋಕಕ್ಲಾಂತಚೇತಸಾಮ್ ॥೪೩॥

ನೀನೆ ನೋಡಿರುವೆ, ನೀನು ಅಯೋಧ್ಯೆಯಿಂದ ಹೊರಟಾಗ ಪ್ರಜೆಗಳು ತಮಗೆ ನಿನ್ನ ವಿಯೋಗವಾಗುವುದೆಂಬ ದುಃಖದಿಂದ ಮನಸಿನಲ್ಲಿ ಕುಗ್ಗಿ ಕ್ಷೋಭೆಗೊಂಡರು.

ಆರ್ತನಾದೋ ಹಿ ಯಃ ಪೌರೈರುತ್ಸೃಷ್ಟಸ್ತ ತ್ವತ್ಪ್ರವಾಸನೇ ।
ಸರಥಂ ಮಾಂ ನಿಶಾಮ್ಯೈವ ಕುರ್ಯುಃ ಶತಗುಣಂ ತತಃ ॥೪೪॥

ನೀನು ಹೊರಡುವಾಗ ಪೌರರು ಏನು ಆರ್ತನಾದವನ್ನು ಮಾಡಿದರೋ ಅದಕ್ಕಿಂತ ನೂರುಪಟ್ಟು ಹೆಚ್ಚಾಗಿ ನನ್ನ ಶೂನ್ಯರಥವನ್ನು ಕಂಡಾಗ ಆರ್ತನಾದ ಮಾಡುವರು.

ಅಹಂ ಕಿಂ ಚಾಪಿ ವಕ್ಷ್ಯಾಮಿ ದೇವೀಂ ತವ ಸುತೋ ಮಯಾ ।
ನೀತೋಽಸೌ ಮಾತುಲಕುಲಂ ಸಂತಾಪಂ ಮಾ ಕೃಥಾ ಇತಿ ॥೪೫॥

ನಾನು ಅಯೋಧ್ಯೆಗೆ ಹೋದರೆ ದೇವಿ ಕೌಸಲ್ಯೆಗೆ ನಾನೇನು ಹೇಳಲಿ? ನಾನು ನಿನ್ನ ಮಗನನ್ನು ಅವನ ಸೋದರಮಾವನ ಮನೆಗೆ ಒಯ್ದು ಬಿಟ್ಟು ಬಂದಿದ್ದೇನೆ, ನೀನು ದುಃಖಿಸಬೇಡ ಎಂದು ಸುಳ್ಳು ಹೇಳಬೇಕಾಗುತ್ತದೆ.

ಅಸತ್ಯಮಪಿ ನೈವಾಹಂ ಬ್ರೂಯಾಂ ವಚನಮೀದೃಶಮ್ ।
ಕಥಮಪ್ರಿಯಮೇವಾಹಂ ಬ್ರೂಯಾಂ ಸತ್ಯಮಿದಂ ವಚಃ ॥೪೬॥

ಇದು ಯದ್ಯಪಿ ಸುಳ್ಳು. ಆದರೆ ನಿನ್ನನ್ನು ಕಾಡಿನಲ್ಲಿ ಬಿಟ್ಟು ಬಂದೆನೆಂದು

ಸತ್ಯವನ್ನು ಹೇಗೆ ಹೇಳಲಿ. ಹೇಳಲಾರೆ. ಅದು ಅಪ್ರಿಯ. ಸತ್ಯವಾದರೂ ಅಪ್ರಿಯವಾದುದನ್ನು ಹೇಳಬಾರದು.

ಮಮ ತಾವನ್ನಿಯೋಗಸ್ಥಾಸ್ತ್ವದ್ಬಂಧುಜನವಾಹಿನಃ ।
ಕಥಂ ರಥಂ ತ್ವಯಾ ಹೀನಂ ಪ್ರವಕ್ಷ್ಯಂತಿ ಹಯೋತ್ತಮಾಃ ॥೪೭॥

ಈ ಕುದುರೆಗಳು ಕೂಡ ನನ್ನಾಜ್ಞೆಯಂತೆ ನಡೆಯುತ್ತ ನಿನ್ನ ಬಂಧುಜನರನ್ನು ಮಾತ್ರ ಹೊತ್ತು ಒಯ್ಯುವುವು. ಇತರರನ್ನಲ್ಲ. ನೀನಿಲ್ಲದ ರಥವನ್ನು ಅವು ಹೇಗೆ ಹೊತ್ತು ಒಯ್ಯುವುವು?

ತನ್ನ ಶಕ್ಷ್ಯಾಮ್ಯಹಂ ಗಂತುಮಯೋಧ್ಯಾಂ ತ್ವದ್ಗತೇಽನಘ ।
ವನವಾಸಾನುಯಾನಾಯ ಮಾಮನುಜ್ಞಾತುಮರ್ಹಸಿ ॥೪೮॥

ಅದರಿಂದ ನಿನ್ನನ್ನು ಬಿಟ್ಟು ನಾನು ಅಯೋಧ್ಯೆಗೆ ಹೋಗಲು ಶಕ್ತನಾಗಲಾರೆ. ವನವಾಸಕ್ಕಾಗಿ ನಿನ್ನನ್ನು ಹಿಂಬಾಲಿಸಿ ಬರಲು ನನಗೆ ಅನುಜ್ಞೆ ನೀಡು.

ಯದಿ ಮೇ ಯಾಚಮಾನಸ್ಯ ತ್ಯಾಗಮೇವ ಕರಿಷ್ಯಸಿ ।
ಸರಥೋಗ್ನಿಂ ಪ್ರವೇಕ್ಷ್ಯಾಮಿ ತ್ಯಕ್ತಮಾತ್ರ ಇಹ ತ್ವಯಾ ॥೪೯॥

ನಾನು ಅನುಜ್ಞೆಯನ್ನು ಬೇಡುತ್ತಿದ್ದರೂ ನೀನು ನನ್ನ ತ್ಯಾಗವನ್ನೇ ಮಾಡುವಿಯಾದರೆ ನೀನು ತ್ಯಾಗ ಮಾಡಿದೊಡನೇ ರಥದೊಂದಿಗೇ ನಾನು ಅಗ್ನಿಯಲ್ಲಿ ಪ್ರವೇಶ ಮಾಡುವೆನು.

ಭವಿಷ್ಯಂತಿ ವನೇ ಯಾನಿ ತಪೋವಿಘ್ನಕರಾಣಿ ತೇ ।
ರಥೇನ ಪ್ರತಿಬಾಧಿಷ್ಯೇ ತಾನಿ ಸತ್ತ್ವಾನಿ ರಾಘವ ॥೫೦॥

ನಿನ್ನ ತಪಸ್ಸಿಗೆ ವಿಘ್ನ ಮಾಡುವ ಜಂತುಗಳು ಏನಾದರೂ ಬಂದರೆ ನಾನು ರಥದಲ್ಲಿ ನಿಂತು ಅವೆಲ್ಲವನ್ನೂ ಹೊಡೆದೋಡಿಸುತ್ತೇನೆ.

ತ್ವತ್ಕೃತೇನ ಮಯಾವಾಪ್ತಂ ರಥಚರ್ಯಾಕೃತಂ ಸುಖಮ್ ।
ಆಶಂಸೇ ತ್ವತ್ಕೃತೇನಾಹಂ ವನವಾಸಕೃತಂ ಸುಖಮ್ ॥೫೧॥

ನಿನ್ನ ಜೊತೆಗಿರುವ ಆಸೆಯಿಂದ ನಿನ್ನ ಅನುಗ್ರಹ ಫಲವಾಗಿ ನಿನಗೆ ಸಾರಥ್ಯ ಮಾಡುವ ಸುಖವನ್ನು ಪಡೆದಿದ್ದೇನೆ. ನಿನ್ನ ಜೊತೆ ಇರುವಾಸೆಯಿಂದಲೇ ನಿನ್ನ ಅನುಗ್ರಹದಿಂದ ನಿನ್ನೊಂದಿಗೆ ವನವಾಸ ಮಾಡುವ ಸುಖವನ್ನು ಕೂಡ ನಾನು ಬಯಸುತ್ತೇನೆ.

ಪ್ರಸೀದೇಚ್ಛಾಮಿ ತೇಽರಣ್ಯೇ ಭವಿತುಂ ಪ್ರತ್ಯನಂತರಃ ।
ಪ್ರೀತ್ಯಾಭಿಹಿತಮಿಚ್ಛಾಮಿ ಭವ ಮೇ ಪ್ರತ್ಯನಂತರಃ ॥೫೨॥

ಪ್ರಸನ್ನನಾಗು. ನಿನಗೆ ಅರಣ್ಯದಲ್ಲಿ ಎಡಬಲ ಸೇವಕನಾಗಿರಲು ಬಯಸುತ್ತೇನೆ. ಪ್ರೀತಿಯಿಂದ 'ನೀನು ನನ್ನ ಸೇವಕನಾಗಿರು' ಎಂದು ನನಗೆ ಹೇಳು. ಈ ಮಾತನ್ನು ಕೇಳಲು ಬಯಸುತ್ತೇನೆ.

ಇಮೇ ಚಾಪಿ ಹಯಾ ವೀರ ಯದಿ ತೇ ವನವಾಸಿನಃ ।
ಪರಿಚರ್ಯಾಂ ಕರಿಷ್ಯಂತಿ ಪ್ರಾಪ್ಸ್ಯಂತಿ ಪರಮಾಂ ಗತಿಮ್ ॥೫೩॥

ವೀರ ರಾಮನೆ, ಈ ಕುದುರೆಗಳು ಕೂಡ ನಿನ್ನನ್ನು ವನವಾಸಕಾಲದಲ್ಲಿ ಸೇವೆ ಮಾಡಿದರೆ ಪರಗತಿಯನ್ನು ಹೊಂದುವುವು.

ತವ ಶುಶ್ರೂಷಣಂ ಮೂರ್ಧ್ನಾ ಕರಿಷ್ಯಾಮಿ ವನೇ ವಸನ್।
ಅಯೋಧ್ಯಾಂ ದೇವಲೋಕಂ ವಾ ಸರ್ವಥಾ ಪ್ರಜಹಾಮ್ಯಹಮ್ ॥೫೪॥

ವನದಲ್ಲಿ ವಾಸಮಾಡುತ್ತ ನಿನ್ನಾಜ್ಞೆಗಳನ್ನು ಶಿರಸಾವಹಿಸಿ ನಿನ್ನ ಸೇವೆಗೈಯುತ್ತೇನೆ ಹೊರತು ಅಯೋಧ್ಯೆಯನ್ನಾಗಲಿ ದೇವಲೋಕವನ್ನೇ ಆಗಲಿ ಸರ್ವಥಾ ಬೇಡವೆನ್ನುತ್ತೇನೆ.

ನ ಹಿ ಶಕ್ಯಾ ಪ್ರವೇಷ್ಟುಂ ಸಾ ಮಯಾಯೋಧ್ಯಾ ತ್ವಯಾ ವಿನಾ ।
ರಾಜಧಾನೀ ಮಹೇಂದ್ರಸ್ಯ ಯಥಾ ದುಷ್ಕೃತಕರ್ಮಣಾ ॥೫೫॥

ಪಾಪಕರ್ಮಿಗೆ ದೇವೇಂದ್ರನ ರಾಜಧಾನಿಯನ್ನು ಪ್ರವೇಶಿಸುವುದು ಹೇಗೆ ಅಶಕ್ಯವೋ ಹಾಗೇ ನೀನಿಲ್ಲದ ಅಯೋಧ್ಯೆಯನ್ನು ಪ್ರವೇಶಿಸುವುದು ನನಗೆ ಅಶಕ್ಯ.

ವನವಾಸೇ ಕ್ಷಯಂ ಪ್ರಾಪ್ತೇ ಮಮೈಷ ಹಿ ಮನೋರಥಃ ।
ಯದನೇನ ರಥೇನೈವ ತ್ವಾಂ ವಹೇಯಂ ಪುರೀಂ ಪುನಃ ॥೫೬॥

ವನವಾಸ ಮುಗಿದಾಗ ಇದೇ ರಥದಿಂದ ನಿನ್ನನ್ನು ಪುನಃ ಅಯೋಧ್ಯೆಗೆ ಒಯ್ಯುವುದು ನನ್ನ ಆಸೆ.

ಚತುರ್ದಶ ಹಿ ವರ್ಷಾಣಿ ಸಹಿತಸ್ಯ ತ್ವಯಾ ವನೇ ।
ಕ್ಷಣಭೂತಾನಿ ಯಾಸ್ಯಂತಿ ಶತಸಂಖ್ಯಾನ್ಯತೋಽನ್ಯಥಾ ॥೫೭॥

ಕಾಡಿನಲ್ಲಿ ನಿನ್ನ ಜೊತೆಗಿದ್ದರೆ ನನಗೆ ಹದಿನಾಲ್ಕು ವರ್ಷಗಳು ಹದಿನಾಲ್ಕು ಕ್ಷಣಗಳಂತೆ ಕಳೆಯುವುವು. ಇಲ್ಲದಿದ್ದರೆ ಅವು ಪ್ರತಿಯೊಂದೂ ನೂರು ವರ್ಷಗಳೇ ಆಗುವುವು.

ಭೃತ್ಯವತ್ಸಲ ತಿಷ್ಠಂತಂ ಭರ್ತೃಪುತ್ರಗತೇ ಪಥಿ ।
ಭಕ್ತಂ ಭೃತ್ಯಂ ಸ್ಥಿತಂ ಸ್ಥಿತ್ಯಾಂ ತ್ವಂ ನ ಮಾಂ ಹಾತುಮರ್ಹಸಿ ॥೫೮॥

ಭೃತ್ಯವತ್ಸಲನೆ, ರಾಜಕುಮಾರನಾದ ನೀನು ಹೋಗುವ ದಾರಿಯಲ್ಲಿಯೇ ನಾನು ನಡೆಯುತ್ತ ಭೃತ್ಯರ ರೀತಿಯಿಂದಲೇ ಇದ್ದು ಭಕ್ತನಾಗಿರುವೆನು. ನನ್ನನ್ನು ತ್ಯಜಿಸಬೇಡ.

ಏವಂ ಬಹುವಿಧಂ ದೀನಂ ಯಾಚಮಾನಂ ಪುನಃ ಪುನಃ ।
ರಾಮೋ ಭೃತ್ಯಾನುಕಂಪೀ ತು ಸುಮಂತ್ರಮಿದಮಬ್ರವೀತ್ ॥೫೯॥

ಹೀಗೆ ಬಹುವಿಧವಾಗಿ ಪುನಃಪುನಃ ಯಾಚಿಸಿದ ಸುಮಂತ್ರನಿಗೆ ಭೃತ್ಯರಲ್ಲಿ ದಯೆಯುಳ್ಳ ಶ್ರೀರಾಮ ನುಡಿದ.

ಜಾನಾಮಿ ಪರಮಾಂ ಭಕ್ತಿಂ ಮಯಿ ತೇ ಭರ್ತೃವತ್ಸಲ ।
ಶೃಣು ಚಾಪಿ ಯದರ್ಥಂ ತ್ವಾಂ ಪ್ರೇಷಯಾಮಿ ಪುರೀಮಿತಃ ॥೬೦॥

ಪ್ರಭುವಿನಲ್ಲಿ ವಾತ್ಸಲ್ಯವುಳ್ಳ ಸುಮಂತ್ರನೆ, ನಾನು ನಿನ್ನ ಗಾಢವಾದ ಭಕ್ತಿಯನ್ನು ಬಲ್ಲೆ. ನಾನು ನಿನ್ನನ್ನು ಇಲ್ಲಿಂದ ಅಯೋಧ್ಯೆಗೆ ಕಳಿಸಲು ಕಾರಣವನ್ನು ಹೇಳುತ್ತೇನೆ, ಕೇಳು.

ನಗರೀಂ ತ್ವಾಂ ಗತಂ ದೃಷ್ಟ್ವಾ ಜನನೀ ಮೇ ಯವೀಯಸೀ ।
ಕೈಕೇಯೀ ಪ್ರತ್ಯಯಂ ಗಚ್ಛೇದಿತಿ ರಾಮೋ ವನಂ ಗತಃ ॥೬೧॥

ನೀನು ಅಯೋಧ್ಯೆಗೆ ಬಂದುದನ್ನು ನೋಡಿದರೆ ನನ್ನಚಿಕ್ಕಮ್ಮ 'ರಾಮ ಕಾಡಿಗೆ ಹೋಗಿದ್ದಾನೆ' ಎಂದು ನಂಬುತ್ತಾಳೆ.

ಪರಿತುಷ್ಟಾ ಹಿ ಸಾ ದೇವೀ ವನವಾಸಂ ಗತೇ ಮಯಿ ।
ರಾಜಾನಂ ನಾತಿಶಂಕೇತ ಮಿಥ್ಯಾವಾದೀತಿ ಧಾರ್ಮಿಕಮ್ ॥೬೨॥

ನಾನು ವನವಾಸಕ್ಕೆ ಹೋದುದು ನಿಜವೆಂದಾದರೆ ದೇವಿ ಸಂತುಷ್ಟಳಾಗುವಳು. ಧಾರ್ಮಿಕನಾದ ರಾಜನನ್ನು ಸುಳ್ಳುಗಾರನಿರಬಹುದೆಂದು ಅನ್ಯಥಾ ಶಂಕಿಸಲಾರಳು.

ಏಷ ಮೇ ಪ್ರಥಮಃ ಕಲ್ಪೋ ಯದಂಬಾ ಮೇ ಯವೀಯಸೀ ।
ಭರತಾರಕ್ಷಿತಂ ಸ್ಫೀತಂ ಪುತ್ರರಾಜ್ಯಮವಾಪ್ನುಯಾತ್ ॥೬೩॥

ನನಗೆ ಆಗಬೇಕಾಗಿರುವ ಮುಖ್ಯಪ್ರಯೋಜನವಿದು. ಮತ್ತು ಪುತ್ರ ಭರತ-ನಾಳುವ ಸಮೃದ್ಧವಾದ ರಾಜ್ಯವನ್ನು ನನ್ನ ಚಿಕ್ಕಮ್ಮ ಪಡೆಯಬೇಕು ಎನ್ನುವುದೂ ಇನ್ನೊಂದು ಪ್ರಯೋಜನ.

ಮಮ ಪ್ರಿಯಾರ್ಥಂ ರಾಜ್ಞಶ್ಚ ಸರಥಸ್ತ್ವಂ ಪುರೀಂ ವ್ರಜ ।
ಸಂದಿಷ್ಟಶ್ಚಾಸಿ ಯಾನರ್ಥಾಂಸ್ತಾಂಸ್ತಾನ್ ಬ್ರೂಯಾಸ್ತಥಾ ತಥಾ ॥೬೪॥

ಹೀಗೆ ನನಗೂ ರಾಜನಿಗೂ ಸಂತೋಷ ಉಂಟುಮಾಡುವುದಕ್ಕಾಗಿ ನೀನು ಅವಶ್ಯ ಅಯೋಧ್ಯೆಗೆ ಹೋಗಬೇಕು. ನಿನಗೆ ನಾವು ನೀಡಿದ ಆಯಾ ಸಂದೇಶಗಳನ್ನು ಕೂಡ ಹಾಗೆಹಾಗೇ ಹೇಳಬೇಕು.

ಇತ್ಯುಕ್ತ್ವಾ ವಚನಂ ಸೂತಂ ಸಾಂತ್ವಯಿತ್ವಾ ಪುನಃ ಪುನಃ ।
ಗುಹಂ ವಚನಮಕ್ಲೀಬೋ ರಾಮೋ ಹೇತುಮದಬ್ರವೀತ್ ॥೬೫॥

ಹೀಗೆ ರಾಮನು ಸುಮಂತ್ರನಿಗೆ ಹೇಳಿ ಪುನಃ ಪುನಃ ಸಂತೈಸಿ ಧೈರ್ಯದಿಂದ ಯುಕ್ತಿಯುಕ್ತವಾದ ಮಾತನ್ನು ಗುಹನಿಗೆ ಹೇಳಿದ.

ನೇದಾನೀಂ ಗುಹ ಯೋಗ್ಯೋಽಯಂ ವಾಸೋ ಮೇ ಸಜನೇ ವನೇ ।
ಅವಶ್ಯಂ ಹ್ಯಾಶ್ರಮೇ ವಾಸಃ ಕರ್ತವ್ಯಸ್ತದ್ಗತೋ ವಿಧಿಃ ॥೬೬॥

'ಗುಹನೇ! ಈಗ ನಾನು ಜನರು ವಾಸಿಸುವ ಕಾಡಿನಲ್ಲಿ ವಾಸಮಾಡುವುದು ಯುಕ್ತವಲ್ಲ. ಆಶ್ರಮವಾಸವನ್ನು ನಾನು ಅವಶ್ಯ ಮಾಡಬೇಕಿದೆ. ಹಾಗೇ ತಂದೆಯ ಆಜ್ಞೆ ಇದೆ.

ಸೋಽಹಂ ಗೃಹೀತ್ವಾ ನಿಯಮಂ ತಪಸ್ವಿಜನಭೂಷಣಮ್ ।
ಹಿತಕಾಮಃ ಪಿತುರ್ಭಾರ್ಯಯಃ ಸೀತಾಯಾ ಲಕ್ಷ್ಮಣಸ್ಯ ಚ ॥೬೭॥

ಜಟಾಃ ಕೃತ್ವಾ ಗಮಿಷ್ಯಾಮಿ ನ್ಯಗ್ರೋಧಕ್ಷೀರಮಾನಯ ।
ತತ್ಕ್ಷೀರಂ ರಾಜಪುತ್ರ್ಯಾಯ ಗುಹಃ ಕ್ಷಿಪ್ರಮುಪಾಹರತ್ ॥೬೮॥

'ಅದರಿಂದ ನಾನು ತಪಸ್ವಿಜನರಿಗೆ ಭೂಷಣವಾಗುವ ನಿಯಮವನ್ನು ಪರಿಗ್ರಹಿಸಿ ತಂದೆಯ ಸೀತೆಯ ಲಕ್ಷ್ಮಣನ ಪರಲೋಕ ಹಿತಕಾಮನೆಯಿಂದ ಜಟೆಗಳನ್ನು

ಮಾಡಿಕೊಂಡು ಹೊರಡುತ್ತೇನೆ. ಅದಕ್ಕೆ ಆಲದ ಮರದ ಹಾಲನ್ನು ತಂದುಕೊಡು' ಎಂದು. ಒಡನೆ ಗುಹನು ಆ ಹಾಲನ್ನು ರಾಮನಿಗೆ ತಂದುಕೊಟ್ಟ.

ಲಕ್ಷ್ಮಣಸ್ಯಾತ್ಮನಶ್ಚೈವ ರಾಮಸ್ತೇನಾಕರೋಜ್ಜಟಾಃ ।
ದೀರ್ಘಬಾಹುರ್ನರವ್ಯಾಘ್ರೋ ಜಟಿಲತ್ವಮಧಾರಯತ್ ॥೬೯॥

ಶ್ರೀರಾಮನು ಲಕ್ಷ್ಮಣನಿಗೂ ತನಗೂ ಜಟೆಗಳನ್ನು ಮಾಡಿದ. ದೀರ್ಘಬಾಹು-ವಾದ ಪುರುಷೋತ್ತಮ ರಾಮನು ಜಟಾಧಾರಿಯಾದ.

ತೌ ತದಾ ಚೀರವಸನೌ ಜಟಾಮಂಡಲಧಾರಿಣೌ ।
ಅಶೋಭೇತಾಮೃಷಿಸಮೌ ಭ್ರಾತರೌ ರಾಮಲಕ್ಷ್ಮಣೌ ॥೭೦॥

ಆ ರಾಮಲಕ್ಷ್ಮಣರು ಸೋದರರು ನಾರುಡೆ ಉಟ್ಟು ಜಟಾಸಮೂಹಗಳನ್ನು ಧರಿಸಿ ಋಷಿಗಳಂತೆ ಶೋಭಿಸಿದರು.

ತತೋ ವೈಖಾನಸಂ ಮಾರ್ಗಮಾಸ್ಥಿತಃ ಸಹಲಕ್ಷ್ಮಣಃ ।
ವ್ರತಮಾದಿಷ್ಟವಾನ್ ರಾಮಃ ಸಹಾಯಂ ಗುಹಮಬ್ರವೀತ್ ॥೭೧॥

ಬಳಿಕ ವಾನಪ್ರಸ್ಥಾಶ್ರಮ ಮಾರ್ಗವನ್ನು ಹೊಂದಿ ರಾಮನು ಲಕ್ಷ್ಮಣ ಸಹಿತನಾಗಿ ವಾನಪ್ರಸ್ಥವ್ರತವನ್ನು ಸ್ವೀಕರಿಸಿದ. ತನಗೆ ಸಹಾಯಕನಾದ ಗುಹನಿಗೆ ಹೇಳಿದ.

ಶ್ರೀರಾಮ ಇಲ್ಲಿ ಪೂರ್ತಿ ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಲಿಲ್ಲ. 'ಸಮ್ಯಕ್ ಸಂಕಲ್ಪಜಃ ಕಾಮೋ ಧರ್ಮಮೂಲಮಿದಂ ಸ್ಮೃತಂ'(ಮನುಸ್ಮೃತಿ) 'ಒಳ್ಳೆಯ ಸಂಕಲ್ಪದಿಂದ ಕೈಗೊಂಡ ಇಷ್ಟವಾದ ಆಚಾರವು ಧರ್ಮಸಾಧನವೇ ಆಗುತ್ತದೆ. ಅದರಿಂದ ವೈಖಾನಸ ಮಾರ್ಗದಲ್ಲಿ ನಿಂತು ಕೆಲವು ವ್ರತವನ್ನು ಸಂಕಲ್ಪಿಸಿದ್ದಾನೆ ಶ್ರೀರಾಮ. ಇದು ಪಿತ್ರಾಜ್ಞೆಯಿಂದ ತಾತ್ಕಾಲಿಕವಾಗಿ ಸ್ವೀಕರಿಸಿದ ಸಾಂಕಲ್ಪಿಕ ನಿಯಮ. ಅಜ್ಞಾತವಾಸದಲ್ಲಿ ಯುಧಿಷ್ಠಿರ ಸನ್ಯಾಸಿಯಾದಂತೆ. ಇಲ್ಲದಿದ್ದರೆ, ಗಂಗಾ ಪ್ರಯಾಗಾದಿ ತೀರ್ಥಗಳಲ್ಲಿ ಮತ್ತು ಪಿತೃಮರಣದಲ್ಲಿ ಮುಂಡನ ಮಾಡಿಸಿಕೊಳ್ಳ-ದಿರುವುದು, ಮುಂದೆ ತಿರುಗಿ ಗೃಹಸ್ಥಾಶ್ರಮನಿಯಮವನ್ನು ಸ್ವೀಕರಿಸುವುದು ಅಯುಕ್ತವಾದೀತು. ಗೃಹಸ್ಥನಾಗಿದ್ದು ಜಟಾಧಾರಣ ಮಾಡುವುದೂ ನಿಷಿದ್ಧ-ವಾದೀತು.

ಅಪ್ರಮತ್ತೋ ಬಲೇ ಕೋಶೇ ದುರ್ಗೇ ಜನಪದೇ ತಥಾ ।
ಭವೇಥಾ ಗುಹ ರಾಜ್ಯಂ ಹಿ ದುರಾರಕ್ಷತಮಂ ಮತಮ್ ॥೭೨॥

ನಿನ್ನ ಸೈನ್ಯ ಬೊಕ್ಕಸ ಕೋಟೆ ದೇಶಗಳ ವಿಷಯದಲ್ಲಿ ನೀನು ಬಹಳ ಜಾಗರೂಕನಾಗಿರು, ಗುಹನೆ, ರಾಜ್ಯವನ್ನು ರಕ್ಷಿಸಿಕೊಳ್ಳುವುದು ಅತ್ಯಂತ ದುಷ್ಕರ.

ತತಸ್ತಂ ಸಮನುಜ್ಞಾಯ ಗುಹಮಿಕ್ಷ್ವಾಕುನಂದನಃ ।
ಜಗಾಮ ತೂರ್ಣಮವ್ಯಗ್ರಃ ಸಭಾರ್ಯಃ ಸಹಲಕ್ಷ್ಮಣಃ ॥೭೩॥

ಬಳಿಕ ಶ್ರೀರಾಮನು ಗುಹನಲ್ಲಿ 'ಹೋಗಿ ಬರುತ್ತೇನೆ' ಎಂದು ಹೇಳಿ ಬೇಗನೆ ಸೀತಾ ಲಕ್ಷ್ಮಣ ಸಮೇತನಾಗಿ ಹೊರಟ.

ಸ ತು ದೃಷ್ಟ್ವಾ ನದೀತೀರೇ ನಾವಮಿಕ್ಷ್ವಾಕುನಂದನಃ ।
ತಿತೀರ್ಷುಃ ಶೀಘ್ರಗಾಂ ಗಂಗಾಮಿದಂ ಲಕ್ಷ್ಮಣಮಬ್ರವೀತ್ ॥೭೪॥

ನದೀತೀರದಲ್ಲಿ ನೌಕೆಯನ್ನು ಕಂಡು, ವೇಗವಾಗಿ ಹರಿಯುವ ಗಂಗೆಯನ್ನು ದಾಟುವುದಕ್ಕಾಗಿ, ಲಕ್ಷ್ಮಣನಿಗೆ ಹೇಳಿದ.

ಆರೋಹ ತ್ವಂ ನರವ್ಯಾಘ್ರ ಸ್ಥಿತಾಂ ನಾವಮಿಮಾಂ ಶನೈಃ ।
ಸೀತಾಂ ಚಾರೋಪಯಾನ್ವಕ್ಷಂ ಪರಿಗೃಹ್ಯ ಮನಸ್ವಿನೀಮ್ ॥೭೫॥

ಪುರುಷೋತ್ತಮನೆ, ಮನಸ್ವಿನಿಯಾದ ಸೀತೆಯ ಕೈಹಿಡಿದು ನಿಧಾನವಾಗಿ ನೌಕೆಯ ಮೇಲೆ ಏರಿಸು. ಬಳಿಕ ನೀನು ಏರು.

ಸ ಭ್ರಾತುಃ ಶಾಸನಂ ಶ್ರುತ್ವಾ ಸರ್ವಮಪ್ರತಿಕೂಲಯನ್ ।
ಆರೋಪ್ಯ ಮೈಥಿಲೀಂ ಪೂರ್ವಮಾರುರೋಹಾತ್ಮವಾಂಸ್ತತಃ ॥೭೬॥

ಅಣ್ಣನ ಮಾತನ್ನು ಕೇಳಿ ಲಕ್ಷ್ಮಣ ಅದಕ್ಕೆ ಅನುಕೂಲವಾಗುವಂತೆ ಮೊದಲಿಗೆ ಸೀತೆಯನ್ನು ನೌಕೆಯ ಮೇಲೆ ಏರಿಸಿ, ಬಳಿಕ ನಿಪುಣ ಬುದ್ಧಿಯವನಾದ ಲಕ್ಷ್ಮಣ ತಾನು ಏರಿದ.

ಅಥಾರುರೋಹ ತೇಜಸ್ವೀ ಸ್ವಯಂ ಲಕ್ಷ್ಮಣಪೂರ್ವಜಃ ।
ತತೋ ನಿಷಾದಾಧಿಪತಿರ್ಗುಹೋ ಜ್ಞಾತೀನಚೋದಯತ್ ॥೭೭॥

ಬಳಿಕ ಶ್ರೀರಾಮ ತಾನು ಏರಿದ. ಬೇಡರ ರಾಜ ಗುಹನು ತನ್ನ ಬಂಧುಗಳಿಗೆ ನೌಕೆಯನ್ನು ಹೊರಡಿಸಲು ಆಜ್ಞಾಪಿಸಿದ.

ರಾಘವೋಽಪಿ ಮಹಾತೇಜಾ ನಾವಮಾರುಹ್ಯ ತಾಂ ತತಃ ।
ಬ್ರಹ್ಮವತ್ ಕ್ಷತ್ರವಚ್ಚೈವ ಜಜಾಪ ಹಿತಮಾತ್ಮನಃ ॥೭೮॥

ಮಹಾತೇಜನಾದ ಶ್ರೀರಾಮನು ಆ ನೌಕೆಯನ್ನೇರುವಾಗ ಆತ್ಮಹಿತಕ್ಕಾಗಿ ಬ್ರಹ್ಮಕ್ಷತ್ರ ದೇವತಾಕವಾದ ಮಂತ್ರವನ್ನು ಜಪಿಸಿದ.

ಸುತ್ರಾಮಾಣಂ ಪೃಥಿವೀಂ ದ್ಯಾಮನೇಹಸಂ
ಸುಶರ್ಮಾಣ ಮದಿತಿಂ ಸುಪ್ರಣೇತಿಂ ।
ದೈವೀಂ ನಾವಂ ಸ್ವರಿತ್ರಾಮನಾಗಸಂ
ಅಸ್ರವಂತೀ ಮಾರುಹೇಮಾ ಸ್ವಸ್ತಯೇ ॥ (ಅ.8.ಅ.2.ವ.4)

ಇದು ನೌಕೆಯನ್ನೇರುವಾಗ ಹೇಳಬೇಕಾಗಿರುವ ಮಂತ್ರ. ಈ ಮಂತ್ರಕ್ಕೆ 'ಏಷ ಹ ವಾ ಅರಿಷ್ಟನೇಮಿಃ ಪೃತನಾಜಿತ್...' ಎಂಬ ಬ್ರಾಹ್ಮಣದಲ್ಲಿ 'ಅರಿಷ್ಟನೇಮಿ' ಮತ್ತು 'ಪೃತನಾಜಿತ್' ಶಬ್ದಗಳಿಂದ ಬ್ರಹ್ಮ–ಕ್ಷತ್ರ ದೇವತಾಕತ್ವವನ್ನು ಹೇಳಿದೆ.

ಆಚಮ್ಯ ಚ ಯಥಾಶಾಸ್ತ್ರಂ ನದೀಂ ತಾಂ ಸಹ ಸೀತಯಾ ।
ಪ್ರಾಣಮತ್ ಪ್ರೀತಿಸಂಹೃಷ್ಟೌ ಲಕ್ಷ್ಮಣಶ್ಚಾಮಿತಪ್ರಭಃ ॥೬೯॥

ಸೀತೆಯೊಂದಿಗೆ ಸಂತುಷ್ಟನಾದ ರಾಮನೂ ಮಹಾರಥನಾದ ಲಕ್ಷ್ಮಣನೂ ಶಾಸ್ತ್ರೋಕ್ತವಾಗಿ ಆಚಮನಮಾಡಿ ಆ ನದಿಯನ್ನು ನಮಿಸಿದರು.

ಅನುಜ್ಞಾಯ ಸುಮಂತ್ರಂ ಚ ಸಬಲಂ ಚೈವ ತಂ ಗುಹಮ್ ।
ಆಸ್ಥಾಯ ನಾವಂ ರಾಮಸ್ತು ಚೋದಯಾಮಾಸ ನಾವಿಕಾನ್ ॥೭೦॥

ಸುಮಂತ್ರನಿಗೂ ಸೈನ್ಯಸಮೇತನಾದ ಗುಹನಿಗೂ ಹಿಂತಿರುಗಲು ಅನುಜ್ಞೆ ನೀಡಿ ನೌಕೆಯಲ್ಲಿ ಕುಳಿತು ಶ್ರೀರಾಮ ನಾವಿಕರಿಗೆ ಆಜ್ಞೆಮಾಡಿದ.

ತತಸ್ತೈಶ್ಚೋದಿತಾ ಸಾ ನೌಃ ಕರ್ಣಧಾರಸಮಾಹಿತಾ ।
ಶಿವಸ್ಚ್ಯವೇಗಾಭಿಹತಾ ಗಂಗಾಸಲಿಲಮತ್ಯಗಾತ್ ॥೭೧॥

ಆ ನಾವಿಕರು ನೌಕೆಯನ್ನು ನಡೆಸಲು ತೊಡಗಿದರು. ಚುಕ್ಕಾಣಿ ಹಿಡಿದವರು ನೌಕೆಯನ್ನು ನದಿದಾಟುವ ಘಟ್ಟಕ್ಕೆ ಇದಿರಾಗಿಸಿದರು. ಮಂಗಳಕರವಾದ ಚುಕ್ಕಾಣಿ–ಗಳಿಂದ ವೇಗವಾಗಿ ನೌಕೆಯನ್ನು ನಡೆಸಿದರು. ನೌಕೆ ಶೀಘ್ರವಾಗಿ ನೀರಿನಲ್ಲಿ ಚಲಿಸಿತು.

ಮಧ್ಯಂ ತು ಸಮನುಪ್ರಾಪ್ಯ ಭಾಗೀರಥ್ಯಾಸ್ತ್ವನಿಂದಿತಾ ।
ವೈದೇಹೀ ಪ್ರಾಂಜಲಿರ್ಭೂತ್ವಾ ತಾಂ ನದೀಮಿದಮಬ್ರವೀತ್ ॥೭೨॥

ಭಾಗೀರಥಿಯ ಮಧ್ಯಕ್ಕೆ ನೌಕೆ ಬಂದಾಗ ಅನಿಂದಿತಳಾದ ಸೀತೆ ನದಿಗೆ ಕೈಮುಗಿದು ನುಡಿದಳು.

ಪುತ್ರೋ ದಶರಥಸ್ಯಾಯಂ ಮಹಾರಾಜಸ್ಯ ಧೀಮತಃ ।
ನಿದೇಶಂ ಪಾಲಯತ್ವೇನಂ ಗಂಗೇ ತ್ವದಭಿರಕ್ಷಿತಃ ॥೮೩॥

ಇವನು ಧೀಮಂತನಾದ ಮಹಾರಾಜ ದಶರಥನ ಪುತ್ರ. ಇವನು ನಿನ್ನಿಂದ ರಕ್ಷಿತನಾಗಿ ಈ ರಾಜನಾಜ್ಞೆಯನ್ನು ಪಾಲಿಸಲಿ.

ಚತುರ್ದಶ ಹಿ ವರ್ಷಾಣಿ ಸಮಗ್ರಾಣ್ಯುಷ್ಯ ಕಾನನೇ ।
ಭ್ರಾತ್ರಾ ಸಹ ಮಯಾ ಚೈವ ಪುನಃ ಪ್ರತ್ಯಾಗಮಿಷ್ಯತಿ ॥೮೪॥

ಹದಿನಾಲ್ಕು ವರ್ಷಕಾಲ ಪೂರ್ತಿಯಾಗಿ ಕಾಡಿನಲ್ಲಿ ಸೋದರನೊಂದಿಗೂ ನನ್ನೊಂದಿಗೂ ವಾಸಮಾಡಿ ಪುನಃ ಹಿಂತಿರುಗಲಿ.

ತತಸ್ತಾ ತ್ವಂ ದೇವಿ ಸುಭಗೇ ಕ್ಷೇಮೇಣ ಪುನರಾಗತಾ ।
ಯಕ್ಷ್ಯೇ ಪ್ರಮುದಿತಾ ಗಂಗೇ ಸರ್ವಕಾಮಸಮೃದ್ಧಿನೀ ॥೮೫॥

ಆಗ ನಾನು, ಸುಭಗಳೆ, ದೇವಿ, ಗಂಗೆಯೆ, ಪುನಃ ಬಂದು ಸರ್ವಾಭೀಷ್ಟ ಸಮೃದ್ಧಿಯುಕ್ತಳಾಗಿ ಸಂತೋಷದಿಂದ ನಿನ್ನನ್ನು ಪೂಜಿಸುವೆನು.

ತ್ವಂ ಹಿ ತ್ರಿಪಥಗೇ ದೇವಿ ಬ್ರಹ್ಮಲೋಕಂ ಸಮೀಕ್ಷಸೇ ।
ಭಾರ್ಯಾ ಚೋದಧಿರಾಜಸ್ಯ ಲೋಕೇಽಸ್ಮಿನ್ ಸಂಪ್ರದೃಶ್ಯಸೇ ॥೮೬॥

ಮೂರು ಲೋಕಗಳಲ್ಲಿ ಹರಿಯುವ ದೇವಿಯೆ, ನೀನು ವಿಷ್ಣುಪಾದವನ್ನು ತೊಳೆಯುವಾಗ ಬ್ರಹ್ಮಲೋಕದಲ್ಲಿ ವ್ಯಾಪಿಸುವೆ. ಈ ಲೋಕಗಳಲ್ಲಿ ಸಮುದ್ರ ರಾಜನ ಭಾರ್ಯೆಯಾಗಿ ತೋರುವೆ.

ಸಾ ತ್ವಾಂ ದೇವಿ ನಮಸ್ಯಾಮಿ ಪ್ರಶಂಸಾಮಿ ಚ ಶೋಭನೇ ।
ಪ್ರಾಪ್ತರಾಜ್ಯೇ ನರವ್ಯಾಘ್ರೇ ಶಿವೇನ ಪುನರಾಗತೇ ॥೮೭॥

ಶೋಭನೆ, ದೇವಿ, ಪುರುಷೋತ್ತಮ ಶ್ರೀರಾಮನು ಕ್ಷೇಮವಾಗಿ ಪುನಃ ಬಂದು ರಾಜ್ಯವನ್ನು ಪಡೆದಾಗ ನಾನು ನಿನಗೆ ನಮಸ್ಕಾರ ಮಾಡುವೆ, ಸ್ತೋತ್ರ ಮಾಡುವೆ.

ಗವಾಂ ಶತಸಹಸ್ರಾಣಿ ವಸ್ತ್ರಾಣ್ಯನ್ನಂ ಚ ಪೇಶಲಮ್ ।
ಬ್ರಾಹ್ಮಣೇಭ್ಯಃ ಪ್ರದಾಸ್ಯಾಮಿ ತವ ಪ್ರಿಯಚಿಕೀರ್ಷಯಾ ॥೮೮॥

ಲಕ್ಷ ಗೋವುಗಳನ್ನೂ ವಸ್ತ್ರಗಳನ್ನೂ ಉತ್ತಮ ಅನ್ನವನ್ನೂ ನಿನ್ನ ಸಂತೋಷವನ್ನು ಉಂಟುಮಾಡುವ ಬಯಕೆಯಿಂದ ಬ್ರಾಹ್ಮಣರಿಗೆ ನೀಡುತ್ತೇನೆ.

ಸುರಾಘಟಸಹಸ್ರೇಣ ಮಾಂಸಭೂತೌದನೇನ ಚ ।
ಯಕ್ಷ್ಯೇ ತ್ವಾಂ ಪ್ರಯತಾ ದೇವಿ ಪುರೀಂ ಪುನರುಪಾಗತಾ ॥೮೯॥

ದೇವಿ, ಸಾವಿರ ಸುರಾಘಟಗಳಿಂದಲೂ ಮಾಂಸರೂಪವಾದ ಅನ್ನದಿಂದಲೂ ಮಹಾ ಬಲಿಪ್ರದಾನ ಮಾಡುವ ಮೂಲಕ, ನಾನು ಅಯೋಧ್ಯೆಗೆ ಹಿಂತಿರುಗಿ ಬಂದಾಗ, ನಿನ್ನನ್ನು ಭಕ್ತಿಯಿಂದ ಪೂಜಿಸುತ್ತೇನೆ.

ಯಾನಿ ತ್ವತ್ತೀರವಾಸೀನಿ ದೈವತಾನಿ ವಸಂತಿ ಚ ।
ತಾನಿ ಸರ್ವಾಣಿ ಯಕ್ಷ್ಯಾಮಿ ತೀರ್ಥಾನ್ಯಾಯತನಾನಿ ಚ ॥೯೦॥

ನಿನ್ನ ತೀರದಲ್ಲಿ ವಾಸಮಾಡುವ ಯಾವ ದೇವತೆಗಳು ವಾಸವಾಗಿ ಇರುವರೋ ಅವರಿಗೆ ಎಲ್ಲರಿಗೂ, ಪ್ರಯಾಗಾದಿತೀರ್ಥಗಳಿಗೂ ಕಾಶೀ ಮುಂತಾದ ಕ್ಷೇತ್ರಗಳಿಗೂ ಪೂಜೆ ಸಲ್ಲಿಸುವೆನು.

ಪುನರೇವ ಮಹಾಬಾಹುರ್ಮಯಾ ಭ್ರಾತ್ರಾ ಚ ಸಂಗತಃ ।
ಅಯೋಧ್ಯಾಂ ವನವಾಸಾತ್ತು ಪ್ರವಿಶತ್ವನಘೋऽನಘೇ ॥೯೧॥

ನಿಷ್ಪಾಪಳೆ, ನಿಷ್ಪಾಪನಾದ ಮಹಾಬಾಹು ಶ್ರೀರಾಮನು ನನ್ನಿಂದಲೂ ಲಕ್ಷ್ಮಣ-ನಿಂದಲೂ ಕೂಡಿ ವನವಾಸದಿಂದ ಹಿಂತಿರುಗಿ ಅಯೋಧ್ಯೆಯನ್ನು ಪುನಃ ಪ್ರವೇಶಿಸಲಿ.

ತಥಾ ಸಂಭಾಷಮಾಣಾ ಸಾ ಸೀತಾ ಗಂಗಾಮನಿಂದಿತಾ ।
ದಕ್ಷಿಣಾ ದಕ್ಷಿಣಂ ತೀರಂ ಕ್ಷಿಪ್ರಮೇವಾಭ್ಯುಪಾಗಮತ್ ॥೯೨॥

ಪತಿಗೆ ಅನುಕೂಲಳಾದ ಅನಿಂದಿತಳಾದ ಸೀತೆ ಹೀಗೆ ಗಂಗೆಗೆ ಹೇಳುತ್ತ ನದಿಯ ದಕ್ಷಿಣ ತೀರವನ್ನು ಬೇಗನೆ ಬಂದು ಸೇರಿದಳು.

ತೀರಂ ತು ಸಮನುಪ್ರಾಪ್ಯ ನಾವಂ ಹಿತ್ವಾ ನರರ್ಷಭಃ ।
ಪ್ರಾತಿಷ್ಠತ ಸಹ ಭ್ರಾತ್ರಾ ವೈದೇಹ್ಯಾ ಚ ಪರಂತಪಃ ॥೯೩॥

ತೀರಕ್ಕೆ ಬಂದ ಬಳಿಕ ಶತ್ರುನಾಶಕನಾದ ಪುರುಷೋತ್ತಮನಾದ ಶ್ರೀರಾಮನು ನೌಕೆಯನ್ನು ಬಿಟ್ಟು ಲಕ್ಷ್ಮಣನೊಂದಿಗೆ ಸೀತೆಯೊಂದಿಗೆ ಮುಂದೆ ಹೊರಟ.

ಅಥಾಬ್ರವೀನ್ಮಹಾಬಾಹುಃ ಸುಮಿತ್ರಾನಂದವರ್ಧನಮ್ ।
ಭವ ಸಂರಕ್ಷಣಾರ್ಥಾಯ ಸಜನೇ ವಿಜನೇಽಪಿ ವಾ ॥೯॥

ಮಹಾಬಾಹು ಶ್ರೀರಾಮನು ಸುಮಿತ್ರಾನಂದವರ್ಧನನಾದ ಲಕ್ಷ್ಮಣನಿಗೆ ಹೇಳಿದ, 'ಜನರಿರುವಲ್ಲಾಗಲಿ ನಿರ್ಜನ ಪ್ರದೇಶದಲ್ಲಾಗಲಿ ಸೀತಾ ಸಂರಕ್ಷಣೆಗೆ ಜಾಗರೂಕನಾಗಿರು'.

ಅವಶ್ಯಂ ರಕ್ಷಣಂ ಕಾರ್ಯಮದೃಷ್ಟೇ ವಿಜನೇ ವನೇ ।
ಅಗ್ರತೋ ಗಚ್ಛ ಸೌಮಿತ್ರೇ ಸೀತಾ ತ್ವಾಮನುಗಚ್ಛತು ॥೮॥

ನಾನು ನೋಡಿರದ ನಿರ್ಜನವಾದ ಕಾಡಿನಲ್ಲಿ ಸೀತೆಯ ರಕ್ಷಣೆಯನ್ನು ಅವಶ್ಯ ಮಾಡಬೇಕು. ಅದರಿಂದ ಲಕ್ಷ್ಮಣ, ನೀನು ಮುಂದೆ ಹೋಗು, ಸೀತೆ ನಿನ್ನನ್ನು ಹಿಂಬಾಲಿಸಲಿ.

ಪೃಷ್ಠತೋಽಹಂ ಗಮಿಷ್ಯಾಮಿ ತ್ವಾಂ ಚ ಸೀತಾಂ ಚ ಪಾಲಯನ್ ।
ಅನ್ಯೋನ್ಯಸ್ಯೇಹ ನೋ ರಕ್ಷಾ ಕರ್ತವ್ಯಾ ಪುರುಷರ್ಷಭ ॥೯॥

ಹಿಂದಿನಿಂದ ನಿನ್ನನ್ನೂ ಸೀತೆಯನ್ನೂ ರಕ್ಷಿಸುತ್ತ ನಾನು ಬರುತ್ತೇನೆ, ಪುರುಷೋತ್ತಮ, ನಾವು ಅನ್ಯೋನ್ಯ ರಕ್ಷಣೆ ಮಾಡಬೇಕು.

ನ ಹಿ ತಾವದತಿಕ್ರಾಂತಾಽಸುಕರಾ ಕಾಚನ ಕ್ರಿಯಾ ।
ಅದ್ಯ ದುಃಖಂ ತು ವೈದೇಹೀ ವನವಾಸಸ್ಯ ವೇತ್ಸ್ಯತಿ ॥೭॥

ದುಷ್ಕರವಾದ ಕಾರ್ಯ ಇನ್ನೂ ಯಾವುದೂ ಮಾಡಿ ಮುಗಿದಿಲ್ಲ. ಇನ್ನು ಮುಂದೆಯೇ ಮಾಡಬೇಕಿದೆ. ಈಗ ಸೀತೆ ವನವಾಸದ ದುಃಖವನ್ನು ಹೇಗಿರುತ್ತದೆ ಎಂದು ತಿಳಿಯುತ್ತಾಳೆ.

ಪ್ರಣಷ್ಟಜನಸಂಬಾಧಂ ಕ್ಷೇತ್ರಾರಾಮವಿವರ್ಜಿತಮ್ ।
ವಿಷಮಂ ಚ ಪ್ರಪಾತಂ ಚ ವನಂ ಹ್ಯದ್ಯ ಪ್ರವೇಕ್ಷ್ಯತಿ ॥೮॥

ಜನರ ದಟ್ಟಣೆ ಇಲ್ಲದ, ಹೊಲಗದ್ದೆ ಉದ್ಯಾನಗಳಿಲ್ಲದ, ಏರು ತಗ್ಗುಗಳುಳ್ಳ, ಹಳ್ಳಗಳುಳ್ಳ ಕಾಡನ್ನು ಸೀತೆ ಈಗ ಪ್ರವೇಶಿಸುತ್ತಾಳೆ.

ಶ್ರುತ್ವಾ ರಾಮಸ್ಯ ವಚನಂ ಪ್ರತಸ್ಥೇ ಲಕ್ಷ್ಮಣೋಽಗ್ರತಃ ।
ಅನಂತರಂ ಚ ಸೀತಾಯಾ ರಾಘವೋ ರಘುನಂದನಃ ॥೯॥

ರಾಮನ ಮಾತನ್ನು ಕೇಳಿ ಲಕ್ಷ್ಮಣನು ಮುಂಭಾಗದಲ್ಲಿ ನಡೆದ. ಸೀತೆಯ ಹಿಂಭಾಗದಲ್ಲಿ ರಘುನಂದನ ರಾಮ ನಡೆದ.

ಗತಂ ತು ಗಂಗಾಪರಪಾರಮಾಶು
ರಾಮಂ ಸುಮಂತ್ರಃ ಪ್ರತತಂ ನಿರೀಕ್ಷ್ಯ ।
ಅಧ್ವಪ್ರಕರ್ಷಾದ್ವಿನಿವೃತ್ತದೃಷ್ಟಿ-
ರ್ಮುಮೋಚ ಬಾಷ್ಪಂ ವ್ಯಥಿತಸ್ತಪಸ್ವೀ ॥೧೦೦॥

ಗಂಗೆಯ ಆಚೆ ತೀರಕ್ಕೆ ಶ್ರೀರಾಮ ಹೋಗುವಾಗ ಸುಮಂತ್ರನು ಒಂದೇ ಸಮನೆ ಅವನನ್ನು ನೋಡಿ, ಅವನು ಅತಿದೂರಕ್ಕೆ ಹೋದಾಗ ನೋಡಲಾಗದಿದ್ದರಿಂದ ವ್ಯಥೆಯಿಂದ ಸಂತಾಪದಿಂದ ಕಣ್ಣೀರು ಸುರಿಸಿದ.

ಸ ಲೋಕಪಾಲಪ್ರತಿಮಪ್ರಭಾವ-
ಸ್ತೀರ್ತ್ವಾ ಮಹಾತ್ಮಾ ವರದೋ ಮಹಾನದೀಮ್ ।
ತತಃ ಸಮೃದ್ಧಾನ್ ಶುಭಸಸ್ಯಮಾಲಿನಃ
ಕ್ರಮೇಣ ವತ್ಸಾನ್ ಮುದಿತಾನುಪಾಗಮತ್ ॥೧೦೧॥

ಲೋಕಪಾಲಕರಂಥ ಪ್ರಭಾವವುಳ್ಳ ಮಹಾತ್ಮನಾದ ವರದಾಯಕನಾದ ಶ್ರೀರಾಮನು ಮಹಾನದಿಯನ್ನು ದಾಟಿ ಕ್ರಮೇಣ ಒಳ್ಳೆಯ ಸಸ್ಯ ಸಮೂಹಉಳ್ಳ ಸಮೃದ್ಧವಾದ ಆನಂದಭರಿತವಾದ ಗಂಗಾಯಮುನೆಯರ ಮಧ್ಯದ ಪ್ರಯಾಗದ ಪ್ರದೇಶವನ್ನು ತಲುಪಿದ.

ತೌ ತತ್ರ ಹತ್ವಾ ಚತುರೋ ಮಹಾಮೃಗಾನ್
ವರಾಹಮೃಶ್ಯಂ ಪೃಷತಂ ಮಹಾರುರುಮ್ ।
ಆದಾಯ ಮೇಧ್ಯಂ ತ್ವರಿತಂ ಬುಭುಕ್ಷಿತೌ
ವಾಸಾಯ ಕಾಲೇ ಯಯತುರ್ವನಸ್ಪತಿಮ್ ॥೧೦೨॥

ಹಸಿದ ರಾಮಲಕ್ಷ್ಮಣರು ಅಲ್ಲಿ ಪವಿತ್ರವಾದ ಕಾಡುಹಂದಿ ಕೃಷ್ಣಮೃಗ ಚುಕ್ಕೆಗಳುಳ್ಳ ಚಿಗರೆ ಮತ್ತು ದೊಡ್ಡ ಜಾತಿಯ ಜಿಂಕೆ ಈ ನಾಲ್ಕು ಬಗೆಯ ಮೃಗ-ಗಳನ್ನು ಕೊಂದು ಅವುಗಳ ಮಾಂಸಗಳನ್ನು ಸಾಯಂಕಾಲದಲ್ಲಿ ಸ್ವೀಕರಿಸಿ ಬೇಗನೆ ರಾತ್ರಿ ವಾಸಕ್ಕಾಗಿ ಮರದ ಬುಡಕ್ಕೆ ಬಂದರು.

ಹಣ್ಣು ಗಡ್ಡೆಗಳಂತೆ ಮಾಂಸವೂ ಕೂಡ ಕ್ಷತ್ರಿಯರಿಗೆ ಅನಿಷಿದ್ಧವಾದ ಅರಣ್ಯೋತ್ಪನ್ನವಾದ ಆಹಾರವಾದ್ದರಿಂದ ಹಸಿವಾದಾಗ ದೇವಪೂಜೆಯಲ್ಲಿ ಅರ್ಪಿಸಿ ಸ್ವೀಕರಿಸಿದರೆ ದೋಷವಿಲ್ಲ.

ಅಥವಾ ಸೀತೆಗೆ ಕಣ್ಮನ ಸೆಳೆವಂಥ ಸುಂದರವಾದ ಮೃಗಗಳನ್ನು ಅಲ್ಲಿ ರಾಮಲಕ್ಷ್ಮಣರು 'ಹತ್ವಾ' ಅಂದರೆ, ನೋಡಿ ಹನಧಾತು ಜ್ಞಾನಾರ್ಥದಲ್ಲಿಯೂ ಇರುವುದರಿಂದ, 'ವಾಸಾಯ ವನಸ್ಪತಿಂ ಯಯತುಃ' ವಾಸಕ್ಕೆ ಈ ಮರದ ಬುಡವನ್ನೇ ಪ್ರಶಸ್ತವೆಂದು ತಿಳಿದರು. ಅಲ್ಲಿಗೇ ಬಂದರು. ಇಲ್ಲಿ ಯಾಧಾತುವಿಗೆ 'ಗತಿ', 'ಜ್ಞಾನ' ಎರಡೂ ಅರ್ಥಗಳು. ಈ ಅಭಿಪ್ರಾಯದಿಂದ ಪ್ರಾಯಃ ಸಂ.ರಾಮಾಯಣದಲ್ಲಿ 'ಮೂವರೂ 'ಮೃಣಾಲ'ಗಳನ್ನು ತಾವರೆಯ ದೇಟು-ಗಳನ್ನು ಭಕ್ಷಿಸಿ ತೃಪ್ತರಾದರು' ಎಂದಿದೆ. (ಅಯೋ.9.23)

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಐವತ್ತೆರಡನೇ ಸರ್ಗ ಮುಗಿಯಿತು.

❖

ತ್ರಿಪಂಚಾಶಃ ಸರ್ಗಃ

ಸರ್ಗ – 53

ಶ್ರೀರಾಮನ ಮನೋವ್ಯಥೆ, ಲಕ್ಷ್ಮಣನ ಸಮಾಧಾನ.

ಸ ತಂ ವೃಕ್ಷಂ ಸಮಾಸಾದ್ಯ ಸಂಧ್ಯಾಮನ್ವಾಸ್ಯ ಪಶ್ಚಿಮಾಮ್ ।
ರಾಮೋ ರಮಯತಾಂ ಶ್ರೇಷ್ಠ ಇತಿ ಹೋವಾಚ ಲಕ್ಷ್ಮಣಮ್ ॥೧॥

ರಮಿಸುವವರಲ್ಲಿ ಶ್ರೇಷ್ಠನಾದ ಶ್ರೀರಾಮನು ವಾಸವೃಕ್ಷಕ್ಕೆ ಬಂದು ಸಾಯಂ-ಸಂಧ್ಯೆಯ ಉಪಾಸನೆ ಮಾಡಿ ಲಕ್ಷ್ಮಣನಿಗೆ ಹೀಗೆ ಹೇಳಿದ—

ಅದ್ಯೇಯಂ ಪ್ರಥಮಾ ರಾತ್ರಿರ್ಜಾತಾ ಜನಪದಾದ್ಬಹಿಃ ।
ಯಾ ಸುಮಂತ್ರೇಣ ರಹಿತಾ ತಾಂ ನೋತ್ಕಂಠಿತುಮರ್ಹಸಿ ॥೨॥

ನಮಗೆ ಇದು ರಾಜ್ಯದಿಂದ ಹೊರಗೆ ಉಂಟಾದ ಮೊದಲ ರಾತ್ರಿ. ಸುಮಂತ್ರನೂ ಜೊತೆಗಿಲ್ಲದ ರಾತ್ರಿ ಎಂದು ಅದಕ್ಕೆ ನೀನು ಉದ್ವಿಗ್ನನಾಗಬೇಡ.

ಜಾಗರ್ತವ್ಯಮತಂದ್ರಿಭ್ಯಾಮದ್ಯಪ್ರಭೃತಿ ರಾತ್ರಿಷು ।
ಯೋಗಕ್ಷೇಮೌ ಹಿ ಸೀತಾಯಾ ವರ್ತತೇ ಲಕ್ಷ್ಮಣಾವಯೋಃ ॥೩॥

ಇಂದಿನಿಂದ ರಾತ್ರಿಕಾಲಗಳಲ್ಲಿ ನಾವು ಎಚ್ಚರದಿಂದಿರಬೇಕಾಗುತ್ತದೆ. ಲಕ್ಷ್ಮಣ, ಸೀತೆಯ ಯೋಗಕ್ಷೇಮಗಳನ್ನು ನಾವು ನೋಡಿಕೊಳ್ಳಬೇಕಾಗುತ್ತದೆ.

ರಾತ್ರಿಂ ಕಥಂಚಿದೇವೇಮಾಂ ಸೌಮಿತ್ರೇ ವರ್ತಯಾಮಹೇ ।
ಉಪಾವರ್ತಾಮಹೇ ಭೂಮಾವಾಸ್ತೀರ್ಯ ಸ್ವಯಮರ್ಜಿತೈಃ ॥೪॥

ಈ ರಾತ್ರಿಯನ್ನು ಲಕ್ಷ್ಮಣ, ನಾವು ಸ್ವತಃ ಎಲೆಹುಲ್ಲುಗಳನ್ನು ತಂದು ನೆಲದಲ್ಲಿ ಹಾಸಿಕೊಂಡು ಹೇಗಾದರೂ ಕಳೆಯಬೇಕಿದೆ.

ಸ ತು ಸಂವಿಶ್ಯ ಮೇದಿನ್ಯಾಂ ಮಹಾರ್ಹಶಯನೋಚಿತಃ ।
ಇಮಾಃ ಸೌಮಿತ್ರಯೇ ರಾಮೋ ವ್ಯಾಜಹಾರ ಕಥಾಃ ಶುಭಾಃ ॥೫॥

ಬಹು ಬೆಲೆಬಾಳುವ ಮಂಚದಲ್ಲಿ ಮಲಗಲು ಅರ್ಹನಾದ ಶ್ರೀರಾಮನು ನೆಲದಲ್ಲಿ ಮಲಗಿ ಲಕ್ಷ್ಮಣನಿಗೆ ಮಂಗಳಕರವಾದ ಈ ಮಾತುಗಳನ್ನು ನುಡಿದ.

ಧ್ರುವಮದ್ಯ ಮಹಾರಾಜೋ ದುಃಖಿಂ ಸ್ವಪಿತಿ ಲಕ್ಷ್ಮಣ ।
ಕೃತಕಾಮಾ ತು ಕೈಕೇಯೀ ತುಷ್ಟಾ ಭವಿತುಮರ್ಹತಿ ॥೬॥

ಲಕ್ಷ್ಮಣ, ಈಗ ಮಹಾರಾಜನು ದುಃಖದಿಂದ ಮಲಗಿರುತ್ತಾನೆ. ಆಸೆಯನ್ನು ಈಡೇರಿಸಿಕೊಂಡ ಕೈಕೇಯಿ ಸಂತೋಷಪಡಬೇಕು.

ಸಾ ಹಿ ದೇವೀ ಮಹಾರಾಜಂ ಕೈಕೇಯೀ ರಾಜ್ಯಕಾರಣಾತ್ ।
ಅಪಿ ನ ಚ್ಯಾವಯೇತ್ ಪ್ರಾಣಾನ್ ದೃಷ್ಟ್ವಾ ಭರತಮಾಗತಮ್ ॥೭॥

ಆ ಕೈಕೇಯೀ ದೇವಿ ಭರತ ಬಂದಾಗ ನೋಡಿ ಯುವರಾಜ ಪದವಿ ಸಾಲದೆಂದು ಮಹಾರಾಜಪದವಿಗಾಗಿ ಮಹಾರಾಜನ ಪ್ರಾಣವನ್ನು ತೆಗೆಯಳೆ?

ಅನಾಥಶ್ಚ ಹಿ ವೃದ್ಧಶ್ಚ ಮಯಾ ಚೈವ ವಿನಾಕೃತಃ ।
ಕಿಂ ಕರಿಷ್ಯತಿ ಕಾಮಾತ್ಮಾ ಕೈಕೇಯ್ಯಾ ವಶಮಾಗತಃ ॥೮॥

ಅನಾಥ, ವೃದ್ಧ, ನಾನೂ ಅವನ ಬಳಿಯಲ್ಲಿಲ್ಲ. ಪ್ರಣಯ ಸುಖವನ್ನು ಬಯಸುವ ಸ್ವಭಾವದವನು ದಶರಥ. ಕೈಕೇಯಿಯ ವಶದಲ್ಲಿರುವುದರಿಂದ ಏನು ಮಾಡಬಲ್ಲ?

ಇದಂ ವ್ಯಸನಮಾಲೋಕ್ಯ ರಾಜ್ಞಶ್ಚ ಮತಿವಿಭ್ರಮಮ್ ।
ಕಾಮ ಏವಾರ್ಥಧರ್ಮಾಭ್ಯಾಂ ಗರೀಯಾನಿತಿ ಮೇ ಮತಿಃ ॥೯॥

ಈ ವ್ಯಸನವನ್ನು ಆಲೋಚಿಸಿದಾಗ ರಾಜನ ಬುದ್ಧಿ ಅಸ್ವಸ್ಥವಾಗಿರುವುದನ್ನು ಆಲೋಚಿಸಿದಾಗ, ಅರ್ಥ ಮತ್ತು ಧರ್ಮಗಳಿಗಿಂತ ಕಾಮಪುರುಷಾರ್ಥವೇ ಪ್ರಬಲವೆಂದು ನಾನು ಭಾವಿಸುತ್ತೇನೆ.

ಕೋ ಹ್ಯವಿದ್ವಾನಪಿ ಪುಮಾನ್ ಪ್ರಮದಾಯಾಃ ಕೃತೇ ತ್ಯಜೇತ್ ।
ಛಂದಾನುವರ್ತಿನಂ ಪುತ್ರಂ ತಾತೋ ಮಾಮಿವ ಲಕ್ಷ್ಮಣ ॥೧೦॥

ಒಬ್ಬನು ಎಷ್ಟೇ ಅಜ್ಞಾನಿಯಾದರೂ ಯಾರು ಹೆಂಡತಿಯ ಮೇಲಿನ ಪ್ರೀತಿ-ಯಿಂದ, ದಶರಥ ನನ್ನನ್ನು ತ್ಯಜಿಸಿದಂತೆ, ತನಗೆ ಅತ್ಯಂತ ವಿಧೇಯನಾದ ಪುತ್ರನನ್ನು ತ್ಯಜಿಸುವನು?

ಸುಖೀ ಬತ ಸಭಾರ್ಯಶ್ಚ ಭರತಃ ಕೈಕಯೀಸುತಃ ।
ಮುದಿತಾನ್ ಕೋಸಲಾನೇಕೋ ಯೋ ಭೋಕ್ಷ್ಯತ್ಯಧಿರಾಜವತ್ ॥೧೧॥

ಕೈಕೇಯಿಯ ಮಗ ಭರತನೇ ನಿಜವಾಗಿ ಸುಖಿ. ಆನಂದ ತುಂಬಿದ ಕೋಸಲ ದೇಶವನ್ನು ಮಹಾರಾಜನಂತೆ ಒಬ್ಬನೇ ಭೋಗಿಸುತ್ತಾನೆ.

ಸ ಹಿ ಸರ್ವಸ್ಯ ರಾಜ್ಯಸ್ಯ ಸುಖಮೇಕಂ ಭವಿಷ್ಯತಿ ।
ತಾತೇ ಚ ವಯಸಾತೀತೇ ಮಯಿ ಚಾರಣ್ಯಮಾಸ್ಥಿತೇ ॥೧೨॥

ಅವನೆ ಇಡೀ ರಾಜ್ಯದ ಶ್ರೇಷ್ಠ ಸುಖಕ್ಕೆ ಭಾಗಿಯಾಗುತ್ತಾನೆ, ಏಕೆಂದರೆ ತಂದೆ ವಯಸಿನಿಂದ ವೃದ್ಧನಾಗಿದ್ದಾನೆ. ನಾನೂ ಅರಣ್ಯದಲ್ಲಿ ವಾಸವಾಗಿದ್ದೇನೆ.

ಅರ್ಥಧರ್ಮೌ ಪರಿತ್ಯಜ್ಯ ಯಃ ಕಾಮಮನುವರ್ತತೇ ।
ಏವಮಾಪದ್ಯತೇ ಕ್ಷಿಪ್ರಂ ರಾಜಾ ದಶರಥೋ ಯಥಾ ॥೧೩॥

ಅರ್ಥವನ್ನೂ ಧರ್ಮವನ್ನೂ ಬದಿಗಿಟ್ಟು ಕಾಮವನ್ನು ಅರಸುವವನು ಬೇಗನೆ ಹೀಗೆ ಆಪತ್ತಿಗೊಳಗಾಗುತ್ತಾನೆ. ರಾಜಾ ದಶರಥನು ಹೇಗೋ ಹಾಗೆ.

ಮನ್ಯೇ ದಶರಥಾಂತಾಯ ಮಮ ಪ್ರವ್ರಾಜನಾಯ ಚ ।
ಕೈಕೇಯೀ ಸೌಮ್ಯ ಸಂಪ್ರಾಪ್ತಾ ರಾಜ್ಯಾಯ ಭರತಸ್ಯ ಚ ॥೧೪॥

ದಶರಥನ ನಾಶಕ್ಕೆ ನನ್ನ ವನವಾಸಕ್ಕೆ ಮತ್ತು ಭರತನ ರಾಜ್ಯಪ್ರಾಪ್ತಿಗೇ ಕೈಕೇಯಿ ಹುಟ್ಟಿ ಬಂದಿದ್ದಾಳೆ ಎಂದು ನಾನು ಭಾವಿಸುತ್ತೇನೆ, ಲಕ್ಷ್ಮಣ.

ಅಪೀದಾನೀಂ ನ ಕೈಕೇಯೀ ಸೌಭಾಗ್ಯಮದಮೋಹಿತಾ ।
ಕೌಸಲ್ಯಾಂ ಚ ಸುಮಿತ್ರಾಂ ಚ ಸಂಪ್ರಬಾಧೇತ ಮತ್ಕೃತೇ ॥೧೫॥

ಈಗ ಸೌಭಾಗ್ಯ ಮದದಿಂದ ಬುದ್ಧಿಶೂನ್ಯಳಾಗಿರುವ ಕೈಕೇಯಿ ನನಗೆ ಶೋಕ ಉಂಟುಮಾಡಲೆಂದೇ ಕೌಸಲ್ಯೆಯನ್ನೂ ಸುಮಿತ್ರೆಯನ್ನೂ ಚೆನ್ನಾಗಿ ಪೀಡಿಸಲಾರಳೆ? ಪೀಡಿಸಬಹುದು.

ಮಾ ಸ್ಮ ಮತ್ಕಾರಣಾದ್ದೇವೀ ಸುಮಿತ್ರಾ ದುಃಖಮಾವಸೇತ್ ।
ಅಯೋಧ್ಯಾಮಿತ ಏವ ತ್ವಂ ಕಲ್ಯೇ ಪ್ರವಿಶ ಲಕ್ಷ್ಮಣ ॥೧೬॥

ನನ್ನ ನಿಮಿತ್ತವಾಗಿ ದೇವಿ ಸುಮಿತ್ರೆ ಒಬ್ಬಳೇ ಅಯೋಧ್ಯೆಯಲ್ಲಿ ದುಃಖದಿಂದ ವಾಸಮಾಡುವಂತಾಗಬಾರದು. ಲಕ್ಷ್ಮಣ, ನೀನು ಇಲ್ಲಿಂದಲೇ ನಾಳೆ ಬೆಳಿಗ್ಗೆ ಅಯೋಧ್ಯೆಯನ್ನು ಪ್ರವೇಶಿಸು.

ಅಹಮೇಕೋ ಗಮಿಷ್ಯಾಮಿ ಸೀತಯಾ ಸಹ ದಂಡಕಾನ್ ।
ಅನಾಥಾಯಾ ಹಿ ನಾಥಸ್ತ್ವಂ ಕೌಸಲ್ಯಾಯಾ ಭವಿಷ್ಯಸಿ ॥೧೭॥

ಸೀತೆಯೊಂದಿಗೆ ನಾನೊಬ್ಬನೇ ದಂಡಕಾರಣ್ಯಕ್ಕೆ ಹೋಗುವೆನು. ಅನಾಥೆಯಾಗಿ-ರುವ ಕೌಸಲ್ಯೆಗೆ ನೀನು ರಕ್ಷಕನಾಗು.

ಕ್ಷುದ್ರಕರ್ಮಾ ಹಿ ಕೈಕೇಯೀ ದ್ವೇಷಾದನ್ಯಾಯ್ಯಮಾಚರೇತ್ ।
ಪರಿದದ್ಯಾದ್ಧಿ ಧರ್ಮಜ್ಞ! ಗರಂ ತೇ ಮಮ ಮಾತರಮ್ ॥೧೮॥

ಕ್ಷುದ್ರ ಕರ್ಮಮಾಡುವ ಕೈಕೇಯಿ ದ್ವೇಷದಿಂದ ಅನ್ಯಾಯ ಮಾಡಬಹುದು. ಧರ್ಮಜ್ಞನೆ, ನಿನ್ನ ಮತ್ತು ನನ್ನ ತಾಯಿಯರಿಗೆ ಅವಳು ವಿಷವನ್ನು ಕೊಟ್ಟಾಳು.

ನೂನಂ ಜಾತ್ಯಂತರೇ ಕಸ್ಮಿಂಸ್ತ್ರಿಯಃ ಪುತ್ರೈರ್ವಿಯೋಜಿತಾಃ ।
ಜನನ್ಯಾ ಮಮ ಸೌಮಿತ್ರೇ ತಸ್ಮಾದೇತದುಪಸ್ಥಿತಮ್ ॥೧೯॥

ನಾನು ಯಾವುದೋ ಜನ್ಮಾಂತರದಲ್ಲಿ ಸ್ತ್ರೀಯರಿಗೆ ಪುತ್ರವಿಯೋಗ ಉಂಟು ಮಾಡಿದ್ದೇನೆ. ಅದರಿಂದ, ಲಕ್ಷ್ಮಣ, ನನ್ನ ಮಾತೆಗೆ ಈ ಸಂಕಟ ಬಂದೊದಗಿತು.

ಮಯಾ ಹಿ ಚಿರಪುಷ್ಟೇನ ದುಃಖಸಂವರ್ಧಿತೇನ ಚ ।
ವಿಪ್ರಯುಜ್ಯೇತ ಕೌಸಲ್ಯಾ ಫಲಕಾಲೇ ಧಿಗಸ್ತು ಮಾಮ್ ॥೨೦॥

ನನ್ನನ್ನು ತಾಯಿ ದುಃಖದಿಂದ ಬೆಳೆಸಿದ್ದಾಳೆ. ಬಹುಕಾಲ ಪೋಷಿಸಿದ್ದಾಳೆ. ಅದರ ಫಲವಾಗಿ ನನ್ನಿಂದ ಸುಖಪಡಬೇಕಾಗಿರುವ ಈ ಕಾಲದಲ್ಲಿ ಅವಳು ನನ್ನಿಂದ ವಿಯೋಗ ಹೊಂದುತ್ತಾಳೆ! ನನಗೆ ಧಿಕ್ಕಾರವಿರಲಿ.

ಮಾ ಸ್ಮ ಸೀಮಂತಿನೀ ಕಾಚಿಜ್ಜನಯೇತ್ ಪುತ್ರಮೀದೃಶಮ್ ।
ಸೌಮಿತ್ರೇ ಯೋಽಹಮಂಬಾಯಾ ದದ್ಮಿ ಶೋಕಮನಂತಕಮ್ ॥೨೧॥

ನನ್ನಂಥ ಪುತ್ರನನ್ನು ಯಾವ ಸ್ತ್ರೀಯೂ ಹಡೆಯಬಾರದು ಲಕ್ಷ್ಮಣ, ಏಕೆಂದರೆ ನಾನು ಮಾತೆಗೆ ಅನಂತ ದುಃಖವನ್ನು ಕೊಡುತ್ತಿದ್ದೇನೆ.

ಮನ್ಯೇ ಪ್ರೀತಿವಿಶಿಷ್ಟಾ ಸಾ ಮತ್ತೋ ಲಕ್ಷ್ಮಣ ಸಾರಿಕಾ ।
ಯಸ್ಯಾಸ್ತಚ್ಛ್ರೂಯತೇ ವಾಕ್ಯಂ ಶುಕ ಪಾದಮರೇರ್ದಶ ॥೨೨॥

ಲಕ್ಷ್ಮಣ, ಪ್ರೀತಿ ಉಂಟುಮಾಡುವುದರಲ್ಲಿ ನನಗಿಂತ ಆ ಸಾರಿಕಾ ಪಕ್ಷಿ

ಮೇಲೆಂದು ಭಾವಿಸುತ್ತೇನೆ. ಏಕೆಂದರೆ ಅದು ನುಡಿಯುವ 'ಗಿಳಿಯೆ, ಶತ್ರುವಿನ ಕಾಲನ್ನು ಕುಟುಕು' ಎನ್ನುವ ಮಾತು ಕೌಸಲ್ಯೆಗೆ ಕೇಳಿಬರುತ್ತದೆ.

ತಾಯಿ ಕೌಸಲ್ಯೆಯು ಪೋಷಿಸಿದ ಸಾರಿಕಾಪಕ್ಷಿ ತಾಯಿಯ ಶತ್ರುವನ್ನು ನಿಗ್ರಹಮಾಡಲು ಅಶಕ್ತವಾದರೂ, ಗಿಳಿಯ ಮುಂದೆ, 'ತಾಯಿಯ ಶತ್ರು ನಿಗ್ರಹ ಮಾಡೆಂ'ದು ಮಾತನ್ನಾದರೂ ಆಡಿ, ತಾಯಿಗೆ ಸಮಾಧಾನ ಮಾಡಲು ಯತ್ನಿಸುತ್ತಿದೆ, ನಾನು ಶಕ್ತನಾಗಿದ್ದೂ ಶತ್ರುನಿಗ್ರಹ ಮಾಡುತ್ತಿಲ್ಲ. ಅದರಿಂದ ಪೋಷಣಮಾಡಿದ ತಾಯಿಗೆ ಸಂತೋಷ ಉಂಟುಮಾಡುವಲ್ಲಿ ನನಗಿಂತ ಆ ಸಾರಿಕಾಪಕ್ಷಿಯೆ ಎಷ್ಟೋ ಮೇಲು' ಎಂದು ರಾಮ ಲಕ್ಷ್ಮಣನಿಗೆ ಹೇಳುತ್ತಾನೆ.

ಶೋಚಂತ್ಯಾ ಅಲ್ಪಭಾಗ್ಯಾಯಾ ನ ಕಿಂಚಿದುಪಕುರ್ವತಾ ।
ಪುತ್ರೇಣ ಕಿಮಪುತ್ರ್ಯಾಯಾ ಮಯಾ ಕಾರ್ಯಮರಿಂದಮ ॥೨೩॥

ಅಲ್ಪಭಾಗ್ಯಳಾದ ತಾಯಿ ಶೋಕಿಸುತ್ತಿರುತ್ತಾಳೆ. ನಾನು ಬಳಿಯಲ್ಲಿರುವುದಿಲ್ಲ, ಅವಳಿಗೆ ಏನೂ ಸಮಾಧಾನ ಮಾಡುವುದಿಲ್ಲ, ಎಂದಮೇಲೆ ನನ್ನಂಥ ಮಗನಿಂದ ತಾಯಿಗೆ ಏನು ಪ್ರಯೋಜನ?

ಅಲ್ಪಭಾಗ್ಯಾ ಹಿ ಮೇ ಮಾತಾ ಕೌಸಲ್ಯಾ ರಹಿತಾ ಮಯಾ ।
ಶೇತೇ ಪರಮದುಃಖಾರ್ತಾ ಪತಿತಾ ಶೋಕಸಾಗರೇ ॥೨೪॥

ನನ್ನ ಮಾತೆ ಕೌಸಲ್ಯೆ ಅಲ್ಪ ಭಾಗ್ಯಉಳ್ಳವಳು ಏಕೆಂದರೆ ನನ್ನಿಂದ ವಿರಹಿತಳಾಗಿ ಪರಮದುಃಖದಿಂದ ಬೆಂದು ಶೋಕಸಾಗರದಲ್ಲಿ ಬಿದ್ದು ಮಲಗುತ್ತಾಳೆ.

ಏಕೋ ಹ್ಯಹಮಯೋಧ್ಯಾಂ ಚ ಪೃಥಿವೀಂ ಚಾಪಿ ಲಕ್ಷ್ಮಣ ।
ತರೇಯಮಿಷುಭಿಃ ಕ್ರುದ್ಧೋ ನನು ವೀರ್ಯಮಕಾರಣಮ್ ॥೨೫॥

ನಾನು ಭುಜಪರಾಕ್ರಮದಿಂದ ಮಾತೆಯನ್ನು ಕಾಪಾಡುವಂತಿದ್ದರೆ, ಲಕ್ಷ್ಮಣ, ನಾನೊಬ್ಬನೆ ಕ್ರುದ್ಧನಾಗಿ ಅಯೋಧ್ಯೆಯನ್ನೂ ಸಮಸ್ತ ಪೃಥಿವಿಯನ್ನೂ ಕೂಡ ಬಾಣಗಳಿದ ನಿಃಶತ್ರುವನ್ನಾಗಿ ಮಾಡುತ್ತಿದ್ದೆ. ಏನು ಮಾಡಲಿ. ವೀರ್ಯ ಪರಾಕ್ರಮವು ಪರಲೋಕಹಿತಸಾಧನೆಗೆ ಉಪಯೋಗಿಯಾಗುವುದಿಲ್ಲ. ಧರ್ಮವೇ ಉಪಯೋಗವಾಗುವುದು. ಅದರಿಂದ ಪಿತೃವಾಕ್ಯಪಾಲನ ರೂಪವಾದ ಧರ್ಮ-ವನ್ನೇ ನಾನು ಆಶ್ರಯಿಸಿದ್ದೇನೆ.

ಅಧರ್ಮಭಯಭೀತಶ್ಚ ಪರಲೋಕಸ್ಯ ಚಾನಘ ।
ತೇನ ಲಕ್ಷ್ಮಣ ನಾದ್ಯಾಹಮಾತ್ಮಾನಮಭಿಷೇಚಯೇ ॥೨೬॥

'ನಾನು ಅಧರ್ಮಮಾಡಿದರೆ ಲೋಕವೂ ಅಧರ್ಮಮಾಡೀತೆಂದು, ಪರಲೋಕ ನಾಶಮಾಡಿಕೊಂಡೀತೆಂದು ಅಧರ್ಮ ಭಯದಿಂದ ಭೀತನಾಗಿ ಪರಲೋಕನಾಶ ಭಯದಿಂದಲೂ ಭೀತನಾಗಿ, ನಿಷ್ಪಾಪ ಲಕ್ಷ್ಮಣನೆ, ನಾನು ಇನ್ನೂ ಕೂಡ ಅಭಿಷೇಕ ಮಾಡಿಸಿಕೊಳ್ಳುತ್ತಿಲ್ಲ.

ಏತದನ್ಯಚ್ಚ ಕರುಣಂ ವಿಲಪ್ಯ ವಿಜನೇ ವನೇ ।
ಅಶ್ರುಪೂರ್ಣಮುಖೋ ರಾಮೋ ನಿಶಿ ತೂಷ್ಣೀಮುಪಾವಿಶತ್ ॥೨೭॥

ಶ್ರೀರಾಮ ಹೀಗೆ ಮಾತ್ರವಲ್ಲದೆ ಇನ್ನೂ ಬೇರೆ ಕರುಣಾಜನಕವಾದ ವಿಲಾಪವನ್ನು ಮಾಡುತ್ತ ನಿರ್ಜನ ಅರಣ್ಯದಲ್ಲಿ ಕಂಬನಿಯಿಂದ ಮುಖ ತೋಯಿಸಿಕೊಂಡು ರಾತ್ರಿಯಲ್ಲಿ ಸುಮ್ಮನೆ ಕುಳಿತ.

ವಿಲಪ್ಯೋಪರತಂ ರಾಮಂ ಗತಾರ್ಚಿಷಮಿವಾನಲಮ್ ।
ಸಮುದ್ರಮಿವ ನಿರ್ವೇಗಮಾಶ್ವಾಸಯತ ಲಕ್ಷ್ಮಣಃ ॥೨೮॥

ವಿಲಾಪಮಾಡಿ ಸುಮ್ಮನಾದ ರಾಮ ಜ್ವಾಲೆ ಇಲ್ಲದ ಬೆಂಕಿಯಂತೆ, ವೇಗವಿಲ್ಲದ ಸಮುದ್ರದಂತೆ ಕಂಡು ಬಂದಾಗ ಲಕ್ಷ್ಮಣ ಅವನನ್ನು ಸಂತೈಸಿದ.

ಧ್ರುವಮದ್ಯ ಪುರೀ ರಾಜನ್ನಯೋಧ್ಯಾ ಯುಧಿನಾಂ ವರ ।
ನಿಷ್ಪ್ರಭಾ ತ್ವಯಿ ನಿಷ್ಕ್ರಾಂತೇ ಗತಚಂದ್ರೇವ ಶರ್ವರೀ ॥೨೯॥

ಯೋಧರಲ್ಲಿ ಶ್ರೇಷ್ಠನಾದ ರಾಜನೆ, ಅಯೋಧ್ಯಾನಗರ ಈಗ ನೀನು ಹೊರಟು-ಹೋದ ಮೇಲೆ ಕಳೆಗುಂದಿ ಚಂದ್ರನಿಲ್ಲದ ರಾತ್ರಿಯಂತೇ ಇರುತ್ತದೆ. ಇದು ನಿಶ್ಚಯ.

ನೈತದೌಪಯಿಕಂ ಹ್ಯಾರ್ಯ ಯದಿದಂ ಪರಿತಪ್ಯಸೇ ।
ವಿಷಾದಯಸಿ ಸೀತಾಂ ಚ ಮಾಂ ಚೈವ ಪುರುಷರ್ಷಭ ॥೩೦॥

ಆರ್ಯ, ನೀನು ಪರಿತಪಿಸುವುದರಿಂದ ಏನೂ ಪ್ರಯೋಜನವಿಲ್ಲ. ಪುರುಷೋತ್ತಮ, ನೀನು ಕೇವಲ ಸೀತೆಯನ್ನೂ ನನ್ನನ್ನೂ ವಿಷಾದಗೊಳಿಸುವೆಯಷ್ಟೆ.

ಹೇಗಾದರೂ ಲಕ್ಷ್ಮಣನನ್ನು ಹಿಂದಕ್ಕೆ ಕಳಿಸಬೇಕೆಂದು ರಾಮ ಈ ಎಲ್ಲ ಮಾತುಗಳನ್ನು ಆಡುತ್ತಿದ್ದಾನೆ, ಅವನನ್ನು ಪರೀಕ್ಷಿಸುತ್ತಿದ್ದಾನೆ. ಇದು ಲಕ್ಷ್ಮಣನಿಗೆ ತಿಳಿಯದಿರುವುದಿಲ್ಲ.

ನ ಚ ಸೀತಾ ತ್ವಯಾ ಹೀನಾ ನ ಚಾಹಮಪಿ ರಾಘವ ।
ಮುಹೂರ್ತಮಪಿ ಜೀವಾವೋ ಜಲಾನ್ಮತ್ಸ್ಯಾವಿವೋದ್ಧೃತೌ ॥೩೧॥

ರಾಮ, ನೀನಿಲ್ಲದೆ ಸೀತೆಯಾಗಲಿ ನಾನಾಗಲಿ, ನೀರಿನಿಂದ ಎತ್ತಿದ ಮೀನು-ಗಳಂತೆ, ಮುಹೂರ್ತಕಾಲವೂ ಜೀವಿಸುವುದಿಲ್ಲ, ಜೀವಿಸುವುದಿಲ್ಲ.

ನ ಹಿ ತಾತಂ ನ ಶತ್ರುಘ್ನಂ ನ ಸುಮಿತ್ರಾಂ ಪರಂತಪ ।
ದ್ರಷ್ಟುಮಿಚ್ಛೇಯಮದ್ಯಾಹಂ ಸ್ವರ್ಗಂ ಚಾಪಿ ತ್ವಯಾ ವಿನಾ ॥೩೩॥

ಶತ್ರುನಾಶಕನೆ, ನೀನಿಲ್ಲದಿದ್ದರೆ ಈಗ ನಾನು ತಂದೆಯನ್ನು ನೋಡಲು ಬಯಸ-ಲಾರೆ, ಶತ್ರುಘ್ನನನ್ನೂ ನೋಡಬಯಸಲಾರೆ, ಸುಮಿತ್ರೆಯನ್ನೂ ನೋಡಬಯಸ-ಲಾರೆ. ನೀನಿಲ್ಲದ ಸ್ವರ್ಗವನ್ನು ನಾ ಬಯಸಲಾರೆ.

ತತಸ್ತತ್ರ ಸುಖಾಸೀನೌ ನಾತಿದೂರೇ ನಿರೀಕ್ಷ್ಯ ತಾಮ್ ।
ನ್ಯಗ್ರೋಧೇ ಸುಕೃತಾಂ ಶಯ್ಯಾಂ ಭೇಜಾತೇ ಧರ್ಮವತ್ಸಲೌ ॥೩೩॥

ಸೀತಾರಾಮರು ಹತ್ತಿರದಲ್ಲಿಯೇ ತಾವು ಹಿಂದೆ ಕುಳಿತಿದ್ದ ಮರದ ಬುಡದಲ್ಲಿ ಸುಖಾಸೀನರಾದರು. ಬಳಿಕ ಆಲದಮರದ ಬುಡದಲ್ಲಿ ಲಕ್ಷ್ಮಣನು ಹಾಸಿಗೆಯನ್ನು ಚೆನ್ನಾಗಿ ಸಿದ್ಧಪಡಿಸಿದ್ದನ್ನು ಕಂಡು ಧರ್ಮವತ್ಸಲರಾದ ಅವರು ಆ ಹಾಸಿಗೆಯಲ್ಲಿ ಒರಗಿದರು.

ಸ ಲಕ್ಷ್ಮಣಸ್ಯೋತ್ತಮಪುಷ್ಕಲಂ ವಚೋ
ನಿಶಮ್ಯ ಚೈವಂ ವನವಾಸಮಾದರಾತ್।
ಸಮಾಃ ಸಮಸ್ತಾ ವಿದಧೇ ಪರಂತಪಃ
ಪ್ರಪದ್ಯ ಧರ್ಮಂ ಸುಚಿರಾಯ ರಾಘವಃ ॥೩೪॥

ಲಕ್ಷ್ಮಣನು 'ನನಗೆ ಅಯೋಧ್ಯೆಬೇಡ, ನೀನಿಲ್ಲದೆ ನಾನು ಬದುಕಿರಲಾರೆ' ಎಂದು ವನವಾಸದ ವಿಷಯದಲ್ಲಿ ಆದರದಿಂದ ಉತ್ತಮವಾದ ಮಾತನ್ನಾಡಿದಾಗ, ಶತ್ರುನಾಶಕನಾದ ರಾಮ ಪೂರ್ತಿ ಹದಿನಾಲ್ಕು ವರ್ಷಗಳ ವನವಾಸಕ್ಕೂ ಲಕ್ಷ್ಮಣನಿಗೆ

ಅನುಮತಿ ನೀಡಿದ. ತಾನೂ ಬಲು ದೀರ್ಘಕಾಲ ಹದಿನಾಲ್ಕು ವರ್ಷಕಾಲದ ವನವಾಸ ಧರ್ಮಾಚರಣವನ್ನು ಸ್ವೀಕರಿಸಿದ.

ತತಸ್ತು ತಸ್ಮಿನ್ ವಿಜನೇ ವನೇ ತದಾ
ಮಹಾಬಲೌ ರಾಘವವಂಶವರ್ಧನೌ ।
ನ ತೌ ಭಯಂ ಸಂಭ್ರಮಮಭ್ಯುಪೇಯತುಃ
ಯಥೈವ ಸಿಂಹೌ ಗಿರಿಸಾನುಗೋಚರೌ ॥೩೫॥

ನಿರ್ಜನವಾದ ಅರಣ್ಯದಲ್ಲಿ ಮಹಾಬಲರಾದ ರಘುಕುಲವರ್ಧನರಾದ ರಾಮಲಕ್ಷ್ಮಣರು ಯಾವುದೇ ಭಯವನ್ನಾಗಲಿ ಉದ್ವೇಗವನ್ನಾಗಲಿ ಹೊಂದಲಿಲ್ಲ. ಪರ್ವತದ ತಪ್ಪಲಿನಲ್ಲಿ ವಾಸಮಾಡುವ ಎರಡು ಸಿಂಹಗಳಂತಿದ್ದರು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಐವತ್ತಮೂರನೇ ಸರ್ಗ ಮುಗಿಯಿತು.

❖

ಚತುಃಪಂಚಾಶಃ ಸರ್ಗಃ

ಸರ್ಗ – 54

ಭರದ್ವಾಜ ಮುನಿಗಳ ಸಂದರ್ಶನ

ತೇ ತು ತಸ್ಮಿನ್ ಮಹಾವೃಕ್ಷ ಉಷಿತ್ವಾ ರಜನೀಂ ಶಿವಾಮ್ ।
ವಿಮಲೇऽಭ್ಯುದಿತೇ ಸೂರ್ಯೇ ತಸ್ಮಾದ್ದೇಶಾತ್ ಪ್ರತಸ್ಥಿರೇ ॥೧॥

ಶ್ರೀರಾಮ ಸೀತಾ ಲಕ್ಷ್ಮಣರು ದೊಡ್ಡ ಆಲದಮರದ ಬುಡದಲ್ಲಿ ಶುಭಕರವಾದ ರಾತ್ರಿ ತಂಗಿದ್ದು ನಿರ್ಮಲನಾದ ಸೂರ್ಯ ಉದಿಸಿದಾಗ ಅಲ್ಲಿಂದ ಮುಂದೆ ಹೊರಟರು.

ಯತ್ರ ಭಾಗೀರಥೀಂ ಗಂಗಾಂ ಯಮುನಾಭಿಪ್ರವರ್ತತೇ ।
ಜಗ್ಮುಸ್ತಂ ದೇಶಮುದ್ದಿಶ್ಯ ವಿಗಾಹ್ಯ ಸುಮಹದ್ವನಮ್ ॥೨॥

ಗಂಗಾಭಾಗೀರಥಿಯ ಕಡೆಗೆ ಯಮುನೆ ಹರಿಯುವ ಪ್ರದೇಶವನ್ನು ಸೇರುವ ಉದ್ದೇಶದಿಂದ ದೊಡ್ಡ ಅರಣ್ಯವನ್ನು ಪ್ರವೇಶಿಸಿ ನಡೆದರು.

ತೇ ಭೂಮಿಭಾಗಾನ್ ವಿವಿಧಾನ್ ದೇಶಾಂಶ್ಚಾಪಿ ಮನೋರಮಾನ್।
ಅದೃಷ್ಟಪೂರ್ವಾನ್ ಪಶ್ಯಂತಸ್ತತ್ರ ತತ್ರ ಯಶಸ್ವಿನಃ ॥೩॥

ನಾನಾ ಬಗೆಯ ಭೂಮಿ ಭಾಗಗಳನ್ನೂ ಮನೋಹರವಾದ ದೇಶಗಳನ್ನೂ ಎಂದೂ ಹಿಂದೆ ಕಾಣದಿದ್ದವುಗಳನ್ನು ಅಲ್ಲಲ್ಲಿ ನೋಡುತ್ತ ಯಶಸ್ವಿಗಳಾದ ಅವರು ಮುಂದೆ ಮುಂದೆ ನಡೆದರು.

ಯಥಾ ಕ್ಷೇಮೇಣ ಗಚ್ಛಂತಃ ಸಂಪಶ್ಯನ್ ವಿವಿಧಾನ್ ದ್ರುಮಾನ್ ।
ನಿವೃತ್ತಮಾತ್ರೇ ದಿವಸೇ ರಾಮಃ ಸೌಮಿತ್ರಿಮಬ್ರವೀತ್ ॥೪॥

ಸುಖವಾಗುವಂತೆ ಏನೂ ಆಯಾಸವಾಗದಂತೆ ನಡೆಯುತ್ತ ನಾನಾ ವೃಕ್ಷಗಳನ್ನು ಕಂಡರು. ಸೂರ್ಯಮಂಡಲ ಅರ್ಧಮಾತ್ರ ಅಸ್ತವಾಗುತ್ತಿರುವಾಗ ಶ್ರೀರಾಮ ಲಕ್ಷ್ಮಣನಿಗೆ ನುಡಿದ.

ಪ್ರಯಾಗಮಭಿತಃ ಪಶ್ಯ ಸೌಮಿತ್ರೇ ಧೂಮಮುತ್ತಮಮ್ ।
ಅಗ್ನೇರ್ಭಗವತಃ ಕೇತುಂ ಮನ್ಯೇ ಸಂನಿಹಿತೋ ಮುನಿಃ ॥೫॥

ಲಕ್ಷ್ಮಣ, ಪ್ರಯಾಗದ ಸಮೀಪದಲ್ಲಿ ನೋಡು. ಭಗವಾನ್ ಅಗ್ನಿಯ ಚಿಹ್ನೆ-ಯಾದ ಧೂಮ ಎತ್ತರಕ್ಕೆ ಏಳುತ್ತಿರುವುದನ್ನು ನೋಡು. ಪ್ರಾಯಃ ಇಲ್ಲಿ ಮುನಿ ಇದ್ದಾನೆ.

ನೂನಂ ಪ್ರಾಪ್ತಾಃ ಸ್ಮ ಸಂಭೇದಂ ಗಂಗಾಯಮುನಯೋರ್ವಯಮ್ ।
ಯಥಾ ಹಿ ಶ್ರೂಯತೇ ಶಬ್ದೋ ವಾರಿಣೋ ವಾರಿಘರ್ಷಜಃ ॥೬॥

ನಾವು ನಿಶ್ಚಯವಾಗಿ ಗಂಗಾಯಮುನೆಯರ ಸಂಗಮಕ್ಕೆ ಬಂದಿದ್ದೇವೆ. ಏಕೆಂದರೆ ನೀರಿಗೆ ನೀರು ಘರ್ಷಣ ಮಾಡುವ ಶಬ್ದ ಕೇಳಿಬರುತ್ತಿದೆ.

ದಾರೂಣಿ ಪರಿಭಿನ್ನಾನಿ ವನಜೈರುಪಜೀವಿಭಿಃ ।
ಭರದ್ವಾಜಾಶ್ರಮೇ ಚೈತೇ ದೃಶ್ಯಂತೇ ವಿವಿಧಾ ದ್ರುಮಾಃ ॥೭॥

ಕಾಡಿನ ಉತ್ಪನ್ನಗಳನ್ನು ಉಪಜೀವಿಸುವವರು ಇಲ್ಲಿ ಸೌದೆಗಳನ್ನು ಕಡಿದಿದ್ದಾರೆ. ಅಂಥ ನಾನಾ ಬಗೆಯ ಮರಗಳು ಈ ಭರದ್ವಾಜಾಶ್ರಮದಲ್ಲಿ ಕಂಡುಬರುತ್ತಿವೆ.

ಧನ್ವಿನೌ ತೌ ಸುಖಂ ಗತ್ವಾ ಲಂಬಮಾನೇ ದಿವಾಕರೇ ।
ಗಂಗಾಯಮುನಯೋಃ ಸಂಧೌ ಪ್ರಾಪತುರ್ನಿಲಯಂ ಮುನೇಃ ॥೮॥

ಧನುರ್ಧಾರಿಗಳಾದ ರಾಮಲಕ್ಷ್ಮಣರು ಸೂರ್ಯನು ಅರ್ಧಾಸ್ತನಾಗಿರುವಾಗ ಗಂಗಾಯಮುನೆಯರ ಸಂಗಮದಲ್ಲಿ ಮುನಿಯ ಆಶ್ರಮ ಸಮೀಪವನ್ನು ಸೇರಿದರು.

ರಾಮಸ್ತ್ವಾಶ್ರಮಮಾಸಾದ್ಯ ತ್ರಾಸಯನ್ ಮೃಗಪಕ್ಷಿಣಃ ।
ಗತ್ವಾ ಮುಹೂರ್ತಮಧ್ವಾನಂ ಭರದ್ವಾಜಮುಪಾಗಮತ್ ॥೯॥

ಧನುರ್ಬಾಣಗಳ ದರ್ಶನ ಮಾತ್ರದಿಂದಲೇ ಮೃಗಪಕ್ಷಿಗಳನ್ನು ಹೆದರಿಸುತ್ತ ರಾಮನು ಆಶ್ರಮ ಸಮೀಪವನ್ನು ಸೇರಿ ಒಂದು ಮುಹೂರ್ತ ಕಾಲದ ದಾರಿಯನ್ನು ತುಳಿದು ಭರದ್ವಾಜನ ಆಶ್ರಮಕ್ಕೆ ತೆರಳಿದ.

ತತಸ್ತ್ವಾಶ್ರಮಮಾಸಾದ್ಯ ಮುನೇರ್ದರ್ಶನಕಾಂಕ್ಷಿಣೌ ।
ಸೀತಯಾನುಗತೌ ವೀರೌ ದೂರಾದೇವಾವತಸ್ಥತುಃ ॥೧೦॥

ಮುನಿಯ ಆಶ್ರಮವನ್ನು ಪ್ರವೇಶಿಸಿ ಮುನಿಯ ದರ್ಶನವನ್ನು ಬಯಸಿ, ಸೀತೆ ಹಿಂಬಾಲಿಸಿ ಬರುತ್ತಿದ್ದಂತೆ ವೀರರಾದ ರಾಮಲಕ್ಷ್ಮಣರು ಮುನಿಗೆ ದೂರದಲ್ಲಿಯೇ ನಿಂತರು.

ಸ ಪ್ರವಿಶ್ಯ ಮಹಾತ್ಮಾನಮೃಷಿಂ ಶಿಷ್ಯಗಣೈರ್ವೃತಮ್ ।
ಸಂಶಿತವ್ರತಮೇಕಾಗ್ರಂ ತಪಸಾ ಲಬ್ಧಚಕ್ಷುಷಮ್ ॥೧೧॥

ಹುತಾಗ್ನಿಹೋತ್ರಂ ದೃಷ್ಟ್ವೈವ ಮಹಾಭಾಗಂ ಕೃತಾಂಜಲಿಃ ।
ರಾಮಃ ಸೌಮಿತ್ರಿಣಾ ಸಾರ್ಧಂ ಸೀತಯಾ ಚಾಭ್ಯವಾದಯತ್ ॥೧೨॥

ಶಿಷ್ಯರ ಮೂಲಕ ತಮ್ಮಾಗಮನವನ್ನು ನಿವೇದಿಸಿ ಅನುಜ್ಞೆ ಪಡೆದು ಮುನಿಯ ಪರ್ಣಕುಟೀರವನ್ನು ಪ್ರವೇಶಿಸಿ, ತೀಕ್ಷ್ಣವ್ರತನಿಷ್ಠನಾದ, ಏಕಾಗ್ರತೆಯುಳ್ಳ ತಪಸ್ಸಿನಿಂದ ತ್ರಿಕಾಲದರ್ಶನವನ್ನು ಸಂಪಾದಿಸಿದ, ಶಿಷ್ಯಸಮೂಹದಿಂದ ಕೂಡಿದ ಮಹಾತ್ಮನಾದ ಭರದ್ವಾಜಋಷಿ ಅಗ್ನಿಹೋತ್ರಹೋಮವನ್ನು ಮುಗಿಸಿರುವುದನ್ನು ಕಂಡು ಮಹಾಭಾಗ್ಯಶಾಲಿಯಾದ ಆತನಿಗೆ ಕೈಮುಗಿದು ಸೀತಾಲಕ್ಷ್ಮಣ ಸಮೇತನಾದ ಶ್ರೀರಾಮ ಅಭಿವಾದನ ಮಾಡಿದ.

ನ್ಯವೇದಯತ ಚಾತ್ಮಾನಂ ತಸ್ಮೈ ಲಕ್ಷ್ಮಣಪೂರ್ವಜಃ ।
ಪುತ್ರೌ ದಶರಥಸ್ಯಾವಾಂ ಭಗವನ್ ರಾಮಲಕ್ಷ್ಮಣೌ ॥೧೩॥

ತನ್ನ ಬಗ್ಗೆ ಪರಿಚಯವನ್ನು ಶ್ರೀರಾಮನು ಭರದ್ವಾಜ ಮುನಿಗೆ ನಿವೇದಿಸಿಕೊಂಡ. 'ಪೂಜ್ಯನೆ, ನಾವು ದಶರಥನ ಪುತ್ರರು ರಾಮಲಕ್ಷ್ಮಣರು.

ಭಾರ್ಯಾ ಮಮೇಯಂ ವೈದೇಹೀ ಕಲ್ಯಾಣೀ ಜನಕಾತ್ಮಜಾ ।
ಮಾಂ ಚಾನುಯಾತಾ ವಿಜನಂ ತಪೋವನಮನಿಂದಿತಾ ॥೧೪॥

ಇವಳು ನನ್ನ ಭಾರ್ಯೆ ಸೀತೆ ಮಂಗಳೆ, ಜನಕರಾಜನ ಪುತ್ರಿ. ಅನಿಂದಿತಳು. ನಿರ್ಜನವಾದ ತಪೋವನಕ್ಕೆ ನನ್ನನ್ನು ಹಿಂಬಾಲಿಸಿ ಬಂದಿದ್ದಾಳೆ.

ಪಿತ್ರಾ ಪ್ರವ್ರಾಜ್ಯಮಾನಂ ಮಾಂ ಸೌಮಿತ್ರಿರನುಜಃ ಪ್ರಿಯಃ ।
ಅಯಮನ್ವಗಮದ್ಭ್ರಾತಾ ವನಮೇವ ದೃಢವ್ರತಃ ॥೧೫॥

ತಂದೆ ನನ್ನನ್ನು ಕಾಡಿಗೆ ಕಳಿಸಿದಾಗ ನನಗೆ ಪ್ರಿಯನೂ ದೃಢವ್ರತನಿಷ್ಠನೂ ಆದ ತಮ್ಮ ಲಕ್ಷ್ಮಣನೂ ನನ್ನನ್ನು ಹಿಂಬಾಲಿಸಿ ಕಾಡಿಗೇ ಬಂದಿದ್ದಾನೆ.

ಪಿತ್ರಾ ನಿಯುಕ್ತಾ ಭಗವನ್ ಪ್ರವೇಕ್ಷ್ಯಾಮಸ್ತಪೋವನಮ್ ।
ಧರ್ಮಮೇವ ಚರಿಷ್ಯಾಮಃ ಪತ್ರಮೂಲಫಲಾಶನಾಃ ॥೧೬॥

ಪೂಜ್ಯನೆ, ತಂದೆಯ ಆದೇಶದಂತೆ ನಾವು ತಪೋವನವನ್ನು ಪ್ರವೇಶಿಸುವೆವು.

ಸೊಪ್ಪು ಗಡ್ಡೆ ಹಣ್ಣು ಮುಂತಾದ ಅರಣ್ಯೋತ್ಪನ್ನ ವಸ್ತುಗಳನ್ನು ಸಂಸ್ಕಾರ ಮಾಡದೆ ಹಾಗೇ ಉಣ್ಣುತ್ತ ವಾನಪ್ರಸ್ಥ ಧರ್ಮವನ್ನು ಆಚರಿಸುತ್ತೇವೆ. ಬೇಟೆ ಮುಂತಾದ ರಾಜಧರ್ಮವನ್ನು ಆಚರಿಸುವುದಿಲ್ಲ.

'ಹಣ್ಣುಗಡ್ಡೆ' ಎನ್ನುವುದು, ಕೇವಲ ಹಣ್ಣು ಗಡ್ಡೆಯಲ್ಲ. 'ಊರೊಳಗೆ ಪಾಕದಿಂದ ಸಿದ್ಧಗೊಳಿಸಿದ ಸಂಸ್ಕೃತವಾದ ಭಕ್ಷ್ಯಭೋಜ್ಯಾದಿಗಳನ್ನು ಉಣ್ಣುವು-ದಿಲ್ಲ. ಅಸಂಸ್ಕೃತವಾದ ಅರಣ್ಯೋತ್ಪನ್ನವಾದ ವಸ್ತುವನ್ನೇ ಹಾಗೇ ಉಣ್ಣುತ್ತೇವೆ' ಎಂದು ಸೂಚಿಸುತ್ತದೆ. ಅದರಿಂದ 'ಮಾಂಸವನ್ನು ಶ್ರೀರಾಮ ಉಂಡನೆಂ'ದು ಹಿಂದೆ ಹೇಳಿದ್ದಕ್ಕೆ ವಿರೋಧ ಬರುವುದಿಲ್ಲ. ಅದೂ ಅರಣ್ಯಉತ್ಪನ್ನವೆ. ಸಂಸ್ಕಾರ ಮಾಡಿರುವುದಿಲ್ಲ.

ತಸ್ಯ ತದ್ವಚನಂ ಶ್ರುತ್ವಾ ರಾಜಪುತ್ರಸ್ಯ ಧೀಮತಃ ।
ಉಪಾನಯತ ಧರ್ಮಾತ್ಮಾ ಗಾಮರ್ಘ್ಯಮುದಕಂ ತತಃ ॥೧೭॥

ಧೀಮಂತ ರಾಜಕುಮಾರನಾದ ಶ್ರೀರಾಮನ ಆ ವಚನವನ್ನು ಕೇಳಿ ತಪಸ್ವಿ ಧರ್ಮಾತ್ಮ ಭರದ್ವಾಜಮುನಿ ಅತಿಥಿ ಸತ್ಕಾರಕ್ಕಾಗಿ ಮಧುಪರ್ಕದ ಗೋವನ್ನೂ ಅರ್ಘ್ಯೋದಕವನ್ನೂ ತಂದಿದ್ದರು.

ಮಧುಪರ್ಕದಲ್ಲಿ 'ಗೋ'ವೆಂದರೆ 'ಮಹೋಕ್ಷ' ಎಂಬ ಒಂದು ಬಗೆಯ ವನಸ್ಪತಿ ಹೊರತು, ಇಲ್ಲಿ ಗೋವಧೆ ಮಾಡುವುದು ಶಾಸ್ತ್ರದಲ್ಲಿ ಉಕ್ತವಾಗಿಲ್ಲ. ಆಚಾರದಲ್ಲಿಯೂ ಎಂದೂ ಇರಲಿಲ್ಲ.

ನಾನಾವಿಧಾನನ್ನರಸಾನ್ ವನ್ಯಮೂಲಫಲಾಶ್ರಯಾನ್ ।
ತೇಭ್ಯೋ ದದೌ ತಪ್ತತಪಾ ವಾಸಂ ಚೈವಾನ್ವಕಲ್ಪಯತ್ ॥೧೮॥

ಕೇವಲ ಅರಣ್ಯೋತ್ಪನ್ನವಾದ ಗಡ್ಡೆ ಹಣ್ಣುಗಳಿಂದಾದ ನಾನಾ ವಿಧವಾದ ಸಾರಾನ್ನವನ್ನು ರಾಮಸೀತಾಲಕ್ಷ್ಮಣರಿಗೆ ನೀಡಿದರು. ವಾಸಕ್ಕೆ ಏರ್ಪಾಡು ಮಾಡಿಸಿದರು.

ಮೃಗಪಕ್ಷಿಭಿರಾಸೀನೋ ಮುನಿಭಿಶ್ಚ ಸಮಂತತಃ ।
ರಾಮಮಾಗತಮಭ್ಯರ್ಚ್ಯ ಸ್ವಾಗತೇನಾಹ ತಂ ಮುನಿಃ ॥೧೯॥

ಅತಿಥಿಯಾಗಿ ಬಂದ ರಾಮನನ್ನು ಸ್ವಾಗತದಿಂದ ಪೂಜಿಸಿ ಮುನಿ ಸುತ್ತಲೂ ಮೃಗಪಕ್ಷಿಗಳಿಂದಲೂ ಮುನಿಗಳಿಂದಲೂ ಯುಕ್ತರಾಗಿ ಆಸೀನರಾದರು.

ಪ್ರತಿಗೃಹ್ಯ ಚ ತಾಮರ್ಚಾಮುಪವಿಷ್ಟಂ ಸ ರಾಘವಮ್ ।
ಭರದ್ವಾಜೋಽಬ್ರವೀದ್ವಾಕ್ಯಂ ಧರ್ಮಯುಕ್ತಮಿದಂ ತದಾ ॥೨೦॥

ಆ ಅತಿಥಿಸತ್ಕಾರವನ್ನು ಸ್ವೀಕರಿಸಿ ಕುಳಿತ ರಾಮನೊಡನೆ ಭರದ್ವಾಜಮುನಿ ಸಂಭಾಷಣೆ ಮಾಡಿದರು.

ಚಿರಸ್ಯ ಖಲು ಕಾಕುತ್ಸ್ಥ ಪಶ್ಯಾಮಿ ತ್ವಾಮಿಹಾಗತಮ್ ।
ಶ್ರುತಂ ತವ ಮಯಾ ಚೇದಂ ವಿವಾಸನಮಕಾರಣಮ್ ॥೨೧॥

ರಾಮ, ಬಹುಕಾಲದ ಮೇಲೆ ನೀನು ಇಲ್ಲಿಗೆ ಬಂದಿರುವುದನ್ನು ನೋಡು-ತ್ತಿದ್ದೇನೆ. ನಿಷ್ಕಾರಣವಾಗಿ ತಂದೆ ನಿನ್ನನ್ನು ಕಾಡಿಗೆ ಅಟ್ಟಿದ್ದು ನನಗೆ ತಿಳಿದು ಬಂದಿದೆ.

ಅವಕಾಶೋ ವಿವಿಕ್ತೋಽಯಂ ಮಹಾನದ್ಯೋಃ ಸಮಾಗಮೇ ।
ಪುಣ್ಯಶ್ಚ ರಮಣೀಯಶ್ಚ ವಸತ್ವಿಹ ಭವಾನ್ ಸುಖಮ್ ॥೨೨॥

ಇಲ್ಲಿ ಮಹಾನದಿಗಳ ಸಂಗಮದ ಬಳಿ ಪುಣ್ಯಕರ ರಮಣೀಯ ಏಕಾಂತ ಸ್ಥಳವಿದೆ. ಇಲ್ಲಿ ನೀನು ಸುಖವಾಗಿ ವಾಸಮಾಡಬಹುದು.

ಏವಮುಕ್ತಃ ಸ ವಚನಂ ಭರದ್ವಾಜೇನ ರಾಘವಃ ।
ಪ್ರತ್ಯುವಾಚ ಶುಭಂ ವಾಕ್ಯಂ ರಾಮಃ ಸರ್ವಹಿತೇ ರತಃ ॥೨೩॥

ಭರದ್ವಾಜ ಮುನಿ ಹೇಳಿದ ಮಾತನ್ನು ಕೇಳಿ ಸರ್ವಹಿತರತನಾದ ರಾಮನು ಪ್ರತಿಯಾಗಿ ಶುಭಕರವಾದ ಮಾತನ್ನಾಡಿದ.

ಭಗವನ್ನಿತ ಆಸನ್ನಃ ಪೌರಜಾನಪದೋ ಜನಃ ।
ಸುದರ್ಶಮಿಹ ಮಾಂ ಪ್ರೇಕ್ಷ್ಯ ಮನ್ಯೇಽಹಮಿಮಮಾಶ್ರಮಮ್॥೨೪॥

ಆಗಮಿಷ್ಯತಿ ವೈದೇಹೀಂ ಮಾಂ ಚಾಪಿ ಪ್ರೇಕ್ಷಕೋ ಜನಃ ।
ಅನೇನ ಕಾರಣೇನಾಹಮಿಹ ವಾಸಂ ನ ರೋಚಯೇ ॥೨೫॥

ಪೂಜ್ಯನೆ, ಇಲ್ಲಿಗೆ ನಗರಗ್ರಾಮಗಳ ಜನರು ಸಮೀಪದಲ್ಲಿರುತ್ತಾರೆ. ಸುಲಭವಾಗಿ ನನ್ನ ದರ್ಶನ ಇಲ್ಲಿ ಸಿಗುತ್ತದೆ ಎಂದು ನೋಡಿ ಪ್ರೇಕ್ಷಕರಾದ ಆ ಜನರು ಸೀತೆಯನ್ನೂ ನನ್ನನ್ನೂ ನೋಡಲು ಈ ಆಶ್ರಮಕ್ಕೆ ಬರುತ್ತಾರೆ ಎಂದು ಭಾವಿಸುತ್ತೇನೆ. ಅದರಿಂದ ಇಲ್ಲಿ ವಾಸ ಮಾಡುವುದು ನನಗೆ ಇಷ್ಟವಿಲ್ಲ.

ಏಕಾಂತೇ ಪಶ್ಯ ಭಗವನ್ನಾಶ್ರಮಸ್ಥಾನಮುತ್ತಮಮ್ ।
ರಮತೇ ಯತ್ರ ವೈದೇಹೀ ಸುಖಾರ್ಹಾ ಜನಕಾತ್ಮಜಾ ॥೨೬॥

ಅದರಿಂದ ಪೂಜ್ಯನೆ, ಏಕಾಂತ ಸ್ಥಳದಲ್ಲಿ ಒಂದು ಉತ್ತಮವಾದ ಆಶ್ರಮ ವೆಲ್ಲಾದರೂ ಸಿಗುವುದೋ ನೋಡಿ. ಅಲ್ಲಿ ಸುಖಕ್ಕೆ ಅರ್ಹಳಾದ ಸೀತೆ ಸಂತೋಷ ದಿಂದ ಇರುತ್ತಾಳೆ.

ಏತಚ್ಛ್ರುತ್ವಾ ಶುಭಂ ವಾಕ್ಯಂ ಭರದ್ವಾಜೋ ಮಹಾಮುನಿಃ ।
ರಾಘವಸ್ಯ ತತೋ ವಾಕ್ಯಮರ್ಥಗ್ರಾಹಕಮಬ್ರವೀತ್ ॥೨೭॥

ಶ್ರೀರಾಮನ ಈ ಶುಭಕರವಾದ ಮಾತನ್ನು ಕೇಳಿ ಮಹಾಮುನಿ ಭರದ್ವಾಜರು ರಾಮನಿಗೆ ಅವನಿಗೆ ಅಭೀಷ್ಟವಾದ ಸ್ಥಳದ ಬಗ್ಗೆ ಹೇಳಿದರು.

ದಶಕ್ರೋಶ ಇತಸ್ತಾತ ಗಿರಿರ್ಯಸ್ಮಿನ್ನಿವತ್ಸ್ಯಸಿ ।
ಮಹರ್ಷಿಸೇವಿತಃ ಪುಣ್ಯಃ ಸರ್ವತಃ ಶುಭದರ್ಶನಃ ॥೨೮॥

ಇಲ್ಲಿಂದ ಹತ್ತು ಕ್ರೋಶ ಸುಮಾರು ಮೂವತ್ತು ಮೈಲಿಗಳಷ್ಟು ದೂರದಲ್ಲಿ ಚಿತ್ರಕೂಟ ಪರ್ವತವಿದೆ. ಅದು ಪುಣ್ಯಕರ. ನೋಡಲೂ ಸುಂದರ. ಮಹರ್ಷಿಗಳು ಅದನ್ನು ಸೇವಿಸುತ್ತಾರೆ. ಅಲ್ಲಿ ನೀನು ವಾಸ ಮಾಡು.

ಗೋಲಾಂಗೂಲಾನುಚರಿತೋ ವಾನರರ್ಕ್ಷನಿಷೇವಿತಃ ।
ಚಿತ್ರಕೂಟ ಇತಿ ಖ್ಯಾತೋ ಗಂಧಮಾದನಸಂನಿಭಃ ॥೨೯॥

'ಗೋಲಾಂಗೂಲ'ಗಳು ಆಕಳ ಬಾಲದಂತೆ ಬಾಲವಿರುವ ಕಪ್ಪುಮುಖದ ಕಪಿಗಳು ಓಡಾಡುವ ಮತ್ತು ಬೇರೆ ಕಪಿ ಕರಡಿಗಳು ವಾಸ ಮಾಡುವ ಆ ಬೆಟ್ಟ ಗಂಧಮಾದನ ಪರ್ವತದಂತಿದೆ. ಪ್ರಖ್ಯಾತವಾಗಿದೆ.

ಯಾವತಾ ಚಿತ್ರಕೂಟಸ್ಯ ನರಃ ಶೃಂಗಾಣ್ಯವೇಕ್ಷತೇ ।
ಕಲ್ಯಾಣಾನಿ ಸಮಾಧತ್ತೇ ನ ಪಾಪೇ ಕುರುತೇ ಮನಃ ॥೩೦॥

ಮನುಷ್ಯನು ಚಿತ್ರಕೂಟಪರ್ವತದ ಶಿಖರಗಳನ್ನು ನೋಡುತ್ತಿದ್ದರೆ ಮಂಗಳ ಕಾರ್ಯ ಮಾಡಲು ಮನಸು ಮಾಡುತ್ತಾನೆ. ಪಾಪಕರ್ಮದಲ್ಲಿ ಮನಸ್ಸಿಡುವುದಿಲ್ಲ.

ಋಷಯಸ್ತತ್ರ ಬಹವೋ ವಿಹೃತ್ಯ ಶರದಾಂ ಶತಮ್ ।
ತಪಸಾ ದಿವಮಾರೂಢಾಃ ಕಪಾಲಶಿರಸಾ ಸಹ ॥೩೧॥

ಕಪಾಲಶಿರ ಮುಂತಾದ ಬಹು ಋಷಿಗಳು ಅಲ್ಲಿ ನೂರಾರು ವರ್ಷ ವಿಹರಿಸಿ ತಪಸಿನಿಂದ ಕೃಶವಾದ ಶರೀರದಲ್ಲಿ ತಲೆಬುರುಡೆಯಂತೆ ಕಾಣುವ ಶಿರಸ್ಸುಳ್ಳವರಾಗಿ ಸ್ವರ್ಗಕ್ಕೆ ಹೋಗಿದ್ದಾರೆ.

'ಕಪಾಲ ಶಿರ'ನೆಂದು ಒಬ್ಬ ಋಷಿಯ ನಾಮ ಎಂದು ಸಂ.ರಾಮಾಯಣ ಹೇಳುತ್ತಿದೆ (ಅಯೋ.9.31)

ಪ್ರವಿವಿಕ್ತಮಹಂ ಮನ್ಯೇ ತಂ ವಾಸಂ ಭವತಃ ಸುಖಮ್ ।
ಇಹ ವಾ ವನವಾಸಾಯ ವಸ ರಾಮ ಮಯಾ ಸಹ ॥೩೨॥

ಆ ಸ್ಥಳ ಏಕಾಂತವಾಗಿದ್ದು ನಿನಗೆ ಸುಖಕರವಾದೀತೆಂದು ಭಾವಿಸುತ್ತೇನೆ. ಅಥವಾ ನನ್ನಾಶ್ರಮದಲ್ಲಿ ನಿನಗೆ ಅವಕಾಶವಿಲ್ಲವೆಂದು ಮಾತ್ರ ತಿಳಿಯಬೇಡ. ಇಲ್ಲಿಯೇ ನನ್ನೊಂದಿಗೇ ವನವಾಸಕ್ಕೆ ರಾಮ, ನೀನು ವಾಸಮಾಡು.

ಸ ರಾಮಂ ಸರ್ವಕಾಮೈಸ್ತಂ ಭರದ್ವಾಜಃ ಪ್ರಿಯಾತಿಥಿಮ್ ।
ಸಭಾರ್ಯಂ ಸಹ ಚ ಭ್ರಾತ್ರಾ ಪ್ರತಿಜಗ್ರಾಹ ಧರ್ಮವಿತ್ ॥೩೩॥

ಧರ್ಮಜ್ಞರಾದ ಭರದ್ವಾಜರು ಪ್ರಿಯ ಅತಿಥಿಯಾದ ರಾಮನನ್ನೂ ಸೀತೆಯನ್ನೂ ಲಕ್ಷ್ಮಣನನ್ನೂ ಆ ರಾತ್ರಿಯಲ್ಲಿ ಎಲ್ಲ ಅಭೀಷ್ಟವಸ್ತುಗಳಿಂದಲೂ ಸತ್ಕರಿಸುತ್ತ ಅತಿಥಿಯಾಗಿ ಸ್ವೀಕರಿಸಿದರು.

ತಸ್ಯ ಪ್ರಯಾಗೇ ರಾಮಸ್ಯ ತಂ ಮಹರ್ಷಿಮುಪೇಯುಷಃ ।
ಪ್ರಪನ್ನಾ ರಜನೀ ಪುಣ್ಯಾ ಚಿತ್ರಾಃ ಕಥಯತಃ ಕಥಾಃ ॥೩೪॥

ಮಹರ್ಷಿಯ ಬಳಿ ಪ್ರಯಾಗದಲ್ಲಿ ರಾಮನು ಪುಣ್ಯಕರವಾದ ಸುಂದರವಾದ ಸಂಭಾಷಣ ಮಾಡುತ್ತ ಆ ರಾತ್ರಿಯನ್ನು ಕಳೆದ.

ಸೀತಾತೃತೀಯಃ ಕಾಕುತ್ಸ್ಥಃ ಪರಿಶ್ರಾಂತಃ ಸುಖೋಚಿತಃ ।
ಭರದ್ವಾಜಾಶ್ರಮೇ ರಮ್ಯೇ ತಾಂ ರಾತ್ರಿಮವಸತ್ ಸುಖಮ್ ॥೩೫॥

ಆಯಾಸಗೊಂಡಿದ್ದ ಸುಖಾರ್ಹನಾದ ರಾಮನು ಸೀತೆಯೊಂದಿಗೆ ಲಕ್ಷ್ಮಣನೊಂದಿಗೆ ರಮ್ಯವಾದ ಭರದ್ವಾಜಾಶ್ರಮದಲ್ಲಿ ಆ ರಾತ್ರಿ ಸುಖವಾಗಿ ವಾಸ ಮಾಡಿದ.

ಪ್ರಭಾತಾಯಾಂ ತು ಶರ್ವರ್ಯಾಂ ಭರದ್ವಾಜಮುಪಾಗಮತ್ ।
ಉವಾಚ ನರಶಾರ್ದೂಲೋ ಮುನಿಂ ಜ್ವಲಿತತೇಜಸಮ್ ॥೩೬॥

ರಾತ್ರಿ ಬೆಳಗಾದಾಗ ಪುರುಷೋತ್ತಮ ಶ್ರೀರಾಮನು ಭರದ್ವಾಜರನ್ನು ದರ್ಶನ ಮಾಡಿದ ಮತ್ತು ತೇಜಸ್ಸಿನಿಂದ ಜ್ವಲಿಸುತ್ತಿದ್ದ ಮುನಿಗೆ ಹೇಳಿದ.

ಶರ್ವರೀಂ ಭಗವನ್ನದ್ಯ ಸತ್ಯಶೀಲ ತವಾಶ್ರಮೇ ।
ಉಷಿತಾಃ ಸ್ಮ ಸುಖಿಂ ಗಂತುಮನುಜಾನಾತು ನೋ ಭವಾನ್ ॥೩೭॥

ಪೂಜ್ಯನೆ, ಸತ್ಯಶೀಲನೆ, ನಿನ್ನಾಶ್ರಮದಲ್ಲಿ ರಾತ್ರಿ ಸುಖವಾಗಿ ವಾಸ ಮಾಡಿದ್ದೇವೆ. ಇನ್ನು ಮುಂದೆ ಹೋಗಲು ಪೂಜ್ಯನು ನಮಗೆ ಅನುಜ್ಞೆ ನೀಡು.

ರಾತ್ರ್ಯಾಂ ತು ತಸ್ಯಾಂ ವ್ಯುಷ್ಟಾಯಾಂ ಭರದ್ವಾಜೋಽಬ್ರವೀದಿದಮ್ ।
ಮಧುಮೂಲಫಲೋಪೇತಂ ಚಿತ್ರಕೂಟಂ ವ್ರಜೇತಿ ಹ ॥೩೮॥

ಹೀಗೆ ಆ ರಾತ್ರಿ ಕಳೆದಾಗ ಭರದ್ವಾಜರು ಹೇಳಿದರು. ಜೇನು ಗಡ್ಡೆ ಗೆಣಸು ಹಣ್ಣುಗಳಿಂದ ಕೂಡಿದ ಚಿತ್ರಕೂಟಕ್ಕೆ ಪ್ರಯಾಣ ಮಾಡು' ಎಂದು.

ವಾಸಮೌಪಯಿಕಂ ಮನ್ಯೇ ತವ ರಾಮ ಮಹಾಬಲ ।
ನಾನಾನಗಗಣೋಪೇತಃ ಕಿಂನರೋರಗಸೇವಿತಃ ॥೩೯॥

ಮಯೂರನಾದಾಭಿರುತೋ ಗಜರಾಜನಿಷೇವಿತಃ ।
ಗಮ್ಯತಾಂ ಭವತಾ ಶೈಲಶ್ಚಿತ್ರಕೂಟಃ ಸ ವಿಶ್ರುತಃ ॥೪೦॥

ಮಹಾಬಲನಾದ ರಾಮನೆ, ಚಿತ್ರಕೂಟವು ನಿನಗೆ ವಾಸಕ್ಕೆ ಉಪಯುಕ್ತ-ವಾಗುತ್ತದೆ ಎಂದು ಭಾವಿಸುತ್ತೇನೆ. ಏಕೆಂದರೆ ಅದು ನಾನಾ ವೃಕ್ಷಗಳಿಂದ ಕೂಡಿದೆ. ಕಿನ್ನರ ನಾಗರಿಂದ ಸೇವಿತವಾಗಿದೆ. ನವಿಲಿನ ಧ್ವನಿಯಿಂದ ತುಂಬಿದೆ. ಮದ್ದಾನೆಗಳಿಂದ ಸೇವಿತವಾಗಿದೆ. ಪ್ರಸಿದ್ಧವಾದ ಆ ಚಿತ್ರಕೂಟಕ್ಕೆ ನೀನು ಹೋಗು.

ಪುಣ್ಯಶ್ಚ ರಮಣೀಯಶ್ಚ ಬಹುಮೂಲಫಲಾಯುತಃ ।
ತತ್ರ ಕುಂಜರಯೂಥಾನಿ ಮೃಗಯೂಥಾನಿ ಚಾಭಿತಃ ।
ವಿಚರಂತಿ ವನಾಂತೇಽಸ್ಮಿಂಸ್ತಾನಿ ದ್ರಕ್ಷ್ಯಸಿ ರಾಘವ ॥೪೧॥

ಸರಿತ್ಪ್ರಸ್ರವಣಪ್ರಸ್ಥಾನ್ ದರೀಕಂದರನಿರ್ಝರಾನ್ ।
ಚರತಃ ಸೀತಯಾ ಸಾರ್ಧಂ ನಂದಿಷ್ಯತಿ ಮನಸ್ತವ ॥೪೨॥

'ಚಿತ್ರಕೂಟ ಪರ್ವತವು ಪುಣ್ಯಕರ, ರಮಣೀಯ, ಬಹಳ ಗಡ್ಡೆ ಹಣ್ಣುಗಳಿಂದ ಕೂಡಿದೆ. ಅಲ್ಲಿ ಕಾಡಿನ ಪ್ರದೇಶದಲ್ಲಿ ಎಲ್ಲೆಡೆ ಆನೆ ಹಿಂಡು ಜಿಂಕೆ ಹಿಂಡುಗಳು

ಸಂಚರಿಸುತ್ತಿವೆ. ಅವುಗಳನ್ನು, ರಾಮ, ನೀನು ನೋಡುವೆ, ನದಿ ತೊರೆಗಳಿಂದ ಕೂಡಿದ ತಪ್ಪಲು ಪ್ರದೇಶಗಳು ಅಲ್ಲಿ ಇವೆ. ಕಣಿವೆಗಳು, ಗುಹೆಗಳು ಜಲಪಾತಗಳಿವೆ. ಸೀತೆಯೊಂದಿಗೆ ಅಲ್ಲಿ ನೀನು ಸಂಚಾರ ಮಾಡುವಾಗ ನಿನ್ನ ಮನಸಿಗೆ ಆನಂದ ನೀಡುತ್ತವೆ.'

ಪ್ರಹೃಷ್ಟಕೋಯಷ್ಟಿಭಕೋಕಿಲಸ್ವನೈಃ
ವಿನಾದಿತಂ ತಂ ವಸುಧಾಧರಂ ಶಿವಮ್ ।
ಮೃಗೈಶ್ಚ ಮತ್ತೈರ್ಬಹುಭಿಶ್ಚ ಕುಂಜರೈಃ
ಸುರಮ್ಯಮಾಸಾದ್ಯ ಸಮಾವಸಾಶ್ರಮಮ್ ॥೪೩॥

'ಹರ್ಷಗೊಂಡ ಟಿಟ್ಟಿಭ ಕೋಗಿಲೆಗಳ ಧ್ವನಿಗಳಿಂದ ತುಂಬಿದ, ಜಿಂಕೆ ಗಳಿಂದಲೂ ಬಹು ಮದ್ದಾನೆಗಳಿಂದಲೂ ಕೂಡಿದ್ದು ರಮಣೀಯವಾದ ಶುಭಕರವಾದ ಆ ಚಿತ್ರಕೂಟಪರ್ವತವನ್ನು ಸೇರಿ ಆಶ್ರಮ ಕಟ್ಟಿಕೊಂಡು ವಾಸ ಮಾಡು' ಎಂದು ಭರದ್ವಾಜ ಮುನಿ ಶ್ರೀರಾಮನಿಗೆ ಹೇಳಿದರು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಐವತ್ತನಾಲ್ಕನೇ ಸರ್ಗ ಮುಗಿಯಿತು.

❖

ಪಂಚಪಂಚಾಶಃ ಸರ್ಗಃ

ಸರ್ಗ – 55

ಶ್ರೀರಾಮನು ಯಮುನಾ ನದಿಯನ್ನು ದಾಟುವುದು.

ಉಷಿತ್ವಾ ರಜನೀಂ ತತ್ರ ರಾಜಪುತ್ರಾವರಿಂದಮೌ ।
ಮಹರ್ಷಿಮಭಿವಾದ್ಯಾಥ ಜಗ್ಮತುಸ್ತಂ ಗಿರಿಂ ಪ್ರತಿ ॥೧॥

ಭರದ್ವಾಜಾಶ್ರಮದಲ್ಲಿ ರಾತ್ರಿಯನ್ನು ಕಳೆದು ಶತ್ರುನಾಶಕರಾದ ರಾಜ ಕುಮಾರರು ರಾಮಲಕ್ಷ್ಮಣರು ಮಹರ್ಷಿಗೆ ಅಭಿವಾದನಮಾಡಿ ಚಿತ್ರಕೂಟ ಪರ್ವತದ ಕಡೆಗೆ ಹೊರಟರು.

ತೇಷಾಂ ಸ್ವಸ್ತ್ಯಯನಂ ಚೈವ ಮಹರ್ಷಿಃ ಸ ಚಕಾರ ಹ ।
ಪ್ರಸ್ಥಿತಾಂಶ್ಚೈವ ತಾನ್ ಪ್ರೇಕ್ಷ್ಯ ಪಿತಾ ಪುತ್ರಾನಿವಾನ್ವಗಾತ್ ॥೨॥

ರಾಮಸೀತಾಲಕ್ಷ್ಮಣರಿಗೆ ಮಹರ್ಷಿ ಭಾರದ್ವಾಜರು ಶುಭಾಶಂಸನ ಮಾಡಿದರು. ಮತ್ತು ಅವರು ಹೊರಟಿದ್ದನ್ನು ಕಂಡು, ತಂದೆ ಮಕ್ಕಳನ್ನು ಸ್ವಲ್ಪದೂರ ಹಿಂಬಾಲಿಸು-ವಂತೆ, ಭರದ್ವಾಜರೂ ಹಿಂಬಾಲಿಸಿದರು.

ತತಃ ಪ್ರಚಕ್ರಮೇ ವಕ್ತುಂ ವಚನಂ ಸ ಮಹಾಮುನಿಃ ।
ಭರದ್ವಾಜೋ ಮಹಾತೇಜಾ ರಾಮಂ ಸತ್ಯಪರಾಕ್ರಮಮ್ ॥೩॥

ಬಳಿಕ ಮಹಾತೇಜಸ್ವಿಗಳಾದ ಮಹಾಮುನಿ ಭರದ್ವಾಜರು ಸತ್ಯಪರಾಕ್ರಮನಾದ ರಾಮನಿಗೆ ಮಾರ್ಗವನ್ನು ಹೇಳಲು ತೊಡಗಿದರು.

ಗಂಗಾಯಮುನಯೋಃ ಸಂಧಿಮಾಸಾದ್ಯ ಮನುಜರ್ಷಭೌ ।
ಕಾಲಿಂದೀಮನುಗಚ್ಛೇತಾಂ ನದೀಂ ಪಶ್ಚಾನ್ಮುಖಾಶ್ರಿತಾಮ್ ॥೪॥

ಗಂಗಾಯಮುನೆಯರ ಸಂಗಮಕ್ಕೆ ಹೋಗಿ, ಪುರುಷೋತ್ತಮರೆ, ನೀವು ಗಂಗಾಪ್ರವಾಹದ ಹೊಡೆತದಿಂದ ಪಶ್ಚಿಮಕ್ಕೆ ತಿರುಗಿರುವ ಯಮುನಾ ನದಿಯನ್ನು ಸೇರಿರಿ.

ಅಥಾಸಾದ್ಯ ತು ಕಾಲಿಂದೀಂ ಶೀಘ್ರಸ್ರೋತಸಮಾಪಗಾಮ್ ।
ತಸ್ಯಾಸ್ತೀರ್ಥಂ ಪ್ರಚರಿತಂ ಪುರಾಣಂ ಪ್ರೇಕ್ಷ್ಯ ರಾಘವೌ ॥೫॥

ತತ್ರ ಯೂಯಂ ಪ್ಲವಂ ಕೃತ್ವಾ ತರತಾಂಶುಮತೀಂ ನದೀಮ್ ।
ತತೋ ನ್ಯಗ್ರೋಧಮಾಸಾದ್ಯ ಮಹಾಂತಂ ಹರಿತಚ್ಛದಮ್ ॥೬॥

ಪರೀತಂ ಬಹುಭಿರ್ವೃಕ್ಷೈಃ ಶ್ಯಾಮಂ ಸಿದ್ಧೋಪಸೇವಿತಮ್ ।
ತಸ್ಮೈ ಸೀತಾಂಜಲಿಂ ಕೃತ್ವಾ ಪ್ರಯುಂಜೀತಾಶಿಷಃ ಶಿವಾಃ ॥೭॥

ವೇಗವಾಗಿ ಪ್ರವಹಿಸುವ ಯಮುನಾ ನದಿಯನ್ನು ಸೇರಿದ ಬಳಿಕ, ರಾಮ-ಲಕ್ಷ್ಮಣರೆ, ನೀವು ಯಮುನೆಯ ಪ್ರಸಿದ್ಧವಾದ ಆ ತೀರವನ್ನು ನೋಡಿ ಅಲ್ಲಿಗೆ ತೆಪ್ಪವನ್ನು ಮಾಡಿಕೊಂಡು ಸೂರ್ಯಪುತ್ರಿಯಾದ್ದರಿಂದ 'ಅಂಶುಮತೀ' ಎಂದು ಇನ್ನೊಂದು ಹೆಸರಿನ ಆ ಯಮುನಾ ನದಿಯನ್ನು ದಾಟಿರಿ. ಆ ಯಮುನಾ ದಕ್ಷಿಣ-ತೀರದಲ್ಲಿ ಹಸುರೆಲೆಗಳಿಂದ ಕೂಡಿದ ದೊಡ್ಡ ಆಲದಮರವಿದೆ. ಅದಕ್ಕೆ 'ಶ್ಯಾಮ' ಎಂದು ಹೆಸರು. ಅನೇಕ ವೃಕ್ಷಗಳೊಂದಿಗೆ ಅದು ವಿಶೇಷವಾಗಿ ಬೆಳೆದಿದೆ. ಅದರ ಬುಡದಲ್ಲಿ ಸಿದ್ಧರು ವಾಸ ಮಾಡುತ್ತಾರೆ. ಆ ವೃಕ್ಷಕ್ಕೆ ಸೀತೆ ಕೈಮುಗಿದು ಶುಭಪ್ರಾರ್ಥನೆ ಮಾಡಲಿ.

ಸಮಾಸಾದ್ಯ ತು ತಂ ವೃಕ್ಷಂ ವಸೇದ್ವಾತಿಕ್ರಮೇತ ವಾ ।
ಕ್ರೋಶಮಾತ್ರಂ ತತೋ ಗತ್ವಾ ನೀಲಂ ದ್ರಕ್ಷ್ಯಥ ಕಾನನಮ್ ।
ಪಲಾಶ ಬದರೀಮಿಶ್ರಂ ರಮ್ಯಂ ವಂಶೈಶ್ಚ ಯಾಮುನೈಃ ॥೮॥

ಆ ವೃಕ್ಷದಬಳಿ ಸಾರಿ ಅಲ್ಲಿಯೇ ವಾಸ ಮಾಡಬಹುದು. ಅಥವಾ ಅದನ್ನು ದಾಟಿ ಮುಂದೆಯೂ ಹೋಗಬಹುದು. ಅಲ್ಲಿಂದ ಒಂದು ಕ್ರೋಶ ಮಾತ್ರ ಸುಮಾರು ಎರಡು ಮೈಲಿ ನಡೆದು ಯಮುನಾತೀರದ ಹಸುರಾದ ಒಂದು ಕಾಡನ್ನು ನೋಡುವಿರಿ. ಪಲಾಶ ಬದರೀವೃಕ್ಷಗಳಿಂದಲೂ ಬಿದಿರುಗಳಿಂದಲೂ ಅದು ರಮ್ಯವಾಗಿದೆ.

ಸ ಪಂಥಾಶ್ಚಿತ್ರಕೂಟಸ್ಯ ಗತಃ ಸುಬಹುಶೋ ಮಯಾ ।
ರಮ್ಯೋ ಮಾರ್ದವಯುಕ್ತಶ್ಚ ದಾವೈಶ್ಚೈವ ವಿವರ್ಜಿತಃ ॥೯॥

ಅದು ಚಿತ್ರಕೂಟಕ್ಕೆ ದಾರಿ. ಈ ದಾರಿಯಿಂದ ನಾನು ಬಹುಬಾರಿ ಪ್ರಯಾಣ ಮಾಡಿರುತ್ತೇನೆ. ಅದು ರಮ್ಯವಾಗಿದೆ. ಮರಳಿನಿಂದ ಮೃದುವಾಗಿದೆ. ಕಾಳ್ಗಿಚ್ಚು ಇರುವುದಿಲ್ಲ.

ಇತಿ ಪಂಥಾನಮಾದಿಶ್ಯ ಮಹರ್ಷಿಃ ಸಂನ್ಯವರ್ತತ ।
ಅಭಿವಾದ್ಯ ತಥೇತ್ಯುಕ್ತ್ವಾ ರಾಮೇಣ ವಿನಿವರ್ತಿತಃ ॥೧೦॥

ಹೀಗೆ ಚಿತ್ರಕೂಟ ಮಾರ್ಗವನ್ನು ಭರದ್ವಾಜಮುನಿ ಹೇಳಿ ಹಿಂತಿರುಗಿದರು. ಶ್ರೀರಾಮ ಅವರಿಗೆ ಅಭಿವಾದನ ಮಾಡಿ 'ನೀವು ಹೇಳಿದ ದಾರಿಯಿಂದಲೆ ಹೋಗುತ್ತೇವೆ' ಎಂದು ಹೇಳಿ ಅವರನ್ನು ಹಿಂದೆ ಕಳಿಸಿದ.

ಉಪಾವೃತ್ತೇ ಮುನೌ ತಸ್ಮಿನ್ ರಾಮೋ ಲಕ್ಷ್ಮಣಮಬ್ರವೀತ್ ।
ಕೃತಪುಣ್ಯಾಃ ಸ್ಮ ಸೌಮಿತ್ರೇ ಮುನಿರ್ಯನ್ನೋಽನುಕಂಪತೇ ॥೧೧॥

ಭರದ್ವಾಜಮುನಿ ಹಿಂತಿರುಗಿದ ಬಳಿಕ ಶ್ರೀರಾಮ ಲಕ್ಷ್ಮಣನಿಗೆ ನುಡಿದ. 'ಲಕ್ಷ್ಮಣ, ನಾವು ಪುಣ್ಯ ಮಾಡಿದ್ದೇವೆ. ಅದರಿಂದ ಮುನಿ ನಮ್ಮಲ್ಲಿ ದಯೆ ದೋರಿದ್ದಾರೆ.'

ಇತಿ ತೌ ಪುರುಷವ್ಯಾಘ್ರೌ ಮಂತ್ರಯಿತ್ವಾ ಮನಸ್ವಿನೌ ।
ಸೀತಾಮೇವಾಗ್ರತಃ ಕೃತ್ವಾ ಕಾಲಿಂದೀಂ ಜಗ್ಮತುರ್ನದೀಮ್ ॥೧೨॥

ಧೀರಮನಸಿನವರಾದ ಪುರುಷೋತ್ತಮರು ಶ್ರೀರಾಮಲಕ್ಷ್ಮಣರು ಹೀಗೆ ಮಾತನಾಡಿಕೊಳ್ಳುತ್ತ ಸೀತೆಯನ್ನು ಮುಂದೆ ಮಾಡಿಕೊಂಡು ಯಮುನಾ ನದಿಯ ಬಳಿಗೆ ನಡೆದರು.

ಅಥಾಸಾದ್ಯ ತು ಕಾಲಿಂದೀಂ ಶೀಘ್ರಸ್ರೋತೋವಹಾಂ ನದೀಮ್ ।
ಚಿಂತಾಮಾಪೇದಿರೇ ಸದ್ಯೋ ನದೀಜಲತಿತೀರ್ಷವಃ ॥೧೩॥

ಯಮುನೆ ವೇಗವಾಗಿ ಹರಿವ ನದಿ. ಅದರ ಬಳಿಗೆ ಹೋಗಿ ಮೂವರೂ ನದೀನೀರನ್ನು ದಾಟಲು ಬಯಸಿ ಆಲೋಚನೆ ಮಾಡಿದರು.

ತೌ ಕಾಷ್ಠಸಂಘಾಟಮಥೋ ಚಕ್ರತುಃ ಸುಮಹಾಪ್ಲವಮ್ ।
ಶುಷ್ಕೈರ್ವಂಶೈಃ ಸಮಾಸ್ತೀರ್ಣಮುಶೀರೈಶ್ಚ ಸಮಾವೃತಮ್ ॥೧೪॥

ರಾಮಲಕ್ಷ್ಮಣರು ಒಣಗಿದ ಬೆತ್ತದ ಬಳ್ಳಿಗಳಿಂದ ಕಟ್ಟಿಗೆ ತುಂಡುಗಳನ್ನು ಬಿಗಿದು ವಿಸ್ತಾರವಾಗಿ ಹೆಣೆದು ಲಾಮಂಚ ಬೇರುಗಳನ್ನು ಹಾಸಿ ದೊಡ್ಡ ಕಟ್ಟಿಗೆ ತೆಪ್ಪವನ್ನು ಸಿದ್ಧಪಡಿಸಿದರು.

ತತೋ ವೇತಸಶಾಖಾಶ್ಚ ಜಂಬೂಶಾಖಾಶ್ಚ ವೀರ್ಯವಾನ್ ।
ಚಕಾರ ಲಕ್ಷ್ಮಣಶ್ಛಿತ್ತ್ವಾ ಸೀತಾಯಾಃ ಸುಖಮಾಸನಮ್ ॥೧೫॥

ಹಚ್ಚೆಮರ ನೇರಳೆಮರಗಳ ಶಾಖೆಗಳನ್ನು ಬಲಶಾಲಿ ಲಕ್ಷ್ಮಣನು ಕಡಿದುತಂದು ಅವುಗಳಿಂದ ಸೀತೆಗೆ ಸುಖಕರವಾದ ಆಸನವನ್ನು ಸಿದ್ಧಪಡಿಸಿದ.

ತತ್ರ ಶ್ರಿಯಮಿವಾಚಿಂತ್ಯಾಂ ರಾಮೋ ದಾಶರಥಿಃ ಪ್ರಿಯಾಮ್ ।
ಈಷತ್ಸಂಲಜ್ಜಮಾನಾಂ ತಾಮಧ್ಯಾರೋಪಯತ ಪ್ಲವಮ್ ॥೧೬॥

ಶ್ರೀದೇವಿಯಂತೆ ಅಚಿಂತ್ಯಳಾದ ನಸುನಾಚುವ ಪ್ರಿಯೆಯಾದ ಸೀತೆಯನ್ನು ದಶರಥಕುಮಾರ ರಾಮನು ತೆಪ್ಪಕ್ಕೆ ಏರಿಸಿದ.

ಪಾರ್ಶ್ವೇ ತತ್ರ ಚ ವೈದೇಹ್ಯಾ ವಸನೇ ಭೂಷಣಾನಿ ಚ ।
ಪ್ಲವೇ ಕಠಿನಕಾಜಂ ಚ ರಾಮಶ್ಚಕ್ರೇ ಸಹಾಯುಧೈಃ ॥೧೭॥

ಸೀತೆಯ ಬಳಿ ವಸ್ತ್ರ ಭೂಷಣ, ಕಠಿನವಾದ ಸುತ್ತಿಗೆ ಆಯುಧಗಳನ್ನು ತೆಪ್ಪದಲ್ಲಿ ಶ್ರೀರಾಮ ಇರಿಸಿದ.

ಆರೋಪ್ಯ ಪ್ರಥಮಂ ಸೀತಾಂ ಸಂಘಾಟಂ ಪರಿಗೃಹ್ಯ ಚ ।
ತತಃ ಪ್ರತೇರತುರ್ಯುಕ್ತೌ ಪ್ರೀತೌ ದಶರಥಾತ್ಮಜೌ ॥೧೮॥

ಮೊದಲಿಗೆ ಸೀತೆಯನ್ನು ತೆಪ್ಪದಲ್ಲಿ ಹತ್ತಿಸಿ ಬಳಿಕ ವೀರರಾದ ಆ ರಾಮ ಲಕ್ಷ್ಮಣರು ಹತ್ತಿ ನದಿಯನ್ನು ದಾಟಿದರು.

ಕಾಲಿಂದೀಮಧ್ಯಮಾಯಾತಾ ಸೀತಾ ತ್ವೇನಾಮವಂದತ ।
ಸ್ವಸ್ತಿ ದೇವಿ ತರಾಮಿ ತ್ವಾಂ ಪಾರಯೇನ್ಮೇ ಪತಿರ್ವ್ರತಮ್ ॥೧೯॥

ಯಮುನೆಯ ಮಧ್ಯಕ್ಕೆ ಬಂದಾಗ ಸೀತೆ 'ದೇವಿ, ನಿನಗೆ ಒಳ್ಳೆಯದಾಗಲಿ, ನಾನು ನಿನ್ನನ್ನು ದಾಟುತ್ತಿದ್ದೇನೆ. ನನ್ನ ಪತಿಯು ವನವಾಸ ವ್ರತವನ್ನು ಪೂರೈಸಿಕೊಳ್ಳು-ವಂತಾಗಲಿ' ಎಂದು ಯಮುನೆಯನ್ನು ಬೇಡಿದಳು.

ಯಕ್ಷ್ಯೇ ತ್ವಾಂ ಗೋಸಹಸ್ರೇಣ ಸುರಾಘಟಶತೇನ ಚ ।
ಸ್ವಸ್ತಿ ಪ್ರತ್ಯಾಗತೇ ರಾಮೇ ಪುರೀಮಿಕ್ಷ್ವಾಕುಪಾಲಿತಾಮ್ ॥೨೦॥

'ಇಕ್ಷ್ವಾಕುವಂಶದವರಿಂದ ಪಾಲಿತವಾಗುವ ಅಯೋಧ್ಯೆಗೆ ರಾಮನು ಕ್ಷೇಮವಾಗಿ ಹಿಂತಿರುಗಿ ಬಂದಾಗ ನಾನು ನಿನ್ನನ್ನು ಸಾವಿರಾರು ಗೋವು ಗಳಿಂದಲೂ ನೂರಾರು ಸುರಾ ಕುಂಭಗಳಿಂದಲೂ ಪೂಜಿಸುವೆನು' ಎಂದಳು.

ಕಾಲಿಂದೀಮಥ ಸೀತಾ ತು ಯಾಚಮಾನಾ ಕೃತಾಂಜಲಿಃ ।
ತೀರಮೇವಾಭಿಸಂಪ್ರಾಪ್ತಾ ದಕ್ಷಿಣಂ ವರವರ್ಣಿನೀ ॥೨೧॥

ಉತ್ತಮಸ್ತ್ರೀಯಾದ ಸೀತೆ ಕೈಮುಗಿದು ಯಮುನೆಯನ್ನು ಬೇಡುತ್ತಿರುವಂತೇ ನದಿಯ ದಕ್ಷಿಣತೀರಕ್ಕೆ ಬಂದಳು.

ತತಃ ಪ್ಲವೇನಾಂಶುಮತೀಂ ಶೀಘ್ರಗಾಮೂರ್ಮಿಮಾಲಿನೀಮ್ ।
ತೀರಜೈರ್ಬಹುಭಿರ್ವೃಕ್ಷೈಃ ಸಂತೀರುರ್ಯಮುನಾಂ ನದೀಮ್ ॥೨೨॥

ಬಹುತೆರೆಗಳುಳ್ಳ ವೇಗವಾಗಿ ಹರಿವ, ತೀರದಲ್ಲಿ ಬಹುವೃಕ್ಷಗಳಿಂದ ಕೂಡಿರುವ ಯಮುನಾ ನದಿಯನ್ನು ಅವರು ಹೀಗೆ ತೆಪ್ಪದಿಂದ ದಾಟಿದರು.

ತೇ ತೀರ್ಣಾಃ ಪ್ಲವಮುತ್ಸೃಜ್ಯ ಪ್ರಸ್ಥಾಯ ಯಮುನಾವನಾತ್ ।
ಶ್ಯಾಮಂ ನ್ಯಗ್ರೋಧಮಾಸೇದುಃ ಶೀತಲಂ ಹರಿತಚ್ಛದಮ್ ॥೨೩॥

ಅವರು ನದಿಯನ್ನು ದಾಟಿದ ಬಳಿಕ ತೆಪ್ಪವನ್ನು ಅಲ್ಲಿಯೇ ಬಿಟ್ಟು ಯಮುನಾ ವನದಲ್ಲಿ ಶೀತಲವಾದ ಹಸುರೆಲೆಗಳಿಂದ ಕೂಡಿದ 'ಶ್ಯಾಮ' ಎಂಬ ಆಲದ ಮರವನ್ನು ತಲುಪಿದರು.

ನ್ಯಗ್ರೋಧಂ ತಮುಪಾಗಮ್ಯ ವೈದೇಹೀ ವಾಕ್ಯಮಬ್ರವೀತ್ ।
ನಮಸ್ತೇऽಸ್ತು ಮಹಾವೃಕ್ಷ ಪಾರಯೇನ್ಮೇ ಪತಿರ್ವ್ರತಮ್ ॥೨೪॥

ಆ ಆಲದ ಮರದ ಬಳಿ ಸೀತೆ 'ಓ ಮಹಾವೃಕ್ಷವೆ, ನಿನಗೆ ನಮಸ್ಕಾರ. ನನ್ನ ಪತಿಯು ವನವಾಸವ್ರತವನ್ನು ಪೂರೈಸಲಿ' ಎಂದಳು.

ಕೌಸಲ್ಯಾಂ ಚೈವ ಪಶ್ಯೇಯಂ ಸುಮಿತ್ರಾಂ ಚ ಯಶಸ್ವಿನೀಮ್ ।
ಇತಿ ಸೀತಾಂಜಲಿಂ ಕೃತ್ವಾ ಪರ್ಯಗಚ್ಛದ್ವನಸ್ಪತಿಮ್ ॥೨೫॥

'ಯಶಸ್ವಿನಿಯಾದ ಕೌಸಲ್ಯೆಯನ್ನೂ ಸುಮಿತ್ರೆಯನ್ನೂ ನಾನು ಕಾಣುವಂತಾ–ಗಲಿ' ಎನ್ನುತ್ತ ಸೀತೆ ಕೈಮುಗಿದು ಆಲದ ಮರಕ್ಕೆ ಪ್ರದಕ್ಷಿಣೆ ಗೈದಳು.

ಅವಲೋಕ್ಯ ತತಃ ಸೀತಾಮಾಯಾಚಂತೀಮನಿಂದಿತಾಮ್ ।
ದಯಿತಾಂ ಚ ವಿಧೇಯಾಂ ಚ ರಾಮೋ ಲಕ್ಷ್ಮಣಮಬ್ರವೀತ್ ॥೨೬॥

ಅನಿಂದಿತೆ, ಪ್ರಿಯೆ, ವಿಧೇಯೆಯಾಗಿರುವ ಸೀತೆ ಆಲದಮರವನ್ನು ಬೇಡುವು-ದನ್ನು ಕಂಡು ಶ್ರೀರಾಮ ಲಕ್ಷ್ಮಣನಿಗೆ ನುಡಿದ.

ಸೀತಾಮಾದಾಯ ಗಚ್ಛ ತ್ವಮಗ್ರತೋ ಭರತಾನುಜ ।
ಪೃಷ್ಠತೋಽಹಂ ಗಮಿಷ್ಯಾಮಿ ಸಾಯುಧೋ ದ್ವಿಪದಾಂ ವರ ॥೨೭॥

'ಪುರುಷೋತ್ತಮ ಲಕ್ಷ್ಮಣ, ನೀನು ಸೀತೆಯನ್ನು ಕರೆದುಕೊಂಡು ಮುಂದೆ ಹೋಗು, ಹಿಂದಿನಿಂದ ಆಯುಧ ಧಾರಿಯಾಗಿ ನಾನು ಬರುತ್ತೇನೆ.'

ಯದ್ಯತ್ಫಲಂ ಪ್ರಾರ್ಥಯತೇ ಪುಷ್ಪಂ ವಾ ಜನಕಾತ್ಮಜಾ ।
ತತ್ತತ್ ಪ್ರದದ್ಯಾ ವೈದೇಹ್ಯಾ ಯತ್ರಾಸ್ಯಾ ರಮತೇ ಮನಃ ॥೨೮॥

ಸೀತೆ ಯಾವಯಾವ ಹಣ್ಣುಗಳನ್ನು ಹೂಗಳನ್ನು ಬೇಡುವಳೋ ಅವಳಿಗೆ ಮನೋಹರವಾಗಿ ಏನು ಕಾಣುವುದೋ ಅವೆಲ್ಲವನ್ನೂ ಅವಳಿಗೆ ನೀಡು.

ಗಚ್ಛತೋಸ್ತು ತಯೋರ್ಮಧ್ಯೇ ಬಭೂವ ಜನಕಾತ್ಮಜಾ ।
ಮಾತಂಗಯೋರ್ಮಧ್ಯಗತಾ ಶುಭಾ ನಾಗವಧೂರಿವ ॥೨೯॥

ರಾಮಲಕ್ಷ್ಮಣರು ನಡೆದು ಹೋಗುವಾಗ ಅವರಿಬ್ಬರ ನಡುವೆ ಸೀತೆ, ಎರಡು ಮದ್ದಾನೆಗಳ ನಡುವೆ ನಡೆವ ಶುಭಕರವಾದ ಹೆಣ್ಣಾನೆಯಂತೆ, ಕಂಡುಬಂದಳು.

ಏಕೈಕಂ ಪಾದಪಂ ಗುಲ್ಮಂ ಲತಾಂ ವಾ ಪುಷ್ಪಶಾಲಿನೀಮ್ ।
ಅದೃಷ್ಟಪೂರ್ವಾಂ ಪಶ್ಯಂತೀ ರಾಮಂ ಪಪ್ರಚ್ಛ ಸಾಽಬಲಾ ॥೩೦॥

ಸೀತೆ ತಾನು ಹಿಂದೆ ಎಂದೂ ಕಂಡಿರದಿದ್ದ ಒಂದೊಂದು ಮರವನ್ನೂ ಪೊದೆ-ಯನ್ನೂ ಹೂಬಿಟ್ಟ ಬಳ್ಳಿಯನ್ನೂ ಇದೇನು ಇದೇನೆಂದು ರಾಮನನ್ನು ಕೇಳಿದಳು.

ರಮಣೀಯಾನ್ ಬಹುವಿಧಾನ್ ಪಾದಪಾನ್ ಕುಸುಮೋತ್ಕರಾನ್ ।
ಸೀತಾವಚನಸಂರಬ್ಧ ಆನಯಾಮಾಸ ಲಕ್ಷ್ಮಣಃ ॥೩೧॥

ರಮಣೀಯವಾದ ಬಹುವಿಧವಾದ ರಾಶಿರಾಶಿ ಹೂಬಿಟ್ಟಿರುವ ವೃಕ್ಷಗಳ ಬಳಿಗೆ ಸೀತೆಯ ಮಾತಿನಂತೆ ಅವಳನ್ನು ಬೇಗನೆ ಲಕ್ಷ್ಮಣನು ಕರೆತಂದ.

ವಿಚಿತ್ರವಾಲುಕಜಲಾಂ ಹಂಸಸಾರಸನಾದಿತಾಮ್ ।
ರೇಮೇ ಜನಕರಾಜಸ್ಯ ಸುತಾ ಪ್ರೇಕ್ಷ್ಯ ತದಾ ನದೀಮ್ ॥೩೨॥

ವಿಚಿತ್ರ ಉಸುಕಿನ ನೀರುಳ್ಳ ಹಂಸಸಾರಸಪಕ್ಷಿಗಳ ಧ್ವನಿಯುಕ್ತವಾದ ಯಮುನಾ ನದಿಯನ್ನು ನೋಡಿ ಸೀತೆ ಆನಂದಿಸಿದಳು.

ಬಹೂನ್ ಮೇಧ್ಯಾನ್ ಮೃಗಾನ್ ಹತ್ವಾ ಚೇರತುರ್ಯಮುನಾವನೇ ॥

ಕ್ರೋಶದಷ್ಟು ದೂರಕ್ಕೆ ಹೋಗಿ ಯಮುನಾವನದಲ್ಲಿ ರಾಮಲಕ್ಷ್ಮಣ ಸೋದರರು ಬಹುಶುಚಿಯಾದ ಮೃಗಗಳನ್ನು ಕೊಂದು ಭಕ್ಷಿಸಿದರು.

ವಿಹೃತ್ಯ ತೇ ಬರ್ಹಿಣಪೂಗನಾದಿತೇ
ಶುಭೇ ವನೇ ವಾನರವಾರಣಾಯುತೇ ।
ಸಮಂ ನದೀವಪ್ರಮುಪೇತ್ಯ ಸಂಮತಂ
ನಿವಾಸಮಾಜಗ್ಮುರದೀನದರ್ಶನಾಃ ॥೩೪॥

ದೈನ್ಯವಿಲ್ಲದೆ ಎಲ್ಲವನ್ನೂ ನೋಡುತ್ತ ರಾಮಲಕ್ಷ್ಮಣರು ನವಿಲು ಸಮೂಹಗಳ ಶಬ್ದದಿಂದ ಕೂಡಿದ ಕಪಿ ಆನೆಗಳಿಂದ ಯುಕ್ತವಾದ ಸಮತಟ್ಟಾದ ಪ್ರಿಯವಾದ ನದೀತೀರದಲ್ಲಿ ಒಂದು ಕಾಡಿನಲ್ಲಿ ಆ ಒಂದು ರಾತ್ರಿ ವಾಸಮಾಡಿದರು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಐವತ್ತೈದನೇ ಸರ್ಗ ಮುಗಿಯಿತು.

❖ ❖ ❖

ರಾಮಾಯಣದ ಏಳು ಕಾಂಡಗಳಲ್ಲಿ ಎರಡನೇ ಕಾಂಡ ಅದು ಅಯೋಧ್ಯಾಕಾಂಡ. ಮನಸ್ಸು ಬಾಲಕನಂತಾದರೆ ಸಾಧಕ ಅಯೋಧ್ಯ. ಮನಸ್ಸು ನಿರ್ವಿಕಾರ. ಪರಿಸ್ಥಿತಿ, ಆವೇಶ, ಉದ್ವೇಗ, ಮಾನಾಪಮಾನಗಳು ಮನಸ್ಸಿನ ಮೇಲೆ ಯುದ್ಧ ಮಾಡಲಾರವು. ವಿಕೃತಗೊಳಿಸವು.

ಯೋದ್ಧುಂ ಯೋಗ್ಯಾ ಯೋಧ್ಯಾ, ನ ಯೋಧ್ಯಾ ಅಯೋಧ್ಯಾ ಯುದ್ಧವಿಲ್ಲದ ಕಾಂಡವಿದು. ರಾಜನಾಗಲು ಹೊರಟ ರಾಮ, ನಾರಮಡಿಯುಟ್ಟು ಕಾಡದಾರಿ ಹಿಡಿದ. ಯಾರನ್ನೂ ದೂರಲಿಲ್ಲ. ಆಸೆ ಇಲ್ಲ. ಸಹಜ ಸಹನೆ. ವಿಕಾರೋ ನೈವ ಲಕ್ಷಿತಃ ಮುಖದಲ್ಲಿಯೂ ಸರ್ವಥಾ ವಿಕಾರವಿಲ್ಲ. ಇದು ರಾಮನ ಅಯೋಧ್ಯತೆ. ಇಲ್ಲಿಯೇ ಶ್ರೀರಾಮ ಉಳಿದಿದ್ದರೆ ತಮ್ಮಂದಿರಲ್ಲಿ, ತಾಯಂದಿರಲ್ಲಿ, ತಂದೆಗೂ ಪರಸ್ಪರ ಸಂಘರ್ಷ. ಮನಸ್ತಾಪ. ಅದನ್ನು ತಪ್ಪಿಸಲು ಕಾಡಿಗೆ ತೆರಳಿದ. ಅಯೋಧ್ಯನಾದ ರಾಮ ಕಾಡಿಗೆ ಮಡದಿ, ತಮ್ಮನೊಡನೆ ತೆರಳಿದ. ದ್ವೇಷ, ಅತೃಪ್ತಿ ಇಲ್ಲದೇ ಸಂತಸದಿಂದ ಅಯೋಧ್ಯನಾಗಿ ಅಯೋಧ್ಯೆಯಿಂದ ವನಕ್ಕೆ ತೆರಳಿದ.

ತಂದೆ-ತಾಯಿಗಳ, ಮಕ್ಕಳ, ಅಣ್ಣ-ತಮ್ಮಂದಿರ, ಪತಿ-ಪತ್ನಿಯರ, ರಾಜ-ಪ್ರಜೆಗಳ ಪ್ರೀತಿ ತುಂಬಿದ ಕಾಂಡ. ಅನಂತಗುಣಗಣಿ ರಾಮ. ವಿವೇಕ, ಪ್ರೀತಿಯ ಲಕ್ಷ್ಮಣ. ಭಕ್ತಿಯ ಭರತ. ಸಾತ್ತ್ವಿಕ ಶತ್ರುಘ್ನ. ಇವರಿಂದ ಅರಮನೆ ಅಯೋಧ್ಯೆಯಾಯಿತು. ಸ್ವಾರ್ಥ ಸೋತಿತು. ಸಂಘರ್ಷ ಕರಗಿತು. ಇದು ತ್ಯಾಗದ ಅಯೋಧ್ಯಾಕಾಂಡ. ಬಾಲಕನಾಗಿ ಅಯೋಧ್ಯನಾಗುವ ದ್ವಿತೀಯ ಸೋಪಾನ.